ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೫೦

ಶ್ರೀ ಬ್ರಹ್ಮವೈವರ್ತ ಮಹಾಪುರಾಣಂ

[ಕನ್ನಡ ಅನುವಾದ ಸಹಿತ]

ಸಂಚಿಕೆ ೧೦

ಅನುವಾದಕ :
ಸಾಹಿತ್ಯ ಮತ್ತು ಕನ್ನಡ ವಿದ್ವಾನ್,
ಚಿಟ್ಟದಪುರದ ಸುಬ್ರಾಯರ ಮಗ ಕೃಷ್ಣಪ್ಪ.
ಸಂಸ್ಕೃತಪಂಡಿತ,
ಮರಿಮಲ್ಲಪ್ಪ ಹೈಸ್ಕೂಲು, ಮೈಸೂರು.

ಶ್ರೀ ಶಾರದಾ ಪ್ರೆಸ್, ಮೈಸೂರು
೧೯೫೪

ಪೀಠಿಕೆ

ಶ್ರೀ ಕೃಷ್ಣಜನ್ಮಖಂಡದ ಉತ್ತರಾರ್ಧವು ಶ್ರೀಕೃಷ್ಣನ ಮಹಿಮಾತಿಶಯ ವರ್ಣನೆಯಿಂದ ಪ್ರಾರಂಭವಾಗುತ್ತದೆ. ಪರಮಾತ್ಮನ ಪಾರಮ್ಯವನ್ನು ಅರಿಯದೆ ತಾವೇ ಸರ್ವಶಕ್ತರೂ, ಸರ್ವಜ್ಞರೂ, ಸರ್ವೋತ್ತಮರೂ ಎಂದು ಭಾವಿಸಿದ್ದ ವಿಷ್ಣು, ಬ್ರಹ್ಮ, ಶೇಷ ಮುಂತಾದ ದೇವತೆಗಳ ಅಹಂಕಾರ ಖಂಡನೆಯನ್ನು ನಿರೂಪಿಸುವ ವ್ಯಾಜದಿಂದ ಮಾನವನು ಅಹಂಕಾರ ಮಮಕಾರಗಳನ್ನು ತ್ಯಜಿಸಿ ಬಾಳಬೇಕೆಂಬುದನ್ನು ವ್ಯಾಸಮಹರ್ಷಿಗಳು ಇಲ್ಲಿ ಬೋಧಿಸಿದ್ದಾರೆ. ಗರ್ವಿತನಾದ ಇಂದ್ರನು ಗುರುವಿನ ಆಗ್ರಹಕ್ಕೆ ಪಾತ್ರನಾಗಿ ರಾಜ್ಯಭ್ರಷ್ಟನಾದುದೂ, ಆ ಪದವಿಗೆ ಬಂದ ನಹುಷನು ತನ್ನ ಇತಿಮಿತಿಯನ್ನರಿಯದೆ ಶಚೀದೇವಿಯಲ್ಲಿ ಕಾಮಾಸಕ್ತನಾದುದರ ಪರಿಣಾಮವಾಗಿ ಸರ್ಪಯೋನಿಯಲ್ಲಿ ಜನಿಸುವಂತೆ ಶಾಪಗ್ರಸ್ತನಾದುದೂ ಮಾನವನ ಅಹಂಕಾರ ಖಂಡನೆಗೆ ಯೋಗ್ಯವಾದ ದೃಷ್ಟಾಂತಗಳಾಗಿವೆ. ಆದುದರಿಂದ ದಂಭ, ದರ್ಪ, ಅಭಿಮಾನ, ಕ್ರೋಧ, ಪಾರುಷ್ಯ, ಅಜ್ಞಾನ ಮುಂತಾದ ಆಸುರ ಸಂಪತ್ತನ್ನು ದೂರಮಾಡಿ, ತೇಜಸ್ಸು, ಕ್ಷಮೆ, ಧೃತಿ, ಶೌಚ, ಅದ್ರೋಹ ಮತ್ತು ನಿರಭಿಮಾನಗಳೆಂಬ ದೈವೀಸಂಪತ್ತನ್ನು ಗಳಿಸಿ ಮಾನವನು ಅತಿಮಾನವನಾಗಬೇಕೆಂಬುದೇ ಈ ಸಂಚಿಕೆಯ ಸಂದೇಶವಾಗಿದೆ.

ಈ ರೀತಿಯಾದ ಮಹಾಪುರಾಣವನ್ನು ಕರ್ಣಾಟಕಭಾಷೆಯಲ್ಲಿ ಪ್ರಚಾರಪಡಿಸಲು ಕಾರಣಕರ್ತರೂ ಪರಮೋದಾರಿಗಳೂ ಕರ್ಣಾಟಕ ಸಿಂಹಾಸನಾಧೀಶ್ವರರೂ ಆದ **ಶ್ರೀಮಜ್ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ. ಎಸ್. ಐ.,** ಮಹಾಪ್ರಭುಗಳವರಿಗೂ ಅವರ ಬಂಧುಮಿತ್ರಪುತ್ರಕಳತ್ರಾದಿಗಳಿಗೂ ಚಿರಕಾಲ ಸುಖಸಂತೋಷವನ್ನೀಯಲೆಂದು ಶ್ರೀಕೃಷ್ಣಪರಮಾತ್ಮನನ್ನು ಪ್ರಾರ್ಥಿಸುವ,

ಜಯನಾಮ ಸಂ॥ದ ಆಷಾಢಶುಕ್ಲ ಸಪ್ತಮೀ

ಅನುವಾದಕ :
ಬಿ. ಎಸ್. ಕೃಷ್ಣಪ್ಪ.

ವಿ ಷ ಯಾ ನು ಕ್ರ ಮ ಣಿ ಕೆ .

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ಪಂಚಪಂಚಾಶತ್ತಮೋಽಧ್ಯಾಯಃ ||

|| ಶ್ರೀ ನಾರಾಯಣ ಉವಾಚ ||

ಸ ಏವ ಭಗವಾನ್ಕೃಷ್ಣಃ ಸರ್ವಾತ್ಮಾ ಪುರುಷಃ ಪರಃ |
ದುರಾರಾಧ್ಯೋಽತಿಸಾಧ್ಯಶ್ಚ ಸರ್ವಾರಾಧ್ಯಃ ಸುಖಪ್ರದಃ || ೧ ||

ನಿಜಭಕ್ತಾತಿಸಾಧ್ಯಶ್ಚ ಭಕ್ತಸ್ಯಾರಾಧ್ಯ ಏವ ಚ |
ತತ್ಸದ್ದೃಶ್ಯಃ ಸ್ವಭಕ್ತಸ್ಯಾಭಕ್ತಸ್ಯಾದೃಶ್ಯ ಏವ ಚ || ೨ ||

ದುರ್ಜ್ಞೇಯಂ ತಸ್ಯ ಚರಿತಂ ಕಾರ್ಯಂ ಹೃದಯ ಏವ ಚ |
ಬದ್ಧಾಸ್ತನ್ಮಾಯಯಾ ಸರ್ವೇ ಮೋಹಿತಾಶ್ಚ ದುರಂತಯಾ || ೩ ||

ಐವತ್ತೈದನೆಯ ಅಧ್ಯಾಯವು.

೧. ಶ್ರೀ ನಾರಾಯಣ :—ಎಲೈ ನಾರದಮುನಿಯೇ, ಹಿಂದಿನ ಅಧ್ಯಾಯಗಳಲ್ಲಿ ಹೇಳಿದಂತೆ ಲೀಲಾವಿನೋದಗಳನ್ನು ತೋರಿದ ಭಗವಂತನಾದ ಶ್ರೀಕೃಷ್ಣನೇ ಸರ್ವಾಂತರ್ಯಾಮಿಯಾಗಿ ಪರಮಪುರುಷನೆನಿಸಿರುವನು. ಭಕ್ತರಲ್ಲದವರಿಗೆ ಆರಾಧಿಸಲಶಕ್ಯನೂ, ದುಃಸಾಧ್ಯನೂ ಆದ ಆ ವಿಭುವೇ ಭಕ್ತರಿಗೆ ಆರಾಧ್ಯನೂ, ಸುಖಪ್ರದನೂ ಆಗಿರುವನು.

೨. ತನ್ನ ಭಕ್ತನಿಗೆ ಸುಲಭಸಾಧ್ಯನೂ, ಆರಾಧನೆಗೆ ಸಿಲುಕುವವನೂ ಆದ ಆ ಪರಮಾತ್ಮನು ಭಕ್ತನಿಗೆ ಮಾತ್ರ ದಿವ್ಯಸುಂದರರೂಪದಿಂದ ಕಾಣಿಸಿಕೊಳ್ಳುವನು. ಭಕ್ತನಲ್ಲದವನ ದೃಷ್ಟಿಗೆ ಗೋಚರನಾಗುವುದೇ ಇಲ್ಲ.

೩. ಆ ಪರಮಾತ್ಮನ ಚರಿತ್ರೆಯೂ, ಕಾರ್ಯವೂ, ಮನಸ್ಸೂ ಸಹ ಅರಿವಿಗೆ ನಿಲುಕದು. ದುಷ್ಪರಿಣಾಮಕಾರಿಯಾದ ಅವನ ಮಾಯೆಯ ಜಾಲಕ್ಕೊಳಗಾಗಿ ಎಲ್ಲರೂ ಮೋಹಿತರಾಗುವರು.

ಯದ್ಭಯಾದ್ವಾತಿ ವಾತೋಽಯಂ ಕೂರ್ಮಂ ಧತ್ತೇ ನಿರಾಶ್ರಯಃ ।
ಕೂರ್ಮೋಽನಂತಂ ವಿಧತ್ತೇ ಚ ಯದ್ಭಯೇನ ನಿರಂತರಂ ॥ ೪ ॥

ಬಿಭರ್ತಿ ಶೇಷೋ ವಿಶ್ವಂ ಚ ಯದ್ಭಯೇನ ಚ ನಾರದ ।
ಸಹಸ್ರಶೀರ್ಷಾ ಪುರುಷಃ ಶಿರಸ್ಯೈಕದೇಶತಃ ॥ ೫ ॥

ಸಪ್ತಸಾಗರಸಂಯುಕ್ತಾ ಸಪ್ತದ್ವೀಪಾ ವಸುಂಧರಾ ।
ಶೈಲಕಾನನಸಂಯುಕ್ತಾ ಪಾತಾಲಾಃ ಸಪ್ತ ಏವ ಚ ॥ ೬ ॥

ಸಪ್ತ ಸ್ವರ್ಗಾಶ್ಚ ವಿವಿಧಾ ಬ್ರಹ್ಮಲೋಕಸಮನ್ವಿತಾಃ ।
ಏವಂ ವಿಶ್ವಂ ತ್ರಿಭುವನಂ ಕೃತ್ರಿಮಂ ಪರಿಕೀರ್ತಿತಂ ॥ ೭ ॥

ಯದ್ಭಯೇನ ವಿಧಾತ್ರಾ ಚ ಪ್ರತಿಸೃಷ್ಟ್ಯಾ ಚ ನಿರ್ಮಿತಂ ।
ಏವಂ ವಿಶ್ವಾನ್ಯಸಂಖ್ಯಾನಿ ಲೋಮಕೂಪೈರ್ಮಹಾನ್ವಿರಾಟ್ ॥ ೮ ॥

---

೪. ಆ ಪರಮಾತ್ಮನ ಭಯದಿಂದಲೇ ವಾಯುವು ಚಲಿಸುವುದು. ನಿರಾಶ್ರಯವಾದ ಆಕಾಶವು ಜಗದ್ಧರನಾದ ಕೂರ್ಮನಿಗೆ ಆಶ್ರಯವಿತ್ತಿರುವುದು. ಕೂರ್ಮನು ವಾಸುಕಿಯನ್ನು ನಿರಂತರವಾಗಿ ಹೊತ್ತಿರುವುದೂ ಆ ಪರಮಾತ್ಮನ ಭಯದಿಂದಲೇ.

೫. ಎಲೈ ನಾರದನೇ ಆದಿಶೇಷನು ಪರಮಾತ್ಮನ ಭಯದಿಂದಲೇ ವಿಶ್ವಂಭರನಾಗಿದ್ದಾನೆ. ಸಾವಿರ ತಲೆಗಳನ್ನು ಹೊಂದಿರುವ ಆ ಪುರಾಣಪುರುಷನೂ ಸಹ ತನ್ನ ತಲೆಯ ಏಕದೇಶದಿಂದ ನಿಖಿಲ ಭೂಮಂಡಲವನ್ನೂ ಹೊತ್ತಿದ್ದಾನೆ.

೬. ಈ ವಸುಂಧರೆಯು ಸಪ್ತಸಾಗರಗಳಿಂದಲೂ, ಸಪ್ತದ್ವೀಪಗಳಿಂದಲೂ ಕೂಡಿರುವುದಲ್ಲದೆ ಬೆಟ್ಟಗುಡ್ಡಗಳಿಂದಲೂ, ಕಾಡುಮೇಡುಗಳಿಂದಲೂ ಮನೋಹರವಾಗಿ ಕಂಗೊಳಿಸುತ್ತದೆ. ಇದರ ಕೆಳಗೆ ಸಪ್ತಪಾತಾಳ ಲೋಕಗಳಿವೆ.

೭ ಭೂಮಂಡಲದ ಮೇಲುಭಾಗದಲ್ಲಿ ಬ್ರಹ್ಮಲೋಕವೂ ಸೇರಿ ಸಪ್ತ ಸ್ವರ್ಗಲೋಕಗಳಿವೆ. ಈ ರೀತಿ ಸ್ವರ್ಗ, ಮರ್ತ್ಯ, ಮತ್ತು ಪಾತಾಳವೆಂದು ತ್ರಿಭುವನಾತ್ಮಕವಾದ ವಿಶ್ವವು ಕಲ್ಪಿತವಾಗಿದೆ.

೮. ಪರಮಾತ್ಮನ ಭಯದಿಂದಲೇ ಸೃಷ್ಟಿಕರ್ತನಾದ ಬ್ರಹ್ಮನೂ ಸಹ ಪ್ರತಿ ಸೃಷ್ಟಿಯಲ್ಲಿಯೂ ನಿರ್ಮಾಣಕಾರ್ಯಕ್ಕೆ ತೊಡಗುವನು. ಮಹಾವಿರಾಟ್ಪುರುಷನೂ ಸಹ ತನ್ನ ರೋಮಕೂಪಗಳಲ್ಲಿ ಅಸಂಖ್ಯ ವಿಶ್ವಗಳನ್ನು ಸೃಷ್ಟಿಮಾಡುವನು.

ಯದ್ಭಯೇನ ವಿಧತ್ತೇ ಚ ಯದಂಶೋ ಧ್ಯಾಯತೇ ಹಿ ಯಂ ।
ವಿಷ್ಣುಃ ಪಾತಿ ಚ ಸಂಸಾರಂ ಯದ್ಭಯೇನ ಕೃಪಾನಿಧಿಃ ॥ ೯ ॥

ಕಾಲಾಗ್ನಿರುದ್ರೋ ಯದ್ಭೀತಃ ಕಾಲಃ ಸಂಹರತೇ ಪ್ರಜಾಃ ।
ಮೃತ್ಯುಂಜಯೋ ಮಹಾದೇವೋ ಯದ್ಭಯಾದ್ಧ್ಯಾಯತೇ ಚ ಯಂ ॥ ೧೦ ॥

ಷಡ್ಗುಣೈರನುರಾಗೈಶ್ಚ ವಿರಾಗೀ ವಿರತಃ ಸದಾ ।
ಯದ್ಭಯೇನ ದಹತ್ಯಗ್ನಿಃ ಸೂರ್ಯಸ್ತಪತಿ ಯದ್ಭಯಾತ್ ॥ ೧೧ ॥

ಯದ್ಭಯಾದ್ವರ್ಷತೀಂದ್ರಶ್ಚ ಮೃತ್ಯುಶ್ಚರತಿ ಜಂತುಷು ।
ಯದ್ಭಯೇನ ಯಮಃ ಶಾಸ್ತಾ ಪಾಪಿನಾಂ ಧರ್ಮ ಏವ ಚ ॥ ೧೨ ॥

ಧತ್ತೇ ಚ ಧರಿಣೀ ಲೋಕಾನ್ಯದ್ಭಯೇನ ಚರಾಚರಾನ್ ।
ಸೂಯತೇ ಪ್ರಕೃತಿಃ ಸೃಷ್ಟ್ವಾ ಯದ್ಭಯಾನ್ಮಹದಾದಿಕಂ ॥ ೧೩ ॥

---

೯. ಅಲ್ಲದೆ ಪರಮಾತ್ಮನ ಅಂಶಸಂಭೂತನಾದ ಆ ಮಹಾವಿರಾಟ್ಪುರುಷನು ಪರಮಾತ್ಮನ ಧ್ಯಾನದಲ್ಲೇ ನಿರತನಾಗಿರುವನು. ಆ ಪರಮಾತ್ಮನ ಭಯದಿಂದ ದಯಾಮಯನಾದ ವಿಷ್ಣುವೂ ಸಹ ಪ್ರಪಂಚವನ್ನು ಪರಿಪಾಲಿಸುವನು.

೧೦. ಮೃತ್ಯುಂಜಯನಾದ ಮಹಾದೇವನೂ ಸಹ ಆ ಪರಮಾತ್ಮನ ಭಯದಿಂದ ಕಾಲಾಗ್ನಿರುದ್ರನ ರೂಪವನ್ನು ಹೊಂದಿ ಕಾಲಾನುಗುಣವಾಗಿ ಪ್ರಜೆಗಳನ್ನು ಸಂಹರಿಸುವುದಲ್ಲದೆ ಪರಮಾತ್ಮನ ಧ್ಯಾನದಲ್ಲೇ ಆಸಕ್ತನಾಗಿರುವನು.

೧೧. ಪರಮವಿರಾಗಿಯಾದ ಆ ಶಿವನು ಷಡ್ಗುಣಗಳಿಂದಲೂ, ಅನುರಾಗದಿಂದಲೂ ಸದಾ ವಿರತನಾಗಿರುವನು. ಆ ಪರಮಾತ್ಮನ ಭಯದಿಂದಲೇ ಅಗ್ನಿದೇವನು ಸುಡುವನು. ಸೂರ್ಯನು ಬೆಳಗುವನು.

೧೨. ಇಂದ್ರನು ಕಾಲ ಕಾಲಕ್ಕೆ ಮಳೆಯನ್ನು ಸುರಿಸುವುದೂ, ಮೃತ್ಯುವು ಪ್ರಾಣಿಗಳಲ್ಲಿ ಸಂಚರಿಸುವುದೂ, ಧರ್ಮಪುರುಷನಾದ ಯಮನೂ ಸಹ ಪಾಪಿಗಳನ್ನು ಶಿಕ್ಷಿಸುವುದೂ ಆ ಪರಮಾತ್ಮನ ಭಯದಿಂದಲೇ.

೧೩. ಧರಣಿಯು ಆ ಪರಮಾತ್ಮನ ಭಯದಿಂದಲೇ ಚರಾಚರಾತ್ಮಕವಾದ ಪ್ರಪಂಚವನ್ನು ಧರಿಸುವಳು. ಪ್ರಕೃತಿದೇವಿಯೂ ಸಹ ಅವನ ಭಯದಿಂದ ಮಹದಾದಿಗಳನ್ನು ಸೃಜಿಸುವಳು.

ದುರ್ಜ್ಞೇಯಂ ತದಭಿಪ್ರಾಯಂ ಕೋ ವಾ ಜಾನಾತಿ ಪುತ್ರಕ ।
ಯತ್ಪ್ರಭಾವಂ ನ ಜಾನಂತಿ ಬ್ರಹ್ಮವಿಷ್ಣುಮಹೇಶ್ವರಾಃ ॥ ೧೪ ॥

ಕಥಂ ಜಾನಾಮಿ ತಚ್ಚೇಷ್ಟಾಮಹಂ ವತ್ಸ ಸುಮಂದಧೀಃ ।
ಕಥಂ ಜಗಾಮ ಮಥುರಾಂ ತ್ಯಕ್ತ್ವಾ ವೃಂದಾವನಂ ವನಂ ॥ ೧೫ ॥

ಕಥಂ ತತ್ಯಾಜ ಗೋಪೀಶ್ಚ ರಾಧಾಂ ಪ್ರಾಣಾಧಿಕಾಂ ಪ್ರಿಯಾಂ ।
ಯಶೋದಾಂ ಬಾಂಧವಾದೀಂಶ್ಚ ನಂದಂ ವಾ ನಂದನಂದನಃ ॥ ೧೬ ॥

ದರ್ಪಹಾ ದರ್ಪದಃ ಸೋಽಪಿ ಸರ್ವೇಷಾಂ ಸರ್ವದಃ ಸದಾ ।
ಬಭಂಜ ರಾಧಾದರ್ಪಂ ಚ ಸುದಾಮ್ನಃ ಶಾಪಕಾರಣಾತ್ ॥ ೧೭ ॥

ಅನ್ಯೇಷಾಂ ಭಾವನಾಹೇತೋರ್ಬ್ರಹ್ಮಪ್ರಾಪ್ತಿಸ್ತಥಾ ಭವೇತ್ ।
ಏವಂ ಕಿಂಚಿದ್ವಿತರ್ಕಂ ಚ ಕುರುತೇ ಕಮಲೋದ್ಭವಃ ॥ ೧೮ ॥

---

೧೪. ಎಲೈ ವತ್ಸನೇ, ತಿಳಿಯಲಸದಳವಾದ ಆ ಪರಮಾತ್ಮನ ಅಭಿಪ್ರಾಯವನ್ನು ಯಾವನು ತಾನೇ ತಿಳಿಯಬಲ್ಲನು? ಬ್ರಹ್ಮವಿಷ್ಣು ಮಹೇಶ್ವರರೂ ಸಹ ಅವನ ಪ್ರಭಾವವನ್ನು ತಿಳಿಯಲಾರರು.

೧೫. ಹೀಗಿರುವಾಗ ಎಲೈ ನಾರದನೇ, ಶ್ರೀಕೃಷ್ಣನು ವೃಂದಾವನವನ್ನು ಬಿಟ್ಟು ಮಥುರೆಗೆ ಹೇಗೆ ಪ್ರಯಾಣ ಮಾಡಿದನೆಂಬುದನ್ನು ಮಂದಪ್ರಜ್ಞನಾದ ನಾನು ಹೇಗೆ ತಿಳಿಯಬಲ್ಲೆನು?

೧೬. ಗೋಪಿಯರನ್ನಾಗಲೀ ಪ್ರಾಣಕ್ಕಿಂತ ಹೆಚ್ಚು ಪ್ರಿಯಳಾದ ರಾಧಿಕೆಯನ್ನಾಗಲೀ, ಯಶೋದೆಯನ್ನಾಗಲೀ, ಇತರ ಬಂಧುಗಳನ್ನಾಗಲೀ, ನಂದಗೋಪನನ್ನಾಗಲೀ ನಂದನಂದನನು ಹೇಗೆ ಬಿಟ್ಟುಹೋದನೆಂಬುದನ್ನು ನಾನರಿಯೆನು.

೧೭. ಎಲ್ಲರಿಗೂ ಎಲ್ಲ ಇಷ್ಟಾರ್ಥವನ್ನು ಕೊಡುವ ಆ ಕೃಷ್ಣನೇ ಮನುಜರಿಗೆ ದರ್ಪವನ್ನು ಕೊಟ್ಟು ಅನಂತರ ಆ ದರ್ಪವನ್ನು ಭಂಗಗೊಳಿಸುವನು ಸುದಾಮನ ಶಾಪದ ನೆಪದಿಂದ ರಾಧೆಯ ದರ್ಪವನ್ನು ಅವನೇ ಭಂಗಗೊಳಿಸಿದನು.

೧೮. 'ಯಾರ ಮಾನಸಿಕ ಕಲ್ಪನೆಯು ಹೇಗಿರುವುದೋ ಅವರಿಗೆ ಅದಕ್ಕನುಗುಣವಾದ 'ಬ್ರಹ್ಮಪ್ರಾಪ್ತಿ'ಯಾಗುವುದೆಂದು' ಕಮಲಸಂಭವನಾದ ಬ್ರಹ್ಮನು ವಿತರ್ಕಮಾಡುತ್ತಿದ್ದನು.

ಚಕಾರ ದರ್ಪಭಂಗಂ ಚ ಮಹಾವಿಷ್ಣೋಃ ಪುರಾ ವಿಭುಃ ।
ಬ್ರಹ್ಮಣಶ್ಚ ತಥಾ ವಿಷ್ಣೋಃ ಶೇಷಸ್ಯ ಚ ಶಿವಸ್ಯ ಚ ॥ ೧೯ ॥

ಧರ್ಮಸ್ಯ ಚ ಯಮಸ್ಯಾಪಿ ಸಾಂಬಸ್ಯ ಚಂದ್ರಸೂರ್ಯಯೋಃ ।
ಗರುಡಸ್ಯ ಚ ವಹ್ನೇಶ್ಚ ಗುರೋರ್ದುರ್ವಾಸಸಸ್ತಥಾ ॥ ೨೦ ॥

ದೌವಾರಿಕಸ್ಯ ಭಕ್ತಸ್ಯ ಜಯಸ್ಯ ವಿಜಯಸ್ಯ ಚ ।
ಸುರಾಣಾಮಸುರಾಣಾಂ ಚ ಭವತಃ ಕಾಮಶಕ್ರಯೋಃ ॥ ೨೧ ॥

ಲಕ್ಷ್ಮಣಸ್ಯಾರ್ಜುನಸ್ಯಾಪಿ ಬಾಣಸ್ಯ ಚ ಭೃಗೋಸ್ತಥಾ ।
ಸುಮೇರೋಶ್ಚ ಸಮುದ್ರಾಣಾಂ ವಾಯೋಶ್ಚ ವರುಣಸ್ಯ ಚ ॥ ೨೨ ॥

ಸರಸ್ವತ್ಯಾಶ್ಚ ದುರ್ಗಾಯಾಃ ಪದ್ಮಾಯಾಶ್ಚ ಭುವಸ್ತಥಾ ।
ಸಾವಿತ್ರ್ಯಾಶ್ಚೈವ ಗಂಗಾಯಾ ಮನಸಾಯಾಸ್ತಥೈವ ಚ ॥ ೨೩ ॥

---

೧೯. ಶ್ರೀಕೃಷ್ಣನು ಹೀಗೆ ತರ್ಕಿಸುತ್ತಿದ್ದ ಬ್ರಹ್ಮನ ಗರ್ವಭಂಗಮಾಡಿದುದಲ್ಲದೆ ವಿಶ್ವವ್ಯಾಪಕನಾದ ಮಹಾವಿಷ್ಣು, ಆದಿಶೇಷ, ಶಿವ ಮುಂತಾದವರ ಗರ್ವವನ್ನೂ ಭಂಗಗೊಳಿಸಿದನು.

೨೦. ಅಲ್ಲದೆ ಧರ್ಮಪುರುಷ, ಯಮ, ಸಾಂಬ, ಚಂದ್ರ, ಸೂರ್ಯ, ಗರುಡ, ಅಗ್ನಿ ಮುಂತಾದವರ ಗರ್ವಭಂಗವನ್ನೂ, ಗುರುವಾದ ದೂರ್ವಾಸಮುನಿಯ ಗರ್ವಭಂಗವನ್ನೂ ಮಾಡಿದನು.

೨೧. ಭಕ್ತರೂ ದ್ವಾರಪಾಲಕರೂ ಆದ ಜಯವಿಜಯರ ಗರ್ವಭಂಗವನ್ನು ಮಾಡಿದುದಲ್ಲದೆ ಸುರಾಸುರರ ಮತ್ತು ಇಂದ್ರ ಮನ್ಮಥರ ಗರ್ವವನ್ನು ಭಂಗ ಗೊಳಿಸಿದನು.

೨೨. ಲಕ್ಷ್ಮಣ, ಅರ್ಜುನ, ಬಾಣ, ಭೃಗು ಮುಂತಾದವರ ದರ್ಪಾಪಹಾರ ಮಾಡಿದುದಲ್ಲದೆ ಸುಮೇರು, ಸಮುದ್ರ, ವಾಯು ಮತ್ತು ವರುಣರ ದರ್ಪವನ್ನು ಭಂಗಗೊಳಿಸಿದನು.

೨೩. ಸರಸ್ವತೀ, ದುರ್ಗಾ, ಲಕ್ಷ್ಮೀ ಮತ್ತು ಭೂದೇವಿಯ ದರ್ಪವನ್ನು ಪರಿಹರಿಸಿದುದಲ್ಲದೆ ಸಾವಿತ್ರೀ, ಗಂಗಾ ಮತ್ತು ಮನಸಾದೇವಿಯರ ದರ್ಪವನ್ನೂ ಭಂಗಗೊಳಿಸಿದನು.

ಪ್ರಾಣಾಧಿಷ್ಠಾತೃದೇವ್ಯಾಶ್ಚ ಪ್ರಿಯಾಯಾಃ ಪ್ರಾಣತೋऽಪಿ ಚ ।
ಪ್ರಾಣಾಧಿಕಾಯಾ ರಾಧಾಯಾ ಅನ್ಯೇಷಾಮಪಿ ಕಾ ಕಥಾ ॥ ೨೪ ॥

ಹೃತ್ವಾ ದರ್ಪಂ ಚ ಸರ್ವೇಷಾಂ ಪ್ರಸಾದಂ ಚ ಚಕಾರ ಸಃ ।
ಕರ್ತಾ ಹರ್ತಾ ಪಾಲಯಿತಾ ಸ್ರಷ್ಟಾ ಸ್ರಷ್ಟುಶ್ಚ ಸರ್ವತಃ ॥ ೨೫ ॥

ಯಂ ಸ್ತೋತುಮೀಶೋ ನಾಲಂ ಚ ಪಂಚವಕ್ತ್ರೈಸ್ತು ಶಂಕರಃ ।
ಸ್ತೋತುಂ ನಾಲಂ ಚತುರ್ವಕ್ತ್ರೋ ವಿಧಾತಾ ಜಗತಾಮಪಿ ॥ ೨೬ ॥

ಸ್ತೋತುಂ ನಾಲಮನಂತಶ್ಚ ಸಹಸ್ರವದನೈರಹೋ ।
ಸ್ವಯಂ ವಿಷ್ಣುರ್ವಿಶ್ವವ್ಯಾಪೀ ನಾಲಂ ಸ್ತೋತುಂ ಜನಾರ್ದನಃ ॥ ೨೭ ॥

ಮಹಾವಿರಾಣ್ಣ ಶಕ್ತೋऽಪಿ ಯಂ ಸ್ತೋತುಂ ಪರಮೇಶ್ವರಂ ।
ಕಂಪಿತಾ ಯಸ್ಯ ಪುರತಃ ಪ್ರಕೃತಿಃ ಪರಮಾತ್ಮನಃ ॥ ೨೮ ॥

---

೨೪. ತನ್ನ ಪ್ರಾಣಾಧಿಷ್ಠಾತೃದೇವತೆಯೂ, ತನ್ನ ಪ್ರಾಣಕ್ಕಿಂತ ಪ್ರಿಯಳೂ ಪ್ರಾಣಾಧಿಕಳೂ ಆದ ರಾಧೆಯ ಗರ್ವವನ್ನೇ ಭಂಗಗೊಳಿಸಿದನೆಂದ ಮೇಲೆ ಇತರರ ಪಾಡೇನು ?

೨೫. ಈ ಶ್ರೀಕೃಷ್ಣಪರಮಾತ್ಮನು ಎಲ್ಲರ ದರ್ಪವನ್ನೂ ಭಂಗಗೊಳಿಸಿದವನಾಗಿ ಎಲ್ಲರಿಗೂ ಅನುಗ್ರಹವನ್ನೂ ತೋರಿದನು. ಸೃಷ್ಟಿಮಾಡುವವನೂ, ಪಾಲಿಸುವವನೂ, ಪರಿಹರಿಸುವವನೂ ಆದ ಆ ಪರಮಾತ್ಮನೇ ಬ್ರಹ್ಮನಿಗೂ ಮೂಲ ಕಾರಣನಲ್ಲವೇ ?

೨೬. ಆ ಪರಮಾತ್ಮನ ಗುಣಗಳನ್ನು ಸ್ತುತಿಸಲು ಪಂಚಮುಖಗಳುಳ್ಳ ಶಿವನೂ, ಜಗದ್ವಿಧಾತೃವೂ, ಚತುರ್ಮುಖನೂ ಆದ ಬ್ರಹ್ಮನೂ ಸಹ ಅಶಕ್ತರಾಗಿರುವರು.

೨೭. ಅಷ್ಟೇಕೆ! ಸಾವಿರ ಮುಖಗಳುಳ್ಳ ಆದಿಶೇಷನೂ ಸಹ ಅವನನ್ನು ಸ್ತುತಿಸಲಾರನು. ವಿಶ್ವವ್ಯಾಪಿಯೂ, ಜನಾರ್ದನನೂ ಆದ ವಿಷ್ಣುವೂ ಸಹ ಶ್ರೀಕೃಷ್ಣಪರಮಾತ್ಮನನ್ನು ಸ್ತುತಿಸಲಾರನು.

೨೮. ಮಹಾವಿರಾಟ್‌ಪುರುಷನೂ ಸಹ ಆ ಕೃಷ್ಣಪರಮಾತ್ಮನನ್ನು ಸ್ತುತಿಸಲು ಶಕ್ತನಾಗುವುದಿಲ್ಲ. ಆ ಪರಮಾತ್ಮನ ಮುಂದೆ ಪ್ರಕೃತಿದೇವಿಯು ಡುಗಿಹೋಗುವಳು.

ಸರಸ್ವತೀ ಜಡೀಭೂತಾ ಯಂ ಸ್ತ್ರೋತುಂ ಪರಮೇಶ್ವರಂ ।
ಮಹಿಮಾನಂ ನ ಜಾನಂತಿ ವೇದಾ ಯಸ್ಯ ಚ ನಾರದ ॥ ೨೯ ॥

ಇತ್ಯೇವಂ ಕಥಿತೋ ಬ್ರಹ್ಮನ್ಪ್ರಭಾವಃ ಪರಮಾತ್ಮನಃ ।
ನಿರ್ಗುಣಸ್ಯ ಚ ಕೃಷ್ಣಸ್ಯ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೩೦ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣ ನಾರದಸಂವಾದೇ
ಶ್ರೀಕೃಷ್ಣಪ್ರಭಾವವರ್ಣನಂ ನಾಮ
ಪಂಚಪಂಚಾಶತ್ತಮೋಽಧ್ಯಾಯಃ

---

೨೯. ಎಲೈ ನಾರದನೇ, ಆ ಪರಮೇಶ್ವರನನ್ನು ಸ್ತುತಿಸಲಾರದೆ ಸರಸ್ವತಿಯು ಜಡಳಾದಳು. ಆ ಪರಮಾತ್ಮನ ಮಹಿಮೆಯನ್ನು ವೇದಗಳೂ ಸಹ ತಿಳಿಯಲಾರವು.

೩೦. ಎಲೈ ವಿಪ್ರೋತ್ತಮನೇ, ಈ ರೀತಿಯಾಗಿ ನಿರ್ಗುಣನೂ, ಪರಮಾತ್ಮನೂ ಆದ ಶ್ರೀಕೃಷ್ಣನ ಪ್ರಭಾವವನ್ನು ವರ್ಣಿಸಿರುವೆನು. ಮತ್ತೇನನ್ನು ಕೇಳಬೇಕೆಂದು ಆಸೆ ಇರುವುದು ?

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಶ್ರೀಕೃಷ್ಣಜನ್ಮಖಂಡದ ಉತ್ತರಾರ್ಧದ
ನಾರಾಯಣ ನಾರದಸಂವಾದದಲ್ಲಿ ಶ್ರೀಕೃಷ್ಣಪ್ರಭಾವವರ್ಣನೆ ಎಂಬ
ಐವತ್ತೈದನೆಯ ಅಧ್ಯಾಯವು ಸಮಾಪ್ತವಾದುದು.

ಐವತ್ತ್ಮೈದನೆಯ ಅಧ್ಯಾಯದ ಸಾರಾಂಶ.

'ಜಗತ್ತನ್ನು ಸೃಷ್ಟಿಮಾಡಲೂ, ಸೃಷ್ಟಿಮಾಡದಿರಲೂ ಮತ್ತು ಪ್ರಳಯ ಮಾಡಲೂ ಸಮರ್ಥನಾದ ಶ್ರೀಕೃಷ್ಣಪರಮಾತ್ಮನ ಪ್ರಭಾವವು ಅವರ್ಣನೀಯ ವಾದುದು. 'ಭೀಷಾಸ್ಮಾದ್ವಾತಃ ಪವತೇ ಭೀಷೋದೇತಿ ಸೂರ್ಯಃ ಭೀಷಾಸ್ಮಾದಗ್ನಿಶ್ಚೇಂದ್ರಶ್ಚ' ಮುಂತಾಗಿ ತೈತ್ತಿರೀಯೋಪನಿಷತ್ತಿನಲ್ಲಿ ಹೇಳಿರುವಂತೆ ಬ್ರಹ್ಮಾದಿ ಸ್ತಂಬ ಪರ್ಯಂತವಾದ ನಿಖಿಲ ಜಗತ್ತು ಆ ಪರಮಾತ್ಮನ ಭಯದಿಂದ ಸ್ವಕಾರ್ಯ ತತ್ಪರವಾಗಿರುವುದು. ಹಾಗಲ್ಲದೆ ಒಂದು ಕ್ಷಣಕಾಲ ಆ ಪರಮಾತ್ಮನನ್ನು ಮರೆತು 'ಅಹಂ'ಭಾವದಿಂದ ಮೆರೆದರೂ ಪರಮಾತ್ಮನು ಅಂಥವರ ಗರ್ವಭಂಗ ಮಾಡಿದ್ದಾನೆ. ಅಂದ ಮೇಲೆ ಲೀಲಾಮಾನುಷರೂಪಿಯಾದ ಆ ಪರಮಾತ್ಮನ ಆಜ್ಞೆಯನ್ನು ಲ್ಲಂಘಿಸಿ ಬಾಳುವುದು ಯಾರಿಗೆ ಸಾಧ್ಯ? ಆದುದರಿಂದ ಎಲ್ಲರೂ ವಿಧಿನಿಯಮಕ್ಕೆ ಅನುಗುಣವಾಗಿ ವರ್ತಿಸುತ್ತ ಪರಮಾತ್ಮಧ್ಯಾನದಲ್ಲಿ ನಿರತರಾಗಿದ್ದರೆ ಅವನ ಅನುಗ್ರಹಕ್ಕೆ ಪಾತ್ರರಾಗುವುದರಲ್ಲಿ ಸಂಶಯವಿಲ್ಲ' ಎಂದು ನಾರಾಯಣ ಮಹರ್ಷಿಯು ನಾರದನಿಗೆ ಬೋಧಿಸಿದನು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಷಟ್ಪಂಚಾಶತ್ತಮೋಽಧ್ಯಾಯಃ ॥

॥ ನಾರದ ಉವಾಚ ॥

ಕಿಮಪೂರ್ವಂ ಶ್ರುತಂ ಬ್ರಹ್ಮನ್ರಹಸ್ಯಂ ಪರಮಾದ್ಭುತಂ ।
ಅನಂತಚರಿತಂ ಧನ್ಯಮನಂತಸ್ಯಾಚ್ಯುತಸ್ಯ ಚ ॥ ೧ ॥

ಕಥಂ ಕೃಷ್ಣೋ ಮಹಾವಿಷ್ಣೋರ್ದರ್ಪಭಂಗಂ ಚಕಾರ ಸಃ ।
ಅನ್ಯೇಷಾಂ ವಾ ಕಥಮಹೋ ತದ್ಭವಾನ್ವಕ್ತುಮರ್ಹತಿ ॥ ೨ ॥

ಐವತ್ತಾರನೆಯ ಅಧ್ಯಾಯ.

೧ ನಾರದಮಹರ್ಷಿ:—ಎಲೈ ನಾರಾಯಣಮಹರ್ಷಿಯೇ, ಅಪೂರ್ವವೂ ರಹಸ್ಯವೂ ಆದ ಅದ್ಭುತ ವಿಷಯವನ್ನು ಕೇಳಿದೆನು. ಅನಂತನಾದ ಅಚ್ಯುತನ ಧನ್ಯತಮವಾದ ಚರಿತ್ರೆಯು ಅನಂತವಾದುದು

೨. ಆ ಶ್ರೀಕೃಷ್ಣಪರಮಾತ್ಮನು ಮಹಾವಿಷ್ಣುವಿನ ದರ್ಪಭಂಗವನ್ನು ಹೇಗೆ ಮಾಡಿದನು ? ಹಾಗೆಯೇ ಇತರರ ದರ್ಪಭಂಗವನ್ನು ಹೇಗೆ ಮಾಡಿದನು ? ಎಂಬುದನ್ನು ದಯವಿಟ್ಟು ಹೇಳು.

ಸ್ವತಃ ಶ್ರೀಕೃಷ್ಣಚರಿತಮತೀವ ಮಧುರಂ ಶ್ರುತೌ ।
ಅತೀವ ಮಧುರಂ ರಮ್ಯಂ ಕಾವ್ಯಂ ಕವಿಮುಖಾತ್ತತಃ ॥ ೩ ॥

॥ ಶ್ರೀ ನಾರಾಯಣ ಉವಾಚ ॥

ಮಹಾವಿಷ್ಣೋರಹಂಕಾರೋ ಬಭೂವ ಸಹಸೇತಿ ಚ ।
ಸರ್ವಂ ಮಲ್ಲೋಮಕೂಪೇಷು ವಿಶ್ವಾನ್ಯೇವಾಹಮೀಶ್ವರಃ ॥ ೪ ॥

ಸಂಹಾರಭೈರವೋ ಭೂತ್ವಾ ತಂ ಸ ಜಗ್ರಾಸ ಲೀಲಯಾ ।
ಸ್ಥಿತೇ ಮೂರ್ಧಾವಶೇಷೇ ಚ ಪ್ರಸಾದಂ ತಂ ಚಕಾರ ಸಃ ॥ ೫ ॥

ಸರ್ವಾತ್ಮನಾ ಧ್ಯಾಯಮಾನಃ ಸ್ತುತೌ ಭೀತಂ ಕೃಪಾನಿಧಿಃ ।
ತಚ್ಛರೀರಂ ಸುಸಂಪನ್ನಂ ಪುನರೇವ ಚಕಾರ ಸಃ ॥ ೬ ॥

---

೩. ವೇದದಲ್ಲಿ ನಿರೂಪಿತವಾಗಿರುವ ಶ್ರೀಕೃಷ್ಣಚರಿತೆಯೇ ಸ್ವತಃ ರಮ್ಯವಾದುದು. ಅದರಲ್ಲೂ ಕವಿಯ ಛಾಯಿಗೆ ಸಿಲುಕಿ ಅದು ಕಾವ್ಯವಾದರೆ ಅದರ ಮಾಧುರ್ಯವನ್ನು ವರ್ಣಿಸಲಾಗುವುದಿಲ್ಲ.

೪. ಶ್ರೀನಾರಾಯಣ :—ಒಮ್ಮೆ ಮಹಾವಿಷ್ಣುವಿಗೆ 'ನಿಖಿಲ ಪ್ರಪಂಚವೂ ನನ್ನ ಲೋಮಕೂಪದಲ್ಲಿರುವುದರಿಂದ ನಾನೇ ಸರ್ವೇಶ್ವರನೆಂದು' ಇದ್ದಕ್ಕಿದ್ದಂತೆಯೇ ಅಹಂಕಾರವುಂಟಾಯಿತು.

೫. ಆಗ ಶ್ರೀಕೃಷ್ಣಪರಮಾತ್ಮನು ಸಂಹಾರಭೈರವರೂಪವನ್ನು ತಾಳಿ ಅವನನ್ನು ಲೀಲಾಮಾತ್ರದಿಂದ ನುಂಗಿದನು. ಸಕಲಾವಯವಗಳನ್ನೂ ನುಂಗಿ ತಲೆ ಮಾತ್ರ ಉಳಿದಿರಲು ಆಗ ಮಹಾವಿಷ್ಣುವಿಗೆ ಅನುಗ್ರಹವನ್ನು ತೋರಿದನು.

೬. ದಯಾಮಯನಾದ ಪರಮಾತ್ಮನು ಭೀತನಾಗಿ ತನ್ನನ್ನೇ ಧ್ಯಾನಮಾಡುತ್ತಿರುವ ಆ ಮಹಾವಿಷ್ಣುವಿನ ಶರೀರವನ್ನು ಮೊದಲಿನಂತೆಯೇ ವಿರಾಡ್ರೂಪವುಳ್ಳದ್ದನ್ನಾಗಿ ಮಾಡಿದನು.

ಬ್ರಹ್ಮಣಃ ಸಹಸಾ ಬ್ರಹ್ಮನ್ನಿತಿ ದರ್ಪೋ ಬಭೂವ ಹ ।
ಅಹಂ ತ್ರಿಜಗತಾಂ ಧಾತಾ ಕರ್ತಾಽಹಮೀಶ್ವರಃ ಸ್ವಯಂ ॥ ೭ ॥

ಮತ್ಪರಃ ಪೂಜಿತೋ ನಾಸ್ತಿ ಮತ್ಪರಃ ಪೂಜಿತೇಂದ್ರಿಯಃ ।
ಇತ್ಯೇವಂ ಮನಸಾ ಕೃತ್ವಾ ಬಹುದರ್ಪೋ ಬಭೂವ ಹ ॥ ೮ ॥

ತಂ ಬ್ರಹ್ಮಣಾಂ ಸಮೂಹಂ ಚ ದರ್ಶಯಾಮಾಸ ತತ್ಕ್ಷಣಂ ।
ಗೋಲೋಕೇ ಸ್ವಸಮೀಪೇ ಚ ವಸಂತಂ ಪುರತೋ ವಿಭೋಃ ।
ಪಂಚವಕ್ತ್ರಂ ಚತುರ್ವಕ್ತ್ರಂ ಷಡ್ವಕ್ತ್ರಂ ಚ ತತೋಽಧಿಕಂ ॥ ೯ ॥

ಶತವಕ್ತ್ರಂ ಚ ಪ್ರತ್ಯೇಕಂ ಬ್ರಹ್ಮಾಂಡೌಘಂ ಚ ಲೀಲಯಾ ।
ತ್ಯಕ್ತುಕಾಮಂ ಸ್ವದೇಹಂ ಚ ವ್ರೀಡಯಾ ನತಕಂಧರಂ ॥ ೧೦ ॥

ಪುನಃ ಪ್ರಸಾದಂ ಕೃಪಯಾ ತಂ ಚಕಾರ ಕೃಪಾನಿಧಿಃ ।
ಕಾಲೇನ ಮೋಹಿನೀದ್ವಾರಾ ತಮಪೂಜ್ಯಂ ಚಕಾರ ಸಃ ॥ ೧೧ ॥

---

೭. ಎಲೈ ಬ್ರಾಹ್ಮಣೋತ್ತಮನೇ, ಇದೇ ರೀತಿಯಾಗಿ ಮತ್ತೊಮ್ಮೆ 'ನಾನೇ ತ್ರಿಲೋಕವನ್ನೂ ಸೃಷ್ಟಿಮಾಡುವವನು, ನಾನೇ ಸರ್ವೇಶ್ವರನು' ಎಂದು ಸೃಷ್ಟಿಕರ್ತನಾದ ಬ್ರಹ್ಮನಿಗೆ ಇದ್ದಕ್ಕಿದ್ದಂತೆಯೇ ದರ್ಪವುಂಟಾಯಿತು.

೮. ತ್ರಿಲೋಕದಲ್ಲಿ ತನ್ನಂತೆ ಪೂಜ್ಯನೂ, ಜಿತೇಂದ್ರಿಯನೂ ಮತ್ತಾರೂ ಇಲ್ಲವೆಂದು ಮನಸ್ಸಿನಲ್ಲೇ ಭಾವಿಸಿಕೊಂಡು ಬ್ರಹ್ಮನು ಬಹಳವಾಗಿ ಗರ್ವಿತನಾದನು.

೯. ಆಗ ಗೋಲೋಕದಲ್ಲಿ ತನ್ನ ಸಮೀಪದಲ್ಲೇ ವಾಸಿಸುತ್ತಿದ್ದ ಪಂಚಮುಖಿ, ಷಣ್ಮುಖಿ, ಶತಮುಖ ಮತ್ತು ಸಹಸ್ರಮುಖದ ಬ್ರಹ್ಮರನ್ನು ಆ ಚತುರ್ಮುಖನಿಗೆ ತೋರಿಸಿ ಅವನ ಗರ್ವವನ್ನು ಶ್ರೀಕೃಷ್ಣಪರಮಾತ್ಮನು ಭಂಗಗೊಳಿಸಿದನು.

೧೦. ಹೀಗೆ ಪ್ರತ್ಯೇಕವಾಗಿ ನೂರಾರು ಮುಖಗಳುಳ್ಳ ಬ್ರಹ್ಮರನ್ನು ಅವರಿಂದ ಸೃಷ್ಟವಾದ ಬ್ರಹ್ಮಾಂಡನಿಕರವನ್ನೂ ನೋಡಿ ಲಜ್ಜಿತನಾದ ಚತುರ್ಮುಖನು ತನ್ನ ದೇಹತ್ಯಾಗ ಮಾಡಲನುವಾದನು.

೧೧. ಆಗ ಕೃಪಾನಿಧಿಯಾದ ಶ್ರೀಕೃಷ್ಣನು ಕೃಪೆಯಿಂದ ಅವನಿಗೆ ಪ್ರಸಾದ ತೋರಿದನು. ಅಲ್ಲದೆ ಕಾಲಕ್ರಮದಲ್ಲಿ ಮೋಹಿನಿಯ ಮೂಲಕ ಬ್ರಹ್ಮನನ್ನು ಅಪೂಜ್ಯನನ್ನಾಗಿ ಮಾಡಿಸಿದನು.

ಸ್ವಕನ್ಯಾಂ ದರ್ಶಯಿತ್ವಾ ತಂ ಸಕಾಮಂ ಚ ಚಕಾರ ಹ ।
ಪುನಸ್ತದ್ದರ್ಪಭಂಗಂ ಚ ಶಿವದ್ವಾರಾ ಚಕಾರ ಸಃ ॥ ೧೨ ॥

ತತ್ಯಾಜ ಲಜ್ಜಯಾ ದೇಹಂ ಪುನರ್ದೇಹಂ ದಧಾರ ಸಃ ।
ಪುನಶ್ಚಕಾರ ತಂ ಪೂಜ್ಯಂ ಬ್ರಹ್ಮಾಣಂ ಬ್ರಾಹ್ಮಣಃ ಪ್ರಭುಃ ॥ ೧೩ ॥

ಜ್ಞಾನಂ ದದೌ ಮಹಾಜ್ಞಾನೀ ಜ್ಞಾನಾನಂದಃ ಸನಾತನಃ ।
ವಿಷ್ಣೋರ್ಬಭೂವ ಗರ್ವಶ್ಚ ಜಗತ್ಪಾತಾಽಹಮೀಶ್ವರಃ ॥ ೧೪ ॥

ತಮಾತ್ಮವಿಸ್ಮೃತಂ ಕೃಷ್ಣಶ್ಚಕಾರ ರಾಮಜನ್ಮನಿ ।
ಅಹಂ ವಿಶ್ವಂ ಬಿಭರ್ಮೀತಿ ಶೇಷೋ ದರ್ಪೀ ಬಭೂವ ಹ ॥ ೧೫ ॥

ತದ್ದರ್ಪಂ ಗರುಡದ್ವಾರಾ ಚೂರ್ಣೀಭೂತಂ ಚಕಾರ ಸಃ ।
ಏಕದಾ ಪೂಜಿತೋ ನಾಗೈರ್ಗರುಡಃ ಕೃಷ್ಣವಾಹನಃ ॥ ೧೬ ॥

---

೧೨. ಅವನ ಕನ್ಯೆಯಾದ ಸರಸ್ವತಿಯನ್ನು ಅವನಿಗೆ ತೋರಿ ಅವಳಲ್ಲಿ ಅವನು ಕಾಮಾಸಕ್ತನಾಗುವಂತೆ ಮಾಡಿ ಶಿವನ ಮೂಲಕ ಪುನಃ ಅವನ ದರ್ಪವನ್ನು ಭಂಗಪಡಿಸಿದನು.

೧೩. ಲಜ್ಜೆಯಿಂದ ದೇಹತ್ಯಾಗಮಾಡಿದ ಆ ಬ್ರಹ್ಮನಿಗೆ ಪುನಃ ದೇಹವನ್ನು ಕೊಟ್ಟು, ಬ್ರಾಹ್ಮಣಬಂಧುವಾದ ಆ ಪರಮಾತ್ಮನು ಬ್ರಹ್ಮನಿಗೆ ಎಲ್ಲೆಲ್ಲೂ ಪೂಜ್ಯತೆಯುಂಟಾಗುವಂತೆ ಮಾಡಿದನು.

೧೪. ಮಹಾಜ್ಞಾನಿಯೂ, ಜ್ಞಾನಾನಂದಮಯನೂ, ಸನಾತನನೂ ಆದ ಪರಮಾತ್ಮನು ಆ ಬ್ರಹ್ಮನಿಗೆ ದಿವ್ಯಜ್ಞಾನವನ್ನು ಅನುಗ್ರಹಿಸಿದನು. ಒಮ್ಮೆ ವಿಷ್ಣುವಿಗೆ ತಾನೇ ಜಗದ್ರಕ್ಷಕನೆಂದೂ ಸರ್ವೇಶ್ವರನೆಂದೂ ಹೆಮ್ಮೆಯುಂಟಾಯಿತು.

೧೫. ಆಗ ಪರಮಾತ್ಮನು ಅವನಿಗೆ ರಾಮನ ಜನ್ಮವಿತ್ತು ತನ್ನ ಆತ್ಮಸ್ವರೂಪವನ್ನೇ ತಾನು ಮರೆಯುವಂತೆ ಮಾಡಿದನು. ಆದಿಶೇಷನು ಒಮ್ಮೆ 'ನಾನೇ ಪ್ರಪಂಚವನ್ನು ಹೊರುವೆ' ನೆಂದು ಗರ್ವಿತನಾದನು.

೧೬. ಆಗ ಅವನ ಗರ್ವವನ್ನು ಕೃಷ್ಣನು ಗರುಡನ ಮೂಲಕ ಭಂಗಪಡಿಸಿದನು. ಕೃಷ್ಣನ ವಾಹನನಾದ ಗರುಡನು ಸಕಲ ಸರ್ಪಗಳಿಂದಲೂ ಪೂಜಿತನಾಗಿದ್ದನು.

ನ ಪೂಜಿತಶ್ಚ ಶೇಷೇಣ ಸ್ವದರ್ಪೇಣ ಪುರಾ ಮುನೇ ।
ಗರುಡೇನ ಜಿತಂ ಕ್ರೋಧಾತ್ತಮನಂತಂ ಮನಸ್ವಿನಂ　　॥ ೧೭ ॥

ಚಕಾರ ಮೋಕ್ಷಣಂ ತಸ್ಯ ಶ್ರೀಕೃಷ್ಣಶ್ಚ ಕೃಪಾನಿಧಿಃ ।
ಸ್ವಯಂ ಶಿವಃ ಸ್ವದರ್ಪಾಚ್ಚ ವಿವಾಹಂ ನ ಚಕಾರ ಸಃ　　॥ ೧೮ ॥

ತಂ ಕೃತ್ವಾ ಮಾಯಯಾ ಮೋಹಂ ಕಾರಯಾಮಾಸ ಸ್ತ್ರೀಯುತಂ ।
ಪುನರ್ಜಹಾರ ಪತ್ನೀಂ ಚ ದಕ್ಷಕನ್ಯಾಂ ಮಹಾಸತೀಂ　　॥ ೧೯ ॥

ವರ್ಷಂ ಶುಶೋಚ ತದ್ದೇಹಂ ಕ್ರೋಡೇ ಕೃತ್ವಾ ಚ ಶಂಕರಃ ।
ನಾನಾಸ್ಥಾನಂ ಚ ಬಭ್ರಾಮ ರುದನ್ಸ್ಫೋಟಾನ್ಮುಹುರ್ಮುಹುಃ　　॥ ೨೦ ॥

ಜನ್ಮಾಂತರೇ ಪುನಃ ಪ್ರಾಪ್ಯ ತಾಂ ಸತೀಂ ಪಾರ್ವತೀಂ ಮುದಾ ।
ವಿಸಸ್ಮಾರ ಚ ಸ್ವಜ್ಞಾನಂ ದಕ್ಷಶಪ್ತಃ ಪುನಃ ಶಿವಃ　　॥ ೨೧ ॥

---

೧೭. ಅವರೆ ದರ್ಪಗೊಂಡಿದ್ದ ಆದಿಶೇಷನು ಮಾತ್ರ ಅವನನ್ನು ಪೂಜಿಸಲಿಲ್ಲ. ಆಗ ಕುಪಿತನಾದ ಗರುಡನು ಮನಸ್ವಿಯಾದ ಆ ವಾಸುಕಿಯನ್ನು ಜಯಿಸಿದನು.

೧೮. ಈ ರೀತಿ ಕೃಪಾನಿಧಿಯಾದ ಕೃಷ್ಣನು ಅವನ ದರ್ಪವನ್ನಿಳಿಸಿದನು. ಸಾಕ್ಷಾತ್ ಶಿವನೂ ಸಹ ದರ್ಪದಿಂದ ಕೂಡಿ ವಿವಾಹಿತನಾಗದೆ ಏಕಾಕಿಯಾಗಿ ಅಲೆಯುತ್ತಿದ್ದನು.

೧೯. ಪರಮಾತ್ಮನು ತನ್ನ ಮಾಯಾಶಕ್ತಿಯಿಂದ ಅವನನ್ನು ಮೋಹಗೊಳಿಸಿ ಸ್ತ್ರೀಯುತನನ್ನಾಗಿ ಮಾಡಿದನು. ಪುನಃ ದಕ್ಷಕನ್ಯೆಯೂ, ಮಹಾಪತಿವ್ರತೆಯೂ ಆದ ಸತೀದೇವಿಯ ವಿರಹವುಂಟಾಗುವಂತೆ ಮಾಡಿ ಶಿವನನ್ನು ವ್ಯಥೆಗೊಳಿಸಿದನು.

೨೦. ಶಂಕರನು ಸತೀದೇವಿಯ ಮೃತಶರೀರವನ್ನು ಆಲಂಗಿಸಿಕೊಂಡು ಕ್ಷಣ ಕ್ಷಣಕ್ಕೂ ಗೋಳಾಡುತ್ತ ಒಂದು ವರ್ಷಕಾಲ ಅನೇಕ ಸ್ಥಳಗಳಲ್ಲಿ ಅಲೆದಾಡಿದನು.

೨೧. ಜನ್ಮಾಂತರದಲ್ಲಿ ಪಾರ್ವತೀರೂಪದಿಂದ ಜನಿಸಿದ ಆ ಸತೀದೇವಿಯನ್ನು ಪುನಃ ಶಿವನು ಪಡೆದರೂ ಸಹ ದಕ್ಷಶಾಪಕ್ಕೊಳಗಾದ ಆ ಶಿವನು ಅಜ್ಞಾನದಿಂದ ಸ್ವಸ್ವರೂಪವನ್ನು ಮರೆತನು.

ಪುನಶ್ಚಾಂಗಿರಸದ್ವಾರಾ ಸ್ಮಾರಯಾಮಾಸ ಸತ್ವರಂ ।
ಏಕದಾ ಸರಥಃ ಶಂಭುಃ ಪ್ರೇರಿತಸ್ತ್ರಿಪುರೇ ಪುರಾ ॥ ೨೨ ॥

ಪಶ್ಚಾದ್ದೈತ್ಯಂ ಶಿವದ್ವಾರಾ ತ್ರಿಪುರಾರಿಂ ಚಕಾರ ತಂ ।
ಸರ್ವಂ ವರಂ ಚ ಸರ್ವಸ್ಮೈ ದಾತುಂ ಶಂಭುಃ ಕೃಪಾನಿಧಿಃ ॥ ೨೩ ॥

ಸ್ವಯಂ ಕಲ್ಪತರುರ್ಭೂತ್ವಾ ಪ್ರತಿಜ್ಞಾಂ ಚ ಚಕಾರ ಸಃ ।
ವೃಕಾಸುರೋಽನುಷ್ಠಾನಂ ಚ ಕೃತ್ವಾ ವವ್ರೇ ವರಂ ವಿಭುಂ ॥ ೨೪ ॥

ದಾಸ್ಯಾಮಿ ಹಸ್ತಂ ಯನ್ಮೂರ್ಧ್ನಿ ಭಸ್ಮಸಾದ್ಭವತು ಕ್ಷಣಾತ್ ।
ಜಗಾದ ಜಗತಾಂ ನಾಥ ಈಪ್ಸಿತಂ ತೇ ಭವಿಷ್ಯತಿ ॥ ೨೫ ॥

ಇತಿ ಲಬ್ಧ್ವಾ ವರಂ ರುದ್ರಾದ್ಗಚ್ಛಂತಂ ಶಂಕರಂ ವಿಭುಂ ।
ಹಸ್ತಂ ದಾತುಂ ಚ ತನ್ಮೂರ್ಧ್ನಿ ಪ್ರಾಧಾವತ್ಸತ್ವರಂ ಪುರಾ ॥ ೨೬ ॥

---

೨೨. ಪುನಃ ಅಂಗಿರಸಮುನಿಯ ಮೂಲಕ ಆ ಶಿವನಿಗೆ ಸ್ವರೂಪಜ್ಞಾನ ವುಂಟಾಯಿತು. ಪೂರ್ವದಲ್ಲಿ ಒಮ್ಮೆ ರಥಸಹಿತನಾದ ಶಂಭುವು ತ್ರಿಪುರಾಸುರನ ಮೇಲೆ ಪ್ರೇರೇಪಿಸಲ್ಪಟ್ಟನು.

೨೩. ಶ್ರೀಕೃಷ್ಣನು ಆ ಶಿವನ ಮೂಲಕ ತ್ರಿಪುರಾಸುರನನ್ನು ಸಂಹಾರ ಮಾಡಿಸಿ ಅವನನ್ನು 'ತ್ರಿಪುರಾರಿ' ಎನಿಸಿದನು. ಕೃಪಾನಿಧಿಯಾದ ಶಂಭುವು ಭಕ್ತರಿಗೆ ಬೇಡಿದ ವರವನ್ನು ಕೊಡಲು ಶಕ್ತನಾದನು.

೨೪. ಆದುದರಿಂದ ಗರ್ವಿತನಾದ ತಾನು ಸಾಕ್ಷಾತ್ ಕಲ್ಪವೃಕ್ಷದಂತೆ ಬೇಡಿದ್ದನ್ನು ಕೊಡುವುದಾಗಿ ಪ್ರತಿಜ್ಞೆಮಾಡಿದನು. ಆಕ ವೃಕನೆಂಬ ರಾಕ್ಷಸನು ತಪಸ್ಸನ್ನಾಚರಿಸಿ ಶಿವನಿಂದ ಈ ಮುಂದೆ ಹೇಳುವಂತೆ ವರವನ್ನು ಬೇಡಿದನು.

೨೫. 'ನಾನು ಯಾರ ತಲೆಯ ಮೇಲೆ ಹಸ್ತವನ್ನಿಡುವೆನೋ ಅವನು ಭಸ್ಮೀಭೂತನಾಗಲಿ' ಈ ರೀತಿ ಬೇಡಿದ ವೃಕಾಸುರನಿಗೆ 'ನಿನ್ನ ಇಷ್ಟಾರ್ಥವು ಕೈಗೂಡಲಿ' ಎಂಬುದಾಗಿ ಜಗದೊಡೆಯನಾದ ಶಿವನು ವರವನ್ನು ಅನುಗ್ರಹಿಸಿದನು.

೨೬. ಈ ರೀತಿಯಾಗಿ ಶಂಕರನಿಂದ ವರವನ್ನು ಪಡೆದ ಆ ಅಸುರನು ಅವನ ತಲೆಯ ಮೇಲೆ ತನ್ನ ಕೈಯನ್ನಿಡುವುದಕ್ಕೋಸ್ಕರ ಜಾಗ್ರತೆಯಾಗಿ ಆ ಶಂಕರನನ್ನು ಅಟ್ಟಿಸಿಕೊಂಡು ಹೋದನು.

ಅತೀವ ಭೀತಃ ಶಂಭುಶ್ಚ ಜಗಾಮ ಶರಣಂ ಹರಿಂ ।
ಭಗವಾಂಶ್ಚ ಶಿವಸ್ಯಾರ್ಥೇ ದೈತ್ಯಂ ಭಸ್ಮೀಚಕಾರ ಸಃ　　॥ ೨೭ ॥

ಶಿವಂ ಯುದ್ಧಂ ಚ ಕುರ್ವಂತಂ ಬಾಣಯುದ್ಧೇ ಪುರಾ ವಿಭುಃ ।
ಲೀಲಯಾ ಜೃಂಭಣಾಸ್ತ್ರೇಣ ಜಡೀಭೂತಂ ಚಕಾರ ಸಃ　　॥ ೨೮ ॥

ಸಮಾಗತಂ ದಕ್ಷಯಜ್ಞೇ ಶಂಭುಂ ದಂಭೇನ ಲೀಲಯಾ ।
ವಾರಯಾಮಾಸ ಭಗವಾನ್ಸ್ತಂಭಂ ದತ್ವಾ ಚ ತದ್ಗಲೇ　　॥ ೨೯ ॥

ಕೇದಾರಕನ್ಯಕಾದ್ವಾರಾ ಶಪ್ತೋ ಧರ್ಮೋಽತಿದೈವತಃ ।
ಬಭೂವಾತಿಕೃಶೋ ಭೀತಃ ಕುಹ್ವಾಮೇವ ಯಥಾ ಶಶೀ　　॥ ೩೦ ॥

ತದಾ ತಸ್ಯ ಚ ಶಾಪಾಂತೇ ಸತ್ಯೇ ಪೂರ್ಣೋ ಬಭೂವ ಹ ।
ತ್ರಿಪಾದ್ಬಭೂವ ತ್ರೇತಾಯಾಂ ದ್ವಾಪರೇ ಚ ದ್ವಿಪಾದಿತಿ　　॥ ೩೧ ॥

---

೨೭. ಆಗ ಭಯಗ್ರಸ್ತನಾದ ಶಂಭುವು ಶ್ರೀಹರಿಯನ್ನು ಶರಣಾಗತನಾದನು. ಆಗ ಶ್ರೀಕೃಷ್ಣನು ಶಿವನ ಅನುಗ್ರಹಕ್ಕಾಗಿ ಆ ದೈತ್ಯನನ್ನು ಭಸ್ಮಮಾಡಿದನು.

೨೮. ಪೂರ್ವದಲ್ಲಿ ಶಿವನು ಬಾಣಾಸುರನೊಡನೆ ಯುದ್ಧಮಾಡುತ್ತಿದ್ದಾಗ ವಿಶ್ವವ್ಯಾಪಕವಾದ ಶ್ರೀಕೃಷ್ಣನು ಲೀಲಾಮಾತ್ರದಿಂದ ಅವನ ಮೇಲೆ ಜೃಂಭಣಾಸ್ತ್ರಗಳನ್ನು ಪ್ರಯೋಗಮಾಡಿ ಜಡನನ್ನಾಗಿ ಮಾಡಿದನು.

೨೯. ದಕ್ಷಯಜ್ಞವನ್ನು ನಾಶಗೊಳಿಸಲು ಜಂಭದಿಂದ ಬಂದ ಶಂಭುವಿನ ಕುತ್ತಿಗೆಗೆ ಕೈಹಾಕಿ ಶ್ರೀಕೃಷ್ಣನು ಲೀಲಾಮಾತ್ರದಿಂದ ಅವನನ್ನು ತಡೆದನು.

೩೦. ದೇವಾಧಿದೇವನಾದ ಧರ್ಮಪುರುಷನು ಕೇದಾರಕನ್ನಿಕೆಯ ಶಾಪಕ್ಕೊಳಗಾಗಿ ಭಯಗೊಂಡು ಅಮಾವಾಸ್ಯೆಯಲ್ಲಿ ಚಂದ್ರನು ಕ್ಷೀಣನಾಗುವಂತೆ ಬಹಳ ಕ್ಷೀಣಿಸುತ್ತ ಬಂದನು.

೩೧. ಆ ಶಾಪವು ಪರಿಹಾರವಾದನಂತರ ಕೃತಯುಗದಲ್ಲಿ ಪೂರ್ಣವಾಗಿದ್ದುಕೊಂಡು ತ್ರೇತಾಯುಗದಲ್ಲಿ ಮೂರು ಪಾದಗಳಿಂದಲೂ ದ್ವಾಪರಯುಗದಲ್ಲಿ ಎರಡು ಪಾದಗಳಿಂದಲೂ ನೆಲೆಸಿದನು.

ಏಕಪಾಚ್ಚ ಕಲೌ ಸೋಽಪಿ ಕಲೇರಂತೇ ಪುನಃ ಕ್ಷಯಃ |
ಷೋಡಶಾಂಶೋಽತಿಕ್ಲಿಷ್ಟಶ್ಚ ಸಸ್ಮಾರ ಚರಣಂ ವಿಭೋಃ || ೩೨ ||

ತದಾ ಸತ್ಯಯುಗಾರಂಭೇ ಪರಿಪೂರ್ಣೋಽಭವತ್ಪುನಃ |
ಪುನರ್ಯುಗಾನುರೋಧೇನ ಕ್ರಮೇಣ ಚ ಪುನಃ ಕ್ಷಯಃ || ೩೩ ||

ಯಮೋ ಮಾಂಡವ್ಯಶಾಪೇನ ಶೂದ್ರಯೋನಿಮವಾಪ ಹ |
ತದಾ ಪುನಃ ಶತಾಬ್ದಾಂತೇ ಪುನಃ ಶುದ್ಧೋ ಬಭೂವ ಹ || ೩೪ ||

ಸಾಂಬೋ ವಿಮಾತೃಶಾಪೇನ ಗಲತ್ಕುಷ್ಠೀ ಬಭೂವ ಸಃ |
ಚಂದ್ರೋ ದರ್ಪಮದೇನೈವ ಜಹಾರ ಚ ಗುರೋಃ ಪ್ರಿಯಾಂ || ೩೫ ||

---

೩೨. ಅದೇ ಧರ್ಮಪುರುಷನು ಕಲಿಯುಗದ ಪ್ರಾರಂಭದಲ್ಲಿ ಒಂದು ಪಾದ ಪಳ್ಳಿದ್ದು ಕೊನೆಕೊನೆಗೆ ಕ್ಷಯಹೊಂದುವನು. ಹದಿನಾರನೆಯ ಒಂದಂಶಮಾತ್ರ ಉಳಿದು ಕಷ್ಟಕ್ಕೆ ಸಿಲುಕಿದಾಗ ಆವನು ಶ್ರೀಕೃಷ್ಣನ ಚರಣಕಮಲಗಳನ್ನು ನೆನೆಸಿ ಕೊಂಡನು.

೩೩. ಅನಂತರ ಪರಮಾತ್ಮನ ಅನುಗ್ರಹದಿಂದ ಸತ್ಯಯುಗದ ಆರಂಭದಲ್ಲಿ ಪುನಃ ಪರಿಪೂರ್ಣನಾದನು ಹಾಗೆಯೇ ಯುಗಾನುಗುಣವಾಗಿ ಪುನಃ ಕ್ಷಯ ಹೊಂದುವನು.

೩೪. ಯಮನು ಮಾಂಡವ್ಯಮುನಿಯ ಶಾಪದಿಂದ ಶೂದ್ರಯೋನಿಯಲ್ಲಿ ಜನಿಸಿದನು. ಹಾಗೆಯೇ ನೂರು ವರ್ಷಗಳು ಕಳೆದ ನಂತರ ಪರಮಾತ್ಮನ ಅನುಗ್ರ ದಿಂದ ಶಾಪವಿಮುಕ್ತನಾಗಿ ಶುದ್ಧನಾದನು.

೩೫. ಸಾಂಬನು ವಿಮಾತೃವಿನ ಶಾಪದಿಂದ ಕುಷ್ಠರೋಗಿಯಾದನು. ಚಂದ್ರನು ಸೌಂದರ್ಯದ ದರ್ಪದಿಂದ ಗುರುಪತ್ನಿಯಾದ ತಾರಾದೇವಿಯನ್ನು ಅಪಹರಿಸಿದನು.

ಬಭೂವ ದರ್ಪಭಂಗೋಽಸ್ಯ ಯಕ್ಷ್ಮಗ್ರಸ್ತೋ ಬಭೂವ ಸಃ ।
ಸೂರ್ಯೋ ದರ್ಪಾತ್ತೇಜಸಶ್ಚ ಹಂತುಂ ಶಂಕರಕಿಂಕರಂ ॥ ೩೬ ॥

ಸುಮಾಲೀತ್ಯಭಿಧಂ ದೈತ್ಯಂ ಜಗಾಮಾಶು ಗಿರಿಂ ಪ್ರತಿ ।
ಅಹರ್ನಿಶಂ ದೀಪ್ತಿಕರಂ ಕುರ್ವಂತಂ ವಿಷಯಂ ರವೇಃ ॥ ೩೭ ॥

ಸೂರ್ಯೇಣ ಭೀತೋ ದೈತ್ಯಶ್ಚ ಶಂಕರಂ ಶರಣಂ ಯಯೌ ।
ಸೂರ್ಯಂ ದೃಷ್ಟ್ವಾ ಶಂಕರಶ್ಚ ಜಗ್ರಾಹ ಶೂಲಮೇವ ಚ ।
ಭೀತೋ ದುದ್ರಾವ ಸೂರ್ಯಶ್ಚ ದೃಷ್ಟ್ವಾ ತಂ ಶೂಲಿನಂ ಮುನೇ ॥ ೩೮ ॥

ಜಘಾನ ಕಾಶ್ಯಾಂ ಶೂಲೇನ ಶೂಲೀ ಕಾಶೀಶ್ವರೋ ರವಿಂ ।
ಮೂರ್ಛಾಂ ಸಂಪ್ರಾಪ್ಯ ಶೂಲೇನ ದರ್ಪಭಂಗೋ ಬಭೂವ ಹ ॥ ೩೯ ॥

ಗಾಢಾಂಧಕಾರಃ ಸಹಸಾ ಜಗ್ರಾಹ ಪೃಥಿವೀತಲಂ ।
ಆಶುತೋಷೋ ಮಹಾದೇವೋ ಜೀವಯಾಮಾಸ ತತ್‌ಕ್ಷಣಂ ॥ ೪೦ ॥

೩೬–೩೭. ಆಗ ಅವನ ದರ್ಪಭಂಗವುಂಟಾಗಿ ಅವನು ಕ್ಷಯರೋಗಿಯಾದನು. ಸೂರ್ಯನು ತನ್ನ ತೇಜಸ್ಸಿನ ದರ್ಪದಿಂದ ಶಂಕರನ ಕಿಂಕರನಾದ ಸುಮಾಲಿ ಎಂಬ ರಾಕ್ಷಸನನ್ನು ನಿಗ್ರಹಿಸಲು ಅವನಿದ್ದ ಪರ್ವತದೆಡೆಗೆ ಹೋದನು. ಆ ಸುಮಾಲಿಯು ತನ್ನ ತೇಜಸ್ಸಿನಿಂದ ಹಗಲು ರಾತ್ರಿ ಎನ್ನದೆ ಬೆಳಗಿ ಸೂರ್ಯನ ತೇಜಸ್ಸನ್ನು ವ್ಯರ್ಥಗೊಳಿಸಿದ್ದನು.

೩೮. ಈ ರೀತಿ ಸೂರ್ಯನಿಂದ ಅಟ್ಟಿಸಲ್ಪಟ್ಟ ಆ ಸುಮಾಲಿಯು ಶಂಕರನನ್ನು ಮರೆಹೊಕ್ಕನು. ಸೂರ್ಯನನ್ನು ನೋಡಿ ಶಂಕರನು ಶೂಲಾಯುಧವನ್ನು ಕೈಗೆ ತೆಗೆದುಕೊಂಡನು. ಆಗ ಶೂಲಿಯನ್ನು ನೋಡಿ ಭಯಗೊಂಡ ಸೂರ್ಯನು ದೂರ ಓಡಿದನು.

೩೯–೪೦. ಕಾಶೀಪತಿಯಾದ ಶಂಕರನು ಅವನನ್ನು ಅಟ್ಟಿಸಿಕೊಂಡು ಹೋಗಿ ತನ್ನ ಶೂಲದಿಂದ ಸೂರ್ಯನನ್ನು ಕಾಶಿಯಲ್ಲಿ ಹೊಡೆದನು. ಶೂಲಾಯುಧದ ಪೆಟ್ಟಿನಿಂದ ಮೂರ್ಛೆಗೊಂಡ ಸೂರ್ಯನಿಗೆ ದರ್ಪಭಂಗವುಂಟಾಯಿತು. ಆಗ ಭೂಮಿಯಲ್ಲಿ ಇದ್ದಕ್ಕಿದ್ದಂತೆಯೇ ಗಾಢಾಂಧಕಾರವುಂಟಾಗಲು ಜಾಗ್ರತೆ ಸಂತೋಷ ಹೊಂದುವ (ಆಶುತೋಷ) ಮಹಾದೇವನು ಕೂಡಲೇ ಸೂರ್ಯನನ್ನು ಪ್ರತ್ಯುಜ್ಜೀವಗೊಳಿಸಿದನು.

ತುಷ್ಟಾವ ಶಂಕರಂ ಸೂರ್ಯೋ ಲಜ್ಜಿತೋಽಪಿ ಭಯೇನ ಚ ।
ಕೃತ್ವಾ ತಮಾಶಿಷಂ ತುಷ್ಟೋ ಯಯೌ ಗೇಹಂ ಕೃಪಾನಿಧಿಃ ॥ ೪೧ ॥

ವಿಭುರ್ಗರುತ್ಮತೋ ದರ್ಪಂ ಬಭಂಜ ಲೀಲಯಾ ಪುರಾ ।
ನಿಃಶ್ವಾಸೈಃ ಪ್ರೇರಿತಸ್ಯಾಪಿ ಶಿವಸ್ಯ ವೃಷಭಸ್ಯ ಚ ॥ ೪೨ ॥

ಆಗಚ್ಛತಶ್ಚ ವೈಕುಂಠಂ ಪೃಷ್ಠೇ ಕೃತ್ವಾ ಶಿವಂ ಪುರಾ ।
ದ್ರಷ್ಟುಂ ಸಮಾಗತಂ ಭಕ್ತ್ಯಾ ದೇವಂ ನಾರಾಯಣಂ ಪರಂ ॥ ೪೩ ॥

ವಹ್ನಿರ್ದರ್ಪೀ ಭೃಗೋಃ ಶಾಪಾತ್ಸರ್ವಭಕ್ಷೋ ಬಭೂವ ಹ ।
ಗುರೋಃ ಸ್ವಭಾರ್ಯಾಹರಣಾದ್ದರ್ಪಶೂನ್ಯೋ ಬಭೂವ ಹ ॥ ೪೪ ॥

ದುರ್ವಾಸಸೋ ದರ್ಪಭಂಗೋ ಬಭೂವ ಹ್ಯಂಬರೀಷತಃ ।
ಸುದರ್ಶನೇನ ಚಕ್ರೇಣ ವಿಷ್ಣೋರ್ದುರ್ವಿಷಹೇಣ ಚ ॥ ೪೫ ॥

---

೪೧. ಆಗ ಲಜ್ಜಿತನಾದ ಸೂರ್ಯನು ಭಯದಿಂದ ಶಂಕರನನ್ನು ಸ್ತುತಿಸಿದನು. ಕೃಪಾನಿಧಿಯಾದ ಶಂಕರನು ಸಂತುಷ್ಟನಾಗಿ ಸೂರ್ಯನಿಗೆ ಅನುಗ್ರಹ ಮಾಡಿ ತನ್ನ ಮಂದಿರಕ್ಕೆ ಹಿಂತಿರುಗಿದನು.

೪೨. ವಿಶ್ವವ್ಯಾಪಕನಾದ ಪರಮಾತ್ಮನು ಶಿವನ ವೃಷಭದ ನಿಶ್ವಾಸದಿಂದ ಪ್ರೇರಿತನಾದ ಗರುಡನ ದರ್ಪವನ್ನು ಲೀಲಾಮಾತ್ರದಿಂದ ಭಂಗಗೊಳಿಸಿದನು.

೪೩. ಆ ಗರುಡನು ಪೂರ್ವದಲ್ಲಿ ಪರಮಪುರುಷನಾದ ನಾರಾಯಣನನ್ನು ಭಕ್ತಿಯಿಂದ ನೋಡುವುದಕ್ಕಾಗಿ ವೇಗದಿಂದ ಶಿವನನ್ನು ಹಿಂದಕ್ಕೆ ಹಾಕಿ ವೈಕುಂಠಕ್ಕೆ ಮೊದಲು ಬಂದನು.

೪೪. ಇದೇ ರೀತಿಯಾಗಿ ದರ್ಪದಿಂದ ಮೆರೆಯುತ್ತಿದ್ದ ಅಗ್ನಿದೇವನು ಭೃಗುವಿನ ಶಾಪದಿಂದ ಸರ್ವಭಕ್ಷಕನಾದನು. ದೇವಗುರುವಾದ ಬೃಹಸ್ಪತಿಗೆ ಪತ್ನೀ ಹರಣವಾದುದರಿಂದ ದರ್ಪಭಂಗವುಂಟಾಯಿತು.

೪೫. ಅಂಬರೀಷ ಮಹಾರಾಜನಿಂದ ದೂರ್ವಾಸಮುನಿಯ ದರ್ಪಭಂಗವುಂಟಾಯಿತು. ಸಹಿಸಲಸಾಧ್ಯವಾದ ವಿಷ್ಣುವಿನ ಸುದರ್ಶನ ಚಕ್ರವು ಅಂಬರೀಷನ ರಕ್ಷಣೆಗಾಗಿ ದೂರ್ವಾಸನನ್ನು ಭಂಗಗೊಳಿಸಿತು.

ಜಯಸ್ಯ ವಿಜಯಸ್ಯಾಪಿ ದರ್ಪಭಂಗಂ ಚಕಾರ ಸಃ ।
ವೈಕುಂಠಾತ್ಪತಿತಸ್ಯಾಪಿ ಬ್ರಹ್ಮಶಾಪಚ್ಛಲೇನ ಚ ॥ ೪೬ ॥

ನೃಸಿಂಹೇನ ಹತಃ ಸೋಽಪಿ ಹಿರಣ್ಯಕಶಿಪುರ್ಯಥಾ ।
ಸೂಕರೇಣ ಹಿರಣ್ಯಾಕ್ಷೋ ಲೀಲಯಾ ಚ ರಸಾತಲೇ ॥ ೪೭ ॥

ರಾವಣಃ ಕುಂಭಕರ್ಣಶ್ಚ ನಿಹತೌ ರಾಮಬಾಣತಃ ।
ಜನ್ಮಾಂತರೇ ಚ ಲಂಕಾಯಾಂ ಬ್ರಹ್ಮಣಾ ಪ್ರಾರ್ಥಿತಸ್ಯ ಚ ॥ ೪೮ ॥

ಶಿಶುಪಾಲೋ ಹಿ ನಿಹತಃ ಕೃಷ್ಣಬಾಣೇನ ಲೀಲಯಾ ।
ದಂತವಕ್ತ್ರಶ್ಚ ಸಹಸಾ ಪರಿಪೂರ್ಣೋಽತ್ರ ಜನ್ಮನಿ ॥ ೪೯ ॥

ಸುರಾಣಾಂ ದರ್ಪಭಂಗಂ ಚ ದೈತ್ಯದ್ವಾರಾ ಚಕಾರ ಹ ।
ಅಸುರಾಣಾಂ ಸುರದ್ವಾರಾ ವಿರೋಧೇನ ಪರಸ್ಪರಂ ॥ ೫೦ ॥

೪೬-೪೭. ಹಾಗೆಯೇ ಪರಮಾತ್ಮನು ವೈಕುಂಠದ ದ್ವಾರರಕ್ಷಕರಾದ ಜಯ ವಿಜಯರ ಗರ್ವವನ್ನು ಭಂಗಗೊಳಿಸಿದನು. ಬ್ರಹ್ಮಶಾಪಕ್ಕೊಳಗಾಗಿ ವೈಕುಂಠದಿಂದ ಭೂಮಿಗೆ ಬಂದು ಹಿರಣ್ಯಕಶಿಪುವಾಗಿದ್ದ ವಿಜಯನು ನೃಸಿಂಹನಿಂದ ಹತನಾದನು. ಅಂತೆಯೇ ಹಿರಣ್ಯಾಕ್ಷನೆಂಬ ಅಸುರನಾದ ಜಯನು ಪಾತಾಳ ಲೋಕದಲ್ಲಿ ವರಾಹರೂಪಿಯಾದ ಪರಮಾತ್ಮನಿಂದ ಹತನಾದನು.

೪೮. ಅನಂತರ ಬ್ರಹ್ಮನನ್ನು ಪ್ರಾರ್ಥಿಸಿಕೊಂಡಿದ್ದಂತೆ ಲಂಕೆಯಲ್ಲಿ ಆ ಜಯ ವಿಜಯರು ರಾವಣ ಕುಂಭಕರ್ಣರ ರೂಪದಲ್ಲಿ ಜನಿಸಿ ಶ್ರೀರಾಮನ ಬಾಣದಿಂದ ಇಬ್ಬರೂ ಹತರಾದರು.

೪೯. ಅನಂತರ ಮೂರನೆಯ ಜನ್ಮದಲ್ಲಿ ಶಿಶುಪಾಲ ಮತ್ತು ದಂತವಕ್ತ್ರರಾಗಿ ಜನಿಸಿ ಶ್ರೀಕೃಷ್ಣನ ಚಕ್ರದಿಂದ ಲೀಲಾಮಾತ್ರದಿಂದ ಹತರಾಗಿ ತಮ್ಮ ಶಾಪವಿಮೋಚನೆಯನ್ನು ಹೊಂದಿದರು.

೫೦. ಹೀಗೆಯೇ ದೇವತೆಗಳ ದರ್ಪವನ್ನು ರಾಕ್ಷಸರ ಮೂಲಕ ಪರಮಾತ್ಮನು ಭಂಗಗೊಳಿಸಿದನು. ಪರಸ್ಪರ ವಿರೋಧವನ್ನು ತಂದೊಡ್ಡಿ ದೇವತೆಗಳ ಮೂಲಕ ರಾಕ್ಷಸರ ದರ್ಪವನ್ನೂ ಭಂಗಪಡಿಸಿದನು.

ವಿಧಿದ್ವಾರಾ ದರ್ಪಭಂಗಂ ಭವತಶ್ಚ ಚಕಾರ ಸಃ ।
ಭವಾನಾಸೀನ್ನಾರದಶ್ಚ ಪುರಾ ಪುತ್ರಃ ಪ್ರಜಾಪತೇಃ ॥ ೫೧ ॥

ಗಂಧರ್ವಶ್ಚ ಪಿತುಃ ಶಾಪಾಚ್ಛೂದ್ರೀಪುತ್ರಸ್ತತಃ ಕ್ರಮಾತ್ ।
ತತಃ ಪುನರ್ನಾರದಶ್ಚ ಪ್ರಸಾದಾದಧುನಾ ವಿಭೋಃ ॥ ೫೨ ॥

ಮಮ ಸಾಧ್ಯಂ ವಿಶ್ವಮಿತಿ ಕಾಮದರ್ಪೋ ಬಭೂವ ಹ ।
ತಂ ಪ್ರಮತ್ತಂ ಹರದ್ವಾರಾ ಭಸ್ಮಸಾಚ್ಚ ಚಕಾರ ಸಃ ॥ ೫೩ ॥

ಪುನಃ ಕೃತ್ವಾ ಪ್ರಸಾದಂ ತಂ ಜೀವಯಾಮಾಸ ಲೀಲಯಾ ।
ಐಕಾಂತಿಕಂ ಚ ತದ್ಭಕ್ತಂ ಸ ಚ ನಾಸ್ತ್ರಂ ಕರೋತಿ ಹಿ ॥ ೫೪ ॥

ಚಕಾರ ದರ್ಪಭಂಗಂ ಚ ದರ್ಪಿಣೋ ಲಕ್ಷ್ಮಣಸ್ಯ ಚ ।
ರಣೇ ಶಂಕರಶೂಲೇನ ರಾವಣಪ್ರೇರಿತೇನ ಚ ॥ ೫೫ ॥

---

೫೧. ನೀನು ಹಿಂದೆ ಬ್ರಹ್ಮ ಪುತ್ರನಾಗಿ ನಾರದನೆನಿಸಿಕೊಂಡಿದ್ದಾಗ ಆ ಪರಮಾತ್ಮನು ಬ್ರಹ್ಮನ ಮೂಲಕ ನಿನ್ನ ದರ್ಪವನ್ನು ಭಂಗಗೊಳಿಸಿದನು.

೫೨. ಆಗ ನೀನು ತಂದೆಯ ಶಾಪದಿಂದ ಗಂಧರ್ವನಾಗಿ ಜನಿಸಿದ್ದು ಅದೇ ಕ್ರಮದಲ್ಲಿ ಶೂದ್ರಸ್ತ್ರೀಯಲ್ಲೂ ಜನಿಸಿದೆ. ಅನಂತರ ಪರಮಾತ್ಮನ ಅನುಗ್ರಹಕ್ಕೆ ಪಾತ್ರನಾಗಿ ಪುನಃ ನಾರದನಾಗಿ ಜನಿಸಿರುವೆ.

೫೩. 'ಪ್ರಪಂಚವೆಲ್ಲ ನನ್ನ ಅಧೀನವಾದುದೆಂದು' ಕಾಮದೇವನು ಒಮ್ಮೆ ಹೆಮ್ಮೆಗೊಂಡನು. ಪ್ರಮತ್ತನಾದ ಆ ಮನ್ಮಥನನ್ನು ಪರಮಾತ್ಮನು ಶಿವನ ಮೂಲಕ ಭಸ್ಮಮಾಡಿಸಿದನು.

೫೪. ರತೀದೇವಿಯ ಪ್ರಾರ್ಥನೆಯನ್ನು ಕೇಳಿ ಪುನಃ ಅವನಿಗೆ ಅನುಗ್ರಹ ಮಾಡಿ ಅವನನ್ನು ಪ್ರತ್ಯುಜ್ಜೀವಗೊಳಿಸಿದನು. ಪರಮಾತ್ಮನು ತನ್ನ ಅನನ್ಯಭಕ್ತನಿಗೆ ಯಾವಾಗಲೂ ತೊಂದರೆಯನ್ನುಂಟುಮಾಡುವುದಿಲ್ಲ.

೫೫. ಯುದ್ಧದಲ್ಲಿ ರಾವಣನಿಂದ ಬಿಡಲ್ಪಟ್ಟ ಶಂಕರನ ಶೂಲಾಯುಧದ ಮೂಲಕ ದರ್ಪಗೊಂಡಿದ್ದ ಲಕ್ಷ್ಮಣನ ದರ್ಪವನ್ನೂ ಸಹ ಪರಮಾತ್ಮನು ಭಂಗಗೊಳಿಸಿದನು.

ಪುನಸ್ತಂಜೀವಯಾಮಾಸ ರಾಮಸ್ಯ ಸ್ತವನೇನ ಚ
ಸ್ವಯಂ ವಿಸ್ಮೃತವಿಷ್ಣೋಶ್ಚ ಬ್ರಹ್ಮಶಾಪೇನ ನಾರದ ॥ ೫೬ ॥

ಚಕಾರ ದರ್ಪಭಂಗಂ ಚ ಕಾರ್ತವೀರ್ಯಾರ್ಜುನಸ್ಯ ಚ ।
ಜಾಮದಗ್ನ್ಯಸ್ಯ ಶಸ್ತ್ರೇಣಾಮೋಘೇನ ಪರ್ಶುನಾ ಪುರಾ ॥ ೫೭ ॥

ವಿಪ್ರಪುತ್ರಸ್ಯ ಮರಣೇ ಹರಣೇ ಕೃಷ್ಣಯೋಷಿತಾಂ ।
ಕರ್ಣೇನ ಸಾರ್ಧಂ ಸಮರೇ ಪಾರ್ಥದರ್ಪಂ ಬಭಂಜ ಸಃ ॥ ೫೮ ॥

ಬಾಣಸ್ಯ ಚೋಷಾರಣೇ ಚಿಚ್ಛೇದ ಚ ಭುಜಾನ್ವಿಭುಃ ।
ಭೃಗೋಶ್ಚ ದಕ್ಷಯಜ್ಞೇ ಚ ದರ್ಪಭಂಗಂ ಚಕಾರ ಸಃ ॥ ೫೯ ॥

---

೫೬. ಎಲೈ ನಾರದನೇ, ಬ್ರಹ್ಮನ ಶಾಪದಿಂದ ತಾನೇ ವಿಷ್ಣುವೆಂಬುದನ್ನು ಮರೆತಿದ್ದ ಶ್ರೀರಾಮಚಂದ್ರನ ದಿವ್ಯ ಸ್ತೋತ್ರದಿಂದ ಪ್ರಸನ್ನನಾದ ಪರಮಾತ್ಮನು ಲಕ್ಷ್ಮಣನನ್ನು ಪುನರುಜ್ಜೀವನಗೊಳಿಸಿದನು.

೫೭. ಇದೇ ರೀತಿಯಾಗಿ ಹಿಂದೆ ಪರಶುರಾಮನ ಅಮೋಘವಾದ ಪರಶುವಿನ ಮೂಲಕ ಗರ್ವಿತನಾಗಿದ್ದ ಕಾರ್ತವೀರ್ಯಾರ್ಜುನನ ಗರ್ವವನ್ನು ಭಂಗಗೊಳಿಸಿದನು.

೫೮. ಬ್ರಾಹ್ಮಣ ವಟುವೊಬ್ಬನು ಸತ್ತಾಗಲೂ, ಕೃಷ್ಣನ ಹದಿನಾರುಸಾವಿರ ಮಂದಿ ಸ್ತ್ರೀಯರನ್ನು ಹಸ್ತಿನಾವತಿಗೆ ಕರೆದೊಯ್ಯುವಾಗಲೂ, ಕರ್ಣನೊಡನೆ ಯುದ್ಧ ಮಾಡುವಾಗಲೂ ಪರಮಾತ್ಮನು ಅರ್ಜುನನ ಗರ್ವವನ್ನು ಭಂಗಪಡಿಸಿರುವನು.

೫೯. ಉಷಾಪತಿಯಾದ ಅನಿರುದ್ಧನನ್ನು ಬಂಧನದಲ್ಲಿಟ್ಟಿದ್ದ ಬಾಣಾಸುರನ ಬಾಹುಗಳನ್ನು ಕತ್ತರಿಸಿ ಅವನ ದರ್ಪವನ್ನು ಭಂಗಪಡಿಸಿದನು. ಅದೇ ರೀತಿಯಾಗಿ ದಕ್ಷಯಜ್ಞದಲ್ಲಿ ದರ್ಪಗೊಂಡಿದ್ದ ಭೃಗುಮಹರ್ಷಿಯ ದರ್ಪವನ್ನೂ ಪರಮಾತ್ಮನು ಭಂಗಪಡಿಸಿದನು.

ಪರಶುರಾಮಸ್ಯ ರಾಮಸ್ಯ ವಿವಾಹೇ ಪಥಿ ಗಚ್ಛತಃ ।
ಬಭಂಜ ದರ್ಪಂ ಸಮರೇ ರಾಮದ್ವಾರಾ ಪುರಾ ವಿಭುಃ ॥ ೬೦ ॥

ಸುಮೇರೋಃ ಶೃಂಗಭಂಗಂ ಚ ವಾಯುದ್ವಾರಾ ಚಕಾರ ಸಃ ।
ಸಮುದ್ರಾಣಾಂ ದರ್ಪಭಂಗಂ ಚಕಾರಾಗಸ್ತ್ಯಭಕ್ಷಣಾತ್ ॥ ೬೧ ॥

ಅಕಾಲೇ ಸೃಷ್ಟಿಹರಣೇ ತತ್ಪುತ್ರಮರಣೇ ಪುರಾ ।
ಕೋಪಯುಕ್ತಸ್ಯ ವಾಯೋಶ್ಚ ದರ್ಪಭಂಗಂ ಚಕಾರ ಸಃ ॥ ೬೨ ॥

ಉಷಾಹರಣಯಾತ್ರಾಯಾಂ ದ್ವಾರಕಾಗಮನೇ ಹರೇಃ ।
ಬಾಣಸ್ಯ ಚ ಗವಾಂ ಹೇತೋರ್ವರುಣಂ ಚ ಶಶಾಪ ಸಃ ॥ ೬೩ ॥

ಕಲಹೇ ಗಂಗಯಾ ಸಾರ್ಧಂ ವಾಣ್ಯಾ ನಾರಾಯಣಾಗ್ರತಃ
ಸರಸ್ವತೀಂ ಚ ತತ್ಯಾಜ ತಸ್ಯಾ ವರ್ಪಂ ಬಭಂಜ ಸಃ ॥ ೬೪ ॥

---

೬೦. ಶ್ರೀರಾಮನು ವಿವಾಹಮಾಡಿಕೊಂಡು ಅಯೋಧ್ಯೆಗೆ ಹಿಂತಿರುಗುತ್ತಿದ್ದಾಗ ದರ್ಪದಿಂದ ಅವನನ್ನು ತಡೆದ ಪರಶುರಾಮನ ಗರ್ವವನ್ನು ಪರಮಾತ್ಮನು ಶ್ರೀರಾಮನ ಮೂಲಕ ಭಂಗಪಡಿಸಿದನು.

೬೧. ವಾಯುವಿನ ಮೂಲಕ ಸುಮೇರು ಪರ್ವತದ ಶೃಂಗವನ್ನು ಭಂಗಗೊಳಿಸಿಯೂ, ಅಗಸ್ತ್ಯನ ಮೂಲಕ ಸಮುದ್ರವನ್ನು ಪಾನಮಾಡಿಸಿಯೂ ಆ ಸುಮೇರು ಮತ್ತು ಸಮುದ್ರದ ಗರ್ವವನ್ನು ಭಂಗಗೊಳಿಸಿದನು

೬೨. ಇಂದ್ರನಿಂದ ವಾಯುಪುತ್ರನಾದ ಆಂಜನೇಯನು ಹತನಾದಾಗ ಕುಪಿತನಾದ ವಾಯುವು ತನ್ನ ಚಲನೆಯನ್ನೇ ನಿಲ್ಲಿಸಿ ಅಕಾಲದಲ್ಲಿ ಸೃಷ್ಟಿಯನ್ನೆಲ್ಲಾ ನಾಶಮಾಡುವೆನೆಂದು ಹೆಮ್ಮೆಗೊಂಡಿದ್ದಾಗ ಪರಮಾತ್ಮನು ಅವನ ಗರ್ವವನ್ನೂ ಭಂಗಗೊಳಿಸಿದನು.

೬೩. ಇದೇ ರೀತಿಯಲ್ಲಿ ಪರಮಾತ್ಮನು ಶ್ರೀಕೃಷ್ಣನ ಮೂಲಕ ಉಷೆಯ ಅಪಹರಣಮಾಡಿಸಿ ದ್ವಾರಕಿಗೆ ಕಳುಹಿಸಿ ಬಾಣಸುರನ ಗರ್ವವನ್ನು ನಾಶಪಡಿಸಿದನು. ಅಲ್ಲದೆ ಗೋರಕ್ಷಣೆಯಲ್ಲಿ ದರ್ಪಗೊಂಡಿದ್ದ ವರುಣನ ದರ್ಪವನ್ನೂ ನಾಶಗೊಳಿಸಿದನು.

೬೪. ಶ್ರೀಮನ್ನಾರಾಯಣನ ಎದುರಿನಲ್ಲಿ ಗಂಗೆಗೂ ಸರಸ್ವತಿಗೂ ಕಲಹವುಂಟಾದಾಗ ಸರಸ್ವತಿಯನ್ನು ತ್ಯಾಗಮಾಡಿ ಆಕೆಯ ದರ್ಪವನ್ನು ಭಂಗಗೊಳಿಸಿದನು.

ದರ್ಪಯುಕ್ತಾಂ ಚ ದುರ್ಗಾಂ ಚ ತ್ಯಕ್ತ್ವಾ ಶಂಭುರ್ಹಿಮಾಲಯೇ ।
ಕಾಮಂ ಚ ಭಸ್ಮಸಾತ್ಕೃತ್ವಾ ತಪಸೇ ಚ ಯಯೌ ವಿಭುಃ ॥ ೬೫ ॥

ಲಜ್ಜಾಮವಾಪ ಸಾ ದೇವಿ ತಸ್ಯಾ ದರ್ಪಂ ಬಭಂಜ ಸಃ ।
ಸಾ ಯಯೌ ತಪಸೇ ವಿಷ್ಣೋಃ ಪ್ರಾಪ್ತಿಹೇತೋಃ ಶಿವಸ್ಯ ಚ ॥ ೬೬ ॥

ಭಾರತೇ ಸುಚಿರಂ ತಪ್ತ್ವಾ ದೇವೀ ವಿಷ್ಣೋರ್ವರೇಣ ಚ ।
ಚಕಾರ ಸ್ವಾಮಿನಂ ಶಂಭುಂ ಭಗವಂತಂ ಸನಾತನಂ ॥ ೬೭ ॥

ಮಹಾಸೌಭಾಗ್ಯಯುಕ್ತಾ ಸಾ ಬಭೂವ ಶಂಕರಪ್ರಿಯಾ ।
ವಿಶ್ವೇಷು ಸರ್ವದೇವೇಷು ಪೂಜ್ಯಾ ವಂದ್ಯಾ ಸ್ತುತಾ ಸುರೈಃ ॥ ೬೮ ॥

ದರ್ಪಯುಕ್ತಾ ಮಹಾಲಕ್ಷ್ಮೀರ್ಬಭೂವ ಸಾ ಮಹಾಮುನೇ ।
ಪರಾಭೂತಾ ಪುರಾ ದೇವೀ ಜಯೇನ ವಿಜಯೇನ ಚ ॥ ೬೯ ॥

---

೬೫. ಸೌಂದರ್ಯಗರ್ವಿತಳಾದ ದುರ್ಗಾದೇವಿಯನ್ನು ಶಂಭುವು ಹಿಮಾಲಯದಲ್ಲೇ ಬಿಟ್ಟು, ತನ್ನ ಮನಸ್ಸನ್ನು ಚಂಚಲಗೊಳಿಸಿದ ಮನ್ಮಥನನ್ನು ಬೂದಿ ಮಾಡಿ, ವಿಭುವಾದ ತಾನು ತಪಸ್ಸಿಗೆ ತೆರಳಿದನು.

೬೬. ಈ ರೀತಿ ಪಾರ್ವತಿಯನ್ನು ಲಜ್ಜಿತಳನ್ನಾಗಿ ಮಾಡಿ ಪರಮಾತ್ಮನು ಆವಳ ಸೌಂದರ್ಯ ದರ್ಪವನ್ನು ಭಂಗಪಡಿಸಿದನು. ಆಗ ಪಾರ್ವತಿಯು ಶಿವನನ್ನು ವರಿಸಲೋಸುಗ ಪರಮಾತ್ಮನನ್ನು ಕುರಿತು ತಪಸ್ಸನ್ನು ಮಾಡಿದಳು.

೬೭. ಭರತಖಂಡದಲ್ಲಿ ಬಹಳ ಕಾಲ ತಪಸ್ಸನ್ನು ಮಾಡಿ, ವಿಷ್ಣುವಿನ ಅನುಗ್ರಹಕ್ಕೆ ಪಾತ್ರಳಾದ ಪಾರ್ವತಿಯು, ಷಡ್ಗುಣೈಶ್ವರ್ಯ ಸಂಪನ್ನನೂ ಸನಾತನನೂ ಆದ ಶಂಭುವನ್ನು ಪತಿಯನ್ನಾಗಿ ಪಡೆದಳು.

೬೮. ಶಂಕರನ ಪ್ರಿಯಳಾಗಿ ಮಹಾಸೌಭಾಗ್ಯವತಿಯಾದುದಲ್ಲದೆ ವಿಶ್ವದಲ್ಲಿ ಎಲ್ಲ ದೇವಿಯರಿಂದಲೂ ಪೂಜ್ಯಳಾಗಿ ದೇವತೆಗಳಿಗೆ ವಂದ್ಯಳೂ, ಸ್ತುತ್ಯಳೂ ಆದಳು.

೬೯. ಎಲೈ ಮಹಾಮುನಿಯೇ, ಮಹಾಲಕ್ಷ್ಮಿಯು ಹಿಂದೊಮ್ಮೆ ದರ್ಪದಿಂದ ಕೂಡಿದವಳಾಗಿದ್ದು ಜಯವಿಜಯರೆಂಬ ವೈಕುಂಠದ ದ್ವಾರಪಾಲಕರಿಂದ ಆ ದೇವಿಯು ತಿರಸ್ಕಾರಹೊಂದಿದಳು.

ಪ್ರವಿಶಂತೀ ವಿಭೋರ್ದ್ವಾರಂ ದತ್ವಾ ಭಕ್ತಾಯ ವಾಂಛಿತಂ ।
ನಿವಾರಿತಾ ಸಾ ದ್ವಾರಾಚ್ಚ ತೇನ ದೌವಾರಿಕೇಣ ವೈ ॥ ೭೦ ॥

ಯದಾಽಽತ್ಮನಸ್ತಿರಸ್ಕಾರಂ ಸಾಭಿಮಾನಾ ಮಹಾಸತೀ ।
ಸ್ಮೃತ್ವಾ ಹರೇಃ ಪಾದಪದ್ಮಂ ದೇಹಂ ತ್ಯಕ್ತುಂ ಸಮುದ್ಯತಾ ॥ ೭೧ ॥

ತದಾ ಬ್ರಹ್ಮಾ ಮಹೇಶಶ್ಚ ವಿಷ್ಣುರ್ಧರ್ಮಶ್ಚ ಭಾಸ್ಕರಃ ।
ಚಂದ್ರಶ್ಚ ಕಾಮದೇವಶ್ಚ ವೈಶ್ವಾನರೋ ಧನೇಶ್ವರಃ ॥ ೭೨ ॥

ಋಷಯೋ ಮುನಯಶ್ಚೈವ ಮನವೋ ವಿಘ್ನನಾಶಕಾಃ ।
ಮಹೇಂದ್ರೋ ವರುಣಶ್ಚೈವ ಜಗತ್ಪ್ರಾಣೋ ಹುತಾಶನಃ ॥ ೭೩ ॥

ಸಮಾಯಯೂ ರುದಂತಸ್ತೇ ಪದ್ಮಾಯಾಃ ಪುರತಃ ಪುರಃ ।
ತುಷ್ಟುವುಶ್ಚ ಮಹಾಲಕ್ಷ್ಮೀಂ ಮೂಲಪ್ರಕೃತಿಮೀಶ್ವರೀಂ ॥ ೭೪ ॥

---

೭೦. ಭಕ್ತನಿಗೆ ಅವನ ಇಷ್ಟಾರ್ಥವನ್ನು ಅನುಗ್ರಹಿಸಿ, ವೈಕುಂಠವಾಸಿಯಾದ ಶ್ರೀಮನ್ನಾರಾಯಣನ ಮಂದಿರವನ್ನು ಪ್ರವೇಶಿಸಲು ಹೊರಟು ದ್ವಾರಪಾಲಕನಿಂದ ತಡೆಯಲ್ಪಟ್ಟವಳಾಗಿ ದರ್ಪಭಂಗವನ್ನು ಹೊಂದಿದಳು.

೭೧. ಅಭಿಮಾನವತಿಯಾದ ಆ ಮಹಾಸತಿಯು ತನಗುಂಟಾದ ತಿರಸ್ಕಾರದಿಂದ ಲಜ್ಜಿತಳಾಗಿ ಶ್ರೀಹರಿಯ ಪಾದಪದ್ಮವನ್ನು ಸ್ಮರಿಸಿಕೊಳ್ಳುತ್ತಾ ದೇಹತ್ಯಾಗ ಮಾಡಲನುವಾದಳು.

೭೨–೭೪. ಆಗ ಬ್ರಹ್ಮ, ಮಹೇಶ್ವರ, ವಿಷ್ಣು, ಧರ್ಮ, ಭಾಸ್ಕರ, ಚಂದ್ರ, ಕಾಮದೇವ, ಅಗ್ನಿ, ಕುಬೇರ, ಮುಂತಾದ ದೇವತೆಗಳೂ, ಋಷಿಮುನಿಗಳೂ, ವಿಘ್ನನಾಶಕರಾದ ಮನುಗಳೂ, ಮಹೇಂದ್ರ ವರುಣರೂ, ವಾಯುದೇವನೂ ಹುತಾಶನನೂ ವ್ಯಥೆಗೊಂಡವರಾಗಿ ಅಲ್ಲಿಗೆ ಬಂದು ಲಕ್ಷ್ಮೀದೇವಿಯ ಎದುರಿನಲ್ಲಿ ನಿಂತು ಮೂಲಪ್ರಕೃತಿ ರೂಪಿಣಿಯಾದ ಆ ಮಹಾಲಕ್ಷ್ಮಿಯನ್ನು ಸ್ತುತಿಸಲಾರಂಭಿಸಿದರು.

|| ದೇವಾ ಊಚುಃ ||

ಕ್ಷಮಸ್ವ ಭಗವತ್ಯಂಬ ಕ್ಷಮಾಶೀಲೇ ಪರಾತ್ಪರೇ ।
ಶುದ್ಧಸತ್ತ್ವಸ್ವರೂಪೇ ಚ ಕೋಪಾದಿಪರಿವರ್ಜಿತೇ || ೭೫ ||

ಉಪಮೇ ಸರ್ವಸಾಧ್ವೀನಾಂ ದೇವೀನಾಂ ದೇವಪೂಜಿತೇ ।
ತ್ವಯಾ ವಿನಾ ಜಗತ್ಸರ್ವಂ ಮೃತತುಲ್ಯಂ ಚ ನಿಷ್ಫಲಂ || ೭೬ ||

ಸರ್ವಸಂಪತ್ಸ್ವರೂಪಾ ತ್ವಂ ಸರ್ವೇಷಾಂ ಸರ್ವರೂಪಿಣೀ ।
ರಾಸೇಶ್ವರ್ಯಧಿದೇವೀ ತ್ವಂ ತ್ವತ್ಕಲಾಃ ಸರ್ವಯೋಷಿತಃ || ೭೭ ||

ಕೈಲಾಸೇ ಪಾರ್ವತೀ ತ್ವಂ ಚ ಕ್ಷೀರೋದೇ ಸಿಂಧುಕನ್ಯಕಾ ।
ಸ್ವರ್ಗೇ ಚ ಸ್ವರ್ಗಲಕ್ಷ್ಮೀಸ್ತ್ವಂ ಮರ್ತ್ಯಲಕ್ಷ್ಮೀಶ್ಚ ಭೂತಲೇ || ೭೮ ||

---

೭೫. ದೇವತೆಗಳು ;—ಕ್ಷಮಾಶೀಲಳೂ, ಪರಾತ್ಪರಳೂ ಆದ ಎಲೌ ಜಗದಂಬೆಯೇ ನಮ್ಮ ತಪ್ಪನ್ನು ಕ್ಷಮಿಸು. ನೀನು ಶುದ್ಧ ಸತ್ವಸ್ವರೂಪಳೂ, ಕಾಮಕ್ರೋಧ ವಿವರ್ಜಿತಳೂ ಆಗಿರುವೆ.

೭೬. ಪತಿವ್ರತಾಶಿರೋಮಣಿಯರಿಗೆಲ್ಲ ಉಪಮಾರೂಪದಲ್ಲಿರುವ ನೀನು ಎಲ್ಲ ದೇವಿಯರಿಂದಲೂ, ದೇವತೆಗಳಿಂದಲೂ ಪೂಜ್ಯಳಾಗಿರುವೆ. ನೀನಿಲ್ಲದ ಜಗತ್ತು ಮೃತಸದೃಶವಾಗಿ ನಿಷ್ಫಲವಾಗಿರುವುದು.

೭೭. ಸರ್ವಸಂಪತ್ಸ್ವರೂಪಳೂ, ಸಕಲ ಸ್ವರೂಪಿಣಿಯೂ ಆದ ನೀನು ಶ್ರೀಕೃಷ್ಣಪರಮಾತ್ಮನ ರಾಸೇಶ್ವರಿಯೂ, ಅಧಿದೇವತೆಯೂ ಆಗಿರುವೆ. ಸಕಲ ಸ್ತ್ರೀಯರೂ ನಿನ್ನ ಕಲೆಯಿಂದ ಜನಿಸಿದವರಾಗಿರುವರು.

೭೮. ಕೈಲಾಸದಲ್ಲಿ ಪಾರ್ವತೀರೂಪದಿಂದಲೂ, ಕ್ಷೀರಸಮುದ್ರದಲ್ಲಿ ಸಿಂಧು ಕನ್ಯೆಯ ರೂಪದಿಂದಲೂ, ಸ್ವರ್ಗದಲ್ಲಿ ಸ್ವರ್ಗಲಕ್ಷ್ಮಿಯ ರೂಪದಿಂದಲೂ ಇರುವ ನೀನು ಭೂತಲದಲ್ಲಿ ಮರ್ತ್ಯಲಕ್ಷ್ಮಿ ಎನಿಸುವೆ.

ವೈಕುಂಠೇ ಚ ಮಹಾಲಕ್ಷ್ಮೀರ್ದೇವದೇವೀ ಸರಸ್ವತೀ ।
ಗಂಗಾ ಚ ತುಲಸೀ ತ್ವಂ ಚ ಸಾವಿತ್ರೀ ಬ್ರಹ್ಮಲೋಕತಃ ॥ ೭೯ ॥

ಕೃಷ್ಣಪ್ರಾಣಾಧಿದೇವೀ ತ್ವಂ ಗೋಲೋಕೇ ರಾಧಿಕಾ ಸ್ವಯಂ ।
ರಾಸೇ ರಾಸೇಶ್ವರೀ ತ್ವಂ ಚ ವೃಂದಾ ವೃಂದಾವನೇ ವನೇ ॥ ೮೦ ॥

ಕೃಷ್ಣಪ್ರಿಯಾ ತ್ವಂ ಭಾಂಡೀರೇ ಚಂದ್ರಾ ಚಂದನಕಾನನೇ ।
ವಿರಜಾ ಚಂಪಕವನೇ ಶತಶೃಂಗೇ ಚ ಸುಂದರೀ ॥ ೮೧ ॥

ಪದ್ಮಾವತೀ ಪದ್ಮವನೇ ಮಾಲತೀ ಮಾಲತೀವನೇ ।
ಕುಂದದಂತೀ ಕುಂದವನೇ ಸುಶೀಲಾ ಕೇತಕೀವನೇ ॥ ೮೨ ॥

ಕದಂಬಮಾಲಾ ತ್ವಂ ದೇವೀ ಕದಂಬಕಾನನೇಽಪಿ ಚ ।
ರಾಜಲಕ್ಷ್ಮೀ ರಾಜಗೇಹೇ ಗೃಹಲಕ್ಷ್ಮೀರ್ಗೃಹೇ ಗೃಹೇ ॥ ೮೩ ॥

---

೭೯. ವೈಕುಂಠದಲ್ಲಿ ಮಹಾಲಕ್ಷ್ಮಿಯ ರೂಪದಿಂದಲೂ, ದೇವದೇವಿಯಾದ ಸರಸ್ವತಿಯ ರೂಪದಿಂದಲೂ ಇರುವ ನೀನು ಗಂಗೆ ಮತ್ತು ತುಲಸೀ ರೂಪದಿಂದಿರುವುದಲ್ಲದೆ ಬ್ರಹ್ಮಲೋಕದಲ್ಲಿ ಸಾವಿತ್ರಿ ಎನಿಸಿಕೊಂಡಿರುವೆ.

೮೦. ಗೋಲೋಕದಲ್ಲಿ ಶ್ರೀಕೃಷ್ಣನ ಪ್ರಾಣಾಧಿಕಪ್ರಿಯಳಾದ ರಾಧಿಕೆ ಎನಿಸಿಕೊಂಡಿರುವೆ. ರಾಸಮಂಡಲದಲ್ಲಿ ರಾಸೇಶ್ವರಿ ಎನಿಸುವ ನೀನೇ ವೃಂದಾವನದಲ್ಲಿ ವೃಂದೆ ಎನಿಸುವೆ.

೮೧. ಭಾಂಡೀರವನದಲ್ಲಿ ಕೃಷ್ಣಪ್ರಿಯಳೆನಿಸುವ ನೀನು, ಚಂದನವನದಲ್ಲಿ ಚಂದ್ರೆ ಎನಿಸುವೆ. ಚಂಪಕವನದಲ್ಲಿ ವಿರಜೆ ಎಂದೂ, ಶತಶೃಂಗ ಪರ್ವತದಲ್ಲಿ ಸುಂದರಿ ಎಂದೂ ಹೇಳಿಸಿಕೊಳ್ಳುವವಳೂ ನೀನೇ.

೮೨. ಪದ್ಮವನದಲ್ಲಿ ಪದ್ಮಾವತಿ ಎಂದೂ, ಮಾಲತೀವನದಲ್ಲಿ ಮಾಲತೀ ಎಂದೂ, ಕುಂದವನದಲ್ಲಿ ಕುಂದದಂತೀ ಎಂದೂ, ಕೇತಕೀವನದಲ್ಲಿ ಸುಶೀಲಾ ಎಂದೂ ನೀನು ಪ್ರಖ್ಯಾತಳಾಗಿರುವೆ.

೮೩. ಎಲೌ ದೇವಿಯೇ, ನೀನು ಕದಂಬಕಾನನದಲ್ಲಿ ಕದಂಬಮಾಲೆ ಎಂದು ವಿಖ್ಯಾತಳಾಗಿರುವೆ. ರಾಜಗೃಹದಲ್ಲಿ ರಾಜಲಕ್ಷ್ಮಿ ಎಂದೂ ಪ್ರತಿಗೃಹದಲ್ಲಿಯೂ ಗೃಹಲಕ್ಷ್ಮಿ ಎಂದೂ ನೀನು ಪ್ರಸಿದ್ಧಿ ಹೊಂದಿರುವೆ.

ಇತ್ಯುಕ್ತ್ವಾ ದೇವತಾಃ ಸರ್ವೇ ಮುನಯೋ ಮನವಸ್ತಥಾ ।
ರುರುದುರ್ನಮ್ರವದನಾಃ ಶುಷ್ಕಕಂಠೋಷ್ಠತಾಲುಕಾಃ ॥ ೮೪ ॥

ಇತಿ ಲಕ್ಷ್ಮೀಸ್ತವಂ ಪುಣ್ಯಂ ಸರ್ವದೇವೈಃ ಕೃತಂ ಶುಭಂ ।
ಯಃ ಪಠೇತ್ಪ್ರಾತರುತ್ಥಾಯ ಸ ವೈ ಸರ್ವಂ ಲಭೇದ್ಧ್ರುವಂ ॥ ೮೫ ॥

ಅಭಾರ್ಯೋ ಲಭತೇ ಭಾರ್ಯಾಂ ವಿನೀತಾಂ ಚ ಸುತಾಂ ಸತೀಂ ।
ಸುಶೀಲಾಂ ಸುಂದರೀಂ ರಮ್ಯಾಮತಿಸುಪ್ರಿಯವಾದಿನೀಂ ॥ ೮೬ ॥

ಪುತ್ರಪೌತ್ರವತೀಂ ಶುದ್ಧಾಂ ಕುಲಜಾಂ ಕೋಮಲಾಂ ವರಾಂ ।
ಅಪುತ್ರೋ ಲಭತೇ ಪುತ್ರಂ ವೈಷ್ಣವಂ ಚಿರಜೀವಿನಂ ॥ ೮೭ ॥

ಪರಮೈಶ್ವರ್ಯಯುಕ್ತಂ ಚ ವಿದ್ಯಾವಂತಂ ಯಶಸ್ವಿನಂ ।
ಭ್ರಷ್ಟರಾಜ್ಯೋ ಲಭೇದ್ರಾಜ್ಯಂ ಭ್ರಷ್ಟಶ್ರೀರ್ಲಭತೇ ಶ್ರಿಯಂ ॥ ೮೮ ॥

---

೮೪. ಈ ರೀತಿಯಾಗಿ ಆ ದೇವತೆಗಳು, ಮುನಿಗಳು ಮತ್ತು ಮನುಗಳೆಲ್ಲರೂ ಸ್ತುತಿಸಿ, ಒಣಗಿಹೋದ ಕಂಠತಾಲುಗಳುಳ್ಳವರಾಗಿ, ತಲೆಯನ್ನು ತಗ್ಗಿಸಿಕೊಂಡು ಅಳುತ್ತಿದ್ದರು.

೮೫. ಇಂತು ಎಲ್ಲದೇವತೆಗಳಿಂದಲೂ ಮಾಡಲ್ಪಟ್ಟ ಶುಭಕರವಾದ ಮಹಾಲಕ್ಷ್ಮಿಯ ಸ್ತೋತ್ರವನ್ನು ಪ್ರಾತಃಕಾಲದಲ್ಲಿ ಎದ್ದು ಪಠಿಸುವವರು ಅವರ ಇಷ್ಟಾರ್ಥವನ್ನು ಹೊಂದುವುದರಲ್ಲಿ ಸಂಶಯವಿಲ್ಲ.

೮೬. ಪತ್ನೀರಹಿತನು ವಿನೀತೆಯೂ, ಪತಿವ್ರತೆಯೂ, ಸುಶೀಲೆಯೂ, ಸುಂದರಿಯೂ, ಪ್ರಿಯವಾದಿನಿಯೂ ಆದ ಧರ್ಮಪತ್ನಿಯನ್ನೂ, ಪುತ್ರೀರಹಿತನು ಯೋಗ್ಯಳಾದ ಪುತ್ರಿಯನ್ನೂ ಪಡೆಯುವನು.

೮೭. ಸತ್ಕುಲಪ್ರಸೂತಳೂ, ಕೋಮಲಾಂಗಿಯೂ, ಸುಂದರಿಯೂ ಆದ ಅವನ ಪತ್ನಿಯು ಪುತ್ರಪೌತ್ರರನ್ನು ಪಡೆಯುವಳು. ಪುತ್ರರಿಲ್ಲದವನು, ವಿಷ್ಣುಭಕ್ತನೂ, ಚಿರಂಜೀವಿಯೂ ಆದ ಸತ್ಪುತ್ರನನ್ನು ಪಡೆಯುವನು.

೮೮. ಆ ಪುತ್ರನು ಪರಮೈಶ್ವರ್ಯಸಂಪನ್ನನೂ, ವಿದ್ಯಾವಂತನೂ, ಯಶಸ್ವಿಯೂ ಆಗುವನು. ರಾಜ್ಯಭ್ರಷ್ಟನು ರಾಜ್ಯವನ್ನೂ, ಸಂಪದ್ಭ್ರಷ್ಟನು ದಿವ್ಯಸಂಪತ್ತನ್ನೂ ಪಡೆಯುವುದರಲ್ಲಿ ಸಂದೇಹವಿಲ್ಲ.

ಹತಬಂಧುರ್ಲಭೇದ್ಬಂಧುಂ ಧನಭ್ರಷ್ಟೋ ಧನಂ ಲಭೇತ್ ।
ಕೀರ್ತಿಹೀನೋ ಲಭೇತ್ಕೀರ್ತಿಂ ಪ್ರತಿಷ್ಠಾಂ ಚ ಲಭೇದ್ಧ್ರುವಂ ॥ ೮೯ ॥

ಸರ್ವಮಂಗಳದಂ ಸ್ತೋತ್ರಂ ಶೋಕಸಂತಾಪನಾಶನಂ ।
ಹರ್ಷಾನಂದಕರಂ ಶಶ್ವದ್ಧರ್ಮಮೋಕ್ಷಸುಹೃತ್ಪ್ರದಂ ॥ ೯೦ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ ಉತ್ತರಾರ್ಧೇ ನಾರಾಯಣ ನಾರದಸಂವಾದೇ ಭಗವದ್ಗುಣ-ವರ್ಣನೇ ಲಕ್ಷ್ಮೀಸ್ತೋತ್ರಕಥನಂ ನಾಮ ಷಟ್‌ಪಂಚಾಶತ್ತಮೋಽಧ್ಯಾಯಃ

---

೮೯. ಬಂಧುವಿಯೋಗದಿಂದ ನರಳುವವನು ಬಂಧುವನ್ನೂ, ಧನಭ್ರಷ್ಟನು ಧನವನ್ನೂ ಪಡೆಯುವನು. ಕೀರ್ತಿರಹಿತನು ಸತ್ಕೀರ್ತಿಯನ್ನೂ, ಸುಪ್ರತಿಷ್ಠೆಯನ್ನೂ ಹೊಂದುವುದರಲ್ಲಿ ಸಂಶಯವಿಲ್ಲ.

೯೦. ಸರ್ವಮಂಗಳಕರವಾದ ಈ ಸ್ತೋತ್ರವು ಶೋಕಸಂತಾಪಗಳನ್ನು ಪರಿಹರಿಸುವುದಲ್ಲದೆ, ಹರ್ಷಾನಂದಗಳನ್ನೂ, ಧರ್ಮಮೋಕ್ಷಗಳನ್ನೂ, ಸನ್ಮಿತ್ರರನ್ನೂ ಕೊಡುವುದರಲ್ಲಿ ಸಂದೇಹವಿಲ್ಲ.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದ ಉತ್ತರಾರ್ಧದಲ್ಲಿ ನಾರಾಯಣನಾರದ ಸಂವಾದದಲ್ಲಿ ಭಗವದ್ಗುಣವರ್ಣನಾ ಸಂದರ್ಭದಲ್ಲಿ ಲಕ್ಷ್ಮೀಸ್ತೋತ್ರವನ್ನು ನಿರೂಪಿಸುವ ಐವತ್ತಾರನೆಯ ಅಧ್ಯಾಯವು ಮುಗಿದುದು.

ಐವತ್ತಾರನೆಯ ಅಧ್ಯಾಯದ ಸಾರಾಂಶ.

ಶ್ರೀಕೃಷ್ಣಪರಮಾತ್ಮನು ಎಲ್ಲ ದೇವತೆಗಳ ದರ್ಪವನ್ನೂ ಯಾವರೀತಿ ಭಂಗಗೊಳಿಸಿದನೆಂಬುದನ್ನು ತಿಳಿಸಬೇಕೆಂದು ಬೇಡಿದ ನಾರದಮುನಿಗೆ, ಶ್ರೀಕೃಷ್ಣನ ಪ್ರಭಾವವನ್ನೂ ಅವನು ಮಾಡಿದ ಮಹಾವಿಷ್ಣು ಮುಂತಾದವರ ದರ್ಪಭಂಗವನ್ನೂ ನಾರಾಯಣಮಹರ್ಷಿಯು ತಿಳಿಸಿ, ದರ್ಪಭಂಗದಿಂದ ಅವಮಾನಗೊಂಡು ದೇಹತ್ಯಾಗ ಮಾಡಲುದ್ಯುಕ್ತಳಾಗಿದ್ದ ಮಹಾಲಕ್ಷ್ಮಿಯನ್ನು ಎಲ್ಲ ದೇವತೆಗಳೂ ಯಾವರೀತಿ ಸ್ತುತಿಸಿ ಪ್ರಸನ್ನಳಾಗಿ ಮಾಡಿಕೊಂಡರೆಂಬುದನ್ನು ವಿವರಿಸಿದನು. ಈ ಅಧ್ಯಾಯದಲ್ಲಿರುವ ಪುಣ್ಯಪ್ರದವಾದ ಮಹಾಲಕ್ಷ್ಮಿಯ ಸ್ತೋತ್ರವನ್ನು ಪ್ರಾತಃಕಾಲದಲ್ಲಿ ಭಕ್ತಿಪೂರ್ವಕವಾಗಿ ಪಠಿಸುವವರು ತಮ್ಮ ಇಷ್ಟಾರ್ಥವನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಸಪ್ತಪಂಚಾಶತ್ತಮೋಽಧ್ಯಾಯಃ ॥

॥ ನಾರಾಯಣ ಉವಾಚ ॥

ದೇವಾನಾಂ ಸ್ತವನಂ ಶ್ರುತ್ವಾ ತ್ಯಕ್ತ್ವಾ ಚ ರೋದನಂ ಸತೀ ।
ಉವಾಚ ಸುಪ್ರಸನ್ನಾ ತಾಂಸ್ತೇಷಾಂ ಸ್ತೋತ್ರೇಣ ನಾರದ ॥ ೧ ॥

॥ ಮಹಾಲಕ್ಷ್ಮೀರುವಾಚ ॥

ತ್ಯಜಾಮಿ ದೇಹಂ ನ ಕ್ರೋಧಾನ್ನ ವೈರಾಗ್ಯೇಣ ಸಾಂಪ್ರತಂ ।
ಇದಂ ಹೃದಿ ಸಮಾಲೋಚ್ಯ ದೇವಾಸ್ತಚ್ಛ್ರೂಯತಾಮಿತಿ ॥ ೨ ॥

ಐವತ್ತೇಳನೆಯ ಅಧ್ಯಾಯವು.

೧. ನಾರಾಯಣ:—ಎಲೈ ನಾರದನೇ, ಈ ರೀತಿಯಾದ ದೇವತೆಗಳ ಸ್ತೋತ್ರವನ್ನು ಕೇಳಿ ಸುಪ್ರಸನ್ನಳಾದ ದೇವಿಯು ದುಃಖವನ್ನು ತೊರೆದು ಆ ದೇವತೆಗಳನ್ನು ಕುರಿತು ಇತೆಂದಳು.

೨. ಮಹಾಲಕ್ಷ್ಮಿ:—ನಾನು ಕೋಪದಿಂದಾಗಲೀ, ವೈರಾಗ್ಯದಿಂದಾಗಲೀ ನನ್ನ ದೇಹವನ್ನು ತ್ಯಾಗಮಾಡುತ್ತಿಲ್ಲ. ಎಲೈ ದೇವತೆಗಳೇ, ಇದನ್ನು ಮನಸ್ಸಿನಲ್ಲಿಟ್ಟುಕೊಂಡು ನಾನು ಹೇಳುವುದನ್ನು ಸಾವಧಾನದಿಂದ ಕೇಳಿರಿ.

ಯಸ್ಮಿನ್ಮದೀಶೇ ಮಹತಿ ಸರ್ವಸಾಮ್ಯೇ ಚ ನಿರ್ಗುಣೇ ।
ಸರ್ವಾತ್ಮನಿ ಸದಾನಂದೇ ಸಮತಾ ತೃಣಶೈಲಯೋಃ ॥ ೩ ॥

ಭ್ರೂಭಂಗಲೀಲಯಾ ಲಕ್ಷ್ಮೀಲಕ್ಷಂ ಸ್ರಷ್ಟುಮಲಂ ಚ ಯಃ ।
ಭೃತ್ಯೇ ಸ್ತ್ರಿಯಾಂ ಯತ್ಸಮತಾ ಕಿಂ ಕಾರ್ಯಂ ತಸ್ಯ ಸೇವಯಾ ॥ ೪ ॥

ತತ್ಪತ್ನೀನಾಂ ಪ್ರಧಾನಾಽಹಂ ನಿರಸ್ತಾ ದ್ವಾರಿಣಾಽಧುನಾ ।
ತದ್ಭೃತ್ಯಭೃತ್ಯಭೃತ್ಯೇನ ಪರಿಪೂರ್ಣೇನ ನೇಪ್ಸಿತಾ ॥ ೫ ॥

ತ್ಯಕ್ಷ್ಯಾಮಿ ಜೀವನಮಹಮಸೌಭಾಗ್ಯಾ ಚ ಸ್ವಾಮಿನಿ ।
ವಹ್ನೌ ಚ ಕಾಮನಾಂ ಕೃತ್ವಾ ಯಥಾ ಭದ್ರಂ ಭವೇತ್ಪರಾ ॥ ೬ ॥

ಯಾ ಸ್ತ್ರೀ ಭರ್ತುರಸೌಭಾಗ್ಯಾ ಸಾಽಸೌಭಾಗ್ಯಾ ಚ ಸರ್ವತಃ ।
ಶಯನೇ ಭೋಜನೇ ತಸ್ಯಾ ನ ಸುಖಂ ಜೀವನಂ ವೃಥಾ ॥ ೭ ॥

---

೩. ಮಹಾತ್ಮನೂ, ಸರ್ವಸಮಬುದ್ಧಿಯುಳ್ಳವನೂ, ನಿರ್ಗುಣನೂ, ಸರ್ವಾತ್ಮನೂ ಸದಾನಂದನೂ ಆದ ಯಾವ ನನ್ನ ಪತಿದೇವನಿಗೆ ತೃಣಶೈಲಾದಿ ಸಕಲ ವಸ್ತುಗಳಲ್ಲಿಯೂ ಸಮತಾಭಾವನೆಯಿದೆ.

೪. ಆ ಮಹಾತ್ಮನು ಹುಬ್ಬುಕುಣಿಸುವಷ್ಟು ಲೀಲಾಮಾತ್ರದಿಂದಲೇ ಲಕ್ಷಾಂತರ ಲಕ್ಷ್ಮಿಯರನ್ನು ಸೃಜಿಸಬಲ್ಲನು. ಯಾರಿಗೆ ತನ್ನ ಭೃತ್ಯರಲ್ಲಿಯೂ ಹೆಂಡತಿಯಲ್ಲಿಯೂ ಸಮಾನವಾದ ಬುದ್ಧಿಯುಂಟೋ ಅಂಥವನ ಸೇವೆಯಿಂದೇನು ಪ್ರಯೋಜನ ?

೫. ಅವನ ಪತ್ನಿಯರಲ್ಲೆಲ್ಲಾ ಪ್ರಧಾನಳಾದ ನಾನು ಅವನ ಸೇವಕರಿಗೂ ಸೇವಕನಾದ ದ್ವಾರಪಾಲಕನೊಬ್ಬನಿಂದ ಬಾಗಿಲಿನಲ್ಲಿ ತಡೆಯಲ್ಪಟ್ಟೆನಲ್ಲ. ಪರಿಪೂರ್ಣನಾದ ನನ್ನ ಪತಿಯು ನನ್ನನ್ನು ಉದಾಸೀನಮಾಡಿದನಲ್ಲ.

೬. ಆದಕಾರಣ ಪತಿಯ ಪ್ರೇಮರೂಪದ ಸೌಭಾಗ್ಯವಿಲ್ಲದ ನಾನು ಮುಂದಾದರೂ ಪತಿಸೌಭಾಗ್ಯವು ದೊರೆಯಲೆಂದು ಸಂಕಲ್ಪಿಸಿ, ಈಗ ಅಗ್ನಿಯಲ್ಲಿ ನನ್ನ ದೇಹವನ್ನು ತ್ಯಜಿಸುವೆನು.

೭. ಯಾವ ಹೆಂಗಸು ಪತಿಯಪ್ರೇಮಕ್ಕೆ ಪಾತ್ರಳಾಗಿರುವುದಿಲ್ಲವೋ ಅವಳು ಎಲ್ಲೆಡೆಯಲ್ಲೂ ಅಸೌಭಾಗ್ಯಳೆನಿಸುವಳು. ಅವಳಿಗೆ ಶಯನದಲ್ಲಾಗಲೀ ಭೋಜನದಲ್ಲಾಗಲೀ ಸುಖವಿಲ್ಲದುದರಿಂದ ಅವಳ ಜೀವನವು ವ್ಯರ್ಥವಾದುದು.

ಯಸ್ಯಾ ನಾಸ್ತಿ ಪ್ರಿಯಪ್ರೇಮ ತಸ್ಯಾ ಜನ್ಮ ನಿರರ್ಥಕಂ ।
ತತ್ಕಿಂ ಪುತ್ರೇ ಧನೇ ರೂಪೇ ಸಂಪತ್ತೌ ಯೌವನೇಽಥವಾ ॥ ೮ ॥

ಯದ್ಭಕ್ತಿರ್ನಾಸ್ತಿ ಕಾಂತೇ ಚ ಸರ್ವಪ್ರಿಯತಮೋ ಪರೇ ।
ಸಾಽಶುಚಿರ್ಧರ್ಮಹೀನಾ ಚ ಸರ್ವಕರ್ಮವಿವರ್ಜಿತಾ ॥ ೯ ॥

ಪತಿರ್ಬಂಧುರ್ಗತಿರ್ಭರ್ತಾ ದೈವತಂ ಗುರುರೇವ ಚ ।
ಸರ್ವಸ್ಮಾಚ್ಚ ಪರಃ ಸ್ವಾಮಿ ನ ಗುರುಃ ಸ್ವಾಮಿನಃ ಪರಃ ॥ ೧೦ ॥

ಪಿತಾ ಮಾತಾ ಸುತೋ ಭ್ರಾತಾ ಕ್ಲಿಷ್ವಾ ದಾತುಮಿದಂ ಧನಂ ।
ಸರ್ವಸ್ವದಾತಾ ಸ್ವಾಮೀ ಚ ಮೂಢಾನಾಂ ಯೋಷಿತಾಂ ಸುರಾಃ ॥ ೧೧ ॥

ಕಾಚಿದೇವ ಹಿ ಜಾನಾತಿ ಮಹಾಸಾಧ್ವೀ ಚ ಸ್ವಾಮಿನಂ ।
ಅತಿಸದ್ವಂಶಜಾತಾ ಚ ಸುಶೀಲಾ ಕುಲಪಾಲಿಕಾ ॥ ೧೨ ॥

---

೮. ಪತಿಯ ಪ್ರೇಮಕ್ಕೆ ಪಾತ್ರಳಾಗದ ಹೆಂಗಸಿನ ಜನ್ಮವು ನಿರರ್ಥಕವಾದುದು. ಅಂಥ ಹೆಂಗಸಿಗೆ ಪುತ್ರನಿಂದಾಗಲೀ, ಧನದಿಂದಾಗಲೀ, ರೂಪದಿಂದಾಗಲೀ ಯೌವನಸಂಪತ್ತಿನಿಂದಾಗಲೀ ಪ್ರಯೋಜನವೇನು?

೯. ಬಂಧುಗಳಲ್ಲೆಲ್ಲ ಪ್ರಿಯತಮನಾದ ಪತಿದೇವನಲ್ಲಿ ಯಾವ ಹೆಂಗಸಿಗೆ ಭಕ್ತಿಯಿಲ್ಲವೋ ಅವಳು ಅಶುಚಿಯೂ, ಧರ್ಮಹೀನಳೂ ಆಗುವುದಲ್ಲದೆ ಸಕಲ ಸತ್ಕರ್ಮಗಳಿಗೂ ಅನರ್ಹಳಾಗುವಳು.

೧೦. ಹೆಂಗಸಿಗೆ ಪತಿಯೇ ಬಂಧು. ಪತಿಯೇದಿಕ್ಕು. ಪತಿಗಿಂತ ಮೇಲಾದ ರಕ್ಷಕನಾಗಲೀ, ದೇವತೆಯಾಗಲೀ ಗುರುವಾಗಲೀ ಮತ್ತಾರೂ ಇಲ್ಲ. ಪತಿಯು ಎಲ್ಲರಿಗಿಂತಲೂ ಮೇಲಾದವನು. ಅವನಿಗಿಂತ ಮೇಲಾದ ಗುರುವೊಬ್ಬನಿಲ್ಲ.

೧೧. ಪತಿ ಸೌಭಾಗ್ಯರೂಪದ ಧನವನ್ನು ತಂದೆಯಾಗಲೀ, ತಾಯಿಯಾಗಲೀ, ಮಗನಾಗಲೀ, ಸಹೋದರನಾಗಲೀ, ಕೊಡಲಾರರು. ಎಲೈ ದೇವತೆಗಳೇ, ಮೂಢರಾದ ಸ್ತ್ರೀಯರಿಗೆ ಸ್ವಾಮಿಯಾದವನು ಸರ್ವಸ್ವವನ್ನೂ ಕೊಡಬಲ್ಲನು.

೧೨. ಅತ್ಯುತ್ತಮವಾದ ವಂಶದಲ್ಲಿ ಹುಟ್ಟಿದವಳೂ, ಸದಾಚಾರಸಂಪನ್ನಳೂ ಕುಲಮರ್ಯಾದೆಯನ್ನು ಬಲ್ಲವಳೂ ಆದ ಮಹಾಪತಿವ್ರತೆಯೊಬ್ಬಳು ಮಾತ್ರ ಪತಿಯ ಯೋಗ್ಯತೆಯನ್ನು ತಿಳಿಯಬಲ್ಲಳು.

ಅಸದ್ವಂಶಪ್ರಸೂತಾ ಯಾ ದುಃಶೀಲಾ ಧರ್ಮವರ್ಜಿತಾ ।
ಮುಖದುಷ್ಟಾ ಯೋನಿದುಷ್ಟಾ ಪತಿಂ ನಿಂದಂತಿ ಕೋಪತಃ　　॥ ೧೩ ॥

ಯಾ ಸ್ತ್ರೀ ಸರ್ವಪರಂ ದ್ವೇಷ್ಟಿ ಪತಿಂ ವಿಷ್ಣುಸಮಂ ಗುರುಂ ।
ಕುಂಭೀಪಾಕೇ ಪಚತಿ ಸಾ ಯಾವದಿಂದ್ರಾಶ್ಚತುರ್ದಶ　　॥ ೧೪ ॥

ವ್ರತಂ ಚಾನಶನಂ ದಾನಂ ಸತ್ಯಂ ಪುಣ್ಯಂ ತಪಶ್ಚಿರಂ ।
ಪತಿಭಕ್ತಿವಿಹೀನಾಯಾ ಭಸ್ಮೀಭೂತಂ ನಿರರ್ಥಕಂ　　॥ ೧೫ ॥

ಅತಃ ಕಿಂಚಿನ್ನ ವಕ್ಷ್ಯಾಮಿ ನಿಷ್ಠುರಂ ಪತಿಮೀಶ್ವರಂ ।
ಭೃತ್ಯಾಪರಾಧೈರ್ದೇವಸ್ಯ ಪ್ರಾಣಾಂಸ್ತ್ಯಕ್ಷ್ಯಾಮಿ ನಿಶ್ಚಿತಂ　　॥ ೧೬ ॥

ಪತಿದೋಷೇ ಮಹಾಸಾಧ್ವೀ ಪತಿಂ ಚಾನಿಷ್ಠುರಂ ವದೇತ್ ।
ಯದಿ ಸೋಢುಮಶಕ್ತಾ ಚ ಪ್ರಾಣಾಂಸ್ತ್ಯಜತಿ ಧರ್ಮತಃ　　॥ ೧೭ ॥

---

೧೩. ಅಸತ್ಕುಲಪ್ರಸೂತಳೂ, ದುಷ್ಟಸ್ವಭಾವವುಳ್ಳವಳೂ, ಧರ್ಮಾಚಾರ ರಹಿತಳೂ, ಕ್ರೂರನುಡಿಯಾಡುವವಳೂ, ಯೋನಿದುಷ್ಟಳೂ ಆದ ಹೆಂಗಸು ಕೋಪ ಶೀಲಳಾಗಿ ಪತಿಯನ್ನು ನಿಂದಿಸುವಳು.

೧೪. ಸರ್ವಶ್ರೇಷ್ಠನೂ, ವಿಷ್ಣುಸಮಾನನೂ, ಪರಮಗುರುವೂ ಆದ ಪತಿ ಯನ್ನು ಯಾವ ಹೆಂಗಸು ನಿಂದಿಸುವಳೋ ಅವಳು ಕುಂಭೀಪಾಕವೆಂಬ ನರಕದಲ್ಲಿ ಹದಿನಾಲ್ಕು ಇಂದ್ರರ ಜೀವಿತಪರ್ಯಂತ ನರಳುವಳು.

೧೫. ಪತಿಭಕ್ತಿರಹಿತಳಾದ ಹೆಂಗಸು ಮಾಡುವ ವ್ರತೋಪವಾಸಗಳೂ, ದಾನ, ಪುಣ್ಯ, ತಪಸ್ಸುಗಳೂ, ಸತ್ಯಪರಿಪಾಲನೆಯೂ ಭಸ್ಮೀಭೂತವಾಗಿ ನಿರರ್ಥಕ ವೆನಿಸುವುದು.

೧೬. ಆದುದರಿಂದ ನಾನು ಸರ್ವೇಶ್ವರನಾದ ನನ್ನ ಪತಿಯ ವಿಷಯದಲ್ಲಿ ಯಾವ ನಿಷ್ಠುರದ ನುಡಿಯನ್ನೂ ಆಡುವವಳಲ್ಲ. ನನ್ನ ಸ್ವಾಮಿಯ ಸೇವಕನ ತಪ್ಪಿಗಾಗಿ ನಾನು ನಿಶ್ಚಯವಾಗಿಯೂ ಪ್ರಾಣಗಳನ್ನು ಬಿಡುವೆನು.

೧೭. ಮಹಾಪತಿವ್ರತೆಯಾದವಳು ಪತಿಯಲ್ಲಿ ದೋಷವಿದ್ದರೂ ಸಹ ಅವನ ವಿಷಯದಲ್ಲಿ ನಿಷ್ಠುರ ನುಡಿಯನ್ನಾಡಬಾರದು. ಅವನ ತಪ್ಪನ್ನು ಸಹಿಸಲಶಕ್ತ ಳಾದರೆ ಧರ್ಮಮಾರ್ಗದಲ್ಲಿ ಪ್ರಾಣತ್ಯಾಗ ಮಾಡಬೇಕು.

ಪತಿಸೇವಾ ವ್ರತಂ ಸ್ತ್ರೀಣಾಂ ಪತಿಸೇವಾ ಪರಂ ತಪಃ ।
ಪತಿಸೇವಾ ಪರೋ ಧರ್ಮಃ ಪತಿಸೇವಾ ಸುರಾರ್ಚನಂ ॥ ೧೮ ॥

ಪತಿಸೇವಾ ಪರಂ ಸತ್ಯಂ ದಾನತೀರ್ಥಾನುಕೀರ್ತನಂ ।
ಸರ್ವದೇವಮಯಃ ಸ್ವಾಮೀ ಸರ್ವತೀರ್ಥಮಯಃ ಶುಚಿಃ ॥ ೧೯ ॥

ಸರ್ವಪುಣ್ಯಸ್ವರೂಪಶ್ಚ ಪತಿರೂಪೀ ಜನಾರ್ದನಃ ।
ಯಾ ಸತೀ ಭರ್ತುರುಚ್ಛಿಷ್ಟಂ ಭುಂಕ್ತೇ ಪಾದೋದಕಂ ಸದಾ ॥ ೨೦ ॥

ತಸ್ಯಾ ದರ್ಶನಮುಪಸ್ಪರ್ಶಂ ನಿತ್ಯಂ ವಾಂಛಂತಿ ದೇವತಾಃ ।
ತತಃ ಸರ್ವಾಣಿ ತೀರ್ಥಾನಿ ಪುನಂತಿ ಪಾಪಿನೋ ಹ್ಯಘಾತ್ ॥ ೨೧ ॥

ಇತ್ಯುಕ್ತ್ವಾ ಚ ಮಹಾಸಾಧ್ವೀ ರುರೋದ ಚ ಮುಹುರ್ಮುಹುಃ ।
ಉವಾಚ ಬ್ರಹ್ಮಾ ಭೀತಶ್ಚ ಭಕ್ತಿನಮ್ರಾತ್ಮಕಂಧರಃ ॥ ೨೨ ॥

---

೧೮. ಹೆಂಗಸರಿಗೆ ಪತಿಸೇವೆಯೇ ಉತ್ತಮ ವ್ರತವು. ಅದೇ ಶ್ರೇಷ್ಠವಾದ ತಪಸ್ಸು. ಪತಿಸೇವೆಗಿಂತ ಮೇಲಾದ ಧರ್ಮವಾಗಲೀ, ಸುರಾರ್ಚನೆಯಾಗಲೀ ಯಾವುದೂ ಇಲ್ಲ.

೧೯. ಪತಿಸೇವೆಯೊಂದರಿಂದಲೇ ಸತ್ಯ, ದಾನ, ತೀರ್ಥಯಾತ್ರೆ ಮತ್ತು ವ್ರತಾಚರಣೆಗಳ ಫಲವನ್ನು ಪಡೆಯಬಹುದು. ಹೆಂಗಸಿಗೆ ಪತಿಯು ಸಕಲ ದೇವತಾ ಸ್ವರೂಪನು. ಸಕಲ ಪುಣ್ಯತೀರ್ಥಗಳಂತೆ ಪವಿತ್ರನು.

೨೦-೨೧. ಪತಿರೂಪಿಯಾದ ಜನಾರ್ದನನು ಸರ್ವ ಪುಣ್ಯಸ್ವರೂಪನು. ಯಾವ ಪತಿವ್ರತೆಯು ಪತಿಯ ಭುಕ್ತಶೇಷವನ್ನೂ, ಪಾದೋದಕವನ್ನೂ ಭಕ್ತಿಯಿಂದ ಭುಜಿಸುವಳೋ ಆಕೆಯ ದರ್ಶನವನ್ನೂ, ಸ್ಪರ್ಶವನ್ನೂ ಸಕಲ ದೇವತೆಗಳೂ ನಿತ್ಯವೂ ಬಯಸುವರು. ಆಕೆಯ ಸ್ಪರ್ಶದಿಂದ ಪವಿತ್ರವಾದ ಪುಣ್ಯತೀರ್ಥಗಳು ಪಾಪಿಗಳ ಪಾಪಗಳನ್ನು ಪರಿಹರಿಸುವುವು.

೨೨. ಮಹಾಪತಿವ್ರತೆಯಾದ ಆ ಲಕ್ಷ್ಮೀದೇವಿಯು ಈ ರೀತಿಯಾಗಿ ಹೇಳಿ ಕ್ಷಣಕ್ಷಣಕ್ಕೂ ಅಳುತ್ತಾ ನಿಂತಳು. ಆಗ ಭಯಗ್ರಸ್ತನಾದ ಬ್ರಹ್ಮನು ಭಕ್ತಿಯಿಂದ ತಲೆಯನ್ನು ತಗ್ಗಿಸಿಕೊಂಡವನಾಗಿ ಈ ರೀತಿ ಹೇಳಿದನು.

॥ ಬ್ರಹ್ಮೋವಾಚ ॥

ಭವಿಷ್ಯತಿ ನ ಭದ್ರಂ ಚ ಜಯಸ್ಯ ವಿಜಯಸ್ಯ ಚ ।
ತ್ವಯಾ ನ ಶಪ್ತೌ ತೌ ಮೂಢೌ ಪ್ರಿಯಾಪರಾಧಭೀತಯಾ ॥ ೨೩ ॥

ಸಾಪರಾಧಂ ಚ ಧರ್ಮಿಷ್ಠಃ ಕ್ಷಮಯಾ ನ ಶಪೇದ್ಯದಿ ।
ಸರ್ವನಾಶೋ ಭವೇತ್ತಸ್ಯ ನಿಶ್ಚಿತಂ ಮಾ ಚಿರಂ ಸತಿ ॥ ೨೪ ॥

ಯದಿ ಶಪ್ತುಂ ನ ಶಕ್ತಶ್ಚ ನ ದಂಡಂ ಕರ್ತುಮೀಶ್ವರಃ ।
ಸಾಪರಾಧೇ ಚ ಪುರುಷೇ ಧರ್ಮೋ ದಂಡಂ ಕರೋತಿ ಚ ॥ ೨೫ ॥

ಸರ್ವಂ ಕ್ಷಮಸ್ವ ಹೇ ಮಾತರ್ಗಚ್ಛ ಗಚ್ಛ ಪ್ರಿಯಾಂತಿಕಂ ।
ಮಾಂ ಚ ತ್ವತ್ಸ್ವಾಮಿನೋ ಭಕ್ತಂ ನಿಯೋಜ್ಯಂ ಸೃಷ್ಟಿಕರ್ಮಣಿ ॥ ೨೬ ॥

---

೨೩. ಬ್ರಹ್ಮ:—ಎಲೌ ಮಹಾಲಕ್ಷ್ಮಿಯೇ, ನೀನು ಪ್ರಿಯನಿಗೆ ಅಪರಾಧವಾಗುವುದೆಂಬ ಭಯದಿಂದ ಆ ಮೂಢರಾದ ಜಯವಿಜಯರನ್ನು ಶಪಿಸದಿದ್ದರೂ ಕೂಡ ಅವರಿಗೆ ಒಳ್ಳೆಯದಾಗುವುದಿಲ್ಲ.

೨೪. ಎಲೌ ಸತಿಯೇ, ಧರ್ಮಪರಾಯಣರು ಶಾಂತಚಿತ್ತರಾಗಿ ತಪ್ಪಿತಸ್ಥರಿಗೆ ಶಾಪ ಕೊಡದಿದ್ದರೂ ಸಹ ಆ ಅಪರಾಧಿಯು ಬಹುಬೇಗ ಸರ್ವನಾಶ ಹೊಂದುವುದರಲ್ಲಿ ಸಂಶಯವಿಲ್ಲ.

೨೫. ಧರ್ಮಿಷ್ಠರು ಅಪರಾಧಿಗಳನ್ನು ಶಪಿಸುವುದಕ್ಕಾಗಲೀ, ಶಿಕ್ಷಿಸುವುದಕ್ಕಾಗಲೀ ಅಶಕ್ತರಾದರೂ, ಧರ್ಮಪುರುಷನು ಆ ಅಪರಾಧಿಯನ್ನು ಶಿಕ್ಷಿಸದೆ ಬಿಡುವುದಿಲ್ಲ.

೨೬. ಮಾತೆಯೇ, ನೀನು ನಮ್ಮೆಲ್ಲರ ತಪ್ಪನ್ನೂ ಕ್ಷಮಿಸಿ, ಪ್ರಿಯನ ಸಮೀಪಕ್ಕೆ ಹೋಗು. ನಿನ್ನ ಪತಿಯ ಭಕ್ತನಾದ ನನ್ನನ್ನು ಸೃಷ್ಟಿಕಾರ್ಯದಲ್ಲಿ ನಿಯಮಿಸಿ ಹೋಗು.

ಇತ್ಯುಕ್ತ್ವಾ ತಾಂ ಪುರಸ್ಕೃತ್ಯ ಸಾರ್ಧಂ ದೇವೈರ್ಮುನೀಂದ್ರಕೈಃ ।
ಶೀಘ್ರಂ ಜಗಾಮ ವೈಕುಂಠಂ ವೈಕುಂಠಂ ಸ್ತೋತುಮೀಶ್ವರಃ ॥ ೨೭ ॥

ತತ್ರ ಗತ್ವಾ ಜಗನ್ನಾಥಂ ತುಷ್ಟಾವ ಕಮಲಾಸನಃ ।
ಚತುರ್ವಕ್ತ್ರೈಶ್ಚತುರ್ವಕ್ತ್ರಶ್ಚತುರ್ವೇದವಿದಾಂ ಗುರುಂ ॥ ೨೮ ॥

ಬ್ರಹ್ಮಣಃ ಸ್ತವನಂ ಶ್ರುತ್ವಾ ದೃಷ್ಟ್ವಾ ಲಕ್ಷ್ಮೀಂ ಪುರಃಸರಾಂ ।
ರುದತೀಂ ನಮ್ರವದನಾಮುವಾಚ ಕಮಲಾಪತಿಃ ॥ ೨೯ ॥

॥ ಶ್ರೀ ಭಗವಾನುವಾಚ ॥

ಸರ್ವಂ ಜಾನಾಮಿ ಸರ್ವಜ್ಞಃ ಸರ್ವಾತ್ಮಾ ಸರ್ವಪಾಲಕಃ ।
ಸರ್ವಶಾಸ್ತಾ ಚ ಸರ್ವಾದಿಕಾರಣಂ ಕಮಲೋದ್ಭವ ॥ ೩೦ ॥

---

೨೭. ಬ್ರಹ್ಮನು ಈ ರೀತಿಯಾಗಿ ಹೇಳಿ ಆ ಲಕ್ಷ್ಮೀದೇವಿಯನ್ನು ಮುಂದು ಮಾಡಿಕೊಂಡು ಆ ದೇವತೆಗಳೊಡನೆಯೂ, ಮುನಿಗಳೊಡನೆಯೂ ಶ್ರೀಮನ್ನಾರಾಯಣನನ್ನು ಸ್ತುತಿಸುವುದಕ್ಕಾಗಿ ವೈಕುಂಠಕ್ಕೆ ತೆರಳಿದನು.

೨೮. ಅಲ್ಲಿಗೆ ಹೋಗಿ ಕಮಲಾಸನನಾದ ಬ್ರಹ್ಮನು ತನ್ನ ನಾಲ್ಕು ಮುಖಗಳಿಂದ ಚತುರ್ವೇದವೇತ್ತೃಗಳಿಗೂ ಗುರುವಾದ ಶ್ರೀಮನ್ನಾರಾಯಣನನ್ನು ಭಕ್ತಿಯಿಂದ ಸ್ತುತಿಸಿದನು.

೨೯. ಬ್ರಹ್ಮನ ಸ್ತೋತ್ರವನ್ನು ಕೇಳಿ, ಮುಂದೆ ನಿಂತು ತಲೆಬಾಗಿಸಿಕೊಂಡು ಅಳುತ್ತಿರುವ ಲಕ್ಷ್ಮೀದೇವಿಯನ್ನೂ ಸಹ ನೋಡಿ ಕಮಲಾಪತಿಯು ಈ ಮುಂದಿನ ಮಾತುಗಳನ್ನು ಹೇಳಿದನು.

೩೦. ಶ್ರೀಭಗವಂತ :—ಎಲೈ ಕಮಲಸಂಭವನೇ. ಸರ್ವಜ್ಞನೂ, ಸರ್ವಾತ್ಮನೂ, ಸರ್ವಪಾಲಕನೂ, ಸರ್ವಶಿಕ್ಷಕನೂ, ಎಲ್ಲಕ್ಕೂ ಆದಿಕಾರಣನೂ ಆದ ನಾನು ಎಲ್ಲವನ್ನೂ ಬಲ್ಲೆನು.

ಭಕ್ತೇ ಕಲತ್ರೇ ಬಂಧೌ ಚ ಸರ್ವತ್ರ ಸಮತಾ ಮಮ ।
ವಿಶೇಷತೋಽತಿಮದ್ಭಕ್ತಃ ಕಲತ್ರಾತ್ಪರ ಏವ ಚ ॥ ೩೧ ॥

ಮದ್ಭಕ್ತೌ ತವ ಪುತ್ರೌ ಚ ದ್ವಾರಪಾಲೌ ದುರಂತಕೌ ।
ಕ್ಷಮ ಮಾಮಪರಾಧಂ ಚ ತಯೋಶ್ಚ ಭಕ್ತಿಪೂರ್ಣಯೋಃ ॥ ೩೨ ॥

ಮದ್ಭಕ್ತಿಪೂರ್ಣೋ ಬಲವಾನ್ದೈತ್ಯೇಭ್ಯೋ ನ ಬಿಭೇತಿ ಚ ।
ರಕ್ಷಿತೋ ಮಮ ಚಕ್ರೇಣ ಭಕ್ತಿಮಾಧ್ವೀಕದುರ್ಮದಃ ॥ ೩೩ ॥

ಇತ್ಯುಕ್ತ್ವಾ ಜಗತಾಂ ನಾಥೋ ಲಕ್ಷ್ಮೀಂ ಕೃತ್ವಾ ಸ್ವವಕ್ಷಸಿ ।
ಸಮಾನೀಯ ದ್ವಾರಪಾಲಂ ತಮುವಾಚೇದಮೇವ ಚ ॥ ೩೪ ॥

ಮಾ ಭೈರ್ವತ್ಸ ಸುಖಂ ತಿಷ್ಠ ಭಯಂ ಕಿಂ ತೇ ಮಯಿ ಸ್ಥಿತೇ ।
ಮದ್ಭಕ್ತಾನಾಂ ಚ ಕಃ ಶಾಸ್ತಾ ಗಚ್ಛ ವತ್ಸಾತ್ಮನಃ ಪದಂ ॥ ೩೫ ॥

---

೩೧. ನನಗೆ ಭಕ್ತನಲ್ಲಾಗಲೀ, ಹೆಂಡತಿಯಲ್ಲಾಗಲೀ, ಬಂಧುಗಳಲ್ಲಾಗಲೀ ಭೇದಭಾವವಿಲ್ಲ. ಅದರಲ್ಲಿಯೂ ನನ್ನ ಅನನ್ಯಭಕ್ತನು ನನ್ನ ಹೆಂಡತಿಗಿಂತಲೂ ಪ್ರೀತಿಪಾತ್ರನಾಗಿರುವನು.

೩೨. ನನ್ನ ಭಕ್ತರೂ, ನಿನ್ನ ಪುತ್ರರೂ ಆದ ಆ ದ್ವಾರಪಾಲಕರು ಸಾಮಾನ್ಯ ರೇನಲ್ಲ. ನನ್ನನ್ನೂ ಮತ್ತು ಭಕ್ತಿಪರಿಪೂರ್ಣರಾದ ಆ ದ್ವಾರಪಾಲಕರ ಅಪರಾಧ ವನ್ನೂ ಕ್ಷಮಿಸಿಬಿಡು.

೩೩. ನನ್ನ ಭಕ್ತಿಯಿಂದ ಪೂರ್ಣನಾಗಿ ಬಲಿಷ್ಠನಾದ ಭಕ್ತನು ದೈತ್ಯರಿಗೂ ಹೆದರುವುದಿಲ್ಲ. ಭಕ್ತಿಯೆಂಬ ಮಧುಪಾನಮಾಡಿ ದುರ್ಮದನಾದ ಆ ಭಕ್ತನು ಸರ್ವದಾ ನನ್ನ ಸುದರ್ಶನ ಚಕ್ರದಿಂದ ರಕ್ಷಿತನಾಗಿರುವನು.

೩೪. ಜಗದೊಡೆಯನಾದ ಶ್ರೀಮನ್ನಾರಾಯಣನು ಈ ರೀತಿಯಾಗಿ ಹೇಳಿ ಲಕ್ಷ್ಮೀದೇವಿಯನ್ನು ತನ್ನ ವಕ್ಷಃಸ್ಥಳದಲ್ಲಿ ಅಪ್ಪಿಕೊಂಡುದಲ್ಲದೆ ಆ ದ್ವಾರಪಾಲನನ್ನು ಕರೆಸಿ ಇಂತೆಂದನು.

೩೫. ಎಲೈ ವತ್ಸನೇ, ಹೆದರಬೇಡ. ನಾನಿರುವಾಗ ನಿನಗೇತರ ಭಯ? ನನ್ನ ಭಕ್ತರನ್ನು ದಂಡಿಸುವವರಾರೂ ಇಲ್ಲ. ಎಲೈ ಭಕ್ತನೇ, ನೀನು ನಿನ್ನ ಸ್ಥಾನಕ್ಕೆ ಹೋಗು.

ಇತ್ಯುಕ್ತ್ವಾ ಭಗವಾನ್ ತತ್ರ ವಿರರಾಮ ಮಹಾಮುನೇ ।
ಯಯುರ್ದೇವಾಶ್ಚ ಸ್ವಸ್ಥಾನಂ ಪ್ರಣಮ್ಯ ಜಗದೀಶ್ವರಂ ॥ ೩೬ ॥

ನಾರಾಯಣವಚಃ ಶ್ರುತ್ವಾ ದ್ವಾರಪಾಲ ಉವಾಚ ತಂ ।
ಪುಲಕಾಂಚಿತಸರ್ವಾಂಗೋ ಭಕ್ತಿನಮ್ರಾತ್ಮಕಂಧರಃ ॥ ೩೭ ॥

॥ ಜಯ ಉವಾಚ ॥

ನಾಹಂ ಬಿಭೇಮಿ ದೇವಾಂಶ್ಚ ಲಕ್ಷ್ಮೀಂ ಮುನಿಗಣಾಂಸ್ತಥಾ ।
ತ್ವದೀಯಚರಣಾಂಭೋಜಧ್ಯಾನೈಕತಾನ ಮಾನಸಃ ॥ ೩೮ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ನಾರಾಯಣನಾರದಸಂವಾದೇ ಉತ್ತರಾರ್ಧೇ
ವೈರಾಗ್ಯಮೋಚನಂ ನಾಮ
ಸಪ್ತಪಂಚಾಶತ್ತಮೋಽಧ್ಯಾಯಃ

---

೩೬. ಎಲೈ ಮಹಾಮುನಿಯೇ, ಭಗವಂತನಾದ ಶ್ರೀಮನ್ನಾರಾಯಣನು ಹೀಗೆ ಹೇಳಿ ಸುಮ್ಮನಾಗಲು, ದೇವತೆಗಳೆಲ್ಲರೂ ಜಗದೀಶ್ವರನಿಗೆ ವಂದಿಸಿ ತಮ್ಮ ತಮ್ಮ ಸ್ಥಳಕ್ಕೆ ತೆರಳಿದರು.

೩೭. ಶ್ರೀಮನ್ನಾರಾಯಣನ ಮಾತನ್ನು ಕೇಳಿ, ರೋಮಾಂಚಿತ ಶರೀರನಾದ ದ್ವಾರಪಾಲಕನು ಭಕ್ತಿಯಿಂದ ತನ್ನ ತಲೆಯನ್ನು ತಗ್ಗಿಸಿಕೊಂಡವನಾಗಿ ಈ ರೀತಿ ನುಡಿದನು.

೩೮. ಜಯ :—ನಿನ್ನ ಪಾದಕಮಲಗಳನ್ನು ಅನನ್ಯಭಕ್ತಿಯಿಂದ ಸರ್ವದಾ ಧ್ಯಾನಮಾಡುತ್ತಿರುವ ನಾನು ದೇವತೆಗಳಿಗಾಗಲೀ, ಲಕ್ಷ್ಮೀದೇವಿಗಾಗಲೀ ಈ ಮುನಿಗಣಕ್ಕಾಗಲಿ ಎಂದಿಗೂ ಹೆದರುವುದಿಲ್ಲ.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದ ಉತ್ತರಾರ್ಧದ
ನಾರಾಯಣ ನಾರದಸಂವಾದದಲ್ಲಿ ಮಹಾಲಕ್ಷ್ಮಿಯ ವೈರಾಗ್ಯಮೋಚನವೆಂಬ
ಐವತ್ತೇಳನೆಯ ಅಧ್ಯಾಯವು ಸಮಾಪ್ತವಾದುದು.

ಐವತ್ತೇಳನೆಯ ಅಧ್ಯಾಯದ ಸಾರಾಂಶ.

ಶ್ರೀಮನ್ನಾರಾಯಣನು, ತನ್ನ ಭಕ್ತನೂ, ದ್ವಾರಪಾಲಕನೂ ಆದ ಜಯನ ಮೂಲಕ, ತನಗೆ ಅವಮಾನಪಡಿಸಿದುದರಿಂದ ಪತಿಯ ಪ್ರೇಮಸೌಭಾಗ್ಯವನ್ನು ಪಡೆಯದಿರುವ ತನ್ನ ಜನ್ಮವು ನಿರರ್ಥಕವೆಂದೂ, ಆದಕಾರಣ ಅಗ್ನಿಪ್ರವೇಶ ಮಾಡುವೆನೆಂದೂ ಹೇಳಿದ ಮಹಾಲಕ್ಷ್ಮಿಗೆ ಬ್ರಹ್ಮಾದಿ ದೇವತೆಗಳು ಸಮಾಧಾನ ವಾಕ್ಯಗಳನ್ನು ಹೇಳಿ ಆಕೆಯನ್ನು ಮುಂದುಮಾಡಿಕೊಂಡು ವೈಕುಂಠಕ್ಕೆ ಹೋಗಿ ಶ್ರೀಮನ್ನಾರಾಯಣನನ್ನು ಸ್ತುತಿಸಲು ಆ ದೇವದೇವೋತ್ತಮನು ಪ್ರಸನ್ನನಾಗಿ ಲಕ್ಷ್ಮಿಯನ್ನು ಪರಿಗ್ರಹಿಸಿದುದಲ್ಲದೆ ತನ್ನ ಭಕ್ತನ ಅಪರಾಧವನ್ನೂ ಕ್ಷಮಿಸಿದನು.

ಈ ಅಧ್ಯಾಯದಲ್ಲಿ ಪತಿವ್ರತೆಯರ ಕರ್ತವ್ಯವೂ, ವಿಷ್ಣುಭಕ್ತರ ಮಾಹಾತ್ಮ್ಯವೂ ಸುಸ್ಪಷ್ಟವಾಗಿ ನಿರೂಪಿತವಾಗಿದೆ.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಅಷ್ಟಪಂಚಾಶತ್ತಮೋಽಧ್ಯಾಯಃ ॥

॥ ಶ್ರೀ ನಾರಾಯಣ ಉವಾಚ ॥

ಬಭೂವ ದರ್ಪಃ ಪೃಥ್ವ್ಯಾಶ್ಚ ಸರ್ವಾಧಾರಾಽಹಮೇವ ಚ ।
ಪೃಥುದ್ವಾರಾ ಚ ತದ್ದರ್ಪಂ ಜಘಾನ ಚೈವ ತತ್ಪ್ರಭುಃ ॥ ೧ ॥

ಬಭೂವ ದರ್ಪಃ ಸಾವಿತ್ರ್ಯಾ ವೇದಮಾತಾಽಹಮೇವ ಚ ।
ಕಾಲೇ ಚಕಾರ ತಸ್ಯಾಶ್ಚ ಸಪುತ್ರಾಯಾ ಅದರ್ಶನಂ ॥ ೨ ॥

ಬಭೂವ ದರ್ಪೋ ಗಂಗಾಯಾ ಅಹಂ ನಿರ್ವಾಣದೇತಿ ಚ ।
ಜಹ್ನುದ್ವಾರಾ ಚ ತದ್ದರ್ಪಂ ಜಹಾರ ಜಗತಾಂಪತಿಃ ॥ ೩ ॥

ಐವತ್ತೆಂಟನೆಯ ಅಧ್ಯಾಯವು.

೧. ಶ್ರೀನಾರಾಯಣ:—ಒಮ್ಮೆ ಪೃಥಿವೀದೇವಿಗೆ 'ನಾನೇ ಸರ್ವಾಧಾರಳೆಂ'ದು ದರ್ಪವುಂಟಾಯಿತು. ಆಗ ಪರಮಾತ್ಮನು ಪೃಥುಚಕ್ರವರ್ತಿಯ ಮೂಲಕ ಆಕೆಯ ದರ್ಪವನ್ನು ಭಂಗಪಡಿಸಿದನು.

೨, ಒಮ್ಮೆ ಸಾವಿತ್ರೀದೇವಿಗೆ 'ನಾನೇ ವೇದಮಾತೆ' ಎಂದು ಅಹಂಕಾರ ವುಂಟಾಯಿತು. ಪರಮಾತ್ಮನು ಆಕೆಯನ್ನು ಪುತ್ರರೊಡನೆ (ವೇದಗಳೊಡನೆ) ನೀರಿನಲ್ಲಿ ಮುಳುಗಿಸಿ ಆಕೆಯ ಗರ್ವಭಂಗಮಾಡಿದನು.

೩. 'ನಾನೇ ಮೋಕ್ಷವನ್ನು ಕೊಡುವವಳು' ಎಂದು ಗಂಗಾದೇವಿಗೆ ಒಮ್ಮೆ ಗರ್ವವುಂಟಾಯಿತು. ಜಗದೊಡೆಯನು ಜಹ್ನುಮಹರ್ಷಿಯ ಮೂಲಕ ಆಕೆಯ ಗರ್ವವನ್ನು ಭಂಗಪಡಿಸಿದನು.

ಜಹಾರ ಮನಸಾದರ್ಪಂ ದುರ್ಗಾದ್ವಾರಾ ಪುರಾ ಮುನೇ ।
ವಿರಜೋಽಪಗತಂ ಕೃಷ್ಣಂ ಭರ್ತ್ಸಯಾಮಾಸ ಕೋಪತಃ ॥ ೪ ॥

ಪ್ರವಿಶಂತಂ ರಾಸಗೃಹಂ ಗೋಪೀಭಿರ್ವಿನಿವಾರಿತಂ ।
ದೌವಾರಿಕಾಭಿರ್ವೇತ್ರೈಶ್ಚ ತಾಡಿತಂ ತಂ ಚ ದರ್ಪತಃ ॥ ೫ ॥

ಸುದಾಮ್ನಾ ನಿಜಭಕ್ತೇನ ರಾಧಾ ಶಪ್ತಾ ಬಭೂವ ಹ ।
ದೈವೇನ ಸಹಸಾ ಧ್ವಸ್ತಾ ಗೋಲೋಕಾದಾಗತಾ ಧರಾಂ ॥ ೬ ॥

ವೃಷಭಾನುಸ್ತ್ರಿಯಾಂ ಜಾತಾ ಕಲಾವತ್ಯಾಂ ಚ ನಾರದ ।
ಕೃಷ್ಣಸ್ತದನುರೋಧೇನ ಕಂಸಭೀತಿಚ್ಛಲೇನ ಚ ॥ ೭ ॥

ಸಮಾಗತೋ ನಂದಗೇಹಂ ತೇನಾಹಂ ನಂದನಂದನಃ ।
ಸುದಾಮ್ನಃ ಶಾಪವಿಚ್ಛೇದಪಾಲನಾರ್ಥಂ ಜಗತ್ಪತಿಃ ॥ ೮ ॥

೪-೫. ಎಲೈ ಮುನಿಯೇ, ಪೂರ್ವದಲ್ಲಿ ದುರ್ಗಾದೇವಿಯ ಮೂಲಕ ಮನಸಾದೇವಿಯ ದರ್ಪವನ್ನು ಪರಮಾತ್ಮನು ಭಂಗಪಡಿಸಿದನು. ಅದೇ ರೀತಿಯಲ್ಲಿ ಗೋಪಿಯರಿಂದ ತಡೆಯಲ್ಪಟ್ಟರೂ ರಾಸಮಂದಿರವನ್ನು ಪ್ರವೇಶಿಸುತ್ತಿದ್ದ ವೇತ್ರ (ಬೆತ್ತ) ಹಸ್ತರಾದ ದ್ವಾರಪಾಲಕಿಯರಿಂದ ಹೊಡೆಯಲ್ಪಟ್ಟ ದರ್ಪಗೊಂಡ ಕೃಷ್ಣನನ್ನು ವಿರಜೆಯು ಹೆದರಿಸಿ ದರ್ಪಭಂಗಪಡಿಸಿದಳು.

೬. ತನ್ನ ಭಕ್ತನಾದ ಸುದಾಮನಿಂದ ರಾಧೆಯು ಶಪ್ತಳಾಗಿ, ದುರ್ದೈವದಿಂದ ಹತಳಾಗಿ, ಗೋಲೋಕದಿಂದ ಭೂಲೋಕಕ್ಕೆ ಬರಬೇಕಾಯಿತು.

೭-೮. ಎಲೈ ನಾರದನೇ, ಆ ರಾಧೆಯು ವೃಷಭಾನುವಿನ ಪತ್ನಿಯಾದ ಕಲಾವತಿಯ ಉದರದಲ್ಲಿ ಜನಿಸಿದಳು ಆಗ ಕೃಷ್ಣನು ಅವಳನ್ನು ಅನುಸರಿಸಿಕೊಂಡು ಕಂಸನನ್ನು ಧ್ವಂಸಮಾಡುವ ನೆಪದಿಂದ ವಸುದೇವನ ಮಗನಾಗಿ ಹುಟ್ಟಿ ನಂದಗೋಕುಲಕ್ಕೆ ಬಂದು ನಂದನಂದನನೆನಿಸಿದನು. ಅಲ್ಲದೆ ಸುದಾಮನ ಶಾಪದಿಂದ ತನ್ನನ್ನು ಬಿಟ್ಟುಹೋದ ರಾಧೆಯನ್ನು ಪರಿಪಾಲಿಸಲೋಸುಗವೂ ಜಗದೊಡೆಯನು ಬಂದಂತಾಯಿತು.

ಪುನರ್ಜಗಾಮ ಮಥುರಾಮಿತ್ಯಾಹ ಕಮಲೋದ್ಭವಃ ।
ಅಸ್ಯಾಃ ಪರಮಭಿಪ್ರಾಯಂ ಕೋ ವಾ ಜಾನಾತಿ ನಾರದ ॥ ೯ ॥

ಕಥಂ ಜಾತಃ ಸಮಾಯಾತೋ ಮಥುರಾಯಾಶ್ಚ ಗೋಕುಲಂ ।
ಇತ್ಯೇವ ಕಥಿತಂ ಸರ್ವಮಪರಂ ಶ್ರೂಯತಾಮಿತಿ ॥ ೧೦ ॥

ಯಥಾ ಜಗಾಮ ಮಥುರಾಂ ನಂದಾತ್ಸ ನಂದನಂದನಃ ।
ಶೋಕಂ ನಂದೋ ಯಶೋದಾ ಚ ಯಥಾ ಸಂಪ್ರಾಪ ದೈವತಃ ॥ ೧೧ ॥

ಯಥಾ ಗೋಪಾಶ್ಚ ಗೋಪ್ಯಶ್ಚ ಗಾವೋ ವೃಂದಾವನೇ ವನೇ ।
ವನೇ ವನೇ ವಾ ವನ್ಯಾಸ್ತೇ ವನ್ಯಾ ಜಾನಂತಿ ಕಿಂಚನ ॥ ೧೨ ॥

ವನಂ ರಮ್ಯಂ ವನ್ಯಪದಮಪಿ ತ್ಯಕ್ತ್ವಾ ವನೇ ವನೇ ।
ಶ್ಮಶಾನೇ ವಾಽಶ್ಮಶಾನೇ ವಾ ಬಭ್ರಾಮ ಭಾಮಿನೀ ಮುನೇ ॥ ೧೩ ॥

---

೯. ಎಲೈ ನಾರದನೇ, ಶ್ರೀಕೃಷ್ಣನು ನಂದಗೋಕುಲದಿಂದ ಪುನಃ ಮಥುರೆಗೆ ಹೋದನೆಂದು ಬ್ರಹ್ಮನು ಹೇಳಿದನು. ಇದರ ಅಭಿಪ್ರಾಯವನ್ನು ಯಾರುತಾನೇ ತಿಳಿಯಬಲ್ಲರು.

೧೦. ಶ್ರೀಕೃಷ್ಣನು ಭೂಲೋಕದಲ್ಲಿ ಹೇಗೆ ಅವತರಿಸಿದನು? ಮಥುರೆಯಿಂದ ಗೋಕುಲಕ್ಕೆ ಹೇಗೆ ಬಂದನು? ಎಂಬ ವಿಷಯವನ್ನೆಲ್ಲ ಹೇಳಿದುದಾಯಿತು. ಈಗ ಮುಂದಿನ ಕಥೆಯನ್ನು ಕೇಳುವವನಾಗು

೧೧. ನಂದನಂದನನು ನಂದಗೋಪನನ್ನು ಬಿಟ್ಟು ಮಥುರೆಗೆ ಹೋದ ಕೂಡಲೆ ನಂದಗೋಪನೂ ಯಶೋದೆಯೂ ದುರದೃಷ್ಟಕ್ಕೊಳಗಾಗಿ ದುಃಖಿತರಾದರು.

೧೨. ಇತರ ಗೋಪರೂ, ಗೋಪಿಯರೂ ವೃಂದಾವನದಲ್ಲಿದ್ದ ಗೋವುಗಳೂ ಸಹ ದುಃಖಗೊಂಡುವಲ್ಲದೆ ಪ್ರತಿವನದಲ್ಲಿದ್ದ ಕಾಡುಮೃಗಗಳೂ ಸಹ ದುಃಖದಿಂದ ಏನೂ ಅರಿಯದಂತಾದವು.

೧೩. ಎಲೈ ಮುನಿಯೇ, ರಾಧಾದೇವಿಯು ರಮ್ಯವಾದ ವನೋಪವನಗಳನ್ನೆಲ್ಲ ಬಿಟ್ಟು ಶ್ರೀಕೃಷ್ಣನನ್ನು ಹುಡುಕಿಕೊಂಡು ಸ್ಮಶಾನಕಾಡುಗಳೆನ್ನದೆ ಅಲೆದಾಡಿದಳು.

ಗ್ರಾಮಂ ತ್ಯಕ್ತ್ವಾ ಚ ಬಭ್ರಾಮ ಚೇತನಾऽಚೇತನಾ ಕ್ಷಣಂ ।
ಕ್ಷಣೇನ ವರ್ಜಿತಾ ಸಾ ಚ ಪ್ರಾರ್ಥಯಂತೀ ಪ್ರತಿಕ್ಷಣಂ ॥ ೧೪ ॥

ಕ್ಷಣಂ ಕ್ಷಣಂ ಸಾ ಶ್ವಸಂತೀ ಚಿಂತನಂ ಕುರ್ವತೀ ಕ್ಷಣಂ ।
ಕ್ಷಣಂ ವಿಶಂತೀ ತಲ್ಪೇ ಚ ಕ್ಷಣಮುತ್ಥಾಯ ತಿಷ್ಠತಿ ॥ ೧೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣ ನಾರದಸಂವಾದೇ
ಅಷ್ಟಪಂಚಾಶತ್ತಮೋऽಧ್ಯಾಯಃ

---

೧೪. ಕ್ಷಣಕಾಲ ಚೇತನರಹಿತಳಾಗಿ ಬಿದ್ದಿರುವಳು. ಮತ್ತೊಂದು ಕ್ಷಣದಲ್ಲಿ ಚೇತನವನ್ನು ಹೊಂದಿ ಊರನ್ನು ಬಿಟ್ಟು ಕಾಡಿನಲ್ಲೆಲ್ಲ ಅಲೆಯುವಳು. ಹೀಗೆ ಪ್ರತಿಕ್ಷಣದಲ್ಲಿಯೂ ಶ್ರೀಕೃಷ್ಣನನ್ನು ಪ್ರಾರ್ಥಿಸಿಕೊಂಡು ಅಲೆದಾಡಿದಳು.

೧೫. ಕ್ಷಣಕಾಲ ನಿಟ್ಟುಸಿರು ಬಿಡುವಳು. ಮತ್ತೊಂದು ಕ್ಷಣದಲ್ಲಿ ಏನನ್ನೋ ಯೋಚಿಸುವಳು. ಒಂದುಕ್ಷಣ ಹಾಸಿಗೆಯಲ್ಲಿ ಮಲಗುವಳು. ಮರುಕ್ಷಣದಲ್ಲಿ ಎದ್ದು ಕುಳಿತುಕೊಳ್ಳುವಳು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದ
ಉತ್ತರಾರ್ಧದಲ್ಲಿ ನಾರದನಾರಾಯಣ ಸಂವಾದದಲ್ಲಿ
ಐವತ್ತೆಂಟನೆಯ ಅಧ್ಯಾಯವು ಮುಗಿದುದು.

ಐವತ್ತೆಂಟನೆಯ ಅಧ್ಯಾಯದ ಸಾರಾಂಶ.

ಈ ಅಧ್ಯಾಯದಲ್ಲಿ ಪೃಥಿವೀ, ಸಾವಿತ್ರಿ, ಗಂಗೆ, ಮನಸಾ, ಮತ್ತು ರಾಧಾ ದೇವಿಯರ ದರ್ಪಭಂಗವನ್ನು ಸಂಕ್ಷೇಪವಾಗಿ ನಿರೂಪಿಸಿ, ಶ್ರೀಕೃಷ್ಣನು ನಂದ ಗೋಕುಲದಿಂದ ಮಧುರೆಗೆ ಹೋದನಂತರ ಗೋಕುಲದಲ್ಲಿ ನಂದನೇ ಮೊದಲಾದ ಗೋಪರೂ, ಯಶೋದೆಯೇ ಮುಂತಾದ ಗೋಪಿಯರೂ ಕೃಷ್ಣನ ವಿರಹದಿಂದ ದುಃಖಿತರಾದುದನ್ನೂ, ರಾಧೆಯು ಶ್ರೀಕೃಷ್ಣನಿಗಾಗಿ ಪರಿತಪಿಸಿದುದನ್ನೂ ನಿರೂಪಿಸಿದ್ದಾರೆ.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ಏಕೋನಷಷ್ಟಿತಮೋಽಧ್ಯಾಯಃ ||

|| ಶ್ರೀನಾರಾಯಣ ಉವಾಚ ||

ಇತ್ಯೇವಂ ಕಥಿತಂ ಸರ್ವಂ ಸರ್ವೇಷಾಂ ದರ್ಪಭಂಜನಂ ।
ಇಂದ್ರಸ್ಯ ದರ್ಪಭಂಗಂ ಚ ವಿಸ್ತರೇಣ ನಿಶಾಮಯ || ೧ ||

ಇಂದ್ರೋ ದರ್ಪಾತ್ಸಭಾಯಾಂ ಚ ರತ್ನಸಿಂಹಾಸನಾದ್ವರಾತ್ ।
ನೋತ್ತಸ್ಥೌ ಸ್ವಗುರುಂ ದೃಷ್ಟ್ವಾ ಬ್ರಹ್ಮಿಷ್ಠಂ ಚ ಬೃಹಸ್ಪತಿಂ || ೨ ||

ಗುರುರ್ಜಗಾಮಾತಿರುಷ್ಟಃ ಸ್ವಾಪಮಾನೇ ಸಮುತ್ಸರಃ ।
ತಥಾಪಿ ಕೃಪಯಾ ಧರ್ಮೀ ಸ್ನೇಹಾಚ್ಚ ನ ಶಶಾಪ ತಂ || ೩ ||

ಐವತ್ತೊಂಭತ್ತನೆಯ ಅಧ್ಯಾಯವು.

೧. ಶ್ರೀನಾರಾಯಣ:— ಈ ರೀತಿಯಾಗಿ ಎಲ್ಲ ದೇವದೇವಿಯರ ದರ್ಪ ಭಂಗವನ್ನೂ ತಿಳಿಸಿದುದಾಯಿತು. ಈಗ ದೇವೇಂದ್ರನ ದರ್ಪಭಂಗದ ಕಥೆಯನ್ನು ವಿಸ್ತಾರವಾಗಿ ಹೇಳುವೆನು ಕೇಳು.

೨. ಒಮ್ಮೆ ಗರ್ವಿತನಾದ ದೇವೇಂದ್ರನು ಸಭೆಯಲ್ಲಿ ರತ್ನಸಿಂಹಾಸನದ ಮೇಲೆ ಕುಳಿತಿದ್ದಾಗ, ಬ್ರಹ್ಮಜ್ಞಾನಿಯೂ, ತನ್ನ ಗುರುವೂ ಆದ ಬೃಹಸ್ಪತ್ಯಾಚಾರ್ಯನು ಬಂದರೂ ಮೇಲಕ್ಕೆ ಏಳಲಿಲ್ಲ.

೩. ತನಗೆ ಅಪಮಾನ ಮಾಡಿದುದರಿಂದ ಅತ್ಯಂತವಾಗಿ ಕುಪಿತನಾದ ಬೃಹಸ್ಪತಿಯು ಇಂದ್ರನಿಗೆ ಶಾಪ ಕೊಡಬಹುದಾಗಿದ್ದಿತು. ಆದರೆ ಧರ್ಮಿಷ್ಠನೂ, ದಯಾಮಯನೂ ಆದ ಗುರುವು ರಾಜನೆಂಬ ಸ್ನೇಹದಿಂದ ಶಪಿಸಲಿಲ್ಲ.

ವಿನಾ ಶಾಪೇನ ತದ್ದರ್ಪಶ್ಚೂರ್ಣೀಭೂತೋ ಬಭೂವ ಹ ।
ಅನ್ಯಶ್ಚೇನ್ನ ಶಪೇದ್ಧರ್ಮಾತ್ಪ್ರೇಮ್ಣಾ ವಾಚ್ಯಾತಿಕಿಲ್ಬಿಷಂ ॥ ೪ ॥

ತಥಾಽಪಿ ತಂ ಚ ಫಲತಿ ಧರ್ಮಸ್ತಂ ಹಂತಿ ನಾರದ ।
ಯೋ ಯಂ ಹಿಂಸ್ರಂ ಸಾಪರಾಧಂ ಶಪೇತ್ಕೋಪೇನ ಧಾರ್ಮಿಕಃ ॥ ೫ ॥

ವಿನಾಶಃ ಸಾಪರಾಧಸ್ಯ ಧರ್ಮೋ ನಷ್ಟಶ್ಚ ಧರ್ಮಿಣಃ ।
ತೇನಾಧರ್ಮೇಣ ಶಕ್ರಸ್ಯ ಬ್ರಹ್ಮಹತ್ಯಾ ಬಭೂವ ಹ ॥ ೬ ॥

ಭೀತಸ್ತ್ಯಕ್ತ್ವಾ ಸ್ವರಾಜ್ಯಂ ಚ ಪ್ರಯಯೌ ಸ ಸರೋವರಂ ।
ಸರಸಃ ಪದ್ಮಪತ್ರೇ ಚ ನಿವಾಸಂ ಹ ಚಕಾರ ಸಃ ॥ ೭ ॥

ಗಂತುಂ ನ ಶಕ್ತಾ ಹತ್ಯಾ ಚ ಪುಣ್ಯಂ ವಿಷ್ಣುಸರೋವರಂ ।
ಶ್ರೇಷ್ಠಂ ಭಾರತವರ್ಷೇ ಚ ತಪಃಸ್ಥಾನಂ ತಪಸ್ವಿನಾಂ ॥ ೮ ॥

೪-೫. ಶಾಪವಿಲ್ಲದಿದ್ದರೂ ಆ ಇಂದ್ರನ ದರ್ಪವು ಚೂರ್ಣವಾಗಿ ಹೋಯಿತು. ಧರ್ಮದೃಷ್ಟಿಯಿಂದಲೂ, ಸ್ನೇಹದಿಂದಲೂ ಇತರರು ಕ್ರೂರನುಡಿಯಾಡಿ ಶಾಪ ಕೊಡದಿದ್ದರೂ ಅಹಂಕಾರದ ದುಷ್ಫಲವನ್ನು ಅನುಭವಿಸಿಯೇ ತೀರಬೇಕು. ಎಲೈ ನಾರದನೇ, ಹಿಂಸಕನೂ ಅಪರಾಧಿಯೂ ಆದ ಅಹಂಕಾರಿಯನ್ನು ಧರ್ಮಪುರುಷನೇ ಶಪಿಸಿ ನಾಶಪಡಿಸುತ್ತಾನೆ.

೬. ಅಪರಾಧಿಗೆ ವಿನಾಶವೂ, ಗರ್ವಿತನಾದ ಧರ್ಮಿಷ್ಠನಿಗೆ ಧರ್ಮನಾಶವೂ ಉಂಟಾಗುವುದು. ಅದೇ ರೀತಿ ಗುರುವಿಗೆ ಪ್ರತ್ಯುತ್ಥಾನಮಾಡದಿರುವ ಅಧರ್ಮದಿಂದ ದೇವೇಂದ್ರನಿಗೆ ಬ್ರಹ್ಮಹತ್ಯೆಯು ಒದಗಿತು.

೭. ಆಗ ಇಂದ್ರನು ಬ್ರಹ್ಮಹತ್ಯೆಗೆ ಹೆದರಿ ತನ್ನ ರಾಜ್ಯವನ್ನು ಬಿಟ್ಟು ಒಂದು ಸರೋವರವನ್ನು ಪ್ರವೇಶಿಸಿದನು. ಅಲ್ಲಿ ಒಂದು ತಾವರೆ ಎಲೆಯಲ್ಲಿ ಅನೇಕ ವರ್ಷಗಳ ಕಾಲ ವಾಸಮಾಡಿಕೊಂಡಿದ್ದನು.

೮. ಬ್ರಹ್ಮಹತ್ಯೆಯಾದರೋ ಪುಣ್ಯತಮವಾದ ಆ ವಿಷ್ಣುಸರೋವರವನ್ನು ಪ್ರವೇಶಿಸಲಾಗದೆ ಅದರ ತೀರದಲ್ಲೇ ವಾಸಿಸುತ್ತಿತ್ತು. ಭಾರತವರ್ಷದಲ್ಲಿ ಅತ್ಯುತ್ತಮವೆನಿಸಿದ ಆ ಸರೋವರವು ತಪಸ್ವಿಗಳಿಗೆ ತಪಸ್ಸುಮಾಡುವ ಉತ್ತಮ ಸ್ಥಾನವಾಗಿದೆ.

ತದೇವ ಪುಷ್ಕರಂ ತೀರ್ಥಂ ಪ್ರವದಂತಿ ಪುರಾವಿದಃ ।
ರಾಜ್ಯಭ್ರಷ್ಟಂ ಹರಿಂ ದೃಷ್ಟ್ವಾ ಹರಿಭಕ್ತೋ ನರಾಧಿಪಃ ॥ ೯ ॥

ಬಲಾಜ್ಜಹಾರ ತದ್ರಾಜ್ಯಂ ನಹುಷೋ ನಾಮ ಧಾರ್ಮಿಕಃ ।
ದೃಷ್ಟ್ವಾ ಶಚೀಂ ವರಾರೋಹಾಮನಪತ್ಯಾಂ ಚ ಸುಂದರೀಂ ॥ ೧೦ ॥

ಸ್ವರ್ಗಗಂಗಾಂ ಚ ಗಚ್ಛಂತೀಂ ಹೃದಯೇನ ವಿದೂಯತಾ ।
ನವಯೌವನಸಂಪನ್ನಾಂ ರತ್ನಾಲಂಕಾರಭೂಷಿತಾಂ ॥ ೧೧ ॥

ಸುಕೋಮಲಾಂ ತಾಂ ಸುದತೀಂ ವದಂತೀಂ ಚ ಮಹಾಸತೀಂ ।
ಮೂರ್ಛಾಂ ಸಂಪ್ರಾಪ ರಾಜೇಂದ್ರಃ ಕಾಮೇನ ಯೌವನೇನ ಚ ।
ಉವಾಚ ತತ್ಪುರಃ ಸ್ಥಿತ್ವಾ ಸುವಿನೀತಶ್ಚ ದಾಸವತ್ ॥ ೧೨ ॥

॥ ನಹುಷ ಉವಾಚ ॥

ಧಾತುರ್ಗತಿರ್ವಿಚಿತ್ರಾSಹೋ ನ ಬೋಧ್ಯಾ ಚ ಸತಾಮಪಿ ॥ ೧೩ ॥

೯-೧೦. ಅದನ್ನೇ ಪುರಾತನ ವಿಷಯವನ್ನು ಬಲ್ಲವರು ಪುಷ್ಕರತೀರ್ಥವೆಂದು ಕರೆಯುವರು. ಇತ್ತ ಇಂದ್ರನು ರಾಜ್ಯಭ್ರಷ್ಟನಾದುದನ್ನು ನೋಡಿ ಹರಿಭಕ್ತನೂ, ಧಾರ್ಮಿಕನೂ ಆದ ನಹುಷಚಕ್ರವರ್ತಿಯು ಬಲಾತ್ಕಾರದಿಂದ ಇಂದ್ರನ ರಾಜ್ಯವನ್ನಪಹರಿಸಿ ಒಮ್ಮೆ ಪರಮಸುಂದರಿಯೂ, ಪುತ್ರರಹಿತಳೂ ಆದ ಶಚೀದೇವಿಯನ್ನು ನೋಡಿದನು.

೧೧. ಆ ನವಯುವತಿಯೊಡ ಶಚೀದೇವಿಯು ರತ್ನಾಲಂಕಾರಗಳಿಂದ ಭೂಷಿತಳಾಗಿದ್ದರೂ ಪತಿಯ ವಿರಹದಿಂದ ಮನಸ್ಸಿನಲ್ಲೇ ವ್ಯಥೆಪಡುತ್ತಾ ದೇವಗಂಗೆಗೆ ಸ್ನಾನಕ್ಕೆ ಹೋಗುತ್ತಿದ್ದಳು.

೧೨. ಕೋಮಲಾಂಗಿಯೂ, ಸುದತಿಯೂ ಆದ ಆ ಮಹಾಪತಿವ್ರತೆಯನ್ನು ನೋಡಿ ಯೌವನೋನ್ಮತ್ತನಾದ ರಾಜನು ಕಾಮಪರವಶನಾಗಿ ಮೂರ್ಛೆಹೊಂದಿದನು. ಅಲ್ಲದೆ ಸೇವಕನಂತೆ ವಿನಯದಿಂದ ಆ ಶಚಿಯ ಮುಂದೆ ನಿಂತು ಇಂತೆಂದನು.

೧೩. ನಹುಷ :—ಬ್ರಹ್ಮನ ಸೃಷ್ಟಿವ್ಯಾಪಾರವು ಅತಿ ವಿಚಿತ್ರವಾದುದು. ಎಂತಹ ಸತ್ಪುರುಷರಿಗೂ ಸಹ ಅದು ತಿಳಿಯುವಂತಿಲ್ಲ

ಈದೃಶೀ ಸ್ತ್ರೀ ಭಗಾಂಗಸ್ಯ ಲುಬ್ಧಸ್ಯ ಪರಯೋಷಿತಿ ।
ಈದೃಶೀ ಸುಂದರೀ ಯಸ್ಯ ಪರಭಾರ್ಯಾಸು ತನ್ಮನಃ ॥ ೧೪ ॥

ಅಸ್ಯಾ ಅಗ್ರೇ ಚ ಕಾ ರಂಭಾ ಕೋರ್ವಶೀ ಕಾ ತಿಲೋತ್ತಮಾ ।
ಕಾ ವಾ ಮೇನಾ ಘೃತಾಚೀ ವಾ ರತ್ನಮಾಲಾ ಕಲಾವತೀ ॥ ೧೫ ॥

ಕಾಲಿಕಾ ಸುಂದರೀ ಭದ್ರಾವತೀ ಚಂಪಾವತೀ ತಥಾ ।
ಏತಾಶ್ಚಾಪ್ಸರಸಶ್ಚಾನ್ಯಾಃ ಕಲಾಂ ನಾರ್ಹಂತಿ ಷೋಡಶೀಂ ॥ ೧೬ ॥

ಇಮಾಂ ವಿಹಾಯ ಮೂಢೋಽನ್ಯಾಂ ಕಥಂ ಗಚ್ಛತಿ ಮಂದಧೀಃ ।
ಅಸ್ಮಾಕಂ ಯೋಷಿತೋ ಯಾಶ್ಚ ಚೇಟೀತುಲ್ಯಾಶ್ಚ ನಿಶ್ಚಿತಂ ॥ ೧೭ ॥

ಮಾಂ ಭಜಸ್ವ ವರಾರೋಹೇ ಸುಪ್ರೀತಾ ಭವ ಕಿಂಕರಂ ।
ಯಥಾ ರಾಧಾ ಚ ಗೋಲೋಕೇ ಕೃಷ್ಣವಕ್ಷಸಿ ರಾಜತೇ ॥ ೧೮ ॥

---

೧೪. ಪರಸ್ತ್ರೀಯರಲ್ಲಿ ಲುಬ್ಧನೂ, ಶರೀರವೆಲ್ಲ ಯೋನಿಯೂ ಆದ ಇಂದ್ರನಿಗೆ ಇಷ್ಟು ಸುಂದರಿಯಾದ ಪತ್ನಿಯಿರುವಳು. ಯಾರಿಗೆ ಇಂಥ ಸುಂದರಿಯಾದ ಪತ್ನಿ ಇರುವಳೋ ಅವನ ಮನಸ್ಸು ಪರಸ್ತ್ರೀಯರಲ್ಲಿ ಹೇಗೆ ಆಸಕ್ತವಾದೀತು ?

೧೫. ಇವಳ ಎದುರಿನಲ್ಲಿ ರಂಭೆ, ಊರ್ವಶಿ, ಮತ್ತು ತಿಲೋತ್ತಮೆಯರು ಎಷ್ಟರವರು ? ಮೇನೆಯಾಗಲೀ, ಘೃತಾಚಿಯಾಗಲೀ, ರತ್ನಮಾಲೆಯಾಗಲೀ, ಕಲಾವತಿಯಾಗಲೀ ಈಕೆಗೆ ಎಣೆಯಾಗಲಾರರು.

೧೬. ಕಾಲಿಕೆ, ಸುಂದರಿ, ಭದ್ರಾವತಿ, ಚಂಪಾವತಿ ಮೊದಲಾದ ಅಪ್ಸರೆಯರಾರೂ ಈ ಶಚೀದೇವಿಯ ಹದಿನಾರನೆಯ ಒಂದು ಭಾಗದಷ್ಟು ಸೌಂದರ್ಯಕ್ಕೂ ಸಮರಾಗುವುದಿಲ್ಲ

೧೭. ಇಂಥ ಸುಂದರಿಯನ್ನು ಬಿಟ್ಟು ಮೂರ್ಖನಾದ ದೇವೇಂದ್ರನು ಪರಸ್ತ್ರೀಯನ್ನು ಹೇಗೆ ಬಯಸಿದನು ? ನಮ್ಮ ಪತ್ನಿಯರೆಲ್ಲರೂ ಈಕೆಯ ದಾಸಿಗೆ ಸಮಾನರೆಂಬುದು ನಿಶ್ಚಿತವಾದುದು.

೧೮. ಈ ರೀತಿಯಾಗಿ ಚಿಂತಿಸಿದ ನಹುಷನು ಶಚಿಯನ್ನು ಕುರಿತು 'ಎಲೌ ಸುಂದರಿಯೇ, ನಿನ್ನ ಕಿಂಕರನಾದ ನನ್ನಲ್ಲಿ ಪ್ರಸನ್ನಳಾಗಿ ನನ್ನನ್ನು ವರಿಸು. ಗೋಲೋಕದಲ್ಲಿ ಕೃಷ್ಣನ ವಕ್ಷಃಸ್ಥಳದಲ್ಲಿ ರಾಧೆಯು ಶೋಭಿಸುವಂತೆ ನೀನು ನನ್ನ ವಕ್ಷಃಸ್ಥಳದಲ್ಲಿ ಶೋಭಿಸುವೆ.

ವೈಕುಂಠೋರಸಿ ವೈಕುಂಠೇ ಯಥಾ ಲಕ್ಷ್ಮೀಃ ಸರಸ್ವತೀ ।
ಬ್ರಹ್ಮಲೋಕೇ ಚ ಬ್ರಹ್ಮಾಣೀ ಯಥೈವ ಬ್ರಹ್ಮವಕ್ಷಸಿ ॥ ೧೯ ॥

ಯಥಾ ಮೂರ್ತಿರ್ಮಹಾಸಾಧ್ವೀ ಧರ್ಮವಕ್ಷಃಸ್ಥಲಸ್ಥಿತಾ
ಪಾತಾಲತಲಲಕ್ಷ್ಮೀರ್ವಾ ಯಥೈವಾನಂತವಕ್ಷಸಿ ॥ ೨೦ ॥

ಯಥಾ ಪುಷ್ಟಿರ್ಗಣೇಶೇ ಚ ದೇವಸೇನಾ ಚ ಕಾರ್ತಿಕೇ ।
ವರುಣೇ ವರುಣಾನೀ ಚ ಯಥಾ ಸ್ವಾಹಾ ಹುತಾಶನೇ ॥ ೨೧ ॥

ಯಥಾ ರತಿಃ ಕಾಮದೇವೇ ಯಥಾ ಸಂಜ್ಞಾ ದಿನೇಶ್ವರೇ ।
ವಾಯೋಃ ಪತ್ನೀ ಯಥಾ ವಾಯೌ ಯಥಾ ಚಂದ್ರೇ ಚ ರೋಹಿಣೀ॥ ೨೨ ॥

ಯಥಾಽದಿತಿರ್ದೇವಮಾತಾ ತವ ಶ್ವಶ್ರೂಶ್ಚ ಕಶ್ಯಪೇ ।
ಯಥಾ ಹಿಮಾಲಯೇ ಮೇನಾ ಪಿತೃಕನ್ಯಾ ಚ ಮಾನಸೀ ॥ ೨೩ ॥

---

೧೯. ವೈಕುಂಠದಲ್ಲಿ ಶ್ರೀಮನ್ನಾರಾಯಣನ ವಕ್ಷಃಸ್ಥಳದಲ್ಲಿ ಲಕ್ಷ್ಮೀ ಸರಸ್ವತಿಯರೂ, ಬ್ರಹ್ಮಲೋಕದಲ್ಲಿ ಬ್ರಹ್ಮನ ವಕ್ಷಃಸ್ಥಳದಲ್ಲಿ ಬ್ರಹ್ಮಾಣಿಯೂ ಶೋಭಿಸುವಂತೆ ನೀನು ನನ್ನ ವಕ್ಷಃಸ್ಥಳದಲ್ಲಿ ಶೋಭಿಸುವೆ.

೨೦. ಪರಮ ಸಾಧ್ವೀಮಣಿಯಾದ ಮೂರ್ತಿದೇವಿಯು ಧರ್ಮನ ವಕ್ಷಃಸ್ಥಲದಲ್ಲಿ ಶೋಭಿಸುವಂತೆಯೂ, ಅನಂತನ ವಕ್ಷಃಸ್ಥಲದಲ್ಲಿ ಪಾತಾಳಲಕ್ಷ್ಮಿಯು ಶೋಭಿಸುವಂತೆಯೂ ನೀನು ನನ್ನ ವಕ್ಷಃಸ್ಥಲದಲ್ಲಿ ಶೋಭಿಸುವೆ.

೨೧. ಗಣೇಶನೊಡನೆ ಪುಷ್ಟಿದೇವಿಯೂ, ಷಣ್ಮುಖನೊಡನೆ ದೇವಸೇನೆಯೂ ವರುಣನೊಡನೆ ವರುಣಾನಿಯೂ, ಅಗ್ನಿದೇವನೊಡನೆ ಸ್ವಾಹಾದೇವಿಯೂ. ಶೋಭಿಸುವಂತೆ ನೀನು ನನ್ನೊಡನಿದ್ದರೆ ಶೋಭಿಸುವೆ.

೨೨. ರತೀದೇವಿಯು ಕಾಮದೇವನೊಡನೆಯೂ, ಸಂಜ್ಞಾದೇವಿಯು ಸೂರ್ಯದೇವನೊಡನೆಯೂ, ವಾಯುಪತ್ನಿಯು ವಾಯುದೇವನೊಡನೆಯೂ, ರೋಹಿಣಿಯು ಚಂದ್ರನೊಡನೆಯೂ ವಿರಾಜಿಸುವಂತೆ ನೀನು ನನ್ನೊಡನೆ ವಿರಾಜಿಸುವೆ.

೨೩. ದೇವಮಾತೆಯೂ, ನಿಮ್ಮ ಅತ್ತೆಯೂ ಆದ ಅದಿತಿಯು ಕಶ್ಯಪನೊಡನೆಯೂ, ಪಿತೃಗಳ ಮಾನಸಪುತ್ರಿಯಾದ ಮೇನೆಯು ಹಿಮವಂತನೊಡನೆಯೂ ಇದ್ದು ಶೋಭಿಸುವಂತೆ ನೀನೂ ನನ್ನೊಡನಿದ್ದರೆ ಶೋಭಿಸುವೆ.

ಲೋಪಾಮುದ್ರಾ ಯಥಾಽಗಸ್ತ್ಯೇ ಯಥಾ ತಾರಾ ಬೃಹಸ್ಪತೌ ।
ಕರ್ದಮೋ ದೇವಹೂತೀ ಚ ವಸಿಷ್ಠೇಽರುಂಧತೀ ಯಥಾ ॥ ೨೪ ॥

ಮನೌ ಚ ಶತರೂಪೇವ ದಮಯಂತೀ ನಲೇ ಯಥಾ ।
ತಥಾ ಭವ ತ್ವಂ ಸೌಭಾಗ್ಯಾ ಮಮ ವಕ್ಷಸಿ ಸುಂದರಿ ॥ ೨೫ ॥

ಲೀಲಯಾ ಚ ಸಹಸ್ರೇಂದ್ರಾಞ್ಜೇತ್ತುಂ ಶಕ್ತೋಽಹಮೀಶ್ವರಃ ।
ನಾರೀ ವಾಂಛತಿ ಜಾರಂ ಚ ಸ್ವಾಮಿನೋ ಬಲವತ್ತರಂ ॥ ೨೬ ॥

ಸುಮೇರುಗಿರಿಕೂಟೇ ಚ ದುರ್ಗಮೇಽತಿರಹಃಸ್ಥಲೇ ।
ಅಥವಾ ಮಲಯೇ ರಮ್ಯೇ ರಮ್ಯೇ ಚಂದನವಾಯುನಾ ॥ ೨೭ ॥

ವಿಶ್ರಂಭಕೇ ಸುರಸನೇ ಕಿಂ ವಾ ನಂದನಕಾನನೇ ।
ನಿಕಟೇ ಶತಶೃಂಗಸ್ಯ ಪುಷ್ಪಭದ್ರಾನದೀತಟೇ ॥ ೨೮ ॥

---

೨೪. ಲೋಪಾಮುದ್ರೆಯು ಅಗಸ್ತ್ಯನೊಡನೆಯೂ, ತಾರಾದೇವಿಯು ಬೃಹಸ್ಪತಿಯೊಡನೆಯೂ, ದೇವಹೂತಿಯು ಕರ್ದಮನೊಡನೆಯೂ, ಅರುಂಧತಿಯು ವಸಿಷ್ಠನೊಡನೆಯೂ ವಿರಾಜಿಸುವಂತೆ ನೀನೂ ನನ್ನೊಡನೆ ವಿರಾಜಿಸುವೆ.

೨೫. ಎಲೌ ಸುಂದರಿಯೇ, ಶತರೂಪೆಯು ಸ್ವಾಯಂಭುವಮನುವಿನಲ್ಲಿಯೂ ದಮಯಂತಿಯು ನಳನಲ್ಲಿಯೂ ಅನನ್ಯಭಾವದಿಂದಿರುವಂತೆ ನೀನೂ ನನ್ನ ವಕ್ಷಸ್ಥಳದಲ್ಲಿ ಸೌಭಾಗ್ಯವತಿಯಾಗಿರು.

೨೬. ಸರ್ವಶಕ್ತನಾದ ನಾನು ಲೀಲಾಮಾತ್ರದಿಂದ ಸಾವಿರ ಇಂದ್ರರನ್ನು ಕತ್ತರಿಸಬಲ್ಲವನಾಗಿದ್ದೇನೆ ಹೆಂಗಸು ತನ್ನ ಪತಿಗಿಂತಲೂ ಬಲಿಷ್ಠನಾದ ಜಾರನನ್ನು ಸಾಮಾನ್ಯವಾಗಿ ಬಯಸುತ್ತಾಳೆ.

೨೭. ಎಲ್ಲರಿಗೂ ದುರ್ಗಮವೂ, ನಿರ್ಜನಪ್ರದೇಶವೂ ಆದ ಸುಮೇರು ಪರ್ವತದ ಶಿಖರದಲ್ಲಿಯಾಗಲೀ, ಚಂದನವಾಯುವಿನಿಂದ ರಮ್ಯವಾದ ಮಲಯ ಪರ್ವತದಲ್ಲಾಗಲೀ ನನ್ನೊಡನೆ ರಮಿಸು.

೨೮. ಎಲೌ ಶೋಭನವಾದ ಡಾಬುಳ್ಳವಳೇ, ಏಕಾಂತಪ್ರದೇಶವಾದ ನಂದನ ವನವ ಕಾನನದಲ್ಲಾಗಲೀ, ಶತಶೃಂಗಪರ್ವತದ ಸಮೀಪದಲ್ಲಿರುವ ಪುಷ್ಪಭದ್ರಾ ದಿಯ ತೀರದಲ್ಲಾಗಲೀ ನನ್ನೊಡನೆ ಕ್ರೀಡಿಸು.

ಗೋದಾವರೀತೀರನೀರೇ ಸಮೀಪೇ ಶೀತವಾಯುನಾ ।
ಚಂಪಾವತೀ ನದೀತೀರೇ ರಮ್ಯೇ ಚಂಪಕಕಾನನೇ ॥ ೨೯ ॥

ಶ್ಮಶಾನೇಽತಿಶ್ಮಶಾನೇ ಚ ರಮ್ಯೇಽತಿನಿರ್ಜನೇ ವನೇ ।
ಶೈಲೇ ಶೈಲೇಽತಿರಹಸಿ ಕಂದರೇ ಕಂದರೇ ವನೇ ॥ ೩೦ ॥

ದ್ವೀಪೇ ದ್ವೀಪೇ ದುರ್ಗದುರ್ಗೇ ನದ್ಯಾಂ ನದ್ಯಾಂ ನದೇ ನದೇ ।
ಸಮುದ್ರಪುಲಿನೇ ರಮ್ಯೇ ಸರ್ವಜಂತುವಿವರ್ಜಿತೇ ॥ ೩೧ ॥

ವಿದಗ್ಧಾಯಾ ವಿದಗ್ಧೇನ ಸಂಗಮೋ ನಿರ್ಜನೇ ಸುಖಃ ।
ಪುಷ್ಪಚಂದನತಲ್ಪೇಯಾಂ ಪುಷ್ಪಚಂದನಚರ್ಚಿತೇ ॥ ೩೨ ॥

ಮಾಂ ಗೃಹೀತ್ವಾ ಕುರು ರತಿಂ ಪುಷ್ಪಚಂದನಚರ್ಚಿತಂ ।
ಬ್ರಹ್ಮಣಶ್ಚ ವರೈರ್ದೇವಿ ಜರಾಮೃತ್ಯುವಿವರ್ಜಿತಂ ॥ ೩೩ ॥

ಮಾಂ ಕುರುಷ್ವ ಪತಿಂ ಭದ್ರೇ ನಿತ್ಯಂ ಸುಸ್ಥಿರಯೌವನಂ ।
ಸುವೇಷಂ ಸುಂದರಂ ಧೀರಂ ಕಾಮಶಾಸ್ತ್ರವಿಶಾರದಂ ॥ ೩೪ ॥

---

೨೯. ಶೀತವಾಯುವಿನಿಂದ ಮನೋಹರವಾದ ಗೋದಾವರಿ ತೀರದಲ್ಲಾಗಲೀ, ಚಂಪಾವತೀ ನದಿಯ ತೀರದಲ್ಲಿರುವ ರಮ್ಯವಾದ ಚಂಪಕವನದಲ್ಲಾಗಲೀ ನನ್ನೊಡನೆ ವಿಹರಿಸು.

೩೦. ಸ್ಮಶಾನಕ್ಕಿಂತಲೂ ಅತ್ಯಂತ ಪ್ರಶಾಂತ ಸ್ಥಳದಲ್ಲಾಗಲೀ. ರಮ್ಯವೂ ನಿರ್ಜನವೂ ಆದ ವನದಲ್ಲಾಗಲೀ, ಬೆಟ್ಟಗಳಲ್ಲಾಗಲೀ, ಗೋಪ್ಯವಾದ ಗುಹೆಗಳಲ್ಲಾಗಲೀ ನನ್ನೊಡನೆ ವಿಹಾರಮಾಡು.

೩೧. ಮನೋಹರವಾದ ದ್ವೀಪಗಳಲ್ಲಾಗಲೀ, ದುರ್ಗಗಳಲ್ಲಾಗಲೀ, ನದನದಿಗಳಲ್ಲಾಗಲೀ, ಸಕಲ ಜಂತು ವಿವರ್ಜಿತವಾಗಿ ರಮ್ಯವಾಗಿರುವ ಸಮುದ್ರದ ಮರಳು ರಾಶಿಯಲ್ಲಾಗಲೀ, ನನ್ನೊಡನೆ ರಮಿಸು.

೩೨-೩೪. ನಿರ್ಜನಪ್ರದೇಶದಲ್ಲಿ ಪ್ರೌಢನಾದ ಪುರುಷನೊಡನೆ ಪ್ರೌಢಳಾದ ಸ್ತ್ರೀಯು ಸಂಗಮಮಾಡುವುದು ಸುಖಪ್ರದವಾದುದು. ಪುಷ್ಪಚಂದನಗಳಿಂದಲಂಕೃತವಾದ ಪುಷ್ಪಚಂದನಶಯನದಲ್ಲಿ ಪುಷ್ಪಚಂದನಗಳನ್ನು ವಿಲೇಪಿಸಿಕೊಂಡಿರುವ ನನ್ನನ್ನು ಕರೆದೊಯ್ದು ರತಿಕ್ರೀಡೆಯಾಡು. ಎಲೌ ದೇವಿಯೇ, ಬ್ರಹ್ಮನ ವರದಿಂದ ಜರಾಮೃತ್ಯುರಹಿತನಾದ, ನಿತ್ಯವೂ ಸ್ಥಿರಯೌವನವುಳ್ಳ, ಸುವೇಷಭೂಷಿತನೂ, ಸುಂದರನೂ, ಕಾಮಶಾಸ್ತ್ರವಿಶಾರದನೂ, ಧೀರನೂ ಆದ ನನ್ನನ್ನು ಪತಿಯನ್ನಾಗಿ ವರಿಸು

ಶರತ್ಪಾರ್ವಣಚಂದ್ರಾಸ್ಯಂ ಚಂದ್ರವಂಶಸಮುದ್ಭವಂ ।
ಆಗತಾಮುರ್ವಶೀಂ ಮಹ್ಯಾಂ ತ್ಯಕ್ತವಂತಂ ಚ ಯಾಚತೀಂ ॥ ೩೫ ॥

ನ ಮೇ ಸ್ಪೃಹಾ ಪರಸ್ತ್ರೀಷು ತ್ವಾಂ ದೃಷ್ಟ್ವಾ ಲೋಲುಪಂ ಮನಃ ।
ತ್ಯಕ್ತಾ ಮಯಾ ಸ್ವಭಾರ್ಯಾಶ್ಚ ರತ್ನಭೂಷಣಭೂಷಿತಾಃ ॥ ೩೬ ॥

ಅಥವಾ ರಕ್ಷಿತಾಃ ಸರ್ವಾ ದಾಸೀಃ ಕೃತ್ವಾ ವರಾನನೇ ।
ರತ್ನೇಂದ್ರಸಾರಾಂ ಮಾಲಾಂ ತೇ ದಾಸ್ಯಾಮಿ ವರುಣಸ್ಯ ಚ ॥ ೩೭ ॥

ನಿರ್ಜಿತ್ಯ ವರುಣಂ ಯುದ್ಧೇ ಬ್ರಹ್ಮಾಸ್ತ್ರೇಣಾತಿತೇಜಸಾ ।
ವಹ್ನಿಶುದ್ಧಂ ವಸ್ತ್ರಯುಗಂ ಜಿತ್ವಾ ವಹ್ನಿಂ ಸುದುರ್ಬಲಂ ॥ ೩೮ ॥

ದಾಸ್ಯಾಮ್ಯದ್ಯೈವ ತೇ ದೇವಿ ನಿಯೋಜ್ಯಂ ಮಾಂ ನಿಯೋಜಯ ।
ಮಣೀಂದ್ರಸಾರನಿರ್ಮಾಣಮಕರಾಕಾರಕುಂಡಲೇ ॥ ೩೯ ॥

---

೩೫. ಶರದೃತುವಿನ ಪೂರ್ಣಿಮಾಚಂದ್ರನಂತೆ ಮುಖವುಳ್ಳವನೂ, ಚಂದ್ರವಂಶಸಂಭವನೂ, ತಾನಾಗಿ ಬಂದು ಯಾಚಿಸುತ್ತಿದ್ದ ಊರ್ವಶಿಯನ್ನು ಬಿಟ್ಟು ಬಂದವನೂ ಆದ ನನ್ನನ್ನು ಪತಿಯನ್ನಾಗಿ ವರಿಸು.

೩೬. ಪರಸ್ತ್ರೀಯರನ್ನು ಕಂಡರೆ ಆಸೆಪಡದಿರುವ ನನ್ನ ಮನಸ್ಸು ನಿನ್ನನ್ನು ಕಂಡು ಚಂಚಲಗೊಂಡಿತು. ರತ್ನಾಲಂಕಾರಭೂಷಿತರಾದ ನನ್ನ ಪತ್ನಿಯರನ್ನೆಲ್ಲ ನಾನು ಬಿಟ್ಟುಬಿಟ್ಟಿದ್ದೇನೆ.

೩೭-೪೧. ಅಥವಾ ಎಲೌ ಚಂದ್ರವದನೆಯೇ, ಅವರೆಲ್ಲರನ್ನೂ ನಿನ್ನ ದಾಸಿಯರನ್ನಾಗಿ ಮಾಡುತ್ತೇನೆ. ಅತಿ ತೇಜಸ್ವಿಯಾದ ಬ್ರಹ್ಮಾಸ್ತ್ರದಿಂದ ಯುದ್ಧದಲ್ಲಿ ವರುಣನನ್ನು ಗೆದ್ದು ಆ ವರುಣನ ರತ್ನಮಾಲೆಯನ್ನು ತಂದು ನಿನಗೆ ಕೊಡುವೆನು. ಎಲೌ ದೇವಿಯೇ, ನಿನ್ನ ಸೇವಕನಾದ ನನಗೆ ನಿಯಮಿಸಿದರೆ ಈಗಲೇ ದುರ್ಬಲನಾದ ಅಗ್ನಿದೇವನನ್ನು ಗೆದ್ದು ಅವನ ಪರಿಶುದ್ಧವಾದ ಎರಡು ವಸ್ತ್ರಗಳನ್ನು ನಿನಗೆ

ದಾಸ್ಯಾಮಿ ದೇವಾನ್ನಿರ್ಜಿತ್ಯ ದೇವಮಾತುಶ್ಚ ಸುಂದರಿ ।
ಕರಭೂಷಣಯುಗ್ಮಂ ಚಾತ್ಯಮೂಲ್ಯರತ್ನನಿರ್ಮಿತಂ ॥ ೪೦ ॥

ದಾಸ್ಯಾಮ್ಯದ್ಯೈವ ರೋಹಿಣ್ಯಾಶ್ಚಂದ್ರಂ ಜಿತ್ವಾತಿದುರ್ಬಲಂ ।
ಯಕ್ಷ್ಮಗ್ರಸ್ತಮತಿಕೃಶಂ ಮಮೈವ ಪೂರ್ವಪೂರುಷಂ ॥ ೪೧ ॥

ವಿನಾ ಯುದ್ಧೇನ ಭೀತೋ ಮಾಂ ಕೃಪಯಾ ವಾ ಪ್ರದಾಸ್ಯತಿ ।
ಅಲ್ಪರತ್ನವಿನಿರ್ಮಾಣಂ ಕ್ವಣನ್ಮಂಜೀರಯುಗ್ಮಕಂ ॥ ೪೨ ॥

ದಾಸ್ಯಾಮ್ಯದ್ಯೈವ ಪಾರ್ವತ್ಯಾ ಭಿಕ್ಷಾಂ ಕೃತ್ವಾ ಮಹೇಶ್ವರಂ ।
ಆಶುತೋಷಂ ಸ್ತುತಿವಶಂ ಭಕ್ತೇಶಂ ಚ ಕೃಪಾಮಯಂ ॥ ೪೩ ॥

ಸರ್ವಸಂಪತ್ತಿದಾತಾರಂ ಪರಂ ಕಲ್ಪತರುಂ ಶುಭೇ ।
ಅಮೂಲ್ಯರತ್ನನಿರ್ಮಾಣಕೇಯೂರಯುಗಲಂ ಪ್ರಿಯೇ ॥ ೪೪ ॥

ತಂದು ಕೊಡುವೆನು. ಎಲೌ ಸುಂದರಿಯೇ, ದೇವತೆಗಳನ್ನೆಲ್ಲ ಗೆದ್ದು, ಶ್ರೇಷ್ಠ ರತ್ನಗಳಿಂದ ನಿರ್ಮಿತವಾಗಿ ಮಕರಾಕಾರವಾಗಿರುವ, ದೇವಮಾತೆಯಾದ ಆದಿತಿಯ ಎರಡು ಕುಂಡಲಗಳನ್ನು ನಿನಗೆ ತಂದುಕೊಡುವೆನು ಅಥವಾ ಅತ್ಯಂತ ದುರ್ಬಲನೂ, ಕ್ಷಯರೋಗಿಯೂ, ಅತಿಕೃಶನೂ ನನ್ನ ವಂಶದ ಮೂಲಪುರುಷನೂ ಆದ ಚಂದ್ರನನ್ನು ಗೆದ್ದು ಅವನ ಪತ್ನಿಯಾದ ರೋಹಿಣಿಯು ಧರಿಸಿರುವ ಅಮೂಲ್ಯ ರತ್ನಗಳಿಂದ ನಿರ್ಮಿತವಾದ ಎರಡು ಕಂಕಣಗಳನ್ನು ನಿನಗೆ ತಂದುಕೊಡುವೆನು.

೪೨-೪೩. ಅಥವಾ ಯುದ್ಧಮಾಡದಿದ್ದರೂ ನನಗೆ ಹೆದರಿಕೊಂಡೋ ಅಥವಾ ದಯೆಯಿಂದಲೋ ಚಂದ್ರನು ನನಗೆ ಅವುಗಳನ್ನು ಕೊಡುವನು. ಸ್ತುತಿಗೆ ವಶನಾಗುವವನೂ, ಜಾಗ್ರತೆ ಸಂತೋಷಗೊಳ್ಳುವವನೂ, ಭಕ್ತರ ಬಂಧುವೂ, ಕೃಪಾಮಯನೂ ಆದ ಮಹೇಶ್ವರನನ್ನು ಯಾಚನೆಮಾಡಿಯಾದರೂ ಪಾರ್ವತಿಯು ಧರಿಸುವ, ದಿವ್ಯರತ್ನಗಳಿಂದ ನಿರ್ಮಿತವಾಗಿ ಮಂಜುಳಧ್ವನಿಗೈಯುವ ಎರಡು ಗೊಲಸುಗಳನ್ನು ತಂದುಕೊಡುವೆನು.

೪೪-೪೭ ಎಲೌ ಶುಭಕರಳೇ, ಶಿವನು ಕಲ್ಪವೃಕ್ಷದಂತೆ ಸಕಲಸಂಪತ್ಪ್ರದಾತೃವಾಗಿದ್ದಾನೆ. ಎಲೌ ಪ್ರಿಯಳೇ, ಗಂಗಾದೇವಿಯೊಡನೆ ಹೋರಾಡಿ ಆಕೆಯು ಧರಿಸಿರುವ ದುರ್ಲಭವಾದ ಎರಡು ಭುಜಕೀರ್ತಿಗಳನ್ನು ಬೇಕಾದರೆ ನಿನಗೆ ತಂದು ಕೊಡುವೆನು. ಎಲೌ ಶೋಭನಾಂಗಿಯೇ ಶ್ರೇಷ್ಠರತ್ನಗಳಿಂದ ನಿರ್ಮಿತವಾಗಿ

ದಾಸ್ಯಾಮಿ ತೇsದ್ಯ ಗಂಗಾಯಾ ಯುದ್ಧಂ ಕೃತ್ವಾ ಸುದುರ್ಲಭಂ ।
ಬಹುಲೀಯುಗಳಂ ಚಾರು ಸೂರ್ಯಪತ್ನ್ಯಾಃ ಮನೋಹರಂ ॥ ೪೫ ॥

ಸದ್ರತ್ನಸಾರನಿರ್ಮಾಣಂ ದಾಸ್ಯಾಮ್ಯದ್ಯ ಸುಶೋಭನೇ ।
ಅಮೂಲ್ಯರತ್ನನಿರ್ಮಾಣಂ ದರ್ಪಣಂ ಚಾತಿನಿರ್ಮಲಂ ॥ ೪೬ ॥

ದಾಸ್ಯಾಮಿ ತೇ ಕಾಮಪತ್ನ್ಯಾಃ ಕಾಮಂ ಜಿತ್ವಾ ಚ ಲೀಲಯಾ ।
ಕ್ರೀಡಾಕಮಲಮಮ್ಲಾನಂ ಕಮಲಾಯಾಶ್ಚ ಸುಂದರಿ ॥ ೪೭ ॥

ಭಿಕ್ಷಾಂ ಕೃತ್ವಾ ಚ ದಾಸ್ಯಾಮಿ ಸ್ತುತ್ವಾ ಚ ಕಮಲಾಪತಿಂ ।
ಅಂಗುಲೀಯಕರತ್ನಾನಿ ವಿಶ್ವೇಷು ದುರ್ಲಭಾನಿ ಚ ॥ ೪೮ ॥

ಸಾವಿತ್ರ್ಯಾಶ್ಚ ಪ್ರದಾಸ್ಯಾಮಿ ಕೃತ್ವಾ ಚ ಬ್ರಹ್ಮಣಸ್ತ್ವಥಾ ।
ಸ್ವಯಂ ಗೀತಂ ಪ್ರಗಾಯಂತೀಂ ಮೂರ್ಛನಾಶ್ರುತಿಸಂಯುತಾಂ ॥ ೪೯ ॥

ವಾಣೀವೀಣಾಂ ಪ್ರದಾಸ್ಯಾಮಿ ಕೃತ್ವಾ ನಾರಾಯಣವ್ರತಂ ।
ರತ್ನಪಾಶಕಸಂಘಂ ಚ ವಿಶ್ವಕರ್ಮವಿನಿರ್ಮಿತಾಂ ॥ ೫೦ ॥

ಮನೋಹರವಾಗಿರುವ ಸೂರ್ಯಪತ್ನಿಯು ಧರಿಸಿರುವ ಎರಡು ವಂಕಿಗಳನ್ನು ಬೇಕಾದರೆ ನಿನಗೆ ತಂದುಕೊಡುವೆನು. ಅಥವಾ ಲೀಲಾಮಾತ್ರದಿಂದ ಕಾಮನನ್ನು ಗೆದ್ದು ಅವನ ಪತ್ನಿಯು ಧರಿಸಿರುವ ಅತ್ಯಂತನಿರ್ಮಲವೂ, ಅಮೂಲ್ಯರತ್ನನಿರ್ಮಿತವೂ ಆದ ಕನ್ನಡಿಯನ್ನು ತಂದೀಯುವೆನು. ಎಲೌ ಸುಂದರಿಯೇ, ಕಮಲೆಯ ಬಾಡದಿರುವ ಕ್ರೀಡಾಕಮಲವನ್ನು ತಂದೀಯುವೆನು.

೪೮-೫೧. ಕಮಲಾಪತಿಯಾದ ಶ್ರೀಮನ್ನಾರಾಯಣನನ್ನು ಸ್ತುತಿಸಿ ಭಿಕ್ಷೆ ಬೇಡಿಯಾದರೂ ತಂದೀಯುವೆನು. ಹಾಗೆಯೇ ಬ್ರಹ್ಮನನ್ನು ಸ್ತೋತ್ರಮಾಡಿ ವಿಶ್ವದಲ್ಲಿ ದುರ್ಲಭವಾದ ಸಾವಿತ್ರಿಯು ಧರಿಸಿರುವ ದಿವ್ಯವಾದ ಉಂಗುರಗಳನ್ನು ತಂದುಕೊಡುವೆನು ಅಥವಾ ನಾರಾಯಣವ್ರತವನ್ನು ಮಾಡಿ, ಸ್ವತಃ ಮೂರ್ಛನಾ ಮತ್ತು ಶ್ರುತಿಗಳೊಡಗೂಡಿ ಮಧುರವಾಗಿ ಗಾನಮಾಡುವ ಸರಸ್ವತೀದೇವಿಯ ವೀಣೆಯನ್ನಾದರೂ ತಂದುಕೊಡುವೆನು. ವಿಶ್ವಕರ್ಮನಿಂದ ನಿರ್ಮಿತವಾದ,

ಕುಬೇರಪತ್ನ್ಯಾ ದಾಸ್ಯಾಮಿ ಪಾದಾಂಗುಲಿವಿಭೂಷಣಂ ।
ಇತ್ಯೇವಮುಕ್ತ್ವಾ ನಹುಷಃ ಪಪಾತ ತತ್ಪದಾಂಬುಜೇ ॥ ೫೦ ॥

ಉವಾಚ ತಂ ಶಚೀ ತ್ರಸ್ತಾ ರಾಜಮಾರ್ಗಗತಂ ನೃಪಂ ।
ಉತ್ಥಾಪ್ಯ ತಂ ಕರೇ ಧೃತ್ವಾ ಶುಷ್ಕಕಂಠೋಷ್ಠತಾಲುಕಾ ।
ಸ್ಮಾರಂ ಸ್ಮಾರಂ ಪದಾಂಭೋಜಂ ಮಹಾಸಾಧ್ವೀ ಹರೇರ್ಗುರೋಃ ॥ ೫೧ ॥

॥ ಶಚ್ಯುವಾಚ ॥

ಶೃಣು ವತ್ಸ ಮಹಾರಾಜ ಹೇ ತಾತ ಭಯಭಂಜನ ॥ ೫೨ ॥

ಭಯತ್ರಾತಾ ಚ ರಾಜಾ ಚ ಸರ್ವೇಷಾಂ ಪಾಲಕಃ ಪಿತಾ ।
ಭ್ರಷ್ಟಶ್ರೀಶ್ಚ ಮಹೇಂದ್ರೋಽದ್ಯ ತ್ವಂ ಚ ಸ್ವರ್ಗೇ ನೃಪೋಽಧುನಾ ॥ ೫೩ ॥

ಕುಬೇರನ ಪತ್ನಿಯು ಧರಿಸಿರುವ ರತ್ನಪಾಶಕಗಳನ್ನಾಗಲೀ ಪಾದಾಂಗಲಿ ವಿಭೂಷಣವನ್ನಾಗಲೀ ತಂದೀಯುವೆನು. ಈ ರೀತಿಯಾಗಿ ಹೇಳಿ ನಹುಷನು ಆ ಶಚೀದೇವಿಯ ಪಾದಕಮಲಗಳ ಮೇಲೆ ಬಿದ್ದನು.

೫೧. ಆಗ ಮಹಾಪತಿವ್ರತೆಯಾದ ಶಚೀದೇವಿಯು ತನ್ನ ಪತಿಯಾದ ಇಂದ್ರನ ಪಾದಕಮಲಗಳನ್ನು ಸ್ಮರಿಸಿಕೊಳ್ಳುತ್ತಾ, ರಾಜಮಾರ್ಗದಲ್ಲಿ ತನ್ನ ಕಾಲುಗಳ ಮೇಲೆ ಬಿದ್ದಿರುವ ನಹುಷನನ್ನು ಹಿಡಿದೆಬ್ಬಿಸಿ ಒಣಗಿದ ಕಂಠಕಾಲುಗಳುಳ್ಳವಳಾಗಿ ಭಯದಿಂದ ಇಂತೆಂದಳು.

೫೨. ಶಚೀದೇವಿ :—ಎಲೈ ಸಕಲರ ಭಯಭಂಜಕನಾದ ಮಹಾರಾಜನೇ, ನಾನು ಹೇಳುವುದನ್ನು ಸಾವಧಾನದಿಂದ ಕೇಳು.

೫೩. ಭಯದಿಂದ ಪಾರುಗಾಣಿಸುವ ರಾಜನು ಪ್ರಜೆಗಳ ಪಾಲಕನಾಗಿರುವುದರಿಂದ ಅವರ ತಂದೆಗೆ ಸಮಾನನು. ಈಗ ಮಹೇಂದ್ರನು ರಾಜ್ಯಭ್ರಷ್ಟನಾಗಿರುವುದರಿಂದ ನೀನು ಸ್ವರ್ಗದಲ್ಲಿ ರಾಜನಾಗಿರುವೆ.

ಯೋ ರಾಜಾ ಸ ಪಿತಾ ಮಾತಾ ಪ್ರಜಾನಾಮೇವ ನಿಶ್ಚಿತಂ ।
ಗುರುಪತ್ನೀ ರಾಜಪತ್ನೀ ದೇವಪತ್ನೀ ತಥಾ ವಧೂಃ ॥ ೫೫ ॥

ಪಿತ್ರೋಃ ಸ್ವಸಾ ಶಿಷ್ಯಪತ್ನೀ ಭೃತ್ಯಪತ್ನೀ ಚ ಮಾತುಲೀ ।
ಪಿತೃಪತ್ನೀ ಭ್ರಾತೃಪತ್ನೀ ಶ್ವಶ್ರೂಶ್ಚ ಭಗಿನೀ ಸುತಾ ॥ ೫೬ ॥

ಗರ್ಭಧಾತ್ರೀಷ್ಟದೇವೀ ಚ ಪುಂಸಃ ಷೋಡಶ ಮಾತರಃ ।
ತ್ವಂ ನರೋ ದೇವಭಾರ್ಯಾಽಹಂ ಮಾತಾ ತೇ ದೇವಸಂಮತಾ ॥ ೫೭ ॥

ಗಚ್ಛ ವತ್ಸಾದಿತಿಂ ರಂತುಂ ಯದಿ ಚೇಚ್ಛಸಿ ಮಾತರಂ ।
ಸರ್ವೇಷಾಂ ನಿಷ್ಕೃತಿಶ್ಚಾಸ್ತಿ ನ ವತ್ಸ ಮಾತೃಗಾಮಿನೀಂ ॥ ೫೮ ॥

---

೫೫. ಯಾವನು ರಾಜನೋ ಅವನು ಪ್ರಜೆಗಳ ರಕ್ಷಕನಾದುದರಿಂದ ಅವರ ತಂದೆಗೆ ಸಮಾನನೆಂಬುದರಲ್ಲಿ ಸಂಶಯವಿಲ್ಲ ಗುರುಪತ್ನಿಯೂ, ರಾಜನಪತ್ನಿಯೂ, ದೇವಪತ್ನಿಯೂ, ಸೊಸೆಯೂ ಸಹ ಪುರುಷರಿಗೆ ಮಾತೃಸಮಾನರು.

೫೬. ಅದೇರೀತಿ ತಂದೆ ತಾಯಿಯರ ಸಹೋದರಿಯರೂ, ಶಿಷ್ಯನ ಪತ್ನಿಯೂ ಸೇವಕನ ಪತ್ನಿಯೂ, ಸೋದರತ್ತೆಯೂ (ಸೋದರಮಾವನ ಹೆಂಡತಿ) ತಂದೆಯ ಮತ್ತೊಬ್ಬ ಹೆಂಡತಿಯೂ, ಸಹೋದರ ಪತ್ನಿಯೂ, ಅತ್ತೆಯೂ, ಸಹೋದರಿಯೂ, ಮಗಳೂ ಗಂಡಸರಿಗೆ ಮಾತೃಸಮಾನರು.

೫೭. ಗರ್ಭಧಾರಣೆ ಮಾಡಿದವಳೂ, ಇಷ್ಟದೇವತೆಯೂ ಸೇರಿ ಗಂಡಸರಿಗೆ ಹದಿನಾರು ಮಂದಿ ತಾಯಿಯರಿರುವರು. ನೀನು ಮನುಷ್ಯನು. ನಾನು ದೇವ ಪತ್ನಿಯು. ಆದುದರಿಂದ ನಾನು ನಿನಗೆ ಮಾತೃಸಮಾನಳು.

೫೮. ಎಲೈ ವತ್ಸನೇ, ನೀನು ತಾಯಿಯೊಡನೆ ರಮಿಸಲು ಬಯಸುವುದಾದರೆ ಅದಿತಿಯ ಸಮೀಪಕ್ಕೆ ಹೋಗು. ಎಲ್ಲಕ್ಕೂ ಪ್ರಾಯಶ್ಚಿತ್ತವು ಶಾಸ್ತ್ರೋಕ್ತವಾಗಿದೆ. ಆದರೆ ಮಾತೃಗಾಮಿಯಾದವರಿಗೆ ಯಾವ ಪ್ರಾಯಶ್ಚಿತ್ತವೂ ಇಲ್ಲ.

ಕುಂಭೀಪಾಕೇ ತೇ ಪಚಂತಿ ಯಾವದ್ವೈ ಬ್ರಹ್ಮಣೋ ವಯಃ ।
ತತೋ ಭವಂತಿ ಕೃಮಯಃ ಕಲ್ಪಾಃ ಸಪ್ತ ಭವಂತಿ ಯೇ ॥ ೫೯ ॥

ತತಶ್ಚ ಕುಷ್ಠಿನೋ ಮ್ಲೇಚ್ಛಾ ಭವಂತಿ ಸಪ್ತಜನ್ಮಸು ।
ನಾಸ್ತ್ಯೇವ ನಿಷ್ಕೃತಿಸ್ತೇಷಾಮಿತ್ಯಾಹ ಕಮಲೋದ್ಭವಃ ॥ ೬೦ ॥

ಏವಂ ವಿಟ್ ಕ್ಷತ್ರಶೂದ್ರಾಣಾಂ ಬ್ರಾಹ್ಮಣೀಗಮನೇ ನೃಪ ।
ವೇದೇಷು ನಿಷ್ಕೃತಿರ್ನಾಸ್ತಿ ಚೇತ್ಯಾಂಗಿರಸಭಾಷಿತಂ ॥ ೬೧ ॥

ಸ್ವರ್ಗಸಂಪತ್ತಿಭೋಗಶ್ಚ ಸುಖಂ ಸಂಸಾರಿಣಾಂ ಧ್ರುವಂ ।
ಮುಮುಕ್ಷೂಣಾಂ ಚ ಮೋಕ್ಷಶ್ಚ ಮೋಕ್ಷಶ್ಚೈವ ತಪಸ್ವಿನಾಂ ॥ ೬೨ ॥

ಬ್ರಾಹ್ಮಣಾನಾಂ ಚ ಬ್ರಾಹ್ಮಣ್ಯಂ ಮುನೀನಾಂ ಮೌನಮೇವ ಚ ।
ವೇದಾಭ್ಯಾಸೋ ವೈದಿಕಾನಾಂ ಕವೀನಾಂ ಕಾವ್ಯವರ್ಣನಂ ॥ ೬೩ ॥

---

೫೯. ಅವರು ಬ್ರಹ್ಮನ ಆಯುಃಪರಿಮಿತಿಯಷ್ಟು ಕಾಲ ಕುಂಭೀಪಾಕವೆಂಬ ನರಕದಲ್ಲಿ ನರಳಿ, ಅನಂತರ ಕ್ರಿಮಿಯಾಗಿ ಜನಿಸಿ ಏಳು ಕಲ್ಪಗಳ ಕಾಲ ಕಷ್ಟಪಡುವರು.

೬೦. ಅನಂತರ ಏಳು ಜನ್ಮದಲ್ಲಿ ಕುಷ್ಠರೋಗವುಳ್ಳ ಮ್ಲೇಚ್ಛರಾಗಿ ಜನಿಸುವರು. ಅಂಥವರಿಗೆ ಮುಕ್ತಿಯೇ ಇಲ್ಲವೆಂದು ಕಮಲಸಂಭವನು ಹೇಳಿರುವನು.

೬೧. ಎಲೈ ರಾಜನೇ, ಇದೇ ರೀತಿಯಾಗಿ ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಬ್ರಾಹ್ಮಣ ಸ್ತ್ರೀಯ ಸಂಗಮಾಡಿದರೆ ಅವರಿಗೂ ಮುಕ್ತಿಯು ವೇದದಲ್ಲಿ ನಿರೂಪಿತವಾಗಿಲ್ಲವೆಂದು ಆಂಗಿರಸರು ಹೇಳಿರುವರು.

೬೨. ಸಂಸಾರಿಗಳಿಗೆ ಸ್ವರ್ಗಸಂಪತ್ತಿನ ಸುಖಾನುಭವವೂ, ಮುಮುಕ್ಷುಗಳಿಗೆ ಮೋಕ್ಷವೂ, ತಪಸ್ವಿಗಳಿಗೆ ತಪಸ್ಸೂ ಆನಂದದಾಯಕವಾದುದು.

೬೩. ಬ್ರಾಹ್ಮಣರಿಗೆ ಬ್ರಾಹ್ಮಣ್ಯಪಾಲನೆಯೂ, ಮುನಿಗಳಿಗೆ ಮೌನವ್ರತವೂ, ವೈದಿಕರಿಗೆ ವೇದಾಭ್ಯಾಸವೂ, ಕವಿಗಳಿಗೆ ಕಾವ್ಯವರ್ಣನೆಯೂ ಪರಮಸಂತೋಷದಾಯಕವಾದುದು.

ವಿಷ್ಣುದಾಸ್ಯಂ ವೈಷ್ಣವಾನಾಂ ವಿಷ್ಣುಭಕ್ತಿರಸಂ ಪರಂ ।
ವಿಷ್ಣುಭಕ್ತಿಂ ವಿನಾ ನೈವ ಮುಕ್ತಿಂ ವಾಂಛಂತಿ ವೈಷ್ಣವಾಃ ॥ ೬೪ ॥

ಮಲಾಢ್ಯೇಷು ಚ ಕ್ಲೇದೇಷು ದುರ್ಗಂಧನಿಲಯೇಷು ಚ ।
ಸಾಧೂನಾಂ ಕಿಂ ಸುಖಂ ಸಾಧೋ ಸ್ತ್ರೀಣಾಂ ಯೋನಿಷು ಮಾಂ ವದ ॥ ೬೫ ॥

ಕುಲಪ್ರದೀಪೇ ರಾಜೇಂದ್ರ ರಾಜ್ಞಾಂ ಮಂಡಲವರ್ತಿನಾಂ ।
ಲಬ್ಧಂ ಚ ಭಾರತೇ ಜನ್ಮ ಪುಣ್ಯೇಣ ಬಹುಜನ್ಮನಾಂ ॥ ೬೬ ॥

ಪದ್ಮಾನಾಂ ಚಂದ್ರವಂಶ್ಯಾನಾಂ ನೃಪಾಣಾಂ ದೀಪ್ತಿಹೇತವೇ ।
ತ್ವಮಾವಿರಾಸೀಸ್ತೇಜಸ್ವೀ ಗ್ರೀಷ್ಮಮಧ್ಯಾಹ್ನಭಾಸ್ಕರಃ ॥ ೬೭ ॥

ಸರ್ವೇಷಾಮಾಶ್ರಮಾಣಾಂ ಚ ಸ್ವಧರ್ಮಶ್ಚ ಯಶಃ ಪರಂ ।
ಸ್ವಧರ್ಮಹೀನಾ ನರಕೇ ಪತಂತಿ ಮೂಢಚೇತಸಃ ॥ ೬೮ ॥

---

೬೪. ವೈಷ್ಣವರಿಗೆ ವಿಷ್ಣುಭಕ್ತಿಯೂ, ವಿಷ್ಣುದಾಸ್ಯವೂ ಪರಮಾನಂದಕರವಾಗಿರುವುದು. ವಿಷ್ಣುಭಕ್ತರು ವಿಷ್ಣುಭಕ್ತಿಯನ್ನು ಬಿಟ್ಟು ಬೇರೆ ಮುಕ್ತಿಯನ್ನು ಬಯಸುವುದೇ ಇಲ್ಲ.

೬೫. ಎಲೈ ಸಾಧುವೇ, ಕೊಳಕಿಗೆ ತೌರುಮನೆಯೂ, ದುರ್ಗಂಧಪೂರ್ಣವೂ ಆದ ಸ್ತ್ರೀಯರ ಯೋನಿಯಲ್ಲಿ ಸಾಧುಗಳಿಗೆ ಸುಖವೆಲ್ಲಿಯದು ಎಂಬುದನ್ನು ನನಗೆ ಮೊದಲು ಹೇಳು.

೬೬. ಎಲೈ ರಾಜೇಂದ್ರನೇ, ನೀನು ಬಹುಜನ್ಮಗಳ ಪುಣ್ಯರಾಶಿಯ ಫಲವಾಗಿ ಮಂಡಲವರ್ತಿಗಳಾದ ರಾಜರ ಕುಲಕ್ಕೆ ಪ್ರದೀಪಪ್ರಾಯವಾದ ಸತ್ಕುಲದಲ್ಲಿ ಅದರಲ್ಲೂ ಭಾರತವರ್ಷದಲ್ಲಿ ಜನ್ಮವನ್ನು ಪಡೆದಿದ್ದೀಯೆ.

೬೭. ಚಂದ್ರವಂಶದಲ್ಲಿ ಹುಟ್ಟಿದ ಪದ್ಮಸಮಾನರಾದ ರಾಜರನ್ನು ವಿಕಾಸಗೊಳಿಸುವುದಕ್ಕೋಸ್ಕರ ನೀನು ಗ್ರೀಷ್ಮಋತುವಿನ ಮಧ್ಯಾಹ್ನಕಾಲದ ಸೂರ್ಯನಂತೆ ತೇಜಸ್ವಿಯಾಗಿ ಜನಿಸಿರುವೆ.

೬೮. ಎಲ್ಲ ಆಶ್ರಮಿಗಳಿಗೂ ಅವರವರ ಆಶ್ರಮ ಧರ್ಮಪರಿಪಾಲನೆ ಮಾಡಿಕೊಳ್ಳುವುದು ಕೀರ್ತಿದಾಯಕವಾದುದು. ಸ್ವಧರ್ಮಾಚಾರಗಳನ್ನು ಬಿಟ್ಟ ಮೂಢರು ನರಕದಲ್ಲಿ ಬೀಳುವರು.

ಬ್ರಾಹ್ಮಣಸ್ಯ ಸ್ವಧರ್ಮಶ್ಚ ತ್ರಿಸಂಧ್ಯಮರ್ಚನಂ ಹರೇಃ ।
ತತ್ಪಾದೋದಕನೈವೇದ್ಯಭಕ್ಷಣಂ ಚ ಸುಧಾಧಿಕಂ ॥ ೧೯ ॥

ಅನ್ನಂ ವಿಷ್ಠಾ ಜಲಂ ಮೂತ್ರಮನಿವೇದ್ಯಂ ಹರೇರ್ನೃಪ ।
ಭವಂತಿ ಸೂಕರಾಃ ಸರ್ವೇ ಬ್ರಾಹ್ಮಣಾ ಯದಿ ಭುಂಜತೇ ॥ ೨೦ ॥

ಅಜೀವಂ ಭುಂಜತೇ ವಿಪ್ರಾ ಏಕಾದಶ್ಯಾಂ ನ ಭುಂಜತೇ ।
ಕೃಷ್ಣಜನ್ಮದಿನೇ ಚೈವ ಶಿವರಾತ್ರೌ ಸುನಿಶ್ಚಿತಂ ॥ ೨೧ ॥

ತಥಾ ರಾಮನವಮ್ಯಾಂ ಚ ಯತ್ನತಃ ಪುಣ್ಯವಾಸರೇ ।
ಬ್ರಾಹ್ಮಣಾನಾಂ ಸ್ವಧರ್ಮಶ್ಚ ಕಥಿತೋ ಬ್ರಹ್ಮಣಾ ನೃಪ ॥ ೨೨ ॥

ವ್ರತಂ ಪತಿವ್ರತಾನಾಂ ಚ ಪತಿಸೇವಾ ಪರಂ ತಪಃ ।
ಯಥಾ ಪುತ್ರಃ ಪರಪತಿರೇಷ ಧರ್ಮಶ್ಚ ಯೋಷಿತಾಂ ॥ ೨೩ ॥

---

೧೯. ಮೂರು ಸಂಧ್ಯಾಕಾಲದಲ್ಲಿಯೂ ಶ್ರೀಹರಿಯನ್ನು ಪೂಜಿಸುವುದು ಮತ್ತು ಅಮೃತಕ್ಕಿಂತ ಮೇಲಾದ ಹರಿಯ ಪಾದೋದಕ ಮತ್ತು ನೈವೇದ್ಯವನ್ನು ಭಕ್ಷಿಸುವುದು ಬ್ರಾಹ್ಮಣನ ಸ್ವಧರ್ಮವೆನಿಸುವುದು.

೨೦. ಎಲೈ ರಾಜನೇ, ಶ್ರೀಹರಿಗೆ ನಿವೇದಿಸದಿರುವ ಅನ್ನವು ಮಲಕ್ಕೆ ಸದೃಶವೂ, ಜಲವು ಮೂತ್ರಸದೃಶವೂ ಆಗುವುದು. ಅವುಗಳನ್ನು ತಿನ್ನುವ ಬ್ರಾಹ್ಮಣರು ಮುಂದಿನ ಜನ್ಮದಲ್ಲಿ ಹಂದಿಯಾಗಿ ಹುಟ್ಟುವರು.

೨೧. ಬ್ರಾಹ್ಮಣರು ಎಲ್ಲ ದಿವಸಗಳಲ್ಲಿ ಊಟಮಾಡುವುದಾದರೂ ಏಕಾದಶಿಯ ದಿವಸದಲ್ಲೂ, ಕೃಷ್ಣಜನ್ಮಾಷ್ಟಮಿಯ ದಿನದಲ್ಲೂ, ಶಿವರಾತ್ರಿಯಲ್ಲೂ ಊಟ ಮಾಡುವುದಿಲ್ಲ.

೨೨. ಹಾಗೆಯೇ ರಾಮನವಮಿಯಲ್ಲೂ, ಇತರ ಪುಣ್ಯದಿನಗಳಲ್ಲೂ ಯತ್ನಪೂರ್ವಕವಾಗಿ ಊಟವನ್ನು ಬಿಡುವರು. ಎಲೈ ರಾಜೇಂದ್ರನೇ, ಇದು ಬ್ರಾಹ್ಮಣರ ಧರ್ಮವೆಂದು ಬ್ರಹ್ಮನು ನಿಯಮಿಸಿರುವನು.

೨೩. ಪತಿವ್ರತಾಸ್ತ್ರೀಯರಿಗೆ ಪತಿಸೇವೆಯೇ ಅತ್ಯುತ್ತಮವಾದ ವ್ರತ ಮತ್ತು ತಪಸ್ಸು. ಪರಪುರುಷನನ್ನು ಪುತ್ರನಿಗೆ ಸಮಾನವಾಗಿ ತಿಳಿಯುವುದೇ ಸ್ತ್ರೀಯರ ಶ್ರೇಷ್ಠವಾದ ಧರ್ಮವು.

ಪಾಲಯಂತಿ ಯಥಾ ಭೂಪಾಃ ಪ್ರಜಾಃ ಪುತ್ರಾನಿವೌರಸಾನ್ ।
ಪ್ರಜಾಸ್ತ್ರಿಯಂ ಚ ಪಶ್ಯಂತಿ ರಾಜಾನೋ ಮಾತರಂ ಯಥಾ ॥ ೭೪ ॥

ಯಜ್ಞಂ ಕುರ್ವಂತಿ ವಿಷ್ಣೋಃ ಸೇವನಂ ದೇವವಿಪ್ರಯೋಃ ।
ನಿವಾರಣಂ ಚ ದುಷ್ಟಾನಾಂ ಶಿಷ್ಟಾನಾಂ ಪ್ರತಿಪಾಲನಂ ॥ ೭೫ ॥

ಇತಿ ಧರ್ಮಃ ಕ್ಷತ್ರಿಯಾಣಾಂ ಕಥಿತೋ ಬ್ರಹ್ಮಣಾ ಪುರಾ ।
ವಾಣಿಜ್ಯಂ ಚೈವ ವೈಶ್ಯಾನಾಂ ಸ್ವಧರ್ಮೋ ಧರ್ಮಸಂಚಯಃ ॥ ೭೬ ॥

ಶೂದ್ರಾಣಾಂ ವಿಪ್ರಸೇವಾ ಚ ಪರೋ ಧರ್ಮೋ ವಿಧೀಯತೇ ।
ಸರ್ವನ್ಯಾಸೋ ಹರೌ ಭೂಪ ಧರ್ಮಃ ಸಂನ್ಯಾಸಿನಾಂ ಧ್ರುವಂ ॥ ೭೭ ॥

ರಕ್ತೈಕವಾಸಾ ದಂಡೀ ಚ ಬಿಭರ್ತಿ ಮೃತ್ಕಮಂಡಲುಂ ।
ಸರ್ವತ್ರ ಸಮದರ್ಶೀ ಚ ಸ್ಮರೇನ್ನಾರಾಯಣಂ ಸದಾ ॥ ೭೮ ॥

---

೭೪. ರಾಜರಾದವರು ತಮ್ಮ ಪ್ರಜೆಗಳನ್ನು ಸ್ವಂತ ಪುತ್ರರಂತೆ ಹೇಗೆ ಕಾಪಾಡುವರೋ ಹಾಗೆಯೇ ರಾಜರೂ, ಪ್ರಜೆಗಳೂ ಪರಸ್ತ್ರೀಯನ್ನು ತಾಯಿಯಂತೆ ತಿಳಿದು ರಕ್ಷಿಸುತ್ತಾರೆ.

೭೫. ವಿಷ್ಣುವಿನ ತೃಪ್ತಿಗಾಗಿ ಯಜ್ಞಯಾಗಾದಿಗಳನ್ನು ಮಾಡುವುದು, ದೇವ ಬ್ರಾಹ್ಮಣರ ಸೇವೆಮಾಡುವುದು, ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ಪಾಲಿಸುವುದೂ ಸಹ ಕ್ಷತ್ರಿಯರ ಧರ್ಮವು.

೭೬. ಈ ರೀತಿಯಾದ ಕ್ಷತ್ರಿಯ ಧರ್ಮವು ಪೂರ್ವದಲ್ಲಿ ಬ್ರಹ್ಮನಿಂದ ನಿರೂಪಿತವಾಗಿದೆ. ಅಂತೆಯೇ ವೈಶ್ಯರು ವ್ಯಾಪಾರಧರ್ಮದಲ್ಲಿ ನಿರತರಾಗಿ ಧರ್ಮ ಸಂಗ್ರಹಮಾಡಬೇಕು.

೭೭. ಶೂದ್ರರು ಬ್ರಾಹ್ಮಣರ ಸೇವೆಮಾಡುವುದೇ ಪರಮಧರ್ಮವೆಂದು ವಿಧಿಸಲ್ಪಟ್ಟಿದೆ. ಎಲೈ ರಾಜೇಂದ್ರನೇ, ಶ್ರೀಹರಿಯಲ್ಲಿ ಸರ್ವಸ್ವವನ್ನೂ ಅರ್ಪಿಸುವುದೇ ಸನ್ಯಾಸಿಗಳ ಪರಮಧರ್ಮವು.

೭೮. ಯತಿಯಾದವನು ಒಂದು ಕಾವಿಬಟ್ಟೆಯನ್ನುಟ್ಟು ದಂಡಧಾರಿಯಾಗಿ ಮಣ್ಣಿನ ಕಮಂಡಲುವನ್ನು ಹಿಡಿದುಕೊಂಡು ಎಲ್ಲದರಲ್ಲಿಯೂ ಸಮದೃಷ್ಟಿಯುಳ್ಳವನಾಗಿ ಸರ್ವದಾ ನಾರಾಯಣನನ್ನು ಸ್ತುತಿಸುತ್ತಿರಬೇಕು.

ಕರೋತಿ ಭ್ರಮಣಂ ನಿತ್ಯಂ ಗೇಹೇ ಗೇಹೇ ನ ತಿಷ್ಠತಿ ।
ವಿದ್ಯಾಮಂತ್ರಂ ಚ ಕಸ್ಮೈಚಿನ್ನ ದದಾತಿ ಚ ಲೋಭತಃ ॥ ೭೯ ॥

ಕರೋತಿ ನಾಶ್ರಮಂ ಭಿಕ್ಷುಃ ಕರೋತಿ ನಾನ್ಯವಾಸನಾಂ ।
ಕರೋತಿ ನಾನ್ಯಸಂಗಂ ಚ ನಿರ್ಮೋಹಃ ಸಂಗವರ್ಜಿತಃ ॥ ೮೦ ॥

ನ ಸ್ವಾದು ಭುಂಕ್ತೇ ಲೋಭಾಚ್ಚ ಸ್ತ್ರೀಮುಖಂ ನ ಹಿ ಪಶ್ಯತಿ ।
ನ ವಾಂಛಿತಂ ಭಕ್ಷ್ಯವಸ್ತು ಯಾಚತೇ ಗೃಹಿಣಂ ವ್ರತೀ ॥ ೮೧ ॥

ಇತಿ ಸಂನ್ಯಾಸಿನಾಂ ಧರ್ಮಮಿತ್ಯಾಹ ಕಮಲೋದ್ಭವಃ ।
ಇತಿ ತೇ ಕಥಿತಂ ಪುತ್ರ ಗಚ್ಛ ವತ್ಸ ಯಥಾಸುಖಂ ॥ ೮೨ ॥

---

೭೯. ಅವನು ನಿತ್ಯವೂ ಭಿಕ್ಷೆಗಾಗಿ ತಿರುಗುತ್ತಿರುವನೇ ಹೊರತು ಯಾವುದೊಂದು ಮನೆಯಲ್ಲಿಯೂ ಸ್ಥಿರವಾಗಿ ನಿಲ್ಲುವವನಲ್ಲ. ಸಂನ್ಯಾಸಿಯಾದವನು ಧನಲೋಭದಿಂದ ಯಾರೊಬ್ಬರಿಗೂ ವಿದ್ಯೆಯನ್ನಾಗಲೀ, ಮಂತ್ರವನ್ನಾಗಲೀ ಉಪದೇಶಿಸಕೂಡದು.

೮೦ ಮೋಹರಹಿತನೂ, ಸರ್ವಸಂಗಪರಿತ್ಯಾಗಿಯೂ ಆದ ಭಿಕ್ಷುವು ಎಲ್ಲಿಯೂ ಸ್ಥಿರವಾದ ಆಶ್ರಮಮಾಡಿಕೊಳ್ಳದೆ, ಯಾರೊಬ್ಬರ ಸಹವಾಸ ಸಂಸ್ಕಾರವನ್ನೂ ಪಡೆಯದೆ ನಿರ್ಲಿಪ್ತನಂತಿರಬೇಕು.

೮೧. ಅವನು ರುಚಿಯಾದ ಆಹಾರವನ್ನು ತಿನ್ನಕೂಡದು. ಲೋಭದಿಂದ ಸ್ತ್ರೀಯರ ಮುಖವನ್ನು ನೋಡಕೂಡದು. ಸಂಸಾರಿಯನ್ನು ಕುರಿತು ತನಗಿಷ್ಟವಾದ ಭಕ್ಷ್ಯವಸ್ತುವನ್ನು ಯಾಚಿಸಕೂಡದು.

೮೨. ಇದು ಸಂನ್ಯಾಸಿಗಳ ಧರ್ಮವೆಂದು ಕಮಲಸಂಭವನು ನಿರೂಪಿಸಿರುವನು. ಎಲೈ ಪುತ್ರನೇ, ಈ ರೀತಿಯಾಗಿ ಸಕಲಧರ್ಮವನ್ನೂ ನಿನಗೆ ತಿಳಿಸಿರುವೆನು. ಈಗ ನಿನಗೆ ಇಷ್ಟಬಂದಕಡೆಗೆ ಸುಖವಾಗಿ ಹೋಗು.

ಇತ್ಯುಕ್ತ್ವಾ ಚ ಮಹೇಂದ್ರಾಣೀ ವಿರರಾಮ ಚ ವರ್ತ್ಮನಿ ।
ಉವಾಚ ನಹುಷೋ ರಾಜಾ ಶಚೀಂ ವಕ್ರಪ್ರಕಂಧರಃ ॥ ೮೩ ॥

॥ ನಹುಷ ಉವಾಚ ॥

ತ್ವಯಾ ಯತ್ಕಥಿತಂ ದೇವಿ ಸರ್ವಂ ತತ್ತು ವಿಪರ್ಯಯಂ ।
ಯಥಾರ್ಥಧರ್ಮಂ ವೇದೋಕ್ತಂ ನಿಬೋಧ ಕಥಯಾಮಿ ತೇ ॥ ೮೪ ॥

ಕರ್ಮಣಾಂ ಫಲಭೋಗಶ್ಚ ಸರ್ವೇಷಾಂ ಸುರಸುಂದರಿ ।
ನೈವ ಸ್ವರ್ಗೇ ನ ಪಾತಾಲೇ ನಾನ್ಯದ್ವೀಪೇ ಶ್ರುತೌ ಶ್ರುತಂ ॥ ೮೫ ॥

ಕೃತ್ವಾ ಶುಭಾಶುಭಂ ಕರ್ಮ ಪುಣ್ಯಕ್ಷೇತ್ರೇ ಚ ಭಾರತೇ ।
ಅನ್ಯತ್ರ ತತ್ಫಲಂ ಭುಂಕ್ತೇ ಕರ್ಮೀ ಕರ್ಮನಿಬಂಧನಾತ್ ॥ ೮೬ ॥

---

೮೩. ಮಹೇಂದ್ರನ ಪತ್ನಿಯಾದ ಶಚೀದೇವಿಯು ಇಂತು ನುಡಿದು ಸುಮ್ಮನಾದಳು. ಆಗ ನಹುಷಚಕ್ರವರ್ತಿಯು ಕತ್ತನ್ನು ತಗ್ಗಿಸಿಕೊಂಡವನಾಗಿ ಶಚೀದೇವಿಯನ್ನು ಕುರಿತು ಈ ಮುಂದಿನ ಮಾತುಗಳನ್ನು ಹೇಳಿದನು.

೮೪. ನಹುಷ:—ಎಲೌ ದೇವಿಯೇ, ನೀನು ಹೇಳಿದ ಧರ್ಮವೆಲ್ಲವೂ ವೇದವಿರುದ್ಧವಾದುದು. ವೇದೋಕ್ತವಾದ ಯಥಾರ್ಥಧರ್ಮವನ್ನು ನಾನು ಹೇಳುವೆನು ಕೇಳುವವಳಾಗು.

೮೫. ಎಲೌ ಸುರಸುಂದರಿಯೇ, ಸಕಲ ಜನರೂ ಅವರವರ ಕರ್ಮಗಳ ಫಲವನ್ನು ಸ್ವರ್ಗದಲ್ಲಿ ಪಡೆಯುವರೆಂದಾಗಲೀ, ಪಾತಾಳದಲ್ಲಿ ಅನುಭವಿಸುವರೆಂದಾಗಲೀ, ಇತರ ದ್ವೀಪದಲ್ಲಿ ಪಡೆಯುವರೆಂದಾಗಲಿ ವೇದೋಕ್ತವಾಗಿಲ್ಲ.

೮೬. ಕರ್ಮಬಂಧನಕ್ಕೊಳಗಾದ ಜೀವಿಯು ಪುಣ್ಯಕ್ಷೇತ್ರವಾದ ಭರತಖಂಡದಲ್ಲಿ ಶುಭಾಶುಭಕರ್ಮಗಳನ್ನು ಮಾಡಿ ಅದರ ಫಲವನ್ನು ಬೇರೆ ಕಡೆ ಅನುಭವಿಸುವನು.

ಹಿಮಾಲಯಾದಾಸಮುದ್ರಂ ಪುಣ್ಯಕ್ಷೇತ್ರಂ ಚ ಭಾರತಂ ।
ಶ್ರೇಷ್ಠಂ ಸರ್ವಸ್ಥಲಾನಾಂ ಚ ಮುನೀನಾಂ ಚ ತಪಃಸ್ಥಲಂ ॥ ೮೭ ॥

ತತ್ರ ಲಬ್ಧ್ವಾ ಜನ್ಮ ಜೀವೀ ವಂಚಿತೋ ವಿಷ್ಣುಮಾಯಯಾ ।
ಶಶ್ವತ್ಕರೋತಿ ವಿಷಯಂ ವಿಹಾಯ ಸೇವನಂ ಹರೇಃ ॥ ೮೮ ॥

ಕೃತ್ವಾ ತತ್ರ ಮಹತ್ಪುಣ್ಯಂ ಸ್ವರ್ಗಂ ಗಚ್ಛತಿ ಪುಣ್ಯವಾನ್ ।
ಗೃಹೀತ್ವಾ ಸರ್ವಕನ್ಯಾಶ್ಚ ಚಿರಂ ಸ್ವರ್ಗೇ ಪ್ರಮೋದತೇ ॥ ೮೯ ॥

ಸ್ವರ್ಗಮಾಗಚ್ಛತಿ ನರೋ ವಿಹಾಯ ಮಾನವೀಂ ತನುಂ ।
ಸ್ವಶರೀರೇಣಾಗತೋಽಹಂ ಮತ್ಪುಣ್ಯಂ ಪಶ್ಯ ಸುಂದರಿ ॥ ೯೦ ॥

ಅನೇಕಜನ್ಮಪುಣ್ಯೇನ ಚಾಗತಃ ಸ್ವರ್ಗಮೀಪ್ಸಿತಂ ।
ತತಃ ಕಿಂ ಕೇನ ಪುಣ್ಯೇನ ದರ್ಶನಂ ಮೇ ತ್ವಯಾ ಸಹ ॥ ೯೧ ॥

---

೮೭. ಹಿಮಾಲಯ ಪರ್ವತದಿಂದ ದಕ್ಷಿಣ ಸಮುದ್ರದವರೆಗಿರುವ ಪುಣ್ಯಕ್ಷೇತ್ರವಾದ ಭಾರತವು ಎಲ್ಲ ದೇಶಗಳಿಗೂ ಮೇಲಾದುದಲ್ಲದೆ ಮುನಿಗಳು ತಪಸ್ಸು ಮಾಡುವ ಸ್ಥಳವಾಗಿದೆ.

೮೮. ಅಂಥ ಕ್ಷೇತ್ರದಲ್ಲಿ ಜನ್ಮವನ್ನು ಪಡೆದ ಜೀವಿಯು ವಿಷ್ಣುಮಾಯೆಗೊಳಗಾಗಿ, ಶ್ರೀಹರಿಯ ಸೇವೆಯನ್ನು ಬಿಟ್ಟು ವಿಷಯಸುಖಗಳಲ್ಲಿ ನಿರತನಾಗುವನು.

೮೯. ಪುಣ್ಯವಂತನು ಭರತಖಂಡದಲ್ಲಿ ವಿಶೇಷ ಪುಣ್ಯವನ್ನು ಮಾಡಿ ಸ್ವರ್ಗಕ್ಕೆ ಹೋಗುವನು. ಅಲ್ಲಿ ಸಕಲ ದೇವಕನ್ನಿಕೆಯರೊಡಗೂಡಿ ಚಿರಕಾಲ ಪ್ರಮೋದದಿಂದಿರುವನು.

೯೦. ಮನುಜರೆಲ್ಲರೂ ತಮ್ಮ ಮಾನವನ ದೇಹವನ್ನು ಬಿಟ್ಟು ಸ್ವರ್ಗಕ್ಕೆ ಬರುವರು. ಎಲೌ ಸುಂದರಿಯೇ, ನಾನು ನನ್ನ ಮಾನುಷ ಶರೀರದಿಂದಲೇ ಇಲ್ಲಿಗೆ ಬಂದಿದ್ದೇನೆ. ನನ್ನ ಪುಣ್ಯವೆಷ್ಟಿರಬೇಕು ಯೋಚಿಸಿನೋಡು.

೯೧. ಅನೇಕ ಜನ್ಮಗಳ ಪುಣ್ಯದಿಂದ ನನಗಭೀಪ್ಸಿತವಾದ ಸ್ವರ್ಗಕ್ಕೆ ಬಂದಿದ್ದೇನೆ. ಅದರಲ್ಲಿಯೂ ನನಗೆ ನಿನ್ನ ದರ್ಶನವು ಲಭಿಸಿದುದು ಮಹತ್ಪುಣ್ಯದ ಫಲವು.

ನ ಹಿ ಕರ್ಮಸ್ಥಲಮಿದಂ ಸ್ವರ್ಭೋಗಸ್ಥಲಮೇವ ಚ ।
ಭೋಗಸ್ಥಲೇ ಭೋಗವಸ್ತು ನ ಹಿ ತ್ಯಕ್ತುಂ ಪ್ರಶಸ್ಯತೇ ॥ ೯೨ ॥

ಭಾವಾನುರಕ್ತಾ ರಸಿಕಾ ಭೋಗ್ಯಾ ತ್ವಂ ಭೋಗಿನಾಮಿಹ ।
ದ್ರವ್ಯಮಸ್ವಾಮಿಕಂ ಭೋಗ್ಯಂ ಸುಖಂ ತ್ಯಜತಿ ಮಂದಧೀಃ ॥ ೯೩ ॥

ಅವಿರೋಧಸುಖತ್ಯಾಗೀ ಪಶುರೇವ ನ ಸಂಶಯಃ ।
ಗಚ್ಛ ಕಾಂತೇ ಗೃಹಂ ಗತ್ವಾ ಕುರು ತಲ್ಪಂ ಮನೋಹರಂ ॥ ೯೪ ॥

ರಮಣೀಯಂ ಚ ರಹಸಿ ವರಂ ರತಿಕರಂ ಪರಂ ।
ತ್ಯಜ ದ್ವೈಧಂ ಚ ಮನಸೋ ನಿಶ್ಚಿತಂ ವರವರ್ಣಿನಿ ॥ ೯೫ ॥

ವರಾನನೇ ಮಯಾ ಸಾರ್ಧಂ ಮೋದಸ್ವ ವರಮಂದಿರೇ ।
ಅಮೂಲ್ಯರತ್ನಮಾಲಾಂ ಚ ಮಣಿರಾಜವಿರಾಜಿತಾಂ ॥ ೯೬ ॥

---

೯೨. ಈ ಸ್ವರ್ಗವು ಕರ್ಮಕ್ಷೇತ್ರವಲ್ಲ. ನಾವು ಮಾಡಿದ ಪುಣ್ಯಕರ್ಮಗಳ ಫಲವನ್ನು ಉಪಭೋಗಿಸುವ ಸ್ಥಳ. ಇಂಥ ಭೋಗಸ್ಥಳದಲ್ಲಿ ಭೋಗ್ಯವಸ್ತುವನ್ನು ಬಿಡುವುದು ಅಷ್ಟು ಉಚಿತವಲ್ಲ.

೯೩. ಭಾವಾನುರಕ್ತಳೂ, ರಸಿಕಳೂ ಆದ ನೀನು ಭೋಗಿಗಳ ಉಪಭೋಗಕ್ಕೆ ಯೋಗ್ಯಳಾಗಿರುವೆ. ಭೋಗಾರ್ಹವೂ, ಸ್ವಾಮಿರಹಿತವೂ ಆದ ವಸ್ತುವನ್ನು ಮಂದಬುದ್ಧಿಯುಳ್ಳವನು ಮಾತ್ರ ಬಿಡುತ್ತಾನೆ.

೯೪. ಧರ್ಮವಿರುದ್ಧವಲ್ಲದ ಸುಖವನ್ನು ಬಿಡುವವನು ಪಶುವೆಂಬುದರಲ್ಲಿ ಸಂಶಯವಿಲ್ಲ. ಎಲೌ ಕಾಂತೆಯೇ, ನೀನು ಮನೆಗೆ ಹೋಗಿ ಮನೋಹರವಾದ ಹಾಸಿಗೆಯನ್ನು ಸಿದ್ಧಪಡಿಸು.

೯೫. ರಮಣೀಯವೂ, ಸುಖಕರವೂ ಆದ ಶಯನವನ್ನು ಏಕಾಂತದಲ್ಲಿ ಸಿದ್ಧಗೊಳಿಸು ಎಲೌ ಸುಂದರಾಂಗಿಯೇ, ಮನಸ್ಸಿನ ಭಿನ್ನಭಾವನೆಗಳನ್ನು ನಿಶ್ಚಯವಾಗಿಯೂ ದೂರಮಾಡು.

೯೬–೯೭. ಎಲೌ ಚಂದ್ರಮುಖಿಯೇ, ನನ್ನೊಡನೆ ಸುಂದರಮಂದಿರದಲ್ಲಿ ಆನಂದಪಡು. ಶ್ರೇಷ್ಠಮಣಿಗಳಿಂದ ನಿರ್ಮಿತವಾಗಿ ಲಕ್ಷ್ಮೀದೇವಿಯ ವಕ್ಷಃಸ್ಥಲದಲ್ಲಿ ಶೋಭಿಸುವ ಅಮೂಲ್ಯರತ್ನಮಾಲೆಯನ್ನು ನಿನಗಾಗಿ ಬೇಡಿ ತಂದುಕೊಡುವೆನು.

ಭಿಕ್ಷಾಂ ಕೃತ್ವಾ ಚ ದಾಸ್ಯಾಮಿ ಲಕ್ಷ್ಮೀವಕ್ಷಸಿ ಶೋಭಿತಾಂ |
ಮಣಿಂ ಚಾನಂತಶಿರಸಃ ಸರ್ವೇಷಾಮತಿದುರ್ಲಭಂ || ೯೭ ||

ದುಷ್ಪ್ರಾಪ್ಯಂ ತ್ರಿಷು ಲೋಕೇಷು ತುಭ್ಯಂ ದಾಸ್ಯಾಮಿ ಸುಂದರಿ |
ಮಣಿರತ್ನಂ ಕೌಸ್ತುಭಂ ಚ ಯೋ ನಾರಾಯಣವಕ್ಷಸಿ || ೯೮ ||

ಭಿಕ್ಷಾಂ ಕೃತ್ವಾ ತು ದಾಸ್ಯಾಮಿ ಕೃತ್ವಾ ನಾರಾಯಣವ್ರತಂ |
ಚಂದ್ರಶೇಖರಮೌಲೇಶ್ಚ ಯದರ್ಧಂ ಚಂದ್ರಭೂಷಣಂ || ೯೯ ||

ಜರಾಮೃತ್ಯುವ್ಯಾಧಿಹರಂ ಶಸ್ತಂ ಕ್ರೀಡಾಕರಂ ವರಂ |
ಅತೀವ ವಿಶ್ವದುಷ್ಪ್ರಾಪ್ಯಂ ವಿಶ್ವವಂದ್ಯಂ ಚ ಸುಂದರಂ || ೧೦೦ ||

ವಿಶ್ವನಾಥವ್ರತಂ ಕೃತ್ವಾ ತುಭ್ಯಂ ದಾಸ್ಯಾಮಿ ನಿಶ್ಚಿತಂ |
ದಾಸ್ಯಾಮಿ ತೇ ಶ್ರೀಸೂರ್ಯಸ್ಯ ಮಣಿಶ್ರೇಷ್ಠಂ ಸ್ಯಮಂತಕಂ || ೧೦೧ ||

ಭಕ್ತ್ಯಾ ಸೂರ್ಯವ್ರತಂ ಕೃತ್ವಾ ತ್ರಿಷು ಲೋಕೇಷು ದುರ್ಲಭಂ |
ಅಷ್ಟೌ ಭಾರಾನ್ಸುವರ್ಣಂ ಚ ಯಶ್ಚ ನಿತ್ಯಂ ಪ್ರಸೂಯತೇ || ೧೦೨ ||

ಎಲೌ ಸುಂದರಿಯೇ ಮೂರುಲೋಕಗಳಲ್ಲಿಯೂ ಎಲ್ಲರಿಗೂ ದುರ್ಲಭವಾದ ಅನಂತನ ಫಣಾಮಣಿಯನ್ನು ನಿನಗಾಗಿ ಬೇಡಿ ತರುವೆನು. ನಾರಾಯಣನ ವಕ್ಷಃಸ್ಥಳದಲ್ಲಿರುವ ಕೌಸ್ತುಭರತ್ನವನ್ನಾದರೂ ನಿನಗೆ ತಂದೀಯುವೆನು.

೯೯–೧೦೦. ಅದಕ್ಕಾಗಿ ನಾರಾಯಣವ್ರತವನ್ನಾಚರಿಸಿ ಭಿಕ್ಷೆಯನ್ನಾದರೂ ಬೇಡುವೆನು. ಜರಾಮರಣವ್ಯಾಧಿಗಳನ್ನು ಪರಿಹರಿಸುವ ಕ್ರೀಡೆಗೆ ಸಾಧನವಾದ ವಿಶ್ವವಂದ್ಯವೂ, ಸರ್ವದುರ್ಲಭವೂ ಅತ್ಯಂತ ಸುಂದರವೂ ಆದ ಚಂದ್ರಶೇಖರನ ಶಿರಸ್ಸಿನಲ್ಲಿರುವ ಅರ್ಧಚಂದ್ರಾಭರಣವನ್ನು ನಿನಗಾಗಿ ಬೇಡಿ ತರುವೆನು.

೧೦೧–೧೦೨. ಅದಕ್ಕಾಗಿ ವಿಶ್ವನಾಥವ್ರತವನ್ನಾದರೂ ಮಾಡಿ ನಿನಗೆ ನಿಶ್ಚಯವಾಗಿಯೂ ತಂದೀಯುವೆನು. ನಿತ್ಯವೂ ಎಂಟು ಭಾರ ಸುವರ್ಣವನ್ನು ಹೆರುವ, ತ್ರಿಲೋಕದಲ್ಲಿಯೂ ದುರ್ಲಭವಾದ ಶ್ರೇಷ್ಠವಾದ ಸ್ಯಮಂತಕಮಣಿಯನ್ನು ನೀನು ಬಯಸಿದರೆ ಭಕ್ತಿಪೂರ್ವಕವಾಗಿ ಸೂರ್ಯವ್ರತವನ್ನಾದರೂ ಮಾಡಿ ತಂದು ಕೊಡುವೆನು.

ಜರಾಮೃತ್ಯುಹರಂ ಚೈವ ಪರಂ ಕ್ರೀಡಾಕರಂ ಪ್ರಿಯೇ ।
ಅಮೂಲ್ಯರತ್ನನಿರ್ಮಾಣಂ ಪಾತ್ರರತ್ನಂ ಮನೋಹರಂ ॥ ೧೦೩ ॥

ಸಂತತಂ ಮಧುಪೂರ್ಣಂ ಚ ದಾಸ್ಯಾಮಿ ಮದನಸ್ಯ ಚ ।
ಅಮೂಲ್ಯರತ್ನನಿರ್ಮಾಣಂ ಸೂರ್ಯತುಲ್ಯಂ ಚ ತೇಜಸಾ ॥ ೧೦೪ ॥

ನಾನಾಚಿತ್ರವಿಚಿತ್ರಾಢ್ಯಂ ನಿರ್ಮಾಣಮೀಶ್ವರೇಚ್ಛಯಾ ।
ನಿರ್ಮಲಂ ಮಂಡಲಾಕಾರಂ ಮಣಿರಾಜವಿರಾಜಿತಂ । ೧೦೫ ॥

ಹಸ್ತಲಕ್ಷಪರಿಮಿತಂ ಚತುರಸ್ರಂ ಚ ಸುಂದರಂ ।
ಪದ್ಮಾ ಪದ್ಮಾಸನಂ ಶ್ರೇಷ್ಠಂ ಪ್ರೇಷ್ಠಂ ತಸ್ಯಾಃ ಸುದುರ್ಲಭಂ ॥ ೧೦೬ ॥

ಧ್ರುವಂ ತುಭ್ಯಂ ಪ್ರದಾಸ್ಯಾಮಿ ಕೃತ್ವಾ ಪದ್ಮಾಲಯಾವ್ರತಂ ।
ಇತ್ಯೇವಮುಕ್ತ್ವಾ ನಹುಷಃ ಕೃತ್ವಾ ವರ್ತ್ಮನಿರೋಧನಂ ।
ಪುನಃ ಪಪಾತ ಚರಣೇ ಮಹೇಂದ್ರಾಣ್ಯಾ ಮುಹುರ್ಮುಹುಃ ॥ ೧೦೭ ॥

ನೃಪಸ್ಯ ವಚನಂ ಶ್ರುತ್ವಾ ಶುಷ್ಕಕಂಠೋಷ್ಠತಾಲುಕಾ ।
ತಮುವಾಚ ಮಹೇಂದ್ರಾಣೀ ಸ್ಮಾರಂ ಸ್ಮಾರಂ ಗುರುಂ ಹರಿಂ ॥ ೧೦೮ ॥

೧೦೩–೧೦೭. ಎಲೌ ಪ್ರಿಯಳೇ, ಆ ಮಣಿಯು ಜರಾಮರಣಗಳನ್ನು ಪರಿಹರಿಸುವುದಲ್ಲದೆ ಕ್ರೀಡಾಯೋಗ್ಯವಾಗಿರುವುದು. ಅಮೂಲ್ಯರತ್ನನಿರ್ಮಿತವೂ, ಸರ್ವದಾ ಮಧುಪೂರ್ಣವೂ ಆದ ಮನ್ಮಥನ ಮಧುಪಾನ ಪಾತ್ರವನ್ನು ತಂದು ಕೊಡುವೆನು. ಶ್ರೇಷ್ಠರತ್ನಗಳಿಂದ ನಿರ್ಮಿತವೂ, ತೇಜಸ್ಸಿನಲ್ಲಿ ಸೂರ್ಯನಿಗೆ ಸಮಾನವೂ, ನಾನಾಚಿತ್ರಗಳಿಂದ ಚಿತ್ರಿತವೂ, ಈಶ್ವರೇಚ್ಛಾಮಾತ್ರದಿಂದ ನಿರ್ಮಿತವೂ ನಿರ್ಮಲವೂ, ಮಂಡಲಾಕಾರವೂ, ಮಣಿಖಚಿತವೂ, ನೂರುಮೊಳದಷ್ಟು ಪರಿಮಾಣವೂ, ಚತುರಸ್ರಾಕಾರವೂ ಆದ ಪದ್ಮಾಸನವನ್ನು ಬಯಸಿದರೆ ಪದ್ಮಾಲಯಳಾದ ಲಕ್ಷ್ಮಿಯ ವ್ರತವನ್ನಾದರೂ ಮಾಡಿ ಸುಂದರಿಯಾದ ನಿನಗೆ ತಂದೀಯುವೆನು. ಹೀಗೆ ಹೇಳುತ್ತಾ ಶಚೀದೇವಿಯ ಮಾರ್ಗವನ್ನು ಅಡ್ಡಗಟ್ಟಿ ನಿಂತು ಪುನಃ ಪುನಃ ಶಚೀದೇವಿಯ ಚರಣಕಮಲಗಳ ಮೇಲೆ ಬೀಳಲಾರಂಭಿಸಿದನು.

೧೦೮. ರಾಜನಾಡಿದ ಮಾತುಗಳನ್ನು ಕೇಳಿ ಒಣಗಿಹೋದ ಕಂಠತಾಲುಗಳುಳ್ಳ ಶಚೀದೇವಿಯು ತನ್ನ ಪತಿಯಾದ ದೇವೇಂದ್ರನನ್ನು ಮನಸ್ಸಿನಲ್ಲಿಯೇ ಸ್ಮರಿಸಿಕೊಳ್ಳುತ್ತ ಅವನನ್ನು ಕುರಿತು ಇಂತೆಂದಳು.

|| ಶಚ್ಯುವಾಚ ||

ಅಚೇತನಸ್ಯ ಮೂಢಸ್ಯ ಕಾರ್ಯಾಕಾರ್ಯಮಜಾನತಃ |
ಶ್ರೋಷ್ಯಾಮ್ಯದ್ಯ ಕತಿವಿಧಾಂ ಕಥಾಂ ಕಾಮಾತುರಸ್ಯ ಚ || ೧೦೯ ||

ಮಧುಮತ್ತಃ ಸುರಾಮತ್ತಃ ಕಾಮಮತ್ತೋ ವಿಚೇತನಃ |
ಮೃತ್ಯುಂ ನ ಗಣಯೇತ್ಕಾಮೀ ಕಾಮೇನ ಹೃತಮಾನಸಃ || ೧೧೦ ||

ತ್ಯಜ ಮಾಮದ್ಯ ಹೇ ಮತ್ತ ಮಾತೃತುಲ್ಯಾಂ ರಜಸ್ವಲಾಂ |
ಋತೋಃ ಪ್ರಥಮೋ ದಿವಸೋ ಹ್ಯದ್ಯ ಹೇ ನೃಪ ಮೇ ಧ್ರುವಂ || ೧೧೧ ||

ಪ್ರಥಮೇ ದಿವಸೇ ಸ್ತ್ರೀ ಚ ಚಾಂಡಾಲೀ ಸಾ ರಜಸ್ವಲಾ |
ದ್ವಿತೀಯೇ ದಿವಸೇ ಮ್ಲೇಚ್ಛಾ ತೃತೀಯೇ ರಜಕೀ ತಥಾ || ೧೧೨ ||

ಶುದ್ಧಾ ಭರ್ತುಶ್ಚತುರ್ಥೇಽಹ್ನಿ ನ ಶುದ್ಧಾ ದೈವಪೈತ್ರಯೋಃ |
ಅಸಚ್ಛೂದ್ರಾಸಮಾ ಸಾ ಚ ತದ್ದಿನೇ ಚ ಪರಂ ಪ್ರತಿ || ೧೧೩ ||

೧೦೯-೧೧೦. ಶಚೀದೇವಿ :—ಅಚೇತನನೂ, ಮೂಢನೂ, ಕಾರ್ಯಾಕಾರ್ಯವನ್ನು ಅರಿಯದವನೂ ಆದ ಕಾಮಾತುರನ ಎಂತೆಂತಹ ಮಾತುಗಳನ್ನು ನಾನಿಂದುಕೇಳಬೇಕಾಯಿತು! ಮಧುಪಾನ ಸುರಾಪಾನಗಳಿಂದ ಮದಿಸಿದವರೂ, ಕಾಮೋದ್ರೇಕದಿಂದ ಮದಿಸಿದವರೂ ಅಚೇತನರಾಗುವರು. ಕಾಮಾಹತಚೇತನನಾದ ಕಾಮಿಯು ಮೃತ್ಯುವನ್ನೂ ಸಹ ಲೆಕ್ಕಿಸುವುದಿಲ್ಲ.

೧೧೧. ಎಲೈ ಮದೋನ್ಮತ್ತನೇ, ನಿನ್ನ ತಾಯಿಗೆ ಸಮಾನಳೂ, ಇಂದು ರಜಸ್ವಲೆಯೂ ಆಗಿರುವ ನನ್ನನ್ನು ಬಿಟ್ಟುಬಿಡು. ಎಲೈ ರಾಜನೇ, ಈ ದಿವಸ ತಾನೇ ನಾನು ರಜಸ್ವಲೆಯಾಗಿದ್ದೇನೆ

೧೧೨. ರಜಸ್ವಲೆಯಾದ ಹೆಂಗಸು ಮೊದಲನೆಯ ದಿವಸದಲ್ಲಿ ಚಂಡಾಲಿಗೆ ಸಮಳೆನಿಸುವಳು. ಎರಡನೆಯ ದಿವಸ ಮ್ಲೇಚ್ಛಳೂ, ಮೂರನೆಯ ದಿವಸ ಅಗಸಿತಿಯೂ ಎನಿಸುವಳು.

೧೧೩. ನಾಲ್ಕನೆಯ ದಿವಸ ಪತಿಗೆ ಮಾತ್ರ ಶುದ್ಧಳೆನಿಸುವಳೇ ಹೊರತು ದೇವಪಿತೃಕಾರ್ಯಗಳಿಗೆ ಶುದ್ಧಳೆನಿಸುವುದಿಲ್ಲ. ಆ ದಿನವೂ ಸಹ ಪರಪುರುಷನಿಗೆ ಆಕೆಯು ದುಷ್ಟಶೂದ್ರ ಸ್ತ್ರೀಯಂತೆನಿಸುವಳು.

ಪ್ರಥಮೇ ದಿವಸೇ ಕಾಂತಾಂ ಯೋ ಹಿ ಗಚ್ಛೇದ್ರಜಸ್ವಲಾಂ ।
ಬ್ರಹ್ಮಹತ್ಯಾಚತುರ್ಥಾಂಶಂ ಲಭತೇ ನಾತ್ರ ಸಂಶಯಃ ।
ಸ ಪುಮಾನ್ನ ಹಿ ಕರ್ಮಾರ್ಹೋ ದೈವೇ ಪಿತ್ರ್ಯೇ ಚ ಕರ್ಮಣಿ ॥ ೧೧೪ ॥

ಅಧಮಃ ಸ ಚ ಸರ್ವೇಷಾಂ ನಿಂದಿತಶ್ಚಾಯಶಸ್ಕರಃ ।
ದ್ವಿತೀಯೇ ದಿವಸೇ ನಾರೀಂ ಯೋ ವ್ರಜೇಚ್ಚ ರಜಸ್ವಲಾಂ ॥ ೧೧೫ ॥

ಕಾಮತಃ ಪರಿಪೂರ್ಣಶ್ಚ ಗೋಹತ್ಯಾಂ ಲಭತೇ ಧ್ರುವಂ ।
ಆಜೀವನಂ ನಾಧಿಕಾರೀ ಪಿತೃವಿಪ್ರಸುರಾರ್ಚನೇ ॥ ೧೧೬ ॥

ಅಮನುಷ್ಯೋಽಯಶಸ್ಯಃ ಸ್ಯಾದಿತ್ಯಾಂಗಿರಸಭಾಷಿತಂ ।
ತೃತೀಯೇ ದಿವಸೇ ಜಾಯಾಂ ಯೋ ಹಿ ಗಚ್ಛೇದ್ರಜಸ್ವಲಾಂ ॥ ೧೧೭ ॥

---

೧೧೪ ಯಾವನು ಮೊದಲನೆಯ ದಿವಸ ರಜಸ್ವಲೆಯಾದ ಕಾಂತೆಯೊಡನೆ ಬೆರೆಯುವನೋ ಅವನು ಬ್ರಹ್ಮಹತ್ಯೆಯ ನಾಲ್ಕನೆಯ ಒಂದು ಭಾಗ ಪಾಪಕ್ಕೆ ಗುರಿಯಾಗುವುದರಲ್ಲಿ ಸಂಶಯವಿಲ್ಲ. ಆ ಪುರುಷನು ದೇವಪಿತೃಕಾರ್ಯಗಳನ್ನು ಮಾಡಲು ಅನರ್ಹನಾಗುವನು.

೧೧೫. ಯಾವನು ಎರಡನೆಯ ದಿವಸ ರಜಸ್ವಲೆಯೊಡನೆ ಸಂಗಮಿಸುವನೋ ಅವನು ಎಲ್ಲರಿಂದಲೂ ನಿಂದಿತನಾಗಿ ಅಧಮನೆನಿಸಿಕೊಂಡು ಅಪಕೀರ್ತಿಗೆ ಪಾತ್ರನಾಗುವನು.

೧೧೬. ಕಾಮಪರಿಪೂರ್ಣನಾದ ಅವನು ಗೋಹತ್ಯಾದೋಷಕ್ಕೆ ಗುರಿಯಾಗುವುದಲ್ಲದೆ ಬದುಕಿರುವವರೆಗೂ ಪಿತೃಗಳ ಮತ್ತು ದೇವತೆಗಳ ಕಾರ್ಯಕ್ಕೂ ಬ್ರಾಹ್ಮಣರ ಸೇವೆಗೂ ಅನರ್ಹನಾಗುವನು.

೧೧೭. ಯಾವನು ರಜಸ್ವಲೆಯಾದ ಮೂರನೆಯ ದಿವಸ ತನ್ನ ಪತ್ನಿಯ ಸಂಗಮಾಡುವನೋ ಅವನು ಅಪಕೀರ್ತಿಗೊಳಗಾಗುವುದಲ್ಲದೆ, ಮನುಷ್ಯರ ಗಣನೆಗೇ ಸೇರುವುದಿಲ್ಲವೆಂದು ಅಂಗಿರಸಮಹರ್ಷಿಯು ನುಡಿದಿರುವನು.

ಸ ಮೂಢೋ ಭ್ರೂಣಹತ್ಯಾಂ ಚ ಲಭತೇ ನಾತ್ರ ಸಂಶಯಃ ।
ಪೂರ್ವವತ್ಪತಿತಃ ಸೋಽಪಿ ನ ಚಾರ್ಹಃ ಸರ್ವಕರ್ಮಸು ॥ ೧೧೮ ॥

ಅಸಚ್ಛೂದ್ರಾ ಚತುರ್ಥೇಽಹ್ನಿ ನ ಗಚ್ಛೇತ್ತಾಂ ವಿಚಕ್ಷಣಃ ।
ಯದಿ ಮಾಂ ಮಾತರಂ ಮೂಢ ಗ್ರಹೀಷ್ಯಸಿ ಬಲೇನ ಚ ॥ ೧೧೯ ॥

ಋತಾವತೀತೇ ದಿವಸೇ ಗಮನಂ ಚ ಕರಿಷ್ಯಸಿ ।
ಶಚ್ಯಾಶ್ಚ ವಚನಂ ಶ್ರುತ್ವಾ ಪ್ರಹಸ್ಯ ನಹುಷಸ್ತಥಾ ॥ ೧೨೦ ॥

ಉವಾಚ ಮಧುರಂ ಶಾಂತಃ ಶಕ್ರಕಾಂತಾಂ ಚ ಸುವ್ರತಾಂ ।
ದೇವಪತ್ನೀ ಸದಾ ಶುದ್ಧಾ ತನ್ನ್ಯೂನಂ ಮಾನವಂ ಪ್ರತಿ ॥ ೧೨೧ ॥

---

೧೧೮. ಆ ಮೂರ್ಖನು ಭ್ರೂಣಹತ್ಯಾಪಾಪಕ್ಕೆ ಗುರಿಯಾಗುವುದಲ್ಲದೆ ಹಿಂದಿನವರಂತೆ ಪತಿತನಾಗಿ ದೇವ ಪಿತೃಕಾರ್ಯಗಳಿಗೆ ಅನರ್ಹನಾಗುವುದರಲ್ಲಿ ಸಂಶಯವಿಲ್ಲ.

೧೧೯–೧೨೧. ರಜಸ್ವಲೆಯಾದ ನಾಲ್ಕನೆಯ ದಿವಸವೂ ಸಹ ಹೆಂಗಸು ದುಷ್ಟ ಶೂದ್ರಳಿಗೆ ಸಮಾನಳಾದುದರಿಂದ ಬುದ್ಧಿವಂತನಾದವನು ಅವಳೊಡನೆ ಸೇರಕೂಡದು. ಎಲೈ ಮೂಢನೇ, ನಿನಗೆ ತಾಯಿಯ ಸಮಾನಳಾದ ನನ್ನನ್ನು ಬಲಾತ್ಕಾರದಿಂದ ಉಪಭೋಗಿಸುವೆಯಾದರೆ ಋತುವು ಕಳೆದ ದಿವಸದಲ್ಲಾದರೂ ನನ್ನ ಸಂಗಮಮಾಡು (ಇದು ಆಗ ನಹುಷನಿಂದ ತಪ್ಪಿಸಿಕೊಳ್ಳುವುದಕ್ಕೆ ಆಡಿದ ಮಾತು). ಶಚೀದೇವಿಯ ಈ ಮಾತನ್ನು ಕೇಳಿ ನಹುಷನು ನಸುನಕ್ಕು ವ್ರತಪರಳಾದ ಆ ಇಂದ್ರಪತ್ನಿಯನ್ನು ಕುರಿತು ಮಧುರವಾದ ಮಾತನ್ನಾಡಿದನು. ಎಲೌ ಶಚಿಯೇ, ದೇವಪತ್ನಿಯರು ಸರ್ವದಾ ಪರಿಶುದ್ಧರು. ರಜಸ್ವಲಾದೋಷಗಳೆಲ್ಲ ಮನುಷ್ಯರಿಗೆ ಮಾತ್ರ ಸಂಭವಿಸುವುವು ದೇವಸ್ತ್ರೀಯರಿಗಲ್ಲ.

ಶಯನೇ ಭೋಜನೇ ದೇವೀ ನಾಶುದ್ಧಾ ಮಾನವಂ ಪ್ರತಿ ।
ರಜಸ್ವಲಾಯಾಃ ಸಂಭೋಗೇ ಕರ್ಮಕ್ಷೇತ್ರೇ ಚ ಭಾರತೇ ॥ ೧೨೨ ॥

ತ್ವಯೋಕ್ತಂ ಚ ಭವೇತ್ಪಾಪಂ ನಾತ್ರ ದುರ್ಗೇ ಚ ಸುಂದರಿ ।
ಕರ್ಮಕ್ಷೇತ್ರೇಽಪಿ ತತ್ಕರ್ಮ ಯದ್ವೇದೋಕ್ತಂ ಶುಭಾಶುಭಂ ॥ ೧೨೩ ॥

ನ ಭವೇದ್ವೈಷ್ಣವಾನಾಂ ಚ ಜ್ವಲತಾಂ ಬ್ರಹ್ಮತೇಜಸಾ ।
ಯಥಾ ಪ್ರದೀಪ್ತೇ ವಹ್ನೌ ಚ ಶುಷ್ಕಾಣಿ ಚ ತೃಣಾನಿ ಚ ।
ಭವಂತಿ ಭಸ್ಮೀಭೂತಾನಿ ತಥಾ ಪಾಪಾನಿ ವೈಷ್ಣವೇ ॥ ೧೨೪ ॥

ವಹ್ನಿಸೂರ್ಯಬ್ರಾಹ್ಮಣೇಭ್ಯಸ್ತೇಜೀಯಾನ್ವೈಷ್ಣವಃ ಸದಾ ॥ ೧೨೫ ॥

ರಕ್ಷಿತೋ ವಿಷ್ಣುಚಕ್ರೇಣ ಸ್ವತಂತ್ರೋ ಮತ್ತಕುಂಜರಃ ।
ನ ವಿಚಾರೋ ನ ಭೋಗಶ್ಚ ವೈಷ್ಣವಾನಾಂ ಸ್ವಕರ್ಮಣಾಂ ॥ ೧೨೬ ॥

೧೨೨-೧೨೪. ದೇವತಾಸ್ತ್ರೀಯು ಶಯನಕ್ಕಾಗಲೀ, ಭೋಜನಕ್ಕಾಗಲೀ, ಮಾನವನಿಗೆ ಅಶುದ್ಧಳಾಗುವುದಿಲ್ಲ. ಎಲೌ ಸುಂದರಿಯೇ, ನೀನು ಹೇಳಿದ ರಜಸ್ವಲಾ ಸಂಭೋಗದ ಪಾಪವು ಕರ್ಮಕ್ಷೇತ್ರವಾದ ಭಾರತದಲ್ಲಿ ಬರುವುದೇ ಹೊರತು ಈ ದೇವಭೂಮಿಯಲ್ಲಲ್ಲ. ಕರ್ಮಕ್ಷೇತ್ರದಲ್ಲಿಯೂ ಸಹ ವೇದೋಕ್ತವಾದ ಶುಭಾಶುಭ ಕರ್ಮಗಳ ಫಲವು ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುವ ವಿಷ್ಣುಭಕ್ತರಿಗೆ ಸಂಘಟಿಸುವುದಿಲ್ಲ. ಜ್ವಾಲಾಕಾರವಾಗಿ ಉರಿಯುವ ಅಗ್ನಿಯಲ್ಲಿ ತೃಣವು ಉರಿದು ಭಸ್ಮವಾಗುವಂತೆ ತೇಜಸ್ವಿಗಳ ತೇಜಸ್ಸಿನಿಂದ ಪಾಪವೆಂಬ ಕಟ್ಟಿಗೆಯು ಉರಿದು ಹೋಗುವುದು.

೧೨೫. ಅಗ್ನಿ, ಸೂರ್ಯ ಮತ್ತು ಬ್ರಾಹ್ಮಣರಿಗಿಂತಲೂ ವಿಷ್ಣುಭಕ್ತನು ಮೇಲಾದ ತೇಜಸ್ವಿ ಎನಿಸುವನು.

೧೨೬. ವಿಷ್ಣುಚಕ್ರದಿಂದ ರಕ್ಷಿತನಾಗಿ ಮದಿಸಿದ ಆನೆಯಂತೆ ಸ್ವತಂತ್ರನಾಗಿರುವ ಆ ವೈಷ್ಣವನ ಕರ್ಮಗಳನ್ನಾಗಲೀ, ಅವುಗಳ ಉಪಭೋಗವನ್ನಾಗಲೀ ಯಾವಾಗಲೂ ತರ್ಕಿಸಕೂಡದು.

ಲಿಖಿತಂ ಸಾಮ್ನಿ ಕೌಥುಮ್ಯಾಂ ಕುರು ಪ್ರಶ್ನಂ ಬೃಹಸ್ಪತಿಂ ।
ಅಸ್ಮಾಂಶ್ಚ ಸರ್ವೇ ಜಾನಂತಿ ಚಂದ್ರವಂಶ್ಯಾಂಶ್ಚ ವೈಷ್ಣವಾನ್ ॥ ೧೨೭ ॥

ದೇವಮನ್ಯಂ ನ ಸೇವಂತೇ ಚಂದ್ರವಂಶ್ಯಾ ಹರಿಂ ವಿನಾ ।
ಸದ್ವಂಶಪ್ರಭವೋ ಯೋ ಹಿ ಬ್ರಾಹ್ಮಣಃ ಕ್ಷತ್ರಿಯೋಽಥವಾ ॥ ೧೨೮ ॥

ವಿಷ್ಣುಮಂತ್ರಂ ನ ಗೃಹ್ಣಾತಿ ವಂಚಿತೋ ವಿಷ್ಣುಮಾಯಯಾ ।
ಕೋ ವಾ ಮಂತ್ರಶ್ಚ ಕೇ ದೇವಾ ನ ಹಿ ಶಾಸ್ತಾ ಯಮೋ ಮಮ ॥ ೧೨೯ ॥

ಸರ್ವಾನ್ ಶಾಸ್ತುಂ ಸಮರ್ಥೋಽಹಂ ಬ್ರಹ್ಮವಿಷ್ಣುಶಿವಾನ್ವಿನಾ ।
ಶಯ್ಯಾಂ ಕುರು ಗೃಹಂ ಗತ್ವಾ ಶೀಘ್ರಂ ಯಾಸ್ಯಾಮಿ ತೇ ಗೃಹಂ ॥ ೧೩೦ ॥

ಋತುಪಾಪಂ ಮಯಿ ಭವೇತ್ತವ ಕಿಂ ಗಚ್ಛ ಶೋಭನೇ ।
ಇತ್ಯುಕ್ತ್ವಾ ನಹುಷೋ ರಾಜಾ ಪ್ರಫುಲ್ಲವದನೇಕ್ಷಣಃ ॥ ೧೩೧ ॥

---

೧೨೭. ಈ ರೀತಿ ಸಾಮವೇದದ ಕೌಥುಮ ಶಾಖೆಯಲ್ಲಿ ನಿರೂಪಿತವಾಗಿದೆ. ಬೇಕಾದರೆ ಬೃಹಸ್ಪತಿಯನ್ನು ಕೇಳಿ ನೋಡು. ಚಂದ್ರವಂಶದಲ್ಲಿ ಜನಿಸಿರುವ ನಮ್ಮನ್ನೆಲ್ಲರೂ ವೈಷ್ಣವರೆಂದೇ ಭಾವಿಸುವರು.

೧೨೮-೧೨೯. ಚಂದ್ರವಂಶ ಸಂಭೂತರು ಶ್ರೀಹರಿಯನ್ನು ಬಿಟ್ಟು ಮತ್ತಾವ ದೇವರನ್ನೂ ಸೇವಿಸುವುದಿಲ್ಲ. ಸದ್ವಂಶದಲ್ಲಿ ಹುಟ್ಟಿದ ಬ್ರಾಹ್ಮಣನಾಗಲೀ ಕ್ಷತ್ರಿಯನಾಗಲೀ ವಿಷ್ಣುಮಂತ್ರವನ್ನು ಸ್ವೀಕರಿಸಿ ಜಪಿಸದಿದ್ದರೆ ಅವನು ದೇವಮಾಯೆಯಿಂದ ವಂಚಿತನೆನಿಸುವನು. ಇಂತು ವಿಷ್ಣುಮಂತ್ರೋಪಾಸಕನಾದ ನನ್ನನ್ನು ಯಾವ ದೇವತೆಗಳಾಗಲೀ ಸಾಕ್ಷಾತ್ ಯಮನೇ ಆಗಲಿ ಶಿಕ್ಷಿಸಲಾರರು.

೧೩೦ ಬ್ರಹ್ಮ, ವಿಷ್ಣು, ಶಿವ ಈ ಮೂವರನ್ನು ಬಿಟ್ಟು ಉಳಿದೆಲ್ಲರನ್ನೂ ಶಿಕ್ಷಿಸಲು ನಾನು ಶಕ್ತನಾಗಿರುವೆನು. ಮನೆಗೆ ಹೋಗಿ ಹಾಸಿಗೆಯನ್ನು ಸಜ್ಜುಗೊಳಿಸು ಜಾಗ್ರತೆಯಾಗಿ ನಾನು ನಿನ್ನ ಮನೆಗೆ ಬರುವೆನು.

೧೩೧-೧೩೨. ಎಲೌ ಶೋಭನಾಂಗಿಯೆ, ಒಂದು ವೇಳೆ ಋತುಗಮನ ದೋಷವು ಬರುವುದಾದರೆ ಅದು ನನಗೆ ಬರುವುದು. ನಿನಗೇನೂ ಇಲ್ಲ, ಎಂದು

ರತ್ನಯಾನಂ ಸಮಾರುಹ್ಯ ಯಯೌ ನಂದನಕಾನನಂ ।
ನ ಯಯೌ ಸಾ ಶಚೀ ಗೇಹಂ ಪ್ರಜಗಾಮ ಗುರೋರ್ಗೃಹಂ ॥ ೧೩೨ ॥

ಗತ್ವಾ ಕುಶಾಸನಸ್ಥಂ ಚ ದದರ್ಶ ಚ ಬೃಹಸ್ಪತಿಂ ।
ತಾರಾಸೇವಿತಪಾದಾಬ್ಜಂ ಜ್ವಲಂತಂ ಬ್ರಹ್ಮತೇಜಸಾ ॥ ೧೩೩ ॥

ಜಪಮಾಲಾಕರಂ ಶಶ್ವಜ್ಜಪಂತಂ ಕೃಷ್ಣಮೀಪ್ಸಿತಂ ।
ಪರಮಂ ಪರಮಾನಂದಂ ಪರಮಾತ್ಮಾನಮೀಶ್ವರಂ ॥ ೧೩೪ ॥

ನಿರ್ಗುಣಂ ಚ ನಿರೀಹಂ ಚ ಸ್ವತಂತ್ರಂ ಪ್ರಕೃತೇಃ ಪರಂ ।
ಸ್ವೇಚ್ಛಾಮಯಂ ಪರಂ ಬ್ರಹ್ಮ ಭಕ್ತಾನುಗ್ರಹವಿಗ್ರಹಂ ॥ ೧೩೫ ॥

ತಮಾನಂದಾಶ್ರುನೇತ್ರಂ ಚ ನನಾಮ ಶಿರಸಾ ಭುವಿ ।
ರುದತೀ ಸಾಶ್ರುನೇತ್ರಾ ಸಾ ಮಜ್ಜಂತೀ ಭಕ್ತಿಸಾಗರೇ । ೧೩೬ ॥

ಹೇಳಿ ರಾಜನಾದ ನಹುಷನು ಸಂತೋಷದಿಂದ ವಿಕಸಿತಮುಖವುಳ್ಳವನಾಗಿ ರತ್ನ ವಿಮಾನವನ್ನೇರಿ ನಂದನವನಕ್ಕೆ ಹೋದನು. ಶಚೀದೇವಿಯಾದರೋ ತನ್ನ ಮನೆಗೆ ಹಿಂತಿರುಗದೆ ಗುರುವಾದ ಬೃಹಸ್ಪತ್ಯಾಚಾರ್ಯನ ಮಂದಿರಕ್ಕೆ ಹೋದಳು.

೧೩೩. ಅಲ್ಲಿಗೆ ಹೋಗಿ ದರ್ಭಾಸನದಲ್ಲಿ ಕುಳಿತಿರುವ, ತಾರಾದೇವಿಯಿಂದ ಒತ್ತಲ್ಪಟ್ಟ ಚರಣಕಮಲಗಳುಳ್ಳ, ಬ್ರಹ್ಮತೇಜಸ್ಸಿನಿಂದ ಬೆಳಗುತ್ತಿದ್ದ ಬೃಹಸ್ಪತ್ಯಾಚಾರ್ಯರನ್ನು ಕಂಡಳು.

೧೩೪. ಆ ಗುರುವು ಕೈಯಲ್ಲಿ ಜಪಮಾಲೆಯನ್ನು ಧರಿಸಿ ಪರಮಾತ್ಮನೂ, ಪರಮಾನಂದ ಸ್ವರೂಪನೂ, ಸರ್ವೇಶ್ವರನೂ ಆದ ಶ್ರೀಕೃಷ್ಣನನ್ನು ಭಕ್ತಿಪೂರ್ವಕವಾಗಿ ಭಜಿಸುತ್ತಿದ್ದನು.

೧೩೫. ನಿರ್ಗುಣನೂ, ಇಚ್ಛಾರಹಿತನೂ, ಪ್ರಕೃತಿಗಿಂತ ಮೇಲಾದವನೂ, ಸ್ವತಂತ್ರನೂ, ಸ್ವೇಚ್ಛಾಮಯನೂ, ಭಕ್ತಾನುಗ್ರಹಕಾರಕನೂ ಆದ ಪರಬ್ರಹ್ಮನನ್ನು ಕುರಿತು ಜಪಮಾಡುತ್ತಿದ್ದನು.

೧೩೬. ಆನಂದಾಶ್ರುಪೂರ್ಣನೇತ್ರನಾದ ಆ ಗುರುವನ್ನು ನೋಡಿ ಶಚೀದೇವಿಯು ಪರಮಭಕ್ತಿಸಾಗರದಲ್ಲಿ ಮುಳುಗಿದವಳಾಗಿ ತನ್ನ ಕಣ್ಣುಗಳಲ್ಲಿ ಶೋಕಾಶ್ರುವನ್ನು ಸುರಿಸುತ್ತಾ ತಲೆಬಾಗಿ ಸಾಷ್ಟಾಂಗವೆರಗಿದಳು.

ಶೋಕಾರ್ಣವೇ ನಿಮಜ್ಜಂತೀ ಹೃದಯೇನ ವಿದೂಯತಾ ।
ತುಷ್ಟಾವ ಭೀತಾ ಸ್ವಗುರುಂ ಬ್ರಹ್ಮಿಷ್ಠಂ ಚ ಕೃಪಾನಿಧಿಂ ॥ ೧೩೭ ॥

॥ ಶಚ್ಯುವಾಚ ॥

ರಕ್ಷ ರಕ್ಷ ಮಹಾಭಾಗ ಮಾಂ ಭೀತಾಂ ಶರಣಾಗತಾಂ ।
ತ್ವನ್ನಿವಾಶ್ವರಃ ಸ್ವದಾಸೀಂ ಚ ನಿಮಗ್ನಾಂ ಶೋಕಸಾಗರೇ ॥ ೧೩೮ ॥

ಅನೀಶ್ವರಶ್ಚೇಶ್ವರೋ ವಾ ಬಲವಾನ್ವಾ ಸುದುರ್ಬಲಃ ।
ಸ್ವಶಿಷ್ಯಭಾರ್ಯಾಂ ಪುತ್ರಾಂಶ್ಚ ಶಾಸಿತುಂ ಚ ಸದಾ ಕ್ಷಮಃ ॥ ೧೩೯ ॥

ದೂರೀಭೂತಃ ಸ್ವರಾಜ್ಯಾಚ್ಚ ಸ್ವಶಿಷ್ಯಶ್ಚ ಕೃತಸ್ತ್ವಯಾ ।
ಶಾಂತಿರ್ಬಭೂವ ದೋಷಸ್ಯ ಚಾಧುನಾಽನುಗ್ರಹಂ ಕುರು ॥ ೧೪೦ ॥

---

೧೩೭. ಚಿಂತಾಕ್ರಾಂತವುಳ್ಳವಳಾಗಿ ಶೋಕಸಾಗರದಲ್ಲಿ ಮುಳುಗಿದ್ದ ಆ ಶಚೀದೇವಿಯು ಬ್ರಹ್ಮಿಷ್ಠನೂ, ಕೃಪಾನಿಧಿಯೂ ಆದ ಗುರುವನ್ನು ಕುರಿತು ಭಯಭಕ್ತಿಯಿಂದ ಸ್ತೋತ್ರಮಾಡಿದಳು.

೧೩೮. ಶಚೀದೇವಿ:—ಎಲೈ ಭಾಗ್ಯಶಾಲಿಯೇ, ಭೀತಳೂ, ಶರಣಾಗತಳೂ ಆದ ನನ್ನನ್ನು ಕಾಪಾಡು. ಗುರುವಾದ ನೀನು ಶೋಕಸಾಗರದಲ್ಲಿ ಮುಳುಗಿರುವ ನಿನ್ನ ದಾಸಿಯಾದ ನನ್ನನ್ನು ಕಾಪಾಡು.

೧೩೯. ಈಶ್ವರನಾಗಲೀ, ಅನೀಶ್ವರನಾಗಲೀ, ಬಲಿಷ್ಠನಾಗಲೀ ದುರ್ಬಲನಾಗಲೀ ತನ್ನ ಶಿಷ್ಯನ ಹೆಂಡತಿಯನ್ನೂ, ಮಕ್ಕಳನ್ನೂ ರಕ್ಷಿಸಲು ಸರ್ವದಾ ಶಕ್ತನಾಗಿರುವನು.

೧೪೦. ನಿನ್ನ ಶಿಷ್ಯನಾದ ಇಂದ್ರನನ್ನು ತನ್ನ ರಾಜ್ಯದಿಂದ ಭ್ರಷ್ಟನಾಗುವಂತೆ ನೀನು ಮಾಡಿದೆ. ಅವನ ತಪ್ಪಿಗೆ ಶಾಂತಿಯಾದಂತಾಯಿತು. ಈಗ ಅವನ ಶಾಪನಿಗ್ರಹವನ್ನು ಮಾಡು.

ಅನಾಥಾಂ ಸರ್ವಶೂನ್ಯಾಂ ಮಾಂ ಶೂನ್ಯಾಂ ಚಾಮರಾವತೀಂ ।
ಸಂಪಚ್ಛೂನ್ಯಮಾತ್ರಮಂ ಮೇ ಪಶ್ಯ ರಕ್ಷ ಕೃಪಾನಿಧೇ ॥ ೧೪೧ ॥

ದಸ್ಯುಗ್ರಸ್ತಾಂ ಚ ಮಾಂ ರಕ್ಷ ದೇಶಂ ಕಿಂಕರಮಾನಯ ।
ದತ್ವಾ ಚರಣರೇಣೂಂಸ್ತ್ವಂ ಶುಭಾಶೀರ್ವಚನಂ ಕುರು ॥ ೧೪೨ ॥

ಸರ್ವೇಷಾಂ ಚ ಗುರೂಣಾಂ ಚ ಜನ್ಮದಾತಾ ಪರೋ ಗುರುಃ ।
ಪಿತುಃ ಶತಗುಣಾ ಮಾತಾ ಪೂಜ್ಯಾ ವಂದ್ಯಾ ಗರೀಯಸೀ ॥ ೧೪೩ ॥

ವಿದ್ಯಾದಾತಾ ಮಂತ್ರದಾತಾ ಜ್ಞಾನದೋ ಹರಿಭಕ್ತಿದಃ ।
ಪೂಜ್ಯೋ ವಂದ್ಯಶ್ಚ ಸೇವ್ಯಶ್ಚ ಮಾತುಃ ಶತಗುಣೋ ಗುರುಃ ॥ ೧೪೪ ॥

ಮಂತ್ರಾದ್ಯುದ್ಗಿರಣೇನೈವ ಗುರುರಿತ್ಯುಚ್ಯತೇ ಬುಧೈಃ ।
ಅನ್ಯೋ ವಂದ್ಯೋ ಗುರುರಯಮನ್ಯಶ್ಚಾರೋಪಿತೋ ಗುರುಃ ॥ ೧೪೫ ॥

---

೧೪೧. ಎಲೈ ದಯಾಮಯನೇ, ಅನಾಥಳೂ, ಸರ್ವಶೂನ್ಯಳೂ ಆದ ನನ್ನನ್ನೂ ಶೂನ್ಯವಾದ ಅಮರಾವತಿಯನ್ನೂ, ಸಂಪದ್ರಹಿತವಾದ ನಮ್ಮ ಮಂದಿರವನ್ನೂ ನೋಡಿ ನೀನು ನಮ್ಮನ್ನು ಕಾಪಾಡು.

೧೪೨. ಪರಪುರುಷನಿಗೆ ಸಿಕ್ಕಿರುವ ನನ್ನನ್ನು ಕಾಪಾಡು. ಆ ನಿನ್ನ ಕಿಂಕರನಾದ ಇಂದ್ರನನ್ನು ಊರಿಗೆ ಬರಮಾಡು. ಅವನಿಗೆ ನಿನ್ನ ಪಾದರೇಣುಗಳನ್ನು ಕೊಟ್ಟು ಶುಭಕರವಾದ ಆಶೀರ್ವಾದಗಳನ್ನು ಮಾಡು.

೧೪೩. ಎಲ್ಲ ಗುರುಗಳಿಗಿಂತಲೂ ಜನ್ಮದಾತೃವಾದವನು ಪರಮಗುರುವೆನಿಸುವನು. ತಾಯಿಯಾದವಳು ತಂದೆಗಿಂತ ನೂರರಷ್ಟು ಪೂಜ್ಯಳೂ, ವಂದ್ಯಳೂ, ಶ್ರೇಷ್ಠಳೂ ಆಗಿರುವಳು.

೧೪೪. ವಿದ್ಯಾಬೋಧಕನೂ, ಮಂತ್ರೋಪದೇಶಕನೂ, ಜ್ಞಾನ ಮತ್ತು ಹರಿಭಕ್ತಿಯನ್ನು ಕೊಡುವವನೂ ಆದ ಗುರುವು ತಾಯಿಗಿಂತಲೂ ನೂರರಷ್ಟು ಪೂಜ್ಯನೂ. ವಂದ್ಯನೂ, ಸೇವ್ಯನೂ ಎನಿಸುವನು.

೧೪೫. ಮಂತ್ರಾದಿಗಳನ್ನು ಉಚ್ಚರಿಸುವವನನ್ನೇ 'ಗುರು' ವೆಂದು ಪಂಡಿತರು ಹೇಳುವರು. ಈ ಗುರುವೊಬ್ಬನೇ ನಿಜವಾಗಿ ವಂದ್ಯನು. ಉಳಿದವರೆಲ್ಲರೂ ಗುರುತ್ವವನ್ನು ಆರೋಪಿಸಲ್ಪಟ್ಟವರು.

ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥ ೧೪೬ ॥

ಅದೀಕ್ಷಿತಸ್ಯ ಮೂರ್ಖಸ್ಯ ನಿಷ್ಕೃತಿರ್ನಾಸ್ತಿ ನಿಶ್ಚಿತಂ ।
ಸರ್ವಕರ್ಮಸ್ವನರ್ಹಸ್ಯ ನರಕೇ ತತ್ಪಶೋಃ ಸ್ಥಿತಿಃ ॥ ೧೪೭ ॥

ಜನ್ಮದಾತಾನ್ನದಾತಾ ಚ ಮಾತಾನ್ಯೇ ಗುರುವಸ್ತಥಾ ।
ಪಾರಂ ಕರ್ತುಂ ನ ಶಕ್ತಾಸ್ತೇ ಘೋರಸಂಸಾರಸಾಗರೇ ॥ ೧೪೮ ॥

ವಿದ್ಯಾಮಂತ್ರಜ್ಞಾನದಾತಾ ನಿಪುಣಃ ಪಾರಕರ್ಮಣಿ ।
ಸ ಶಕ್ತಃ ಶಿಷ್ಯಮುದ್ಧರ್ತುಮೀಶ್ವರಶ್ಚೇಶ್ವರಾತ್ಪರಃ ॥ ೧೪೯ ॥

ಗುರುರ್ವಿಷ್ಣುರ್ಗುರುರ್ಬ್ರಹ್ಮಾ ಗುರುರ್ದೇವೋ ಮಹೇಶ್ವರಃ ।
ಗುರುರ್ಧರ್ಮೋ ಗುರುಃ ಶೇಷಃ ಸರ್ವಾತ್ಮಾ ನಿರ್ಗುಣೋ ಗುರುಃ ॥ ೧೫೦ ॥

೧೪೬. ಅಜ್ಞಾನವೆಂಬ ಗಾಢಾಂಧಕಾರದಿಂದ ಕುರುಡಾದ ಯಾರ ಕಣ್ಣು, ಜ್ಞಾನವೆಂಬ ಅಂಜನ ಶಲಾಕೆಯಿಂದ ಯಾರಿಂದ ತೆರೆಯಲ್ಪಡುವುದೋ ಅಂಥ ಗುರುದೇವನಿಗೆ ಭಕ್ತಿಯಿಂದ ನಮಸ್ಕರಿಸುವೆನು.

೧೪೭. ಮಂತ್ರಾದ್ಯುಪದೇಶವನ್ನು ಕೈಗೊಳ್ಳದ ಮೂರ್ಖನಿಗೆ ಮೋಕ್ಷೋಪಾಯ ವಿಲ್ಲವೆಂಬದು ನಿಶ್ಚಯ. ಎಲ್ಲ ಕರ್ಮಗಳಿಗೂ ಅನರ್ಹನಾಗಿ ಪಶುಸದೃಶನಾಗಿರುವ ಅವನಿಗೆ ನರಕವಾಸವೇ ಗತಿ.

೧೪೮. ಜನ್ಮದಾತೃವೂ, ಅನ್ನದಾತೃವೂ, ಮಾತೆಯೂ, ಇತರ ಗುರುಗಳೂ ಸಹ ಘೋರವಾದ ಸಂಸಾರಸಾಗರದಲ್ಲಿ ಮುಳುಗಿರುವವರನ್ನು ಪಾರಗಾಣಿಸಲಶಕ್ತರಾಗುವರು.

೧೪೯. ವಿದ್ಯೆಯನ್ನೂ, ಮಂತ್ರವನ್ನೂ, ಜ್ಞಾನವನ್ನೂ ಬೋಧಿಸಬಲ್ಲ ಗುರುವೊಬ್ಬನೇ ಸಂಸಾರದಿಂದ ಪಾರಗಾಣಿಸುವುದರಲ್ಲಿ ನಿಪುಣನು. ಈಶ್ವರನಿಗಿಂತಲೂ ಮೇಲೆನಿಸಿದ ಆ ಪರಮಗುರುವೊಬ್ಬನೇ ಶಿಷ್ಯನನ್ನು ಉದ್ಧರಿಸಲು ಶಕ್ತನಾಗುವನು.

೧೫೦. ಗುರುವೇ ವಿಷ್ಣುವು, ಗುರುವೇ ಬ್ರಹ್ಮನು, ಗುರುವೇ ದೇವದೇವನಾದ ಮಹೇಶ್ವರನು. ಗುರುವೇ ಧರ್ಮಪುರುಷನು, ಗುರುವೇ ಆದಿಶೇಷನು, ಈ ರೀತಿ ಸರ್ವಾತ್ಮಕನಾದ ಗುರುವು ನಿರ್ಗುಣನೆನಿಸುವನು.

ಸರ್ವತೀರ್ಥಾಶ್ರಯಶ್ಚೈವ ಸರ್ವದೇವಾಶ್ರಯೋ ಗುರುಃ ।
ಸರ್ವದೇವಸ್ವರೂಪಶ್ಚ ಗುರುರೂಪೀ ಹರಿಃ ಸ್ವಯಂ ॥ ೧೫೧ ॥

ಅಭೀಷ್ಟದೇವೇ ರುಷ್ಟೇ ಚ ಗುರುಃ ಶಕ್ತೋ ಹಿ ರಕ್ಷಿತುಂ ।
ಗುರೌ ರುಷ್ಟೇಽಭೀಷ್ಟದೇವೋ ನ ಹಿ ಶಕ್ತಶ್ಚ ರಕ್ಷಿತುಂ ॥ ೧೫೨ ॥

ಸರ್ವೇ ಗ್ರಹಾಶ್ಚ ಯಂ ರುಷ್ಟಾ ಯಂ ರುಷ್ಟಾ ದೇವಬ್ರಾಹ್ಮಣಾಃ ।
ತ್ವಮೇವ ರುಷ್ಟೋ ಭವಸಿ ಗುರುರೇವ ಹಿ ದೇವತಾಃ ॥ ೧೫೩ ॥

ನ ಗುರೋಶ್ಚ ಪ್ರಿಯಶ್ಚಾಽಽತ್ಮಾ ನ ಗುರೋಶ್ಚ ಪ್ರಿಯಃ ಸುತಃ ।
ಧನಂ ಪ್ರಿಯಂ ಚ ನ ಗುರೋರ್ನ ಚ ಭಾರ್ಯಾ ಪ್ರಿಯಾ ತಥಾ ॥ ೧೫೪ ॥

ನ ಗುರೋಶ್ಚ ಪ್ರಿಯೋ ಧರ್ಮೋ ನ ಗುರೋಶ್ಚ ಪ್ರಿಯಂ ತಪಃ ।
ನ ಗುರೋಶ್ಚ ಪ್ರಿಯಂ ಸತ್ಯಂ ನ ಪುಣ್ಯಂ ಚ ಗುರೋಃ ಪರಂ ॥ ೧೫೫ ॥

---

೧೫೧. ಸಕಲ ತೀರ್ಥಗಳಿಗೂ, ಸಕಲ ದೇವತೆಗಳಿಗೂ, ಗುರುವು ಆಶ್ರಯನಾಗಿದ್ದಾನೆ. ಗುರುರೂಪಿಯಾದ ಸ್ವಯಂ ಶ್ರೀಹರಿಯು ಎಲ್ಲ ದೇವತೆಗಳ ಸ್ವರೂಪನಾಗಿದ್ದಾನೆ.

೧೫೨. ನಮ್ಮ ಇಷ್ಟದೇವತೆಯು ಕೋಪಗೊಂಡಿದ್ದರೂ ಗುರುವು ನಮ್ಮನ್ನು ರಕ್ಷಿಸಲು ಶಕ್ತನಾಗಿರುತ್ತಾನೆ. ಗುರುವು ಕುಪಿತನಾದರೆ ಅಭೀಷ್ಟದೇವತೆಯು ನಮ್ಮನ್ನು ರಕ್ಷಿಸಲಾರದು.

೧೫೩. ಯಾವನ ವಿಷಯದಲ್ಲಿ ಗ್ರಹಗಳೆಲ್ಲವೂ ಕೋಪಗೊಂಡಿರುವುವೋ, ದೇವಬ್ರಾಹ್ಮಣರೆಲ್ಲ ಕೋಪಗೊಂಡಿರುವರೋ ಅವನ ವಿಷಯದಲ್ಲಿ ಗುರುವು ಕೋಪಗೊಂಡಂತೆಯೇ. ಏಕೆಂದರೆ ಗುರುವೇ ನಿಖಿಲ ದೇವತಾತ್ಮನು.

೧೫೪. ಗುರುವಿಗಿಂತ ನಮ್ಮ ಆತ್ಮವು ಹೆಚ್ಚು ಪ್ರಿಯವಾದುದಲ್ಲ. ಗುರುವಿಗಿಂತ ಮಗನು ಹೆಚ್ಚು ಪ್ರಿಯನಲ್ಲ, ಗುರುವಿಗಿಂತಲೂ ಧನವು ಪ್ರಿಯವಾದುದಲ್ಲ. ಹಾಗೆಯೇ ಹೆಂಡತಿಯೂ ಸಹ ಗುರುವಿಗಿಂತ ಪ್ರಿಯಳಲ್ಲ.

೧೫೫. ಧರ್ಮವಾಗಲೀ ತಪಸ್ಸಾಗಲೀ ಗುರುವಿಗಿಂತ ಪ್ರಿಯವಾದುದಲ್ಲ. ಸತ್ಯವೂ, ಪುಣ್ಯವೂ ಸಹ ಗುರುವಿಗಿಂತ ಹೆಚ್ಚು ಪ್ರಿಯವಾದುದಲ್ಲ.

ಗುರೋಃ ಪರೋ ನ ಶಾಸ್ತಾ ಚ ನ ಹಿ ಬಂಧುರ್ಗುರೋಃ ಪರಃ ।
ದೇವೋ ರಾಜಾ ಚ ಶಾಸ್ತಾ ಚ ಶಿಷ್ಯಾಣಾಂ ಚ ಸದಾ ಗುರುಃ ॥ ೧೫೬ ॥

ಯಾವಚ್ಛಕ್ತೋ ದಾತುಮನ್ನಂ ತಾವಚ್ಛಾಸ್ತಾ ತಮನ್ನದಃ ।
ಗುರುಃ ಶಾಸ್ತಾ ಚ ಶಿಷ್ಯಾಣಾಂ ಪ್ರತಿಜನ್ಮನಿ ಜನ್ಮನಿ ॥ ೧೫೭ ॥

ಮಂತ್ರೋ ವಿದ್ಯಾ ಗುರುರ್ದೇವಃ ಪೂರ್ವಲಬ್ಧೋ ಯಥಾ ಪತಿಃ ।
ಪ್ರತಿಜನ್ಮನಿ ಬಂಧೇನ ಸರ್ವೇಷಾಮುಪರಿ ಸ್ಥಿತಃ ॥ ೧೫೮ ॥

ಪಿತಾ ಗುರುಶ್ಚ ವಂದ್ಯಶ್ಚ ಯತ್ರ ಜನ್ಮನಿ ಜನ್ಮದಃ ।
ಗುರವೋಽನ್ಯೇ ತಥಾ ಮಾತಾ ಗುರುಶ್ಚ ಪ್ರತಿಜನ್ಮನಿ ॥ ೧೫೯ ॥

---

೧೫೬. ಗುರುವಿಗಿಂತ ಮೇಲಾದ ಶಿಕ್ಷಕನಾಗಲೀ, ಗುರುವಿಗಿಂತ ಮೇಲಾದ ಬಂಧುಗಳಾಗಲೀ ಯಾರೂ ಇಲ್ಲ. ಶಿಷ್ಯರಿಗೆ ಸರ್ವದಾ ಗುರುವೇ ರಾಜನು, ಗುರುವೇ ನಿಯಾಮಕನು, ಗುರುವೇ ಪರದೇವತೆಯು.

೧೫೭. ಎಂದಿನವರೆಗೆ ಅನ್ನದಾನಮಾಡಲು ಶಕ್ತನಾಗಿರುವನೋ ಅಂದಿನ ವರೆಗೆ ಅನ್ನದಾನಿಯು ಶಾಸಕನಾಗಬಲ್ಲನು. ಗುರುವಾದರೋ ಶಿಷ್ಯರಿಗೆ ಪ್ರತಿಜನ್ಮ ದಲ್ಲಿಯೂ ಸಹ ಶಾಸಕನಾಗುವನು.

೧೫೮. ಮಂತ್ರ, ವಿದ್ಯಾಗುರು, ಪತಿ ಇವರೆಲ್ಲರೂ ಜನ್ಮಾಂತರ ಋಣಾನು ಬಂಧಕ್ಕೆ ಅನುಗುಣವಾಗಿ ದೊರೆಯುವರು. ಪ್ರತಿಜನ್ಮದ ಸಂಬಂಧವುಳ್ಳೋಣದ ರಿಂದ ಗುರುವು ಎಲ್ಲರಿಗಿಂತಲೂ ಮೇಲಾದವನು.

೧೫೯. ನಮಗೆ ಜನ್ಮವನ್ನು ಕೊಟ್ಟಾಗ ಮಾತ್ರ ತಂದೆಯು ಗುರುಸಮಾನನೂ, ವಂದನೀಯನೂ ಎನಿಸುವನು. ಹಾಗೆಯೇ ಅನ್ನದಾತಾ ಮುಂತಾದ ಗುರುಗಳೂ ಮತ್ತು ತಾಯಿಯೂ ಸಹ ಪೂಜ್ಯರೆನಿಸುವರು. ಗುರುವು ಮಾತ್ರ ಪ್ರತಿಜನ್ಮದಲ್ಲಿಯೂ ಪೂಜ್ಯನೆನಿಸುವನು.

ವಿಪ್ರಾಣಾಂ ತ್ವಂ ವರಿಷ್ಠಶ್ಚ ಗರಿಷ್ಠಶ್ಚ ತಪಸ್ವಿನಾಂ ।
ಬ್ರಹ್ಮಿಷ್ಠೋ ಬ್ರಹ್ಮವಿದ್ಬ್ರಹ್ಮನ್ ಧರ್ಮಿಷ್ಠಃ ಸರ್ವಧರ್ಮಿಣಾಂ ॥ ೧೬೦ ॥

ತುಷ್ಟೋ ಭವ ಮುನಿಶ್ರೇಷ್ಠ ಮಾಂ ಚ ಶಕ್ರಂ ಚ ಸಾಂಪ್ರತಂ ।
ತ್ವಯಿ ತುಷ್ಟೇ ಸದಾ ತುಷ್ಟಾ ಭವಂತಿ ಗ್ರಹದೇವತಾಃ ॥ ೧೬೧ ॥

ಇತ್ಯುಕ್ತ್ವಾ ಸಾ ಶಚೀ ಬ್ರಹ್ಮನ್ನುಚ್ಚೈ ರುರೋದ ಹ ।
ದೃಷ್ಟ್ವಾ ತದ್ರೋದನಂ ತಾರಾ ರುರೋದೋಚ್ಚೈರ್ಮುಹುರ್ಮುಹುಃ ॥

ಪಪಾತ ಚರಣೇ ತಾರಾ ರುರೋದ ಚ ಪುನಃ ಪುನಃ ।
ಅಪರಾಧಂ ಕ್ಷಮೇತ್ಯುಕ್ತ್ವಾ ಗುರುಸ್ತುಷ್ಟೋಽಪ್ಯುವಾಚ ತಾಂ ॥ ೧೬೩ ॥

॥ ಗುರುರುವಾಚ ॥

ಉತ್ತಿಷ್ಠ ತಾರೇ ಶಚ್ಯಾಶ್ಚ ಸರ್ವಂ ಭದ್ರಂ ಭವಿಷ್ಯತಿ ।
ಸದ್ಯಃ ಪ್ರಾಪ್ಸ್ಯಸಿ ಭರ್ತಾರಂ ಮಹೇಂದ್ರಂ ಚ ಮದಾಶಿಷಾ ॥ ೧೬೪ ॥

---

೧೬೦. ವಿಪ್ರರಲ್ಲೆಲ್ಲ ಶ್ರೇಷ್ಠನೂ, ತಪಸ್ವಿಗಳಿಗೆಲ್ಲ ಗರ್ವಿಷ್ಠನೂ ಆದ ನೀನು ಬ್ರಹ್ಮಜ್ಞಾನಿಯೂ, ಬ್ರಹ್ಮಧ್ಯಾನನಿರತನೂ, ಧರ್ಮಿಗಳಿಗೆಲ್ಲ ಅತ್ಯಂತ ಧರ್ಮಿಷ್ಠನೂ ಆಗಿರುವೆ.

೧೬೧. ಎಲೈ ಮುನಿಶ್ರೇಷ್ಠನೇ, ಈಗ ನನ್ನ ವಿಷಯದಲ್ಲಿಯೂ, ಇಂದ್ರನ ವಿಷಯದಲ್ಲಿಯೂ, ಪ್ರಸನ್ನನಾಗು. ನೀನೊಬ್ಬನು ಪ್ರಸನ್ನನಾದರೆ ನಮ್ಮ ಗ್ರಹ ದೇವತೆಗಳೆಲ್ಲ ಪ್ರಸನ್ನವಾಗುವುವು.

೧೬೨. ಎಲೈ ನಾರದನೇ, ಶಚೀದೇವಿಯು ಈ ರೀತಿಯಾಗಿ ಹೇಳಿ ಗಟ್ಟಿಯಾಗಿ ಅಳಲಾರಂಭಿಸಿದಳು. ಅವಳ ಅಳುವಿಕೆಯನ್ನು ನೋಡಿ ತಾರಾದೇವಿಯೂ ಸಹ ಪುನಃ ಪುನಃ ಅಳತೊಡಗಿದಳು.

೧೬೩. ಈ ರೀತಿಯಾಗಿ ತಾರಾದೇವಿಯು ಅಳುತ್ತ ತನ್ನ ಪತಿಯ ಪಾದ ಕಮಲಗಳ ಮೇಲೆ ಬಿದ್ದು ಇಂದ್ರನ ಅಪರಾಧವನ್ನು ಕ್ಷಮಿಸಬೇಕೆಂದು ಕೇಳಿಕೊಳ್ಳಲು ಪ್ರಸನ್ನನಾದ ಬ್ರಹಸ್ಪತಿಯು ಅವಳಿಗಿಂತೆಂದನು.

೧೬೪. ಗುರು:—ಎಲೌ ತಾರೆಯೇ, ಮೇಲಕ್ಕೆ ಏಳು. ಇಂದ್ರನಿಗೂ, ಶಚೀದೇವಿಗೂ ಸಹ ಕುಶಲವುಂಟಾಗುವುದು. ಶಚೀದೇವಿಯು ನನ್ನ ಆಶೀರ್ವಾದದಿಂದ ಜಾಗ್ರತೆಯಾಗಿ ತನ್ನ ಪತಿಯಾದ ಮಹೇಂದ್ರನನ್ನು ಹೊಂದುವಳು.

ಇತ್ಯುಕ್ತ್ವಾ ಸ ಗುರುಸ್ತತ್ರ ವಿರರಾಮ ಚ ನಾರದ ।
ಪಪಾತ ಚರಣೇ ತಾರಾ ಪುನರೇವ ರುರೋದ ಚ　　॥ ೧೬೫ ॥

ಗೃಹೀತ್ವಾ ಚ ಶಚೀಂ ತಾರಾ ಸಂಸ್ಥಾಪ್ಯ ಚ ಸ್ವವಕ್ಷಸಿ ।
ಬೋಧಯಾಮಾಸ ವಿವಿಧಮಾಧ್ಯಾತ್ಮಿಕಮನುತ್ತಮಂ　　॥ ೧೬೬ ॥

ಶಚೀಕೃತಂ ಗುರುಸ್ತೋತ್ರಂ ಪೂಜಾಕಾಲೇ ಚ ಯಃ ಪಠೇತ್ ।
ಗುರುಶ್ಚಾಭಿಷ್ಟದೇವಶ್ಚ ಸಂತುಷ್ಟಃ ಪ್ರತಿಜನ್ಮನಿ　　॥ ೧೬೭ ॥

ಗ್ರಹದೇವದ್ವಿಜಾಸ್ತಂ ಚ ಪರಿತುಷ್ಟಾಶ್ಚ ಸಂತತಂ ।
ರಾಜಾನೋ ಬಾಂಧವಾಶ್ಚೈವ ಸಂತುಷ್ಟಾಃ ಸರ್ವತಃ ಸದಾ　　॥ ೧೬೮ ॥

ಗುರುಭಕ್ತಿಂ ವಿಷ್ಣುಭಕ್ತಿಂ ವಾಂಛಿತಂ ಲಭತೇ ಧ್ರುವಂ ।
ಸದಾ ಹರ್ಷೋ ಭವೇತ್ತಸ್ಯ ನ ಚ ಶೋಕಃ ಕದಾಚನ ।　　॥ ೧೬೯ ॥

---

೧೬೫. ಎಲೈ ನಾರದನೇ, ಈ ರೀತಿ ನುಡಿದು ಗುರುವು ಸುಮ್ಮನಾದನು. ಆಗ ತಾರಾದೇವಿಯು ಪುನಃ ಅವನ ಕಾಲುಗಳಿಗೆರಗಿ ಅಳುವುದಕ್ಕೆ ಮೊದಲು ಮಾಡಿದಳು.

೧೬೬. ತಾರಾದೇವಿಯು ಶಚೀದೇವಿಯನ್ನು ಸೆಳೆದು ತನ್ನ ವಕ್ಷಃಸ್ಥಳದಲ್ಲಿ ಅಪ್ಪಿಕೊಂಡು ಅವಳಿಗೆ ಅನೇಕ ವಿಧವಾದ ಆಧ್ಯಾತ್ಮಿಕ ತತ್ವಗಳನ್ನು ಉಪದೇಶಿಸಿ ಸಮಾಧಾನಪಡಿಸಿದಳು.

೧೬೭. ಶಚೀದೇವಿಯು ಹೇಳಿದ ಗುರುಸ್ತೋತ್ರವನ್ನು ಪೂಜಾಕಾಲದಲ್ಲಿ ಪಠಿಸುವವರ ವಿಷಯದಲ್ಲಿ ಗುರುವೂ, ಅಭಿಷ್ಟದೇವನೂ ಪ್ರತಿಜನ್ಮದಲ್ಲಿಯೂ ಪ್ರಸನ್ನರಾಗಿರುವರು.

೧೬೮. ಈ ಸ್ತೋತ್ರಪಠನ ಮಾಡುವವನ ವಿಷಯದಲ್ಲಿ ಗ್ರಹಗಳೂ, ದೇವತೆಗಳೂ, ದ್ವಿಜರೂ ಸಂತುಷ್ಟರಾಗುವುದಲ್ಲದೆ ರಾಜನೂ, ಬಂಧುಗಳೂ ಸಹ ಸರ್ವದಾ ಸಂತುಷ್ಟರಾಗುವರು.

೧೬೯. ಅವನಿಗೆ ಗುರುಭಕ್ತಿಯೂ, ವಿಷ್ಣುಭಕ್ತಿಯೂ, ಇಷ್ಟಾರ್ಥವೂ ಲಭಿಸುವುದಲ್ಲದೆ ಸರ್ವದಾ ಅವನು ಹರ್ಷಚಿತ್ತನಾಗಿರುವನು. ಅವನಿಗೆ ಎಂದೆಂದಿಗೂ ದುಃಖಸಂಭವಿಸುವುದಿಲ್ಲ.

ಪುತ್ರಾರ್ಥೀ ಲಭತೇ ಪುತ್ರಂ ಭಾರ್ಯಾರ್ಥೀ ಲಭತೇ ಪ್ರಿಯಾಂ ।
ಸುಸ್ವರೂಪಾಂ ಗುಣವತೀಂ ಸತೀಂ ಪುತ್ರವತೀಂ ಧ್ರುವಂ ॥ ೧೭೦ ॥

ರೋಗಾರ್ತೋ ಮುಚ್ಯತೇ ರೋಗಾದ್ಬದ್ಧೋ ಮುಚ್ಯೇತ ಬಂಧನಾತ್ ।
ಅಸ್ಪಷ್ಟಕೀರ್ತಿಃ ಸುಯಶಾ ಮೂರ್ಖೋ ಭವತಿ ಪಂಡಿತಃ । ೧೭೧ ॥

ಕದಾಚಿದ್ಬಂಧುವಿಚ್ಛೇದೋ ನ ಭವೇತ್ತಸ್ಯ ನಿಶ್ಚಿತಂ ।
ನಿತ್ಯಂ ತದ್ವರ್ಧತೇ ಧರ್ಮೋ ವಿಪುಲಂ ನಿರ್ಮಲಂ ಯಶಃ ॥ ೧೭೨ ॥

ಲಭತೇ ಪರಮೈಶ್ವರ್ಯಂ ಪುತ್ರಪೌತ್ರಧನಾನ್ವಿತಂ ।
ಇಹ ಸರ್ವಸುಖಂ ಭುಕ್ತ್ವಾ ಪ್ರಾಪ್ಯತೇ ಶ್ರೀಹರೇಃ ಪದಂ ॥ ೧೭೩ ॥

ನ ಭವೇತ್ತತ್ಪುನರ್ಜನ್ಮ ಹರಿದಾಸ್ಯಂ ಲಭೇದ್ಧ್ರುವಂ ।
ವಿಷ್ಣುಭಕ್ತಿರಸಾಬ್ಧೌ ಚ ನಿಮಗ್ನಶ್ಚ ಭವೇದ್ಧ್ರುವಂ ॥ ೧೭೪ ॥

---

೧೭೦. ಪುತ್ರನನ್ನು ಬಯಸುವವನಿಗೆ ಸತ್ಪುತ್ರನೂ, ಭಾರ್ಯೆಯನ್ನು ಬಯಸುವವನಿಗೆ ಸುರೂಪಳೂ, ಗುಣವತಿಯೂ, ಪತಿವ್ರತೆಯೂ, ಪುತ್ರವತಿಯೂ ಆದ ಭಾರ್ಯೆಯೂ ದೊರಕುವರು.

೧೭೧. ರೋಗಪೀಡಿತನು ರೋಗದಿಂದಲೂ, ಬಂಧಿತನು ಬಂಧನದಿಂದಲೂ ಮುಕ್ತರಾಗುವರು. ಅಕೀರ್ತಿವಂತನು ಸತ್ಕೀರ್ತಿಯನ್ನು ಹೊಂದುವನು, ಮೂರ್ಖನು ಪಂಡಿತನಾಗುವನು.

೧೭೨. ಈ ಸ್ತೋತ್ರಪಠನಮಾಡುವವನಿಗೆ ಯಾವಾಗಲೂ ಬಂಧುಗಳ ವಿರಹವುಂಟಾಗುವುದಿಲ್ಲ. ಪ್ರತಿನಿತ್ಯವೂ, ಅವನ ಧರ್ಮಕಾರ್ಯಗಳೂ ನಿರ್ಮಲವಾದ ಯಶಸ್ಸೂ ವೃದ್ಧಿಹೊಂದುವುದು.

೧೭೩. ಅವನು ಪರಮೈಶ್ವರ್ಯವನ್ನೂ, ಪುತ್ರಪೌತ್ರಾದಿಸಂಪತ್ತನ್ನೂ ಪಡೆದು ಈ ಲೋಕದಲ್ಲಿ ಸಕಲಸುಖಗಳನ್ನೂ ಅನುಭವಿಸಿ ಕೊನೆಯಲ್ಲಿ ಶ್ರೀಹರಿಯ ನಿವಾಸವಾದ ವೈಕುಂಠಕ್ಕೆ ಹೋಗುವನು.

೧೭೪. ಅವನಿಗೆ ಪುನಃ ಜನ್ಮವಿರುವುದಿಲ್ಲ. ಅವನು ಹರಿದಾಸ್ಯವನ್ನು ಶಾಶ್ವತವಾಗಿ ಹೊಂದುವನು. ಅಲ್ಲಿ ವಿಷ್ಣುಭಕ್ತಿಯೆಂಬ ಅಮೃತರಸ ಸಮುದ್ರದಲ್ಲಿ ಮುಳುಗಿ ಆನಂದದಿಂದಿರುವನು.

ಶಶ್ವತ್ಪಿಬತಿ ಶಾಂತಶ್ಚ ವಿಷ್ಣುಭಕ್ತಿರಸಾಮೃತಂ ।
ಜನ್ಮಮೃತ್ಯುಜರಾವ್ಯಾಧಿಶೋಕಸಂತಾಪನಾಶನಂ || ೧೭೫ ||

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರದನಾರಾಯಣಸಂವಾದೇ ಮಹೇಂದ್ರದ-
ರ್ಪಭಂಗಪ್ರಕರಣೇ ಶಚೀಶೋಕಾಪನೋದನೇ
ಶಚೀಕೃತ ಗುರುಸ್ತೋತ್ರಕಥನಂ ನಾಮೈ-
ಕೋನ ಷಷ್ಟಿತಮೋಽಧ್ಯಾಯಃ

---

೧೭೫. ಜನ್ಮಜರಾಮರಣಗಳನ್ನು ನಾಶಪಡಿಸುವ ಆ ವಿಷ್ಣುಭಕ್ತಿ ಎಂಬ ಅಮೃತರಸವನ್ನು ಶಾಂತಚಿತ್ತದಿಂದ ಅನವರತ ಪಾನಮಾಡುತ್ತಿರುವನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದ ಉತ್ತರಾರ್ಧದಲ್ಲಿ
ನಾರಾಯಣನಾರದ ಸಂವಾದದಲ್ಲಿ ಭಗವದ್ಗುಣವರ್ಣನಾ ಸಂದರ್ಭದಲ್ಲಿ
ಮಹೇಂದ್ರನ ದರ್ಪಭಂಗ ಪ್ರಕರಣದಲ್ಲಿ ಶಚೀದೇವಿಯ ಶೋಕ
ಪರಿಹಾರವನ್ನೂ ಶಚೀಕೃತವಾದ ಗುರುಸ್ತೋತ್ರವನ್ನೂ ತಿಳಿಸುವ
ಐವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಐವತ್ತೊಂಭನೆಯ ಅಧ್ಯಾಯದ ಸಾರಾಂಶ.

ದೇವೇಂದ್ರನ ದರ್ಪಭಂಗದ ಕಥೆ: —ಒಮ್ಮೆ ದೇವೇಂದ್ರನು ತನ್ನ ಸಭೆಯಲ್ಲಿ ರತ್ನಸಿಂಹಾಸನದಲ್ಲಿ ಕುಳಿತಿದ್ದಾಗ ಗುರುವಾದ ಬೃಹಸ್ಪತ್ಯಾಚಾರ್ಯನು ಬಂದರೂ ಪ್ರತ್ಯುತ್ಥಾನಮಾಡಲಿಲ್ಲ. ಅದರ ಪರಿಣಾಮವಾಗಿ ಇಂದ್ರನಿಗೆ ಬ್ರಹ್ಮಹತ್ಯಾ ದೋಷವು ಒದಗಿತು. ಅದರಿಂದ ತಪ್ಪಿಸಿಕೊಳ್ಳಲು ಇಂದ್ರನು ರಾಜ್ಯಭ್ರಷ್ಟನಾಗಿ ವಿಷ್ಣುಸರೋವರವನ್ನು ಹೊಕ್ಕನು. ಬ್ರಹ್ಮಹತ್ಯೆಯು ಅಲ್ಲಿಗೆ ಹೋಗಲಾರದೆ ಅದರ ತೀರದ ಒಂದು ಆಲದಮರದಲ್ಲಿತ್ತು. ಇತ್ತ ನಹುಷಚಕ್ರವರ್ತಿಯು ನೂರುಯಾಗ ಮಾಡಿ ಇಂದ್ರನ ಪದವಿಗೆ ಬಂದನು. ಅವನು ಒಮ್ಮೆ ದೇವಗಂಗಾ ನದಿಗೆ ಸ್ನಾನಕ್ಕೆಂದು ಹೋಗುತ್ತಿದ್ದ ಶಚೀದೇವಿಯ ಅನುಪಮ ಸೌಂದರ್ಯವನ್ನು ನೋಡಿ ಅವಳಲ್ಲಿ ಮೋಹಿತನಾಗಿ ಆಕೆಯನ್ನು ರತಿಸುಖಕ್ಕೆ ಬಲಾತ್ಕರಿಸಿದನು. ಶಚಿಯು ನಹುಷನಿಗೆ ಎಷ್ಟು ವಿವೇಕ ಹೇಳಿದರೂ ಅವನು ಕೇಳಲಿಲ್ಲ. ಆಗ ಶಚಿಯು ತಾನು ರಜಸ್ವಲೆಯಾಗಿರುವುದಾಗಿ ಹೇಳಿ ಋತುಸ್ನಾತಳಾದ ನಂತರ ಅವನ ಸಂಗಮ ಮಾಡುವುದಾಗಿ ಹೇಳಿ, ಅಲ್ಲಿಂದ ಗುರುವಾದ ಬೃಹಸ್ಪತ್ಯಾಚಾರ್ಯನ ಮನೆಗೆ ಬಂದು, ತನ್ನ ಮತ್ತು ತನ್ನ ಪತಿಯ ಅಪರಾಧವನ್ನು ಕ್ಷಮಿಸಿ ತನಗೊದಗಿರುವ ವಿಪತ್ತನ್ನು ಪರಿಹರಿಸಬೇಕೆಂದು ಅಂಗಲಾಚಿ ಬೇಡಿಕೊಂಡಿದುದಲ್ಲದೆ ಗುರುವನ್ನು ಬಹುವಿಧವಾಗಿ ಸ್ತುತಿಸಿದಳು. ತಾರಾದೇವಿಯೂ ಸಹ ಶಚಿಯ ವಿಷಯದಲ್ಲಿ ಕನಿಕರಗೊಂಡು, ಪ್ರಸನ್ನನಾಗುವಂತೆ ತನ್ನ ಪತಿಗೆ ಹೇಳಿದಳು. ಆಗ ಗುರುವು ಪ್ರಸನ್ನನಾಗಿ ಇಂದ್ರನಿಗೂ ಶಚಿಗೂ ಕ್ಷೇಮ ಉಂಟಾಗಲೆಂದು ಹರಸಿದನು.

ಈ ಅಧ್ಯಾಯದಲ್ಲಿ ಬರುವ ಗುರುಸ್ತೋತ್ರವನ್ನು ಸರ್ವದಾ ಪಠಿಸುವವರು ತಮ್ಮ ಕಷ್ಟಗಳನ್ನು ಪರಿಹರಿಸಿಕೊಂಡು ಇಷ್ಟಾರ್ಥವನ್ನು ಪಡೆಯುವರಲ್ಲದೆ ಗುರುವಿನ ಅನುಗ್ರಹಕ್ಕೂ ಪಾತ್ರರಾಗುವುದರಲ್ಲಿ ಸಂಶಯವಿಲ್ಲ.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ಷಷ್ಟಿತಮೋಽಧ್ಯಾಯಃ ||

|| ಶ್ರೀ ನಾರಾಯಣ ಉವಾಚ ||

ಶಚೀಸ್ತೋತ್ರಂ ಸಮಾಕರ್ಣ್ಯ ಪರಿತುಷ್ಟೋ ಬೃಹಸ್ಪತಿಃ |
ಉವಾಚ ಮಧುರಂ ಶಾಂತಃ ಕಾಂತಾಮಿಂದ್ರಸ್ಯ ನಾರದ || ೧ ||

|| ಬೃಹಸ್ಪತಿರುವಾಚ ||

ತ್ಯಜ ವತ್ಸೇ ಭಯಂ ಸರ್ವಂ ಭಯಂ ಕಿಂ ತೇ ಮಯಿ ಸ್ಥಿತೇ |
ಯಥಾ ಕಚಸ್ಯ ಪತ್ನೀ ಮೇ ತಥಾ ತ್ವಮಪಿ ಶೋಭನೇ || ೨ ||

ಅರವತ್ತನೆಯ ಅಧ್ಯಾಯವು.

೧. ಶ್ರೀನಾರಾಯಣ:—ಎಲೈ ನಾರದನೇ, ಶಚಿಯು ಮಾಡಿದ ಸ್ತೋತ್ರವನ್ನು ಕೇಳಿ ಪರಿತುಷ್ಟನಾದ ಬೃಹಸ್ಪತಿಯು ಶಾಂತಚಿತ್ತನಾಗಿ ಇಂದ್ರನ ಕಾಂತೆಯಾದ ಶಚಿಯನ್ನು ಕುರಿತು ಮಧುರವಚನಗಳನ್ನಾಡಿದನು.

೨. ಬೃಹಸ್ಪತಿ:—ಎಲೌ ವತ್ಸೆಯೇ, ಎಲ್ಲ ಭಯವನ್ನೂ ದೂರಮಾಡು. ನಾನಿರುವಾಗ ನಿನಗೇತರ ಭಯ? ಎಲೌ ಶೋಭನಾಂಗಿಯೇ, ಕಚನ ಪತ್ನಿಯಾದ ದೇವಯಾನಿಯು ಹೇಗೆ ನನ್ನ ಸೊಸೆಯೋ ಅದೇ ರೀತಿ ನೀನೂ ನನ್ನ ಸೊಸೆಯಾಗಿರುವೆ.

ಯಥಾ ಪುತ್ರಸ್ತಥಾ ಶಿಷ್ಯೋ ನ ಭೇದಃ ಪುತ್ರಶಿಷ್ಯಯೋಃ ।
ತರ್ಪಣೇ ಪಿಂಡದಾನೇ ಚ ಪಾಲನೇ ಪರಿತೋಷಣೇ ॥ ೩ ॥

ಯಥಾಗ್ನಿದಾತಾ ಪುತ್ರಶ್ಚ ತಥಾ ಶಿಷ್ಯಶ್ಚ ನಿಶ್ಚಿತಂ ।
ಇತೀದಂ ಕಣ್ವಶಾಖಾಯಾಮುವಾಚ ಕಮಲೋದ್ಭವಃ ॥ ೪ ॥

ಪಿತಾ ಮಾತಾ ಗುರುರ್ಭಾರ್ಯಾ ಶಿಶುಶ್ಚಾನಾಥಬಾಂಧವಾಃ ।
ಏತೇ ಪುಂಸಾಂ ನಿತ್ಯಪೋಷ್ಯಾ ಇತ್ಯಾಹ ಕಮಲೋದ್ಭವಃ ॥ ೫ ॥

ಯಶ್ಚೈತಾಂಶ್ಚ ನ ಪುಷ್ಣಾತಿ ಭಸ್ಮಾಂತಂ ತಸ್ಯ ಸೂತಕಂ ।
ದೈವೇ ಪಿತ್ರ್ಯೇ ನ ಕರ್ಮಾರ್ಹಃ ಸೋಽಪೀತ್ಯಾಹ ಮಹೇಶ್ವರಃ ॥ ೬ ॥

ಕುರುತೇ ನರಬುದ್ಧಿಂ ಚ ಮಾತರಂ ಪಿತರಂ ಗುರುಂ ।
ಅಯಶಸ್ತಸ್ಯ ಸರ್ವತ್ರ ವಿಘ್ನ ಏವ ಪದೇ ಪದೇ ॥ ೭ ॥

---

೩. ಮಗನು ಹೇಗೋ ಶಿಷ್ಯನೂ ಹಾಗೆಯೇ. ಮಗನಿಗೂ ಶಿಷ್ಯನಿಗೂ ಭೇದವಿಲ್ಲ. ತರ್ಪಣದಲ್ಲಿಯೂ, ಪಿಂಡದಾನದಲ್ಲಿಯೂ, ಪಾಲನೆಪೋಷಣೆಗಳಲ್ಲಿಯೂ ಅವರಿಬ್ಬರಿಗೂ ಸಮಾನಾಧಿಕಾರವುಂಟು.

೪. ಪುತ್ರನು ಹೇಗೆ ತಂದೆಗೆ (ಸತ್ತನಂತರ) ಅಗ್ನಿದಾತನಾಗುವನೋ ಅದೇ ರೀತಿ ಶಿಷ್ಯನೂ ಆಗುವನೆಂದು ಬ್ರಹ್ಮನು ಕಣ್ವಶಾಖೆಯ ಮಂತ್ರದಲ್ಲಿ ನಿರೂಪಿಸಿರುವನು.

೫. ತಂದೆಯೂ, ತಾಯಿಯೂ, ಗುರುವೂ, ಹೆಂಡತಿಯೂ, ಶಿಶುವೂ, ಅನಾಥರೂ, ಬಂಧುಗಳೂ ಪುರುಷರ ಪೋಷ್ಯವರ್ಗಕ್ಕೆ ಸೇರಿದವರೆಂದು ಬ್ರಹ್ಮದೇವನು ನಿರೂಪಿಸಿರುವನು.

೬. ಯಾವನು ಈ ಪೋಷ್ಯರನ್ನು ಪೋಷಿಸುವುದಿಲ್ಲವೋ ಅವನ ದೇಹವು ಭಸ್ಮವಾದ ಕೂಡಲೇ ಬಂಧುಗಳ ಸೂತಕ ನಿವೃತ್ತಿಯಾಗುತ್ತದೆ. ಅಲ್ಲದೆ ಅವನೂ ಸಹ ದೇವಪಿತೃ ಕಾರ್ಯಗಳಿಗೆ ಅನರ್ಹನೆಂದು ಮಹೇಶ್ವರನು ಹೇಳಿದ್ದಾನೆ.

೭. ಯಾರು ತಾಯಿಯನ್ನೂ, ತಂದೆಯನ್ನೂ ಮತ್ತು ಗುರುವನ್ನೂ ಸಾಮಾನ್ಯ ಮನುಜರೆಂದು ತಿಳಿಯುವರೋ ಅವರಿಗೆ ಅಪಕೀರ್ತಿಯುಂಟಾಗುವುದಲ್ಲದೆ ಕ್ಷಣಕ್ಷಣಕ್ಕೂ ವಿಘ್ನಗಳು ಸಂಭವಿಸುವುವು.

ಸಂಪನ್ಮತ್ತೋ ಯಃ ಕರೋತಿ ಸ್ವಗುರೋಶ್ಚ ಪರಾಭವಂ ।
ಅಚಿರಾತ್ಸರ್ವನಾಶಶ್ಚ ಭವೇತ್ತಸ್ಯ ಸುನಿಶ್ಚಿತಂ ॥ ೮ ॥

ಮಾಂ ಚ ದೃಷ್ಟ್ವಾತ್ರ ಸಭಾಮಧ್ಯೇ ನೋತ್ತಸ್ಥೌ ಪಾಕಶಾಸನಃ ।
ತತ್ಫಲಂ ಭುಜ್ಯತೇ ಸಾಕ್ಷಾತ್ಸದ್ಯಃ ಪಶ್ಯ ಚ ಸಾಂಪ್ರತಂ ॥ ೯ ॥

ಅಹಂ ಕರೋಮಿ ಮೋಕ್ಷಂ ಚ ತವ ರಕ್ಷಾಂ ಸುನಿಶ್ಚಿತಂ ।
ಶಾಸಿತುಂ ರಕ್ಷಿತುಂ ಶಕ್ತಃ ಸ ಏವ ಗುರುರುಚ್ಯತೇ ॥ ೧೦ ॥

ನ ಪಶ್ಯತಿ ಸತೀತ್ವಂ ಚ ಶ್ಯಚಿಪ್ರದ್ಧಾಯೋಶ್ಚ ಯೋಷಿತಃ ।
ಯೋನ್ಮಾನಸೇ ವಿಕಲ್ಪಶ್ಚ ತಸ್ಯ ಧರ್ಮಶ್ಚ ನಶ್ಯತಿ ॥ ೧೧ ॥

ಭವಿಷ್ಯತಿ ಪ್ರಭಾವಸ್ತೇ ದುರ್ಗಾಯಾಶ್ಚ ಸಮಃ ಸತಿ ।
ಲಕ್ಷ್ಮೀಸಮಾ ಪ್ರತಿಷ್ಠಾ ಚ ಯಶಸ್ತ್ವತ್ಯಶಸಾ ಸಮಂ ॥ ೧೨ ॥

---

೮. ಯಾವನು ಸಂಪತ್ತಿನಿಂದ ಮದಿಸಿದವನಾಗಿ ತನ್ನ ಗುರುವಿಗೆ ತಿರಸ್ಕಾರ ಮಾಡುವನೋ ಅವನಿಗೆ ಬಹುಬೇಗ ಸರ್ವನಾಶವುಂಟಾಗುವುದೆಂಬುದು ಸುನಿಶ್ಚಿತವಾದುದು.

೯. ದೇವೇಂದ್ರನು ನನ್ನನ್ನು ನೋಡಿಯೂ ಸಹ ಸಭೆಯಲ್ಲಿ ಪ್ರತ್ಯುತ್ಥಾನ ಮಾಡದೆ ಕುಳಿತಿದ್ದನು. ಅದರ ಫಲವನ್ನು ಈಗಲೇ ಅನುಭವಿಸುತ್ತಿರುವುದನ್ನು ನೀನು ನೋಡುತ್ತಿರುವೆ.

೧೦. ಈಗ ನಾನು ಅವನ ದುಃಖವಿಮೋಚನೆಮಾಡಿ, ನಿನ್ನನ್ನು ನಿಶ್ಚಯವಾಗಿಯೂ ರಕ್ಷಿಸುವೆನು. ಯಾವನು ಶಿಕ್ಷಿಸಲೂ, ರಕ್ಷಿಸಲೂ ಸಮರ್ಥನೋ ಅವನೇ ಸರಿಯಾದ ಗುರುವೆನಿಸುವನು.

೧೧. ಮನಸ್ಸಿನಲ್ಲಿ ಪರಿಶುದ್ಧಳಾಗಿರುವ ಹೆಂಡತಿಯ ಪಾತಿವ್ರತ್ಯವನ್ನು ಅರಿಯದೆ ಯಾವನು ಅವಳ ವಿಷಯದಲ್ಲಿ ಶಂಕಿಸುವನೋ ಅವನ ಸದ್ಧರ್ಮವೆಲ್ಲವೂ ನಾಶಹೊಂದುವುದು.

೧೨. ಎಲೌ ಪತಿವ್ರತೆಯೇ, ನಿನ್ನ ಪ್ರಭಾವವು ದುರ್ಗಾದೇವಿಯ ಪ್ರಭಾವಕ್ಕೆ ಸಮಾನವಾಗುವುದು. ಲಕ್ಷ್ಮೀದೇವಿಯ ಪ್ರತಿಷ್ಠೆಗೆ ಸಮಾನವಾದ ಪ್ರತಿಷ್ಠೆಯೂ, ಕೀರ್ತಿಗೆ ಸದೃಶವಾದ ಸತ್ಕೀರ್ತಿಯೂ ನಿನಗೆ ಲಭಿಸುವುದು.

ಸೌಭಾಗ್ಯಂ ರಾಧಿಕಾತುಲ್ಯಂ ತತ್ಸಮಂ ಪ್ರೇಮ ಭರ್ತರಿ ।
ತತ್ತುಲ್ಯಂ ಗೌರವಂ ಮಾನ್ಯಂ ಪ್ರೀತೀಃ ಪ್ರಾಧಾನ್ಯಮಿಾಶ್ವರೇ ॥ ೧೩ ॥

ರೋಹಿಣ್ಯಾಶ್ಚ ಸಮಾಪೇಕ್ಷಾ ಪೂಜ್ಯಾ ಚ ಭಾರತೀಸಮಾ ।
ಶುದ್ಧಾ ನಿರುಪಮಾ ಶಶ್ವತ್ಸಾವಿತ್ರೀಸದೃಶೀ ಸದಾ ॥ ೧೪ ॥

ಏತಸ್ಮಿನ್ನಂತರೇ ತತ್ರ ಆಗತೋ ನಹುಷಾಚ್ಚರಃ ।
ಉವಾಚ ವಚನಂ ಭೀತೋ ವಾಕ್ಪತೇರ್ಗೋಚರೇ ತತಃ ॥ ೧೫ ॥

॥ ದೂತ ಉವಾಚ ॥

ಉತ್ತಿಷ್ಠ ದೇವಿ ಶೀಘ್ರಂ ತ್ವಂ ಗಚ್ಛಸ್ವ ನಹುಷಂ ಪ್ರತಿ ।
ಕ್ರೀಡಾಂ ಕರ್ತುಂ ಚ ರಹಸಿ ರಮ್ಯೇ ನಂದನಕಾನನೇ ॥ ೧೬ ॥

---

೧೩. ಪತಿಪ್ರೇಮದಲ್ಲಿ ನೀನು ರಾಧೆಗೆ ಸದೃಶಳಾಗಿ ಸೌಭಾಗ್ಯವತಿಯಾಗುವೆ. ಅವಳಿಗೆ ಸಮಾನವಾದ ಗೌರವವನ್ನೂ, ಮಾನ್ಯತೆಯನ್ನೂ ಪಡೆಯುವುದಲ್ಲದೆ ನಿನ್ನ ಪತಿಗೆ ಪ್ರಧಾನಳೂ ಆಗುವೆ.

೧೪. ರೋಹಿಣಿಯಂತೆ ಪತಿಯ ಪ್ರೇಮಾಸ್ಪದಳೂ, ಭಾರತಿಯಂತೆ ಪೂಜ್ಯಳೂ, ಸಾವಿತ್ರಿದೇವಿಯಂತೆ ಸರ್ವದಾ ಶುದ್ಧಳೂ ನಿರುಪಮಳೂ ಆಗುವೆ.

೧೫. ಈ ಸಮಯಕ್ಕೆ ಸರಿಯಾಗಿ ನಹುಷನಿಂದ ಕಳುಹಿಸಲ್ಪಟ್ಟ ದೂತನು ಅಲ್ಲಿಗೆ ಬಂದನು. ಅಲ್ಲಿ ಬೃಹಸ್ಪತಿಯ ಎದುರಿನಲ್ಲಿ ಮಾತನಾಡಲು ಹೆದರಿಕೆ ಯಾದರೂ ತನ್ನ ಪ್ರಭುವಿನ ಅಣತಿಯಂತೆ ಒಂದೆರಡು ಮಾತನ್ನಾಡಿದನು.

೧೬. ದೂತ:—ಎಲೌ ದೇವಿಯೇ, ನೀನು ಬೇಗ ಎದ್ದು ನಹುಷನ ಸಮಿಾಪಕ್ಕೆ ಹೋಗುವವಳಾಗು. ರಮ್ಯವಾದ ನಂದನವನದಲ್ಲಿ ಅವನೊಡನೆ ಏಕಾಂತಸುಖಾನುಭವಕ್ಕಾಗಿ ಹೋಗು.

ದೂತಸ್ಯ ವಚನಂ ಶ್ರುತ್ವಾ ತಮುವಾಚ ಬೃಹಸ್ಪತಿಃ ।
ಕಂಪಿತಾವಯವಃ ಕೋಪಾದ್ರಕ್ತಪಂಕಜಲೋಚನಃ ॥ ೧೭ ॥

॥ ಗುರುರುವಾಚ ॥

ನಹುಷಂ ವದ ಗತ್ವಾ ತ್ವಂ ಶಚೀಂ ಚೇದ್ಭೋಕ್ತುಮಿಚ್ಛಸಿ ।
ಅಪೂರ್ವ ಯಾನಮಾರುಹ್ಯ ನಿಶಾಯಾಮಾಗಮಿಷ್ಯಸಿ ॥ ೧೮ ॥

ಸಪ್ತರ್ಷೀಣಾಂ ಚ ಸ್ಕಂಧೇ ಚ ದತ್ವಾ ಸ್ವಶಿಬಿಕಾಂ ಶುಭಾಂ ।
ತಾಮಾರುಹ್ಯ ಸುವೇಷಶ್ಚ ಗಮನಂ ಕರ್ತುಮರ್ಹಸಿ ॥ ೧೯ ॥

ವಾಕ್ಪತೇರ್ವಚನಂ ಶ್ರುತ್ವಾ ಗತ್ವೋವಾಚ ನೃಪಂ ತದಾ ।
ದೂತಸ್ಯ ವಚನಂ ಶ್ರುತ್ವಾ ಪ್ರಹಸ್ಯೋವಾಚ ಕಿಂಕರಂ ॥ ೨೦ ॥

---

೧೭. ಈ ರೀತಿಯಾದ ದೂತನ ಮಾತನ್ನು ಕೇಳಿ ಕೋಪದಿಂದ ಕಣ್ಣುಗಳನ್ನು ಕೆಂಪಾಗಿ ಮಾಡಿಕೊಂಡು, ನಡುಗುತ್ತಿರುವ ಅವಯವಗಳಿಂದ ಕೂಡಿ ಬೃಹಸ್ಪತಿಯು ಆ ದೂತನನ್ನು ಕುರಿತಿಂತೆಂದನು.

೧೮. ಗುರು :—' ನೀನು ಶಚಿಯನ್ನು ಉಪಭೋಗಿಸಲಿಚ್ಛಿಸುವುದಾದರೆ ಅಪೂರ್ವವಾದ ವಾಹನವನ್ನೇರಿ ಅರ್ಧರಾತ್ರಿಯಲ್ಲಿ ಬಾ ' ಎಂಬುದಾಗಿ ನಾನು ಹೇಳಿದೆನೆಂದು ನಹುಷನಿಗೆ ಹೇಳು.

೧೯. ' ನಿನ್ನ ವಾಹನವಾದ ಪಲ್ಲಕ್ಕಿಯನ್ನು ಸಪ್ತರ್ಷಿಗಳ ಹೆಗಲ ಮೇಲೆ ಹೊರಿಸಿಕೊಂಡು ಅದನ್ನೇರಿ ಸುವೇಷಭೂಷಿತನಾಗಿ ನೀನು ಬರಬೇಕು. ' ಎಂದು ಹೇಳು.

೨೦. ಬೃಹಸ್ಪತಿಯ ಮಾತನ್ನು ಕೇಳಿ ದೂತನು ನಹುಷನ ಸಮೀಪಕ್ಕೆ ಹೋಗಿ ಹಾಗೆಯೇ ಹೇಳಿದನು. ದೂತನ ಮಾತನ್ನು ಕೇಳಿ ನಹುಷನು ನಸುನಕ್ಕು ಆ ದೂತನಿಗಿಂತೆಂದನು.

ಗಚ್ಛಗಚ್ಛ ತ್ವರನ್ ಗಚ್ಛ ಸಪ್ತರ್ಷೀಣಾಂ ಸಮಾನಯ ।
ಉಪಾಯಂ ಚ ಕರಿಷ್ಯಾಮಿ ತೈಃ ಸಾರ್ಧಂ ಸಾಂಪ್ರತಂ ಚರ ॥ ೨೧ ॥

ನೃಪಸ್ಯ ವಚನಂ ಶ್ರುತ್ವಾ ಗತ್ವಾ ದೂತಸ್ತದಂತಿಕಂ ।
ಉವಾಚ ಸರ್ವಾಂಸ್ತತ್ರೈವ ಯಥೋಕ್ತಂ ನಹುಷೇಣ ಚ ॥ ೨೨ ॥

ದೂತಸ್ಯ ವಚನಂ ಶ್ರುತ್ವಾ ಯಯುಃ ಸಪ್ತರ್ಷಯೋ ಮುದಾ ।
ರಾಜಾ ದೃಷ್ಟ್ವಾ ಚ ತಾನ್ಸರ್ವಾನ್ನನಾಮೋವಾಚ ಸಾದರಂ ॥ ೨೩ ॥

॥ ನಹುಷ ಉವಾಚ ॥

ಯೂಯಂ ಚ ಬ್ರಹ್ಮಣಃ ಪುತ್ರಾ ಜ್ವಲಂತೋ ಬ್ರಹ್ಮತೇಜಸಾ ।
ಬ್ರಹ್ಮಣಃ ಸದೃಶಾಃ ಸರ್ವೇ ಸತತಂ ಭಕ್ತವತ್ಸಲಾಃ ॥ ೨೪ ॥

ನಾರಾಯಣಪರಾಃ ಶಶ್ವಚ್ಛುದ್ಧಸತ್ತ್ವಸ್ವರೂಪಿಣಃ ।
ಮೋಹಮಾತ್ಸರ್ಯಹೀನಾಶ್ಚ ದರ್ಪಾಹಂಕಾರವರ್ಜಿತಾಃ ॥ ೨೫ ॥

---

೨೧. ಹೋಗು, ಹೋಗು, ಬೇಗ ಹೋಗಿ ಸಪ್ತರ್ಷಿಗಳನ್ನು ಕರೆದು ಕೊಂಡು ಬಾ. ಅವರೊಡನೆ ನಾನು ಹೋಗಲು ಉಪಾಯವನ್ನು ಪರ್ಯಾಲೋಚಿಸುವೆನು.

೨೨. ರಾಜನ ಮಾತನ್ನು ಕೇಳಿ ದೂತನು ಸಪ್ತರ್ಷಿಗಳ ಸಮೀಪಕ್ಕೆ ಹೋಗಿ ರಾಜಾಜ್ಞೆಯನ್ನು ಅವರಿಗೆ ವಿನಯದಿಂದ ವಿಜ್ಞಾಪಿಸಿಕೊಂಡನು.

೨೩. ದೂತನ ಮಾತನ್ನು ಕೇಳಿ ಸಪ್ತರ್ಷಿಗಳೆಲ್ಲ ಸಂತೋಷದಿಂದ ಅಲ್ಲಿಗೆ ಬಂದರು. ರಾಜನು ಅವರೆಲ್ಲರೂ ಬಂದುದನ್ನು ನೋಡಿ ಆದರದಿಂದ ಅವರಿಗೆ ನಮಸ್ಕರಿಸಿ ಇಂತೆಂದನು.

೨೪. ನಹುಷ:—ಬ್ರಹ್ಮನ ಪುತ್ರರಾದ ನೀವೆಲ್ಲರೂ ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುತ್ತಿರುವಿರಿ. ಬ್ರಹ್ಮನಿಗೆ ಸಮಾನರಾದ ನೀವೆಲ್ಲರೂ ಸರ್ವದಾ ಭಕ್ತವತ್ಸಲರಾಗಿರುವಿರಿ.

೨೫. ಯಾವಾಗಲೂ ನಾರಾಯಣನ ಧ್ಯಾನದಲ್ಲಿ ನಿರತರೂ, ಶುದ್ಧ ಸತ್ವಸ್ವರೂಪಿಗಳೂ ಆದ ನೀವು ಮೋಹಮಾತ್ಸರ್ಯಾದಿಗಳನ್ನೂ, ದರ್ಪಾಹಂಕಾರಗಳನ್ನೂ ದೂರಮಾಡಿರುವಿರಿ.

ನಾರಾಯಣಸಮಾಃ ಸರ್ವೇ ತೇಜಸಾ ಯಶಸಾ ಸದಾ ।
ಗುಣೇನ ಕೃಪಯಾ ಪ್ರೇಮ್ಣಾ ವರದಾನೇನ ನಿಶ್ಚಿತಂ || ೨೬ ||

ಇತ್ಯುಕ್ತ್ವಾ ಪ್ರಣತೋ ರಾಜಾ ತುಷ್ಟಾವ ಚ ರುರೋದ ಚ ।
ದೃಷ್ಟ್ವಾ ತೇ ಕಾತರಂ ಭೂಪಮೂಚುಃ ಪರಹಿತೈಷಿಣಃ || ೨೭ ||

|| ಋಷಯ ಊಚುಃ ||

ವರಂ ವೃಣೀಷ್ವ ಹೇ ವತ್ಸ ಯತ್ತೇ ಮನಸಿ ವಾಂಛಿತಂ ।
ಸರ್ವಂ ದಾತುಂ ವಯಂ ಶಕ್ತಾ ನಾಸಾಧ್ಯಂ ನಶ್ಚ ಕಿಂಚನ || ೨೮ ||

ಇಂದ್ರತ್ವಂ ವಾ ಮನುತ್ವಂ ವಾ ಚಿರಾಯುರ್ವಾ ತತಃ ಪರಂ ।
ಸಪ್ತದ್ವೀಪೇಶ್ವರತ್ವಂ ಚಾಪ್ಯತೀವ ಸುಚಿರಂ ಸುಖಂ || ೨೯ ||

---

೨೬ ನೀವೆಲ್ಲರೂ ತೇಜಸ್ಸಿನಲ್ಲಿಯೂ, ಯಶಸ್ಸಿನಲ್ಲಿಯೂ ನಾರಾಯಣನಿಗೆ ಸಮಾನರಾಗಿರುವಿರಿ. ಸದ್ಗುಣದಲ್ಲಿಯೂ, ದಯೆಯಲ್ಲಿಯೂ, ಪ್ರೇಮದಲ್ಲಿಯೂ, ವರದಾನ ಮಾಡುವುದರಲ್ಲಿಯೂ ನಾರಾಯಣನಿಗೇನೂ ಕಮ್ಮಿಯಿಲ್ಲ.

೨೭. ನಹುಷನು ಈ ರೀತಿಯಾಗಿ ಆ ಸಪ್ತರ್ಷಿಗಳನ್ನು ಹೊಗಳಿ ಅಳಲಾರಂಭಿಸಿದನು. ಆಗ ಈ ರೀತಿ ಕಾತರನಾದ ರಾಜನನ್ನು ನೋಡಿ ಪರಹಿತನಿರತರಾದ ಆ ಋಷಿಗಳು ಅವನಿಗಿಂತೆಂದರು.

೨೮. ಋಷಿಗಳು :—ಎಲೈ ವತ್ಸನೇ, ನಿನ್ನ ಮನಸ್ಸಿನಲ್ಲಿರುವ ವರವನ್ನು ನಿಃಸಂಕೋಚವಾಗಿ ಬೇಡು. ನಾವು ಯಾವ ವರವನ್ನಾದರೂ ಕೊಡಲು ಶಕ್ತರಾಗಿದ್ದೇವೆ. ನಮಗೆ ಅಸಾಧ್ಯವಾದುದಾವುದೂ ಇಲ್ಲ.

೨೯ ಇಂದ್ರಪದವಿಯನ್ನಾಗಲೀ, ಮನುಪದವಿಯನ್ನಾಗಲೀ, ದೀರ್ಘಾಯುಷ್ಯವನ್ನಾಗಲೀ, ಅದಕ್ಕಿಂತಲೂ ಮೇಲಾದ ಸಪ್ತದ್ವೀಪಾಧಿಪತ್ಯವನ್ನಾಗಲೀ ಬಯಸಿ ಚಿರಕಾಲ ಸುಖವನ್ನಪೇಕ್ಷಿಸುವೆಯಾ?

ಅಥಾಪಿ ಸರ್ವಸಿದ್ಧಿತ್ವಂ ಸರ್ವೈಶ್ವರ್ಯಂ ಸುದುರ್ಲಭಂ ।
ಮುಕ್ತಿಂ ವಾ ಹರಿಭಕ್ತಿಂ ವಾ ತಪಸಾ ಯಾ ಸುದುರ್ಲಭಾ ॥ ೩೦ ॥

ಕಿಮೀಪ್ಸಿತಂ ತೇ ಹೇ ವತ್ಸ ಬ್ರೂಹಿ ನಃ ಸಾಂಪ್ರತಂ ಮುದಾ ।
ಸರ್ವಂ ತುಭ್ಯಂ ಪ್ರದಾಯೈವ ಯಾಸ್ಯಾಮಸ್ತಪಸೇ ಮುದಾ ॥ ೩೧ ॥

ಯುಗಲಕ್ಷಸಮಂ ಯಚ್ಚ ಕ್ಷಣಂ ಕೃಷ್ಣಾರ್ಚನಂ ವಿನಾ ।
ದುರ್ದಿನಂ ದುರ್ದಿನಂ ಯತ್ತದ್‌ಧ್ಯಾನಸೇವನವರ್ಜಿತಂ ॥ ೩೨ ॥

ವಿನಾ ತತ್ಸೇವನಂ ಯೋ ಹಿ ವಿಷಯಾನ್ಯಂ ಚ ವಾಂಛತಿ ।
ವಿಷಮತ್ತಿ ಪ್ರಣಾಶಾಯ ವಿಹಾಯಾಮೃತಮೀಪ್ಸಿತಂ ॥ ೩೩ ॥

---

೩೦. ಅಥವಾ ಸರ್ವರಿಗೂ ದುರ್ಲಭವಾದ ಸರ್ವಸಿದ್ಧಿಯನ್ನೂ, ಸರ್ವೈಶ್ವರ್ಯವನ್ನೂ, ತಪಸ್ಸಿನಿಂದ ದುರ್ಲಭವಾದ ಮುಕ್ತಿಯನ್ನೂ, ಹರಿಭಕ್ತಿಯನ್ನೂ ನೀನು ಬಯಸುವೆಯಾ ?

೩೧. ಎಲೈ ವತ್ಸನೇ, ನಿನ್ನ ಇಷ್ಟಾರ್ಥವೇನೆಂಬುದನ್ನು ನಮಗೆ ಈಗ ಸಂತೋಷದಿಂದ ಹೇಳು. ನೀನು ಬೇಡಿದ ವರವನ್ನು ನಿನಗೆ ಅನುಗ್ರಹಿಸಿದ ನಂತರ ನಾವು ತಪಸ್ಸಿಗೆ ಹೋಗುತ್ತೇವೆ.

೩೨. ಶ್ರೀಕೃಷ್ಣಪರಮಾತ್ಮನ ಅರ್ಚನೆಯನ್ನು ಮಾಡದ ಒಂದು ಕ್ಷಣವೂ ಸಹ ನಮಗೆ ಲಕ್ಷ ಯುಗಗಳಂತೆ ತೋರುವುದು. ಶ್ರೀಕೃಷ್ಣಪರಮಾತ್ಮನ ಧ್ಯಾನ ಮತ್ತು ಸೇವೆಯಿಲ್ಲದ ದಿವಸವು ಖಂಡಿತವಾಗಿಯೂ ನಮಗೆ ದುರ್ದಿನವೆನಿಸುವುದು.

೩೩. ಯಾವನು ಶ್ರೀಕೃಷ್ಣಪರಮಾತ್ಮನ ಸೇವೆಯನ್ನು ಬಿಟ್ಟು ಇತರವಾದ ವಿಷಯಸುಖಗಳನ್ನು ಬಯಸುವನೋ ಅವನು ಅಭೀಪ್ಸಿತವಾದ ಅಮೃತವನ್ನು ಬಿಟ್ಟು ಆತ್ಮನಾಶಕ್ಕಾಗಿ ವಿಷವನ್ನು ತಿಂದಂತಾಗುತ್ತದೆ.

ಬ್ರಹ್ಮಾ ಶಿವಶ್ಚ ಧರ್ಮಶ್ಚ ವಿಷ್ಣುಶ್ಚಾಪಿ ಮಹಾನ್ವಿರಾಟ್ |
ಗಣೇಶಶ್ಚ ದಿನೇಶಶ್ಚ ಶೇಷಶ್ಚ ಸನಕಾದಯಃ || ೩೪ ||

ಏತೇ ಯಚ್ಚರಣಾಂಭೋಜಂ ಧ್ಯಾಯಂತೋಽಹರ್ನಿಶಂ ಮುದಾ |
ಜನ್ಮಮೃತ್ಯುಜರಾವ್ಯಾಧಿಹರಂ ತನ್ನಿರತಾವಯಂ || ೩೫ ||

ತೇಷಾಂ ಚ ವಚನಂ ಶ್ರುತ್ವಾ ತಾನುವಾಚ ನೃಪೇಶ್ವರಃ |
ಸಲಜ್ಜಿತೋ ನಮ್ರವಕ್ತ್ರೋ ಮಾಯಾಮೋಹಿತ ಮಾನಸಃ || ೩೬ ||

|| ನಹುಷ ಉವಾಚ ||

ಸರ್ವಂ ದಾತುಂ ಸಮರ್ಥಾಶ್ಚ ಯೂಯಂ ಚ ಭಕ್ತವತ್ಸಲಾಃ |
ಅಧುನಾ ದೇಹಿ ಮೇ ತೂರ್ಣಂ ಶಚೀದಾನಮಭೀಪ್ಸಿತಂ || ೩೭ ||

ಸಪ್ತರ್ಷಿವಾಹನಂ ಕಾಂತಂ ಶಚೀಚ್ಛತಿ ಮಹಾಸತೀ |
ಏತದೇವ ಮಮ ವರಂ ನಿಷ್ಪನ್ನಂ ಕುರುತಾಚಿರಂ || ೩೮ ||

೩೪-೩೫. ಬ್ರಹ್ಮ, ಶಿವ, ಧರ್ಮ, ವಿಷ್ಣು, ಮಹಾವಿರಾಟ್, ಗಣೇಶ, ದಿನೇಶ (ಸೂರ್ಯ), ಆದಿಶೇಷ ಮತ್ತು ಸನಕಾದಿಗಳು ಯಾವ ಪರಮಾತ್ಮನ ಪಾದಕಮಲಗಳನ್ನು ಹಗಲೂ ರಾತ್ರಿಯೂ ಧ್ಯಾನಮಾಡುವರೋ ಅಂಥ ಜನ್ಮಮೃತ್ಯುಜರಾವ್ಯಾದಿ ಪರಿಹಾರಕರವಾದ ಶ್ರೀಕೃಷ್ಣಪರಮಾತ್ಮನ ಚರಣಕಮಲಗಳ ಸೇವೆಯಲ್ಲಿ ನಾವು ನಿರತರಾಗಿರುವೆವು.

೩೬. ಈ ರೀತಿಯಾದ ಆ ಸಪ್ತರ್ಷಿಗಳ ಮಾತನ್ನು ಕೇಳಿ ಲಜ್ಜೆಗೊಂಡು ಆ ನಹುಷನು ಮಾಯಾಮೋಹಿತಚಿತ್ತನಾಗಿ ನಮ್ರವದನದಿಂದ ಆ ಋಷಿಗಳನು ಕುರಿತಿಂತೆಂದನು.

೩೭. ನಹುಷ :—ಭಕ್ತವತ್ಸಲರಾದ ನೀವೆಲ್ಲರೂ ಕೇಳಿದ್ದನ್ನೆಲ್ಲ ಕೊಡಲು ಸಮರ್ಥರಾಗಿರುವಿರಿ. ಈಗ ನನಗೆ ಅಭೀಪ್ಸಿತಳಾದ ಶಚಿಯನ್ನು ಜಾಗ್ರತೆಯಾಗಿ ನನಗೆ ದಾನಮಾಡಿರಿ.

೩೮. ಮಹಾಪತಿವ್ರತೆಯಾದ ಆ ಶಚಿಯು ಸಪ್ತರ್ಷಿಗಳಿಂದ ಹೊರಲ್ಪಡುವ ರಾಜನನ್ನು ಕಾಂತನನ್ನಾಗಿ ಹೊಂದಲಿಷ್ಟಪಡುವಳು. ಇದೇ ನಾನು ನಿಮ್ಮನ್ನು ಬೇಡುವ ವರ. ಈ ವರವನ್ನು ಜಾಗ್ರತೆಯಾಗಿ ಕರುಣಿಸಿ.

ನಹುಷಸ್ಯವಚಃ ಶ್ರುತ್ವಾ ಮುನಯಶ್ಚ ಪರಸ್ಪರಂ ।
ಅತ್ಯುಚ್ಚೈರ್ಜಹಸುಃಸರ್ವೇ ಕೌತುಕೇನ ಚ ನಾರದ ॥ ೩೯ ॥

ರಾಜಾನಂ ಮೋಹಿತಂ ಮತ್ವಾ ವೇಷ್ಟಿತಂ ವಿಷ್ಣುಮಾಯಯಾ ।
ಚಕ್ರುಃ ಪ್ರತಿಜ್ಞಾಂ ವೋಢುಂ ಚ ಕೃಪಯಾ ದೀನವತ್ಸಲಾಃ ॥ ೪೦ ॥

ಚಕ್ರುಃ ಸ್ಕಂಧೇ ತಚ್ಛಿಬಿಕಾಂ ಮುಕ್ತಾಮಾಣಿಕ್ಯಭೂಷಿತಾಂ ।
ರಾಜಾ ಯಯೌ ಸುವೇಷಶ್ಚ ರತ್ನಭೂಷಣಭೂಷಿತಃ ॥ ೪೧ ॥

ದೃಷ್ಟ್ವಾಚಾತಿವಿಲಂಬಂ ಚ ಭರ್ತ್ಸಯಾಮಾಸ ತಾನ್ನೃಪಃ ।
ಕ್ರುಧಾ ಶಶಾಪ ದುರ್ವಾಸಾಶ್ಚಾಗ್ರಗಾಮೀ ಚ ವರ್ತ್ಮನಿ ॥ ೪೨ ॥

ಮಹಾನಜಗರೋ ಭೂತ್ವಾ ಪತ ವೈ ಮೂಢಮಾನಸ ।
ದರ್ಶನಾದ್ಧರ್ಮಪುತ್ರಸ್ಯ ತವ ಮೋಕ್ಷೋ ಭವಿಷ್ಯತಿ ॥ ೪೩ ॥

---

೩೯. ಎಲೈ ನಾರದನೇ, ನಹುಷನಾಡಿದ ಈ ಮಾತನ್ನು ಕೇಳಿ ಆ ಮುನಿಗಳೆಲ್ಲರೂ ಕುತೂಹಲದಿಂದ ಒಬ್ಬರನ್ನೊಬ್ಬರು ನೋಡುತ್ತಾ ಗಟ್ಟಿಯಾಗಿ ನಕ್ಕುಬಿಟ್ಟರು

೪೦. ಆ ರಾಜನು ವಿಷ್ಣುಮಾಯೆಗೊಳಗಾಗಿ ಶಚೀದೇವಿಯಲ್ಲಿ ಮೋಹಿತನಾಗಿರುವುದನ್ನು ತಿಳಿದು ದೀನವತ್ಸಲರಾದ ಆ ಋಷಿಗಳು ದಯಾನ್ವಿತರಾಗಿ ಅವನನ್ನು ಎತ್ತಿಕೊಂಡು ಹೋಗಲು ಒಪ್ಪಿದರು

೪೧. ಮುತ್ತುಮಾಣಿಕ್ಯಗಳನ್ನು ಮೆಟ್ಟಿರುವ ಆ ರಾಜನ ಪಲ್ಲಕ್ಕಿಯನ್ನು ಸಪ್ತರ್ಷಿಗಳು ಹೆಗಲಿನ ಮೇಲೆ ಧರಿಸಿದರು. ರಾಜನೂ ಸಹ ರತ್ನಾಲಂಕಾರ ಭೂಷಿತನಾಗಿ ಆ ಪಲ್ಲಕ್ಕಿಯಲ್ಲಿ ಕುಳಿತು ಹೊರಟನು.

೪೨. ಅವರು ಬಹಳ ನಿಧಾನವಾಗಿ ಹೋಗುತ್ತಿರುವುದನ್ನು ನೋಡಿ ರಾಜನು ಅವರನ್ನು ಗದರಿಸಿದನು ಆಗ ಮಾರ್ಗದಲ್ಲಿ ಮುಂದಾಗಿ ಹೋಗುತ್ತಿದ್ದ ದೂರ್ವಾಸಮುನಿಯು ಕೋಪಗೊಂಡು ಇಂತು ಶಾಪವಿತ್ತನು.

೪೩ ಎಲೈ ಮೂಢಾತ್ಮನೇ, ನೀನು ಹೆಬ್ಬಾವಿನ ಜನ್ಮವನ್ನು ಪಡೆದು ಕೆಳಕ್ಕೆ ಬೀಳುವವನಾಗು. ನೀನು ಧರ್ಮರಾಜನನ್ನು ನೋಡಿದ ನಂತರ ನಿನಗೆ ಈ ಶಾಪವಿಮೋಚನೆಯಾಗುವುದು.

ರತ್ನಯಾನೇನ ವೈಕುಂಠಂ ಗತ್ವಾ ವೈಕುಂಠಸೇವನಂ ।
ಕರಿಷ್ಯಸಿ ಮಹಾರಾಜ ನ ಕರ್ಮ ನಿಷ್ಫಲಂ ಭವೇತ್ । ॥ ೪೪ ॥

ಇತ್ಯುಕ್ತ್ವಾ ಪ್ರಯಯುಃ ಸರ್ವೇ ಪ್ರಹಸ್ಯ ಮುನಿಸತ್ತಮಾಃ ।
ರಾಜಾ ಪಪಾತ ತಚ್ಛಾಪಾತ್ಸರ್ಪೋ ಭೂತ್ವಾ ಮಹಾಮುನೇ ॥ ೪೫ ॥

ಶಚೀ ಜಗಾಮ ತಚ್ಛ್ರುತ್ವಾ ಗುರುಂ ನತ್ವಾಮರಾವತೀಂ ।
ಯಯೌ ಬೃಹಸ್ಪತಿಃ ಶೀಘ್ರಂ ಯತ್ರೇಂದ್ರಃ ಪದ್ಮತಂತುಷು ॥ ೪೬ ॥

ಗತ್ವಾ ಸರೋವರಾಭ್ಯಾಶಮಾಜುಹಾವ ಸುರೇಶ್ವರಂ ।
ಅತಿಪ್ರಸನ್ನವದನಃ ಕೃಪಯಾ ಚ ಕೃಪಾನಿಧಿಃ ॥ ೪೭ ॥

॥ ಬೃಹಸ್ಪತಿರುವಾಚ ॥

ಆಯಿ ವತ್ಸ ತ್ವಮಾಗಚ್ಛ ಭಯಂ ಕಿಂ ತೇ ಮಯಿ ಸ್ಥಿತೇ ।
ತ್ಯಜ ಭೀತಿಮಿಹಾಗಚ್ಛ ಗುರುಸ್ತೇಽಹಂ ಬೃಹಸ್ಪತಿಃ ॥ ೪೮ ॥

---

೪೪. ಎಲೈ ಮಹಾರಾಜನೇ, ಅನಂತರ ನೀನು ರತ್ನಯಾನದಿಂದ ವೈಕುಂಠಕ್ಕೆ ಹೋಗಿ ಶ್ರೀಹರಿಯನ್ನು ಸೇವಿಸುವೆ. ಮಾಡಿದ ಕರ್ಮವು ಎಂದೆಂದಿಗೂ ನಿಷ್ಫಲವಾಗುವುದಿಲ್ಲ.

೪೫. ಹೀಗೆ ಹೇಳಿ ಆ ಮುನಿಶ್ರೇಷ್ಠರೆಲ್ಲರೂ ನಗುತ್ತ ಹೊರಟುಹೋದರು. ಎಲೈ ಮಹರ್ಷಿಯೇ, ಆ ರಾಜನೂ ಸಹ ಅವರ ಶಾಪದಿಂದ ಸರ್ಪವಾಗಿ ಕೆಳಗೆ ಬಿದ್ದನು.

೪೬. ಈ ವಿಷಯವನ್ನು ಕೇಳಿದ ಶಚೀದೇವಿಯು ಗುರುವಾದ ಬೃಹಸ್ಪತಿಗೆ ವಂದಿಸಿ ಅಮರಾವತಿಗೆ ತೆರಳಿದಳು. ಅತ್ತ ಬೃಹಸ್ಪತಿಯೂ ಸಹ ಪದ್ಮಸರೋವರದ ಪದ್ಮತಂತುಗಳಲ್ಲಡಗಿದ್ದ ಇಂದ್ರನ ಸಮೀಪಕ್ಕೆ ಹೋದನು.

೪೭. ಆ ಪದ್ಮಸರೋವರದ ತೀರಕ್ಕೆ ಹೋಗಿ ಕೃಪಾನಿಧಿಯಾದ ಆ ಬೃಹಸ್ಪತಿಯು ಪ್ರಸನ್ನವದನನಾಗಿ ದೇವರಾಜನನ್ನು ಕರುಣೆಯಿಂದ ಕರೆದನು

೪೮. ಬೃಹಸ್ಪತಿ :—ಎಲೈ ವತ್ಸನಾದ ದೇವೇಂದ್ರನೇ, ನೀನು ಹೊರಕ್ಕೆ ಬಾ. ನಾನಿರುವಾಗ ನಿನಗೇತರ ಭಯ? ಭಯವನ್ನು ಬಿಟ್ಟು ಇಲ್ಲಿಗೆ ಬಾ. ನಾನು ನಿನ್ನ ಗುರುವಾದ ಬೃಹಸ್ಪತಿಯು.

ಸ್ವಗುರೋಶ್ಚ ಸ್ವರಂ ಶ್ರುತ್ವಾ ಮಹೇಂದ್ರೋ ಹೃಷ್ಟಮಾನಸಃ ।
ರೂಪಂ ವಿಹಾಯ ಸೂಕ್ಷ್ಮಂ ಚ ಸ್ವರೂಪೇಣ ಸಮಾಯಯೌ ॥ ೪೯ ॥

ಪಪಾತ ದಂಡವನ್ಮೂರ್ಧ್ನಾ ಭಕ್ತ್ಯಾ ಚರಣಯೋರ್ಗುರೋಃ ।
ತಂ ರುದಂತಂ ಮಹಾಭೀತಂ ಮುದೋರಸಿ ಚಕಾರ ಸಃ ॥ ೫೦ ॥

ಕಾರಯಿತ್ವಾ ಸೋಮಯಾಗಂ ಪ್ರಾಯಶ್ಚಿತ್ತಾರ್ಥಮೇವ ಚ ।
ರತ್ನಸಿಂಹಾಸನೇ ರಮ್ಯೇ ವಾಸಯಾಮಾಸ ತಂ ಗುರುಃ ॥ ೫೧ ॥

ಪ್ರದದೌ ಪರಮೈಶ್ವರ್ಯಂ ಪೂರ್ವಸ್ಮಾಚ್ಚ ಚತುರ್ಗುಣಂ ।
ಆಗತ್ಯ ಸರ್ವದೇವಾಶ್ಚ ಚಕ್ರುಃ ಸೇವಾಂ ಮುದಾನ್ವಿತಾಃ ॥ ೫೨ ॥

ಶಚೀ ಸಂಪ್ರಾಪ ಭರ್ತಾರಂ ಮಹೇಂದ್ರಂ ತ್ರಿದಶೇಶ್ವರಂ ।
ಮಂದಿರೇ ಪುಷ್ಪತಲ್ಪೇ ಚ ಮುಮುದೇ ಸಾ ಮುದಾನ್ವಿತಾ ॥ ೫೩ ॥

---

೪೯ ಈ ರೀತಿಯಾದ ಗುರುವಿನ ಧ್ವನಿಯನ್ನು ಕೇಳಿ ಸಂತೋಷಗೊಂಡು ಮಹೇಂದ್ರನು ತನ್ನ ಸೂಕ್ಷ್ಮರೂಪವನ್ನು ಬಿಟ್ಟು ನಿಜರೂಪದಿಂದ ಹೊರಕ್ಕೆ ಬಂದನು.

೫೦. ಬಂದು ತಲೆಬಾಗಿ ಗುರುವಿನ ಪಾದಕಮಲಗಳ ಮೇಲೆ ಭಕ್ತಿಪೂರ್ವಕವಾಗಿ ದಂಡಪ್ರಣಾಮಮಾಡಿದನು. ಬೃಹಸ್ಪತಿಯೂ ಸಹ ಬಹಳ ಭಯದಿಂದ ಅಳುತ್ತಿರುವ ಆ ಇಂದ್ರನನ್ನು ಎದೆಗೆ ಅಪ್ಪಿಕೊಂಡನು.

೫೧. ಆಗ ಗುರುವು ಇಂದ್ರನ ಅಪರಾಧದ ಪ್ರಾಯಶ್ಚಿತ್ತಕ್ಕಾಗಿ ಅವನಿಂದ ಸೋಮಯಾಗವನ್ನು ಮಾಡಿಸಿ ಅನಂತರ ರಮ್ಯವಾದ ರತ್ನಸಿಂಹಾಸನದಲ್ಲಿ ಕುಳ್ಳಿರಿಸಿದನು.

೫೨. ಅಲ್ಲದೆ. ಮೊದಲಿದ್ದುದಕ್ಕಿಂತಲೂ ನಾಲ್ಕರಷ್ಟು ಪರಮೈಶ್ವರ್ಯವನ್ನು ಅವನಿಗೆ ಅನುಗ್ರಹಿಸಿದನು. ಆಗ ದೇವತೆಗಳೆಲ್ಲರೂ ಬಂದು ಸಂತೋಷದಿಂದ ಅವನ ಸೇವೆಮಾಡತೊಡಗಿದರು.

೫೩. ಶಚೀದೇವಿಯೂ ಸಹ ಮಹೇಂದ್ರನೂ, ತ್ರಿದಶೇಶ್ವರನೂ ಆದ ತನ್ನ ಪತಿಯನ್ನು ಪಡೆದಳು. ಸಂತುಷ್ಟಳಾದ ಆ ಶಚಿಯು ತನ್ನ ಮಂದಿರದಲ್ಲಿ ಪುಷ್ಪಶಯನದಲ್ಲಿ ಅವನೊಡನೆ ರಮಿಸಿದಳು.

ಇತ್ಯೇವಂ ಕಥಿತಂ ವತ್ಸ ಮಹೇಂದ್ರ ದರ್ಪಭಂಜನಂ ।
ಶಚೀಸತೀತ್ವರಕ್ಷಾ ಚ ಕಿಂ ಭೂಯಃ ಶ್ರೋತುಮಿಚ್ಛಸಿ   ।। ೫೪ ।।

।। ನಾರದ ಉವಾಚ ।।

ಸೋಮಯಾಗವಿಧಾನಂ ಚ ಬ್ರೂಹಿ ಮಾಂ ಮುನಿಸತ್ತಮ ।
ಕಥಂ ತಂ ಕಾರಯಾಮಾಸ ಗುರುಶ್ಚ ಕಿಂ ಫಲಂ ಪರಂ   ।। ೫೫ ।।

।। ನಾರಾಯಣ ಉವಾಚ ।।

ಬ್ರಹ್ಮಹತ್ಯಾಪ್ರಶಮನಂ ಸೋಮಯಾಗಫಲಂ ಮುನೇ ।
ವರ್ಷಂ ಸೋಮಲತಾಪಾನಂ ಯಜಮಾನಃ ಕರೋತಿ ಚ   ।। ೫೬ ।।

ವರ್ಷಮೇಕಂ ಫಲಂ ಭುಂಕ್ತೇ ವರ್ಷಮೇಕಂ ಜಲಂ ಮುದಾ ।
ತ್ರೈವಾರ್ಷಿಕಂ ವ್ರತಮಿದಂ ಸರ್ವಪಾಪ ಪ್ರಣಾಶನಂ   ।। ೫೭ ।।

---

೫೪. ಎಲೈ ವತ್ಸ ನಾರದನೇ, ಈ ರೀತಿಯಾಗಿ ಮಹೇಂದ್ರನ ಗರ್ವಭಂಗವೂ ಶಚಿಯ ಪಾತಿವ್ರತ್ಯ ಪರಿಪಾಲನೆಯೂ ನಿನಗೆ ವಿಸ್ತರವಾಗಿ ಹೇಳಲ್ಪಟ್ಟಿತು. ಇನ್ನೇನನ್ನು ಕೇಳಬೇಕೆಂದು ನಿನಗೆ ಇಚ್ಛೆ ಇದೆ

೫೫. ನಾರದ:—ಎಲೈ ಮುನಿಪೋತ್ತಮನೇ, ಸೋಮಯಾಗ ಮಾಡುವ ವಿಧಾನವನ್ನು ನನಗೆ ವಿಸ್ತಾರವಾಗಿ ಹೇಳು. ಬೃಹಸ್ಪತಿಯು ಅದನ್ನು ಹೇಗೆ ಮಾಡಿಸಿದನು? ಆ ಯಾಗದಿಂದ ದೊರಕುವ ಫಲವಾವುದು?

೫೬. ನಾರಾಯಣ:—ಎಲೈ ನಾರದನೇ, ಸೋಮಯಾಗಕ್ಕೆ ಬ್ರಹ್ಮಹತ್ಯಾ ಪ್ರಶಮನವೇ ಫಲವು. ಯಾಗಮಾಡುವವನು ಒಂದು ವರ್ಷಕಾಲ ಸೋಮರಸವನ್ನು ಪಾನಮಾಡುವನು.

೫೭. ಮತ್ತೊಂದು ವರ್ಷ ಹಣ್ಣುಗಳನ್ನು ತಿಂದುಕೊಂಡಿರುವನು. ಮೂರನೆಯ ವರ್ಷ ಕೇವಲ ಜಲಪಾನ ಮಾಡಿಕೊಂಡಿರುವನು. ಈ ರೀತಿಯಾಗಿ ಮೂರು ವರ್ಷಕಾಲ ಈ ವ್ರತವನ್ನು ಮಾಡಿದರೆ ಸಕಲ ಪಾಪವೂ ನಾಶವಾಗುವುದು.

ಯತ್ರ ತ್ರೈವಾರ್ಷಿಕಂ ಧಾನ್ಯಂ ನಿಹಿತಂ ಭೂತವೃದ್ಧಯೇ ।
ಅಧಿಕಂ ವಾಪಿ ವಿದ್ಯೇತ ಸ ಸೋಮಂ ಪಾತುಮರ್ಹತಿ ॥ ೫೮ ॥

ಮಹಾರಾಜಶ್ಚ ದೇವೋ ವಾ ಯಾಗಂ ಕರ್ತುಮಲಂ ಮುನೇ ।
ನ ಸರ್ವಸಾಧ್ಯೋ ಯಜ್ಞೋಽಯಂ ಬಹ್ವನ್ನೋ ಬಹುದಕ್ಷಿಣಃ ॥ ೫೯ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣ ನಾರದಸಂವಾದೇ ಶಕ್ರದರ್ಪ-
ಭಂಗಪ್ರಕರಣೇ ಶಕ್ರಮೋಕ್ಷಕಥನಂ ನಾಮ
ಷಷ್ಟಿತಮೋಽಧ್ಯಾಯಃ

---

೫೮. ಎಲ್ಲಿ ಭೂತವೃದ್ಧಿಗಾಗಿ ಮೂರು ವರ್ಷದ ಧಾನ್ಯವು ಶೇಖರಿಸಲ್ಪಟ್ಟಿದೆಯೋ ಅಥವಾ ಇನ್ನೂ ಹೆಚ್ಚಾಗಿದೆಯೋ ಆ ರಾಜ್ಯದ ರಾಜನು ಸೋಮಪಾನ ಮಾಡಲು ಅರ್ಹನಾಗುವನು.

೫೯. ಎಲೈ ಮುನಿಯೇ, ಮಹಾರಾಜನಾಗಲೀ, ದೇವತೆಯಾಗಲೀ ಈ ಯಾಗವನ್ನು ಮಾಡಬಲ್ಲನು. ಈ ಯಾಗದಲ್ಲಿ ಬಹಳವಾಗಿ ಅನ್ನದಾನ, ದಕ್ಷಿಣಾ ದಾನಗಳು ನಡೆಯಬೇಕಾಗಿರುವುದರಿಂದ ಈ ಯಾಗವು ಎಲ್ಲರಿಗೂ ಸುಲಭಸಾಧ್ಯವಲ್ಲ.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದ ಉತ್ತರಾರ್ಧದ
ನಾರದನಾರಾಯಣ ಸಂವಾದದಲ್ಲಿ ಇಂದ್ರನ ದರ್ಪಭಂಗಪ್ರಕರಣದಲ್ಲಿ
ಇಂದ್ರನ ಶಾಪವಿಮೋಚನೆಯನ್ನು ತಿಳಿಸುವ ಅರುವತ್ತನೆಯ
ಅಧ್ಯಾಯವು ಮುಗಿದುದು.

ಅರವತ್ತನೆಯ ಅಧ್ಯಾಯದ ಸಾರಾಂಶ.

ಶಚಿಯ ಸ್ತೋತ್ರದಿಂದ ಪ್ರಸನ್ನನಾದ ಬೃಹಸ್ಪತಿಯು ಆಕೆಗೆ ಸಕಲ ಸೌಭಾಗ್ಯಗಳನ್ನೂ ಅನುಗ್ರಹಿಸುವುದಾಗಿ ಅಭಯದಾನಮಾಡಿದನು. ಆ ಸಮಯಕ್ಕೆ ಸರಿಯಾಗಿ ನಹುಷನ ದೂತನೊಬ್ಬನು ಬಂದು ಶಚೀದೇವಿಯನ್ನು ಕರೆಯಲು 'ನಹುಷನು ಸಪ್ತರ್ಷಿಗಳನ್ನು ವಾಹಕರನ್ನಾಗಿ ಮಾಡಿಕೊಂಡು ರತ್ನದ ಪಲ್ಲಕ್ಕಿಯಲ್ಲಿ ಬಂದರೆ ಶಚಿಯು ಒಲಿಯುವುದಾಗಿ' ಗುರುವು ಹೇಳಿದನು. ಅದರಂತೆ ನಹುಷನು ಸಪ್ತರ್ಷಿಗಳನ್ನು ಕರೆಸಿ ಅವರನ್ನೆಲ್ಲ ಸ್ತುತಿಸಿ, ವಾಹಕರಾಗುವಂತೆ ಹೇಳಿ ತಾನು ರತ್ನದ ಪಲ್ಲಕ್ಕಿಯಲ್ಲಿ ಸುವೇಷಭೂಷಿತನಾಗಿ ಕುಳಿತನು. ದೂರ್ವಾಸ ಋಷಿಯನ್ನು ಮುಂದುಮಾಡಿಕೊಂಡು ಸಪ್ತರ್ಷಿಗಳು ನಿಧಾನವಾಗಿ ಹೊರಟರು. ಕಾಮಾತುರನಾದ ನಹುಷನು 'ಸರ್ಪ, ಸರ್ಪ–ಬೇಗನಡೆ ಬೇಗನಡೆ' ಎಂದು ಹೇಳಲು ದೂರ್ವಾಸನು 'ಸರ್ಪೋಭವ–ಹಾವಾಗು' ಎಂದು ಹೇಳಿ ಶಪಿಸಿ, ಧರ್ಮರಾಯನ ಸಂದರ್ಶನದಿಂದ ಶಾಪ ವಿಮೋಚನೆಯಾಗುವುದಾಗಿ ಹೇಳಿ ಎತ್ತಿ ಹಾಕಿ ಹೊರಟನು. ಇತರ ಋಷಿಗಳೂ ಹೊರಟುಹೋದರು. ಈ ವಿಷಯವನ್ನು ತಿಳಿದ ಶಚೀದೇವಿಯು ನಿರ್ಭೀತಳಾಗಿ ತನ್ನ ಮಂದಿರಕ್ಕೆ ಹೋದಳು. ಇತ್ತ ಗುರುವಾದ ಬೃಹಸ್ಪತಿಯು ವಿಷ್ಣುಸರೋವರದ ತೀರಕ್ಕೆ ಬಂದು ಇಂದ್ರನಿಗೆ ಅಭಯದಾನಮಾಡಿ ಕರೆಯಲು ಇಂದ್ರನು ಹೊರಕ್ಕೆ ಬಂದನು. ಗುರುವು ಇಂದ್ರನ ಪಾಪದ ಪ್ರಾಯಶ್ಚಿತ್ತಕ್ಕಾಗಿ ಅವನಿಂದ ಸೋಮಯಾಗವನ್ನು ಮಾಡಿಸಿ ಮೊದಲಿಗಿಂತ ನಾಲ್ಕರಷ್ಟು ಐಶ್ವರ್ಯವು ಬರುವಂತೆ ಅವನಿಗೆ ಅನುಗ್ರಹಿಸಿ ಶಚೀದೇವಿಯೊಡನೆ ಸುಖಸಂತೋಷದಿಂದಿರುವಂತೆ ಮಾಡಿದನು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ಏಕಷಷ್ಟಿತಮೋಽಧ್ಯಾಯಃ ||

|| ನಾರಾಯಣ ಉವಾಚ ||

ಇತಿ ತೇ ಕಥಿತಂ ಕಿಂಚಿದಿಂದ್ರಸ್ಯ ದರ್ಪಭಂಜನಂ ।
ಅಪರಂ ಶ್ರೂಯತಾಂ ಬ್ರಹ್ಮನ್ಸಾವಧಾನಂ ನಿಗೂಢಕಂ || ೧ ||

ಸಮುದ್ರಮಥನಂ ಕೃತ್ವಾ ಪೀತ್ವಾಽಮೃತರಸಂ ಪುರಾ ।
ನಿರ್ಜಿತ್ಯ ದೈತ್ಯಸಂಘಾಂಶ್ಚ ಬಹುದರ್ಪೋ ಬಭೂವ ಹ || ೨ ||

ತದಾ ಕೃಷ್ಣೋ ಬಲಿದ್ವಾರಾ ಶಕ್ರದರ್ಪಂ ಬಭಂಜ ಹ ।
ಭ್ರಷ್ಟಶ್ರಿಯೋ ಬಭೂವುಸ್ತೇ ದೇವಾ ಇಂದ್ರಪುರೋಗಮಾಃ || ೩ ||

ಅರವತ್ತೊಂದನೆಯ ಅಧ್ಯಾಯವು.

೧. ಶ್ರೀನಾರಾಯಣ:—ಮೇಲೆ ಹೇಳಿದ ರೀತಿಯಲ್ಲಿ ಇಂದ್ರನ ದರ್ಪಭಂಗದ ಒಂದು ಪ್ರಸಂಗವು ನಿನಗೆ ವಿವರಿಸಲ್ಪಟ್ಟಿತು. ಎಲೈ ಬ್ರಾಹ್ಮಣೋತ್ತಮನೇ, ನಿಗೂಢವಾದ ಮತ್ತೊಂದು ಪ್ರಸಂಗವನ್ನು ಹೇಳುವೆನು. ಸಾವಧಾನದಿಂದ ಕೇಳು.

೨ ಹಿಂದೆ ಸಮುದ್ರಮಥನವನ್ನು ಮಾಡಿ ಅಮೃತರಸವನ್ನು ಪಾನ ಮಾಡಿದ ದೇವೇಂದ್ರನಿಗೆ ರಾಕ್ಷಸರನ್ನು ಜಯಿಸಿದ್ದರಿಂದ ಬಹಳ ಹೆಮ್ಮೆಯುಂಟಾಯಿತು.

೩ ಆಗ ಶ್ರೀಕೃಷ್ಣನು ಬಲಿಚಕ್ರವರ್ತಿಯ ಮೂಲಕ ಇಂದ್ರನ ದರ್ಪವನ್ನು ಭಂಗಪಡಿಸಲು ಇಂದ್ರನೇ ಮುಂತಾದ ದೇವತೆಗಳೆಲ್ಲರೂ ಸಂಪದ್ಭ್ರಷ್ಟರಾಗಿ ಅಲೆದಾಡಿದರು.

ತದಾ ಬೃಹಸ್ಪತೇಃ ಸ್ತೋತ್ರಾದದಿತೇಶ್ಚ ವ್ರತೇನ ತೇ ।
ಜಾತಶ್ಚ ಸ್ವಾಂಶಕಲಯಾಽಪ್ಯದಿತ್ಯಾಂ ವಾಮನೋ ವಿಭುಃ ॥ ೪ ॥

ಯಾಚ್ಞಾಂ ಕೃತ್ವಾ ಬಲಿಂ ರಾಜ್ಯಂ ಕೃಪಯಾ ಚ ಕೃಪಾನಿಧಿಃ ।
ತಸ್ಮೈ ದದೌ ಮಹೇಂದ್ರಾಯ ದೇವೇಭ್ಯಶ್ಚಾಪಿ ಸಂಪದಂ ॥ ೫ ॥

ಬಭೂವ ಶಕ್ರದರ್ಪಶ್ಚ ಪುನಃ ಕಲ್ಪಾಂತರೇ ಪುರಾ ।
ವಿಭುರ್ದುರ್ವಾಸಸೋ ದ್ವಾರಾ ಜಹಾರ ತಚ್ಛ್ರಿಯಂ ಮುನೇ ॥ ೬ ॥

ಪುನರ್ದದೌ ಚ ಕೃಪಯಾ ಕೃಪಾಲುರ್ಭಕ್ತವತ್ಸಲಃ ।
ಪುನಃ ಶ್ರೀದುರ್ಮದಃ ಸೋಽಪಿ ಜಹಾರ ಗೌತಮಪ್ರಿಯಾಂ ॥ ೭ ॥

ತದಾ ಗೌತಮಶಾಪೇನ ಭಗಾಂಗಶ್ಚ ಬಭೂವ ಸಃ ।
ಸಂಪ್ರಾಪ ಯಾತನಾಮಿಂದ್ರಃ ಸ್ವಾಂಗವೇದನಯಾ ಪುರಾ ॥ ೮ ॥

---

೪. ಆಗ ಅವರೆಲ್ಲರೂ ಬೃಹಸ್ಪತಿಯನ್ನು ಸ್ತೋತ್ರಮಾಡಿ ಅದಿತಿಯ ವ್ರತವನ್ನಾಚರಿಸಿದುದರಿಂದ ವಿಭುವಾದ ಶ್ರೀಕೃಷ್ಣನು ತನ್ನ ಕಲಾಂಶದಿಂದ ಅದಿತಿಯ ಗರ್ಭದಲ್ಲಿ ವಾಮನನಾಗಿ ಅವತರಿಸಿದನು.

೫. ಆ ದಯಾಮಯನು ದೇವತೆಗಳ ವಿಷಯದಲ್ಲಿ ಕನಿಕರಗೊಂಡು ಬಲಿಚಕ್ರವರ್ತಿಯ ಹತ್ತಿರಕ್ಕೆ ಹೋಗಿ ರಾಜ್ಯವನ್ನು ಬೇಡಿ ತಂದು ದೇವೇಂದ್ರನಿಗೂ ದೇವತೆಗಳಿಗೂ ಅವರ ಪೂರ್ವಸಂಪತ್ತನ್ನು ಕೊಟ್ಟನು.

೬. ಹಿಂದೆ ಕಲ್ಪಾಂತರದಲ್ಲಿ ಮತ್ತೊಮ್ಮೆ ದೇವೇಂದ್ರನಿಗೆ ದರ್ಪವುಂಟಾಗಿತ್ತು ಆಗ ಪರಮಾತ್ಮನು ದೂರ್ವಾಸಋಷಿಯ ಮುಖಾಂತರ ಅವನ ಸಂಪತ್ತನ್ನು ನಾಶಗೊಳಿಸಿ ಭಂಗಪಡಿಸಿದನು.

೭. ಅನಂತರ ಕೃಪಾಳುವೂ ಭಕ್ತವತ್ಸಲನೂ ಆದ ಪರಮಾತ್ಮನು ಮತ್ತೊಮ್ಮೆ ಅವನ ಸಂಪತ್ತನ್ನು ಹಿಂದಕ್ಕೆ ಕೊಟ್ಟನು. ಪುನಃ ಸಂಪತ್ತಿನಿಂದ ಮದಿಸಿದ ದೇವೇಂದ್ರನು ಗೌತಮನ ಧರ್ಮಪತ್ನಿಯನ್ನು ಅಪಹರಿಸಿದನು.

೮. ಆಗ ಗೌತಮನ ಶಾಪದಿಂದ ದೇವೇಂದ್ರನು 'ಸಹಸ್ರಯೋನಿ' ಯಾದನು. ತನ್ನ ಶರೀರವೆಲ್ಲ ತೂತಾದುದರಿಂದ ದೇವೇಂದ್ರನು ಬಹಳ ಯಾತನೆಗೊಳಗಾದನು.

ಉಚ್ಚೈಸ್ತಂ ಜಹಸುರ್ದೃಷ್ಟ್ವಾ ಋಷಯೋ ಮನವಸ್ತದಾ ।
ದೇವಾಶ್ಚ ಲಜ್ಜಿತಾಃ ಸರ್ವೇ ಮೃತತುಲ್ಯೋ ಬೃಹಸ್ಪತಿಃ ॥ ೯ ॥

ತದಾ ಸಹಸ್ರವರ್ಷಂ ಚ ತಪಸ್ತಪ್ತ್ವಾ ರವೇಃ ಪುರಾ ।
ರವೇರ್ವರೇಣ ಶಕ್ರಃ ಸ ಸಹಸ್ರಾಕ್ಷೋ ಬಭೂವ ಹ ॥ ೧೦ ॥

ಕಲಂಕರೂಪಮಿಂದ್ರಸ್ಯ ತಚ್ಚಕ್ಷುರ್ನಿಕರಂ ಪರಂ ।
ಯಥಾ ಚಂದ್ರೇ ಕಲಂಕಶ್ಚ ತಾರಕಾಹರಣಾದಭೂತ್ ॥ ೧೧ ॥

॥ ನಾರದ ಉವಾಚ ॥

ಬ್ರಹ್ಮನ್ ಕೇನ ಪ್ರಕಾರೇಣ ಜಹಾರ ಗೌತಮಪ್ರಿಯಾಂ ।
ಮಹಾಸತೀಮಹಲ್ಯಾಂ ಚ ಪೂಜ್ಯಾಂ ಭುವನಪಾವನೀಂ ॥ ೧೨ ॥

---

೯. ಈ ರೀತಿ 'ಭಗಾಂಗ'ನಾದ ಇಂದ್ರನನ್ನು ನೋಡಿದ ಋಷಿಗಳೂ ಮನುಗಳೂ ನಕ್ಕುಬಿಟ್ಟರು. ಆಗ ದೇವತೆಗಳೆಲ್ಲ ಲಜ್ಜಿತರಾದರು. ಬೃಹಸ್ಪತಿಯು ಸತ್ತಂತಾದನು

೧೦. ಆಗ ಇಂದ್ರನು ಸಾವಿರ ವರ್ಷಗಳ ಕಾಲ ಸೂರ್ಯನನ್ನು ಕುರಿತು ತಪಸ್ಸುಮಾಡಿ ಸೂರ್ಯನ ಅನುಗ್ರಹದಿಂದ ತನ್ನ ಶರೀರದಲ್ಲಿದ್ದ ಯೋನಿಗಳೆಲ್ಲವೂ ಕಣ್ಣುಗಳಾಗುವಂತೆ ವರವನ್ನು ಪಡೆದನು.

೧೧. ಆ ಕಣ್ಣುಗಳ ಸಮೂಹವೆಲ್ಲವೂ ಇಂದ್ರನಿಗೆ ಕಳಂಕಪ್ರಾಯವಾದವು. ಚಂದ್ರನು ಬೃಹಸ್ಪತಿಯ ಹೆಂಡತಿಯಾದ ತಾರೆಯನ್ನು ಅಪಹಾರಮಾಡಿ ಕಳಂಕಿಯಾದಂತೆ ಇಂದ್ರನೂ ಕಳಂಕಿಯಾದನು.

೧೨. ನಾರದ:—ಎಲೈ ಮಹರ್ಷಿಯೇ, ಮಹಾಪತಿವ್ರತೆಯೂ, ಪೂಜ್ಯಳೂ ಭುವನಪಾವನೆಯೂ ಆದ ಗೌತಮನ ಧರ್ಮಪತ್ನಿಯಾದ ಅಹಲ್ಯೆಯನ್ನು ಇಂದ್ರನು ಯಾವ ರೀತಿ ಅಪಹರಿಸಿದನು?

ಶುದ್ಧಾಶಯಾಂ ಮಹಾಭಾಗಾಂ ನಿರ್ಮಲಾಂ ಕಮಲಾಕಲಾಂ ।
ಏತದ್ವೇದಿತುಮಿಚ್ಛಾಮಿ ವದ ವೇದವಿದಾಂ ವರ ॥ ೧೩ ॥

॥ ನಾರಾಯಣ ಉವಾಚ ॥

ಪುಷ್ಕರೇ ತೀರ್ಥಯಾತ್ರಾಯಾಂ ಸೂರ್ಯಪರ್ವಣಿ ನಾರದ ।
ತತ್ರಾऽऽಗತಾಮಹಲ್ಯಾಂ ಚ ದದರ್ಶ ಪಾಕಶಾಸನಃ ॥ ೧೪ ॥

ಸುಸ್ಮಿತಾಂ ಸುದತೀಂ ಶಾನ್ತಾಂ ಪೀನಶ್ರೋಣಿಪಯೋಧರಾಂ ।
ಮೂರ್ಛಾಮವಾಪ ಚೇಂದ್ರಶ್ಚ ದೃಷ್ಟಮಾತ್ರೇಣ ತತ್ಕ್ಷಣಾತ್ ॥ ೧೫ ॥

ಅಥಾಪರದಿನೇ ತಾಂ ಚ ದೃಷ್ಟ್ವಾ ಮಂದಾಕಿನೀತಟೇ ।
ಏಕಾಕಿನೀಂ ಸುಸ್ಮಿತಾಂ ಚ ಸ್ನಾತೀಂ ನಗ್ನಾಂ ಸಲಜ್ಜಿತಾಂ ॥ ೧೬ ॥

---

೧೩. ವೇದಜ್ಞರಲ್ಲಿ ಶ್ರೇಷ್ಠನಾದ ಎಲೈ ನಾರಾಯಣನೇ, ಪವಿತ್ರವಾದ ಆಶಯವುಳ್ಳವಳೂ, ಮಹಾಭಾಗ್ಯಶಾಲಿನಿಯೂ, ಕಮಲೆಯಂತೆ ಕಾಂತಿಮತಿಯೂ ಆದ ಆ ಅಹಲ್ಯೆಯ ಅಪಹಾರಕ್ರಮವನ್ನು ತಿಳಿಯಲಿಚ್ಛಿಸುತ್ತೇನೆ.

೧೪. ಶ್ರೀನಾರಾಯಣ:–ಎಲೈ ನಾರದನೇ, ಒಮ್ಮೆ ದೇವೇಂದ್ರನು ಸೂರ್ಯಗ್ರಹಣ ಕಾಲದಲ್ಲಿ ಪುಷ್ಕರ ಕ್ಷೇತ್ರಕ್ಕೆ ತೀರ್ಥಸ್ನಾನಕ್ಕಾಗಿ ಹೋಗಿ ಅಲ್ಲಿಗೆ ಬಂದಿದ್ದ ಅಹಲ್ಯೆಯನ್ನು ನೋಡಿದನು.

೧೫ ಸ್ಮಿತಮುಖಿಯೂ, ಸುಂದರವಾದ ದಂತಪಂಕ್ತಿಯುಳ್ಳವಳೂ, ಶಾಂತಳೂ, ಪೀನವಾದ ಶ್ರೋಣಿಬಿಂಬ ಮತ್ತು ಸ್ತನಗಳುಳ್ಳವಳೂ ಆದ ಆ ಸುಂದರಿಯನ್ನು ನೋಡಿದ ಕ್ಷಣದಲ್ಲಿಯೇ ಇಂದ್ರನು ಕಾಮಪೀಡಿತನಾಗಿ ಮೂರ್ಛಾಕ್ರಾಂತನಾದನು.

೧೬. ಮತ್ತೊಮ್ಮೆ ಆ ಸ್ಮಿತಮುಖಿಯಾದ ಅಹಲ್ಯೆಯು ಮಂದಾಕಿನಿಯಲ್ಲಿ ಏಕಾಕಿನಿಯಾಗಿ ಬೆತ್ತಲೆಯಾಗಿ ಸ್ನಾನಮಾಡುತ್ತಿರುವುದನ್ನು ಇಂದ್ರನು ನೋಡಲು ಅವಳು ಲಜ್ಜೆಗೊಂಡಳು.

ದೃಷ್ಟ್ವಾ ಶ್ರೋಣಿಂ ಸ್ತನಯುಗಮತೀವ ವಿಪುಲಂ ಹರಿಃ ।
ಮೂರ್ಛಾಮವಾಪ ಕಾಮಾರ್ತೋ ಜಹಾರ ಚೇತನಾಂ ಪುನಃ ॥ ೧೭ ॥

ಕ್ಷಣೇನ ಚೇತನಾಂ ಪ್ರಾಪ್ಯ ಗತ್ವಾ ಕಾಮೀ ತದಂತಿಕಂ ।
ಉವಾಚ ಶ್ಲಕ್ಷ್ಣಯಾ ವಾಚಾ ವಿನಯೇನ ಪತಿವ್ರತಾಂ ॥ ೧೮ ॥

॥ ಮಹೇಂದ್ರ ಉವಾಚ ॥

ಅಹೋ ಗುಣಮಹೋ ರೂಪಮಹೋ ಕಿಂ ವಾ ನವಂ ವಯಃ ।
ಅಹೋ ಕಿಂವಾ ಮುಖಶ್ರೀಸ್ತೇ ಶರಚ್ಚಂದ್ರಂ ವಿನಿಂದತೀ ॥ ೧೯ ॥

ಅಹೋ ಕಟಾಕ್ಷಂ ಕುಟಿಲಂ ಪುಂಸಾಂ ಚಿತ್ತವಿಕರ್ಷಣಂ ।
ಕಿಮಹೋ ಲೋಚನಂ ಪದ್ಮಪ್ರಭಾಮೋಚನವಿಸ್ಮಿತಂ ॥ ೨೦ ॥

---

೧೭. ಇಂದ್ರನು ಆಕೆಯ ವಿಸ್ತಾರವಾದ ಶ್ರೋಣೀಬಿಂಬವನ್ನೂ, ಪೀನವಾದ ಸ್ತನಗಳನ್ನೂ ನೋಡಿ ಕಾಮಪೀಡಿತನಾಗಿ ಮೂರ್ಛೆಗೊಂಡನು. ಈ ರೀತಿ ಅಹಲ್ಯೆಯು ಮತ್ತೊಮ್ಮೆ ಅವನ ಚೇತನವನ್ನು ಅಪಹರಿಸಿದಳು

೧೮. ಕ್ಷಣಕಾಲದಲ್ಲಿಯೇ ಚೇತನವನ್ನು ಪಡೆದ ಆ ಕಾಮಿಯು ಆ ಪತಿವ್ರತೆಯ ಸಮೀಪಕ್ಕೆ ಹೋಗಿ ವಿನಯದಿಂದ ಕೆಲವು ಮೃದುಮಧುರ ವಚನಗಳನ್ನಾಡಿದನು.

೧೯. ಮಹೇಂದ್ರ :—ಆಹಾ! ನಿನ್ನ ಗುಣ, ನಿನ್ನ ರೂಪು ಮತ್ತು ನಿನ್ನ ನವಯೌವನವನ್ನು ಏನೆಂದು ಬಣ್ಣಿಸಲಿ? ಶರಚ್ಚಂದ್ರನನ್ನು ಧಿಕ್ಕರಿಸುವ ನಿನ್ನ ಮುಖದ ಕಾಂತಿಯು ಅಸದೃಶವಾಗಿದೆ.

೨೦ ಕುಟಿಲವಾದ ನಿನ್ನ ಕಟಾಕ್ಷವು ಪುರುಷರ ಚಿತ್ತವನ್ನು ಅಪಹರಿಸುವುದಾಗಿದೆ. ನಿನ್ನ ಎರಡು ಕಣ್ಣುಗಳು ತಾವರೆಯ ದಳಗಳ ಕಾಂತಿಯನ್ನು ಧಿಕ್ಕರಿಸುವಂತಿದೆ.

ಗಮನಂ ರಮಣೀಯಂ ಚ ಗಜಖಂಜನಭಂಜನಂ ।
ಅಹೋ ವಾಕ್ಯಂ ಸುಮಧುರಂ ಪೀಯೂಷಾದಪಿ ದುರ್ಲಭಂ ॥ ೨೧ ॥

ನಿತಂಬಯುಗಲಂ ...

ಕಿಮಹೋ ವಿಪುಲಶ್ರೋಣೀ ಕಾಮಾಧಾರಾ ಮನೋಹರಾ ।
ಕಾಮದಾ ಕಾಮುಕಾಯೈವ ಮುನಿಮಾನಸಮೋಹಿನೀ ॥ ೨೨ ॥

ಅತೀವ ಕಠಿನಾ ಪೀನಾ ರಂಭಾಸ್ತಂಭವಿಡಂಬಿತಾ ।
ಅಹೋ ನಿತಂಬಯುಗಲಂ ವರ್ತುಲಂ ಚಂದ್ರಬಿಂಬವತ್ ॥ ೨೩ ॥

ಶ್ರೀಯುಕ್ತಂ ಶ್ರೀಫಲಯುಗತುಲ್ಯಂ ತೇ ಸ್ತನಯುಗ್ಮಕಂ ।
ಅತ್ಯುನ್ನತಂ ಸುಕಠಿನಂ ತ್ರೈಲೋಕ್ಯಚಿತ್ತಮೋಹನಂ ॥ ೨೪ ॥

ಅಹೋ ಕಿಂ ವಾ ತಪಸ್ತೇಪೇ ಗೌತಮಶ್ಚ ತಪೋಧನಃ ।
ಸಂಪ್ರಾಪ ಯತ್ಫಲೇನೈವ ಸುದತೀಂ ಸುಂದರೀಂ ವರಾಂ ॥ ೨೫ ॥

---

೨೧. ಮದಿಸಿದ ಆನೆಯ ನಡಗೆಯನ್ನು ಧಿಕ್ಕರಿಸುವ ನಿನ್ನ ಮಂದಗಮನವು ಮನೋಹರವಾಗಿದೆ. ದುರ್ಲಭವಾದ ಅಮೃತಕ್ಕಿಂತಲೂ ನಿನ್ನ ವಾಗಮೃತವು ಮಧುರವಾಗಿದೆ.

೨೨. ಮನ್ಮಥಕ್ರೀಡೆಗೆ ಆಧಾರವೂ, ಮನೋಹರವೂ ಆದ ನಿನ್ನ ವಿಸ್ತಾರ ವಾದ ನಿತಂಬಗಳನ್ನು ಏನೆಂದು ಬಣ್ಣಿಸಲಿ ? ಮುನಿಗಳ ಮನಸ್ಸನ್ನೂ ಸಹ ಮೋಹ ಗೊಳಿಸುವ ನೀನು ಕಾಮಿಗಳಿಗೆ ಕಾಮವಿಕಾರವನ್ನುಂಟುಮಾಡುವೆ.

೨೩. ನಿನ್ನ ತೊಡೆಗಳು ಅತ್ಯಂತ ಕಠಿಣವಾಗಿಯೂ, ದಪ್ಪವಾಗಿಯೂ ಇರುವುದಲ್ಲದೆ ಬಾಳೆಯ ಕಂಭಗಳನ್ನು ಅನುಕರಿಸುವಂತಿವೆ. ನಿನ್ನ ಎರಡು ಪೃಷ್ಠ ಭಾಗಗಳು ಚಂದ್ರಬಿಂಬದಂತೆ ವರ್ತುಳಾಕಾರವಾಗಿವೆ.

೨೪. ಬಿಲ್ವಫಲಗಳಂತೆ ವರ್ತುಲಾಕಾರವೂ, ಅತ್ಯುನ್ನತವೂ, ಅತಿಕಠಿಣವೂ ಆದ ನಿನ್ನ ಸ್ತನದ್ವಯವು ಮನೋಹರವಾಗಿರುವುದಲ್ಲದೆ ಮೂರುಲೋಕದ ಜನರ ಮನಸ್ಸನ್ನು ಅಪಹರಿಸತಕ್ಕದ್ದಾಗಿದೆ.

೨೫. ತಪೋಧನನಾದ ಗೌತಮನು ಅದೆಂಥಾ ತಪಸ್ಸು ಮಾಡಿರಬೇಕು ? ಯಾವ ತಪಸ್ಸಿನ ಫಲದಿಂದ ಸುದತಿಯೂ, ಸುಂದರಿಯೂ ಸ್ತ್ರೀಯರಲ್ಲಿ ಶ್ರೇಷ್ಠಳೂ ಆದ ನಿನ್ನನ್ನು ಪಡೆದಿದ್ದಾನೆ.

ನಿಷೇವ್ಯ ಪ್ರಕೃತಿಂ ದುರ್ಗಾಂ ವಿಷ್ಣುಮಾಯಾಂ ಸನಾತನೀಂ ।
ಲಕ್ಷ್ಮೀಂ ಚ ಲಕ್ಷ್ಮೀಸದೃಶೀಮಾದೃಶೀಂ ಪ್ರಾಪ ಪದ್ಮಿನೀಂ ॥ ೨೬ ॥

ಸುಕೋಮಲಾಂ ಸುವದನಾಂ ಲಲನಾಂ ನಲಿನಾನನಾಂ ।
ಶುದ್ಧಾಂ ಚ ಸುದತೀಂ ಶ್ಯಾಮಾಂ ನ್ಯಗ್ರೋಧದಲಮಧ್ಯಮಾಂ ॥ ೨೭ ॥

ತ್ವತ್ಪಾಲನಂ ಚ ಜಾನಾಮಿ ಕಾಮಶಾಸ್ತ್ರವಿಚಕ್ಷಣಃ ।
ಕಾಮೋ ವಾ ಕಾಮುಕಶ್ಚಂದ್ರಃ ಕಿಂ ತ್ವಾಂ ಜಾನಾತಿ ಗೌತಮಃ ॥ ೨೮ ॥

ಮಾಂ ಪ್ರಶಂಸಂತಿ ನಿತ್ಯಂ ತೇ ಕಾಮಶಾಸ್ತ್ರವಿಚಕ್ಷಣಾಃ ।
ಊರ್ವಶ್ಯಾದ್ಯಾಶ್ಚಾಪ್ಸರಸೋ ಮಾಂ ಪ್ರಶಂಸಂತಿ ಸಂತತಂ ॥ ೨೯ ॥

ದಾಸೀಂ ಕೃತ್ವಾ ಚ ದಾಸ್ಯಾಮಿ ಶಚೀಂ ತುಭ್ಯಂ ವರಾನನೇ ।
ತ್ರೈಲೋಕ್ಯಲಕ್ಷ್ಮೀಂ ವಿಪುಲಾಂ ಗೃಹಾಣ ತ್ಯಜ ಗೌತಮಂ ॥ ೩೦ ॥

---

೨೬. ವಿಷ್ಣುಮಾಯೆಯೂ, ಸನಾತನಿಯೂ, ಮೂಲಪ್ರಕೃತಿಯೂ ಆದ ದುರ್ಗಾದೇವಿಯನ್ನೋ, ಪದ್ಮಾಲಯಳಾದ ಲಕ್ಷ್ಮಿಯನ್ನೋ ಬಹುಕಾಲ ಸೇವಿಸಿ ತ್ರಿಪುರಸುಂದರಿಯಾದ ನಿನ್ನನ್ನು ಪಡೆದಿದ್ದಾನೆ.

೨೭. ಕೋಮಲಾಂಗಿಯೂ, ನಲಿನಮುಖಿಯೂ, ನವಯುವತಿಯೂ, ಮನೋಹರವಾದ ದಂತಪಂಕ್ತಿಯುಳ್ಳವಳೂ, ಆಲದೆಲೆಯಂತೆ ತೆಳುವಾದ ಮಧ್ಯ ಪ್ರದೇಶವುಳ್ಳವಳೂ ಆದ ನಿನ್ನನ್ನು ಪುಣ್ಯದಿಂದ ಪಡೆಯಬೇಕು.

೨೮. ಕಾಮಶಾಸ್ತ್ರವಿಚಕ್ಷಣನಾದ ನಾನು ನಿನ್ನನ್ನು ಹೇಗೆ ರಕ್ಷಿಸಬೇಕೆಂಬುದನ್ನು ಬಲ್ಲೆನು. ಒಂದು ವೇಳೆ ಮನ್ಮಥನಾಗಲೀ, ಕಾಮುಕನಾದ ಚಂದ್ರನಾಗಲೀ ನಿನ್ನನ್ನು ರಕ್ಷಿಸಿಯಾರು ಆದರೆ ಆ ತಪಸ್ವಿಯಾದ ಗೌತಮನು ಎಂತು ರಕ್ಷಿಸುವನು?

೨೯. ಕಾಮಶಾಸ್ತ್ರದಲ್ಲಿ ನಿಪುಣರಾದವರೆಲ್ಲರೂ ನನ್ನನ್ನು ಅಗ್ರೇಸರನೆಂದು ಹೊಗಳುತ್ತಾರೆ. ಊರ್ವಶೀ ಮುಂತಾದ ಅಪ್ಸರಸ್ತ್ರೀಯರೂ ಸಹ ನನ್ನನ್ನು ಯಾವಾಗಲೂ ಹೊಗಳುತ್ತಿರುವರು.

೩೦ ಎಲೌ ಸುಂದರವದನೆಯೇ, ಶಚಿಯನ್ನು ನಿನ್ನ ದಾಸಿಯನ್ನಾಗಿ ಮಾಡಿಕೊಡುವೆನು. ತ್ರಿಲೋಕದ ರಾಜ್ಯಸಂಪತ್ತನ್ನೂ ನಿನಗೆ ಕೊಡುವೆನು. ಇದನ್ನು ಸ್ವೀಕರಿಸು. ಗೌತಮನನ್ನು ತ್ಯಜಿಸು.

ಅನಭಿಜ್ಞಂ ಕಾಮಶಾಸ್ತ್ರೇ ದುರ್ಬಲಂ ಚ ತಪಸ್ವಿನಂ ।
ಅವ್ಯವಹಾರ್ಯಂ ನಿಷ್ಕಾಮಂ ನಾರಾಯಣಪರಾಯಣಂ ॥ ೩೧ ॥

ಅವಿದಗ್ಧೋ ವಿಧಾತಾ ಚ ಯೋಜಯಾಮಾಸ ಯೋऽಕ್ಷಮಂ ।
ಈದೃಶೀಂ ಕಾಮುಕೀಂ ರಮ್ಯಾಂ ದದಾತಿ ಚ ತಪಸ್ವಿನೇ ॥ ೩೨ ॥

ಇತ್ಯುಕ್ತ್ವಾ ಕಾಮುಕಃ ಶಕ್ರಃ ಪಪಾತ ಚರಣೇ ಮುದಾ ।
ತಮುವಾಚ ಮಹಾಸಾಧ್ವೀ ವೇದೋಕ್ತಂ ಚ ಯಥೋಚಿತಂ ॥ ೩೩ ॥

॥ ಅಹಲ್ಯೋವಾಚ ॥

ಅಭಾಗ್ಯಾದ್ಬ್ರಹ್ಮಣಶ್ಚಾಪಿ ಮರೀಚೇಶ್ಚ ತಪಸ್ವಿನಃ ।
ಅಭಾಗ್ಯಾತ್ಕಶ್ಯಪಸ್ಯಾಪಿ ತ್ವಂ ಪುತ್ರಃ ಪಾಪಮಾನಸಃ ॥ ೩೪ ॥

---

೩೧. ಕಾಮಶಾಸ್ತ್ರವನ್ನು ತಿಳಿಯದವನೂ, ದುರ್ಬಲನೂ, ತಪಸ್ವಿಯೂ, ವ್ಯವಹಾರಕ್ಕೆ ಅನರ್ಹನೂ, ಕಾಮರಹಿತನೂ, ನಾರಾಯಣಪರಾಯಣನೂ ಆದ ಆ ಮುನಿಯನ್ನು ಬಿಡು.

೩೨. ಅಸಮರ್ಥನಾದ ಆ ಮುನಿಯನ್ನು ನಿನ್ನೊಡಗೂಡಿಸಿದ ವಿಧಾತೃವನ್ನೇ ಅಕುಶಲನೆನ್ನಬೇಕು. ಅತ್ಯಂತ ಮನೋಹರಳೂ, ಕಾಮುಕಿಯೂ ಆದ ನಿನ್ನನ್ನು ತಪಸ್ವಿಯೊಡನೆ ಸೇರಿಸಿರುವನಲ್ಲ.

೩೩. ಕಾಮುಕನಾದ ದೇವೇಂದ್ರನು ಇಂತು ನುಡಿದು ಅಹಲ್ಯೆಯ ಕಾಲುಗಳ ಮೇಲೆ ಬಿದ್ದನು. ಆಗ ಮಹಾಪತಿವ್ರತೆಯಾದ ಅಹಲ್ಯೆಯು ಆತನನ್ನು ಕುರಿತು ಕೆಲವು ವೇದೋಕ್ತವಚನಗಳನ್ನಾಡಿದಳು.

೩೪ ಅಹಲ್ಯೆ:—ಬ್ರಹ್ಮನ ದೌರ್ಭಾಗ್ಯದಿಂದಲೂ, ತಪಸ್ವಿಯಾದ ಮರೀಚಿಯ ದುರದೃಷ್ಟದಿಂದಲೂ, ಕಶ್ಯಪನ ದುರ್ದೈವದಿಂದಲೂ ದುರ್ಬುದ್ಧಿಯುಳ್ಳ ನೀನು ಅವನ ಮಗನಾಗಿ ಹುಟ್ಟಿದೆ.

ಕಿಂ ತಜ್ಜಪೇನ ತಪಸಾ ಮೌನೇನ ಚ ವ್ರತೇನ ಚ ।
ಸುರಾರ್ಚನೇನ ತೀರ್ಥೇನ ಸ್ತ್ರೀಭಿರ್ಯಸ್ಯ ಮನೋ ಹೃತಂ ॥ ೩೫ ॥

ಸ್ತ್ರೀರೂಪಂ ನಿರ್ಮಿತಂ ಸ್ರಷ್ಟ್ರಾ ಮೋಹಾಯ ಕಾಮಿನಾಂ ಮನಃ ।
ಅನ್ಯಥಾ ನ ಭವೇತ್ಸೃಷ್ಟಿಃ ಸ್ರಷ್ಟ್ರಾ ತೇನ ಪುರಾಽಽಜ್ಞಯಾ ॥ ೩೬ ॥

ಸರ್ವಂ ಮಾಯಾಕರಂಡಶ್ಚ ಧರ್ಮಮಾರ್ಗಾರ್ಗಲಂ ನೃಣಾಂ ।
ವ್ಯವಧಾನಂ ಚ ತಪಸಾಂ ದೋಷಾಣಾಮಾಶ್ರಯಂ ಪರಂ ॥ ೩೭ ॥

ಕರ್ಮಬಂಧನಿಬದ್ಧಾನಾಂ ನಿಗಡಂ ಕಠಿಣಂ ಸ್ಮೃತಂ ।
ಪ್ರದೀಪರೂಪಂ ಕೀಟಾನಾಂ ಮೀನಾನಾಂ ಬಡಿಶಂ ಯಥಾ ॥ ೩೮ ॥

ವಿಷಕುಂಭಂ ದುಗ್ಧಮುಖಮಾರಂಭೇ ಮಧುರೋಪಮಂ ।
ಪರಿಣಾಮೇ ದುಃಖಬೀಜಂ ಸೋಪಾನಂ ನರಕಸ್ಯ ಚ ॥ ೩೯ ॥

---

೩೫. ಯಾರು ಸ್ತ್ರೀಸೌಂದರ್ಯಕ್ಕೆ ಮನಸೋಲುವರೋ ಅವರು ಮಾಡುವ ಜಪದಿಂದಲೂ, ತಪಸ್ಸಿನಿಂದಲೂ, ಮೌನವ್ರತದಿಂದಲೂ, ದೇವತಾರ್ಚನೆಯಿಂದಲೂ, ತೀರ್ಥಯಾತ್ರೆಯಿಂದಲೂ ಏನೂ ಪ್ರಯೋಜನವಿಲ್ಲ.

೩೬. ಕಾಮಿಗಳ ಮನಸ್ಸನ್ನು ಮೋಹಗೊಳಿಸಲೋಸುಗವೇ ಹೆಂಗಸಿನ ದಿವ್ಯರೂಪವು ಸೃಷ್ಟಿಯಾಯಿತು. ಇಲ್ಲದಿದ್ದರೆ ಸೃಷ್ಟಿಯೇ ಮುಂದುವರೆಯುತ್ತಿರಲಿಲ್ಲ. ಬ್ರಹ್ಮನ ಸೃಷ್ಟಿನಿಯಮವೇ ಇಂತಿರುವುದು.

೩೭. ಆದರೆ ಈ ಸ್ತ್ರೀರೂಪವೆಲ್ಲವೂ ಮನುಜರನ್ನು ಮಾಯೆಗೆ ಸಿಲುಕಿಸುವ ಮಂತ್ರದ ಭರಣಿಯೂ, ಧರ್ಮಮಾರ್ಗಕ್ಕೆ ಅಗಣಿಯೂ ಆಗಿರುವುದಲ್ಲದೆ ತಪಸ್ಸಿಗೆ ಪ್ರತಿಬಂಧಕವಾಗಿ ದೋಷಗಳಿಗೆ ಆಶ್ರಯವಾಗಿದೆ.

೩೮. ಪತಂಗದ ಹುಳುಗಳಿಗೆ ದೀಪದಂತೆಯೂ, ಮೀನುಗಳಿಗೆ ಗಾಳದಂತೆಯೂ ಕರ್ಮಬಂಧನಕ್ಕೊಳಗಾದ ಜನರಿಗೆ ಈ ಸ್ತ್ರೀರೂಪವು ಕಠಿಣವಾದ ನಿಗಡ (ಕಟ್ಟುವ ಸರಪಳಿ) ವಾಗಿರುವುದು.

೩೯. ಪ್ರಾರಂಭದಲ್ಲಿ ಮಧುರವಾಗಿರುವ ಈ ಸ್ತ್ರೀರೂಪವು ಬಾಯಿಗೆ ಹಾಲನ್ನು ಬಳಿದಿರುವ ವಿಷದ ಗಡಿಗೆಯಂತಿದೆ. ಪರಿಣಾಮದಲ್ಲಿ ದುಃಖಕಾರಣವಾದ ಈ ರೂಪವು ನರಕಕ್ಕೆ ಸೋಪಾನದಂತಿದೆ.

ಋಷಯಃ ಸನಕಾದ್ಯಾಶ್ಚ ನೋದ್ವಾಹಂ ಚಕ್ರುರೀಪ್ಸಿತಂ ।
ಪರಸ್ತ್ರೀಷು ಮನೋ ಯೇಷಾಂ ತೇಷಾಂ ಸರ್ವಂ ಚ ನಿಷ್ಫಲಂ ॥ ೪೦ ॥

ಪರಸ್ತ್ರೀಸೇವನಂ ಶಕ್ರ ಇಹೈವಾತ್ಯಯಶಸ್ಕರಂ ।
ಪರತ್ರ ನರಕಂ ಘೋರಂ ದದಾತಿ ಕಾಮುಕಾಯ ಚ ॥ ೪೧ ॥

ಇತ್ಯುಕ್ತ್ವಾ ಚ ಮಹಾಸಾಧ್ವೀ ವಿಹಾಯ ತಂ ಚ ಕಾಮುಕಂ ।
ಪ್ರಯಯೌ ಸ್ವಗೃಹಂ ತೂರ್ಣಂ ಗೃಹಿಣೀ ಗೌತಮಸ್ಯ ಚ ॥ ೪೨ ॥

ತತ್ಸರ್ವಂ ಕಥಯಾಮಾಸ ಗೌತಮಾಯ ತಪಸ್ವಿನೇ ।
ಶ್ರುತ್ವಾ ಪ್ರಹಸ್ಯ ಸ ಮುನಿರ್ಮಹೇಂದ್ರಂ ಚ ವಿನಿಂದ್ಯ ಚ ॥ ೪೩ ॥

ಏಕದಾ ಗೌತಮಃ ಶೀಘ್ರಂ ಜಗಾಮ ಶಂಕರಾಲಯಂ ।
ಶಕ್ರೋ ಗೌತಮರೂಪೇಣ ತಾಂ ಸಂಭೋಗಂ ಚಕಾರ ಸಃ ॥ ೪೪ ॥

---

೪೦. ಈ ಕಾರಣದಿಂದಲೇ ಸನಕಾದಿಮಹರ್ಷಿಗಳೆಲ್ಲರೂ ವಿವಾಹವನ್ನೇ ಮಾಡಿಕೊಳ್ಳಲಿಲ್ಲ. ಯಾರ ಮನಸ್ಸು ಪರಸ್ತ್ರೀಯರಲ್ಲಿ ಆಸಕ್ತವಾಗುವುದೋ ಅವರು ಮಾಡುವ ಸತ್ಕರ್ಮವೆಲ್ಲವೂ ಸಿದ್ಧವೆನಿಸುವುದು.

೪೧. ಎಲೈ ಇಂದ್ರನೇ, ಪರಸ್ತ್ರೀಯನ್ನು ಉಪಭೋಗಿಸುವವರಿಗೆ ಇಹ ಲೋಕದಲ್ಲಿ ಅಪಕೀರ್ತಿಯು ಬರುವುದಲ್ಲದೆ ಆ ಕಾಮುಕರು ಪರಲೋಕದಲ್ಲಿ ಘೋರವಾದ ನರಕಯಾತನೆಯನ್ನು ಅನುಭವಿಸುವರು.

೪೨. ಮಹಾ ಸಾಧ್ವೀಶಿರೋಮಣಿಯಾದ ಗೌತಮನ ಧರ್ಮಪತ್ನಿಯು ಇಂದ್ರನನ್ನು ಕುರಿತು ಈ ರೀತಿಯಾಗಿ ಹೇಳಿ. ಆ ಕಾಮುಕನನ್ನು ಬಿಟ್ಟು ತಾನು ತನ್ನ ಮನೆಗೆ ಜಾಗ್ರತೆಯಾಗಿ ಹೋದಳು

೪೩. ಅಲ್ಲಿ ತಪಸ್ವಿಯಾದ ತನ್ನ ಪತಿ ಗೌತಮನಿಗೆ ನಡೆದ ಸಮಾಚಾರವನ್ನೆಲ್ಲ ತಿಳಿಸಿದಳು. ಆ ಮುನಿಯು ಆ ವಿಷಯವನ್ನು ಕೇಳಿ ನಸುನಕ್ಕು ದೇವೇಂದ್ರನನ್ನು ನಿಂದಿಸಿದನು.

೪೪. ಹೀಗಿರಲು ಒಮ್ಮೆ ಗೌತಮನು ಶಂಕರನ ಆರಾಧನೆಗಾಗಿ ಆವನ ಮಂದಿರಕ್ಕೆ ಹೋಗಿರಲು ಆ ಸಮಯವನ್ನು ಸಾಧಿಸಿ ಇಂದ್ರನು ಗೌತಮನ ವೇಷದಿಂದ ಅವನ ಮನೆಗೆ ಹೋಗಿ ಅಹಲ್ಯೆಯೊಡನೆ ಸಂಭೋಗಿಸಿದನು.

ಸರ್ವಂ ಜ್ಞಾತ್ವಾ ಚ ಸರ್ವಜ್ಞಃ ಮಂದಿರದ್ವಾರಮಾಯಯೌ ।
ನಿರ್ಗಚ್ಛಂತಂ ಮಹೇಂದ್ರಂ ಚ ದದರ್ಶ ಮುನಿಪುಂಗವಃ ॥ ೪೫ ॥

ನಗ್ನಾಮಹಲ್ಯಾಂ ರಹಸಿ ಪೀನಶ್ರೋಣಿಪಯೋಧರಾಂ ।
ಮುನಿಃ ಶಶಾಪ ಶಕ್ರಂ ಚ ಭಗಾಂಗಶ್ಚ ಭವೇತಿ ಚ ॥ ೪೬ ॥

ಕೋಪಾಚ್ಛಶಾಪ ಪತ್ನೀಂ ಚ ರುದತೀಂ ಭಯವಿಹ್ವಲಾಂ ।
ತ್ವಂ ಚ ಪಾಷಾಣರೂಪಾ ಚ ಮಹಾರಣ್ಯೇ ಭವೇತಿ ಚ ॥ ೪೭ ॥

ಯಯೌ ಚ ಸ್ವಗೃಹಂ ಶಕ್ರಃ ಲಜ್ಜಯೈಕತಾನಮಾನಸಃ ।
ಉವಾಚ ಮಧುರಂ ಭೀತಾ ಸ್ವಾಮಿನಂ ಶೋಕಕರ್ಶಿತಾ ॥ ೪೮ ॥

॥ ಅಹಲ್ಯೋವಾಚ ॥

ಮಾಂ ಚ ದಾಸೀಂ ಚ ನಿರ್ದೋಷಾಂ ಕಥಂ ತ್ಯಜಸಿ ಧಾರ್ಮಿಕ ।
ತ್ವಂ ಚ ವೇದವಿದಾಂ ಶ್ರೇಷ್ಠೋ ವಿಚಾರಂ ಕುರು ಧರ್ಮತಃ ॥ ೪೯ ॥

---

೪೫. ಸರ್ವಜ್ಞನಾದ ಗೌತಮನಾದರೋ ದಿವ್ಯದೃಷ್ಟಿಯಿಂದಲೇ ಈ ವಿಷಯವನ್ನು ತಿಳಿದು ತನ್ನ ಮಂದಿರಕ್ಕೆ ಬೇಗ ಬಂದನು. ಬಂದು ಆಗತಾನೇ ತನ್ನ ಮನೆಯಿಂದ ಹೊರಕ್ಕೆ ಹೋಗುತ್ತಿದ್ದ ಇಂದ್ರನನ್ನು ನೋಡಿದನು.

೪೬. ಹಾಗೆಯೇ ಪೀನವಾದ ಶ್ರೋಣೀಬಿಂಬ ಮತ್ತು ಸ್ತನಗಳುಳ್ಳ ಅಹಲ್ಯೆಯು ಏಕಾಂತಪ್ರದೇಶದಲ್ಲಿ ಬೆತ್ತಲೆಯಾಗಿ ಮಲಗಿರುವುದನ್ನೂ ನೋಡಿ ಆ ಮುನಿಯು ಇಂದ್ರನ ಮೈಯೆಲ್ಲಾ ಯೋನಿಯಾಗುವಂತೆ ಶಪಿಸಿದನು.

೪೭. ಅಲ್ಲದೆ ಭಯಚಕಿತಳಾಗಿ ಅಳುತ್ತಿರುವ ಪತ್ನಿಯನ್ನು ನೋಡಿ. 'ನೀನು ಅಚೇತನವಾದ ಶಿಲೆಯಾಗಿ ಮಹಾರಣ್ಯದಲ್ಲಿ ಬಿದ್ದು ನರಳು' ಎಂದು ಶಪಿಸಿದನು.

೪೮ ಲಜ್ಜಿತನಾದ ಇಂದ್ರನು ಮರುಮಾತಾಡದೆ ತನ್ನ ಮನೆಗೆ ಹೊರಟು ಹೋದನು. ಅಹಲ್ಯೆಯಾದರೋ ಚಿಂತಾಕ್ರಾಂತನಾದ ಪತಿದೇವನನ್ನು ಕುರಿತು ಭಯಭಕ್ತಿಯಿಂದ ಒಂದೆರಡು ಮಧುರ ವಚನವನ್ನಾಡಿದಳು.

೪೯. ಅಹಲ್ಯಾ : — ಎಲೈ ಧರ್ಮಿಷ್ಠನೇ, ನಿರ್ದೋಷಳೂ, ನಿನ್ನ ದಾಸಿಯೂ ಆದ ನನ್ನನ್ನು ಏಕೆ ಬಿಟ್ಟುಬಿಡುವೆ? ವೇದಜ್ಞರಲ್ಲಿ ಶ್ರೇಷ್ಠನಾದ ನೀನು ಇದು ಧರ್ಮವೇ? ಅಧರ್ಮವೇ? ಎಂಬುದನ್ನು ಚೆನ್ನಾಗಿ ವಿಚಾರಿಸಿನೋಡು.

॥ ಗೌತಮ ಉವಾಚ ॥

ತ್ವಾಂ ಜಾನಾಮಿ ಮನಃಶುದ್ಧಾಂ ಸುವ್ರತಾಂ ಚ ಪತಿವ್ರತಾಂ ।
ತ್ಯಕ್ಷ್ಯಾಮಿ ಚ ತಥಾಽಪಿ ತ್ವಾಂ ಪರವೀರ್ಯಂ ಚ ಬಿಭ್ರತೀಂ ॥ ೩೦ ॥

ಪರಭೋಗ್ಯಾ ಚ ಯಾ ಕಾಂತಾ ಸಾಽಶುದ್ಧಾ ಸರ್ವಕರ್ಮಸು ।
ತಾಂ ಯೋ ಗಚ್ಛೇನ್ಮಹಾಮೂಢೋ ನರಕಂ ತಸ್ಯ ಕಲ್ಪಕಂ ॥ ೩೧ ॥

ಅನ್ನಂ ವಿಷ್ಠಾ ಜಲಂ ಮೂತ್ರಂ ಪರಭೋಗ್ಯಾಶ್ಚ ನಿಶ್ಚಿತಂ ।
ಉಪಸ್ಪೃಶೇನ್ನ ತಸ್ಯಾಶ್ಚ ಹಂತಿ ಪುಣ್ಯಂ ಪುರಾಕೃತಂ ॥ ೩೨ ॥

ಅನಿಚ್ಛಯಾ ಚ ಶೃಂಗಾರೇ ಸ್ತ್ರೀ ಜಾರೇಣ ನ ದುಷ್ಯತಿ ।
ದುಷ್ಟಾ ಸ್ತ್ರೀ ನಿಶ್ಚಿತಂ ಸಾಧ್ವೀ ಸ್ವೇಚ್ಛಾಶೃಂಗಾರಕರ್ಮಣಿ ॥ ೩೩ ॥

ತ್ವಂ ಶಕ್ರಂ ಸ್ವಾಮಿನಂ ಮತ್ವಾ ಸುಖಂ ಭುಕ್ತ್ವಾ ರತಿಂ ಗೃಹೇ ।
ಪಶ್ಚಾದ್ಬಭೂವ ತೇ ಜ್ಞಾನಂ ಮಾಂ ದೃಷ್ಟ್ವಾ ಚ ನಿಶಾಮಯ ॥ ೩೪ ॥

---

೩೦. ಗೌತಮ:— ಪತಿವ್ರತೆಯೂ, ಸದಾಚಾರಸಂಪನ್ನಳೂ ಆದ ನೀನು ಮನಸ್ಸಿನಲ್ಲಿ ಪರಿಶುದ್ಧಳಾಗಿರುವೆ ಎಂಬುದನ್ನು ನಾನು ಬಲ್ಲೆನು. ಆದರೂ ಸಹ ಪರಪುರುಷನ ವೀರ್ಯವನ್ನು ಧರಿಸಿರುವ ನಿನ್ನನ್ನು ಬಿಡಲೇಬೇಕಾಗಿದೆ.

೩೧. ಪರಪುರುಷನಿಂದ ಉಪಭುಕ್ತಳಾದ ಹೆಂಗಸು ಸಕಲ ಸತ್ಕರ್ಮಗಳಿಗೂ ಅಶುದ್ಧಳೆನಿಸುವಳು. ಅಂಥವಳ ಸಹವಾಸ ಮಾಡುವ ಮಹಾಮೂರ್ಖನಿಗೆ ಕಲ್ಪಗಳ ಕಾಲ ನರಕವು ಸಿದ್ಧವಾದುದು.

೩೨. ಪರಭೋಗ್ಯಳು ಮಾಡಿದ ಅನ್ನವು ಮಲಸದೃಶವೂ, ಜಲವು ಮೂತ್ರ ಸದೃಶವೂ ಎನಿಸುವುದು ಅವಳು ಮುಟ್ಟಿದ ನೀರಿನಿಂದ ಆಚಮನಮಾಡಿದರೆ ಜನ್ಮಾಂತರದ ಪುಣ್ಯರಾಶಿಯು ನಾಶವಾಗುವುದು.

೩೩. ಇಚ್ಛೆಯಿಲ್ಲದೆ ಕಾಮಸುಖವನ್ನನುಭವಿಸಿದರೆ ಹೆಂಗಸು ಜಾರದೋಷಕ್ಕೆ ಒಳಗಾಗುವುದಿಲ್ಲ. ಸ್ವೇಚ್ಛಾಪೂರ್ವಕವಾಗಿ ಶೃಂಗಾರಸುಖವನ್ನನುಭವಿಸುವಳು ಸಾಧ್ವಿಯಂತಿದ್ದರೂ ನಿಶ್ಚಯವಾಗಿಯೂ ದುಷ್ಟಳೆನಿಸುವಳು.

೩೪. ನೀನು ದೇವೇಂದ್ರನನ್ನು ನಿನ್ನ ಪತಿ ಎಂದೇ ತಿಳಿದು ಮನೆಯಲ್ಲಿ ಸುಖವಾಗಿ ರತಿಸುಖವನ್ನನುಭವಿಸಿದೆ. ನಾನು ಬಂದುದನ್ನು ನೋಡಿದ ನಂತರ ನಿನಗೆ ಅವನು ಪತಿಯಲ್ಲವೆಂದು ಜ್ಞಾನೋದಯವಾಯಿತು.

ಗಚ್ಛ ಗಚ್ಛ ಮಹಾರಣ್ಯಂ ಭವ ಪಾಷಾಣರೂಪಿಣೀ ।
ರಾಮಪಾದಾಂಗುಲಿಸ್ಪರ್ಶಾತ್ಸದ್ಯಃ ಪೂತಾ ಭವಿಷ್ಯಸಿ ॥ ೫೫ ॥

ಮಾಂ ಸಂಪ್ರಾಪ್ಸ್ಯಸಿ ತತ್ಪುಣ್ಯಾತ್ಪುನರೇವಾಗಮಿಷ್ಯಸಿ ।
ಗಚ್ಛ ಕಾಂತೇ ಮಹಾರಣ್ಯಮಿತ್ಯುಕ್ತ್ವಾ ತಪಸೇ ಯಯೌ ॥ ೫೬ ॥

ಇತ್ಯೇವಂ ಕಥಿತಂ ಸರ್ವಂ ಮಹೇಂದ್ರದರ್ಪಭಂಜನಂ ।
ಪುನಃ ಸಂಪ್ರಾಪ್ಯ ಲಕ್ಷ್ಮೀಂ ಚ ವಿಭೋರ್ಕೃಪಯಾ ಮುನೇ ॥ ೫೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರದ ನಾರಾಯಣಸಂವಾದೇ
ಏಕಷಷ್ಟಿತಮೋಽಧ್ಯಾಯಃ

---

೫೫. ಆದಕಾರಣ ನೀನು ಮಹಾರಣ್ಯಕ್ಕೆ ಹೋಗಿ ಪಾಷಾಣರೂಪದಿಂದ ಬಿದ್ದಿರು. ಕೆಲವು ಕಾಲಾನಂತರ ಶ್ರೀರಾಮನ ಪಾದಾಂಗುಲಿಗಳ ಸ್ಪರ್ಶದಿಂದ ನೀನು ಕೂಡಲೇ ಪವಿತ್ರಳಾಗುವೆ

೫೬. ಆ ಪುಣ್ಯದಿಂದ ಪುನಃ ನೀನು ನನ್ನೊಡನೆ ಸೇರಲು ಅರ್ಹಳಾಗುವೆ. ಆದುದರಿಂದ ಎಲೌ ಕಾಂತೆಯೇ, ಈಗ ನೀನು ಮಹಾರಣ್ಯಕ್ಕೆ ಹೋಗು ಎಂದು ಗೌತಮನು ಹೇಳಿ ತಪಸ್ಸಿಗೆ ತೆರಳಿದನು.

೫೭. ಎಲೈ ನಾರದಮುನಿಯೇ, ಈ ರೀತಿಯಾಗಿ ಮಹೇಂದ್ರನ ದರ್ಪ ಭಂಗದ ಕಥೆಯನ್ನು ನಿನಗೆ ಹೇಳಿರುವೆನು. ಪರಮಾತ್ಮನ ದಯೆಯಿಂದ ಇಂದ್ರನು ಪುನಃ ತನ್ನ ರಾಜ್ಯಸಂಪತ್ತನ್ನು ಪಡೆದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದ
ನಾರಾಯಣ ನಾರದ ಸಂವಾದದಲ್ಲಿ ಉತ್ತರಾರ್ಧದ
ಅರವತ್ತೊಂದನೆಯ ಅಧ್ಯಾಯವು ಮುಗಿದುದು.

ಅರವತ್ತೊಂದನೆಯ ಅಧ್ಯಾಯದ ಸಾರಾಂಶ.

ಸಮುದ್ರಮಥನವಾದನಂತರ ಅಮೃತಪಾನಮಾಡಿದ ದೇವೇಂದ್ರನು ಗರ್ವಿತನಾಗಿರುವುದನ್ನು ನೋಡಿ ಪರಮಾತ್ಮನು ಬಲಿಚಕ್ರವರ್ತಿ ೨ ಮೂಲಕ ಅವನ ದರ್ಪವನ್ನು ಭಂಗಗೊಳಿಸಿದನು. ಆಗ ಸಂಪತ್ಭ್ರಷ್ಟನಾದ ಇಂದ್ರನು ಬೃಹಸ್ಪತಿಯನ್ನು ಸ್ತುತಿಸಿ, ಅದಿತಿಯು ವ್ರತವನ್ನಾಚರಿಸಿದುದರಿಂದ ಪರಮಾತ್ಮನು ಸಂತುಷ್ಟನಾಗಿ ಅದಿತಿಯ ಗರ್ಭದಲ್ಲಿ ವಾಮನನಾಗಿ ಅವತರಿಸಿ ಬಲಿಯನ್ನು ನಿಗ್ರಹಿಸಿ ಇಂದ್ರನಿಗೆ ಅವನ ಪೂರ್ವಸಂಪತ್ತನ್ನು ಕೊಟ್ಟನು.

ಮತ್ತೊಮ್ಮೆ ಸಂಪನ್ಮತ್ತನಾದ ದೇವೇಂದ್ರನು, ದೇವಗಂಗೆಯಲ್ಲಿ ಸ್ನಾನ ಮಾಡುತ್ತಿದ್ದ ಗೌತಮನ ಧರ್ಮಪತ್ನಿಯಾದ ಅಹಲ್ಯೆಯನ್ನು ಕಂಡು ಕಾಮುಕನಾಗಿ ಅವಳೊಡನೆ ರಮಿಸಲು ಬಯಸಿದನು. ಆಕೆಯು ಒಪ್ಪದೆ ಮನೆಗೆ ಹೊರಟುಹೋದಳು. ಆಗ ಇಂದ್ರನು ಗೌತಮನ ವೇಶದಿಂದ ಗೌತಮನಿಲ್ಲದಿರುವಾಗ ಅವಳ ಮನೆಗೆ ಹೋಗಿ ಅವಳನ್ನು ಉಪಭೋಗಿಸಿ ಹೊರಕ್ಕೆ ಬರುತ್ತಿದ್ದನು. ಆ ಸಮಯಕ್ಕೆ ಸರಿಯಾಗಿ ಗೌತಮನು ಮನೆಗೆ ಬಂದು ಇಂದ್ರನ ವಂಚನೆಯನ್ನರಿತು ಅವನು 'ಭಗಾಂಗ'ನಾಗುವಂತೆಯೂ, ಅಹಲ್ಯೆಯು ಶಿಲೆಯಾಗುವಂತೆಯೂ ಶಪಿಸಿದನು. ಅನಂತರ ಶಾಂತನಾಗಿ ಶ್ರೀರಾಮನ ಪಾದಸ್ಪರ್ಶದಿಂದ ಅಹಲ್ಯೆಯು ಪುನೀತಳಾಗುವಂತೆ ಅನುಗ್ರಹಿಸಿದನು. ದೇವೇಂದ್ರನು ಸಹ ಶ್ರೀಹರಿಯ ಅನುಗ್ರಹದಿಂದ ತನ್ನ ರಾಜ್ಯಲಕ್ಷ್ಮಿಯನ್ನು ಪಡೆದನು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ದ್ವಿಷಷ್ಟಿತಮೋಽಧ್ಯಾಯಃ ||

|| ನಾರದ ಉವಾಚ ||

ಬ್ರಹ್ಮನ್ ಕೇನ ಪ್ರಕಾರೇಣ ರಾಮೋ ದಾಶರಥಿಃ ಸ್ವಯಂ |
ಚಕಾರ ಮೋಕ್ಷಣಂ ಕುತ್ರ ಯುಗೇ ಗೌತಮಯೋಷಿತಃ || ೧ ||

ರಾಮಾವತಾರಂ ಸುಖದಂ ಸಮಾಸೇನ ಮನೋಹರಂ |
ಕಥಯಸ್ವ ಮಹಾಭಾಗ ಶ್ರೋತುಂ ಕೌತೂಹಲಂ ಮಮ || ೨ ||

ಅರವತ್ತೆರಡನೆಯ ಅಧ್ಯಾಯವು

೧. ನಾರದ :—ಎಲೈ ಋಷಿವರ್ಯನೇ, ದಶರಥನ ಮಗನಾದ ಶ್ರೀರಾಮನು ಯಾವ ಯುಗದಲ್ಲಿ ಯಾವ ರೀತಿಯಿಂದ ಗೌತಮ ಧರ್ಮಪತ್ನಿಯಾದ ಅಹಲ್ಯೆಯ ಶಾಪವನ್ನು ತಾನಾಗಿಯೇ ಪರಿಹರಿಸಿದನು?

೨. ಎಲೈ ಮಹಾಭಾಗ್ಯಶಾಲಿಯೇ, ಮನೋಹರವೂ, ಸುಖಪ್ರದವೂ ಆದ ರಾಮಾವತಾರದ ಕಥೆಯನ್ನು ಸಂಕ್ಷೇಪವಾಗಿ ಹೇಳು. ಅದನ್ನು ಕೇಳಲು ನನಗೆ ಬಹಳ ಕುತೂಹಲವುಂಟಾಗಿದೆ.

|| ನಾರಾಯಣ ಉವಾಚ ||

ಬ್ರಹ್ಮಣಾ ಪ್ರಾರ್ಥಿತೋ ವಿಷ್ಣುರ್ಜಾತೋ ದಶರಥಾತ್ಸ್ವಯಂ |
ಕೌಸಲ್ಯಾಯಾಂ ಚ ಭಗವಾಂಸ್ತ್ರೇತಾಯಾಂ ಚ ಮುದಾನ್ವಿತಃ || ೩ ||

ಕೈಕೇಯ್ಯಾಂ ಭರತಶ್ಚೈವ ರಾಮತುಲ್ಯೋ ಗುಣೇನ ಚ |
ಲಕ್ಷ್ಮಣಶ್ಚಾಪಿ ಶತ್ರುಘ್ನಃ ಸುಮಿತ್ರಾಯಾಂ ಗುಣಾರ್ಣವಃ || ೪ ||

ವಿಶ್ವಾಮಿತ್ರಪ್ರೇರಿತಶ್ಚ ಶ್ರೀರಾಮಶ್ಚ ಸಲಕ್ಷ್ಮಣಃ |
ಪ್ರಯಯೌ ಮಿಥಿಲಾಂ ರಮ್ಯಾಂ ಸೀತಾಗ್ರಹಣಹೇತವೇ || ೫ ||

ದೃಷ್ಟ್ವಾ ಪಾಷಾಣರೂಪಾಂ ಚ ರಾಮೋ ವರ್ತ್ಮನಿ ಕಾಮಿನೀಂ |
ವಿಶ್ವಾಮಿತ್ರಂ ಚ ಪ್ರಪಚ್ಛ ಕಾರಣಂ ಜಗದೀಶ್ವರಃ || ೬ ||

ರಾಮಸ್ಯ ವಚನಂ ಶ್ರುತ್ವಾ ವಿಶ್ವಾಮಿತ್ರೋ ಮಹಾತಪಾಃ |
ಉವಾಚ ತತ್ರ ಧರ್ಮಿಷ್ಠೋ ರಹಸ್ಯಂ ಸರ್ವಮೇವ ಚ || ೭ ||

---

೩. ಶ್ರೀನಾರಾಯಣ:—ಭಗವಂತನಾದ ವಿಷ್ಣುವು ತ್ರೇತಾಯುಗದಲ್ಲಿ ಬ್ರಹ್ಮದೇವನಿಂದ ಪ್ರಾರ್ಥಿಸಲ್ಪಟ್ಟು ದಶರಥನ ಪತ್ನಿಯಾದ ಕೌಸಲ್ಯೆಯಲ್ಲಿ ಸಂತೋಷದಿಂದ ಜನ್ಮವೆತ್ತಿದನು.

೪. ಗುಣಗಳಲ್ಲಿ ಶ್ರೀರಾಮನಿಗೆ ಸಮಾನನಾದ ಭರತನು ಕೈಕೆಯಲ್ಲಿ ಜನ್ಮವೆತ್ತಿದನು. ಗುಣವಂತರಾದ ಲಕ್ಷ್ಮಣ ಮತ್ತು ಶತ್ರುಘ್ನರು ಸುಮಿತ್ರೆಯ ಗರ್ಭದಲ್ಲಿ ಜನಿಸಿದರು.

೫. ಶ್ರೀರಾಮನು ಪ್ರಾಪ್ತಯೌವನನಾದಾಗ ವಿಶ್ವಾಮಿತ್ರನಿಂದ ಪ್ರೇರಿತನಾಗಿ ಸೀತಾಸ್ವಯಂವರಕ್ಕೋಸ್ಕರ ಲಕ್ಷ್ಮಣನೊಡನೆ ರಮ್ಯವಾದ ಮಿಥಿಲಾಪಟ್ಟಣಕ್ಕೆ ಹೋದನು.

೬. ಮಾರ್ಗಮಧ್ಯದಲ್ಲಿ ಶ್ರೀರಾಮನು ಶಿಲಾರೂಪದಿಂದಿದ್ದ ಅಹಲ್ಯೆಯನ್ನು ಕಂಡು ತಾನು ಜಗದೀಶ್ವರನಾದರೂ ಅದಕ್ಕೆ ಕಾರಣವೇನೆಂದು ವಿಶ್ವಾಮಿತ್ರನನ್ನು ಕೇಳಿದನು.

೭. ಶ್ರೀರಾಮನ ಪ್ರಶ್ನೆಯನ್ನು ಕೇಳಿ ಧರ್ಮಿಷ್ಠನೂ, ಮಹಾತಪಸ್ವಿಯೂ ಆದ ವಿಶ್ವಾಮಿತ್ರನು ಸಕಲ ರಹಸ್ಯಗಳನ್ನೂ ಶ್ರೀರಾಮನಿಗೆ ವಿಸ್ತಾರವಾಗಿ ತಿಳಿಸಿದನು.

ಕಾರಣಂ ತನ್ಮುಖಾಚ್ಛ್ರುತ್ವಾ ರಾಮೋ ಭುವನಪಾವನಃ ।
ಪಸ್ಪರ್ಶ ಪಾದಾಂಗುಲಿನಾ ಸಾ ಬಭೂವ ಚ ಪದ್ಮಿನೀ ॥ ೮ ॥

ಸಾ ರಾಮಮಾಶಿಷಂ ಕೃತ್ವಾ ಪ್ರಯಯೌ ಭರ್ತೃಮಂದಿರಂ ।
ಶುಭಾಶಿಷಂ ದದೌ ತಸ್ಮೈ ಭಾರ್ಯಾಂ ಸಂಪ್ರಾಪ್ಯ ಗೌತಮಃ ॥ ೯ ॥

ರಾಮಶ್ಚ ಮಿಥಿಲಾಂ ಗತ್ವಾ ಧನುರ್ಭಂಗಂ ಶಿವಸ್ಯ ಚ ।
ಚಕಾರ ಪಾಣಿಗ್ರಹಣಂ ಸೀತಾಯಾಶ್ಚೈವ ನಾರದ ॥ ೧೦ ॥

ಕೃತ್ವಾ ವಿವಾಹಂ ರಾಜೇಂದ್ರೋ ಭೃಗುದರ್ಪಂ ನಿಹತ್ಯ ಚ ।
ಅಯೋಧ್ಯಾಂ ಪ್ರಯಯೌ ರಮ್ಯಾಂ ಕ್ರೀಡಾಕೌತುಕಮಂಗಲೈಃ ॥ ೧೧ ॥

ರಾಜಾ ಪುತ್ರಂ ನೃಪಂ ಕರ್ತುಮುದ್ಯೋಗಂ ಕೃತಸಾದರಂ ।
ಸಪ್ತತೀರ್ಥೋದಕಂ ತೂರ್ಣಮಾನೀಯ ಮುನಿಪುಂಗವಾನ್ ॥ ೧೨ ॥

---

೮. ವಿಶ್ವಾಮಿತ್ರನಿಂದ ಅಹಲ್ಯಾಶಾಪಕಾರಣವನ್ನು ಕೇಳಿ ತಿಳಿದ ಭುವನಪಾವನನಾದ ರಾಮನು ತನ್ನ ಕಾಲ್ಬೆರಳುಗಳಿಂದ ಆ ಶಿಲೆಯನ್ನು ಸ್ಪರ್ಶಮಾಡಲು ಕೂಡಲೇ ಆ ಶಿಲೆಯು ದಿವ್ಯ ಸುಂದರಸ್ತ್ರೀಯಾಯಿತು.

೯. ಪತಿವ್ರತಾಶಿರೋಮಣಿಯಾದ ಆ ಅಹಲ್ಯೆಯು ಶ್ರೀರಾಮನಿಗೆ ಆಶೀರ್ವಾದಮಾಡಿ ತನ್ನ ಪತಿಯ ಮನೆಗೆ ತೆರಳಿದಳು. ಹೆಂಡತಿಯನ್ನು ಪಡೆದ ಗೌತಮನೂ ಸಹ ಶ್ರೀರಾಮನಿಗೆ ಮಂಗಳಾಶೀರ್ವಾದಗಳನ್ನು ಮಾಡಿದನು.

೧೦. ಎಲೈ ನಾರದನೇ, ಅತ್ತ ಶ್ರೀರಾಮನು ಮಿಥಿಲಾಪಟ್ಟಣಕ್ಕೆ ಹೋಗಿ ಶಿವಧನುಸ್ಸನ್ನು ಮುರಿದು ಜನಕರಾಜನ ಪುತ್ರಿಯಾದ ಸೀತಾದೇವಿಯ ಪಾಣಿಗ್ರಹಣ ಮಾಡಿದನು.

೧೧. ಈ ರೀತಿ ರಾಜೇಂದ್ರನಾದ ಶ್ರೀರಾಮನು ವಿವಾಹಮಾಡಿಕೊಂಡು ಬರುತ್ತಾ ದಾರಿಯಲ್ಲಿ ಪರಶುರಾಮನ ದರ್ಪವನ್ನು ಭಂಗಗೊಳಿಸಿ ವಿವಾಹಕಾಲದ ಕೌತುಕ ಮಂಗಳದೊಡಗೂಡಿ ರಮ್ಯವಾದ ಅಯೋಧ್ಯೆಗೆ ತೆರಳಿದನು.

೧೨. ದಶರಥನು ಪ್ರಿಯಪುತ್ರನಾದ ಶ್ರೀರಾಮನಿಗೆ ರಾಜ್ಯದಲ್ಲಿ ಪಟ್ಟಾಭಿಷೇಕಮಾಡಲು ಬಯಸಿ ಸಪ್ತಸಮುದ್ರಗಳ ನೀರನ್ನು ತರಿಸಿ ಮುನಿಶ್ರೇಷ್ಠರನ್ನೆಲ್ಲ ಒಂದುಗೂಡಿಸಿದನು.

ಕೃತಾಧಿವಾಸಂ ಶ್ರೀರಾಮಂ ಸರ್ವಂ ಮಂಗಳಸಂಯುತಂ ।
ದೃಷ್ಟ್ವಾ ಭರತಮಾತಾ ಚ ಕೈಕೇಯೀ ಶೋಕವಿಹ್ವಲಾ ॥ ೧೩ ॥

ವರಯಾಮಾಸ ರಾಜಾನಂ ಪೂರ್ವಮಂಗೀಕೃತಂ ವರಂ ।
ರಾಮಸ್ಯ ವನವಾಸಂ ಚ ರಾಜತ್ವಂ ಭರತಸ್ಯ ಚ ॥ ೧೪ ॥

ವರಂ ದಾತುಂ ಮಹಾರಾಜೋ ನೇಯೇಷ ಪ್ರೇಮಮೋಹಿತಃ ।
ಧರ್ಮಸತ್ಯಭಯೇನೈವೋವಾಚ ರಾಮೋ ನೃಪಂ ಸುಧೀಃ ॥ ೧೫ ॥

॥ ಶ್ರೀ ರಾಮ ಉವಾಚ ॥

ತಡಾಗಶತದಾನೇನ ಯತ್ಪುಣ್ಯಂ ಲಭತೇ ನರಃ ।
ತತೋಽಧಿಕಂ ಚ ಲಭತೇ ವಾಪೀದಾನೇನ ನಿಶ್ಚಿತಂ ॥ ೧೬ ॥

---

೧೩. ಶ್ರೀರಾಮನು ಸುವಾಸನೆಯಾದ ಚಂದನಾದಿಗಳನ್ನು ಲೇಪಿಸಿಕೊಂಡು ಮಂಗಳಾರ್ಹವಾದ ಉತ್ತಮ ವಸ್ತ್ರಗಳನ್ನು ಧರಿಸಿರಲು ಭರತನ ಮಾತೆಯಾದ ಕೈಕೆಯು ನೋಡಿ ಶೋಕವಿಹ್ವಲಳಾದಳು.

೧೪. ಕೂಡಲೇ, ದಶರಥನು ತನಗೆ ಕೊಡುವುದಾಗಿ ಪ್ರತಿಜ್ಞೆಮಾಡಿದ್ದ ಎರಡು ವರಗಳಲ್ಲಿ ಒಂದರಿಂದ ಶ್ರೀರಾಮನನ್ನು ಕಾಡಿಗೆ ಕಳುಹಿಸಬೇಕೆಂದೂ, ಮತ್ತೊಂದರಿಂದ ಭರತನಿಗೆ ರಾಜ್ಯಾಭಿಷೇಕಮಾಡಬೇಕೆಂದೂ ಬೇಡಿದಳು.

೧೫. ಪುತ್ರವಾತ್ಸಲ್ಯದಿಂದ ಮೋಹಗೊಂಡ ದಶರಥನು ಕೈಕೆಯು ಬೇಡಿದ ವರಗಳನ್ನು ಕೊಡಲು ಇಷ್ಟಪಡಲಿಲ್ಲ ಆದರೆ ಬುದ್ಧಿವಂತನಾದ ಶ್ರೀರಾಮನು ಧರ್ಮ ಮತ್ತು ಸತ್ಯದ ಕಡೆಗೆ ಗಮನವಿಟ್ಟು ದಶರಥನಿಗೆ ಇಂತೆಂದನು.

೧೬. ಶ್ರೀರಾಮ:—ಎಲೈ ರಾಜೇಂದ್ರನೇ, ನೂರು ಕೆರೆಗಳನ್ನು ದಾನ ಮಾಡುವುದರಿಂದ ಮನುಜನಿಗೆ ಯಾವ ಪುಣ್ಯವು ಲಭಿಸುವುದೋ ಅದಕ್ಕಿಂತಲೂ ಹೆಚ್ಚಾಗಿ ಒಂದು ಭಾವಿಯನ್ನು ದಾನಮಾಡುವುದರಿಂದ ಲಭಿಸುವುದು.

ದಶವಾಪೀಪ್ರದಾನೇನ ಯತ್ಪುಣ್ಯಂ ಲಭತೇ ನರಃ ।
ತತೋಽಧಿಕಂ ಚ ಲಭತೇ ಪುಣ್ಯಂ ಕನ್ಯಾಪ್ರದಾನತಃ ॥ ೧೭ ॥

ದಶಕನ್ಯಾಪ್ರದಾನೇನ ಯತ್ಪುಣ್ಯಂ ಲಭತೇ ನರಃ ।
ತತೋಽಧಿಕಂ ಚ ಲಭತೇ ಯಜ್ಞೈಕೇನ ನರಾಧಿಪ ॥ ೧೮ ॥

ಶತಯಜ್ಞೇನ ಯತ್ಪುಣ್ಯಂ ಲಭತೇ ಪುಣ್ಯಕೃಜ್ಜನಃ ।
ತತೋಽಧಿಕಂ ಚ ಲಭತೇ ಪುತ್ರಾಸ್ಯದರ್ಶನೇನ ಚ ॥ ೧೯ ॥

ದರ್ಶನೇ ಶತಪುತ್ರಾಣಾಂ ಯತ್ಪುಣ್ಯಂ ಲಭತೇ ನರಃ ।
ತತ್ಪುಣ್ಯಂ ಲಭತೇ ನೂನಂ ಪುಣ್ಯವಾನ್ಸತ್ಯಪಾಲನಾತ್ ॥ ೨೦ ॥

ನ ಹಿ ಸತ್ಯಾತ್ಪರೋ ಧರ್ಮೋ ನಾನೃತಾತ್ಪಾತಕಂ ಪರಂ ।
ನ ಹಿ ಗಂಗಾಸಮಂ ತೀರ್ಥಂ ನ ದೇವಃ ಕೇಶವಾತ್ಪರಃ ॥ ೨೧ ॥

---

೧೭. ಹತ್ತು ಭಾವಿಗಳನ್ನು ದಾನಮಾಡುವುದರಿಂದ ಮನುಜನಿಗೆ ಎಷ್ಟು ಪುಣ್ಯ ಲಭಿಸುವುದೋ ಅದಕ್ಕಿಂತ ಹೆಚ್ಚಾದ ಪುಣ್ಯವು ಕನ್ಯಾದಾನಮಾಡುವುದರಿಂದ ಮಾನವನಿಗೆ ಲಭಿಸುವುದು.

೧೮. ಎಲೈ ರಾಜನೇ, ಹತ್ತು ಕನ್ಯೆಯರನ್ನು ದಾನಮಾಡುವುದರಿಂದ ಮನುಜನಿಗೆ ಎಷ್ಟು ಪುಣ್ಯ ಲಭಿಸುವುದೋ ಅದಕ್ಕಿಂತ ಹೆಚ್ಚಾದ ಪುಣ್ಯವು ಒಂದು ಯಾಗಮಾಡುವುದರಿಂದ ಲಭಿಸುವುದು.

೧೯. ಪುಣ್ಯವಂತನಾದ ಮಾನವನಿಗೆ ನೂರು ಯಾಗಮಾಡಿದರೆ ಎಷ್ಟು ಪುಣ್ಯ ದೊರಕುವುದೋ ಅದಕ್ಕಿಂತ ಮೇಲಾಗಿ ಸತ್ಪುತ್ರನ ಮುಖದರ್ಶನಮಾಡುವುದರಿಂದ ದೊರಕುವುದು.

೨೦. ನೂರು ಜನ ಮಕ್ಕಳ ದರ್ಶನದಿಂದ ಮನುಜನಿಗೆ ಎಷ್ಟು ಪುಣ್ಯ ದೊರಕುವುದೋ ಅದಕ್ಕಿಂತ ಹೆಚ್ಚಾದ ಪುಣ್ಯವನ್ನು ಸತ್ಯಪರಿಪಾಲನೆಯಿಂದ ಮಾನವನು ಪಡೆಯುವನು.

೨೧. ಸತ್ಯಪರಿಪಾಲನೆಗಿಂತ ಶ್ರೇಷ್ಠವಾದ ಧರ್ಮ ಬೇರೊಂದಿಲ್ಲ. ಸುಳ್ಳಾಡುವುದಕ್ಕಿಂತ ಹೆಚ್ಚಾದ ಬೇರೆ ಪಾಪವಿಲ್ಲ. ಗಂಗೆಗೆ ಸಮಾನವಾದ ಪುಣ್ಯತೀರ್ಥವೂ, ಕೇಶವನಿಗಿಂತ ಮೇಲಾದ ದೇವರೂ ಬೇರೆ ಇಲ್ಲ.

ನಾಸ್ತಿ ಧರ್ಮಾತ್ಪರೋ ಬಂಧುರ್ನಾಸ್ತಿ ಧರ್ಮಾತ್ಪರಂ ಧನಂ ।
ಧರ್ಮಾತ್ಪ್ರಿಯಃ ಪರಃ ಕೋ ವಾ ಸ್ವಧರ್ಮಂ ರಕ್ಷ ಯತ್ನತಃ ॥ ೨೨ ॥

ಸ್ವಧರ್ಮೋ ರಕ್ಷಿತೋ ತಾತ ಶಶ್ವತ್ ಸರ್ವತ್ರ ಮಂಗಳಂ ।
ಯಶಸ್ಯಂ ಸುಪ್ರತಿಷ್ಠಾ ಚ ಪ್ರತಾಪಃ ಪೂಜನಂ ಪರಂ ॥ ೨೩ ॥

ಚತುರ್ದಶಾಬ್ದಂ ಧರ್ಮೇಣ ತ್ಯಕ್ತ್ವಾ ಗೃಹಸುಖಂ ಭ್ರಮನ್ ।
ವನವಾಸಂ ಕರಿಷ್ಯಾಮಿ ಸತ್ಯಸ್ಯ ಪಾಲನಾಯ ತೇ ॥ ೨೪ ॥

ಕೃತ್ವಾ ಸತ್ಯಂ ಚ ಶಪಥಮಿಚ್ಛಯಾಽನಿಚ್ಛಯಾಽಥವಾ ।
ನ ಕುರ್ಯಾತ್ಪಾಲನಂ ಯೋ ಹಿ ಭಸ್ಮಾಂತಂ ತಸ್ಯ ಸೂತಕಂ ॥ ೨೫ ॥

---

೨೨. ಧರ್ಮಕ್ಕಿಂತ ಮೇಲಾದ ಬಂಧುವಾಗಲೀ, ಧರ್ಮಕ್ಕಿಂತ ಶ್ರೇಷ್ಠವಾದ ಧನವಾಗಲೀ ಮತ್ತೊಂದಿಲ್ಲ. ಧರ್ಮಕ್ಕಿಂತ ಪ್ರಿಯವಾದುದು ಮತ್ತಾವುದೂ ಇಲ್ಲದಿರುವುದರಿಂದ ಯತ್ನಪೂರ್ವಕವಾಗಿ ಸ್ವಧರ್ಮವನ್ನು ರಕ್ಷಿಸಿಕೋ.

೨೩. ಎಲೈ ತಂದೆಯೇ, ಸ್ವಧರ್ಮವನ್ನು ರಕ್ಷಿಸಿಕೊಳ್ಳುವವನಿಗೆ ಎಲ್ಲೆಡೆಯಲ್ಲಿಯೂ ಯಾವಾಗಲೂ ಮಂಗಳವುಂಟಾಗುವುದು. ಅವನಿಗೆ ಕೀರ್ತಿಯೂ ಪ್ರತಿಷ್ಠೆಯೂ, ಪ್ರತಾಪವೂ ವೃದ್ಧಿಗೊಳ್ಳುವುದಲ್ಲದೆ ಅವನು ಎಲ್ಲರಿಗೂ ಪೂಜ್ಯನಾಗುವನು.

೨೪. ನಿನ್ನ ಸತ್ಯವಚನವನ್ನು ಪರಿಪಾಲಿಸುವುದಕ್ಕೋಸ್ಕರ ನಾನು ಹದಿನಾಲ್ಕು ವರ್ಷಗಳ ಕಾಲ ರಾಜ್ಯಸುಖವನ್ನು ಬಿಟ್ಟು ಧರ್ಮದಿಂದ ಅರಣ್ಯವಾಸವನ್ನು ಮಾಡಿಕೊಂಡಿರುವೆನು

೨೫. ಇಚ್ಛಾಪೂರ್ವಕವಾಗಿಯಾಗಲೀ, ಅನಿಚ್ಛಾಪೂರ್ವಕವಾಗಿಯಾಗಲೀ ಯಾವನಾದರೂ ಸತ್ಯಪ್ರತಿಜ್ಞೆಯನ್ನು ಮಾಡಿ ಅದನ್ನು ಪರಿಪಾಲಿಸದಿದ್ದರೆ ಅವನ ಬಂಧುಗಳು ಅವನ ಶರೀರವು ಭಸ್ಮವಾಗುವವರೆಗೆ ಮಾತ್ರ ಸೂತಕವನ್ನು ಅನುಭವಿಸುವರು.

ಕುಂಭೀಪಾಕೇ ಸ ಪಚತಿ ಯಾವಚ್ಚಂದ್ರದಿವಾಕರೌ ।
ತತೋ ಮೂಕೋ ಭವೇತ್ಕುಷ್ಠೀ ಮಾನವಃ ಸಪ್ತಜನ್ಮಸು ॥ ೨೬ ॥

ಇತ್ಯೇವಮುಕ್ತ್ವಾ ಶ್ರೀರಾಮೋ ವಿಧಾಯ ವಲ್ಕಲಂ ಜಟಾಂ।
ಪ್ರಯಯೌ ಚ ಮಹಾರಣ್ಯೇ ಸೀತಯಾ ಲಕ್ಷ್ಮಣೇನ ಚ ॥ ೨೭ ॥

ಪುತ್ರಶೋಕಾನ್ಮಹಾರಾಜಸ್ತತ್ಯಾಜ ಸ್ವತನುಂ ಮುನೇ ।
ಪಾಲನಾಯ ಪಿತುಃ ಸತ್ಯಂ ರಾಮೋ ಬಭ್ರಾಮ ಕಾನನೇ ॥ ೨೮ ॥

ಕಾಲಾಂತರೇ ಮಹಾರಣ್ಯೇ ಭಗಿನೀ ರಾವಣಸ್ಯ ಚ ।
ಭ್ರಮಂತೀ ಕಾನನೇ ಘೋರೇ ಭ್ರಾತ್ರಾ ಸಾರ್ಧಂ ಸುಕೌತುಕಾತ್ ॥ ೨೯ ॥

ದದರ್ಶ ರಾಮಂ ಕುಲಟಾ ಕಾಮಾರ್ತಾ ರಾಕ್ಷಸೀ ತದಾ ।
ಪುಲಕಾಂಚಿತಸರ್ವಾಂಗೀ ಮೂರ್ಛಾಮಾಪ ಸ್ಮರೇಣ ಚ ॥ ೩೦ ॥

---

೨೬. ಅವನು ಚಂದ್ರಸೂರ್ಯರಿರುವವರೆಗೆ ಕುಂಭೀಪಾಕವೆಂಬ ನರಕದಲ್ಲಿ ನರಳುವನು. ಅನಂತರ ಮೂಗನೂ, ಕುಷ್ಠರೋಗಿಯೂ ಆಗಿ ಏಳು ಜನ್ಮಗಳನ್ನೆತ್ತುವನು.

೨೭. ಶ್ರೀರಾಮನು ಈ ರೀತಿಯಾಗಿ ಹೇಳಿ ನಾರುಬಟ್ಟೆಯನ್ನುಟ್ಟು ಜಟಾಧಾರಿಯಾಗಿ ಸೀತಾಲಕ್ಷ್ಮಣರೊಡನೆ ಅರಣ್ಯವಾಸಕ್ಕೆ ತೆರಳಿದನು.

೨೮. ಎಲೈ ಮುನಿಯೇ, ಮಹಾರಾಜನಾದ ದಶರಥನು ಪುತ್ರಶೋಕವನ್ನು ಸಹಿಸಲಾರದೆ ತನ್ನ ದೇಹತ್ಯಾಗವನ್ನು ಮಾಡಿದನು. ಶ್ರೀರಾಮನೂ ಸಹ ತಂದೆಯ ಸತ್ಯವಚನವನ್ನು ಪರಿಪಾಲಿಸುವುದಕ್ಕಾಗಿ ಕಾಡಿನಲ್ಲಿ ಅಲೆದನು.

೨೯. ಕಾಲಕ್ರಮದಲ್ಲಿ ಶ್ರೀರಾಮನು ಸೀತಾಲಕ್ಷ್ಮಣರೊಡನೆ ದಂಡಕಾರಣ್ಯಕ್ಕೆ ಹೋದಾಗ ರಾವಣನ ತಂಗಿಯಾದ ಶೂರ್ಪಣಖಿಯು ತನ್ನ ಸಹೋದರರೊಡನೆ ಅಲೆದಾಡುತ್ತ ಅಲ್ಲಿಗೆ ಬಂದಳು.

೩೦. ಕುಲಟೆಯೂ, ಕಾಮಾರ್ತಳೂ ಆದ ಆ ರಾಕ್ಷಸಿಯು ಶ್ರೀರಾಮನ ಸೌಂದರ್ಯಕ್ಕೆ ಮೋಹಗೊಂಡು, ರೋಮಾಂಚಿತಶರೀರಳಾಗಿ ಮೂರ್ಛೆಗೊಂಡಳು.

ಶ್ರೀರಾಮನಿಕಟಂ ಗತ್ವಾ ಸಸ್ಮಿತೋವಾಚ ಕಾಮುಕೀ ।
ಕಿಞ್ಚಿದ್ಯೌವನಸಂಯುಕ್ತಾಽತಿಪ್ರೌಢಾ ಕಾಮದುರ್ಮದಾ ॥ ೩೧ ॥

॥ ಶೂರ್ಪಣಖೋವಾಚ ॥

ಹೇ ರಾಮ ಹೇ ಘನಶ್ಯಾಮ ರೂಪಧಾಮ ಗುಣಾನ್ವಿತ ।
ಭಾವಾನುರಕ್ತಾಂ ವನಿತಾಂ ಮಾಂ ಗೃಹಾಣ ಸುನಿರ್ಜನೇ ॥ ೩೨ ॥

ಶ್ರುತ್ವಾ ಶೂರ್ಪಣಖಾವಾಕ್ಯಂ ಧರ್ಮಂ ಸಂಸ್ಮೃತ್ಯ ಧಾರ್ಮಿಕಃ ।
ಉವಾಚ ಮಧುರಂ ವಾಕ್ಯಂ ಶಾಪಭೀತಶ್ಚ ನಾರದ ॥ ೩೩ ॥

॥ ಶ್ರೀರಾಮ ಉವಾಚ ॥

ಅಂಬ ಮಾತ ಸಭಾರ್ಯೋಽಹಮಭಾರ್ಯಂ ಗಚ್ಛ ಮೇಽನುಜಂ ।
ದುಃಖಂ ಪ್ರಿಯೋಽನ್ಯಾಂ ಪ್ರಭಜೇದಿತರಂ ಚ ಸುಖಾಲಯಂ ॥ ೩೪ ॥

---

೩೧. ಸ್ವಲ್ಪಹೊತ್ತಿನ ಮೇಲೆ ಚೇತನವನ್ನು ಹೊಂದಿದ ದುರ್ಮದಾಂಧಳೂ, ಅತಿಪ್ರೌಢಳೂ ಆದ ಆ ಕಾಮುಕಿಯು ಯೌವನದಿಂದ ಕೊಬ್ಬಿ ಶ್ರೀರಾಮನ ಸಮೀಪಕ್ಕೆ ಹೋಗಿ ನಸುನಗುತ್ತಾ ಇಂತೆಂದಳು.

೩೨. ಶೂರ್ಪಣಖಿ :—ಮೇಘಶ್ಯಾಮನೂ, ಸುಂದರರೂಪನೂ, ಗುಣಯುತನೂ, ಆದ ಎಲೈ ರಾಮನೇ, ನಿನ್ನಲ್ಲಿ ಭಾವಾನುರಕ್ತಳಾದ ನನ್ನನ್ನು ಈ ನಿರ್ಜನ ಪ್ರದೇಶದಲ್ಲಿ ಸ್ವೀಕರಿಸುವವನಾಗು.

೩೩. ಎಲೈ ನಾರದನೇ, ಈ ರೀತಿಯಾದ ಶೂರ್ಪಣಖಿಯ ಮಾತನ್ನು ಕೇಳಿ ಧಾರ್ಮಿಕನಾದ ಶ್ರೀರಾಮನು ಧರ್ಮರಕ್ಷಣೆಯ ಕಡೆಗೆ ದೃಷ್ಟಿ ಇಟ್ಟು ಅವಳ ಶಾಪಕ್ಕೆ ಹೆದರಿ, ಅವಳನ್ನು ಕುರಿತು ಮೃದುಮಧುರ ವಚನಗಳನ್ನಾಡಿದನು.

೩೪. ಶ್ರೀರಾಮ :—ಎಲೌ ಮಾತೆಯೇ, ನಾನು ಪತ್ನೀಸಮೇತನಾಗಿದ್ದೇನೆ. ಪತ್ನೀರಹಿತನಾದ ನನ್ನ ತಮ್ಮನನ್ನು ವರಿಸು. ಪ್ರಿಯನಾದವನು ಪತ್ನಿಯಿದ್ದಂತೆಯೇ ಮತ್ತೊಬ್ಬಳನ್ನು ವರಿಸಿದರೆ ಅವನ ಪತ್ನಿಗೆ ವ್ಯಥೆಯುಂಟಾಗುವುದು.

ರಾಮಸ್ಯ ವಚನಂ ಶ್ರುತ್ವಾ ಪ್ರಯಯೌ ಲಕ್ಷ್ಮಣಂ ಮುದಾ ।
ದದರ್ಶ ಲಕ್ಷ್ಮಣಂ ಶಾಂತಂ ಕಾಂತಂ ಚ ಲಕ್ಷಣಾನ್ವಿತಂ ॥ ೩೫ ॥

ಮಾಂ ಭಜಸ್ವ ಮಹಾಭಾಗೇತ್ಯುವಾಚ ಚ ಪುನಃ ಪುನಃ ।
ಲಕ್ಷ್ಮಣಸ್ತದ್ವಚಃ ಶ್ರುತ್ವಾ ತಮುವಾಚ ಕುತೂಹಲಾತ್ ॥ ೩೬ ॥

॥ ಲಕ್ಷ್ಮಣ ಉವಾಚ ॥

ವಿಹಾಯ ರಾಮಂ ಸರ್ವೇಶಂ ಹೇ ಮೂಢೇ ದಾಸಮಿಚ್ಛಸಿ ।
ಸೀತಾದಾಸೀ ಚ ಮತ್ಪತ್ನೀ ಸೀತಾದಾಸೋಽಹಮೇವ ಚ ॥ ೩೭ ॥

ಭವ ಸೀತಾಸಪತ್ನೀ ತ್ವಂ ಗಚ್ಛ ರಾಮಂ ಮದೀಶ್ವರಂ ।
ತವ ಪುತ್ರೋ ಭವಿಷ್ಯಾಮಿ ಸೀತಾಯಾಶ್ಚ ಯಥಾ ಸತಿ ॥ ೩೮ ॥

ಲಕ್ಷ್ಮಣಸ್ಯ ವಚಃ ಶ್ರುತ್ವಾ ಕಾಮೇನ ಹ್ಯತಮಾನಸಾ ।
ಉವಾಚ ಲಕ್ಷ್ಮಣಂ ಮೂಢಾ ಶುಷ್ಕಕಂಠೋಷ್ಠತಾಲುಕಾ ॥ ೩೯ ॥

---

೩೫. ಈ ರೀತಿಯಾದ ಶ್ರೀರಾಮನ ಮಾತನ್ನು ಕೇಳಿ ಸಂತುಷ್ಟಳಾದ ಶೂರ್ಪಣಖಿಯು ಲಕ್ಷ್ಮಣನ ಸಮೀಪಕ್ಕೆ ಹೋಗಿ ಶಾಂತನೂ, ಕಾಂತನೂ, ಸುಲಕ್ಷಣಸಂಪನ್ನನೂ ಆದ ಅವನನ್ನು ನೋಡಿ ಮೋಹಗೊಂಡಳು

೩೬. ಎಲೈ ಪುಣ್ಯವಂತನೇ, ನನ್ನನ್ನು ಸ್ವೀಕರಿಸು ಎಂದು ಮತ್ತೆ ಮತ್ತೆ ಬೇಡಿದಳು. ಅವಳ ಮಾತನ್ನು ಕೇಳಿದ ಲಕ್ಷ್ಮಣನು ಕುತೂಹಲಾನ್ವಿತನಾಗಿ ಇಂತು ಉತ್ತರವಿತ್ತನು.

೩೭. ಲಕ್ಷ್ಮಣ :—ಎಲೌ ಮೂರ್ಖಳೇ, ಸರ್ವೇಶ್ವರನಾದ ಶ್ರೀರಾಮನನ್ನು ಬಿಟ್ಟು ದಾಸನಾದ ನನ್ನನ್ನು ವರಿಸಲಿಚ್ಛಿಸುವೆಯಾ ? ನನ್ನ ಹೆಂಡತಿಯೂ ಮತ್ತು ನಾನೂ ಸಹ ಸೀತೆಯ ಸೇವಕರಾಗಿದ್ದೇವೆ.

೩೮. ನನಗೊಡೆಯನಾದ ಶ್ರೀರಾಮನನ್ನು ವರಿಸಿ ನೀನು ಸೀತೆಯ ಸವತಿಯಾಗು. ನಾನು ಸೀತೆಗೆ ಪುತ್ರನಾಗಿರುವಂತೆ ನಿನಗೂ ಪುತ್ರನೆನಿಸುವೆನು.

೩೯. ಲಕ್ಷ್ಮಣನ ಮಾತನ್ನು ಕೇಳಿ ಕಾಮಾರ್ತಳಾದ ಆ ಶೂರ್ಪನಖಿಯು ಒಣಗಿಹೋದ ತುಟಿಗಂಟಲುಗಳುಳ್ಳವಳಾಗಿ ಲಕ್ಷ್ಮಣನನ್ನು ಕುರಿತಿಂತೆಂದಳು.

॥ ಶೂರ್ಪಣಖೋವಾಚ ॥

ಯದಿ ತ್ಯಜಸಿ ಮಾಂ ಮೂಢ ಕಾಮಾರ್ತಾಂ ಸ್ವಯಮುಪಸ್ಥಿತಾಂ ।
ಯುವಯೋಶ್ಚ ವಿಪತ್ತಿಶ್ಚ ಭವಿಷ್ಯತಿ ನ ಸಂಶಯಃ ॥ ೪೦ ॥

ಬ್ರಹ್ಮಾ ಚ ಮೋಹಿನೀಂ ತ್ಯಕ್ತ್ವಾ ವಿಶ್ವೇಽಪೂಜ್ಯೋ ಬಭೂವ ಸಃ ।
ರಂಭಾಶಾಪೇನ ದಕ್ಷಶ್ಚ ಛಾಗಮುಸ್ತೋ ಬಭೂವ ಸಃ ॥ ೪೧ ॥

ಸ್ವರ್ವೈದ್ಯಶ್ಚೋರ್ವಶೀಶಾಪಾದ್ಯಜ್ಞಭಾಗವಿವರ್ಜಿತಃ ।
ರೂಪಹೀನಃ ಕುಬೇರಶ್ಚ ಮೇನಾಶಾಪೇನ ಲಕ್ಷ್ಮಣ ॥ ೪೨ ॥

ಕಾಮೋ ಘೃತಾಚೀಶಾಪೇನ ಬಭೂವ ಭಸ್ಮಸಾಚ್ಛಿವಾತ್ ।
ಬಲಿರ್ಮದಾಲಸಾಶಾಪಾದ್ಭ್ರಷ್ಟರಾಜ್ಯೋ ಬಭೂವ ಹ ॥ ೪೩ ॥

ಶಾಪೇನ ಮಿಶ್ರಕೇಶ್ಯಾಶ್ಚ ಹೃತಭಾರ್ಯೋ ಬೃಹಸ್ಪತಿಃ ।
ಮಮ ಶಾಪಾತ್ತಥಾ ರಾಮೋ ಹೃತಭಾರ್ಯೋ ಭವಿಷ್ಯತಿ ॥ ೪೪ ॥

---

೪೦. ಶೂರ್ಪನಖಿ :—ಎಲೈ ಮೂರ್ಖನೇ, ಕಾಮಪೀಡಿತಳಾಗಿ ತಾನಾಗಿ ಬಂದಿರುವ ನನ್ನನ್ನು ನೀನು ದೂರಮಾಡುವೆಯಾದರೆ ನಿನಗೂ, ಶ್ರೀರಾಮನಿಗೂ ವಿಪತ್ತು ಬರುವುದರಲ್ಲಿ ಸಂಶಯವಿಲ್ಲ.

೪೧. ಸಾಕ್ಷಾತ್ ಬ್ರಹ್ಮನೇ ಮೋಹಿನಿಯನ್ನು ತ್ಯಾಗಮಾಡಿ ವಿಶ್ವದಲ್ಲಿ ಅಪೂಜ್ಯನಾದನು. ಅದೇ ರೀತಿಯಲ್ಲಿ ದಕ್ಷಬ್ರಹ್ಮನು ರಂಭೆಯ ಶಾಪದಿಂದ ಹೋತದ ತಲೆಯುಳ್ಳವನಾದನು.

೪೨. ಎಲೈ ಲಕ್ಷ್ಮಣನೇ, ದೇವವೈದ್ಯನು ಊರ್ವಶಿಯ ಶಾಪದಿಂದ ಯಜ್ಞ ಭಾಗವಿಲ್ಲದಂತಾದನು. ಕುಬೇರನೂ ಸಹ ಮೇನೆಯ ಶಾಪದಿಂದ ರೂಪಹೀನನಾದನು.

೪೩. ಮನ್ಮಥನು ಘೃತಾಚಿಯ ಶಾಪಕ್ಕೊಳಗಾಗಿ ಶಿವನಿಂದ ಭಸ್ಮೀಕೃತನಾದನು. ಬಲಿಚಕ್ರವರ್ತಿಯು ಮದಾಲಸೆಯ ಶಾಪದಿಂದ ರಾಜ್ಯಭ್ರಷ್ಟನಾದನು.

೪೪. ಮಿಶ್ರಕೇಶಿಯ ಶಾಪದಿಂದ ಬೃಹಸ್ಪತಿಯು ಪತ್ನಿಯ ಅಪಹಾರವನ್ನು ಅನುಭವಿಸಿದನು. ಅದೇ ರೀತಿಯಲ್ಲಿ ಶ್ರೀರಾಮನು ನನ್ನ ಶಾಪದಿಂದ ಪತ್ನಿಯ ಅಪಹಾರ ದುಃಖವನ್ನು ಅನುಭವಿಸುವನು.

ಕಾಮಾತುರಾಂ ಯೌವನಸ್ಥಾಂ ಭಾರ್ಯಾಂ ಸ್ವಯಮುಪಸ್ಥಿತಾಂ ।
ನ ತ್ಯಜೇದ್ಧರ್ಮಭೀತಶ್ಚ ಶ್ರುತಂ ಮಾಧ್ಯಂದಿನೇ ಪುರಾ ॥ ೪೫ ॥

ಇಹ ತ್ಯಕ್ತ್ವಾ ವಿಪದ್ಗ್ರಸ್ತಃ ಪರತ್ರ ನರಕಂ ವ್ರಜೇತ್ ।
ಶ್ರುತ್ವಾ ಶೂರ್ಪಣಖಾವಾಕ್ಯಮರ್ಧಚಂದ್ರೇಣ ಲಕ್ಷ್ಮಣಃ ॥ ೪೬ ॥

ಚಿಚ್ಛೇದ ನಾಸಿಕಾಂ ತಸ್ಯಾಃ ಕ್ಷುರಧಾರೇಣ ಲೀಲಯಾ ।
ತಸ್ಯಾ ಭ್ರಾತಾ ಚ ಯುಯುಧೇ ಬಲವಾನ್ ಖರದೂಷಣಃ ॥ ೪೭ ॥

ಸಸೈನ್ಯೋ ಲಕ್ಷ್ಮಣಾಸ್ತ್ರೇಣ ಸ ಜಗಾಮ ಯಮಾಲಯಂ ।
ಚತುರ್ದಶಸಹಸ್ರಂ ಚ ರಾಕ್ಷಸಾನ್ ಖರದೂಷಣಂ ॥ ೪೮ ॥

ಮೃತಾನ್ ದೃಷ್ಟ್ವಾ ಶೂರ್ಪಣಖಾ ಭರ್ತ್ಸಯಾಮಾಸ ರಾವಣಂ ।
ಸರ್ವಂ ನಿವೇದನಂ ಕೃತ್ವಾ ಜಗಾಮ ಪುಷ್ಕರಂ ತದಾ ॥ ೪೯ ॥

---

೪೫. 'ಕಾಮಾತುರಳೂ, ಯೌವನವತಿಯೂ, ತಾನಾಗಿ ಬಂದವಳೂ ಆದ ಹೆಂಗಸನ್ನು ಧರ್ಮಿಷ್ಠನು ತ್ಯಜಿಸಬಾರದು,' ಎಂದು ಮಾಧ್ಯಂದಿನ ಸಾಮದಲ್ಲಿ ನಿರೂಪಿತವಾಗಿದೆ

೪೬-೪೭. ಆ ರೀತಿ ತ್ಯಜಿಸಿದವನು ಇಹಲೋಕದಲ್ಲಿ ವಿಪತ್ತಿಗೊಳಗಾಗುವುದಲ್ಲದೆ, ಪರಲೋಕದಲ್ಲಿ ನರಕಯಾತನೆಯನ್ನು ಅನುಭವಿಸುವನು. ಈ ರೀತಿಯಾದ ಶೂರ್ಪಣಖಿಯ ಮಾತುಗಳನ್ನು ಕೇಳಿ ಲಕ್ಷ್ಮಣನು ಹರಿತವಾದ ಅಲುಗುಳ್ಳ ಅರ್ಧಚಂದ್ರಾಕಾರವಾದ ಅಸ್ತ್ರದಿಂದ ಅವಳ ಮೂಗನ್ನು ಕೊಯ್ದನು. ಬಲಿಷ್ಠರಾದ ಖರದೂಷಣರೆಂಬ ಅವಳ ಸಹೋದರರು ರಾಮಲಕ್ಷ್ಮಣರೊಡನೆ ಯುದ್ಧ ಮಾಡಿದರು.

೪೮-೪೯. ಲಕ್ಷ್ಮಣಾಸ್ತ್ರಹತರಾದ ಆ ಖರದೂಷಣರು ಸೈನ್ಯಸಮೇತರಾಗಿ ಯಮಾಲಯಕ್ಕೆ ಹೋದರು. ಹದಿನಾಲ್ಕುಸಾವಿರ ಸೈನಿಕರೂ, ಖರದೂಷಣರೂ ಮೃತರಾದುದನ್ನು ನೋಡಿದ ಶೂರ್ಪಣಖಿಯು ರಾವಣನಿಗೆ ನಡೆದ ಸಮಾಚಾರನ್ನೆಲ್ಲ ತಿಳಿಸಿ ಅವನನ್ನು ಹೆದರಿಸಿ ತಾನು ತಪಸ್ಸಿಗಾಗಿ ಪುಷ್ಕರಕ್ಷೇತ್ರಕ್ಕೆ ಹೋದಳು.

ಬ್ರಹ್ಮಣಶ್ಚ ವರಂ ಪ್ರಾಪ ಕೃತ್ವಾ ಚ ದುಷ್ಕರಂ ತಪಃ ।
ಉವಾಚ ತಾದೃಶೀಂ ದೃಷ್ಟ್ವಾ ನಿರಾಹಾರಾಂ ತಪಸ್ವಿನೀಂ　　॥ ೫೦ ॥

ಸರ್ವಜ್ಞಸ್ತನ್ಮನೋ ಮತ್ವಾ ಕೃಪಾಸಿಂಧುಶ್ಚ ನಾರದ　　॥ ೫೧ ॥

॥ ಬ್ರಹ್ಮೋವಾಚ ॥

ಅಪ್ರಾಪ್ಯ ರಾಮಂ ದುಷ್ಪ್ರಾಪಂ ಕರೋಷಿ ದುಷ್ಕರಂ ತಪಃ ।
ಜಿತೇಂದ್ರಿಯಾಣಾಂ ಪ್ರವರಂ ಲಕ್ಷ್ಮಣಂ ಧರ್ಮಲಕ್ಷಣಂ ।
ಬ್ರಹ್ಮವಿಷ್ಣುಶಿವಾದೀನಾಮೀಶ್ವರಂ ಪ್ರಕೃತೇಃ ಪರಂ　　॥ ೫೨ ॥

ಜನ್ಮಾಂತರೇ ಚ ಭರ್ತಾರಂ ಪ್ರಾಪ್ಸ್ಯಸಿ ತ್ವಂ ವರಾನನೇ ।
ಇತ್ಯೇವಮುಕ್ತ್ವಾ ಬ್ರಹ್ಮಾ ಚ ಜಗಾಮ ಸ್ವಾಲಯಂ ಮುದಾ　　॥ ೫೩ ॥

ದೇಹಂ ತತ್ಯಾಜ ಸಾ ವಹ್ನೌ ಸಾ ಚ ಕುಬ್ಜಾ ಬಭೂವ ಹ ।
ಅಥ ಶೂರ್ಪಣಖಾವಾಕ್ಯಾತ್ಕೋಪಾತ್ಕಂಪಿತವಿಗ್ರಹಃ　　॥ ೫೪ ॥

೫೦–೫　　ಅಲ್ಲಿ ದುಷ್ಕರವಾದ ತಪಸ್ಸನ್ನು ಮಾಡಿ ಬ್ರಹ್ಮನಿಂದ ವರವನ್ನು ಪಡೆದಳು. ನಿರಾಹಾರಳೂ, ತಪಸ್ವಿನಿಯೂ ಆದ ಅವಳನ್ನು ಕುರಿತು ಸರ್ವಜ್ಞನೂ ದಯಾಸಮುದ್ರನೂ ಆದ ಬ್ರಹ್ಮನು ಇಂತೆಂದನು.

೫೨. ಬ್ರಹ್ಮಾ:—ಎಲೌ ಶೂರ್ಪಣಖಿಯೇ, ಬ್ರಹ್ಮ ವಿಷ್ಣು ಶಿವಾದಿಗಳಿಗೆ ಒಡೆಯನೂ, ಪ್ರಕೃತಿಗಿಂತ ಮೇಲಾದವನೂ, ಜಿತೇಂದ್ರಿಯರಲ್ಲಿ ಶ್ರೇಷ್ಠನೂ, ಹೊಂದಲಸಾಧ್ಯನೂ ಆದ ರಾಮನನ್ನೂ, ಧರ್ಮ ಲಕ್ಷಣಗಳುಳ್ಳ ಲಕ್ಷ್ಮಣನನ್ನೂ ನೀನು ಪಡೆಯಲಾರದೆ ಈ ದುಷ್ಕರವಾದ ತಪಸ್ಸನ್ನಾಚರಿಸುತ್ತಿರುವೆಯಲ್ಲವೇ ?

೫೩. 'ಎಲೌ ಸುಂದರಿಯೇ, ನೀನು ಬೇರೊಂದು ಜನ್ಮದಲ್ಲಿ ಅವನನ್ನು ಪತಿಯನ್ನಾಗಿ ಪಡೆಯುವೆ' ಎಂದು ಹೇಳಿ ಬ್ರಹ್ಮನು ಸಂತೋಷದಿಂದ ತನ್ನ ಮಂದಿರಕ್ಕೆ ತೆರಳಿದನು.

೫೪–೫೫. ಆ ಶೂರ್ಪಣಖಿಯೂ ಸಹ ಅಗ್ನಿಯಲ್ಲಿ ತನ್ನ ದೇಹವನ್ನು ತ್ಯಾಗ ಮಾಡಿ ಕುಬ್ಜೆಯಾದಳು ಇತ್ತ ಶೂರ್ಪಣಖಿಯ ಮಾತನ್ನು ಕೇಳಿ ಕೋಪದಿಂದ ನಡುಗುವ ಶರೀರವುಳ್ಳ ಮಾಯಾವಿಯಾದ ರಾವಣನು ಮಾಯಾರೂಪದಿಂದ

ಜಹಾರ ಮಾಯಯಾ ಸೀತಾಂ ಮಾಯಾವೀ ರಾಕ್ಷಸೇಶ್ವರಃ ।
ಸೀತಾಂ ನ ದೃಷ್ಟ್ವಾ ರಾಮಶ್ಚ ಮೂರ್ಛಾಂ ಪ್ರಾಪ ಚಿರಂ ಮುನೇ ॥ ೫೫ ॥

ಚೇತನಾಂ ಕಾರಯಾಮಾಸ ಭ್ರಾತಾ ಚಾಧ್ಯಾತ್ಮಿಕೇನ ಚ ।
ತತೋ ಬಭ್ರಾಮ ಗಹನಂ ಶೈಲಂ ಚ ಕಂದರಂ ನದಂ ॥ ೫೬ ॥

ಅಹರ್ನಿಶಂ ಚ ಶೋಕಾರ್ತೋ ಮುನೀನಾಮಾಶ್ರಮಂ ಮುನೇ ।
ಚಿರಮನ್ವೇಷಣಂ ಕೃತ್ವಾ ನ ದೃಷ್ಟ್ವಾ ಜಾನಕೀಂ ವಿಭುಃ ॥ ೫೭ ॥

ಚಕಾರ ಮಿತ್ರತಾಂ ರಾಮಃ ಸುಗ್ರೀವೇಣ ಸ್ವಯಂ ಪ್ರಭುಃ ।
ನಿಹತ್ಯ ವಾಲಿನಂ ಬಾಣೈರ್ದದೌ ರಾಜ್ಯಂ ಚ ಲೀಲಯಾ ॥ ೫೮ ॥

ಸುಗ್ರೀವಾಯ ಚ ಮಿತ್ರಾಯ ಸ್ವೀಕಾರಪಾಲನಾಯ ವೈ ।
ದೂತಾನ್ಪ್ರಸ್ಥಾಪಯಾಮಾಸ ಸರ್ವತ್ರ ವಾನರೇಶ್ವರಃ ॥ ೫೯ ॥

ಸೀತೆಯನ್ನು ಅಪಹರಿಸಿದನು. ಎಲೈ ಮುನಿಯೇ, ಶ್ರೀರಾಮನು ಪಂಚವಟಿಯಲ್ಲಿ ಸೀತೆಯನ್ನು ಕಾಣದೆ ಮೂರ್ಛೆಗೊಂಡನು.

೫೬. ಸಹೋದರನಾದ ಲಕ್ಷ್ಮಣನು ಆಧ್ಯಾತ್ಮಿಕತತ್ವಗಳನ್ನು ಹೇಳಿ ಶ್ರೀರಾಮನು ಸಚೇತನನಾಗುವಂತೆ ಮಾಡಿದನು. ಅನಂತರ ಶ್ರೀರಾಮನು ಲಕ್ಷ್ಮಣ ನೊಡನೆ ಕಾಡು, ಬೆಟ್ಟ, ಗುಹೆ ಮತ್ತು ನದನದಿಗಳಲ್ಲಿ ಸೀತೆಯನ್ನು ಹುಡುಕುತ್ತಾ ಅಲೆದಾಡಿದನು.

೫೭-೫೮. ಎಲೈ ಮುನಿಯೇ, ಶೋಕಪೀಡಿತನಾದ ಶ್ರೀರಾಮನು ಹಗಲು ರಾತ್ರಿ ಎನ್ನದೆ ಋಷ್ಯಾಶ್ರಮಗಳಲ್ಲೆಲ್ಲಾ ಬಹುಕಾಲ ಅಲೆದಾಡಿ ಸೀತಾದೇವಿಯನ್ನು ಎಲ್ಲಿಯೂ ಕಾಣದೆ, ಸ್ವಯಂ ಸರ್ವೇಶ್ವರನಾದರೂ ವಾನರ ರಾಜನಾದ ಸುಗ್ರೀವ ನೊಡನೆ ಸ್ನೇಹಮಾಡಿಕೊಂಡನು. ಅವನ ಅಣ್ಣನಾದ ವಾಲಿಯನ್ನು ಬಾಣಗಳಿಂದ ಲೀಲಾಮಾತ್ರದಿಂದ ಕೊಂದು ಅವನಿಗೆ ರಾಜ್ಯವನ್ನು ಕೊಡಿಸಿದನು.

೫೯ ಮಿತ್ರನೂ, ಪ್ರತಿಜ್ಞಾಪಾಲಕನೂ ಆದ ಸುಗ್ರೀವನಿಗೆ ರಾಜ್ಯವನ್ನು ಕೊಟ್ಟ ಕೂಡಲೇ ಆ ವಾನರರಾಜನು ಸೀತಾನ್ವೇಷಣೆಗಾಗಿ ಎಲ್ಲ ಕಡೆಗೂ ವಾನರ ರನ್ನು ಕಳುಹಿಸಿದನು.

ತಸ್ಥೌ ಸುಗ್ರೀವಭವನೇ ಶ್ರೀರಾಮಶ್ಚ ಸಲಕ್ಷ್ಮಣಃ ।
ಹನೂಮತೇ ವರಂ ದತ್ವಾ ರಮ್ಯಂ ರತ್ನಾಂಗುಲೀಯಕಂ ॥ ೬೦ ॥

ಸೀತಾಯೈ ಶುಭಸಂದೇಶಂ ಪ್ರಾಣಧಾರಣಕಾರಣಂ ।
ತಂ ಚ ಪ್ರಸ್ಥಾಪಯಾಮಾಸ ದಕ್ಷಿಣಾಂ ದಿಶಮುತ್ತಮಾಂ ॥ ೬೧ ॥

ಸುಪ್ರೀತ್ಯಾಽಽಲಿಂಗನಂ ದತ್ವಾ ಪಾದರೇಣೂನ್ಸುದುರ್ಲಭಾನ್ ।
ಹನೂಮಾನ್ಪ್ರಯಯೌ ಲಂಕಾಂ ಸೀತಾನ್ವೇಷಣಹೇತವೇ ॥ ೬೨ ॥

ರಾಮಾದಧೀತಸಂದೇಶೋ ಯಯೌ ರುದ್ರಕಲೋದ್ಭವಃ ।
ಅಶೋಕಕಾನನೇ ಸೀತಾಂ ದದರ್ಶ ಶೋಕಕರ್ಶಿತಾಂ ॥ ೬೩ ॥

ನಿರಾಹಾರಾಮತಿಕೃಶಾಂ ಕುಹ್ವಾಂ ಚಂದ್ರಕಲಾಮಿವ ।
ಸತತಂ ರಾಮ ರಾಮೇತಿ ಜಪಂತೀಂ ಭಕ್ತಿಪೂರ್ವಕಂ ॥ ೬೪ ॥

---

೬೦. ಶ್ರೀರಾಮನು ಹನುಮಂತನಿಗೆ ವರವನ್ನು ಕೊಟ್ಟು, ತನ್ನ ರಮ್ಯವಾದ ರತ್ನಾಂಗುಲೀಯಕವನ್ನೂ ಗುರುತಿಗಾಗಿ ಕೊಟ್ಟು ತಾನು ಲಕ್ಷ್ಮಣನ ಸಹಿತ ಸುಗ್ರೀವನ ಮನೆಯಲ್ಲಿ ಸುಖವಾಗಿದ್ದನು.

೬೧. ಸೀತೆಯ ಪ್ರಾಣಧಾರಣೆಗೆ ಕಾರಣವಾದ ಶುಭಸಂದೇಶವನ್ನು ಹೇಳಿ ಆ ಹನುಮಂತನನ್ನು ಶ್ರೇಷ್ಠವಾದ ದಕ್ಷಿಣ ದಿಕ್ಕಿಗೆ ಕಳುಹಿಸಿದನು.

೬೨. ಶ್ರೀರಾಮನ ಪ್ರೀತಿಯ ಆಲಿಂಗನವನ್ನೂ, ದುರ್ಲಭವಾದ ಪಾದ ಧೂಳಿಯನ್ನೂ ಹನುಮಂತನು ಸ್ವೀಕರಿಸಿ, ಸೀತಾದೇವಿಯನ್ನು ಹುಡುಕುವ ಸಲುವಾಗಿ ಲಂಕಾಪಟ್ಟಣಕ್ಕೆ ಹೋದನು.

೬೩. ರುದ್ರಾಂಶಸಂಭೂತನಾದ ಹನುಮಂತನು ಶ್ರೀರಾಮನಿಂದ ಸಂದೇಶವನ್ನು ತೆಗೆದುಕೊಂಡು ಹೊರಟು, ಲಂಕಾನಗರಿಯ ಅಶೋಕವನದಲ್ಲಿ ಶೋಕ ಪೀಡಿತಳಾದ ಸೀತಾದೇವಿಯನ್ನು ಕಂಡನು.

೬೪. ಆಹಾರವನ್ನು ಬಿಟ್ಟಿರುವುದರಿಂದ ಅಮಾವಾಸ್ಯೆಯ ಚಂದ್ರಕಲೆಯಂತೆ ಕ್ಷೀಣಳಾದ ಆ ಜಾನಕಿಯು ಯಾವಾಗಲೂ 'ರಾಮ, ರಾಮ' ಎಂದು ಭಕ್ತಿಪೂರ್ವಕವಾಗಿ ಜಪಿಸುತ್ತಿದ್ದಳು.

ಬಿಭ್ರತೀಂ ಚ ಜಟಾಭಾರಂ ತಪ್ತಕಾಂಚನಸಂನಿಭಂ ।
ಧ್ಯಾಯಮಾನಾಂ ಪದಾಬ್ಜಂ ಚ ಶ್ರೀರಾಮಸ್ಯ ದಿವಾನಿಶಂ ॥ ೬೫ ॥

ಶುದ್ಧಾಶಯೋಂ ಸುಶೀಲಾಂ ಚ ಸುವ್ರತಾಂ ಚ ಪತಿವ್ರತಾಂ ।
ಮಹಾಲಕ್ಷ್ಮೀಲಕ್ಷ್ಮಯುಕ್ತಾಂ ಪ್ರಜ್ವಲಂತೀಂ ಸ್ವತೇಜಸಾ ॥ ೬೬ ॥

ಪುಣ್ಯದಾಂ ಸರ್ವತೀರ್ಥಾನಾಂ ದೃಷ್ಟ್ವಾ ಭುವನಪಾವನೀಂ ।
ಪ್ರಣಮ್ಯ ಮಾತರಂ ದೃಷ್ಟ್ವಾ ರುದತೀಂ ವಾಯುನಂದನಃ ॥ ೬೭ ॥

ರತ್ನಾಂಗುಲೀಯಂ ರಾಮಸ್ಯ ದದೌ ತಸ್ಯೈ ಮುದಾನ್ವಿತಃ ।
ರುರೋದ ಧರ್ಮಿಷ್ಠ ತಾಂ ದೃಷ್ಟ್ವಾ ಧೃತ್ವಾ ತಚ್ಚರಣಾಂಬುಜಂ ।
ಉವಾಚ ರಾಮಸಂದೇಶಂ ಸೀತಾಜೀವನರಕ್ಷಣಂ ॥ ೬೮ ॥

ಪಾರೇಸಮುದ್ರಂ ಶ್ರೀರಾಮಃ ಸಂನದ್ಧಶ್ಚ ಸಲಕ್ಷ್ಮಣಃ ॥ ೬೯ ॥

---

೬೫ ಪುಟಕ್ಕೆ ಹಾಕಿದ ಚಿನ್ನದಂತೆ ಹೊಂಬಣ್ಣವುಳ್ಳ ಜಟಾಭಾರವನ್ನು ಧರಿಸಿದ್ದ ಆ ಸೀತೆಯು ಶ್ರೀರಾಮನ ಪಾದಕಮಲಗಳನ್ನು ಹಗಲು ರಾತ್ರಿಯೂ ಧ್ಯಾನಿಸುತ್ತಿದ್ದಳು.

೬೬. ನೆಲದ ಮೇಲೆ ಮಲಗುವವಳೂ, ಸುಶೀಲೆಯೂ, ವ್ರತಪರಳೂ, ಪರಮಪತಿವ್ರತೆಯೂ ಆದ ಆ ಸೀತೆಯು ತನ್ನ ತೇಜಸ್ಸಿನಿಂದ ಮಹಾಲಕ್ಷ್ಮಿಯಂತೆ ಬೆಳಗುತ್ತಿದ್ದಳು

೬೭-೬೮. ಸಕಲ ತೀರ್ಥಗಳಿಗಿಂತಲೂ ಪುಣ್ಯಕರಳೂ, ಭುವನಪಾವನೆಯೂ ಆದ ಲೋಕಮಾತೆಯು ಅಳುತ್ತಿರುವುದನ್ನು ನೋಡಿ ವಾಯುತನಯನು ಆಕೆಗೆ ನಮಸ್ಕರಿಸಿ ಶ್ರೀರಾಮನ ಮುದ್ರೆಯುಂಗುರವನ್ನು ಅವಳಿಗೆ ಸಂತೋಷದಿಂದ ಕೊಟ್ಟನು. ಧರ್ಮಪರಾಯಣನಾದ ಆ ಹನುಮಂತನು ದುಃಖಿತಳಾದ ಸೀತೆಯನ್ನು ನೋಡಿ ಆಕೆಯ ಚರಣಕಮಲಗಳನ್ನು ಹಿಡಿದುಕೊಂಡು ತಾನೂ ಅಳುತ್ತಾ, ಅವಳ ಜೀವನ ರಕ್ಷಣೆಗೆ ಕಾರಣವಾದ ಶ್ರೀರಾಮನ ಸಂದೇಶನುಡಿಗಳನ್ನು ಹೇಳಿದನು.

೬೯. ಹನುಮಂತ :—ಶ್ರೀರಾಮನು ಲಕ್ಷ್ಮಣನೊಡನೆ ಯುದ್ಧಸನ್ನದ್ಧನಾಗಿ ಸಮುದ್ರತೀರಕ್ಕೆ ಬಂದಿದ್ದಾನೆ.

|| ಹನುಮಾನುವಾಚ ||

ಬಭೂವ ರಾಮಮಿತ್ರಂ ಚ ಸುಗ್ರೀವೋ ಬಲವಾನ್ಕಪಿಃ ।
ರಾಮಶ್ಚ ವಾಲಿನಂ ಹತ್ವಾ ರಾಜ್ಯಂ ನಿಷ್ಕಂಟಕಂ ದದೌ || ೭೦ ||

ಸುಗ್ರೀವಾಯ ಚ ಮಿತ್ರಾಯ ತದ್ಭಾರ್ಯಾಂ ವಾಲಿನಾ ಹೃತಾಂ ।
ಸುಗ್ರೀವಶ್ಚ ತವೋದ್ಧಾರಂ ಸ್ವೀಚಕಾರ ಚ ಧರ್ಮತಃ || ೭೧ ||

ವಾನರಾಶ್ಚ ಯಯುಃ ಸರ್ವೇ ತವಾನ್ವೇಷಣಕಾರಣಾತ್ ।
ಪ್ರಾಪ್ಯ ಮಂಗಲವಾರ್ತಾಂ ಚ ಮತ್ತೋ ರಾಜೀವಲೋಚನಃ || ೭೨ ||

ಗಂಭೀರಂ ಸಾಗರಂ ಬಧ್ವಾ ಸೋಽಚಿರೇಣಾಽಽಗಮಿಷ್ಯತಿ ।
ನಿಹತ್ಯ ರಾವಣಂ ಪಾಪಂ ಸಪುತ್ರಂ ಚ ಸಬಾಂಧವಂ || ೭೩ ||

ಕರಿಷ್ಯತ್ಯಚಿರೇಣೈವ ಹೇ ಮಾತಸ್ತವ ಮೋಕ್ಷಣಂ ।
ಅದ್ಯ ರತ್ನಮಯೀಂ ಲಂಕಾಂ ನಿಃಶಂಕಸ್ತ್ವತ್ಪ್ರಸಾದತಃ || ೭೪ ||

---

೭೦. ಬಲಿಷ್ಠನೂ, ಕಪಿರಾಜನೂ ಆದ ಸುಗ್ರೀವನು ಶ್ರೀರಾಮನ ಸ್ನೇಹಿತನಾದನು. ಶ್ರೀರಾಮನೂ ಸಹ ವಾಲಿಯನ್ನು ಕೊಂದು ನಿಷ್ಕಂಟಕವಾದ ರಾಜ್ಯವನ್ನು ಸುಗ್ರೀವನಿಗೆ ಕೊಟ್ಟನು.

೭೧. ಅಲ್ಲದೆ ವಾಲಿಯಿಂದ ಅಪಹೃತಳಾಗಿದ್ದ ಅವನ ಭಾರ್ಯೆಯನ್ನು ಅವನಿಗೇ ಕೊಟ್ಟನು. ಆಗ ಸುಗ್ರೀವನು ಧರ್ಮದೃಷ್ಟಿಯಿಂದ ನಿನ್ನನ್ನು ಹುಡುಕಿಸಿ ಕೊಡುವುದಾಗಿ ಹೇಳಿದನು.

೭೨–೭೩. ಕೂಡಲೇ ಸಕಲ ವಾನರೂ ನಿನ್ನನ್ನು ಹುಡುಕುವ ಸಲುವಾಗಿ ಸಕಲ ದಿಕ್ಕುಗಳಿಗೂ ಹೊರಟರು. ಕಮಲದಳನಯನನಾದ ಶ್ರೀರಾಮನು ನನ್ನಿಂದ ಈಗ ಮಂಗಳ ವಾರ್ತೆಯನ್ನು ಹೊಂದಿ ಕೂಡಲೇ ಗಂಭೀರವಾದ ಸಾಗರವನ್ನೂ ಸಹಬಂಧಿಸಿ ಜಾಗ್ರತೆ ಇಲ್ಲಿಗೆ ಬರುವನು. ಅಲ್ಲದೆ ಪಾಪಿಯಾದ ರಾವಣನನ್ನು ಪುತ್ರಬಾಂಧವರೊಡನೆ ಕೊಲ್ಲುವನು.

೭೪–೭೫. ಎಲೌ ಮಾತೆಯೇ, ಶ್ರೀರಾಮನು ಜಾಗ್ರತೆಯಾಗಿ ನಿನ್ನನ್ನು ಬಂಧನದಿಂದ ಬಿಡುಗಡೆ ಮಾಡುವನು. ಇಂದು ರತ್ನಮಯವಾದ ಈ ಲಂಕೆಯನ್ನು ನಿನ್ನ ಅನುಗ್ರಹದಿಂದ ನಿರ್ಭಯವಾಗಿ ಭಸ್ಮಮಾಡುವೆನು. ನೀನು ನಗುತ್ತಲೇ

ಭಸ್ಮೀಭೂತಾಂ ಕರಿಷ್ಯಾಮಿ ಮಾಕಃ ಪಶ್ಯ ಚ ಸಸ್ಮಿತೇ ।
ಮರ್ಕಟೇಡಿಂಭತುಲ್ಯಾಂ ಚ ಲಂಕಾಂ ಪಶ್ಯಾಮಿ ಸುವ್ರತೇ ॥ ೭೫ ॥

ಮೂತ್ರತುಲ್ಯಂ ಸಮುದ್ರಂ ಚ ಶರಾವಮಿವ ಭೂತಲಂ ।
ಪಿಪೀಲಕಾಸಂಘಮಿವ ಸಸೈನ್ಯಂ ರಾವಣಂ ತಥಾ ॥ ೭೬ ॥

ಸಂಹರ್ತುಂ ಚ ಸಮರ್ಥೋಽಹಂ ಮುಹೂರ್ತಾರ್ಧೇನ ಲೀಲಯಾ ।
ರಾಮಪ್ರತಿಜ್ಞಾರಕ್ಷಾರ್ಥಂ ನ ಹನಿಷ್ಯಾಮಿ ಸಾಂಪ್ರತಂ ॥ ೭೭ ॥

ಸ್ವಸ್ಥಾ ಭವ ಮಹಾಭಾಗೇ ತ್ಯಜ ಭೀತಿಂ ಮದೀಶ್ವರಿ ।
ವಾನರಸ್ಯ ವಚಃ ಶ್ರುತ್ವಾ ರುರೋದೋಚ್ಚೈರ್ಮುಹುರ್ಮುಹುಃ ।
ಉವಾಚ ವಚನಂ ಭೀತಾ ಸೀತಾ ರಾಮಪತಿವ್ರತಾ ॥ ೭೮ ॥

॥ ಸೀತೋವಾಚ ॥

ಅಯೇ ಜೀವತಿ ಮೇ ರಾಮೋ ಮಚ್ಛೋಕಾರ್ಣವದಾರುಣಾತ್ ॥ ೭೯ ॥

ನೋಡುತ್ತಿರು. ಎಲೌ ವ್ರತಪರಳೇ, ನನ್ನ ಕಣ್ಣಿಗೆ ಈ ಲಂಕೆಯು ಕೋತಿಯ ಮರಿಯಂತೆ ಚಿಕ್ಕದಾಗಿ ಕಾಣುವುದು.

೭೬. ಈ ಸಮುದ್ರವನ್ನು ಮೂತ್ರ ಪಾತ್ರದಂತೆಯೂ, ಈ ಭೂತಲವನ್ನು ಒಂದು ಸಣ್ಣ ಓಡಿನಂತೆಯೂ, ಸೈನ್ಯಸಮೇತನಾದ ರಾವಣನನ್ನು ಇರುವೆಗಳ ಗುಂಪಿನಂತೆಯೂ ಎಣಿಸುವೆನು.

೭೭. ನಾನು ಲೀಲಾಮಾತ್ರದಿಂದ ಅರ್ಧಮುಹೂರ್ತದಲ್ಲಿ ರಾವಣನನ್ನು ಸಂಹರಿಸಬಲ್ಲೆನು. ಆದರೆ ಶ್ರೀರಾಮನ ಪ್ರತಿಜ್ಞೆಯ ಪರಿಪಾಲನೆಗಾಗಿ ನಾನು ಈಗ ರಾವಣನನ್ನು ಕೊಲ್ಲುವುದಿಲ್ಲ.

೭೮. 'ಮಹಾಭಾಗ್ಯಶಾಲಿನಿಯಾದ ನನ್ನ ಒಡತಿಯೇ, ಭಯವನ್ನು ಬಿಟ್ಟು ಸ್ವಸ್ಥಚಿತ್ತಳಾಗು' ಎಂಬ ವಾನರನ ಮಾತನ್ನು ಕೇಳಿದ ಸೀತೆಯು ಕ್ಷಣಕ್ಷಣಕ್ಕೂ ಗಟ್ಟಿಯಾಗಿ ಅತ್ತಳು. ಮತ್ತು ಪರಮಪವಿತ್ರೆಯಾದ ಆಕೆಯು ಭೀತಳಾಗಿ ಆಂಜನೇಯನಿಗೆ ಇಂತೆಂದಳು

೭೯. ಸೀತಾ :—ಎಲೈ ವಾಯುಸುತನೇ ದಾರುಣವಾದ ನನ್ನ ವಿರಹ ದುಃಖವೆಂಬ ಸಮುದ್ರದಲ್ಲಿ ಮುಳುಗಿರುವ ಶ್ರೀರಾಮನು ಜೀವಿಸಿದ್ದಾನೆಯೇ?

ಅಪಿ ಮೇ ಕುಶಲೀ ನಾಥಃ ಕೌಸಲ್ಯಾನಂದನಃ ಪ್ರಭುಃ ।
ಕೀದೃಶಶ್ಚ ಕೃಶಾಂಗಶ್ಚ ಜಾನಕೀಜೀವನೋಽಧುನಾ ॥ ೮೦ ॥

ಕಿಮಾಹಾರಶ್ಚ ಕಿಂ ಭುಂಕ್ತೇ ಮಮ ಪ್ರಾಣಾಧಿಕಃ ಪ್ರಿಯಃ ।
ಅಪಿ ಪಾರೇ ಸಮುದ್ರಸ್ಯ ಸತ್ಯಂ ಸೀತಾಪತಿಃ ಸ್ವಯಂ ॥ ೮೧ ॥

ಅಪಿ ಸತ್ಯಂ ಸಸಂನದ್ಧೋ ನ ಶೋಕೇನ ಹತಃ ಪ್ರಭುಃ ।
ಅಪಿ ಸ್ಮರತಿ ಮಾಂ ಪಾಪಾಂ ಸ್ವಾಮಿನೋ ದುಃಖರೂಪಿಣೀಂ ॥ ೮೨ ॥

ಮದರ್ಥೇ ಕತಿ ದುಃಖಂ ವಾ ಸಂಪ್ರಾಪ ಸ ಮದೀಶ್ವರಃ ।
ಹಾರೋ ನಾಽಽರೋಪಿತಃ ಕಂಠೇ ಪುರಾ ವ್ಯವಹಿತೋ ರತೌ ॥ ೮೩ ॥

ಅಧುನೈವಾಽಽವಯೋರ್ಮಧ್ಯೇ ಸಮುದ್ರಃ ಶತಯೋಜನಃ ।
ಅಪಿ ದ್ರಕ್ಷ್ಯಾಮಿ ತಂ ರಾಮಂ ಕರುಣಾಸಾಗರಂ ಪ್ರಭುಂ ॥ ೮೪ ॥

---

೮೦. ಕೌಸಲ್ಯೆಗೆ ಆನಂದದಾಯಕನೂ ನನ್ನ ಪ್ರಭುವೂ ಆದ ಶ್ರೀ ರಾಮಚಂದ್ರನು ಕ್ಷೇಮವಾಗಿದ್ದಾನೆಯೇ ? ಜಾನಕಿಯ ಜೀವನಪ್ರಾಯನಾದ ಆ ದಯಾಳುವು ಹೇಗಿರುವನು ? ಕೃಶಾಂಗನಾಗಿರುವನಲ್ಲವೇ ?

೮೧. ನನ್ನ ಪ್ರಾಣಕ್ಕಿಂತಲೂ ಅಧಿಕಪ್ರಿಯನಾದ ಆ ರಾಮನು ಆಹಾರವನ್ನೇನಾದರೂ ತೆಗೆದುಕೊಳ್ಳುತ್ತಿರುವನೇ ? ಸೀತಾಪತಿಯಾದ ಶ್ರೀರಾಮನು ಸತ್ಯವಾಗಿಯೂ ತಾನೇ ಸಮುದ್ರತೀರಕ್ಕೆ ಬಂದಿರುವನೇ ?

೮೨. ಸತ್ಯವಾಗಿಯೂ ಆತನು ಯುದ್ಧಸನ್ನದ್ಧನಾಗಿರುವನೇ? ನನ್ನ ಪ್ರಭುವು ಶೋಕದಿಂದ ಹತನಾಗಿಲ್ಲವಷ್ಟೇ? ಸ್ವಾಮಿಯ ದುಃಖಸ್ವರೂಪಿಣಿಯೂ ಪಾಪಿನಿಯೂ ಆದ ನನ್ನನ್ನು ಸ್ಮರಿಸಿಕೊಳ್ಳುತ್ತಿರುವನೇ?

೮೩. ಆ ನನ್ನ ಒಡೆಯನು ನನಗಾಗಿ ಎಷ್ಟು ದುಃಖವನ್ನನುಭವಿಸಿದನು ? ಹಿಂದೆ ರತಿಕಾಲದಲ್ಲಿ ನನ್ನ ಪ್ರಿಯನ ಅಂಗಸ್ಪರ್ಶಕ್ಕೆ ತಡೆಯಾಗುವುದೆಂದು ಕತ್ತಿಗೆ ಹಾರವನ್ನು ಹಾಕಿಕೊಳ್ಳುತ್ತಿರಲಿಲ್ಲ.

೮೪. ಈಗ ನಮ್ಮಿಬ್ಬರ ಮಧ್ಯದಲ್ಲಿ ನೂರುಯೋಜನ ವಿಸ್ತಾರವುಳ್ಳ ಸಮುದ್ರವಿದೆ. ಹೀಗಿರುವಾಗ ದಯಾಸಮುದ್ರನೂ, ನನ್ನ ಪ್ರಭುವೂ ಆದ ಶ್ರೀರಾಮಚಂದ್ರನನ್ನು ನಿಜವಾಗಿಯೂ ನೋಡುವೆನೇ ?

ಕಾಂತಂ ಶಾಂತಂ ನಿತಾಂತಂ ಚ ಧರ್ಮಿಷ್ಠಂ ಧರ್ಮಕರ್ಮಣಿ ।
ಅಪಿ ಸೇವಾಂ ಕರಿಷ್ಯಾಮಿ ಪಾದಪದ್ಮೇ ಪುನಃ ಪ್ರಭೋಃ ॥ ೮೫ ॥

ಪತಿಸೇವಾವಿಹೀನಾಯಾ ಮೂಢಾಯಾ ಜೀವನಂ ವೃಥಾ ।
ಅಪಿ ಮೇ ಧರ್ಮಪುತ್ರಶ್ಚ ಸತ್ಯಂ ಜೀವತಿ ಲಕ್ಷ್ಮಣಃ ॥ ೮೬ ॥

ಮಚ್ಛೋಕಸಾಗರೇ ಮಗ್ನೋ ಭಗ್ನದರ್ಪೋ ಮಯಾ ವಿನಾ ।
ವೀರಾಣಾಂ ಪ್ರವರೋ ಧರ್ಮೀ ದೇವಕಲ್ಪಶ್ಚ ದೇವರಃ ॥ ೮೭ ॥

ಅಪಿ ಸತ್ಯಂ ಸಸಂನದ್ಧೋ ಮತ್ಪ್ರಭೋರನುಜಃ ಸದಾ ।
ಅಪಿ ದ್ರಕ್ಷ್ಯಾಮಿ ಸತ್ಯಂ ತಂ ಲಕ್ಷ್ಮಣಂ ಧರ್ಮಲಕ್ಷಣಂ ।
ಪ್ರಾಣಾನಾಮಧಿಕಂ ಪ್ರೇಮ್ಣಾ ಧನ್ಯಂ ಪುಣ್ಯಸ್ವರೂಪಿಣಂ ॥ ೮೮ ॥

---

೮೫. ಶಾಂತನೂ, ಧರ್ಮಕಾರ್ಯಗಳಲ್ಲಿ ನಿರತನೂ, ಮನೋಹರನೂ ಆದ ನನ್ನ ಪ್ರಭುವಿನ ಪಾದಪದ್ಮಗಳ ಸೇವೆಯನ್ನು ನಾನು ಪುನಃ ಮಾಡುವೆನೇ ?

೮೬. ಪತಿಸೇವಾರಹಿತಳಾದ ಮೂಢಳ ಜೀವನವು ವ್ಯರ್ಥವಾದುದು. ಎಲೈ ವಾಯುಸುತನೇ, ಧರ್ಮದಿಂದ ನನಗೆ ಪುತ್ರಸದೃಶನಾದ ಲಕ್ಷ್ಮಣನು ಜೀವಿಸಿರುವನೇ ?

೮೭. ನಾನಿಲ್ಲದುದರಿಂದ ನನ್ನ ವಿರಹದುಃಖವೆಂಬ ಸಮುದ್ರದಲ್ಲಿ ಮುಳುಗಿ ದರ್ಪಭಂಗವನ್ನು ಪಡೆದಿರುವನೇ ? ದೇವತೆಗೆ ಸಮಾನನಾದ ನನ್ನ ಆ ಮೈದುನನು ಮಹಾವೀರನಾಗಿರುವನೇ ?

೮೮. ನನ್ನ ಪ್ರಭುವಿನ ಸಹೋದರನಾದ ಆತನೂ ಸಹ ಸತ್ಯವಾಗಿಯೂ ಯುದ್ಧಸಿದ್ಧನಾಗಿ ಬಂದಿರುವನೇ ? ಧರ್ಮಲಕ್ಷಣಗಳುಳ್ಳವನೂ, ಪ್ರಾಣಕ್ಕಿಂತ ಹೆಚ್ಚು ಪ್ರಿಯನೂ, ಧನ್ಯನೂ, ಪುಣ್ಯಸ್ವರೂಪಿಯೂ ಆದ ಲಕ್ಷ್ಮಣನನ್ನು ಸತ್ಯವಾಗಿಯೂ ನಾನು ಮತ್ತೊಮ್ಮೆ ನೋಡುವೆನೇ ?

ಇತ್ಯೇವಂ ವಚನಂ ಶ್ರುತ್ವಾ ದತ್ವಾ ಪ್ರತ್ಯುತ್ತರಂ ಶುಭಂ ।
ಭಸ್ಮೀಭೂತಾಂ ಚ ತಾಂ ಲಂಕಾಂ ಚಕಾರ ಲೀಲಯಾ ಮುನೇ ॥ ೮೯ ॥

ಪುನಃ ಪ್ರಬೋಧಂ ತಸ್ಯೈ ಚ ದತ್ವಾ ವಾಯುಸುತಃ ಕಪಿಃ ।
ಪ್ರಯಯೌ ಲೀಲಯಾ ವೇಗಾದ್ಯತ್ರ ರಾಜೀವಲೋಚನಃ ॥ ೯೦ ॥

ಸರ್ವಂ ತತ್ಕಥಯಾಮಾಸ ವೃತ್ತಾಂತಂ ಮಾತುರೇವ ಚ ।
ಸೀತಾಮಂಗಲವೃತ್ತಾಂತಂ ಶ್ರುತ್ವಾ ರಾಮೋ ರುರೋದ ಚ ॥ ೯೧ ॥

ರುರೋದೋಚ್ಚೈರ್ಲಕ್ಷ್ಮಣಶ್ಚ ಸುಗ್ರೀವಶ್ಚಾಪಿ ನಾರದ ।
ವಾನರಾ ರುರುದುಃ ಸರ್ವೇ ಮಹಾಬಲಪರಾಕ್ರಮಾಃ ॥ ೯೨ ॥

ನಿಬಧ್ಯ ಸೇತುಂ ಲಂಕಾಂ ಚ ಪ್ರಯಯೌ ರಘುನಂದನಃ ।
ಸಸೈನ್ಯಃ ಸಾನುಜಃ ಶೀಘ್ರಂ ಸಂನದ್ಧಶ್ಚಾಪಿ ನಾರದ ॥ ೯೩ ॥

---

೮೯. ಈ ರೀತಿಯಾದ ಸೀತೆಯ ಮಾತನ್ನು ಕೇಳಿ ಅವಳಿಗೆ ಶುಭಕರವಾದ ಪ್ರತ್ಯುತ್ತರವನ್ನು ಕೊಟ್ಟು ವಾಯುಸುತನು ಲೀಲಾಮಾತ್ರದಿಂದ ಲಂಕಾಪಟ್ಟಣವನ್ನು ಸುಟ್ಟು ಬೂದಿಮಾಡಿದನು.

೯೦. ವಾಯುಸುತನಾದ ಹನುಮಂತನು ಮತ್ತೊಮ್ಮೆ ಸೀತೆಗೆ ಪ್ರಬೋಧ ವಚನಗಳನ್ನು ಹೇಳಿ ಲೀಲಾಮಾತ್ರದಿಂದ ವೇಗವಾಗಿ ಶ್ರೀರಾಮನಿರುವ ಸ್ಥಳಕ್ಕೆ ಹೋದನು.

೯೧. ಲೋಕಮಾತೆಯಾದ ಸೀತೆಯ ಸಮಾಚಾರವನ್ನೆಲ್ಲ ಶ್ರೀರಾಮನಿಗೆ ವಿಶದವಾಗಿ ಹೇಳಿದನು. ಸೀತೆಯ ಕಷ್ಟಗಳನ್ನೆಲ್ಲ ಕೇಳಿದ ಶ್ರೀರಾಮನು ಬಹುವಾಗಿ ಅತ್ತನು.

೯೨. ಎಲೈ ನಾರದನೇ, ಲಕ್ಷ್ಮಣನೂ ಸುಗ್ರೀವನೂ ಸಹ ಗಟ್ಟಿಯಾಗಿ ಅತ್ತರು. ಮಹಾಬಲಪರಾಕ್ರಮಿಗಳಾದ ಸಕಲ ವಾನರರೂ ಸಹ ಬಹಳವಾಗಿ ಅತ್ತರು.

೯೩. ಕೂಡಲೇ ಶ್ರೀರಾಮನು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿಸಿ ಲಂಕೆಗೆ ತೆರಳಿದನು. ಎಲೈ ನಾರದನೇ, ವಾನರ ಸೈನ್ಯದೊಡನೆಯೂ ಸಹೋದರನಾದ ಲಕ್ಷ್ಮಣನೊಡನೆಯೂ ಯುದ್ಧಸನ್ನದ್ಧನಾಗಿಯೇ ಹೋದನು.

ನಿಹತ್ಯ ರಾವಣಂ ರಾಮೋ ರಣಂ ಕೃತ್ವಾ ಸಬಾಂಧವಂ ।
ಚಕಾರ ಮೋಕ್ಷಣಂ ಬ್ರಹ್ಮನ್ ಸೀತಾಯಾಶ್ಚ ಶುಭೇ ಕ್ಷಣೇ ॥ ೯೪ ॥

ಕೃತ್ವಾ ಪುಷ್ಪಕಯಾನೇನ ಸೀತಾಂ ಸತ್ಯಪರಾಯಣಾಂ ।
ಅಯೋಧ್ಯಾಂ ಪ್ರಯಯೌ ಶೀಘ್ರಂ ಕ್ರೀಡಾಕೌತುಕಮಂಗಲೈಃ ॥ ೯೫ ॥

ಕ್ರೀಡಾಂ ಚಕಾರ ಭಗವಾನ್ ಸೀತಾಂ ಕೃತ್ವಾ ಚ ವಕ್ಷಸಿ ।
ವಿಜಹೌ ವಿರಹಜ್ವಾಲಾಂ ಸೀತಾ ರಾಮಶ್ಚ ತತ್‌ಕ್ಷಣಂ ॥ ೯೬ ॥

ಸಪ್ತದ್ವೀಪೇಶ್ವರೋ ರಾಮೋ ಬಭೂವ ಪೃಥಿವೀತಲೇ ।
ಬಭೂವ ನಿಖಿಲಾ ಪೃಥ್ವೀ ಆಧಿವ್ಯಾಧಿವಿವರ್ಜಿತಾ ॥ ೯೭ ॥

ಬಭೂವತೂ ರಾಮಪುತ್ರೌ ಧಾರ್ಮಿಕೌ ಚ ಕುಶೀಲವೌ ।
ತಯೋಶ್ಚ ಪುತ್ರೈಃ ಪೌತ್ರೈಶ್ಚ ಸೂರ್ಯವಂಶೋದ್ಭವಾ ನೃಪಾಃ ॥ ೯೮ ॥

---

೯೪. ಎಲೈ ಬ್ರಾಹ್ಮಣೋತ್ತಮನೇ, ಶ್ರೀರಾಮನು ರಾವಣನನ್ನು ಬಂಧು ಮಿತ್ರರೊಡನೆ ಸಂಹರಿಸಿ ಶುಭಮುಹೂರ್ತದಲ್ಲಿ ಸೀತೆಯನ್ನು ಬಂಧನದಿಂದ ಬಿಡಿಸಿದನು.

೯೫. ಸತ್ಯಪರಾಯಣೆಯಾದ ಸೀತೆಯನ್ನು ಪುಷ್ಪಕ ವಿಮಾನದಲ್ಲಿ ಕುಳ್ಳಿರಿಸಿ ಕೊಂಡು ಶ್ರೀರಾಮನು ಸರಸಸಲ್ಲಾಪಗಳನ್ನು ಮಾಡುತ್ತಾ ಶೀಘ್ರವಾಗಿ ಅಯೋಧ್ಯೆಗೆ ತೆರಳಿದನು.

೯೬. ಭಗವಂತನಾದ ಶ್ರೀರಾಮನು ಸೀತೆಯನ್ನು ವಕ್ಷಃಸ್ಥಲದಲ್ಲಿ ಅಪ್ಪಿ ಕೊಂಡು ಆನಂದಪಟ್ಟನು. ಅಲ್ಲದೆ ತಕ್ಷಣವೇ ಏಕದೇಹನ್ಯಾಯದಿಂದ 'ಸೀತಾರಾಮ' ನಾಗಿ ವಿರಹ ವ್ಯಥೆಯನ್ನು ಮರೆತನು.

೯೭. ಅನಂತರ ಶ್ರೀರಾಮನು ಭೂಮಂಡಲದಲ್ಲಿದ್ದುಕೊಂಡು ಸಪ್ತ ದ್ವೀಪ ಗಳನ್ನೂ ಆಳುತ್ತಿದ್ದನು. ಆಗ ಸಮಸ್ತ ಪೃಥ್ವಿಯೂ ಆಧಿವ್ಯಾಧಿರಹಿತವಾಗಿದ್ದಿತು.

೯೮. ಆ ಶ್ರೀರಾಮನಿಗೆ ಧರ್ಮಿಷ್ಠರೂ ಗಾಯಕಶ್ರೇಷ್ಠರೂ ಆದ ಕುಶಲವ ರೆಂಬ ಇಬ್ಬರು ಮಕ್ಕಳಾದರು. ಅವರ ಪುತ್ರಪೌತ್ರರೆಲ್ಲ ಕ್ರಮವಾಗಿ ಸೂರ್ಯವಂಶ ಸಂಭವರಾದ ರಾಜರುಗಳೇ.

ಇತಿ ತೇ ಕಥಿತಂ ವತ್ಸ ಶ್ರೀರಾಮಚರಿತಂ ಶುಭಂ ।
ಸುಖದಂ ಮೋಕ್ಷದಂ ಸಾರಂ ಸಾರಪ್ರೋತಂ ಭವಾರ್ಣವೇ ॥ ೯೯ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣ ನಾರದಸಂವಾದೇ ಶ್ರೀರಾಮ
ಚರಿತಂ ನಾಮ ದ್ವಿಷಷ್ಟಿತಮೋಽಧ್ಯಾಯಃ

---

೯೯. ಎಲೈ ವತ್ಸ ನಾರದನೇ, ಈರೀತಿಯಾಗಿ ಶುಭಕರವೂ, ಮೋಕ್ಷದಾಯಕವೂ, ಸಾರತರವೂ, ಸಂಸಾರಾರ್ಣವತಾರಕವೂ ಆದ ಶ್ರೀರಾಮಚರಿತೆಯನ್ನು ನಿನಗೆ ಸಂಕ್ಷೇಪವಾಗಿ ಹೇಳಿರುವೆನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾ ಪುರಾಣದ ಶ್ರೀಕೃಷ್ಣಜನ್ಮ ಖಂಡದ ಉತ್ತರಾರ್ಧದ
ನಾರಾಯಣ ನಾರದ ಸಂವಾದದಲ್ಲಿ ಶ್ರೀರಾಮಚರಿತ್ರೆಯನ್ನು ತಿಳಿಸುವ
ಅರವತ್ತೆರಡನೆಯ ಅಧ್ಯಾಯವು ಮುಗಿದುದು.

ಅರವತ್ತೆರಡನೆಯ ಅಧ್ಯಾಯದ ಸಾರಾಂಶ.

ಶ್ರೀಹರಿಯು ತ್ರೇತಾಯುಗದಲ್ಲಿ ದಶರಥನ ಪುತ್ರನಾಗಿ ಅವತರಿಸಿ ಶ್ರೀರಾಮಾಭಿಧಾನದಿಂದ ಪ್ರಖ್ಯಾತಿಗೊಂಡನು. ಬಾಲ್ಯದಲ್ಲಿ ವಿದ್ಯಾಭ್ಯಾಸವು ಮುಗಿದನಂತರ ತಮ್ಮನಾದ ಲಕ್ಷ್ಮಣನೊಡನೆ ವಿಶ್ವಾಮಿತ್ರನ ಯಾಗ ಸಂರಕ್ಷಣೆಗಾಗಿ ಹೋಗುತ್ತಾ ಮಾರ್ಗದಲ್ಲಿ ಸಿಕ್ಕಿದ ತಾಟಕೆಯನ್ನು ಸಂಹರಿಸಿ ಮಿಥಿಲಾಪಟ್ಟಣಕ್ಕೆ ಹೊರಟನು. ದಾರಿಯಲ್ಲಿ ಶಿಲೆಯಾಗಿ ಬಿದ್ದಿದ್ದ ಅಹಲ್ಯೆಯನ್ನು ತನ್ನ ಪಾದ ರೇಣುಗಳಿಂದ ಶಾಪ ವಿಮುಕ್ತಳನ್ನಾಗಿ ಮಾಡಿ ಮಿಥಿಲೆಗೆ ಹೋಗಿ ಶಿವಧನುಸ್ಸನ್ನು ಮುರಿದು ಸೀತೆಯನ್ನು ಮದುವೆಮಾಡಿಕೊಂಡನು. ಅಲ್ಲಿಂದ ಹಿಂತಿರುಗಿ ಬರುತ್ತ ಮಾರ್ಗದಲ್ಲಿ ಪರಶುರಾಮನ ಗರ್ವವನ್ನು ಮುರಿದು ಅಯೋಧ್ಯೆಗೆ ಬಂದು ಪ್ರಿಯಪತ್ನಿಯೊಡನೆಯೂ ತಮ್ಮಂದಿರೊಡನೆಯೂ ಸುಖವಾಗಿದ್ದನು.

ದಶರಥನು ರಾಮನಿಗೆ ಪಟ್ಟಾಭಿಷೇಕಮಾಡಲು ಬಯಸಿದಾಗ ಅವನ ಕಿರಿಯ ಹೆಂಡತಿಯಾದ ಕೈಕೆಯು ಹಿಂದೆ ತನಗೆ ಕೊಡುವುದಾಗಿ ಪ್ರತಿಜ್ಞೆಮಾಡಿದ್ದ ಎರಡು ವರಗಳಲ್ಲಿ ಒಂದರಿಂದ ಶ್ರೀರಾಮನನ್ನು ಹದಿನಾಲ್ಕು ವರ್ಷ ವನವಾಸಕ್ಕೆ ಕಳುಹಿಸಬೇಕೆಂದೂ, ಎರಡನೆಯದರಿಂದ ತನ್ನ ಮಗನಾದ ಭರತನಿಗೆ ಪಟ್ಟಾಭಿಷೇಕ ಮಾಡಬೇಕೆಂದೂ ಕೇಳಿದಳು. ದಶರಥನು ಈ ಬೇಡಿಕೆಯನ್ನು ಕೇಳಿ ಚಿಂತಾಕ್ರಾಂತನಾಗಿರಲು, ಶ್ರೀರಾಮನು ತಂದೆಯನ್ನು 'ಸತ್ಯಪ್ರತಿಜ್ಞ' ನೆನಿಸಲೋಸುಗ ತಾನಾಗಿಯೇ ಸೀತಾಲಕ್ಷ್ಮಣರೊಡನೆ ಕಾಡಿಗೆ ತೆರಳಿದನು.

ಶ್ರೀರಾಮನು ಸೀತಾಲಕ್ಷ್ಮಣರೊಡನೆ ದಂಡಕಾರಣ್ಯದಲ್ಲಿ ವಾಸಿಸುತ್ತಿದ್ದಾಗ ರಾವಣನ ತಂಗಿಯಾದ ಶೂರ್ಪಣಖಿಯು ದಿವ್ಯ ಸುಂದರ ರೂಪವನ್ನು ಧರಿಸಿ ರಾಮಲಕ್ಷ್ಮಣರನ್ನು ಕಾಮಿಸಿ, ಅವರಿಂದ ಕಿವಿ ಮೂಗುಗಳನ್ನು ಕೊಯ್ಸಿಕೊಂಡು, ತನಗಾದ ಅಪಮಾನವನ್ನು ರಾವಣನಿಗೆ ತಿಳಿಸಿದಳು. ರಾವಣನು ಮಾರೀಚನ ಸಹಾಯದಿಂದ ಸೀತೆಯನ್ನು ಅಪಹರಿಸಿ ಲಂಕೆಗೆ ಕರೆದೊಯ್ದು ಅಶೋಕ ವನದಲ್ಲಿಟ್ಟನು.

ಇತ್ತ ಶ್ರೀರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತಾ ಮಾರ್ಗದಲ್ಲಿ ಸಿಕ್ಕಿದ ವಾಯುಸುತನ ಮೂಲಕ ಸುಗ್ರೀವನ ಸಖ್ಯವನ್ನು ಪಡೆದು ವಾಲಿಯನ್ನು ನಿಗ್ರಹಿಸಿದರು ಅಲ್ಲದೆ ಸೀತಾವೃತ್ತಾಂತವನ್ನೂ ಸಹ ಆಂಜನೇಯನ ಮೂಲಕವೇ

ತಿಳಿದು, ಸಮುದ್ರ ಬಂಧನವಮಾಡಿ ವಾನರ ಸೈನ್ಯದೊಡನೆ ಲಂಕೆಗೆ ಹೋಗಿ ಶ್ರೀರಾಮನು ರಾವಣಾದಿಗಳನ್ನು ನಿಗ್ರಹಿಸಿ ಅಗ್ನಿಪರಿಶುದ್ಧಳಾದ ಸೀತೆಯನ್ನು ಪರಿಗ್ರಹಿಸಿ ಪುಷ್ಪಕವಿಮಾನದಲ್ಲಿ ಅಯೋಧ್ಯೆಗೆ ಹಿಂತಿರುಗಿ ಹೋಗಿ ಪಟ್ಟಾಭಿಷಿಕ್ತನಾಗಿ ಪ್ರಜೆಗಳನ್ನು ಚೆನ್ನಾಗಿ ಪರಿಪಾಲಿಸಿಕೊಂಡಿದ್ದನು. ಶ್ರೀರಾಮನಿಗೆ ಕುಶಲವರೆಂಬ ಇಬ್ಬರು ಮಕ್ಕಳಾದರು. ಅವರಿಂದ ಸೂರ್ಯವಂಶವು ಪ್ರಖ್ಯಾತಿಗೊಂಡಿತು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ತ್ರಿಷಷ್ಟಿತಮೋಽಧ್ಯಾಯಃ ||

|| ನಾರಾಯಣ ಉವಾಚ ||

ಅಥ ಕಂಸೋ ವಿಚಿಂತ್ಯೈವಂ ದೃಷ್ಟ್ವಾ ದುಃಸ್ವಪ್ನಮೇವ ಚ ।
ಸಮುದ್ವಿಗ್ನೋ ಮಹಾಭೀತೋ ನಿರಾಹಾರೋ ನಿರುತ್ಸುಕಃ || ೧ ||

ಪುತ್ರಂ ಮಿತ್ರಂ ಬಂಧುಗಣಂ ಬಾಂಧವಂ ಚ ಪುರೋಹಿತಂ ।
ಸಮಾನೀಯ ಸಭಾಮಧ್ಯೇ ತಾನುವಾಚ ಸುದುಃಖಿತಃ || ೨ ||

ಅರವತ್ತ ಮೂರನೆಯ ಅಧ್ಯಾಯವು.

೧. ಶ್ರೀ ನಾರಾಯಣ :— (ಶ್ರೀ ಕೃಷ್ಣನ ಸೋದರಮಾವನಾದ ಕಂಸನು ಧನುರ್ಯಾಗ ಮಾಡಲು ಕಾರಣವನ್ನು ಈ ಅಧ್ಯಾಯದಲ್ಲಿ ವಿವರಿಸಿರುವರು).

ಒಮ್ಮೆ ಕಂಸನು ದುಃಸ್ವಪ್ನವನ್ನು ಕಂಡು ಮಹಾಭೀತನಾಗಿ ಆಹಾರವನ್ನು ತೊರೆದು ಉತ್ಸಾಹರಹಿತನಾಗಿ ಚಿಂತಾಕ್ರಾಂತನಾದನು.

೨. ಕೂಡಲೇ ಪುತ್ರಮಿತ್ರಾದಿ ಬಂಧುಗಳನ್ನೂ, ಪಂಡಿತರನ್ನೂ, ಪುರೋಹಿತರನ್ನೂ, ಕರೆಸಿ ಸಭೆಸೇರಿಸಿ ಆವರೆಲ್ಲರಿಗೂ ದುಃಖಕಾರಣವಾದ ತನ್ನ ದುಃಸ್ವಪ್ನವನ್ನು ಬಿನ್ನವಿಸಿಕೊಂಡನು.

|| ಕಂಸ ಉವಾಚ ||

ಮಯಾ ದೃಷ್ಟೋ ನಿಶೀಥೇ ಯೋ ದುಃಸ್ವಪ್ನೋ ಹಿ ಭಯಪ್ರದಃ ।
ನಿಬೋಧತ ಬುಧಾಃ ಸರ್ವೇ ಬಾಂಧವಾಶ್ಚ ಪುರೋಹಿತಾಃ || ೩ ||

ಬಿಭ್ರತೀ ರಕ್ತಪುಷ್ಪಾಣಾಂ ಮಾಲಾಂ ಸಾರಕ್ತಚಂದನಂ ।
ರಕ್ತಾಂಬರಂ ಖಡ್ಗತೀಕ್ಷ್ಣಂ ಖರ್ಪರಂ ಚ ಭಯಂಕರಂ || ೪ ||

ಪ್ರಕೃತ್ಯಾಟ್ಟಾಟ್ಟಹಾಸಂ ಚ ಲೋಲಜಿಹ್ವಾ ಭಯಂಕರೀ ।
ಅತೀವ ವೃದ್ಧಾ ಕೃಷ್ಣಾಂಗೀ ನಗರೇ ಮಮ ನೃತ್ಯತೀ || ೫ ||

ಮುಕ್ತಕೇಶೀ ಛಿನ್ನನಾಸಾ ಕೃಷ್ಣಾ ಕೃಷ್ಣಾಂಬರಪ್ರಿಯಾ ।
ವಿಧವಾ ಸಾ ಮಹಾಶೂದ್ರೀ ಮಾಮಾಲಿಂಗಿತುಮಿಚ್ಛತಿ || ೬ ||

ಮಲಿನಂ ಚೈಲಖಂಡಂ ಚ ಬಿಭ್ರತೀ ರೂಕ್ಷಮೂರ್ಧಜಾನ್ ।
ದಧತೀ ಚೂರ್ಣತಿಲಕಂ ಕಪೋಲೇ ಮಮ ವಕ್ಷಸಿ || ೭ ||

---

೩. ಕಂಸ :— ಮಾನ್ಯರಾದ ಪುರೋಹಿತರೇ, ಪಂಡಿತರೇ ಮತ್ತು ಬಂಧುಗಳೇ, ನಾನು ಅರ್ಧರಾತ್ರಿಯಲ್ಲಿ ಭಯಂಕರವಾದ ಒಂದು ದುಃಸ್ವಪ್ನವನ್ನು ಕಂಡೆನು. ಅದೇನೆಂಬುದನ್ನು ಹೇಳುವೆನು. ಸಾವಧಾನದಿಂದ ಕೇಳಿರಿ.

೪–೫. ಅತ್ಯಂತ ಕಪ್ಪಾದ ಒಬ್ಬ ಮುದುಕಿಯು ಕೆಂಪು ಹೂವಿನ ಮಾಲೆಯನ್ನೂ ಕೆಂಪುಗಂಧವನ್ನೂ ಧರಿಸಿ ಕೆಂಪು ಬಟ್ಟೆಯನ್ನುಟ್ಟು, ಕತ್ತಿಯಂತೆ ತೀಕ್ಷ್ಣವಾದ ಶಿರಃ ಕಪಾಲಗಳನ್ನು ಕೈಯಲ್ಲಿ ಧರಿಸಿ, ಭಯಂಕರವೂ ಚಂಚಲವೂ ಆದ ನಾಲಿಗೆಯನ್ನು ನೀಡಿಕೊಂಡು ನಮ್ಮ ನಗರದಲ್ಲಿ ಅಟ್ಟಹಾಸಮಾಡಿಕೊಂಡು ನರ್ತನ ಮಾಡುತ್ತಿದ್ದಂತೆ ನಾನು ಕನಸಿನಲ್ಲಿ ಕಂಡೆನು.

೬. ಕೆದರಿದ ತಲೆಗೂದಲುಳ್ಳವಳೂ, ಕತ್ತರಿಸಲ್ಪಟ್ಟ ಮೂಗುಳ್ಳವಳೂ, ಕಪ್ಪು ಬಣ್ಣದವಳೂ, ಕಪ್ಪುಬಟ್ಟೆಯನ್ನುಟ್ಟವಳೂ, ವಿಧವೆಯೂ ಆದ ಮಹಾ ಶೂದ್ರಿಯೊಬ್ಬಳು ನನ್ನನ್ನು ಆಲಿಂಗಿಸಿಕೊಳ್ಳಲು ಬಯಸುತ್ತಿದ್ದಳು.

೭. ಅವಳು ಕೊಳಕಾದ ಹರಕು ಬಟ್ಟೆಗಳನ್ನೂ, ಒರಟಾದ ತಲೆಗೂದಲುಗಳನ್ನೂ ಧರಿಸಿಕೊಂಡು ನನ್ನ ಕಪೋಲದಲ್ಲಿಯೂ ಮತ್ತು ವಕ್ಷಃಸ್ಥಳದಲ್ಲಿಯೂ ಸಿಂದೂರಾದಿ ಚೂರ್ಣದ ತಿಲಕವನ್ನಿಡುತ್ತಿದ್ದಳು.

ಕೃಷ್ಣವರ್ಣಾನಿ ಪಕ್ವಾನಿ ಛಿನ್ನಭಿನ್ನಾನಿ ಸತ್ಯಕ ।
ಪತಂತಿ ಕೃತ್ವಾ ಶಬ್ದಾಂಶ್ಚ ಶಶ್ವತ್ತಾಲಫಲಾನಿ ಚ ॥ ೮ ॥

ಕುಚೈಲೋ ವಿಕೃತಾಕಾರೋ ಮ್ಲೇಚ್ಛೋ ಹಿ ರೂಕ್ಷಮೂರ್ಧಜಃ ।
ದದಾತಿ ಮಹ್ಯಂ ಭೂಷಾಯಾಂ ಛಿನ್ನಭಿನ್ನಕಪರ್ದಕಾನ್ ॥ ೯ ॥

ಮಹಾರುಷ್ಟಾ ಚ ದಿವ್ಯಾ ಸ್ತ್ರೀ ಪತಿಪುತ್ರವತೀ ಸತೀ ।
ಬಭಂಜ ಪೂರ್ಣಕುಂಭಂ ಚ ಸಾಭಿಶಪ್ಯ ಪುನಃ ಪುನಃ ॥ ೧೦ ॥

ಅಮ್ಲಾನಾ ಮೂಢಮಾಲಾಂ ಚ ರಕ್ತಚಂದನಚರ್ಚಿತಾಂ ।
ದದಾತಿ ಮಹ್ಯಂ ವಿಪ್ರಶ್ಚ ಮಹಾರುಷ್ಟೋಽತಿಶಪ್ಯ ಚ ॥ ೧೧ ॥

ಕ್ಷಣಮಂಗಾರವೃಷ್ಟಿಶ್ಚ ಭಸ್ಮವೃಷ್ಟಿಃ ಕ್ಷಣಂ ಕ್ಷಣಂ ।
ಕ್ಷಣಂ ಕ್ಷಣಂ ರಕ್ತವೃಷ್ಟಿರ್ಭವೇಚ್ಚ ನಗರೇ ಮಮ ॥ ೧೨ ॥

---

೮. ಎಲೈ ಪುರೋಹಿತನಾದ ಸತ್ಯಕನೇ, ಚೆನ್ನಾಗಿ ಮಾಗಿ ಬಿರಿದಿರುವ ಕಪ್ಪು ಬಣ್ಣದ ತಾಳೆಯ ಹಣ್ಣುಗಳು ಶಬ್ದಮಾಡುತ್ತಾ ಪದೇಪದೇ ಕೆಳಕ್ಕೆ ಬೀಳುತ್ತಿರುವಂತೆ ಕನಸಾಯಿತು.

೯. ಕುತ್ಸಿತವಸ್ತ್ರಧಾರಿಯೂ, ವಿಕೃತಾಕಾರನೂ, ಒರಟಾದ ತಲೆಗೂದಲುಳ್ಳವನೂ ಆದ ಮ್ಲೇಚ್ಛನೊಬ್ಬನು ಭೂಷಣಗಳಿಂದ ಕಿತ್ತುಹೋಗಿದ್ದ ಕವಡೆಯ ಚೂರುಗಳನ್ನು ನನಗೆ ಕೊಡುತ್ತಿದ್ದನು.

೧೦. ಪತಿಪುತ್ರವತಿಯೂ ಮಹಾ ಪತಿವ್ರತೆಯೂ ಆದ ದಿವ್ಯಸ್ತ್ರೀಯೊಬ್ಬಳು ಬಹಳ ಕೋಪಗೊಂಡವಳಾಗಿ ನನ್ನನ್ನು ಪುನಃ ಪುನಃ ಶಪಿಸಿ ಪೂರ್ಣಕುಂಭವೊಂದನ್ನು ಒಡೆದು ಪುಡಿಮಾಡಿದಳು.

೧೧. ಬಹಳ ಕೋಪಗೊಂಡ ಬ್ರಾಹ್ಮಣನೊಬ್ಬನು ರಕ್ತಚಂದನದಿಂದ ಅನುಲಿಪ್ತವಾದ, ಬಾಡದಿರುವ ಧರಿಸಿದ ಹೂಮಾಲೆಯೊಂದನ್ನು ಶಪಿಸುತ್ತಲೇ ನನಗೆ ಕೊಟ್ಟನು.

೧೨. ನಮ್ಮ ನಗರದಲ್ಲಿ ಒಂದು ಕ್ಷಣಕಾಲ ಕೆಂಡದ ಮಳೆಗರೆಯಿತು. ಮತ್ತೊಂದು ಕ್ಷಣದಲ್ಲಿ ಬೂದಿಯು ರಾಶಿರಾಶಿಯಾಗಿ ಸುರಿಯಿತು. ಇನ್ನೊಮ್ಮೆ ರಕ್ತವೃಷ್ಟಿಯಾಯಿತು.

ವಾನರಂ ವಾಯಸಂ ಶ್ವಾನಂ ಭಲ್ಲೂಕಂ ಸೂಕರಂ ಖರಂ ।
ಪಶ್ಯಾಮಿ ವಿಕಟಾಕಾರಂ ಶಬ್ದಂ ಕುರ್ವಂತಮುಲ್ಬಣಂ ॥ ೧೩ ॥

ಪಶ್ಯಾಮಿ ಶುಷ್ಕಕಾಷ್ಠಾನಾಂ ರಾಶಿಮಮ್ಲಾನಕಜ್ಜಲಂ ।
ಅರೋಣದಯವೇಲಾಯಾಂ ಕಪೀಂಶ್ಛಿನ್ನನಖಾನಿ ಚ ॥ ೧೪ ॥

ಪೀತವಸ್ತ್ರಪರೀಧಾನಾ ಶುಕ್ಲಚಂದನ ಚರ್ಚಿತಾ ।
ಬಿಭ್ರತೀ ಮಾಲತೀಮಾಲಾಂ ರತ್ನಭೂಷಣಭೂಷಿತಾ ॥ ೧೫ ॥

ಕ್ರೀಡಾಕಮಲಹಸ್ತಾ ಸಾ ಸಿಂಧೂರಬಿಂದು ಶೋಭಿತಾ ।
ಕೃತ್ವಾಽಭಿಶಾಪಂ ಮಾಂ ರುಷ್ಟಾ ಯಾತಿ ಮನ್ಮಂದಿರಾತ್ಸತೀ ॥ ೧೬ ॥

ಪಾಶಹಸ್ತಾಂಶ್ಚ ಪುರುಷಾನ್ಮುಕ್ತಕೇಶಾನ್ಭಯಂಕರಾನ್ ।
ಅತಿರೂಕ್ಷಾಂಶ್ಚ ಪಶ್ಯಾಮಿ ವಿಶತೋ ನಗರಂ ಮಮ ॥ ೧೭ ॥

---

೧೩. ವಿಕಟಾಕಾರವಾಗಿದ್ದ ಮತ್ತು ಭಯಂಕರವಾಗಿ ಧ್ವನಿಮಾಡುತ್ತಿದ್ದ ವಾನರನನ್ನೂ, ಕಾಗೆಯನ್ನೂ, ನಾಯಿಯನ್ನೂ, ಕರಡಿಯನ್ನೂ, ಹಂದಿಯನ್ನೂ ಮತ್ತು ಕತ್ತೆಯನ್ನೂ ಸಹ ಕನಸಿನಲ್ಲಿ ಕಂಡೆನು.

೧೪. ಅರುಣೋದಯದ ವೇಳೆಯಲ್ಲಿ ಅರ್ಧ ಉರಿದು ಮಸಿಯಾಗಿದ್ದ ಒಣಗಿದ ಕಟ್ಟಿಗೆಗಳ ರಾಶಿಯನ್ನೂ, ಕತ್ತರಿಸಿದ ಉಗುರುಗಳುಳ್ಳ ಕೋತಿಗಳನ್ನೂ ಕನಸಿನಲ್ಲಿ ಕಂಡೆನು.

೧೫–೧೬. ನನ್ನ ಗೃಹಲಕ್ಷ್ಮಿಯು ಪೀತಾಂಬರವನ್ನುಟ್ಟು, ಬಿಳಿಯ ಗಂಧವನ್ನು ಲೇಪಿಸಿಕೊಂಡು, ಮಾಲತೀಮಾಲೆಯನ್ನು ಮುಡಿದು, ರತ್ನಾಲಂಕಾರಭೂಷಿತಳಾಗಿ ಕೈಯಲ್ಲಿ ಕ್ರೀಡಾಕಮಲವನ್ನು ಹಿಡಿದು, ಸಿಂದೂರಬಿಂದುಗಳಿಂದ ಶೋಭಿತಳಾಗಿ ಕೋಪಗೊಂಡು ನನ್ನನ್ನು ಬಯ್ಯುತ್ತಾ ಮನೆಯಿಂದ ಹೊರಕ್ಕೆ ಹೋಗುತ್ತಿದ್ದಳು.

೧೭. ತಲೆಯನ್ನು ಕೆದರಿಕೊಂಡು, ಕೈಯಲ್ಲಿ ಪಾಶಾಯುಧವನ್ನು ಧರಿಸಿದ್ದ ಕೆಲವು ಭಯಂಕರ ಪುರುಷರು ಹುಚ್ಚುಹುಚ್ಚಾಗಿ ನಗರವನ್ನು ಪ್ರವೇಶಿಸುತ್ತಿದ್ದರು.

ನಗ್ನನಾರೀಂ ಮುಕ್ತಕೇಶೀಂ ನೃತ್ಯಂತೀಂ ಚ ಗೃಹೇ ಗೃಹೇ ।
ಅತೀವ ವಿಕೃತಾಕಾರಾಂ ಪಶ್ಯಾಮಿ ಸಸ್ಮಿತಾಂ ಸದಾ ॥ ೧೮ ॥

ಛಿನ್ನನಾಸಾ ಚ ವಿಧವಾ ಮಹಾಶೂದ್ರೀ ದಿಗಂಬರಾ ।
ಸಾ ತೈಲಾಭ್ಯಂಗಿತಂ ಮಾಂ ಚ ಕರೋತ್ಯತಿಭಯಂಕರೀ ॥ ೧೯ ॥

ನಿರ್ವಾಣಾಂಗಾರಯುಕ್ತಾಶ್ಚ ಭಸ್ಮಪೂರ್ಣಾ ದಿಗಂಬರಾಃ ।
ಅತಿಪ್ರಭಾತಸಮಯೇ ಚಿತ್ರೈಃ ಪಶ್ಯಾಮಿ ಸಸ್ಮಿತಃ ॥ ೨೦ ॥

ಪಶ್ಯಾಮಿ ಚ ವಿವಾಹಂ ಚ ನೃತ್ಯಗೀತಮನೋಹರಂ ।
ರಕ್ತವಸ್ತ್ರಪರೀಧಾನಾನ್ಪುರುಷಾನ್ರಕ್ತಮೂರ್ಧಜಾನ್ ॥ ೨೧ ॥

ರಕ್ತಂ ವಮಂತಂ ಪುರುಷಂ ನೃತ್ಯಂತಂ ನಗ್ನಮುಲ್ಬಣಂ ।
ಧಾವಂತಂ ಚ ಶಯಾನಂ ಚ ಪಶ್ಯಾಮಿ ಸಸ್ಮಿತಂ ಸದಾ ॥ ೨೨ ॥

---

೧೮. ಪ್ರತಿಯೊಂದು ಮನೆಯಲ್ಲಿಯೂ ಬೆತ್ತಲೆಯಾದ ಹೆಂಗಸು ತಲೆಯನ್ನು ಕೆದರಿಕೊಂಡು ವಿಕೃತಾಕಾರಳಾಗಿ ಸರ್ವದಾ ನಗುತ್ತ ನರ್ತನ ಮಾಡುತ್ತಿರುವಂತೆ ಕನಸಿನಲ್ಲಿ ಕಂಡೆನು.

೧೯. ಕತ್ತರಿಸಲ್ಪಟ್ಟ ಮೂಗುಳ್ಳ, ಮಹಾಶೂದ್ರಿಯೂ, ದಿಗಂಬರಳೂ, ಆದ ವಿಧವೆಯೊಬ್ಬಳು ಅತ್ಯಂತ ಭಯಂಕರಳಾಗಿ ನನಗೆ ಮೈಗೆಲ್ಲಾ ಎಣ್ಣೆಯನ್ನು ಬಳಿಯುತ್ತಿದ್ದಳು.

೨೦. ಬೆಳಗಿನ ಝಾವದ ಸಮಯದಲ್ಲಿ ಆರಿಹೋದ ಕೆಂಡಗಳನ್ನು ಕೈಯಲ್ಲಿ ಹಿಡದಿದ್ದ ಮೈಗೆಲ್ಲ ಭಸ್ಮವನ್ನು ಲೇಪಿಸಿಕೊಂಡಿದ್ದ ದಿಗಂಬರರು ಚಿತ್ರವಿಚಿತ್ರವಾಗಿ ನಗುತ್ತಿದ್ದುದನ್ನು ಕಂಡೆನು.

೨೧. ನರ್ತನ ಮತ್ತು ಸಂಗೀತಗಳಿಂದ ಮನೋಹರವಾಗಿರುವ ವಿವಾಹವನ್ನೂ, ಕೆಂಪು ಬಟ್ಟೆಯನ್ನುಟ್ಟಿರುವ ಕೆಂಪಾದ ತಲೆಗೂದಲುಗಳುಳ್ಳ ಪುರುಷರನ್ನೂ ಕನಸಿನಲ್ಲಿ ಕಂಡೆನು.

೨೨. ಬೆತ್ತಲೆಯಾಗಿದ್ದ ಪುರುಷನೊಬ್ಬನು ರಕ್ತವನ್ನು ಕಾರುತ್ತ, ಮನಬಂದಂತೆ ಕುಣಿಯುತ್ತಲೂ ಓಡುತ್ತಲೂ ಇದ್ದುದಲ್ಲದೆ ಯಾವಾಗಲೂ ಮಲಗಿದ್ದಂತೆಯೂ ಕನಸಿನಲ್ಲಿ ಕಂಡೆನು.

ರಾಹುಗ್ರಸ್ತಂ ಚ ಗಗನೇ ಮಂಡಲಂ ಚಂದ್ರಸೂರ್ಯಯೋಃ ।
ಏಕಕಾಲೇ ಚ ಪಶ್ಯಾಮಿ ಸರ್ವಗ್ರಾಸಂ ಚ ಬಾಂಧವಾಃ ॥ ೧೩ ॥

ಉಲ್ಕಾಪಾತಂ ಧೂಮಕೇತುಂ ಭೂಕಂಪಂ ರಾಷ್ಟ್ರವಿಪ್ಲವಂ ।
ಝಂಝಾವಾತಂ ಮಹೋತ್ಪಾತಂ ಪಶ್ಯಾಮಿ ಚ ಪುರೋಹಿತ ॥ ೧೪ ॥

ವಾಯುನಾ ಘೂರ್ಣನಾಸಾಂಶ್ಚ ಛಿನ್ನಸ್ಕಂಧಾನ್ಮಹೀರುಹಾನ್ ।
ಪತಿತಾನ್ಪರ್ವತಾಂಶ್ಚೈವ ಪಶ್ಯಾಮಿ ಪೃಥಿವೀತಲೇ ॥ ೧೫

ಪುರುಷಂ ಛಿನ್ನಶಿರಸಂ ನೃತ್ಯಂತಂ ನಗ್ನಮುಚ್ಛ್ರಿತಂ ।
ಮುಂಡಮಾಲಾಕರಂ ಘೋರಂ ಪಶ್ಯಾಮಿ ಚ ಗೃಹೇ ಗೃಹೇ ॥ ೧೬

ದಗ್ಧಂ ಸರ್ವಾಶ್ರಮಂ ಭಸ್ಮಪೂರ್ಣಮಂಗಾರಸಂಕುಲಂ ।
ಹಾಹಾಕಾರಂ ಚ ಕುರ್ವಂತಂ ಸರ್ವಂ ಪಶ್ಯಾಮಿ ಸರ್ವತಃ ॥ ೧೭ ॥

---

೧೩. ಎಲೈ ಬಂಧುಗಳೇ, ಆಕಾಶದಲ್ಲಿ ಚಂದ್ರ ಸೂರ್ಯ ಮಂಡಲಗಳು ರಾಹುಗ್ರಸ್ತವಾಗಿದ್ದವು. ಏಕಕಾಲದಲ್ಲಿಯೇ ಈ ಎರಡು ಗ್ರಹಣಗಳನ್ನೂ ಕನಸಿನಲ್ಲಿ ನೋಡಿದೆನು.

೧೪. ಎಲೈ ಪುರೋಹಿತನೇ, ಉಲ್ಕಾಪಾತವನ್ನೂ, ಧೂಮಕೇತುವನ್ನೂ ಭೂಕಂಪವನ್ನೂ, ರಾಷ್ಟ್ರಕ್ಷೋಭೆಯನ್ನೂ, ಬಿರುಗಾಳಿಯನ್ನೂ, ಮಹೋತ್ಪಾತವನ್ನೂ ಸಹ ಕನಸಿನಲ್ಲಿ ಕಂಡೆನು.

೧೫. ಬಿರುಗಾಳಿಗೆ ಸಿಲುಕಿ ಮುರಿದ ಕೊಂಬೆಗಳುಳ್ಳ ಮರಗಳೂ ಅಂತೆಯೇ ಪರ್ವತ ಶಿಖರಗಳೂ ಸಹ ಅಂತರಿಕ್ಷದಲ್ಲಿ ಸುತ್ತಾಡುತ್ತ ನೆಲದಮೇಲೆ ಬಿದ್ದುದನ್ನ ನಾನು ಸ್ವಪ್ನದಲ್ಲಿ ಕಂಡೆನು.

೧೬. ಪ್ರತಿಯೊಂದು ಮನೆಯಲ್ಲಿಯೂ ಕತ್ತರಿಸಲ್ಪಟ್ಟ ತಲೆಯುಳ್ಳ ಪುರುಷನು ಬೆತ್ತಲೆಯಾಗಿ ನರ್ತನಮಾಡುತ್ತ, ಕೈಯ್ಯಲ್ಲಿ ಮುಂಡಮಾಲೆಯನ್ನು ಧರಿಸಿ ಭಯಂಕರ ರೂಪನಾಗಿದ್ದುದನ್ನು ಕಂಡೆನು.

೧೭. ನಗರದ ಮನೆಗಳೆಲ್ಲವೂ ಉರಿದು ಭಸ್ಮವಾದುದಲ್ಲದೆ ಕೆಲವುಕಡೆ ಕೆಂಡಗಳಿರುವುದನ್ನೂ, ಎಲ್ಲೆಡೆಯಲ್ಲೂ ಜನರು ಹಾಹಾಕಾರ ಮಾಡಿಕೊಂಡು ಓಡಾಡುತ್ತಿರುವುದನ್ನೂ ನೋಡಿದೆನು.

ಇತ್ಯೇವಮುಕ್ತ್ವಾ ರಾಜಾ ಸ ವಿರರಾಮ ಸಭಾತಲೇ ।
ದೃಷ್ಟ್ವಾ(ಶ್ರುತ್ವಾ)ಸ್ವಪ್ನಂ ಬಾಂಧವಾಶ್ಚ ನ ತೇಮುಕ್ತ್ವಾ ನಿಶಶ್ವಸುಃ ॥ ೨೮ ॥

ಜಹಾರ ಚೇತನಾಂ ಸದ್ಯಃ ಸತ್ಯಕಶ್ಚ ಪುರೋಹಿತಃ ।
ಮತ್ವಾ ವಿನಾಶಂ ಕಂಸಸ್ಯ ಯಜಮಾನಸ್ಯ ನಾರದ ॥ ೨೯ ॥

ರುರೋದ ನಾರೀವರ್ಗಶ್ಚ ಪಿತಾ ಮಾತಾ ಚ ಶೋಕತಃ ।
ಮೇನೇ ವಿನಾಶಕಾಲಂ ಚ ಸದ್ಯಃ ಸ್ವಯಮುಪಸ್ಥಿತಂ ॥ ೩೦ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರದನಾರಾಯಣಸಂವಾದೇ
ಕಂಸದುಃಸ್ವಪ್ನಕಥನಂ ನಾಮ
ತ್ರಿಷಷ್ಟಿತಮೋಽಧ್ಯಾಯಃ

---

೨೮. ರಾಜನಾದ ಕಂಸನು ಈರೀತಿಯಾಗಿ ತನ್ನ ದುಃಸ್ವಪ್ನ ವೃತ್ತಾಂತವನ್ನು ಸಭೆಯಲ್ಲಿ ತಿಳಿಸಿ ಸುಮ್ಮನಾದನು. ಅವನ ಬಂಧುಗಳೂ ಸಹ ಇದೇ ರೀತಿಯ ಸ್ವಪ್ನವನ್ನು ನೋಡಿದ್ದರಿಂದ ಏನೂ ಮಾತನಾಡದೆ ನಿಟ್ಟುಸಿರುಬಿಟ್ಟರು.

೨೯. ಎಲೈ ನಾರದನೇ, ಅವನ ಪುರೋಹಿತನಾದ ಸತ್ಯಕನಾದರೋ ಯಜಮಾನನಾದ ಕಂಸನಿಗೆ ವಿನಾಶಕಾಲ ಸಮೀಪಿಸಿರುವುದನ್ನು ತಿಳಿದು ಮೂರ್ಛೆಗೊಂಡನು.

೩೦. ಕಂಸನ ಅಂತಃಪುರದ ಸ್ತ್ರೀಗಣವೂ ಮತ್ತು ಅವನ ತಂದೆತಾಯಿಗಳೂ ದುಃಖದಿಂದ ಗೋಳಾಡಿದರು. ಎಲ್ಲರಿಗೂ ವಿನಾಶಕಾಲವು ಬಹಬೇಗ ಬರುವುದೆಂದು ತಿಳಿದುಕೊಂಡರು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀ ಕೃಷ್ಣಜನ್ಮ ಖಂಡದ
ನಾರಾಯಣನಾರದ ಸಂವಾದದಲ್ಲಿ ಕಂಸನ ದುಃಸ್ವಪ್ನ ಕಥನವೆಂಬ
ಅರವತ್ತ ಮೂರನೆಯ ಅಧ್ಯಾಯವು ಮುಗಿದುದು.

ಅರವತ್ತ ಮೂರನೆಯ ಅಧ್ಯಾಯದ ಸಾರಾಂಶ

(ಹಿಂದಿನ ಅಧ್ಯಾಯಗಳಲ್ಲಿ ಬರುವ ಕಥಾ ಸಂದರ್ಭಕ್ಕೂ ಈ ಅಧ್ಯಾಯದ ಕಥೆಗೂ ಸಂಬಂಧವಾಗದಿರುವುದರಿಂದ ನಾರದರು 'ಕಂಸನು ಧನುರ್ಯಾಗ ಮಾಡಲು ಕಾರಣವೇನು' ಎಂದು ಪ್ರಶ್ನಿಸಿರುವುದಾಗಿ ಊಹಿಸಿಕೊಂಡು ಅದಕ್ಕೆ ನಾರಾಯಣ ಮಹರ್ಷಿಗಳು ಕಂಸನ ದುಃಸ್ವಪ್ನವನ್ನು ವಿವರಿಸಿರುವುದಾಗಿ ತಿಳಿಯಬೇಕು).

ಕಂಸನ ಮತ್ತು ಅವನ ಪರಿವಾರದವರ ನಾಶವು ಸನ್ನಿಹಿತವಾಗಿರುವುದೆಂದು ಸೂಚಿಸಲು ಒಂದು ರಾತ್ರಿ ಕಂಸನಿಗೆ ದುಃಸ್ವಪ್ನವಾಯಿತು. ಕನಸಿನಲ್ಲಿ ಕಂಸನು ಕೆಂಪು ಬಟ್ಟೆಯನ್ನೂ ಕೆಂಪಾದ ಹೂಮಾಲೆಯನ್ನೂ ಧರಿಸಿದ್ದ ಕಪ್ಪಾದ ಮುದುಕಿಯನ್ನೂ, ಅಗ್ನಿಜ್ವಾಲೆಯಂತೆ ನಾಲಿಗೆಯನ್ನು ನೀಡಿಕೊಂಡು ಅಟ್ಟಹಾಸಮಾಡುತ್ತಿದ್ದ ಕರಾಳ ರಾಕ್ಷಸಿಯನ್ನೂ, ವಿಧವೆಯನ್ನೂ, ವಿಕಟಾಕಾರವುಳ್ಳ, ಕಾಗೆ, ನಾಯಿ, ಕರಡಿ, ಹಂದಿ, ಕೋತಿ ಮತ್ತು ಕತ್ತೆಗಳನ್ನೂ ಕಂಡನು. ಇದೇರೀತಿ ಸ್ವಪ್ನದಲ್ಲಿ ಯಾವುದನ್ನು ನೋಡಬಾರದೋ ಅಂಥ ದೃಶ್ಯಗಳನ್ನೆಲ್ಲ ಕಂಡು ಅಪಶಕುನ ಭೀತನಾದ ಕಂಸನು ತನ್ನ ಬಂಧುಗಳನ್ನೂ ಮಿತ್ರರನ್ನೂ ಪುರೋಹಿತರನ್ನೂ ಕರೆಸಿ ಸಭೆಯಲ್ಲಿ ತನಗಾದ ಕನಸನ್ನು ವಿಜ್ಞಾಪಿಸಿ ಅದರ ಭವಿಷ್ಯವೇನೆಂದು ಕೇಳಿದನು. ಇದನ್ನು ಕೇಳಿದ ಕಂಸನ ಪುರೋಹಿತನಾದ ಸತ್ಯಕನು ಚಿಂತೆಯಿಂದ ಮೂರ್ಛೆಗೊಂಡನು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ

|| ಚತುಃಷಷ್ಟಿತಮೋಽಧ್ಯಾಯ ||

|| ನಾರಾಯಣ ಉವಾಚ ||

ಸರ್ವಂ ಕೃತ್ವಾ ಪರಾಮರ್ಶಂ ಸತ್ಯಕಶ್ಚ ಪುರೋಹಿತಃ ।
ಬುದ್ಧಿಮಾಞ್ಛುಕ್ರಶಿಷ್ಯಶ್ಚ ತಮುವಾಚ ಹಿತಂ ಮುನೇ || ೧ ||

|| ಸತ್ಯಕ ಉವಾಚ ||

ಭಯಂ ತ್ಯಜ ಮಹಾಭಾಗ ಭಯಂ ಕಿಂ ತೇ ಮಯಿ ಸ್ಥಿತೇ ।
ಕುರು ಯಾಗಂ ಮಹೇಶಸ್ಯ ಸರ್ವಾರಿಷ್ಟವಿನಾಶನಂ || ೨ ||

ಅರವತ್ತನಾಲ್ಕನೆಯ ಅಧ್ಯಾಯ.

೧. ಶ್ರೀ ನಾರಾಯಣ :— ಎಲೈ ನಾರದಮುನಿಯೇ, ಬುದ್ಧಿವಂತನೂ, ಶುಕ್ರಾಚಾರ್ಯನ ಶಿಷ್ಯನೂ, ಕಂಸನ ಪುರೋಹಿತನೂ ಆದ ಸತ್ಯಕನು ಕನಸಿನ ಸಮಾಚಾರವನ್ನೆಲ್ಲ ಪರ್ಯಾಲೋಚಿಸಿ ನೋಡಿ ಕಂಸನಿಗೆ ಹಿತವಾದ ಕೆಲವು ವಚನಗಳನ್ನು ಹೇಳಿದನು.

೨. ಸತ್ಯಕ :—ಎಲೈ ಮಹಾಭಾಗನೇ, ಭಯವನ್ನು ಬಿಡು. ನಾನಿರುವಾಗ ನಿನಗೇತರಭಯ. ಸಕಲ ಅರಿಷ್ಟಗಳನ್ನೂ ಪರಿಹರಿಸುವ ಮಹೇಶ್ವರನ ಯಾಗವನ್ನು ಮಾಡು.

ಯಾಗೋ ಧನುರ್ಮಖೋ ನಾಮ ಬಹ್ವನ್ನೋ ಬಹುದಕ್ಷಿಣಃ ।
ದುಃಸ್ವಪ್ನಾನಾಂ ನಾಶಕರಃ ಶತ್ರುಭೀತಿವಿನಾಶಕಃ ॥ ೩ ॥

ಆಧ್ಯಾತ್ಮಿಕಮಾಧಿದೈವಮಾಧಿಭೌತಿಕಮುತ್ಕಟಂ ।
ಏಷಾಂ ತ್ರಿವಿಧೋತ್ಪಾತಾನಾಂ ಖಂಡನೋ ಭೂತಿವರ್ಧನಃ ॥ ೪ ॥

ಯಾಗೇ ಸಮಾಪ್ತೇ ಶಂಭುಶ್ಚ ಜರಾಮೃತ್ಯುಹರಂ ವರಂ ।
ದದಾತಿ ಸಾಕ್ಷಾದ್ಭವತೇ ದಾತಾ ಚ ಸರ್ವಸಂಪದಾಂ ॥ ೫ ॥

ಚಕಾರೇಮಂ ಚ ಯಾಗಂ ಚ ಪುರಾ ಬಾಣೋ ಮಹಾಬಲಃ ।
ನಂದೀ ಪರಶುರಾಮಶ್ಚ ಭಲ್ಲಶ್ಚ ಬಲಿನಾಂ ವರಃ ॥ ೬ ॥

ಪುರಾ ದದೌ ಧನುರಿದಂ ಶಿವೋ ನಂದೀಶ್ವರಾಯ ಚ ।
ಯಾಗೇನ ಭೂತ್ವಾ ಸಿದ್ಧಃ ಸ ದದೌ ಬಾಣಾಯ ಧಾರ್ಮಿಕಃ ॥ ೭ ॥

---

೩. ದುಃಸ್ವಪ್ನಗಳನ್ನು ಪರಿಹರಿಸುವ ಮತ್ತು ಶತ್ರುಗಳ ಭೀತಿಯನ್ನು ನಾಶಗೊಳಿಸುವ ಸಲುವಾಗಿ ಮಾಡುವ ಯಾಗಕ್ಕೆ ಧನುರ್ಯಾಗವೆಂದು ಹೆಸರು. ಆ ಯಾಗದಲ್ಲಿ ಬಹಳ ಅನ್ನದಾನಮಾಡಿ ಯಥೇಚ್ಛವಾಗಿ ದಕ್ಷಿಣೆಯನ್ನು ಕೊಡಬೇಕು

೪. ಆ ಯಾಗವನ್ನು ಮಾಡಿದರೆ ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕವೆಂಬ ಮೂರುವಿಧವಾದ ಉತ್ಕಟ ಕಷ್ಟಗಳು ಪರಿಹಾರವಾಗುವುವಲ್ಲದೆ ಐಶ್ವರ್ಯಾಭಿವೃದ್ಧಿಯಾಗುವುದು.

೫. ಆ ಯಾಗವು ಪರಿಪೂರ್ಣವಾದ ಕೂಡಲೇ ಸಕಲಸಂಪತ್ಪ್ರದಾತೃವಾದ ಶಿವನು ಪ್ರತ್ಯಕ್ಷನಾಗಿ ಜರಾಮೃತ್ಯುಪರಿಹಾರವಾಗುವಂತೆ ವರವನ್ನು ಅನುಗ್ರಹಿಸುವನು.

೬. ಆ ಯಾಗವನ್ನು ಪೂರ್ವದಲ್ಲಿ ಮಹಾಬಲಿಷ್ಠನಾದ ಬಾಣನೂ, ನಂದಿಯೂ, ಪರಶುರಾಮನೂ, ಬಲಿಷ್ಠರಲ್ಲಿ ಶ್ರೇಷ್ಠನಾದ ಭಲ್ಲನೂ ಸಹ ಮಾಡಿದರು.

೭ ಪೂರ್ವದಲ್ಲಿ ಶಿವನು ನಂದೀಶ್ವರನಿಗೆ ಈ ಧನುಸ್ಸನ್ನು ಕೊಟ್ಟನು. ಧನುರ್ಯಾಗಮಾಡಿ ಇಷ್ಟಸಿದ್ಧಿಯನ್ನು ಪಡೆದ ಆ ಧಾರ್ಮಿಕನು ಅನಂತರ ಅದನ್ನು ಬಾಣನಿಗೆ ಕೊಟ್ಟನು.

ಕೃತ್ವಾ ಯೋಗಂ ಮಹಾಸಿದ್ಧೋ ದದೌ ರಾಮಾಯ ಪುಷ್ಕರೇ ।
ತುಭ್ಯಂ ದದೌ ಪರಶುರಾಮಃ ಕೃಪಯಾ ಚ ಕೃಪಾನಿಧಿಃ ॥ ೮ ॥

ಸಹಸ್ರಹಸ್ತಪರಿಮಿತಂ ದೈರ್ಘ್ಯೇಽತಿಕಠಿಣಂ ನೃಪ ।
ದಶಹಸ್ತಪ್ರಶಸ್ತಂ ಚ ಶಂಕರೇಚ್ಛಾವಿನಿರ್ಮಿತಂ ॥ ೯ ॥

ಪಶುಪತೇಃ ಪಾಶುಪತಂ ಯುಕ್ತಯಾನೇನ ದುರ್ವಹಂ ।
ಸರ್ವೇ ಭಂಕ್ತುಂ ನ ಶಕ್ತಾಶ್ಚ ದೇವಂ ನಾರಾಯಣಂ ವಿನಾ ॥ ೧೦ ॥

ಯಾಗೇ ಚ ಧನುಷಃ ಪೂಜಾಂ ಶಂಕರಸ್ಯ ತು ಶಂಕರೇ ।
ಕುರು ಶೀಘ್ರಂ ಶುಭಾರ್ಥಂ ಚ ಸರ್ವಾನ್ಕುರು ನಿಮಂತ್ರಣಂ ॥ ೧೧ ॥

ಅಸ್ಮಿನ್ಯಾಗೇ ಧನುರ್ಭಂಗೋ ಭವೇದ್ಯದಿ ನರಾಧಿಪ ।
ವಿನಾಶೋ ಯಜಮಾನಸ್ಯ ಭವಿಷ್ಯತಿ ನ ಸಂಶಯಃ ॥ ೧೨ ॥

---

೮. ಬಾಣಾಸುರನು ಈ ಯಾಗವನ್ನು ಮಾಡಿ ಸಿದ್ಧಿಯನ್ನು ಪಡೆದನಂತರ ಪುಷ್ಕರಕ್ಷೇತ್ರದಲ್ಲಿ ಪರಶುರಾಮನಿಗೆ ಕೊಟ್ಟನು. ಕೃಪಾನಿಧಿಯಾದ ಆ ಪರಶುರಾಮನು ಅದನ್ನು ಈಗ ನಿನಗೆ ಕೊಟ್ಟಿರುವನು.

೯. ಎಲೈ ರಾಜೇಂದ್ರನೇ, ಶಂಕರನ ಇಚ್ಛಾಮಾತ್ರದಿಂದ ನಿರ್ಮಿತವಾದ ಈ ಧನುಸ್ಸು ಸಾವಿರಮೊಳ ದೀರ್ಘವಾಗಿಯೂ, ಹತ್ತುಮೊಳ ದಪ್ಪವಾಗಿಯೂ ಅತ್ಯಂತ ಕಠಿಣವಾಗಿಯೂ ಇದೆ.

೧೦. ಬಲವಾದ ವಾಹನದಿಂದಲೂ ಹೊರಲಾಗದ ಪಶುಪತಿಯ ಈ ಪಾಶುಪತಧನುಸ್ಸನ್ನು ಶ್ರೀಮನ್ನಾರಾಯಣನು ಹೊರತು ಇತರಾರೂ ಮುರಿಯುವಂತಿಲ್ಲ.

೧೧. ಮಂಗಳಾರ್ಥವಾಗಿ ಮಂಗಳಕರವಾದ ಯಾಗವನ್ನು ಕೈಗೊಂಡು ಶಂಕರನ ಧನುಸ್ಸನ್ನು ಪೂಜಿಸಲು ಬಂಧುಮಿತ್ರರನ್ನೆಲ್ಲ ಯಾಗಕ್ಕೆ ಕರೆಕಳುಹಿಸು.

೧೨. ಎಲೈ ರಾಜೇಂದ್ರನೇ, ಈ ಯಾಗವು ನಡೆಯುತ್ತಿರುವಾಗ ಏನಾದರೂ ಧನುಸ್ಸು ಮುರಿದುಹೋದರೆ ಯಾಗಮಾಡುವ ಯಜಮಾನನಿಗೆ ನಾಶವುಂಟಾಗುವುದರಲ್ಲಿ ಸಂದೇಹವಿಲ್ಲ

ಭಗ್ನೇ ಧನುಷಿ ಯಾಗಶ್ಚ ಭಗ್ನೋ ಭವತಿ ನಿಶ್ಚಿತಂ ।
ಫಲಂ ದದಾತಿ ಕೋऽವಾऽತ್ರ ಚಾನಿಷ್ಪನ್ನೇ ಚ ಕರ್ಮಣಿ ॥ ೧೩ ।

ಬ್ರಹ್ಮಾ ಚ ಧನುಷೋ ಮೂಲೇ ಮಧ್ಯೇ ನಾರಾಯಣಃ ಸ್ವಯಂ ।
ಅಗ್ರೇ ಚೋಗ್ರಪ್ರತಾಪಶ್ಚ ಮಹಾದೇವೋ ಮಹಾಮತೇ ॥ ೧೪ ॥

ಧನುರ್ಹಿ ತ್ರಿವಿಕಾರಂ ಚ ಸದ್ರತ್ನಖಚಿತಂ ವರಂ ।
ಗ್ರೀಷ್ಮಮಧ್ಯಾಹ್ನಮಾರ್ತಂಡಪ್ರಭಾಪ್ರಚ್ಛನ್ನಕಾರಣಂ ॥ ೧೫ ॥

ಅಶಕ್ತಶ್ಚ ನಮಯಿತುಮನಂತಶ್ಚ ಮಹಾಬಲಃ ।
ಸೂರ್ಯಶ್ಚ ಕಾರ್ತಿಕೇಯಶ್ಚ ಕಾ ಕಥಾऽನ್ಯಸ್ಯ ಭೂಮಿಪ ॥ ೧೬ ॥

ತ್ರಿಪುರಾರಿಃ ಪುರಾऽನೇನ ಜಘಾನ ತ್ರಿಪುರಂ ಮುದಾ ।
ನಿರ್ಭಯಂ ಕುರು ಸ್ವಚ್ಛಂದಂ ಮಂಗಲಾರ್ಹಂ ಮಹೋತ್ಸವಂ ॥ ೧೭ ॥

---

೧೩. ಧನುಸ್ಸು ಭಗ್ನವಾದರೆ ಯಾಗವೂ ನಿಶ್ಚಯವಾಗಿ ಭಗ್ನವಾದಂತೆಯೇ ಕರ್ಮವು ಪರಿಪೂರ್ಣವಾಗದಿದ್ದರೆ ಯಾರುತಾನೇ ಫಲವನ್ನು ಕೊಡುವರು ?

೧೪. ಎಲೈ ಮಹಾಬುದ್ಧಿಶಾಲಿಯೇ, ಈ ಶಿವಧನುಸ್ಸಿನ ಮೂಲಪ್ರದೇಶದಲ್ಲಿ ಬ್ರಹ್ಮನೂ, ಮಧ್ಯದಲ್ಲಿ ಸ್ವಯಂ ನಾರಾಯಣನೂ, ಅಗ್ರಭಾಗದಲ್ಲಿ ಉಗ್ರಪ್ರತಾಪನಾದ ಮಹಾದೇವನೂ ನೆಲೆಸಿರುವರು.

೧೫. ಉತ್ತಮರತ್ನಗಳಿಂದ ಖಚಿತವೂ, ಶ್ರೇಷ್ಠವೂ, ಗ್ರೀಷ್ಮ ಋತುವಿನ ಮಧ್ಯಾಹ್ನದ ಸೂರ್ಯನ ತೇಜಸ್ಸನ್ನು ಧಿಕ್ಕರಿಸತಕ್ಕದ್ದೂ ಆದ ಈ ಧನುಸ್ಸು ಬ್ರಹ್ಮ ವಿಷ್ಣು ಶಿವಾತ್ಮಕವಾಗಿ ಮೂರು ರೂಪವನ್ನೊಳಗೊಂಡಿದೆ.

೧೬. ಎಲೈ ರಾಜನೇ, ಈ ಧನುಸ್ಸನ್ನು ಬಗ್ಗಿಸಲು ಮಹಾ ಬಲಿಷ್ಠನಾದ ಅನಂತನೂ, ಸೂರ್ಯದೇವನೂ, ಕಾರ್ತಿಕೇಯನೂ ಸಹ ಅಶಕ್ತರೆಂದಮೇಲೆ ಇತರರ ವಿಷಯವನ್ನು ಹೇಳಬೇಕಾದುದಿಲ್ಲ.

೧೭. ಪೂರ್ವದಲ್ಲಿ ಈ ಧನುಸ್ಸಿನಿಂದಲೇ ಶಿವನು ತ್ರಿಪುರನೆಂಬ ಅಸುರನನ್ನು ಸಂಹರಿಸಿ ತ್ರಿಪುರಾರಿ ಎನಿಸಿದನು. ಆದುದರಿಂದ ನೀನು ನಿರ್ಭಯವಾಗಿ ಈ ಯಾಗವನ್ನು ಮಾಡಿ ಮಂಗಳಕರವಾದ ಮಹೋತ್ಸವವನ್ನು ಆಚರಿಸು.

ಸತ್ಯಕಸ್ಯ ವಚಃ ಶ್ರುತ್ವಾ ಚಂದ್ರವಂಶವಿವರ್ಧನಃ ।
ಉವಾಚ ಕಂಸಃ ಸರ್ವಾರ್ಥೇ ಸತತಂ ಚ ಹಿತೈಷಿಣಂ ॥ ೧೮ ॥

॥ ಕಂಸ ಉವಾಚ ॥

ವಸುದೇವಗೃಹೇ ಜಜ್ಞೇ ಮದ್ವಧೀ ಕುಲನಾಶನಃ ।
ಸ್ವಚ್ಛಂದಂ ನಂದಗೇಹೇ ಚ ವರ್ಧತೇ ನಂದನಂದನಃ ॥ ೧೯ ॥

ಮದ್ಬಂಧುವರ್ಗಾಂಚ್ಛೂರಾಂಶ್ಚ ಮಂತ್ರಿಣಃ ಸುವಿಶಾರದಾನ್ ।
ಭಗಿನೀಂ ಪೂತನಾಂ ಪೂತಾಂ ಜಘಾನ ಬಾಲಕೋ ಬಲೀ ॥ ೨೦ ॥

ಗೋವರ್ಧನಂ ದಧಾರೈಕಕರೇಣ ಬಲವರ್ಧನಃ ।
ಮಹೇಂದ್ರಸ್ಯ ಚ ಶೂರಸ್ಯ ಚಕಾರ ಚ ಪರಾಭವಂ ॥ ೨೧ ॥

ಬ್ರಹ್ಮಾಣಂ ದರ್ಶಯಾಮಾಸ ಬ್ರಹ್ಮರೂಪಂ ಚರಾಚರಂ ।
ನಿವಹಂ ಬಾಲವತ್ಸಾನಾಂ ಚಕಾರ ಕೃತ್ರಿಮಂ ಮುದಾ ॥ ೨೨ ॥

---

೧೮. ಈ ರೀತಿಯಾದ ಸತ್ಯಕನ ಮಾತನ್ನು ಕೇಳಿ ಚಂದ್ರವಂಶವರ್ಧನನಾದ ಕಂಸನು ಎಲ್ಲ ವಿಷಯದಲ್ಲಿಯೂ ತನ್ನ ಹಿತೈಷಿಯಾದ ಆ ಪುರೋಹಿತನನ್ನು ಕುರಿತು ಇಂತೆಂದನು.

೧೯. ಕಂಸ :—ನನ್ನನ್ನು ವಧಿಸಿ ನನ್ನ ಕುಲವನ್ನು ನಾಶಮಾಡುವಂಥವನು ವಸುದೇವನ ಮನೆಯಲ್ಲಿ ಹುಟ್ಟಿ ಸ್ವಚ್ಛಂದವಾಗಿ ನಂದನ ಗೃಹದಲ್ಲಿ ಬೆಳೆಯುತ್ತ ನಂದನಂದನನೆನಿಸಿಕೊಂಡಿರುವನು.

೨೦. ಬಲಿಷ್ಠನಾದ ಆ ಬಾಲಕನು ಶೂರರಾದ ನನ್ನ ಬಂಧುಬಳಗದವರನ್ನೂ, ಯುದ್ಧವಿಶಾರದರಾದ ಮಂತ್ರಿಗಳನ್ನೂ, ನನ್ನ ಸಹೋದರಿಯಾದ ಪೂತನಿಯನ್ನೂ ಸಂಹರಿಸಿದನು.

೨೧. ಈ ಪರಾಕ್ರಮಿಯು ಒಂದೇ ಕೈಯ್ಯಲ್ಲಿ ಗೋವರ್ಧನ ಗಿರಿಯನ್ನು ಎತ್ತಿ ಹಿಡಿದನು. ಅಲ್ಲದೆ ಶೂರನಾದ ಮಹೇಂದ್ರನಿಗೂ ಸಹ ಪರಾಜಯವನ್ನುಂಟು ಮಾಡಿದನು.

೨೨. ಬ್ರಹ್ಮನು ಅವನ ಗೋವುಗಳನ್ನೂ ಗೋಪಾಲಕರನ್ನೂ ಅಪಹರಿಸಿದಾಗ ಕೃತ್ರಿಮವಾದ ಗೋವುಗಳನ್ನೂ ಕರುಗಳನ್ನೂ ಗೋಪಾಲಕರನ್ನೂ ಸೃಷ್ಟಿ ಮಾಡಿ ಬ್ರಹ್ಮನಿಗೂ ತನ್ನ ಶಕ್ತಿಯನ್ನು ತೋರಿಸಿದನು.

ತಮೇವ ಬಲಿನಂ ಹಂತುಂ ಮಂತ್ರಣಾಂ ಕುರು ಸತ್ಯಕ ।
ಮಮ ಶತ್ರುರ್ವಿನಾ ತೇನ ನಾಸ್ತೀಹ ಧರಣೀತಲೇ ॥ ೨೩ ॥

ನಹಿ ಸ್ವರ್ಗೇ ನ ಪಾತಾಲೇ ತ್ರಿಷು ಲೋಕೇಷು ನಿಶ್ಚಿತಂ ।
ಸಂತಿ ಸಂತಶ್ಚ ರಾಜಾನಃ ಸರ್ವತ್ರ ಮಮ ಬಾಂಧವಾಃ ॥ ೨೪ ॥

ಮಹಾತಪಸ್ವೀ ಬ್ರಹ್ಮಾ ಚ ತಪಸ್ವೀ ಶಂಕರಃ ಸ್ವಯಂ ।
ವಿಷ್ಣುಃ ಸರ್ವತ್ರ ಸರ್ವಾತ್ಮಾ ಸಮದರ್ಶೀ ಸನಾತನಃ ॥ ೨೫ ॥

ನಂದಪುತ್ರಂ ನಿಹತ್ಯಾಹಂ ತ್ರಿಷು ಲೋಕೇಷು ಪೂಜಿತಃ ।
ಸಾರ್ವಭೌಮೋ ಭವಿಷ್ಯಾಮಿ ಸಪ್ತದ್ವೀಪೇಶ್ವರೋ ಮಹಾನ್ ॥ ೨೬ ॥

ಸ್ವರ್ಗೇ ನಿಹತ್ಯ ಶಕ್ರಂ ಚ ದುರ್ಬಲಂ ದೈತ್ಯನಿರ್ಜಿತಂ ।
ಭವಿಷ್ಯಾಮಿ ಮಹೇಂದ್ರಶ್ಚ ತತ್ರ ನಿರ್ಜಿತ್ಯ ಭಾಸ್ಕರಂ ॥ ೨೭ ॥

---

೨೩. ಆದುದರಿಂದ ಎಲೈ ಸತ್ಯಕನೇ, ಆ ಬಲಿಷ್ಠನಾದ ಕೃಷ್ಣನನ್ನು ಕೊಲ್ಲಲು ಮಂತ್ರಾಲೋಚನೆಮಾಡು. ಅವನನ್ನು ಬಿಟ್ಟು ಈ ಭೂಮಂಡಲದಲ್ಲಿ ನನಗೆ ಬೇರಾರೂ ಶತ್ರುವಿಲ್ಲ.

೨೪. ಸ್ವರ್ಗದಲ್ಲಿಯೂ, ಪಾತಾಳದಲ್ಲಿಯೂ, ಅಷ್ಟೇಕೆ ಮೂರು ಲೋಕದಲ್ಲಿಯೂ, ನನಗೆ ಬೇರಾರೂ ಶತ್ರುವಿಲ್ಲ. ಎಲ್ಲೆಡೆಯಲ್ಲಿಯೂ ಒಳ್ಳೆಯ ರಾಜರುಗಳು ನನ್ನ ಆಪ್ತಬಂಧುಗಳಾಗಿರುವರು.

೨೫. ಬ್ರಹ್ಮನೂ ಶಂಕರನೂ ಸಹ ಮಹಾ ತಪಸ್ವಿಗಳಾಗಿಯೂ ದಿವ್ಯಜ್ಞಾನಿಗಳಾಗಿಯೂ ಇರುವರು. ಅನಾದಿಯೂ ಸರ್ವಾತ್ಮನೂ ಆದ ವಿಷ್ಣುವೂ ಸಹ ಎಲ್ಲರಲ್ಲಿಯೂ ಸಮಬುದ್ಧಿಯುಳ್ಳವನಾಗಿರುವನು.

೨೬. ನಂದಪುತ್ರನೊಬ್ಬನನ್ನು ಸಂಹರಿಸಿದರೆ ನಾನು ತ್ರಿಲೋಕದಲ್ಲಿಯೂ ಪೂಜ್ಯನಾಗುವೆನು. ಅಲ್ಲದೆ ಸಪ್ತದ್ವೀಪಗಳ ಅಧಿಪತಿಯೂ ಸಾರ್ವಭೌಮನೂ ಆಗುವೆನು.

೨೭. ಅನಂತರ ದುರ್ಬಲನೂ ದೈತ್ಯಜಿತನೂ ಆದ ಇಂದ್ರನನ್ನು ಸಂಹರಿಸಿ ನಾನೇ ಸಾಕ್ಷಾತ್ ಮಹೇಂದ್ರನಾಗುವೆನು. ಅಲ್ಲದೆ, ಪ್ರಚಂಡಪ್ರತಾಪನಾದ ಸೂರ್ಯನನ್ನೂ ನಿಗ್ರಹಿಸುವೆನು.

ಯಕ್ಷ್ಮಗ್ರಸ್ತಂ ಚ ಚಂದ್ರಂ ಚ ಮನ್ಯೈವ ಪೂರ್ವಪೂರುಷಂ ।
ವಾಯುಂ ಕುಬೇರಂ ವರುಣಂ ಯಮಂ ಜೇಷ್ಯಾಮಿ ನಿಶ್ಚಿತಂ ॥ ೨೮ ॥

ಗಚ್ಛ ನಂದವ್ರಜಂ ಶೀಘ್ರಂ ನಂದಂ ಚ ನಂದನಂದನಂ ।
ತದ್ಭ್ರಾತರಂ ಚ ಬಲಿನಂ ಬಲಮಾನಯ ಸಾಂಪ್ರತಂ ॥ ೨೯ ॥

ಕಂಸಸ್ಯ ವಚನಂ ಶ್ರುತ್ವಾ ತಮುವಾಚ ಸ ಸತ್ಯಕಃ ।
ಹಿತಂ ಸತ್ಯಂ ನೀತಿಸಾರಂ ಪರಂ ಸಾಮಯಿಕಂ ತಥಾ ॥ ೩೦ ॥

॥ ಸತ್ಯಕ ಉವಾಚ ॥

ಅಕ್ರೂರಮುದ್ಧವಂ ವಾಽಪಿ ವಸುದೇವಮಥಾಪಿ ವಾ ।
ಪ್ರಸ್ಥಾಪಯ ಮಹಾಭಾಗ ನಂದವ್ರಜಮಭೀಪ್ಸಿತಂ ॥ ೩೧ ॥

ಸತ್ಯಕಸ್ಯ ವಚಃ ಶ್ರುತ್ವಾ ವಸಂತಂ ತತ್ರ ಸಂಸದಿ ।
ಸ್ವರ್ಣಸಿಂಹಾಸನಸ್ಥಂ ಚ ವಸುದೇವಮುವಾಚ ಸಃ ॥ ೩೨ ॥

---

೨೮. ನನ್ನ ವಂಶದ ಪೂರ್ವಪುರುಷನೂ ಕ್ಷಯರೋಗಿಯೂ ಆದ ಚಂದ್ರನನ್ನು ನಿಗ್ರಹಿಸಿ, ಅನಂತರ ವಾಯು, ಕುಬೇರ, ವರುಣ ಮತ್ತು ಯಮರಾಜನನ್ನು ನಿಶ್ಚಯವಾಗಿಯೂ ಗೆಲ್ಲುವೆನು

೨೯. ಆದುದರಿಂದ, ನೀನು ಜಾಗ್ರತೆಯಾಗಿ ನಂದಗೋಕುಲಕ್ಕೆ ಹೋಗಿ, ನಂದಗೋಪನನ್ನೂ, ನಂದಕಿಶೋರನಾದ ಕೃಷ್ಣನನ್ನೂ, ಅವನ ಅಣ್ಣನೂ ಬಲಿಷ್ಠನೂ ಆದ ಬಲರಾಮನನ್ನೂ ಈಗ ಕರೆದುಕೊಂಡು ಬಾ.

೩೦. ಈ ರೀತಿಯಾದ ಕಂಸನ ಮಾತನ್ನು ಕೇಳಿದ ಆ ಸತ್ಯಕನು ಹಿತವೂ, ಸತ್ಯವೂ, ನೀತಿಸಾರವೂ ಸಮಯೋಚಿತವೂ, ಆದ ಕೆಲವು ಮಾತುಗಳನ್ನು ಆ ಕಂಸನಿಗೆ ಹೇಳಿದನು.

೩೧. ಸತ್ಯಕ :—ಎಲೈ ಮಹಾಭಾಗನೇ, ಅಕ್ರೂರನನ್ನೋ ಉದ್ಧವನನ್ನೋ ಅಥವಾ ವಸುದೇವನನ್ನೋ ಹೊರಡಿಸಿ, ನಿನಗಭಿಪ್ರೇತವಾದ ನಂದಗೋಕುಲಕ್ಕೆ ಕಳುಹಿಸು.

೩೨. ಸತ್ಯಕನ ಈ ಮಾತುಗಳನ್ನು ಕೇಳಿ, ಅದೇ ಸಭೆಯಲ್ಲಿ ಸುವರ್ಣದ ಸಿಂಹಾಸನದಲ್ಲಿ ಕುಳಿತಿದ್ದ ವಸುದೇವನನ್ನು ನೋಡಿ ಕಂಸನು ಇಂತೆಂದನು.

॥ ರಾಜೇಂದ್ರ ಉವಾಚ ॥

ತತ್ವಜ್ಞೋ ನೀತಿಶಾಸ್ತ್ರಾಣಾಂ ತ್ವಮುಪಾಯವಿಶಾರದಃ ।
ವ್ರಜ ನಂದವ್ರಜಂ ಬಂಧೋ ವಸುದೇವಸುತಾಲಯಂ ॥ ೩೩ ॥

ವೃಷಭಾನಂ ಚ ನಂದಂ ಚ ಬಲಂ ಚ ನಂದನಂದನಂ ।
ಶೀಘ್ರಮಾನಯ ಯಜ್ಞೇಽತ್ರ ಸರ್ವಂ ಗೋಕುಲವಾಸಿನಂ ॥ ೩೪ ॥

ಗೃಹೀತ್ವಾ ಪತ್ರಿಕಾಂ ದೂತಾ ಗಚ್ಛಂತು ಚ ಚತುರ್ದಿಶಂ ।
ನೃಪಾನ್ಮುನಿಗಣಾನ್ಸರ್ವಾನ್ಕರ್ತುಂ ವಿಜ್ಞಾಪನಂ ಮುದಾ ॥ ೩೫ ॥

ನೃಪಸ್ಯ ವಚನಂ ಶ್ರುತ್ವಾ ಶುಷ್ಕಕಂಠೋಷ್ಠತಾಲುಕಃ ।
ಉವಾಚ ವಚನಂ ಬ್ರಹ್ಮನ್ ಹೃದಯೇನ ವಿದೂಯತಾ ॥ ೩೬ ॥

---

೩೩. ರಾಜೇಂದ್ರ :— ನೀತಿಶಾಸ್ತ್ರ ತತ್ವಜ್ಞನೂ, ಉಪಾಯ ಚತುರನೂ, ಪರಮಬಂಧುವೂ ಆದ ಎಲೈ ವಸುದೇವನೇ, ನಿನ್ನ ಮಗನು ವಾಸಿಸುತ್ತಿರುವ ನಂದ ಗೋಕುಲಕ್ಕೆ ಹೋಗು

೩೪. ಯಜ್ಞದಸಲುವಾಗಿ ವೃಷಭಾನನನ್ನೂ, ನಂದಗೋಪನನ್ನೂ, ಬಲ ರಾಮನನ್ನೂ, ನಂದನಂದನನನ್ನೂ ಮತ್ತು ಗೋಕುಲವಾಸಿಗಳೆಲ್ಲರನ್ನೂ ಜಾಗ್ರತೆ ಯಾಗಿ ಕರೆದುಕೊಂಡು ಬಾ.

೩೫. ಆಹ್ವಾನ ಪತ್ರಿಕೆಯನ್ನು ತೆಗೆದುಕೊಂಡು ದೂತರು ನಾಲ್ಕು ದಿಕ್ಕು ಗಳಿಗೂ ಹೋಗಲಿ. ಹೋಗಿ ಎಲ್ಲ ರಾಜರಿಗೂ ಮತ್ತು ಮುನಿಗಳಿಗೂ ಯಜ್ಞದ ಆಹ್ವಾನವನ್ನು ವಿಜ್ಞಾಪಿಸಲಿ.

೩೬. ಎಲೈ ನಾರದನೇ, ರಾಜನ ಈ ಮಾತುಗಳನ್ನು ಕೇಳಿದ ವಸುದೇವನು ತನ್ನ ಮಗನಿಗೆ ಏನುತೊಂದರೆಯಾದೀತೋ ಎಂದು ಮನಸ್ಸಿನಲ್ಲೇ ವ್ಯಥೆಪಡುತ್ತ ಒಣಗಿಹೋದ ಕಂಠತಾಲುಗಳುಳ್ಳವನಾಗಿ ಈರೀತಿ ಹೇಳಿದನು.

॥ ವಸುದೇವ ಉವಾಚ ॥

ನ ಯುಕ್ತಮತ್ರ ರಾಜೇಂದ್ರ ಗಮನಂ ಮಮ ಸಾಂಪ್ರತಂ ।
ವಿಜ್ಞಾಪಿತುಂ ನಂದವ್ರಜಂ ವಸುದೇವಸ್ಯ ನಂದನಂ ॥ ೩೭ ॥

ಯದ್ಯಾಯಾತೋ ನಂದಪುತ್ರೋ ಯಾಗೇ ತೇ ಚ ಮಹೋತ್ಸವೇ ।
ಅವಶ್ಯಂ ತದ್ವಿರೋಧಶ್ಚ ಭವಿಷ್ಯತಿ ತ್ವಯಾ ಸಹ ॥ ೩೮ ॥

ತಮಹಂ ಚ ಸಮಾನೀಯ ಕಾರಯಿಷ್ಯಾಮಿ ಸಂಯುಗಂ ।
ಇತಿ ಮೇ ನ ಹಿ ಭದ್ರಂ ಚ ವಿಘ್ನಸ್ತಸ್ಯ ತವಾಪಿ ಚ ॥ ೩೯ ॥

ಪಿತ್ರಾ ನೀತೋ ಮೃತಃ ಕೃಷ್ಣ ಇತಿ ಸರ್ವೋ ವದಿಷ್ಯತಿ ।
ವಸುದೇವಃ ಸುತದ್ವಾರಾ ಜಘಾನ ನೃಪಮೇವ ಚ ॥ ೪೦ ॥

ದ್ವಯೋರೇಕತರಸ್ಯಾಪಿ ಸದ್ಯೋ ಮೃತ್ಯುರ್ಭವಿಷ್ಯತಿ ।
ಪತಿಷ್ಯಂತಿ ಚ ಶೂರಾಶ್ಚ ನಾಸ್ತಿ ಯುದ್ಧಂ ನಿರಾಮಿಷಂ ॥ ೪೧ ॥

---

೩೭. ವಸುದೇವ :—ಎಲೈ ರಾಜೇಂದ್ರನೇ, ನಂದಗೋಕುಲಕ್ಕೆ ಹೋಗಿ ವಸುದೇವ ಪುತ್ರನಾದ ಶ್ರೀಕೃಷ್ಣನನ್ನು ಧನುರ್ಯಾಗಕ್ಕೆ ಬರುವಂತೆ ವಿಜ್ಞಾಪಿಸಲು ನನ್ನನ್ನು ನಿಯಮಿಸುತ್ತಿರುವೆ. ಇದಕ್ಕೆ ನಾನು ಹೋಗುವುದುಸರಿಯಲ್ಲ.

೩೮. ಆ ನಂದನಂದನನು ಒಂದುವೇಳೆ ನೀವು ಮಾಡುವ ಯಾಗ ಮಹೋತ್ಸವಕ್ಕೆ ಬಂದುದಾದರೆ ಖಂಡಿತವಾಗಿಯೂ ನಿನ್ನೊಡನೆ ಅವನು ದ್ವೇಷವನ್ನು ಮಾಡಿಕೊಳ್ಳುವನು.

೩೯. ಅವನನ್ನು ನಾನು ಕರೆತಂದು ನಿನ್ನೊಡನೆ ಯುದ್ಧಮಾಡಿಸಿದಂತಾಗುವುದು. ಇದರಿಂದ ನನಗೂ ಕ್ಷೇಮವಿಲ್ಲ. ನಿನಗೂ ಕ್ಷೇಮವಿಲ್ಲ. ಕೃಷ್ಣನಿಗೂ ನೆಮ್ಮದಿ ಇಲ್ಲ.

೪೦. 'ಕೃಷ್ಣನನ್ನು ಅವನ ತಂದೆಯೇ ಹೋಗಿ ಕರೆತಂದನು. ಕಂಸನಿಂದ ಆ ಬಾಲಕನು ಹತನಾದನು' ಎಂದು ಜನರಾಡಿಕೊಳ್ಳುವರು. ಅಥವಾ ವಸುದೇವನು ಮಗನ ಮೂಲಕ ರಾಜನನ್ನೇ ಕೊಲ್ಲಿಸಿದನೆಂದು ಜನರು ಹೇಳುವಂತಾಗುವುದು.

೪೧. ನಿಮ್ಮಿಬ್ಬರಲ್ಲಿ ಯಾರೊಬ್ಬರಿಗಾದರೂ ಕೂಡಲೇ ಮೃತ್ಯುವು ಸಂಭವಿಸುವುದು. ಅಲ್ಲದೆ ಯುದ್ಧದಲ್ಲಿ ಅನೇಕ ಶೂರರು ಮೃತರಾಗುವರು. ರಕ್ತಮಾಂಸಗಳ ಸೂರೆಯಾಗದ ಯುದ್ಧವಿರುವುದಿಲ್ಲ.

ವಸುದೇವವಚಃ ಶ್ರುತ್ವಾ ರಕ್ತಪಂಕಜಲೋಚನಃ ।
ಖಡ್ಗಂ ಗೃಹೀತ್ವಾ ತಂ ಹಂತುಂ ಪ್ರಯಯೌ ನೃಪತೀಶ್ವರಃ ॥ ೪೨ ॥

ಹಾಹೇತಿ ಕೃತ್ವಾ ಪುತ್ರಂ ಚ ವಾರಯಾಮಾಸ ತತ್ಕ್ಷಣಂ ।
ಉಗ್ರಸೇನೋ ಮಹಾರಾಜಮತೀವ ಬಲವಾನ್ಮುನೇ ॥ ೪೩ ॥

ಸ್ವಪೀಠಾದ್ವಸುದೇವಶ್ಚ ಕೋಪಾವಿಷ್ಟೋ ಗೃಹಂ ಯಯೌ ।
ಅಕ್ರೂರಂ ಪ್ರೇರಯಾಮಾಸ ಗಂತುಂ ನಂದವ್ರಜಂ ನೃಪಃ ॥ ೪೪ ॥

ದೂತಾನ್ಪ್ರಸ್ಥಾಪಯಾಮಾಸ ಶೀಘ್ರಂ ಪ್ರತಿದಿಶಂ ತಥಾ ।
ಆಯಯುರ್ಮುನಯಃ ಸರ್ವೇ ನೃಪಾಶ್ಚ ಸಪರಿಚ್ಛದಾಃ ॥ ೪೫ ॥

ದಿಕ್ಪಾಲಾಶ್ಚ ಸುರಾಃ ಸರ್ವೇ ಬ್ರಾಹ್ಮಣಾಶ್ಚ ತಪಸ್ವಿನಃ ।
ಸನಕಶ್ಚ ಸನಂದಶ್ಚ ವೋಢುಃ ಪಂಚಶಿಖಸ್ತಥಾ ॥ ೪೬ ॥

---

೪೨. ಈ ರೀತಿಯಾದ ವಸುದೇವನ ಮಾತನ್ನು ಕೇಳಿ ರಾಜೇಂದ್ರನಾದ ಕಂಸನು ಕೆಂದಾವರೆಯಂತಿರುವ ಕಣ್ಣುಗಳುಳ್ಳವನಾಗಿ ಕತ್ತಿಯನ್ನು ಹಿರಿದುಕೊಂಡು ಅವನನ್ನು ಕೊಲ್ಲಲು ಹೊರಟನು.

೪೩. ಎಲೈ ಮುನಿಯೇ, ಆಗ ಬಲಿಷ್ಠನಾದ ಉಗ್ರಸೇನನು 'ಅಯ್ಯೋ ಅಯ್ಯೋ' ಎನ್ನುತ್ತ ಮಹಾರಾಜನಾದ ತನ್ನ ಮಗನನ್ನು ಆ ಕ್ಷಣದಲ್ಲಿ ಆ ಅಕಾರ್ಯದಿಂದ ತಡೆದನು.

೪೪. ವಸುದೇವನೂ ಸಹ ಕೋಪಾವಿಷ್ಟನಾಗಿ ತನ್ನ ಪೀಠದಿಂದೆದ್ದು ಮನೆಗೆ ತೆರಳಿದನು. ಅನಂತರ ರಾಜನು ಅಕ್ರೂರನನ್ನು ಕುರಿತು ನಂದಗೋಕುಲಕ್ಕೆ ಹೋಗುವಂತೆ ಹೇಳಿದನು.

೪೫. ಹಾಗೆಯೇ ಜಾಗ್ರತೆಯಾಗಿ ಸಕಲ ದಿಕ್ಕುಗಳಿಗೂ ದೂತರನ್ನು ಕಳುಹಿಸಿ ಆಹ್ವಾನ ಪತ್ರವನ್ನು ಹಂಚಿಸಿದನು. ಕೂಡಲೇ ಯಾಗಕ್ಕೆ ಅನೇಕ ಮುನಿಗಳೂ ರಾಜರೂ ಸಹ ಪರಿವಾರ ಸಮೇತರಾಗಿ ಬಂದರು.

೪೬. ಅಷ್ಟದಿಕ್ಪಾಲಕರೂ, ಸಕಲದೇವತೆಗಳೂ, ಬ್ರಾಹ್ಮಣರೂ, ತಪಸ್ವಿಗಳೂ ಬಂದುದಲ್ಲದೆ ಸನಕಸನಂದಾದಿ ಮಹರ್ಷಿಗಳೂ ವೋಢು ಪಂಚಶಿಖ ಮುಂತಾದವರೂ ಸಹ ಬಂದರು

ಸನತ್ಕುಮಾರೋ ಭಗವಾನ್ಪ್ರಜ್ವಲನ್ಬ್ರಹ್ಮತೇಜಸಾ ।
ಕಪಿಲಶ್ಚಾಸುರಿಃ ಪೈಲಃ ಸುಮಂತುಶ್ಚ ಸನಾತನಃ ॥ ೪೭ ॥

ಪುಲಹಶ್ಚ ಪುಲಸ್ತ್ಯಶ್ಚ ಭೃಗುಶ್ಚ ಕ್ರತುರಂಗಿರಾಃ ।
ಮರೀಚಿಃ ಕಶ್ಯಪಶ್ಚೈವ ದಕ್ಷೋಽತ್ರಿಶ್ಚ್ಯವನಸ್ತಥಾ ॥ ೪೮ ॥

ಭರದ್ವಾಜಶ್ಚ ವ್ಯಾಸಶ್ಚ ಗೌತಮಶ್ಚ ಪರಾಶರಃ ।
ಪ್ರಚೇತಾಶ್ಚ ವಸಿಷ್ಠಶ್ಚ ಸಂವರ್ತಶ್ಚ ಬೃಹಸ್ಪತಿಃ ॥ ೪೯ ॥

ಕಾತ್ಯಾಯನೋ ಯಾಜ್ಞ್ಯವಲ್ಕ್ಯೋಽಪ್ಯುತ್ತಂಕಃ ಸೌಭರಿಸ್ತಥಾ ।
ಪರ್ವತೋ ದೇವಲಶ್ಚೈವ ಜೈಗೀಷವ್ಯಶ್ಚ ಜೈಮಿನಿಃ ॥ ೫೦ ॥

ವಿಶ್ವಾಮಿತ್ರಶ್ಚ ಸುತಪಾಃ ಪಿಪ್ಪಲಃ ಶಾಕಟಾಯನಃ ।
ಜಾಬಾಲಿರ್ಜಾಂಗಲಿಶ್ಚೈವಾಪಿಶಲಿಶ್ಚ ಶಿಲಾಲಿಕಃ ॥ ೫೧ ॥

---

೪೭. ಪೂಜ್ಯನಾದ ಸನತ್ಕುಮಾರನೂ ಸಹ ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುತ್ತ ಅಲ್ಲಿಗೆ ಬಂದನು. ಕಪಿಲ. ಆಸುರಿ, ಪೈಲ, ಸುಮಂತು, ಸನಾತನ ಮುಂತಾದ ಋಷಿಗಳೂ ಆ ಧನುರ್ಯಾಗಕ್ಕೆ ಬಂದರು.

೪೮. ಪುಲಹನೂ, ಪುಲಸ್ತ್ಯನೂ, ಭೃಗುವೂ, ಕ್ರತು ಮತ್ತು ಅಂಗಿರಸ್ಸೂ ಸಹ ಬಂದುದಲ್ಲದೆ ಮರೀಚಿ, ಕಶ್ಯಪ, ದಕ್ಷ. ಅತ್ರಿ ಮತ್ತು ಚ್ಯವನ ಮುಂತಾದ ಋಷಿಗಳೂ ಆ ಯಾಗಕ್ಕೆ ಬಂದು ಸೇರಿದರು.

೪೯. ಭರದ್ವಾಜ, ವ್ಯಾಸ, ಗೌತಮ ಮತ್ತು ಪರಾಶರರೂ, ಪ್ರಚೇತ, ವಸಿಷ್ಠ, ಸಂವರ್ತ ಮತ್ತು ಬೃಹಸ್ಪತಿಗಳೂ ಆ ಯಾಗಕ್ಕೆ ಬಂದು ಸೇರಿದರು.

೫೦. ಕಾತ್ಯಾಯನ, ಯಾಜ್ಞವಲ್ಕ್ಯ, ಉತ್ತಂಕ ಮತ್ತು ಸೌಭರಿಯೂ, ಪರ್ವತ ದೇವಲ, ಜೈಗೀಷವ್ಯ ಮತ್ತು ಜೈಮಿನಿಗಳೂ ಯಾಗಕ್ಕಾಗಿ ಬಂದರು.

೫೧. ವಿಶ್ವಾಮಿತ್ರ, ಸುತಪ, ಪಿಪ್ಪಲ ಮತ್ತು ಶಾಕಟಾಯನರೂ, ಜಾಬಾಲಿ, ಜಾಂಗಲಿ, ಆಪಿಶಲಿ ಮತ್ತು ಶಿಲಾಲಿಕ ಮುಂತಾದ ಋಷಿಗಳೂ ಬಂದರು.

ಆಸ್ತಿಕಶ್ಚ ಜರತ್ಕಾರುಸ್ತಥಾ ಕಲ್ಯಾಣಮಿತ್ರಕಃ ।
ದುರ್ವಾಸಾ ವಾಮದೇವಶ್ಚ ಋಷ್ಯಶೃಂಗೋ ವಿಭಾಂಡಕಃ ॥ ೫೨ ॥

ಪಥಿಃ ಕವಿಃ ಕಣಾದಶ್ಚ ಕೌಶಿಕಃ ಪಾಣಿನಿಸ್ತಥಾ ।
ಕೌತ್ಸೋಽಘಮರ್ಷಣಶ್ಚೈವ ವಾಲ್ಮೀಕಿರ್ಲೋಮಹರ್ಷಣಃ ॥ ೫೩ ॥

ಮಾರ್ಕಂಡೇಯೋ ಮೃಕಂಡುಶ್ಚ ಪರಶುರಾಮಶ್ಚ ಸಾಂಕೃತಿಃ ।
ಅಗಸ್ತ್ಯಶ್ಚ ತಥಾ ವಾಂತಸ್ತಥಾಽನ್ಯೇ ಮುನಯೋ ಮುನೇ ॥ ೫೪ ॥

ಸಶಿಷ್ಯಾಶ್ಚ ಸಪುತ್ರಾಶ್ಚ ಬ್ರಾಹ್ಮಣಾಶ್ಚ ತಪಸ್ವಿನಃ ।
ಜರಾಸಂಧೋ ದಂತವಕ್ತ್ರೋ ದಾಂಭಿಕೋ ದ್ರವಿಡಾಧಿಪಃ ॥ ೫೫ ॥

ಶಿಶುಪಾಲೋ ಭೀಷ್ಮಕಶ್ಚ ಭಗದತ್ತಶ್ಚ ಮುದ್ಗಲಃ ।
ಧಾರ್ತರಾಷ್ಟ್ರೋ ಧೂಮಕೇಶೋ ಧೂಮ್ರಕೇತುಶ್ಚ ಶಂಬರಃ ॥ ೫೬ ॥

---

೫೨. ಆಸ್ತಿಕ, ಜರತ್ಕಾರು ಮತ್ತು ಕಲ್ಯಾಣಮಿತ್ರಕರೂ, ದುರ್ವಾಸ, ವಾಮದೇವ, ಋಷ್ಯಶೃಂಗ ಮತ್ತು ವಿಭಾಂಡಕ ಋಷಿಗಳೂ ಬಂದರು.

೫೩. ಪಥಿ, ಕವಿ, ಕಣಾದ, ಕೌಶಿಕ, ಪಾಣಿನಿ ಮುಂತಾದವರೂ, ಕೌತ್ಸ, ಅಘಮರ್ಷಣ, ವಾಲ್ಮೀಕಿ ಮತ್ತು ಲೋಮಹರ್ಷಣಾದಿಗಳೂ ಆ ಯಾಗಕ್ಕೆ ಬಂದು ಸೇರಿದರು.

೫೪. ಮಾರ್ಕಂಡೇಯ, ಮೃಕಂಡು, ಪರಶುರಾಮ ಮತ್ತು ಸಾಂಕೃತಿಯರು ಅಗಸ್ತ್ಯ, ವಾಂತ ಮುಂತಾದ ಇತರ ಋಷಿಗಳೂ ಆ ಯಾಗಕ್ಕೆ ಬಂದು ಸೇರಿದರು.

೫೫. ತಪಸ್ವಿಗಳೂ ಬ್ರಾಹ್ಮಣರೂ ಸಹ ತಮ್ಮ ಶಿಷ್ಯರು ಮತ್ತು ಪುತ್ರರೊಡಗೂಡಿ ಅಲ್ಲಿಗೆ ಬಂದರು. ಜರಾಸಂಧನೂ, ದಂತವಕ್ತ್ರನೂ, ದಾಂಭಿಕನೂ, ದ್ರವಿಡಾಧಿಪನೂ ಸಹ ಅಲ್ಲಿಗೆ ಬಂದರು.

೫೬. ಶಿಶುಪಾಲ, ಭೀಷ್ಮಕ, ಭಗದತ್ತ, ಮುದ್ಗಲ, ಧಾರ್ತರಾಷ್ಟ್ರ, ಧೂಮಕೇಶ, ಧೂಮ್ರಕೇತು ಮತ್ತು ಶಂಬರ ಮುಂತಾದ ರಾಜರೂ ಸಹ ಬಂದರು.

ಶಲ್ಯಃ ಸತ್ರಾಜಿತಃ ಶಂಕುರ್ನೃಪಾಶ್ಚಾನ್ಯೇ ಮಹಾಬಲಾಃ ।
ಭೀಷ್ಮೋ ದ್ರೋಣಃ ಕೃಪಾಚಾರ್ಯೋ ಹ್ಯಶ್ವತ್ಥಾಮಾ ಮಹಾಬಲಃ ॥ ೫೭ ॥

ಭೂರಿಶ್ರವಾಶ್ಚ ಶಾಲ್ವಶ್ಚ ಕೈಕೇಯಃ ಕೌಶಲಸ್ತಥಾ ।
ಸರ್ವಾನ್ಸಂಭಾಷಯಾಮಾಸ ಮಹಾರಾಜೋ ಯಥೋಚಿತಂ ।
ಸತ್ಯಕೋ ಯಜ್ಞದಿವಸಂ ಚಕಾರ ಚ ಶುಭಕ್ಷಣಂ ॥ ೫೮ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣನಾರದಸಂವಾದೇ ಕಂಸಯಜ್ಞ
ಕಥನಂ ನಾಮ ಚತುಃಷಷ್ಟಿತಮೋಽಧ್ಯಾಯಃ

---

೫೭. ಶಲ್ಯ, ಸತ್ರಾಜಿತ, ಶಂಕು ಮುಂತಾದ ಮಹಾ ಬಲಿಷ್ಠರಾದ ರಾಜರೂ, ಭೀಷ್ಮದ್ರೋಣರೂ, ಕೃಪಾಚಾರ್ಯರೂ, ಮಹಾ ಬಲಶಾಲಿಯಾದ ಅಶ್ವತ್ಥಾಮನೂ ಸಹ ಆ ಯಾಗಕ್ಕೆ ಬಂದರು.

೫೮ ಭೂರಿಶ್ರವ, ಶಾಲ್ವ, ಕೇಕಯ ಮತ್ತು ಕೋಸಲ ರಾಜರೂ ಸಹ ಬಂದರು. ಮಹಾರಾಜನಾದ ಕಂಸನು ಯಥೋಚಿತವಾಗಿ ಎಲ್ಲರನ್ನೂ ಸ್ವಾಗತಿಸಿದನು. ಸತ್ಯಕನು ಯಜ್ಞಮಾಡಲು ಶುಭಕರವಾದ ದಿವಸವನ್ನು ನಿಶ್ಚಯಿಸಿದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದ ಉತ್ತರಾರ್ಧದ
ನಾರಾಯಣ ನಾರದಸಂವಾದದಲ್ಲಿ ಕಂಸನು ಮಾಡಿದ ಯಜ್ಞವನ್ನು
ತಿಳಿಸುವ ಅರವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಅರವತ್ತನಾಲ್ಕನೆಯ ಅಧ್ಯಾಯದ ಸಾರಾಂಶ.

ಕಂಸನ ಪುರೋಹಿತನಾದ ಸತ್ಯಕನು ಕಂಸನ ದುಃಸ್ವಪ್ನ ವೃತ್ತಾಂತವನ್ನೆಲ್ಲಾ ಕೇಳಿ ಆ ಅಪಶಕುನದ ಪರಿಹಾರಕ್ಕಾಗಿ ಧನುರ್ಯಾಗವನ್ನು ಮಾಡಬೇಕೆಂದು ತಿಳಿಸಿದನು. ಆ ಯಾಗವನ್ನು ಮಾಡಿದರೆ ಆಧ್ಯಾತ್ಮಿಕ, ಆಧಿದೈವಿಕ ಮತ್ತು ಆಧಿಭೌತಿಕವಾದ ವಿಪತ್ತುಗಳು ಪರಿಹಾರವಾಗುವುದಾಗಿ ತಿಳಿಸಿ, ಆ ಶಿವಧನುಸ್ಸು ಕಂಸನಿಗೆ ಬಂದ ಕ್ರಮವನ್ನೂ, ಆ ಯಾಗ ಮಾಡುವ ವಿಧಾನವನ್ನೂ ವಿಸ್ತಾರವಾಗಿ ಹೇಳಿದನು. ಆಗ ಕಂಸನು ಈ ಯಾಗ ಮಾಡುವ ನೆಪದಿಂದ ತನ್ನ ಶತ್ರುವಾದ ಶ್ರೀಕೃಷ್ಣನನ್ನು ಕರೆಸಿ ಕೊಲ್ಲಲು ಸಂಚುಮಾಡಿ, ಅವನನ್ನು ನಂದಗೋಕುಲದಿಂದ ಕರೆತರುವಂತೆ ವಸುದೇವನಿಗೇ ಆಜ್ಞಾಪಿಸಿದನು. ಅದಕ್ಕೆ ವಸುದೇವನು ಒಪ್ಪದಿರಲು ಅಕ್ರೂರನನ್ನು ಕಳುಹಿಸಿದನು. ಅಲ್ಲದೆ ಲೋಕದ ಸಮಸ್ತ ರಾಜರುಗಳಿಗೂ ಮುನಿಗಳಿಗೂ ಯಾಗಕ್ಕೆ ಬರಲು ಆಹ್ವಾನವಿತ್ತನು. ಸಕಲ ಮುನಿಗಳೂ, ರಾಜಾಧಿರಾಜರುಗಳೂ ಧನುರ್ಯಾಗಕ್ಕೆ ಬಂದು ಸೇರಿದರು. ಪುರೋಹಿತನಾದ ಸತ್ಯಕನು ಯಾಗ ಮಾಡಲು ಶುಭ ಮುಹೂರ್ತವನ್ನು ನಿಶ್ಚಯಿಸಿದನು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಪಂಚಷಷ್ಟಿತಮೋಽಧ್ಯಾಯಃ ॥

॥ ಶ್ರೀ ನಾರಾಯಣ ಉವಾಚ ॥

ಕಂಸಸ್ಯ ವಚನಂ ಶ್ರುತ್ವಾ ಸೋಽಕ್ರೂರೋ ಧರ್ಮಿಣಾಂ ವರಃ ।
ಉವಾಚ ಚೋದ್ಧವಂ ಶಾಂತಂ ಶಾಂತಃ ಸಂಹೃಷ್ಟಮಾನಸಃ ॥ ೧ ॥

॥ ಅಕ್ರೂರ ಉವಾಚ ॥

ಸುಪ್ರಭಾತಾಽದ್ಯ ರಜನೀ ಬಭೂವ ಮೇ ಶುಭಂ ದಿನಂ ।
ತುಷ್ಟಾಶ್ಚ ಗುರವೋ ವಿಪ್ರಾ ದೇವಾ ಮಾಮಿತಿ ನಿಶ್ಚಿತಂ ॥ ೨ ॥

ಕೋಟಿಜನ್ಮಾರ್ಜಿತಂ ಪುಣ್ಯಂ ಮಮ ಸ್ವಯಮುಪಸ್ಥಿತಂ ।
ಬಭೂವ ಮೇ ಸಮುತ್ಪನ್ನಂ ಯದ್ಯತ್ಕರ್ಮ ಶುಭಾಶುಭಂ ॥ ೩ ॥

ಅರವತ್ತೈದನೆಯ ಅಧ್ಯಾಯ

೧. ಶ್ರೀ ನಾರಾಯಣ :— ಕಂಸನ ಮಾತನ್ನು ಕೇಳಿ ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಅಕ್ರೂರನು ಸಂತುಷ್ಟಾಂತರಂಗನಾಗಿ ಶಾಂತನಾದ ಉದ್ಧವನನ್ನು ಕುರಿತು ಶಾಂತರೀತಿಯಿಂದಲೇ ಉತ್ತರಕೊಟ್ಟನು.

೨. ಅಕ್ರೂರ :— ಇಂದಿನ ರಾತ್ರಿಯು ಕಳೆದು ಸುಪ್ರಭಾತವಾಗಿ ಈ ದಿನವು ನನಗೆ ಶುಭದಿನವಾಗಿ ಪರಿಣಮಿಸಿತು. ನನ್ನ ವಿಷಯದಲ್ಲಿ ಗುರುಗಳೂ, ಬ್ರಾಹ್ಮಣರೂ ದೇವತೆಗಳೂ ಸಹ ನಿಶ್ಚಯವಾಗಿಯೂ ಪ್ರಸನ್ನರಾಗಿದ್ದಾರೆ

೩. ನಾನು ಕೋಟಿ ಜನ್ಮಗಳಿಂದ ಗಳಿಸಿದ್ದ ಪುಣ್ಯವು ಇಂದು ಫಲಿಸಿತು. ನಾನು ಮಾಡಿದ್ದ ಶುಭಾಶುಭ ಕರ್ಮಗಳೆಲ್ಲ ಇಂದು ಫಲೋನ್ಮುಖವಾಗಿರುವುವು.

ಛಿಚ್ಛೇದ ಬಂಧನಿಗಡಂ ಮಮ ಬದ್ಧಸ್ಯ ಕರ್ಮಣಾ ।
ಕಾರಾಗಾರಾಚ್ಚ ಸಂಸಾರಾನ್ಮುಕ್ತೋ ಯಾಮಿ ಹರೇಃ ಪದಂ ॥ ೪ ॥

ಸುಹೃದರ್ಥೀ ಕೃತೋಽಹಂ ಚ ಕಂಸೇನ ವಿದುಷಾ ರುಷಾ ।
ವರೇಣ ತುಲ್ಯೋ ದೇವಸ್ಯ ಕ್ರೋಧೋ ಮಮ ಬಭೂವ ಹ ॥ ೫ ॥

ವ್ರಜರಾಜಂ ಸಮಾಹರ್ತುಂ ವ್ರಜಂ ಯಾಸ್ಯಾಮಿ ಸಾಂಪ್ರತಂ ।
ದ್ರಕ್ಷ್ಯಾಮಿ ಪರಮಂ ಪೂಜ್ಯಂ ಭುಕ್ತಿಮುಕ್ತಿಪ್ರದಾಯಿನಂ ॥ ೬ ॥

ನವೀನಜಲದಶ್ಯಾಮಂ ನೀಲೇಂದೀವರಲೋಚನಂ ।
ಪೀತವಸ್ತ್ರಸಮಾಯುಕ್ತ ಕಟಿದೇಶವಿರಾಜಿತಂ ॥ ೭ ॥

ಧೂಲಿಧೂಸರಿತಾಂಗಂ ಚ ಕಿಂ ವಾ ಚಂದನಚರ್ಚಿತಂ ।
ಅಥವಾ ನವನೀತಾಕ್ತಮಂಗಂ ದ್ರಕ್ಷ್ಯಾಮಿ ಸಸ್ಮಿತಂ ॥ ೮ ॥

---

೪. ಕರ್ಮ ಸಂಕಲೆಗಳಿಂದ ಬದ್ಧನಾದ ನನ್ನ ಕರ್ಮಬಂಧನಗಳೆಲ್ಲ ಇಂದು ಕತ್ತರಿಸಿಹೋದವು. ಸಂಸಾರವೆಂಬ ಕಾರಾಗೃಹದಿಂದ ಮುಕ್ತನಾಗಿ ಶ್ರೀ ಹರಿಯ ಪದವಿಯನ್ನು ಸೇರಲಿರುವೆನು.

೫. ವಸುದೇವನಮೇಲೆ ಕೋಪಗೊಂಡಿರುವ ವಿದ್ವಾಂಸನಾದ ಕಂಸನು ಇಂದು ಮಿತ್ರನಾದ ನನ್ನಲ್ಲಿ ಅರ್ಥಿಯಾಗಿದ್ದಾನೆ. ಆ ಪ್ರಭುವು ನನ್ನಮೇಲೆ ಕೋಪಗೊಂಡರೂ ಅದು ವರಪ್ರದಾನ ಮಾಡಿದಂತಾಗಿದೆ.

೬. ಈಗ ವ್ರಜರಾಜನಾದ ಶ್ರೀ ಕೃಷ್ಣನನ್ನು ಕರೆತರಲು ನಂದಗೋಕುಲಕ್ಕೆ ಹೋಗುವೆನು. ಅಲ್ಲಿ ಪರಮಪೂಜ್ಯನೂ ಭುಕ್ತಿ ಮುಕ್ತಿ ಪ್ರದಾಯಕನೂ ಆದ ಪರಮಾತ್ಮನನ್ನು ನೋಡುವೆನು.

೭. ನವಮೇಘದಂತೆ ಶ್ಯಾಮಲವರ್ಣನೂ, ಕನ್ನೈದಿಲೆಯಂತೆ ಮನೋಹರವಾದ ಕಣ್ಣುಳ್ಳವನೂ, ಪೀತಾಂಬರದಿಂದ ಶೋಭಿಸುವ ಕಟಿ (ಸೊಂಟ) ಪ್ರದೇಶವುಳ್ಳವನೂ ಆದ ಪರಮಾತ್ಮನನ್ನು ನೋಡುವೆನು.

೮. ಆ ನಂದಗೋಕುಲದಲ್ಲಿ ಧೂಲಿಯಲ್ಲಿ ಓಡಾಡಿ ಧೂಸರಾಂಗನಾಗಿರುವ ಅಥವಾ ದಿವ್ಯಚಂದನವನ್ನು ಅಂಗಾಗಗಳಿಗೂ ಲೇಪಿಸಿಕೊಂಡಿರುವ, ಇಲ್ಲವಿದ್ದರೆ ಮೈಗೆಲ್ಲ ಬೆಣ್ಣೆಯನ್ನು ಬಳಿದುಕೊಂಡು ಸ್ಮಿತಮುಖನಾಗಿರುವ ಪರಮಾತ್ಮನನ್ನು ಇಂದು ನೋಡುವೆನು.

ಕಿಂ ವಾ ವಿನೋದಮುರಲೀಂ ವಾದಯಂತಂ ಮನೋಹರಂ |
ಕಿಂ ವಾ ಗವಾಂ ಸಮೂಹಂ ಚ ಚಾರಯಂತಮಿತಸ್ತತಃ ॥ ೯ ॥

ಕಿಂ ವಾ ವಸಂತಂ ಗಚ್ಛಂತಂ ಶಯಾನಂ ವಾ ಸುನಿಶ್ಚಿತಂ |
ನಿದೇಶಂ ಕೀದೃಶಂ ಚಾದ್ಯ ಸುಪ್ರಾಪ್ಯಾತ್ರ ಚ ಶುಭೇ ಕ್ಷಣೇ ॥ ೧೦ ॥

ಯತ್ಪಾದಪದ್ಮಂ ಧ್ಯಾಯಂತೇ ಬ್ರಹ್ಮವಿಷ್ಣುಶಿವಾದಯಃ |
ನ ಹಿ ಜಾನಾತಿ ಯಸ್ಯಾಂತಮನಂತೋಽನಂತವಿಗ್ರಹಃ ॥ ೧೧ ॥

ಯತ್ಪ್ರಭಾವಂ ನ ಜಾನಂತಿ ದೇವಾಃ ಸಂತಶ್ಚ ಸಂತತಂ |
ತಸ್ಯ ಸ್ತೋತ್ರೇ ಜಡೀಭೂತಾ ಭೀತಾ ದೇವೀ ಸರಸ್ವತೀ ॥ ೧೨ ॥

ದಾಸೀನಿಯುಕ್ತಾ ಯದ್ದಾಸ್ಯೇ ಮಹಾಲಕ್ಷ್ಮೀಶ್ಚ ಲಕ್ಷಿತಾ |
ಗಂಗಾ ಯಸ್ಯ ಪದಾಂಭೋಜಾನ್ನಿಃಸೃತಾ ಸತ್ವರೂಪಿಣೀ ॥ ೧೩ ॥

---

೯. ಮನೋಹರವಾದ ಕೊಳಲನ್ನು ವಿನೋದವಾಗಿ ಬಾರಿಸುತ್ತಲೋ, ಅಥವಾ ಬೃಂದಾವನದಲ್ಲಿ ಗೋವುಗಳನ್ನು ಮೇಯಿಸುತ್ತ ಅತ್ತಿತ್ತ ಚಲಿಸುತ್ತಲೋ ಇರುವ ಮುರಳೀಧರನನ್ನು ಇಂದು ನೋಡುವೆನು.

೧೦. ಒಂದೆಡೆ ಕುಳಿತಿರುವ, ಅಥವಾ ಸಂಚರಿಸುತ್ತಿರುವ, ಅಥವಾ ಮಲಗಿರುವ ಗೋಪಾಲಕನನ್ನು ನಿಶ್ಚಯವಾಗಿಯೂ ನೋಡುವೆನು. ಈ ದಿವಸ ಶುಭ ಮುಹೂರ್ತದಲ್ಲಿ ಕಂಸನ ಈ ನಿದೇಶವು ದೊರೆತುದು ನನ್ನ ಪುಣ್ಯ.

೧೧. ಬ್ರಹ್ಮ ವಿಷ್ಣು ಶಿವನೇ ಮುಂತಾದವರು ಯಾವ ಶ್ರೀಕೃಷ್ಣಪರಮಾತ್ಮನ ಪಾದಕಮಲಗಳನ್ನು ಸರ್ವದಾ ಧ್ಯಾನಿಸುತ್ತಿರುವರು. ಈ ತ್ರಿಮೂರ್ತಿಗಳೂ ಮತ್ತು ಆದಿಶೇಷನೂಸಹ ಅನಂತರೂಪನಾದ ಆ ಶ್ರೀಕೃಷ್ಣನ ಆದ್ಯಂತವನ್ನು ತಿಳಿಯಲಾರರು.

೧೨. ದೇವತೆಗಳೂ ಮತ್ತು ಸದ್ಭಕ್ತರೂ ಸಹ ಯಾವ ಪರಮಾತ್ಮನ ಸಂತತ ಪ್ರಭಾವವನ್ನು ತಿಳಿಯಲಾರರು. ಅವನನ್ನು ಸ್ತುತಿಸಲು ಹೊರಟು ಸಾಧ್ಯವಾಗದೆ ಹೆದರಿ ಸರಸ್ವತೀದೇವಿಯು ಜಡಳಾದಳು.

೧೩. ಮಹಾಲಕ್ಷ್ಮಿಯು ಆ ಶ್ರೀಕೃಷ್ಣ ಪರಮಾತ್ಮನ ದಾಸ್ಯವೃತ್ತಿಯಲ್ಲಿ ನಿಯಮಿತಳಾಗಿರುವಳು. ಸತ್ವಸ್ವರೂಪಿಣಿಯಾದ ಗಂಗೆಯೂ ಸಹ ಅವನ ಪಾದ ಕಮಲಗಳಿಂದ ಆವಿರ್ಭವಿಸಿದಳು.

ಜನ್ಮಮೃತ್ಯುಜರಾವ್ಯಾಧಿಹರಾ ತ್ರಿಭುವನಾತ್ಪರಾ ।
ದರ್ಶನಸ್ಪರ್ಶನಾಭ್ಯಾಂ ಚ ನೃಣಾಂ ಪಾತಕನಾಶಿನೀ ॥ ೧೪ ॥

ಧ್ಯಾಯತೇ ಯತ್ಪದಾಂಭೋಜಂ ದುರ್ಗಾ ದುರ್ಗಾರ್ತಿನಾಶಿನೀ ।
ತ್ರೈಲೋಕ್ಯಜನನೀ ದೇವೀ ಮೂಲಪ್ರಕೃತಿರೀಶ್ವರೀ ॥ ೧೫ ॥

ಲೋಮ್ನಾಂ ಕೂಪೇಷು ವಿಶ್ವಾನಿ ಮಹಾವಿಷ್ಣೋಶ್ಚ ಯಸ್ಯ ಚ ।
ಅಸಂಖ್ಯಾನಿ ವಿಚಿತ್ರಾಣಿ ಸ್ಥೂಲಾತ್ಸ್ಥೂಲತರಸ್ಯ ಚ ॥ ೧೬ ॥

ಸ ಚ ಯತ್ಷೋಡಶಾಂಶಶ್ಚ ಯಸ್ಯ ಸರ್ವೇಶ್ವರಸ್ಯ ಚ ।
ತಂ ದ್ರಷ್ಟುಂ ಯಾಮಿ ಹೇ ಬಂಧೋ ಮಾಯಾಮಾನುಷರೂಪಿಣಂ ॥ ೧೭ ॥

ಸರ್ವಂ ಸರ್ವಾಂತರಾತ್ಮಾನಂ ಸರ್ವಜ್ಞಂ ಪ್ರಕೃತೇಃ ಪರಂ ।
ಬ್ರಹ್ಮಜ್ಯೋತಿಃಸ್ವರೂಪಂ ಚ ಭಕ್ತಾನುಗ್ರಹವಿಗ್ರಹಂ ॥ ೧೮ ॥

---

೧೪. ತ್ರಿಭುವನ ಶ್ರೇಷ್ಠಳಾದ ಆ ಗಂಗೆಯು ತನ್ನನ್ನು ಸ್ಪರ್ಶಮಾಡಿದ ಮನುಜರ ಜನ್ಮ ಮೃತ್ಯು ಜರಾವ್ಯಾಧಿಗಳನ್ನು ಪರಿಹರಿಸುವಳಲ್ಲದೆ ಸಕಲ ಪಾಪಗಳನ್ನೂ ಪರಿಹರಿಸಿ ಮುಕ್ತಿಯನ್ನು ಕೊಡುವಳು.

೧೫. ದುರ್ಗತಿನಾಶಿನಿಯೂ, ತ್ರಿಭುವನಜನನಿಯೂ, ಮೂಲಪ್ರಕೃತಿಯೂ, ಸರ್ವೇಶ್ವರಿಯೂ ಆದ ದುರ್ಗಾದೇವಿಯೂ ಸಹ ಶ್ರೀಕೃಷ್ಣನ ಪಾದಕಮಲಗಳನ್ನು ಸರ್ವದಾ ಧ್ಯಾನಿಸುತ್ತಿರುವಳು.

೧೬-೧೭. ಸ್ಥೂಲವಸ್ತುಗಳಿಗಿಂತಲೂ ಅತ್ಯಂತ ಸ್ಥೂಲನಾದ ಯಾವ ಮಹಾವಿಷ್ಣುವಿನ ಲೋಮಕೂಪಗಳಲ್ಲಿ ಅಸಂಖ್ಯವೂ ವಿಚಿತ್ರವೂ ಆದ ನಿಖಿಲ ವಿಶ್ವವೂ ಅಡಗಿರುವುದೋ ಅಂಥಾ ಮಹಾವಿಷ್ಣುವು ಯಾವ ಪರಮಾತ್ಮನ ಹದಿನಾರನೆಯ ಒಂದಂಶದಿಂದ ಜನಿಸಿರುವನೋ ಆ ಸರ್ವೇಶ್ವರನೂ ಮಾಯಾಮಾನುಷರೂಪಿಯೂ ಆದ ಶ್ರೀಕೃಷ್ಣನನ್ನು ನೋಡಲು ನಾನು ಹೋಗುವೆನು.

೧೮. ಸರ್ವರೂಪನೂ, ಸರ್ವಾಂತರಾತ್ಮನೂ, ಸರ್ವಜ್ಞನೂ, ಪ್ರಕೃತಿಗಿಂತ ಮೇಲಾದವನೂ, ಬ್ರಹ್ಮಜ್ಯೋತಿಃಸ್ವರೂಪನೂ, ಭಕ್ತರ ಅನುಗ್ರಹಕ್ಕಾಗಿ ಶರೀರಧಾರಿಯೂ ಆದ ಪರಮಾತ್ಮನನ್ನು ಇಂದು ನೋಡುವೆನು.

ನಿರ್ಗುಣಂ ಚ ನಿರೀಹಂ ಚ ನಿರಾನಂದಂ ನಿರಾಶ್ರಯಂ ।
ಪರಮಂ ಪರಮಾನಂದಂ ಸಾನಂದಂ ನಂದನಂದನಂ ॥ ೧೯ ॥

ಸ್ವೇಚ್ಛಾಮಯಂ ಸರ್ವಪರಂ ಸರ್ವಬೀಜಂ ಸನಾತನಂ !
ವದಂತಿ ಯೋಗಿನಃ ಶಶ್ವದ್ಧ್ಯಾಯಂತ್ಯೇಹರ್ನಿಶಂ ಶಿಶುಂ ॥ ೨೦ ॥

ಮನ್ವಂತರಸಹಸ್ರಂ ಚ ನಿರಾಹಾರಃ ಕೃಶೋದರಃ ।
ಪದ್ಮೀ ಪಾದ್ಮಸ್ತಪಸ್ತೇಪೇ ಪುರಾಪಾದ್ಮೇತು ಯತ್ಕೃತೇ ॥ ೨೧ ॥

ಪುನಃ ಕುರು ತಪಸ್ಯಾಂ ಚ ತದಾ ದ್ರಕ್ಷ್ಯಸಿ ಮಾಮಿತಿ ।
ಸಕೃಚ್ಛಬ್ದಂ ಚ ಶುಶ್ರಾವ ನ ದದರ್ಶ ತಥಾಪಿ ತಂ ॥ ೨೨ ॥

ತಾವತ್ಕಾಲಂ ಪುನಸ್ತಪ್ತ್ವಾ ವರಂ ಪ್ರಾಪ ದದರ್ಶ ತಂ ।
ಈದೃಶಂ ಪರಮೇಶಂ ಚ ದ್ರಕ್ಷ್ಯಾಮ್ಯದ್ಯ ತಮುದ್ಧವ ॥ ೨೩ ॥

---

೧೯. ಗುಣರಹಿತನೂ, ಇಚ್ಛಾರಹಿತನೂ, ನಿರಾನಂದನೂ, ನಿರಾಶ್ರಯನೂ, ಆನಂದಮಯನೂ, ಪರಮಾನಂದಸ್ವರೂಪನೂ, ನಂದನಂದನನೂ ಆದ ಶ್ರೀಕೃಷ್ಣನನ್ನು ಇಂದು ನೋಡುವೆನು.

೨೦. ಗೋಪಕಿಶೋರರೂಪಿಯಾದ ಯಾವ ಪರಮಾತ್ಮನನ್ನು ಸ್ವೇಚ್ಛಾಮಯನೂ, ಸರ್ವಶ್ರೇಷ್ಠನೂ, ಸರ್ವಕಾರಣನೂ, ಅನಾದಿಯೂ ಎಂದು ತಿಳಿದು ಯೋಗಿಗಳು ಸರ್ವದಾ ಧ್ಯಾನಿಸುತ್ತಿರುವರು.

೨೧. ಹಿಂದೆ ಪಾದ್ಮಕಲ್ಪದಲ್ಲಿ ಪದ್ಮೋದ್ಭವನಾದ ಬ್ರಹ್ಮನು ಆಹಾರವನ್ನು ಬಿಟ್ಟು ಕೃಶೋದರನಾಗಿ ಸಾವಿರ ಮನ್ವಂತರಗಳಕಾಲ ಪರಮಾತ್ಮನ ದರ್ಶನಕ್ಕಾಗಿ ತಪಸ್ಸು ಮಾಡಿದನು.

೨೨. 'ಪುನಃ ನನ್ನನ್ನು ಕುರಿತು ತಪಸ್ಸು ಮಾಡು. ಆಗ ನನ್ನನ್ನು ನೋಡುವೆ' ಎಂಬುದಾಗಿ ಅಶರೀರವಾಣಿಯಾಯಿತೇ ಹೊರತು ಬ್ರಹ್ಮನಿಗೆ ಪರಮಾತ್ಮನ ದರ್ಶನವಾಗಲಿಲ್ಲ.

೨೩. ಪುನಃ ಅಷ್ಟುಕಾಲ ತಪಸ್ಸು ಮಾಡಿ ವರವನ್ನು ಪಡೆದನು; ಪರಮಾತ್ಮನನ್ನು ಕಂಡನು. ಎಲೈ ಉದ್ಧವನೇ; ಇಂಥ ಪರಮಾತ್ಮನನ್ನು ಈ ದಿವಸ ನಾನು ನೋಡಿ ಆನಂದಿಸುತ್ತೇನೆ.

ಪುರಾ ಶಂಭುಸ್ತಪಸ್ತೇಪೇ ಯಾವದ್ವೈ ಬ್ರಹ್ಮಣೋ ವಯಃ ।
ಜ್ಯೋತಿರ್ಮಂಡಲಮಧ್ಯೇ ಚ ಗೋಲೋಕೇ ತಂ ದದರ್ಶ ಸಃ ॥ ೨೪ ॥

ಸರ್ವತತ್ತ್ವಂ ಸರ್ವಸಿದ್ಧಂ ಮಮ ತತ್ತ್ವಂ ಪರಂ ವರಂ ।
ಸಂಪ್ರಾಪ ತತ್ಪದಾಂಭೋಜೇ ಭಕ್ತಿಂ ಚ ನಿರ್ಮಲಾಂ ಪರಾಂ ॥ ೨೫ ॥

ಚಕಾರಾತ್ಮಸಮಂ ತಂ ಚ ಯೋ ಭಕ್ತೋ ಭಕ್ತವತ್ಸಲಃ ।
ಈದೃಶಂ ಪರಮೇಶಂ ಚ ದ್ರಕ್ಷ್ಯಾಮ್ಯದ್ಯ ತಮುದ್ಧವ ॥ ೨೬ ॥

ಸಹಸ್ರಶಕ್ರಪಾತಾಂತಂ ನಿರಾಹಾರಃ ಕೃಶೋದರಃ ।
ಯಸ್ಯಾನಂತಸ್ತಪಸ್ತೇಪೇ ಭಕ್ತ್ಯಾ ಚ ಪರಮಾತ್ಮನಃ ॥ ೨೭ ॥

ತದಾ ಚಾತ್ಮಸಮಂ ಜ್ಞಾನಂ ದದೌ ತಸ್ಮೈ ಯ ಈಶ್ವರಃ ।
ಈದೃಶಂ ಪರಮೇಶಂ ಚ ದ್ರಕ್ಷ್ಯಾಮ್ಯದ್ಯ ತಮುದ್ಧವ ॥ ೨೮ ॥

---

೨೪. ಹಿಂದೆ ಶಂಕರನು ಬ್ರಹ್ಮನ ಆಯುಃಪರಿಮಿತಿಯಷ್ಟುಕಾಲ ತಪಸ್ಸು ಮಾಡಿ ಗೋಲೋಕದಲ್ಲಿ ಜ್ಯೋತಿರ್ಮಂಡಲಮಧ್ಯದಲ್ಲಿರುವ ಪರಮಾತ್ಮನ ದರ್ಶನವನ್ನು ಪಡೆದನು.

೨೫. ಸರ್ವತತ್ತ್ವಸ್ವರೂಪನೂ, ಸರ್ವಸಿದ್ಧಿಸ್ವರೂಪನೂ, ನನಗೆ ಪರತತ್ತ್ವ ಬೋಧಕನೂ ಆದ ಆ ಪರಮಾತ್ಮನ ಪಾದಕಮಲಗಳಲ್ಲಿ ಶಂಭುವು ನಿಶ್ಚಲವಾದ ಭಕ್ತಿಯನ್ನು ಪಡೆದನು

೨೬. ಭಕ್ತವತ್ಸಲನಾದ ಯಾವ ಪರಮಾತ್ಮನು ತನ್ನ ಭಕ್ತನನ್ನು ತನಗೆ ಸಮನನ್ನಾಗಿ ಮಾಡುವನೋ, ಎಲೈ ಉದ್ಧವನೇ, ಅಂಥ ಪರಮೇಶ್ವರನನ್ನು ಈ ದಿವಸ ನಾನು ನೋಡುವವನಾಗಿದ್ದೇನೆ.

೨೭. ಆದಿಶೇಷನು ಸಾವಿರ ಇಂದ್ರರ ಜೀವಿತಕಾಲ ಪರ್ಯಂತವಾಗಿ ಆಹಾರವನ್ನು ತೊರೆದು ಕೃಶೋದರನಾಗಿ ಯಾವ ಪರಮಾತ್ಮನನ್ನು ಕುರಿತು ಭಕ್ತಿಯಿಂದ ತಪಸ್ಸುಮಾಡಿದನು.

೨೮. ಎಲೈ ಉದ್ಧವನೇ, ಆಗ ಯಾವ ಸರ್ವೇಶ್ವರನು ಆದಿಶೇಷನಿಗೆ ತನಗೆ ಸಮಾನವಾದ ದಿವ್ಯಜ್ಞಾನವನ್ನು ಅನುಗ್ರಹಿಸಿದನೋ ಅಂಥ ಪರಮೇಶ್ವರನನ್ನು ಇಂದು ನೋಡಲು ಹೋಗುವೆನು.

ಸಹಸ್ರಶಕ್ರಪಾತಾಂತಂ ಧರ್ಮಸ್ತೇಪೇ ಚ ಯತ್ತಪಃ ।
ತದಾ ಬಭೂವ ಸಾಕ್ಷೀ ಸ ಧರ್ಮಿಣಾಂ ಸರ್ವಕರ್ಮಿಣಾಂ ॥ ೨೯ ॥

ಶಾಸ್ತಾ ಚ ಫಲದಾತಾ ಚ ಯತ್ಪ್ರಸಾದಾನ್ನೃಣಾಮಿಹ ।
ಸರ್ವೇಶಮೀದೃಶಮಹೋ ದ್ರಕ್ಷ್ಯಾಮ್ಯದ್ಯ ತಮುದ್ಧವ ॥ ೩೦ ॥

ಅಷ್ಟಾವಿಂಶತಿರಿಂದ್ರಾಣಾಂ ಪತನೇ ಯದ್ದಿವಾನಿಶಂ ।
ಏವಂ ಕ್ರಮೇಣ ಮಾಸಾಬ್ದೈಃ ಶತಾಬ್ದಂ ಬ್ರಹ್ಮಣೋ ವಯಃ ॥ ೩೧ ॥

ಅಹೋ ಯಸ್ಯ ನಿಮೇಷೇಣ ಬ್ರಹ್ಮಣಃ ಪತನಂ ಭವೇತ್ ।
ಈದೃಶಂ ಪರಮಾತ್ಮಾನಂ ದ್ರಕ್ಷ್ಯಾಮ್ಯದ್ಯ ತಮುದ್ಧವ ॥ ೩೨ ॥

---

೨೯. ಧರ್ಮಪುರುಷನು ಸಾವಿರ ಇಂದ್ರರ ಜೀವಿತಕಾಲ ಪರ್ಯಂತವಾಗಿ ಪರಮಾತ್ಮನನ್ನು ಕುರಿತು ತಪಸ್ಸುಮಾಡಿ ಧರ್ಮಿಷ್ಠರ ಮತ್ತು ಕರ್ಮಿಷ್ಠರ ಧರ್ಮ ಕರ್ಮಗಳಿಗೆ ಸಾಕ್ಷಿಸ್ವರೂಪನೆನಿಸಿದನು.

೩೦. ಎಲೈ ಉದ್ಧವನೇ, ಯಾವನ ಅನುಗ್ರಹದಿಂದ ಧರ್ಮಪುರುಷನು ಮನುಜರ ಶಿಕ್ಷಕನೂ ಮತ್ತು ಫಲದಾಯಕನೂ ಆಗಿರುವನೋ ಅಂಥ ಸರ್ವೇಶ್ವರನನ್ನು ಈದಿವಸ ನಾನು ನೋಡಲು ಹೋಗುವೆನು.

೩೧. ಇಪತ್ತುನಾಲ್ಕು ಇಂದ್ರರ ಜೀವಿತಕಾಲ ಕಳೆದರೆ ಬ್ರಹ್ಮನಿಗೆ ಒಂದು ಹಗಲು ರಾತ್ರಿಯಾಗುವುದು. ಇದೇ ಕ್ರಮದಲ್ಲಿ ತಿಂಗಳು ವರ್ಷಗಳನ್ನು ಲೆಕ್ಕಮಾಡಿ ಬ್ರಹ್ಮನ ಆಯುಸ್ಸು ನೂರುವರ್ಷಗಳೆಂದು ನಿರ್ಣೀತವಾಗಿದೆ.

೩೨. ಎಲೈ ಉದ್ಧವನೇ, ಯಾವ ಪರಮಾತ್ಮನ ಕಣ್ಣುರೆಪ್ಪೆಹೊಡೆಯುವಷ್ಟು ಕಾಲದಲ್ಲಿ ಬ್ರಹ್ಮನ ಆಯುಸ್ಸು ಕಳೆದುಹೋಗುವುದೋ ಅಂಥ ಪರಮಾತ್ಮನನ್ನು ನಾನು ಇಂದು ನೋಡಲು ಹೋಗುವೆನು.

ನಾಸ್ತಿ ಭೂರಜಸಾಂ ಸಂಖ್ಯಾ ಯಥೈವ ಬ್ರಹ್ಮಣಾಂ ತಥಾ ।
ತಥೈವ ಬಂಧೋ ವಿಶ್ವಾನಾಂ ತದಾಧಾರೋ ಮಹಾವಿರಾಟ್ || ೩೩ ||

ವಿಶ್ವೇ ವಿಶ್ವೇ ಚ ಪ್ರತ್ಯೇಕಂ ಬ್ರಹ್ಮವಿಷ್ಣುಶಿವಾದಯಃ ।
ಮುನಯೋ ಮನವಃ ಸಿದ್ಧಾ ಮಾನವಾದ್ಯಾಶ್ಚರಾಚರಾಃ || ೩೪ ||

ಯತ್ಷೋಡಶಾಂಶಃ ಸ ವಿರಾಟ್ ಸೃಷ್ಟೋ ನಷ್ಟಶ್ಚ ಲೀಲಯಾ ।
ಈದೃಶಂ ಸರ್ವಶಾಸ್ತಾರಂ ದ್ರಕ್ಷ್ಯಾಮ್ಯದ್ಯ ತಮುದ್ಧವ || ೩೫ ||

ಇತ್ಯೇವಮುಕ್ತ್ವಾಽಕ್ರೂರಶ್ಚ ಪುಲಕಾಂಚಿತವಿಗ್ರಹಃ ।
ಮೂರ್ಛಾಂ ಪ್ರಾಪ ಸಾಶ್ರುನೇತ್ರೋ ದಧ್ಯೌ ತಚ್ಚರಣಾಂಬುಜಂ || ೩೬ ||

---

೩೩. ಭೂಮಿಯ ಧೂಳಿಕಣಗಳನ್ನು ಎಣಿಸಲಾಗದಿರುವಂತೆ ನಿಖಿಲ ವಿಶ್ವದಲ್ಲಿರುವ ಬ್ರಹ್ಮರನ್ನು ಎಣಿಸಲಾಗುವುದಿಲ್ಲ. ಎಲೈ ಬಂಧುವಾದ ಉದ್ಧವನೇ. ಅದೇರೀತಿ ವಿಶ್ವವನ್ನು ಎಣಿಸಲಾಗುವುದಿಲ್ಲ. ಅಂಥ ಅಸಂಖ್ಯ ವಿಶ್ವಕ್ಕೆ ಮಹಾವಿರಾಟನು ಆಧಾರನಾಗಿದ್ದಾನೆ.

೩೪. ಪ್ರತಿವಿಶ್ವದಲ್ಲಿಯೂ ಬ್ರಹ್ಮ ವಿಷ್ಣು ಶಿವಾದಿಗಳು ಪ್ರತ್ಯೇಕವಾಗಿರುವರು. ಅಲ್ಲದೆ ಮುನಿಮನುಗಳೂ, ಸಿದ್ಧರೂ, ಮಾನವರೂ ಚರಾಚರಾತ್ಮಕವಾದ ನಿಖಿಲ ವಸ್ತುವೂ ಪ್ರತಿ ವಿಶ್ವದಲ್ಲಿ ಇರುವುದು.

೩೫. ಅಂಥ ವಿರಾಟ್ಪುರುಷನೂ ಸಹ ಯಾವನ ಹದಿನಾರನೆಯ ಒಂದಂಶದಿಂದ ಲೀಲಾಮಾತ್ರದಿಂದ ಸೃಷ್ಟಿಸಲ್ಪಟ್ಟು ಲಯಗೊಳಿಸಲ್ಪಡುವನೋ ಅಂಥ ಪರಮಾತ್ಮನನ್ನು ನಾನಿಂದು ನೋಡಲು ಹೋಗುವೆನು.

೩೬. ಈರೀತಿಯಾಗಿ ಅಕ್ರೂರನು ಹೇಳಿ ರೋಮಾಂಚಿತ ಶರೀರನಾಗಿ ಕಣ್ಣುಗಳಲ್ಲಿ ಆನಂದಬಾಷ್ಪಗಳನ್ನು ಸುರಿಸುತ್ತ ಆನಂದಾತಿರೇಕದಿಂದ ಮೂರ್ಛೆಗೊಂಡುದಲ್ಲದೆ, ಚೇತರಿಸಿಕೊಂಡು ಪರಮಾತ್ಮನ ಪಾದಕಮಲಗಳನ್ನು ಧ್ಯಾನಿಸಿದನು.

ಬಭೂವ ಭಕ್ತಿಪೂರ್ಣಶ್ಚ ಸ್ಮಾರಂ ಸ್ಮಾರಂ ಪದಾಂಬುಜಂ ।
ಕೃತ್ವಾ ಪ್ರದಕ್ಷಿಣಂ ಚಾಪಿ ಕೃಷ್ಣಸ್ಯ ಪರಮಾತ್ಮನಃ ॥ ೩೭ ॥

ಉದ್ಧವಶ್ಚ ತಮಾಶ್ಲಿಷ್ಯ ಪ್ರಶಶಂಸ ಪುನಃ ಪುನಃ ।
ಸ ಚ ಶೀಘ್ರಂ ಯಯೌ ಗೇಹಮಕ್ರೂರೋಽಪಿ ಸ್ವಮಂದಿರಂ ॥ ೩೮ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣ ನಾರದಸಂವಾದೇ
ಅಕ್ರೂರಹರ್ಷೋತ್ಕರ್ಷಕಥನಂ ನಾಮ
ಪಂಚಷಷ್ಟಿತಮೋಽಧ್ಯಾಯಃ

---

೩೭. ಈರೀತಿ ಪಾದಕಮಲಗಳನ್ನು ಮತ್ತೆಮತ್ತೆ ಸ್ಮರಿಸಿಕೊಳ್ಳುತ್ತ ಭಕ್ತಿಪೂರ್ಣನಾದನು. ಅಲ್ಲದೆ ತಾನಿದ್ದಲ್ಲಿಯೇ ಶ್ರೀಕೃಷ್ಣಪರಮಾತ್ಮನಿಗೆ ಪ್ರದಕ್ಷಿಣೆ ಮಾಡಿ ನಮಸ್ಕರಿಸಿದನು.

೩೮. ಉದ್ಧವನೂ ಸಹ ಆ ಅಕ್ರೂರನನ್ನು ಆಲಿಂಗಿಸಿಕೊಂಡು ಮತ್ತೆಮತ್ತೆ ಪ್ರಶಂಸೆಮಾಡಿದನು. ಅನಂತರ ಉದ್ಧವನು ತನ್ನ ಮನೆಗೆ ಹೋದನು. ಅಕ್ರೂರನೂ ತನ್ನ ಮಂದಿರಕ್ಕೆ ತೆರಳಿದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣ ಜನ್ಮಖಂಡದ ಉತ್ತರಾರ್ಧದ ನಾರಾಯಣ ನಾರದ ಸಂವಾದದಲ್ಲಿ ಅಕ್ರೂರನ ಹರ್ಷೋತ್ಕರ್ಷವನ್ನು ತಿಳಿಸುವ ಅರವತ್ತೈದನೆಯ ಅಧ್ಯಾಯವು ಮುಗಿದುದು.

ಅರವತ್ತೈದನೆಯ ಅಧ್ಯಾಯದ ಸಾರಾಂಶ

ಕಂಸನಿಂದ ಪ್ರೇರಿತನಾದ ಅಕ್ರೂರನು ಶ್ರೀಕೃಷ್ಣಪರಮಾತ್ಮನನ್ನು ಸಂದರ್ಶಿಸಿ ಮಾತನಾಡುವ ಭಾಗ್ಯವು ತನಗೆ ಬಂದುದಕ್ಕೆ ಬಹಳವಾಗಿ ಸಂತೋಷಪಟ್ಟು ಉದ್ಧವನೊಡನೆ ತನ್ನ ಸಂತೋಷವನ್ನು ಹೇಳಿಕೊಂಡುದಲ್ಲದೆ ಶ್ರೀಕೃಷ್ಣಪರಮಾತ್ಮನ ಅಪಾರವಾದ ಮಹಿಮೆಯನ್ನು ಕೊಂಡಾಡಿದನು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಷಟ್‌ಷಷ್ಟಿತಮೋಽಧ್ಯಾಯಃ ॥

॥ ಶ್ರೀ ನಾರಾಯಣ ಉವಾಚ ॥

ಅಥ ರಾಸೇಶ್ವರೀಯುಕ್ತೋ ರಾಸೇ ರಾಸೇಶ್ವರಃ ಸ್ವಯಂ ।
ಸ ಚ ರೇಮೇ ತಯಾ ಸಾರ್ಧಮತೀವ ರಮಣೋತ್ಸುಕಃ ॥ ೧ ॥

ಸುಖಸಂಭೋಗಮಾತ್ರೇಣ ಯಯೌ ನಿದ್ರಾಂ ಚ ರಾಧಿಕಾ ।
ದೃಷ್ಟ್ವಾ ಸ್ವಪ್ನಂ ಸಮುತ್ತಾಯ ದೀನೋವಾಚ ಪ್ರಿಯಂ ದಿನೇ ॥ ೨ ॥

॥ ರಾಧಿಕೋವಾಚ ॥

ಅಹೋ ಸ್ವಾಮಿನ್ನಿಹಾಗಚ್ಛ ತ್ವಾಂ ಕರೋಮಿ ಸ್ವವಕ್ಷಸಿ ।
ಪರಿಣಾಮೇ ವಿಧಾತಾ ಮೇ ನ ಜಾನೇ ಕಿಂ ಕರಿಷ್ಯತಿ ॥ ೩ ॥

ಅರವತ್ತಾರನೆಯ ಅಧ್ಯಾಯ.

೧. ಶ್ರೀ ನಾರಾಯಣ :— ಅತ್ತ ನಂದಗೋಕುಲದಲ್ಲಿ ರಸಿಕೇಶ್ವರನಾದ ಶ್ರೀಕೃಷ್ಣನು ರಸಿಕಶ್ರೇಷ್ಠಳಾದ ರಾಧೆಯೊಡಗೂಡಿ ರಾಸಮಂಡಲದಲ್ಲಿ ರತಿಕ್ರೀಡಾ ನಿರತನಾಗಿದ್ದನು.

೨. ರಾಧಾದೇವಿಯು ಸುಖಸಂಭೋಗದಿಂದ ಗಾಢನಿದ್ರೆಯಲ್ಲಿ ಮಗ್ನಳಾದಳು. ಸ್ವಲ್ಪ ಹೊತ್ತಿನಲ್ಲಿ ಭಯಂಕರವಾದ ಕನಸನ್ನು ಕಂಡು ಎಚ್ಚೆತ್ತು ತನ್ನ ಪತಿಯನ್ನು ಕುರಿತು ಇಂತು ವಿಜ್ಞಾಪಿಸಿದಳು.

೩. ರಾಧಿಕೆ :— ಪ್ರಾಣಕಾಂತನೇ, ನನ್ನ ಸಮೀಪಕ್ಕೆ ಬಾ ನಾನು ನಿನ್ನನ್ನು ನನ್ನ ವಕ್ಷಃಸ್ಥಳದಲ್ಲಿ ಅಪ್ಪಿಕೊಳ್ಳುವೆನು. ನನ್ನ ದುರ್ವಿಧಿಯು ಪರಿಣಾಮದಲ್ಲಿ ಏನುಮಾಡುವುದೋ ನಾನರಿಯೆನು.

ಇತ್ಯುಕ್ತ್ವಾ ಸಾ ಮಹಾಭಾಗಾ ಪ್ರಿಯಂ ಕೃತ್ವಾ ಸ್ವವಕ್ಷಸಿ ।
ದುಃಸ್ವಪ್ನಂ ಕಥಯಾಮಾಸ ಹೃದಯೇನ ವಿದೂಯತಾ ॥ ೪ ॥

॥ ರಾಧಿಕೋವಾಚ ॥

ರತ್ನಸಿಂಹಾಸನೇಽಹಂ ಚ ರತ್ನಚ್ಛತ್ರಂ ಚ ಬಿಭ್ರತೀ ।
ತದಾಽಽತಪತ್ರಂ ಜಗ್ರಾಹ ರುಷ್ಟೋ ವಿಪ್ರಶ್ಚ ಮೇ ಪ್ರಭೋ ॥ ೫ ॥

ಸಾಗರೇ ಕಜ್ಜಲಾಕಾರೇ ಮಹಾಘೋರೇ ಚ ದುಸ್ತರೇ ।
ಗಭೀರೇ ಪ್ರೇರಯಾಮಾಸ ಮಾಮೇವ ದುರ್ಬಲಾಂ ಸ ಚ ॥ ೬ ॥

ತತ್ರ ಸ್ರೋತಸಿ ಶೋಕಾರ್ತಾ ಭ್ರಮಾಮಿ ಚ ಮುಹುರ್ಮುಹುಃ ।
ಮಹೋರ್ಮೀಣಾಂ ಚ ವೇಗೇನ ವ್ಯಾಕುಲಾ ನಕ್ರಸಂಕುಲೈಃ ॥ ೭ ॥

ತ್ರಾಹಿ ತ್ರಾಹೀತಿ ಹೇ ನಾಥ ತ್ವಾಂ ವದಾಮಿ ಪುನಃ ಪುನಃ ।
ತ್ವಾಂ ನ ದೃಷ್ಟ್ವಾ ಮಹಾಭೀತಾ ಕರೋಮಿ ಪ್ರಾರ್ಥನಾಂ ಸುರಂ ॥ ೮ ॥

---

೪. ಹೀಗೆ ಹೇಳುತ್ತ ಆ ಮಹಾಭಾಗ್ಯವತಿಯು ಪತಿಯನ್ನು ತನ್ನ ವಕ್ಷಃಸ್ಥಳದಲ್ಲಿ ಅಪ್ಪಿಕೊಂಡು ಚಿಂತಾಕ್ರಾಂತವಾದ ಮನಸ್ಸಿನಿಂದ ಕೂಡಿ ತನ್ನ ದುಃಸ್ವಪ್ನವನ್ನು ಪತಿಗೆ ನಿವೇದಿಸಿದಳು.

೫. ರಾಧಿಕೆ :— ಎಲೈ ಪ್ರಭುವೇ, ನಾನು ಕನಸಿನಲ್ಲಿ ರತ್ನಖಚಿತವಾದ ಛತ್ರಿಯೊಂದನ್ನು ಹಿಡಿದು ರತ್ನಸಿಂಹಾಸನದಲ್ಲಿ ಕುಳಿತಿದ್ದೆನು. ಒಬ್ಬ ಬ್ರಾಹ್ಮಣನು ಕೋಪದಿಂದ ಬಂದು ಆ ಛತ್ರಿಯನ್ನು ಕಿತ್ತುಕೊಂಡನು.

೬. ಅಲ್ಲದೆ ಅವನು ಕಾಡಿಗೆಯಂತೆ ಕಪ್ಪಾಗಿಯೂ, ಅತಿಭಯಂಕರವಾಗಿಯೂ, ಗಂಭೀರವಾಗಿಯೂ ಇರುವ ದಾಟಲಾಗದ ಸಾಗರದೊಳಕ್ಕೆ ನನ್ನನ್ನು ನೂಕಿಬಿಟ್ಟನು.

೭. ಶೋಕಪೀಡಿತಳಾದ ನಾನು ಅದರ ಪ್ರವಾಹದಲ್ಲಿ ಬಾರಿ ಬಾರಿಗೂ ಭ್ರಮಣಮಾಡುತ್ತಿದ್ದೆ. ಮಹತ್ತರವಾದ ಅಲೆಗಳ ಬಡಿತಕ್ಕೂ ಮೊಸಳೆಗಳ ಸೆಳೆತಕ್ಕೂ ಸಿಕ್ಕಿ ಸಂಕಟಪಡುತ್ತಿದ್ದೆ.

೮. 'ಎಲೈ ಪ್ರಾಣನಾಥನೇ, ನನ್ನನ್ನು ಕಾಪಾಡು ಕಾಪಾಡು' ಎಂದು ಗಟ್ಟಿಯಾಗಿ ಕೂಗಿಕೊಂಡೆ. ಆದರೆ ಅಲ್ಲೆಲ್ಲೂ ನಿನ್ನನ್ನು ಕಾಣದೆ ಭೀತಳಾಗಿ ದೇವತೆಗಳನ್ನು ಪ್ರಾರ್ಥಿಸತೊಡಗಿದೆ.

ಕೃಷ್ಣ ತತ್ರ ನಿಮಜ್ಜಂತೀ ಪಶ್ಯಾಮಿ ಚಂದ್ರಮಂಡಲಂ ।
ನಿಪತಂತಂ ಚ ಗಗನಾಚ್ಚ್ಯುತಖಂಡಂ ಚ ಭೂತಲೇ ॥ ೯ ॥

ಕ್ಷಣಾಂತರೇ ಚ ಪಶ್ಯಾಮಿ ಗಗನಾತ್ಸೂರ್ಯಮಂಡಲಂ ।
ಬಭೂವ ಚ ಚತುಃಖಂಡಂ ನಿಪತ್ಯ ಧರಣೀತಲೇ ॥ ೧೦ ॥

ಏಕಕಾಲೇ ಚ ಗಗನೇ ಮಂಡಲಂ ಚಂದ್ರಸೂರ್ಯಯೋಃ ।
ಅತೀವ ಕಜ್ಜಲಾಕಾರಂ ಸರ್ವಂ ಗ್ರಸ್ತಂ ಚ ರಾಹುಣಾ ॥ ೧೧ ॥

ಕ್ಷಣಾಂತರೇ ಚ ಪಶ್ಯಾಮಿ ಬ್ರಾಹ್ಮಣೋ ದೀಪ್ತಿಮಾನಿತಿ ।
ಮತ್ಕ್ರೋಡಸ್ಥಸುಧಾಕುಂಭಂ ಬಭಂಜ ಚ ರುಷೇತಿ ಚ ॥ ೧೨ ॥

ಕ್ಷಣಾಂತರೇ ಚ ಪಶ್ಯಾಮಿ ಮಹಾರುಷ್ಟಂ ಚ ಬ್ರಾಹ್ಮಣಂ ।
ಗೃಹೀತ್ವಾ ಚ ವ್ರಜಂತಂ ಚ ಚಕ್ಷುಷೋಃ ಪುರುಷಂ ಮಮ ॥ ೧೩ ॥

---

೯. ಎಲೈ ಕೃಷ್ಣನೇ. ನಾನು ಆ ಸಮುದ್ರದಲ್ಲಿ ಮುಳುಗುತ್ತಿರುವಂತೆಯೇ ಆಕಾಶದಿಂದ ಚಂದ್ರಮಂಡಲವು ನೂರುಚೂರಾಗಿ ಭೂಮಿಯಮೇಲೆ ಬೀಳುವುದನ್ನು ನೋಡಿದೆ.

೧೦. ಮತ್ತೊಂದು ಕ್ಷಣದಲ್ಲಿ ಸೂರ್ಯಮಂಡಲವು ಆಕಾಶದಿಂದ ಭೂಮಿಯ ಮೇಲೆ ಬಿದ್ದು ನಾಲ್ಕು ಚೂರಾದುದನ್ನು ಕಂಡೆನು.

೧೧. ಅಲ್ಲದೆ ಏಕಕಾಲದಲ್ಲಿ ಆಕಾಶದಲ್ಲಿದ್ದ ಚಂದ್ರಸೂರ್ಯಮಂಡಲಗಳೆರಡೂ ಕಾಡಿಗೆಯಂತೆ ಬಹಳ ಕಪ್ಪಾಗಿ ರಾಹುವಿನಿಂದ ನುಂಗಲ್ಪಟ್ಟುದನ್ನು ನೋಡಿದೆನು.

೧೨. ಮತ್ತೊಂದು ಕ್ಷಣದಲ್ಲಿ ತೇಜಸ್ವಿಯಾದ ಬ್ರಾಹ್ಮಣನೊಬ್ಬನು ನನ್ನ ಭುಜಾಂತರದಲ್ಲಿದ್ದ ಅಮೃತಕಲಶವನ್ನು ಕಿತ್ತುಕೊಂಡು ಒಡೆದು ಪುಡಿಪುಡಿ ಮಾಡಿದಂತೆ ಕನಸಾಯಿತು.

೧೩. ಇನ್ನೊಂದು ಕ್ಷಣದಲ್ಲಿ ಅತ್ಯಂತ ಕುಪಿತನಾದ ಬ್ರಾಹ್ಮಣನೊಬ್ಬನು ಬಂದು ನನ್ನ ಕಣ್ಣಿನ ಪಾಪೆ (ದೃಷ್ಟಿಪುರುಷ) ಗಳನ್ನು ಕಿತ್ತುಕೊಂಡು ಹೋಗುತ್ತಿದಂತೆ ಕಂಡೆನು.

ಕ್ರೀಡಾಕಪಾಲದಂಡಂ ಚ ಹಸ್ತಾದ್ಧಸ್ತಂ ಮಮ ಪ್ರಭೋ ।
ಸಹಸಾ ಖಂಡಖಂಡಂ ಚ ಬಭೂವ ಸಹ ಹೇತುನಾ ॥ ೧೪ ॥

ಹಸ್ತಾದ್ಧಸ್ತಂ ಚ ಸಹಸಾ ಸದ್ರತ್ನಸಾರದರ್ಪಣಃ ।
ನಿರ್ಮಲಃ ಕಜ್ಜಲಾಕಾರಃ ಖಂಡಖಂಡೋ ಬಭೂವ ಹ ॥ ೧೫ ॥

ಹಾರೋ ಮೇ ರತ್ನಸಾರಾಣಾಂ ಛಿನ್ನೋ ಭೂತ್ವಾ ಚ ವಕ್ಷಸಃ ।
ಅತೀವ ಮೀಲನಂ ಪದ್ಮಂ ಪಪಾತ ಧರಣೀತಲೇ ॥ ೧೬ ॥

ಸೌಧಪುತ್ತಲಿಕಾಃ ಸರ್ವಾ ನೃತ್ಯಂತಿ ಚ ಹಸಂತಿ ಚ ।
ಆಸ್ಫೋಟಯಂತಿ ಗಾಯಂತಿ ರುದಂತಿ ಚ ಕ್ಷಣಂ ಕ್ಷಣಂ ॥ ೧೭ ॥

ಕೃಷ್ಣವರ್ಣಂ ಬೃಹಚ್ಚಕ್ರಂ ಖೇ ಭ್ರಮಂತಂ ಮುಹುರ್ಮುಹುಃ ।
ನಿಪತಂತಂ ಚೋತ್ಪತಂತಂ ಪಶ್ಯಾಮಿ ಚ ಭಯಂಕರಂ ॥ ೧೮ ॥

---

೧೪. ಎಲೈ ಪ್ರಭುವೇ, ನಾನು ಕ್ರೀಡಾರ್ಥವಾಗಿಟ್ಟುಕೊಂಡಿದ್ದ ಘಟ ನಿರ್ಮಾಣದ ದಂಡವು ಕೈಯಿಂದ ಕೈಗೆ ಬದಲಾವಣೆಹೊಂದಿ ಇದ್ದಕ್ಕಿದ್ದಂತೆಯೇ ಘಟಕ್ಕೆ ಕಾರಣವಾದ ಮೃತ್ತಿಕೆಯೊಡನೆ ಚೂರುಚೂರಾಗಿ ಹೋಯಿತು.

೧೫. ಸ್ವಚ್ಛವಾದ ರತ್ನಕನ್ನಡಿಯೊಂದು ಇದ್ದಕ್ಕಿದ್ದಂತೆಯೇ ಕಾಡಿಗೆಯಂತೆ ಕಪ್ಪುಬಣ್ಣವಾಗಿ ಕೈಯಿಂದ ಕೈಗೆ ಬದಲಾವಣೆ ಹೊಂದುತ್ತ ಚೂರುಚೂರಾಗಿ ಬಿದ್ದು ಹೋಯಿತು.

೧೬. ನನ್ನ ವಕ್ಷಃಸ್ಥಳದಲ್ಲಿದ್ದ ರತ್ನಹಾರವು ಚೂರುಚೂರಾಗಿ ಕೆಳಕ್ಕೆ ಬಿದ್ದುಹೋಯಿತು. ಹಾಗೆಯೇ ನಾನು ಹಿಡಿದಿದ್ದ ಕ್ರೀಡಾಕಮಲವೂ ಸಹ ಇದ್ದಕ್ಕಿದ್ದಂತೆ ಬಾಡಿ ನೆಲದ ಮೇಲೆ ಬಿದ್ದಿತು.

೧೭. ಉಪ್ಪರಿಗೆಯಲ್ಲಿದ್ದ ಸಾಲುಗೊಂಬೆಗಳೆಲ್ಲ ನರ್ತನ ಮಾಡುತ್ತಲೂ, ನಗುತ್ತಲೂ, ಒಮ್ಮೊಮ್ಮೆ ಸಿಡಿಯುತ್ತಲೂ, ಗಾನಮಾಡುತ್ತಲೂ ಕ್ಷಣಕ್ಷಣಕ್ಕೆ ಅಳುತ್ತಲೂ ಇದ್ದವು.

೧೮. ಕಪ್ಪು ಬಣ್ಣದ ಒಂದು ದೊಡ್ಡ ಚಕ್ರವು ಬಾರಿಬಾರಿಗೂ ಆಕಾಶದಲ್ಲಿ ಸುತ್ತುತ್ತ ಒಮ್ಮೆ ಕೆಳಕ್ಕೆ ಬೀಳುತ್ತಲೂ, ಮತ್ತೊಮ್ಮೆ ಮೇಲಕ್ಕೆ ಏಳುತ್ತಲೂ ಭಯಂಕರವಾಗಿ ಕಾಣುತ್ತಿದ್ದಿತು.

ಪ್ರಾಣಾಧಿದೇವಃ ಪುರುಷೋ ನಿಃಸೃತ್ಯಾಭ್ಯಂತರಾನ್ಮಮ ।
ರಾಧೇ ವಿದಾರ್ಯ ದೇಹೀತಿ ತತೋ ಯಾಮೀತ್ಯುವಾಚ ಹ ॥ ೧೯ ॥

ಕೃಷ್ಣವರ್ಣಾ ಚ ಪ್ರತಿಮಾ ಮಾಮಾಶ್ಲಿಷ್ಯತಿ ಚುಂಬತಿ ।
ಕೃಷ್ಣವಸ್ತ್ರಪರೀಧಾನಾ ಚೇತಿ ಪಶ್ಯಾಮಿ ಸಾಂಪ್ರತಂ ॥ ೨೦ ॥

ಇತೀದಂ ವಿಪರೀತಂ ಚ ದೃಷ್ಟ್ವಾ ಚ ಪ್ರಾಣವಲ್ಲಭ ।
ನೃತ್ಯಂತಿ ದಕ್ಷಿಣಾಂಗಾನಿ ಪ್ರಾಣಾ ಆಂದೋಲಯಂತಿ ಮೇ ॥ ೨೧ ॥

ರುದಂತಿ ಶೋಕಾತ್ಕರ್ಷಂತಿ ಸಮುದ್ವಿಗ್ನಂ ಚ ಮಾನಸಂ ।
ಕಿಮಿದಂ ಕಿಮಿದಂ ನಾಥ ವದ ವೇದವಿದಾಂ ವರ ॥ ೨೨ ॥

ಇತ್ಯುಕ್ತ್ವಾ ರಾಧಿಕಾ ದೇವೀ ಶುಷ್ಕಕಂಠೋಷ್ಠತಾಲುಕಾ ।
ಪಪಾತ ತತ್ಪದಾಭೋಂಜೇ ಭೀತಾ ಸಾ ಶೋಕವಿಹ್ವಲಾ ॥ ೨೩ ॥

---

೧೯. ನನ್ನ ಪ್ರಾಣಾಧಿದೇವನಾದ ಪುರುಷನು ನನ್ನ ಹೃದಯವನ್ನು ಸೀಳಿ ಕೊಂಡು ಹೋರಕ್ಕೆ ಬಂದು 'ರಾಧೆಯೇ, ನಿನ್ನ ಹೃದಯವನ್ನು ಸೀಳಿ ನನಗೆ ಅವಕಾಶಕೊಡು, ಅನಂತರ ನಾನು ಹೋಗುವೆನು' ಎಂದು ಹೇಳಿದನು.

೨೦. ಕಪ್ಪುಬಟ್ಟೆಯನ್ನುಟ್ಟಿರುವ ಕೃಷ್ಣವರ್ಣದ ಪ್ರತಿಮೆಯೊಂದು ನನ್ನನ್ನು ಆಲಿಂಗಿಸಿಕೊಂಡು ಚುಂಬಿಸುತ್ತಿರುವಂತೆ ಈಗ ಕನಸಿನಲ್ಲಿ ಕಂಡೆನು.

೨೧. ಎಲೈ ಪ್ರಾಣಕಾಂತನೇ, ಈರೀತಿಯಾದ ದುಃಸ್ವಪ್ನವನ್ನು ಕಂಡು ನನ್ನ ಬಲಭಾಗದ ಅಂಗಗಳೆಲ್ಲವೂ ಅದುರುವುದಲ್ಲದೆ ಪ್ರಾಣಗಳೂ ಸಹ ಚಂಚಲ ಗೊಂಡಿವೆ.

೨೨. ಶೋಕದಿಂದ ನನ್ನ ಜೀವವು ತಳಮಳಗೊಂಡಿದೆ. ಮನಸ್ಸು ಚಿಂತಾ ಕ್ರಾಂತವಾಗಿದೆ. ಎಲೈ ಪ್ರಾಣಕಾಂತನೇ, ವೇದಜ್ಞರಲ್ಲಿ ಶ್ರೇಷ್ಠನಾದ ನೀನು ಇದೇಕೆಂಬುದನ್ನು ಪರ್ಯಾಲೋಚಿಸಿ ಹೇಳು.

೨೩. ರಾಧಾದೇವಿಯು ಈರೀತಿಯಾಗಿ ಹೇಳುತ್ತ ಭಯದಿಂದ ಒಣಗಿಹೋದ ಕಂಠ ತಾಲುಗಳುಳ್ಳವಳಾಗಿ, ದುಃಖದಿಂದ ಬಳಲುತ್ತ ಶ್ರೀಕೃಷ್ಣನ ಕಾಲುಗಳಮೇಲೆ ಬಿದ್ದಳು.

ಶ್ರುತ್ವಾ ಸ್ವಪ್ನಂ ಜಗನ್ನಾಥೋ ದೇವೀಂ ಕೃತ್ವಾ ಸ್ವವಕ್ಷಸಿ |
ಆಧ್ಯಾತ್ಮಿಕೇನ ಯೋಗೇನ ಬೋಧಯಾಮಾಸ ತತ್ಕ್ಷಣಂ || ೨೪ ||

ತತ್ಯಾಜ ಶೋಕಂ ಸಾ ದೇವೀ ಜ್ಞಾನಂ ಸಂಪ್ರಾಪ್ಯ ನಿರ್ಮಲಂ |
ಶಾಂತಂ ಚ ಭಗವಂತಂ ಚ ಕೃತ್ವಾ ಕಾಂತಂ ಸ್ವವಕ್ಷಸಿ || ೨೫ ||

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣನಾರದಸಂವಾದೇ
ಶ್ರೀ ರಾಧಾಶೋಕಾಪನೋದನೇ
ಷಟ್‌ಷಷ್ಟಿತಮೋಽಧ್ಯಾಯಃ

---

೨೪. ಜಗದೊಡೆಯನಾದ ಶ್ರೀಕೃಷ್ಣನು ರಾಧಾದೇವಿಯ ಕನಸಿನ ವೃತ್ತಾಂತವನ್ನೆಲ್ಲ ಕೇಳಿ ಆಕೆಯನ್ನು ತನ್ನ ವಕ್ಷಃಸ್ಥಲದಲ್ಲಿ ಅಪ್ಪಿಕೊಂಡು ಆಕೆಗೆ ಆಧ್ಯಾತ್ಮಿಕ ತತ್ವಗಳನ್ನುಪದೇಶಿಸಿ ಸಮಾಧಾನಗೊಳಿಸಿದನು.

೨೫. ಕೂಡಲೇ ರಾಧಾದೇವಿಯು ಶಾಂತನೂ, ಭಗವಂತನೂ ಆದ ತನ್ನ ಕಾಂತನನ್ನು ಆಲಿಂಗಿಸಿಕೊಂಡು, ನಿರ್ಮಲವಾದ ಜ್ಞಾನವನ್ನು ಹೊಂದಿ ತನ್ನ ದುಃಖವನ್ನು ದೂರಮಾಡಿದಳು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದ ಉತ್ತರಾರ್ಧದ
ನಾರಾಯಣ ನಾರದ ಸಂವಾದದಲ್ಲಿ ಶ್ರೀ ರಾಧೆಯ ಶೋಕಪರಿಹಾರವನ್ನು
ತಿಳಿಸುವ ಅರವತ್ತಾರನೆಯ ಅಧ್ಯಾಯವು ಮುಗಿದುದು.

ಅರವತ್ತಾರನೆಯ ಅಧ್ಯಾಯದ ಸಾರಾಂಶ

ಅತ್ತ ನಂದಗೋಕುಲದಲ್ಲಿ ಶ್ರೀಕೃಷ್ಣನು ರಾಧಾದೇವಿಯೊಡನೆ ರಾಸಮಂಡಲದಲ್ಲಿ ಚಿರಕಾಲ ರಾಸಕ್ರೀಡೆಯಾಡಿ ಸುಖನಿದ್ರೆಯಲ್ಲಿದ್ದನು. ರಾಧಾದೇವಿಯೂ ಸಹ ಕ್ಷಣಕಾಲ ಸುಖವಾಗಿ ನಿದ್ರಿಸಿ ಇದ್ದಕ್ಕಿದ್ದಂತೆಯೇ ದುಃಸ್ವಪ್ನವನ್ನು ಕಂಡು ಗಾಭರಿಯಿಂದ ಎಚ್ಚೆತ್ತು ತನ್ನ ಪತಿಯನ್ನು ಆಲಿಂಗಿಸಿಕೊಂಡು ಮುಂದೆ ಏನಾಗುವುದೋ ಎಂದು ಭೀತಳಾಗಿ ಇಂತೆಂದಳು. ' ಎಲೈ ಪತಿದೇವನೇ, ಈಗ ನನಗೊಂದು ಕೆಟ್ಟ ಕನಸಾಯಿತು ಆ ಕನಸಿನಲ್ಲಿ ನನ್ನ ಕೈಲಿದ್ದ ರತ್ನಖಚಿತವಾದ ಛತ್ರಿಯನ್ನು ಬ್ರಾಹ್ಮಣನೊಬ್ಬನು ಕಿತ್ತುಕೊಂಡು ನನ್ನನ್ನು ಅಗಾಧವಾದ ಸಮುದ್ರಕ್ಕೆ ನೂಕಿಬಿಟ್ಟನು. ಅಲ್ಲಿ ನಾನು ಮುಳುಗಿ ಏಳುತ್ತ ಆಕಾಶದಿಂದ ಚಂದ್ರ ಸೂರ್ಯ ಮಂಡಲಗಳು ಕೆಳಕ್ಕೆ ಬಿದ್ದು ಚೂರುಚೂರಾದಂತೆ ಕಂಡೆನು ಇದೇರೀತಿ ಅನೇಕ ದುಃಸ್ವಪ್ನಗಳಾದವು. ಎಲೈ ಪ್ರಾಣಕಾಂತನೇ, ಈ ಕನಸಿನಿಂದ ಏನು ದುಷ್ಪರಿಣಾಮವಾಗುವುದೋ ಎಂದು ಭಯಪಡುತ್ತಿದ್ದೇನೆ. ಈರೀತಿಯಾಗಿ ನುಡಿದ ರಾಧಾದೇವಿಯನ್ನು ಶ್ರೀ ಕೃಷ್ಣನು ತನ್ನ ವಕ್ಷಃಸ್ಥಲದಲ್ಲಿ ಅಪ್ಪಿಕೊಂಡು ಅವಳಿಗೆ ಆಧ್ಯಾತ್ಮಿಕ ತತ್ವಗಳನ್ನು ಬೋಧಿಸಿ ಸಮಾಧಾನಪಡಿಸಿದನು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ಷಟ್‌ಸಪ್ತತಿತಮೋಽಧ್ಯಾಯಃ ||

|| ಶ್ರೀ ನಾರಾಯಣ ಉವಾಚ ||

ವಿರಹವ್ಯಾಕುಲಾಂ ದೃಷ್ಟ್ವಾ ಕಾಮಿನೀಂ ಕಾಮಮೋಹನಃ |
ಕೃತ್ವಾ ವಕ್ಷಸಿ ತಾಂ ಕೃಷ್ಣೋ ಯಯೌ ಕ್ರೀಡಾಸರೋವರಂ || ೧ ||

ರಾಜರಾಜೇಶ್ವರೀ ರಾಧಾ ಕೃಷ್ಣವಕ್ಷಸಿ ರಾಜತೇ |
ಸೌದಾಮನೀವ ಜಲದೇ ನವೀನೇ ಗಗನೇ ಮುನೇ || ೨ ||

ರೇಮೇ ಸ ರಮಯಾ ಸಾರ್ಧಂ ಕೃಪಯಾ ಚ ಕೃಪಾನಿಧಿಃ |
ದ್ವಯೋರ್ದ್ವಯೋರ್ಯಥಾ ಸ್ವರ್ಣಮಣ್ಯೋರ್ಮಾರಕತೋ ಮಣಿಃ || ೩ ||

ಅರವತ್ತೇಳನೆಯ ಅಧ್ಯಾಯವು

೧. ಶ್ರೀ ನಾರಾಯಣ :—ಮನ್ಮಥನನ್ನು ಮೋಹಗೊಳಿಸುವ ಸುಂದರರೂಪವುಳ್ಳ ಶ್ರೀಕೃಷ್ಣನು ವಿರಹ ವ್ಯಾಕುಲಳಾದ ರಾಧೆಯನ್ನು ತನ್ನ ವಕ್ಷಃಸ್ಥಳದಲ್ಲಿ ಅಪ್ಪಿಕೊಂಡು ಕ್ರೀಡಾಸರೋವರಕ್ಕೆ ಕರೆದೊಯ್ದನು.

೨ ಎಲೈ ಮುನಿಯೇ, ಗಗನಾಂಗಣದಲ್ಲಿ ನೀಲಮೇಘದ ಮಧ್ಯದಲ್ಲಿ ಹೊಳೆಯುವ ಮಿಂಚಿನಂತೆ ರಾಜ ರಾಜೇಶ್ವರಿಯಾದ ರಾಧೆಯು ನೀಲಮೇಘಶ್ಯಾಮನಾದ ಶ್ರೀಕೃಷ್ಣನ ವಕ್ಷಃಸ್ಥಳದಲ್ಲಿ ಶೋಭಿಸುತ್ತಿದ್ದಳು.

೩. ಕೃಪಾನಿಧಿಯಾದ ಶ್ರೀಕೃಷ್ಣನು ಕೃಪೆಯಿಂದ ಆ ರಾಧಾದೇವಿಯೊಡನೆ ರಮಿಸಿದನು. ಅವರಿಬ್ಬರ ಸಂಬಂಧವು ಸುವರ್ಣಮಣಿಗೂ ಮರಕತಮಣಿಗೂ ಸಂಬಂಧವಾದಂತೆ ಮನೋಹರವಾಗಿದ್ದಿತು.

ರತ್ನನಿರ್ಮಾಣಪರ್ಯಂಕೇ ರತ್ನೇಂದ್ರಸಾರನಿರ್ಮಿತೇ ।
ರತ್ನಪ್ರದೀಪೇ ಜ್ವಲತಿ ರತ್ನಭೂಷಣಭೂಷಿತಃ ॥ ೪ ॥

ರತ್ನಭೂಷಾಭೂಷಿತಯಾ ರಾಸರತ್ನಶ್ಚ ಕೌತುಕಾತ್ ।
ರಾಸರತ್ನಾಕರೇ ರಮ್ಯೇ ನಿಮಗ್ನೋ ರಸಿಕೇಶ್ವರಃ ॥ ೫ ॥

ರಾಸೇ ರಾಸೇಶ್ವರೀ ರಾಧಾ ರಾಸೇಶ್ವರಮುವಾಚ ಸಾ ।
ಸುರತೌ ವಿರತೌ ಸತ್ಯಾಂ ವಿರತೇ ನ ಮನೋರಥೇ ॥ ೬ ॥

॥ ರಾಧಿಕೋವಾಚ ॥

ಪ್ರಫುಲ್ಲಾಹಂ ತ್ವಯಾ ನಾಥ ಮೃತಾ ಮ್ಲಾನಾ ಚ ತ್ವಾಂ ವಿನಾ ।
ಯಥಾ ಮಹೌಷಧಿಗಣಃ ಪ್ರಭಾತೇ ಭಾತಿ ಭಾಸ್ಕರೇ ॥ ೭ ॥

ನಕ್ತಂ ದೀಪಶಿಖೇವಾSಹಂ ತ್ವಯಾ ಸಾರ್ಧಂ ತ್ವಯಾ ವಿನಾ ।
ದಿನೇ ದಿನೇ ಯಥಾ ಕ್ಷೀಣಾ ಕೃಷ್ಣಪಕ್ಷೇ ವಿಧೋಃ ಕಲಾ ॥ ೮ ॥

---

೪. ರತ್ನಾಲಂಕಾರ ಭೂಷಿತನಾದ ಶ್ರೀಕೃಷ್ಣನು ಶ್ರೇಷ್ಠರತ್ನಗಳಿಂದ ನಿರ್ಮಿತವಾದ ಮಂಚದಲ್ಲಿ ರಾಧಾದೇವಿಯೊಡನೆ ಮಂಡಿಸಿ ರತ್ನದೀಪವು ಪ್ರಜ್ವಲಿಸುತ್ತಿರಲು ರತಿಕ್ರೀಡೆಯಾಡಿದನು.

೫. ರಾಸಕ್ರೀಡೆಯಲ್ಲಿ ರತ್ನಪ್ರಾಯನಾದ ರಸಿಕೇಶ್ವರನು (ಶ್ರೀಕೃಷ್ಣನು) ರತ್ನಭೂಷಣಭೂಷಿತಳಾದ ರಾಧೆಯೊಡನೆ ರಮ್ಯವಾದ ರತಿಸಾಗರದಲ್ಲಿ ಮುಳುಗಿ ಆನಂದ ಪರವಶನಾದನು.

೬. ಸುರತಸುಖವು ಮುಗಿದರೂ ಸಹ ತನ್ನ ಮನೋರಥವು ಪರಿಪೂರ್ಣವಾಗದಿರಲು ರಾಸೇಶ್ವರಿಯಾದ ರಾಧೆಯು ರಾಸಮಂಡಲದಲ್ಲಿ ರಾಸೇಶ್ವರನನ್ನು ಕುರಿತಿಂತೆಂದಳು.

೭. ರಾಧಿಕಾ :— ಎಲೈ ನಾಥನೇ, ನಿನ್ನೊಡಗೂಡಿದಾಗ ಆನಂದದಿಂದ ವಿಕಾಸಗೊಂಡಿರುವ ನಾನು ನಿನ್ನ ವಿರಹದಲ್ಲಿ ಮೃತಪ್ರಾಯಳಾಗಿ ಬೆಳಗಿನಹೊತ್ತು ಸೂರ್ಯನು ಬೆಳಗುತ್ತಿರುವಾಗ ಮಹೌಷಧಿಗಳು ಬಾಡುವಂತೆ ಬಾಡಿಹೋಗುವೆನು.

೮. ನಿನ್ನೊಡಗೂಡಿದ ನಾನು ರಾತ್ರಿಯಕಾಲದ ದೀಪಶಿಖೆಯಂತೆ ಬೆಳಗುವೆನು. ನೀನಿಲ್ಲದಿದ್ದರೆ, ಕೃಷ್ಣಪಕ್ಷದಲ್ಲಿ ಚಂದ್ರಕಲೆಯು ದಿನದಿನಕ್ಕೂ ಕ್ಷೀಣವಾಗುವಂತೆ ಕ್ಷೀಣಳಾಗುವೆನು.

ತವ ವಕ್ಷಸಿ ಮೇ ದೀಪ್ತಿಃ ಪೂರ್ಣಚಂದ್ರಪ್ರಭಾ ಸಮಾ ।
ಸದ್ಯೋ ಮೃತಾ ತ್ವಯಾ ತ್ಯಕ್ತ್ವಾ ಕುಹ್ವಾಂ ಚಂದ್ರಕಲಾ ಯಥಾ ॥ ೯ ॥

ಜ್ವಲದಗ್ನಿಶಿಖೇವಾಹಂ ಘೃತಾಹುತ್ಯಾ ತ್ವಯಾ ಸಹ ।
ತ್ವಯಾ ವಿನಾಽಹಂ ನಿರ್ವಾಣಾ ಶಿಶಿರೇ ಪದ್ಮಿನೀ ಯಥಾ ॥ ೧೦ ॥

ಚಿಂತಾಜ್ವರಜರಾಗ್ರಸ್ತಾ ಮತ್ತಸ್ತ್ವಯಿ ಗತೇಽಪ್ಯಹಂ ।
ಅಸ್ತಂ ಗತೇ ರವೌ ಚಂದ್ರೇ ಧ್ವಾಂತಗ್ರಸ್ತಾ ಧರಾ ಯಥಾ ॥ ೧೧ ॥

ಭ್ರಷ್ಟೋ ವೇಷಸ್ತ್ವಾಂ ವಿನಾ ಮೇ ರೂಪಂ ಯೌವನಚೇತನಂ ।
ತಾರಾವಲೀ ಪರಿಭ್ರಷ್ಟಾ ಸೂರ್ಯಸೂತೋಽದಯೇ ಯಥಾ ॥ ೧೨ ॥

ತ್ವಮೇವಾತ್ಮಾ ಚ ಸರ್ವೇಷಾಂ ಮಮ ನಾಥೋ ವಿಶೇಷತಃ ।
ತನುರ್ಯಥಾತ್ಮನಾ ತ್ಯಕ್ತ್ವಾ ತಥಾಽಹಂ ಚ ತ್ವಯಾ ವಿನಾ ॥ ೧೩ ॥

---

೯. ನಿನ್ನ ವಕ್ಷಃಸ್ಥಳದಲ್ಲಿರುವಾಗ ನನ್ನ ತೇಜಸ್ಸು ಪೂರ್ಣಚಂದ್ರನ ಕಾಂತಿಗೆ ಸಮಾನವಾಗಿರುವುದು. ನಿನ್ನಿಂದ ವಿರಹಿತಳಾದರೆ ಅಮಾವಾಸ್ಯೆಯ ಚಂದ್ರಕಲೆಯಂತೆ ಮೃತಪ್ರಾಯಳಾಗುವೆನು.

೧೦. ನಿನ್ನೊಡನಿರುವಾಗ ತುಪ್ಪದ ಆಹುತಿಯಿಂದ ಹೆಚ್ಚಿದ ಅಗ್ನಿಜ್ವಾಲೆಯಂತಿರುವ ನಾನು ನಿನ್ನ ಅಗಲಿಕೆಯಲ್ಲಿ ಶಿಶಿರ ಋತುವಿನ ಕಮಲಿನಿಯಂತೆ ಕೃಶಳಾಗುವೆನು.

೧೧. ನನ್ನನಗಲಿ ನೀನು ಹೊರಟುಹೋದರೆ ಚಿಂತಾಜ್ವರದಿಂದಲೂ ಮುಪ್ಪಿನಿಂದಲೂ ಗ್ರಸ್ತಳಾದ ನಾನು, ಸೂರ್ಯಚಂದ್ರರು ಅಸ್ತರಾದಾಗ ಅಂಧಕಾರಗ್ರಸ್ತವಾದ ಭೂಮಂಡಲದಂತೆ ಕಾಂತಿಹೀನಳಾಗುವೆನು.

೧೨. ಸೂರ್ಯಸಾರಥಿಯಾದ ಅರುಣನ ಉದಯದಲ್ಲಿ ರಾತ್ರಿಯ ಭೂಷಣವಾದ ನಕ್ಷತ್ರಗಳು ಕಳಚಿಬೀಳುವಂತೆ, ನಿನ್ನನ್ನಗಲಿದಾಗ ನನ್ನ ಯೌವನವೂ, ರೂಪವೂ, ವೇಷವೂ ಮತ್ತು ಚೇತನವೂ ನಷ್ಟವಾಗುವುದು.

೧೩. ಸಕಲ ಜೀವಿಗಳ ಅಂತರಾತ್ಮನಾದ ನೀನು ವಿಶೇಷವಾಗಿ ನನ್ನ ಪ್ರಾಣನಾಥನಾಗಿರುವೆ. ನಿನ್ನನಗಲಿದ ನಾನು ಆತ್ಮನಿಂದ ತ್ಯಕ್ತವಾದ ಶರೀರದಂತೆ ತೇಜೋಹೀನಳಾಗುವೆನು.

ಪಂಚಪ್ರಾಣಾತ್ಮಕಸ್ತ್ವಂ ಮೇ ಮೃತಾऽಹಂ ಚ ತ್ವಯಾವಿನಾ ।
ದೃಷ್ಟೇಶ್ಚ ಗೋಲಕೌ ಯದ್ವದ್ದೃಷ್ಟಿಃ ಪುತ್ತಲಿಕಾಂ ವಿನಾ ॥ ೧೪ ॥

ಸ್ಥಲಂ ಯಥಾ ಚಿತ್ರಯುಕ್ತಂ ತ್ವಯಾ ಸಾರ್ಧಮಹಂ ತಥಾ ।
ಅಸಂಸ್ಕೃತಾ ತ್ವಯಾ ಹೀನಾ ತೃಣಚ್ಛನ್ನಾ ಯಥಾ ಮಹೀ ॥ ೧೫ ॥

ತ್ವಯಾ ಸಾರ್ಧಮಹಂ ಕೃಷ್ಣ ಚಿತ್ರಯುಕ್ತೇವ ಮೃನ್ಮಯೀ ।
ತ್ವಾಂ ವಿನಾ ಜಲಧೌತಾऽಹಂ ವಿರೂಪಾ ಮೃನ್ಮಯೀವ ಚ ॥ ೧೬ ॥

ಗೋಪಾಂಗನಾನಾಂ ಶೋಭಾ ಚ ತ್ವಯಾ ರಾಸೇಶ್ವರೇಣ ಚ ।
ಹಾರೇ ಸ್ವರ್ಣವಿಕಾರೇ ಚ ಶ್ವೇತೇನ ಮಣಿನಾ ಸಹ ॥ ೧೭ ॥

ವ್ರಜರಾಜ ತ್ವಯಾ ಸಾರ್ಧಂ ರಾಜಂತೇ ರಾಜರಾಜಯಃ ।
ಯಥಾ ಚಂದ್ರೇಣ ನಭಸಿ ತಾರಾರಾಜಿರ್ವಿರಾಜತೇ ॥ ೧೮ ॥

---

೧೪. ನೀನು ನನ್ನ ಪಂಚಪ್ರಾಣಾತ್ಮಕನಾಗಿರುವುದರಿಂದ ನೀನಿಲ್ಲದಿದ್ದರೆ ನಾನು ಮೃತಳಾದಂತೆಯೇ. ಕಣ್ಣಿನ ಪಾಪಗಳು ಹೋದಮೇಲೆ ಗೋಳಕಗಳಿದ್ದು ಪ್ರಯೋಜನವೇನು ?

೧೫. ನಿನ್ನೊಡನಿರುವ ನಾನು ಚಿತ್ರವನ್ನು ಬರೆದ ಸ್ಥಳದಂತೆ ಮನೋಹರಳಾಗಿರುವೆನು. ನಿನ್ನ ವಿರಹದಿಂದ ಕೂಡಿದ ನಾನು ಹುಲ್ಲು ಬೆಳೆದುಕೊಂಡಿರುವ ಅಸಂಸ್ಕೃತವಾದ ಭೂಮಿಯಂತೆ ಇರುವೆನು.

೧೬. ಎಲೈ ಕೃಷ್ಣನೇ, ನಿನ್ನೊಡನಿರುವ ನಾನು ಚಿತ್ರದಿಂದ ಕೂಡಿದ ಮಣ್ಣಿನ ಪ್ರತಿಮೆಯಂತೆ ಸುಂದರಳಾಗಿರುವೆನು. ನಿನ್ನನಗಲಿದ ನಾನು ನೀರಿನಿಂದ ತೊಳೆದ ಹಸೀಮಣ್ಣಿನ ಪ್ರತಿಮೆಯಂತೆ ವಿರೂಪಳಾಗುವೆನು.

೧೭. ಸುವರ್ಣವಿಕಾರವಾದ ಹಾರವು ಬಿಳುಪಾದ ಮಧ್ಯಮಣಿಯಿಂದ ಶೋಭಿಸುವಂತೆ, ರಾಸೇಶ್ವರನಾದ ನಿನ್ನನ್ನು ಮಧ್ಯದಲ್ಲಿ ಪಡೆದಿರುವ ಗೋಪಾಂಗನೆಯರೂ ಸಹ ಶೋಭಿಸುವರು.

೧೮. ಆಕಾಶದಲ್ಲಿರುವ ನಕ್ಷತ್ರಗಳ ಮಾಲೆಯು ಚಂದ್ರನಿಂದ ಶೋಭಿಸುವಂತೆ ವ್ರಜರಾಜನಾದ ನಿನ್ನಿಂದ ಗೋಪಾಲಕರ ಪಂಕ್ತಿಗಳೆಲ್ಲವೂ ಶೋಭಿಸುವುವು.

ತ್ವಯಾ ಶೋಭಾ ಯಶೋದಾಯಾ ನಂದಸ್ಯ ನಂದನಂದನ ।
ಯಥಾ ಶಾಖಾಫಲಸ್ಕಂಧೈಸ್ತರುರಾಜಿರ್ವಿರಾಜತೇ ॥ ೧೯ ॥

ತ್ವಯಾ ಸಾರ್ಧಂ ಗೋಕುಲೇಶ ಶೋಭಾ ಗೋಕುಲವಾಸಿನಾಂ ।
ಯಥಾ ಸರ್ವಾ ಲೋಕರಾಜೀ ರಾಜೇಂದ್ರೇಣ ವಿರಾಜತೇ ॥ ೨೦ ॥

ರಾಸಸ್ಯಾಪಿ ಚ ರಾಸೇಶ ತ್ವಯಾ ಶೋಭಾ ಮನೋಹರಾ ।
ರಾಜತೇ ದೇವರಾಜೇನ ಯಥಾ ಸ್ವರ್ಗೇಽಮರಾವತೀ ॥ ೨೧ ॥

ವೃಂದಾವನಸ್ಯ ವೃಕ್ಷಾಣಾಂ ತ್ವಂ ಚ ಶೋಭಾ ಪತಿರ್ಗತಿಃ ।
ಅನ್ಯೇಷಾಂ ಚ ವನಾನಾಂ ಚ ಬಲವಾನ್ಕೇಸರೀ ಯಥಾ ॥ ೨೨ ॥

ತ್ವಯಾ ವಿನಾ ಯಶೋದಾ ಚ ನಿಮಗ್ನಾ ಶೋಕಸಾಗರೇ ।
ಅಪ್ರಾಪ್ಯ ವತ್ಸಂ ಸುರಭಿಃ ಕ್ರೋಶಂತೀ ವ್ಯಾಕುಲಾ ಯಥಾ ॥ ೨೩ ॥

---

೧೯. ಎಲೈ ನಂದಕುಮಾರನೇ, ಕವಲುಗಳಿಂದಲೂ, ಕೊಂಬೆಗಳಿಂದಲೂ, ಹಣ್ಣುಗಳಿಂದಲೂ ಸಹ ಮರಗಳಸಾಲು ಶೋಭಿಸುವಂತೆ ನಿನ್ನಿಂದ ನಂದ ಯಶೋದೆಯರು ಶೋಭಿಸುವರು.

೨೦. ಎಲೈ ಗೋಕುಲಾಧಿಪತಿಯೇ, ಶ್ರೇಷ್ಠನಾದ ರಾಜನಿಂದ ಪ್ರಜಾಸಮುದಾಯವೆಲ್ಲವೂ ಬೆಳಗುವಂತೆ ಗೋಕುಲವಾಸಿಗಳೆಲ್ಲರೂ ನಿನ್ನಿಂದಲೇ ಬೆಳಗುವರು.

೨೧. ಎಲೈ ರಾಸೇಶ್ವರನೇ, ರಾಸಮಂಡಲಕ್ಕೂ ಸಹ ನಿನ್ನಿಂದಲೇ ಮನೋಹರವಾದ ಶೋಭೆಯುಂಟಾಗುವುದು.:ಸ್ವರ್ಗದಲ್ಲಿ ಅಮರಾವತಿಯು ದೇವೇಂದ್ರನಿಂದ ಶೋಭಿಸುವಂತೆ ರಾಸಮಂಡಲವು ನಿನ್ನಿಂದ ಶೋಭಿಸುವುದು.

೨೨. ಬಲಿಷ್ಠವಾದ ಸಿಂಹವು ವನಗಳಿಗೆಲ್ಲ ಅಧಿಪತಿಯಾಗಿರುವಂತೆ ನೀನು ವೃಂದಾವನದ ವೃಕ್ಷಗಳಿಗೆಲ್ಲ ಅಧಿಪತಿಯಾಗಿರುವೆ. ನಿನ್ನಿಂದಲೇ ಆ ವೃಕ್ಷಗಳಿಗೆಲ್ಲ ಒಂದು ಕಾಂತಿಯುಂಟಾಗುವುದು.

೨೩. ಕಾಮಧೇನುವು ತನ್ನ ಕರುವನ್ನು ಕಾಣದೆ ವ್ಯಾಕುಲಗೊಂಡು ದುಃಖಪಡುವಂತೆ ನಿನ್ನನಗಲಿದ ಯಶೋದೆಯು ಶೋಕಸಾಗರದಲ್ಲಿ ಮುಳುಗಿ ಸಂಕಟಪಡುವಳು.

ಆಂದೋಲಯಂತಿ ನಂದಸ್ಯ ಪ್ರಾಣಾ ದಗ್ಧಂ ಚ ಮಾನಸಂ ।
ತ್ವಯಾ ವಿನಾ ತಪ್ತಪಾತ್ರೇ ಯಥಾ ಧಾನ್ಯಸಮೂಹಕಃ ॥ ೨೪ ॥

ಇತ್ಯುಕ್ತ್ವಾ ಪರಮಪ್ರೇಮ್ಣಾ ಸಾ ಪತಂತೀ ಹರೇಃ ಪದೇ ।
ಪುನರಾಧ್ಯಾತ್ಮಿಕೇನೈವ ಬೋಧಯಾಮಾಸ ತಾಂ ವಿಭುಃ ॥ ೨೫ ॥

ಆಧ್ಯಾತ್ಮಿಕೋ ಮಹಾಯೋಗೋ ಮೋಹಸಂಭೇದಕಾರಣಂ ।
ಯಥಾ ಪರ್ಶುಶ್ಚ ವೃಕ್ಷಾಣಾಂ ತೀಕ್ಷ್ಣಧಾರಶ್ಚ ನಾರದ ॥ ೨೬ ॥

॥ ನಾರದ ಉವಾಚ ॥

ಆಧ್ಯಾತ್ಮಿಕಂ ಮಹಾಯೋಗಂ ವದ ವೇದವಿದಾಂ ವರ ।
ಶೋಕಚ್ಛೇದಂ ಚ ಲೋಕಾನಾಂ ಶ್ರೋತುಂ ಕೌತೂಹಲಂ ಮಮ ॥ ೨೭ ॥

---

೨೪. ಕಾದಿರುವ ಓಡಿನಲ್ಲಿ ಧಾನ್ಯದ ಕಾಳುಗಳು ಸುಟ್ಟು ಸಿಡಿಯುವಂತೆ ನಿನ್ನನಗಲಿದ ನಂದಗೋಪನ ಪ್ರಾಣಗಳು ಸಿಡಿಯುವುವು. ಅವನ ಮನಸ್ಸು ವ್ಯಥೆಯಿಂದ ಬೆಂದುಹೋಗುವುದು

೨೫. ಹೀಗೆ ಹೇಳುತ್ತಾ, ಆ ರಾಧಾದೇವಿಯು ಶ್ರೀಕೃಷ್ಣನ ಪಾದಗಳಮೇಲೆ ಪರಮ ಪ್ರೇಮದಿಂದ ಬಿದ್ದು ಮತ್ತೆ ಮತ್ತೆ ಅತ್ತಳು ಆಗ ವಿಭುವಾದ ಶ್ರೀಕೃಷ್ಣನು ಪುನಃ ಅವಳಿಗೆ ಆಧ್ಯಾತ್ಮಿಕ ತತ್ವಗಳನ್ನು ಪದೇಶಿಸಿ ಸಮಾಧಾನಗೊಳಿಸಿದನು.

೨೬. ಆಧ್ಯಾತ್ಮಿಕವಾದ ಮಹಾ ಯೋಗವು ಜನರ ಅಜ್ಞಾನವನ್ನು ನಾಶಗೊಳಿಸಲು ಮೂಲಕಾರಣವಾಗಿರುವುದು. ಎಲೈ ನಾರದನೇ, ಹರಿತವಾದ ಅಲಗುಳ್ಳ ಕೊಡಲಿಯು ಮರವನ್ನು ಕತ್ತರಿಸುವಂತೆ ಆಧ್ಯಾತ್ಮಿಕಜ್ಞಾನವು ಅಜ್ಞಾನವನ್ನು ಕತ್ತರಿಸುವುದು.

೨೭. ನಾರದ;— ಎಲೈ ವೇದಜ್ಞರಲ್ಲಿ ಶ್ರೇಷ್ಠನಾದ ನಾರಾಯಣಮಹರ್ಷಿಯೇ, ಜನರ ಶೋಕವನ್ನು ಪರಿಹರಿಸುವ ಆಧ್ಯಾತ್ಮಿಕ ಜ್ಞಾನವನ್ನು ನನಗೆ ಕೇಳಲು ಬಹಳ ಆಸೆಯಿದೆ. ದಯವಿಟ್ಟು ಉಪದೇಶಿಸು.

॥ ಶ್ರೀ ನಾರಾಯಣ ಉವಾಚ ॥

ಅಧ್ಯಾತ್ಮಿಕೋ ಮಹಾಯೋಗೋ ನ ಜ್ಞಾತೋ ಯೋಗಿನಾಮಪಿ ।
ಸ ಚ ನಾನಾಪ್ರಕಾರಶ್ಚ ಸರ್ವಂ ವೇತ್ತಿ ಹರಿಃ ಸ್ವಯಂ ॥ ೨೮ ॥

ಕಿಂಚಿದಾಧ್ಯಾತ್ಮಿಕಂ ಚೈವ ಗೋಲೋಕೇ ರಾಧಿಕೇಶ್ವರಃ ।
ಸುಪ್ರೀತಃ ಕಥಯಾಮಾಸ ತ್ರಿಪುರಾರಿಂ ಯಥಾ ಮುನೇ ॥ ೨೯ ॥

ಸಹಸ್ರೇಂದ್ರನಿಪಾತಾಂತಂ ತಪಃ ಕುರ್ವಂತಮೀಶ್ವರಂ ।
ಜ್ಯೇಷ್ಠಂ ಶ್ರೇಷ್ಠಂ ವೈಷ್ಣವಾನಾಂ ವರಿಷ್ಠಂ ಚ ತಪಸ್ವಿನಾಂ ॥ ೩೦ ॥

ಪುಷ್ಕರೇ ದುಷ್ಕರಂ ತಪ್ತ್ವಾ ಪಾದ್ಮೇ ಪಾದ್ಮಂ ಚ ಪದ್ಮಜಃ ।
ದೃಷ್ಟ್ವಾ ತಂ ಸಾದರಂ ಕೃತ್ವಾ ಉವಾಚ ಕಿಂಚಿದೇವ ತಂ ॥ ೩೧ ॥

ಶತೇಂದ್ರಪಾತಪರ್ಯಂತಂ ಕಠೋರೇಣ ಕೃಶೋದರಂ ।
ನಿಶ್ಚೇಷ್ಟಮಸ್ಥಿಸಾರಂ ಚ ಕೃಪಯಾ ಚ ಕೃಪಾನಿಧಿಃ ॥ ೩೨ ॥

---

೨೮. ಶ್ರೀನಾರಾಯಣ :— ಎಲೈ ನಾರದನೇ, ಆಧ್ಯಾತ್ಮಿಕವಾದ ದಿವ್ಯ ಜ್ಞಾನವು ಯೋಗಿಗಳಿಗೂ ಸಹ ತಿಳಿಯದು. ಅದು ಅನೇಕಪ್ರಕಾರವಾಗಿದೆ. ಸ್ವಯಂ ಶ್ರೀಹರಿಯೊಬ್ಬನೇ ಅದನ್ನು ತಿಳಿದಿರುವನು.

೨೯–೩೦. ಎಲೈ ಮುನಿಯೇ, ಸಾವಿರ ಇಂದ್ರರ ಜೀವಿತಕಾಲಪರ್ಯಂತವಾಗಿ ತಪಸ್ಸು ಮಾಡುತ್ತಿದ್ದ, ಶ್ರೇಷ್ಠನೂ, ವೈಷ್ಣವರಲ್ಲಿ ಜ್ಯೇಷ್ಠನೂ, ತಪಸ್ವಿಗಳಲ್ಲಿ ವರಿಷ್ಠನೂ ತ್ರಿಪುರಾರಿಯೂ ಆದ ಈಶ್ವರನಿಗೆ ಗೋಲೋಕದಲ್ಲಿ ರಾಧಾರಮಣನು ಪ್ರಸನ್ನನಾಗಿ ಕೆಲವು ಆಧ್ಯಾತ್ಮಿಕ ತತ್ವಗಳನ್ನು ಉಪದೇಶಮಾಡಿದನು.

೩೧–೩೨. ಹಿಂದೆ ಪಾದ್ಮಕಲ್ಪದಲ್ಲಿ ಪದ್ಮೋದ್ಭವನಾದ ಬ್ರಹ್ಮನು ಪುಷ್ಕರ ಕ್ಷೇತ್ರದಲ್ಲಿ ಪರಮಾತ್ಮನನ್ನು ಕುರಿತು ತಪಸ್ಸು ಮಾಡಿದನು. ನೂರು ಇಂದ್ರರ ಜೀವಿತಕಾಲದವರೆಗೆ ಕಠಿಣ ತಪಸ್ಸನ್ನು ಮಾಡಿ ಕೃಶೋದರನಾಗಿಯೂ, ಅಸ್ಥಿಮಾತ್ರಾವಶಿಷ್ಟನಾಗಿಯೂ, ನಿಶ್ಚೇಷ್ಟನಾಗಿಯೂ ಇರುವ ಬ್ರಹ್ಮನನ್ನು ದಯಾನಿಧಿಯಾದ ಪರಮಾತ್ಮನು ನೋಡಿ ಕನಿಕರಗೊಂಡು ಆದರದಿಂದ ಅವನಿಗೆ ಕೆಲವು ಆಧ್ಯಾತ್ಮಿಕ ತತ್ವಗಳನ್ನು ಉಪದೇಶ ಮಾಡಿದನು.

ಸಿಂಹಕ್ಷೇತ್ರೇ ಪುರಾ ಧರ್ಮಂ ಮತ್ತಾತಂ ಧರ್ಮಿಣಾಂ ವರಂ ।
ಚತುರ್ದಶೇಂದ್ರಾವಚ್ಛಿನ್ನಂ ತಪಸ್ತಪ್ತ್ವಾ ಕೃಶೋದರಂ ॥ ೩೩ ॥

ಪಪಾಠಾಧ್ಯಾತ್ಮಿಕಂ ಕಿಂಚಿತ್ಕೃಪಯಾ ಚ ಕೃಪಾನಿಧಿಃ ।
ಕಿಂಚಿಚ್ಛತೇಂದ್ರಾವಚ್ಛಿನ್ನಮಾತಪಂ ತಮುವಾಚ ಸಃ ॥ ೩೪ ॥

ಕಿಂಚಿತ್ಸನತ್ಕುಮಾರಂ ಚ ತಪಂತಂ ಸುಚಿರಂ ಚಿರಂ ।
ಸುತಪಂತಮನಂತಂ ಚ ಕಿಂಚಿಚ್ಚೋವಾಚ ನಾರದ ॥ ೩೫ ॥

ಚಿರಂ ತಪಂತಂ ಕಪಿಲಂ ಹಿಮಶೈಲೇ ತಪಸ್ವಿನಂ ।
ಪುಷ್ಕರೇ ಭಾಸ್ಕರೇ ಕಿಂಚಿತ್ತಪಂತಂ ದುಷ್ಕರಂ ತಪಃ ॥ ೩೬ ॥

ಉವಾಚ ಕಿಂಚಿತ್ಪ್ರಹ್ಲಾದಂ ಕಿಂಚಿದ್ದುರ್ವಾಸಸಂ ಭೃಗುಂ ।
ಏವಂ ನಿಗೂಢಂ ಭಕ್ತಂ ಚ ಕೃಪಯಾ ಭಕ್ತವತ್ಸಲಃ ॥ ೩೭ ॥

೩೩–೩೫. ಪೂರ್ವದಲ್ಲಿ ಸಿಂಹಕ್ಷೇತ್ರದಲ್ಲಿ ಹದಿನಾಲ್ಕು ಇಂದ್ರರ ಜೀವಿತಕಾಲ ಪರ್ಯಂತವಾಗಿ ತಪಸ್ಸು ಮಾಡಿ ಕೃಶೋದರನಾಗಿದ್ದ, ಧರ್ಮಿಷ್ಠರಲ್ಲಿ ಶ್ರೇಷ್ಠನೂ ನನ್ನ ತಂದೆಯೂ ಆದ ಧರ್ಮಪುರುಷನಿಗೆ ಕೃಪಾನಿಧಿಯಾದ ಪರಮಾತ್ಮನು ಕೃಪೆಯಿಂದ ಕೆಲವು ಆಧ್ಯಾತ್ಮಿಕ ತತ್ವಗಳನ್ನು ಉಪದೇಶಿಸಿದನು. ಎಲೈ ನಾರದನೇ, ಇದೇ ರೀತಿಯಾಗಿ ಆ ಪರಮಾತ್ಮನು ನೂರು ಇಂದ್ರರ ಜೀವಿತಕಾಲಪರ್ಯಂತ ತಪಸ್ಸು ಮಾಡಿದ ಆ ಸುತಪಮಹರ್ಷಿಗೂ, ಬಹಳಕಾಲ ತಪಸ್ಸು ಮಾಡುತ್ತಿದ್ದ ಸನತ್ಕುಮಾರನಿಗೂ, ಸುತಪ ಮತ್ತು ಅನಂತ ಮುಂತಾದವರಿಗೂ ಸ್ವಲ್ಪಸ್ವಲ್ಪ ಆಧ್ಯಾತ್ಮಿಕ ತತ್ವಗಳನ್ನು ಉಪದೇಶಮಾಡಿದನು.

೩೬. ಹಿಮವತ್ಪರ್ವತದಲ್ಲಿ ಚಿರಕಾಲ ತಪಸ್ಸು ಮಾಡುತ್ತಿದ್ದ ತಪಸ್ವಿಯಾದ ಕಪಿಲ ಋಷಿಗೂ, ಪುಷ್ಕರಕ್ಷೇತ್ರದಲ್ಲಿ ದುಷ್ಕರವಾದ ತಪಸ್ಸನ್ನಾಚರಿಸುತ್ತಿದ್ದ ಭಾಸ್ಕರನಿಗೂ ಸ್ವಲ್ಪಸ್ವಲ್ಪ ಆಧ್ಯಾತ್ಮಿಕ ತತ್ವಗಳನ್ನು ಉಪದೇಶಿಸಿದನು.

೩೭. ಇದೇ ರೀತಿಯಾಗಿ ಭಕ್ತವತ್ಸಲನಾದ ಶ್ರೀಹರಿಯು ತನ್ನ ಭಕ್ತರಾದ ಪ್ರಹ್ಲಾದನಿಗೂ, ದೂರ್ವಾಸನಿಗೂ, ಭೃಗುವಿಗೂ ಸಹ ನಿಗೂಢವಾದ ಈ ಆಧ್ಯಾತ್ಮಿಕ ತತ್ವವನ್ನು ಸ್ವಲ್ಪ ಸ್ವಲ್ಪ ಉಪದೇಶಿಸಿದನು.

ಕ್ರೀಡಾಸರೋವರೇ ರಮ್ಯೇ ಯದುವಾಚ ಕೃಪಾನಿಧಿಃ ।
ಶೋಕಾರ್ತಾಂ ರಾಧಿಕಾಂ ತೆಚ್ಚ ಕಥಯಾಮಿ ನಿಶಾಮಯ ॥ ೩೮ ॥

ವಿರಸಾಂ ರಸಿಕಾಂ ದೃಷ್ಟ್ವಾ ವಾಸಯಿತ್ವಾ ಚ ವಕ್ಷಸಿ ।
ಉವಾಚಾಧ್ಯಾತ್ಮಿಕಂ ಕಿಂಚಿದ್ಯೋಗಿನೀಂ ಯೋಗಿನಾಂ ಗುರುಃ ॥ ೩೯ ॥

॥ ಶ್ರೀ ಕೃಷ್ಣ ಉವಾಚ ॥

ಜಾತಿಸ್ಮರೇ ಸ್ಮರಾತ್ಮಾನಂ ಕಥಂ ವಿಸ್ಮರಸಿ ಪ್ರಿಯೇ ।
ಸರ್ವಂ ಗೋಲೋಕವೃತ್ತಾಂತಂ ಸುದಾಮ್ನಃ ಶಾಪಮೇವ ಚ ॥ ೪೦ ॥

ಶಾಪಾತ್ಕಿಂಚಿದ್ದಿನಂ ದೀನೇ ತ್ವದ್ವಿಚ್ಛೇದೋ ಮಯಾ ಸಹ ।
ಭವಿಷ್ಯತಿ ಮಹಾಭಾಗೇ ಮೇಲನಂ ಪುನರಾವಯೋಃ ॥ ೪೧ ॥

ಪುನರೇವ ಗಮಿಷ್ಯಾಮಿ ಗೋಲೋಕಂ ತನ್ನಿಜಾಲಯಂ ।
ಗತ್ವಾ ಗೋಪಾಂಗನಾಭಿಶ್ಚ ಗೋಪೈರ್ಗೋಲೋಕವಾಸಿಭಿಃ ॥ ೪೨ ॥

---

೩೮. ಎಲೈ ನಾರದನೇ, ರಮ್ಯವಾದ ಕ್ರೀಡಾಸರೋವರದಲ್ಲಿ ಕೃಪಾನಿಧಿಯಾದ ಶ್ರೀಕೃಷ್ಣನು ಶೋಕಪೀಡಿತಳಾದ ರಾಧೆಯನ್ನು ಕುರಿತು ಹೇಳಿದ ಆಧ್ಯಾತ್ಮಿಕ ತತ್ವಗಳನ್ನೂ ಸಹ ನಿನಗೆ ಹೇಳುವೆನು ಕೇಳು.

೩೯. ಯೋಗಿಗಳ ಗುರುವಾದ ಶ್ರೀಕೃಷ್ಣಪರಮಾತ್ಮನು ಯೋಗಿನಿಯೂ ರಸಿಕಳೂ ಆದ ರಾಧೆಯು ವಿರಸಳಾಗಿರುವುದನ್ನು ಕಂಡು ಆಕೆಯನ್ನು ತನ್ನ ವಕ್ಷಃಸ್ಥಳದಲ್ಲಿ ಅಪ್ಪಿಕೊಂಡು ಕೆಲವು ಆಧ್ಯಾತ್ಮಿಕ ತತ್ವಗಳನ್ನು ಉಪದೇಶಿಸಿದನು.

೪೦. ಶ್ರೀ ಕೃಷ್ಣ :- ಎಲೌ ಜನ್ಮಾಂತರಸ್ಮರಣೆಯುಳ್ಳ ಪ್ರಿಯಳೇ, ನೀನಾರೆಂಬುದನ್ನು ನೆನಸಿಕೊಳ್ಳದೆ ಹೇಗೆ ಮರೆತುಬಿಟ್ಟಿರುವೆ ? ಹಿಂದೆ ಗೋಲೋಕದಲ್ಲಿ ನಡೆದ ಸಮಸ್ತ ವೃತ್ತಾಂತವನ್ನೂ ಸುದಾಮನ ಶಾಪವನ್ನೂ ಸಹ ಸ್ಮರಣೆಮಾಡಿಕೋ.

೪೧. ಎಲೌ ದೀನಳೇ, ಆ ಶಾಪದ ಪರಿಣಾಮವಾಗಿ ನಿನಗೆ ಕೆಲವು ದಿನಗಳು ನನ್ನ ವಿರಹವುಂಟಾಗುವುದು. ಎಲೌ ಭಾಗ್ಯಶಾಲಿನಿಯೇ, ಪುನಃ ನಮ್ಮಿಬ್ಬರ ಸಮ್ಮೇಳನವಾಗುವುದರಲ್ಲಿ ಸಂಶಯವಿಲ್ಲ.

೪೨. ಪುನಃ ನನ್ನ ವಾಸಸ್ಥಾನವಾದ ಗೋಲೋಕಕ್ಕೆ ತೆರಳುವೆನು. ಅಲ್ಲಿಗೆ ಹೋಗಿ ಗೋಪಾಂಗನೆಯರೊಡನೆಯೂ, ಗೋಪಾಲರೊಡನೆಯೂ, ಇತರರಾದ ಗೋಲೋಕವಾಸಿಗಳೊಡನೆಯೂ ಸುಖವಾಗಿರುವೆನು.

ಅಧುನಾಽಽಧ್ಯಾತ್ಮಿಕಂ ಕಿಂಚಿತ್ತ್ವಾಂ ವದಾಮಿ ನಿಶಾಮಯ ।
ಶೋಕಘ್ನಂ ಹರ್ಷದಂ ಸಾರಂ ಸುಖದಂ ಮಾನಸಸ್ಯ ಚ ॥ ೪೩ ॥

ಅಹಂ ಸರ್ವಾಂತರಾತ್ಮಾ ಚ ನಿರ್ಲಿಪ್ತಃ ಸರ್ವಕರ್ಮಸು ।
ವಿದ್ಯಮಾನಶ್ಚ ಸರ್ವೇಷು ಸರ್ವತ್ರಾದೃಷ್ಟ ಏವ ಚ ॥ ೪೪ ॥

ವಾಯುಶ್ಚರತಿ ಸರ್ವತ್ರ ಯಥೈವ ಸರ್ವವಸ್ತುಷು ।
ನ ಚ ಲಿಪ್ತಸ್ತಥೈವಾಹಂ ಸಾಕ್ಷೀ ಚ ಸರ್ವಕರ್ಮಣಾಂ ॥ ೪೫ ॥

ಜೀವೋ ಮತ್ಪ್ರತಿಬಿಂಬಶ್ಚ ಸರ್ವಃ ಸರ್ವತ್ರ ಜೀವಿಷು ।
ಭೋಕ್ತಾ ಶುಭಾಶುಭಾನಾಂ ಚ ಕರ್ತಾ ಚ ಕರ್ಮಣಾಂ ಸದಾ ॥ ೪೬ ॥

ಯಥಾ ಜಲಘಟೇಷ್ವೇವ ಮಂಡಲಂ ಚಂದ್ರಸೂರ್ಯಯೋಃ ।
ಭಗ್ನೇಷು ತೇಷು ಸಂಶ್ಲಿಷ್ಟಸ್ತಯೋರೇವ ತಥಾ ಮಯಿ ॥ ೪೭ ॥

---

೪೩. ಈಗ ಸಾರತರವೂ, ಶೋಕಪರಿಹಾರಕವೂ, ಮನಸ್ಸಿಗೆ ಸುಖಪ್ರದವೂ ಹರ್ಷದಾಯಕವೂ ಆದ ಆಧ್ಯಾತ್ಮಿಕ ತತ್ವವನ್ನು ಸ್ವಲ್ಪ ನಿನಗೆ ಉಪದೇಶಿಸುವೆನು. ಸಾವಧಾನದಿಂದ ಕೇಳು.

೪೪. ಸರ್ವಾಂತರ್ಯಾಮಿಯಾದ ನಾನು (ಆತ್ಮನು) ಪುಣ್ಯಪಾಪ ಫಲ ಪ್ರದವಾದ ಸಕಲಕರ್ಮಗಳಿಂದಲೂ ನಿರ್ಲಿಪ್ತನಾಗಿದ್ದೇನೆ. ಎಲ್ಲೆಲ್ಲಿಯೂ ಇರುವ ನಾನು ಯಾರಿಂದಲೂ ನೋಲ್ಪಡದವನಾಗಿದ್ದೇನೆ.

೪೫. ವಾಯುವು ಎಲ್ಲ ಪ್ರದೇಶದಲ್ಲೂ ಎಲ್ಲ ಜೀವಿಗಳಲ್ಲೂ ಚಲಿಸುತ್ತಿದ್ದರೂ ಸಹ ಹೇಗೆ ನಿರ್ಲಿಪ್ತವಾಗಿರುವುದೋ ಅದರಂತೆಯೇ ಸಕಲರ ಕರ್ಮಗಳಿಗೂ ಸಾಕ್ಷಿ ಭೂತನಾಗಿ ನಾನೂ ಸಹ ನಿರ್ಲಿಪ್ತನಾಗಿರುವೆನು.

೪೬. ಶುಭಾಶುಭಕರ್ಮಗಳನ್ನು ಮಾಡುವ ಮತ್ತು ಅದರ ಫಲಾಫಲ ಗಳನ್ನು ಅನುಭವಿಸುವ ಜೀವಾತ್ಮನು ನನ್ನ ಪ್ರತಿಬಿಂಬ ಸ್ವರೂಪನಾಗಿ ಸಕಲ ಜೀವಿಗಳಲ್ಲೂ ನೆಲೆಸಿರುವನು.

೪೭–೪೮. ಹೇಗೆ ಚಂದ್ರಸೂರ್ಯಬಿಂಬಗಳು ಒಂದೊಂದೇ ಆಗಿದ್ದರೂ ಬೇರೆಬೇರೆಯಾದ ಜಲಪೂರ್ಣಕುಂಭಗಳಲ್ಲಿ ಪ್ರತಿಬಿಂಬಿಸಿ ಅನೇಕವಾಗಿ ಕಾಣು ವುವೋ, ಆ ಕುಂಭಗಳು ಒಡೆದು ಹೋದ ನಂತರ ಆ ಪ್ರತಿಬಿಂಬಗಳನ್ನೆಲ್ಲ

ಜೀವಃ ಶ್ಲಿಷ್ಟಸ್ತಥಾ ಕಾಲೇ ಮೃತೇಷು ಜೀವಿಷು ಪ್ರಿಯೇ ।
ಆವಾಂ ಚ ವಿದ್ಯಮಾನೌ ಚ ಸತತಂ ಸರ್ವಜಂತುಷು ॥ ೪೮ ॥

ಆಧಾರಶ್ಚಾಹಮಾಧೇಯಂ ಕಾರ್ಯಂ ಚ ಕಾರಣಂ ವಿನಾ ।
ಅಯೇ ಸರ್ವಾಣಿ ದ್ರವ್ಯಾಣಿ ನಶ್ವರಾಣಿ ಚ ಸುಂದರಿ ॥ ೪೯ ॥

ಆವಿರ್ಭಾವಾಧಿಕಾಃ ಕುತ್ರ ಕುತ್ರಚಿನ್ನ್ಯೂನನೋವ ಚ ।
ಮಮಾಂಶಾಃ ಕೇऽಪಿ ದೇವಾಶ್ಚ ಕೇಚಿದ್ದೇವಾಃ ಕಲಾಸ್ತಥಾ ॥ ೫೦ ॥

ಕೇಚಿತ್ಕಲಾಃ ಕಲಾಂಶಾಂಶಾಸ್ತದಂಶಾಶಾಶ್ಚ ಕೇಚನ ।
ಮದಂಶಾ ಪ್ರಕೃತಿಃ ಸೂಕ್ಷ್ಮಾ ಸಾ ಚ ಮೂರ್ತ್ಯಾ ಚ ಪಂಚಧಾ ॥ ೫೧ ॥

ತಮ್ಮಲ್ಲಿಯೇ ಐಕ್ಯಮಾಡಿಕೊಳ್ಳುವುವೋ ಅದೇ ರೀತಿ ಕಾಲಕ್ರಮದಲ್ಲಿ ಜೀವಿಗಳು ಮೃತಿಹೊಂದಿದಂತೆಲ್ಲ ಅವು ನನ್ನಲ್ಲಿಯೇ ಐಕ್ಯವಾಗುವುವು. ಎಲೌ ಪ್ರಿಯಳೇ, ನಾವಿಬ್ಬರುಮಾತ್ರ ಸರ್ವಪ್ರಾಣಿಗಳಲ್ಲಿಯೂ ಸರ್ವದಾ ಸ್ತ್ರೀಪುರುಷಭೇದದಿಂದ ಇದ್ದೇ ಇರುವೆವು.

೪೯. ಆಧಾರಸ್ವರೂಪಳಾದ ನಿನ್ನಲ್ಲಿ ನಾನು 'ಆಧೇಯ' ನಾಗಿರುವೆನು. ಕಾರಣವಿಲ್ಲದೆ ಕಾರ್ಯವಾಗುವಂತಿಲ್ಲ. ಎಲೌ ಸುಂದರಿಯೇ, ವಿಶ್ವದಲ್ಲಿರುವ ನಿಖಿಲ ವಸ್ತುಗಳೂ ನಶ್ವರವಾದವುಗಳು.

೫೦. ಸೃಷ್ಟಿಯು ಕೆಲವುಕಡೆ ಅಧಿಕವಾಗಿ ಕಾಣಿಸಿಕೊಳ್ಳುವುದು. ಮತ್ತೆ ಕೆಲವು ಕಡೆ ನ್ಯೂನವಾಗಿರುವುದು. ಕೆಲವು ದೇವತೆಗಳು ನನ್ನ ಅಂಶದಿಂದಲೂ ಮತ್ತೆ ಕೆಲವರು ನನ್ನ ಕಲೆಯಿಂದಲೂ ಆವಿರ್ಭವಿಸುವರು.

೫೧. ಕೆಲವರು ನನ್ನ ಕಲೆಯ ಅಂಶದಿಂದಲೂ ಮತ್ತೆ ಕೆಲವರು ಕಲಾಂಶಾಂಶದಿಂದಲೂ, ಇನ್ನೂ ಕೆಲವರು ಅದರ ಅಂಶಾಂಶದಿಂದಲೂ ಜನಿಸುವರು. ಸೂಕ್ಷ್ಮರೂಪಳಾಗಿರುವ ಪ್ರಕೃತಿಯು ಮಾತ್ರ ನನ್ನ ಅಂಶದಿಂದ ಪಂಚಮೂರ್ತಿಯಾಗಿ ಆವಿರ್ಭವಿಸುವಳು.

ಸರಸ್ವತೀ ಚ ಕಮಲಾ ದುರ್ಗಾ ತ್ವಂ ಚಾಪಿ ವೇದಸೂಃ ।
ಸರ್ವೇ ದೇವಾಃ ಪ್ರಾಕೃತಿಕಾ ಯಾವಂತೋ ಮೂರ್ತಿಧಾರಿಣಃ ॥ ೫೨ ॥

ಅಹಮಾತ್ಮಾ ನಿತ್ಯದೇಹೀ ಭಕ್ತಿಧ್ಯಾನಾನುರೋಧತಃ ।
ಯೇ ಯೇ ಪ್ರಾಕೃತಿಕಾ ರಾಧೇ ತೇ ನಷ್ಟಾಃ ಪ್ರಾಕೃತೇ ಲಯೇ ॥ ೫೩ ॥

ಅಹಮೇವಾಸಮೇವಾಗ್ರೇ ಪಶ್ಚಾದಪ್ಯಹಮೇವ ಚ ।
ಯಥಾऽಹಂ ಚ ತಥಾ ತ್ವಂ ಚ ಯಥಾ ಧಾವಲ್ಯದುಗ್ಧಯೋಃ ॥ ೫೪ ॥

ಭೇದಃ ಕದಾಪಿ ನ ಭವೇ ನಿಶ್ಚಿತಂ ಚ ತಥಾವಯೋಃ ।
ಅಹಂ ಮಹಾನ್ ವಿರಾಟ್ ಸೃಷ್ಟೌ ವಿಶ್ವಾನಿ ಯಸ್ಯ ಲೋಮಸು ॥ ೫೫ ॥

ಅಂಶಸ್ತ್ವಂ ತತ್ರ ಮಹತೀ ಸ್ವಾಂಶೇನ ತಸ್ಯ ಕಾಮಿನೀ ।
ಅಹಂ ಕ್ಷುದ್ರವಿರಾಟ್ ಸೃಷ್ಟೌ ವಿಶ್ವಂ ಯನ್ನಾಭಿಪದ್ಮತಃ ॥ ೫೬ ॥

---

೫೨ ಸರಸ್ವತೀ, ಲಕ್ಷ್ಮೀ, ದುರ್ಗಾ, ರಾಧೆ (ನೀನು) ಮತ್ತು ವೇದಜನನಿಯಾದ ಸಾವಿತ್ರೀ ಇವೇ ಪ್ರಕೃತಿಯ ಪಂಚಮೂರ್ತಿಗಳು. ಮೂರ್ತಿಧಾರಿಗಳಾದ ಸಕಲ ದೇವತೆಗಳೂ ಈ ಪಂಚಪ್ರಕೃತಿಗಳಿಂದಲೇ ಜನಿಸುವುದರಿಂದ ಪ್ರಾಕೃತಿಕರೆನಿಸುವರು.

೫೩. ಆತ್ಮಸ್ವರೂಪನಾದ ನಾನು ಭಕ್ತರ ಧ್ಯಾನಾವಲಂಬನೆಗಾಗಿ ನಿತ್ಯದೇಹವನ್ನು ಧರಿಸಿರುವೆನು. ಎಲೌ ರಾಧೆಯೇ, ಪ್ರಾಕೃತಲಯವಾದಾಗ ಪ್ರಾಕೃತಿಕ ವಸ್ತುಗಳೆಲ್ಲ ನಾಶವಾಗಿಯೇ ಆಗುವುವು.

೫೪. ಸೃಷ್ಟಿಯ ಮೊದಲಿನಲ್ಲಿದ್ದವನು ನಾನೊಬ್ಬನೇ. ಪ್ರಳಯವಾದಮೇಲೂ ನಾನೊಬ್ಬನೇ ಇರುವೆನು. ಹಾಲಿಗೂ ಬಿಳುಪಿಗೂ ಸಮವಾಯಸಂಬಂಧವಿರುವಂತೆ ನಿನಗೂ ನನಗೂ ಅವಿಚ್ಛಿನ್ನ ಸಂಬಂಧವಿರುವುದು.

೫೫. ನಮ್ಮಿಬ್ಬರಿಗೂ ಎಂದೆಂದಿಗೂ ಭೇದವುಂಟಾಗುವುದಿಲ್ಲವೆಂಬುದು ನಿಶ್ಚಿತವಾದುದು. ನಾನು ಸೃಷ್ಟಿಯ ಕಾಲದಲ್ಲಿ ಮಹಾವಿರಾಡ್ರೂಪವನ್ನು ತಾಳುವೆನು. ನನ್ನ ಲೋಮಕೂಪಗಳಲ್ಲಿ ಅಸಂಖ್ಯ ವಿಶ್ವವು ಅಡಗಿರುವುದು.

೫೬. ಆಗ ನೀನು ನಿನ್ನ ಅಂಶದಿಂದ ಮಹದ್ರೂಪವನ್ನು ತಾಳಿ ಆ ಮಹಾವಿರಾಟನ ಕಾಮಿನಿಯಾಗುವೆ. ಹಾಗೆಯೇ ಸೃಷ್ಟಿಯಾರಂಭದಲ್ಲಿ ನಾನು ಕ್ಷುದ್ರವಿರಾಟನಾಗುವೆ. ಅವನ ನಾಭಿ ಪದ್ಮದಿಂದ ಜಗತ್ಸೃಷ್ಟಿಯಾಗುವುದು.

ಅಯಂ ವಿಷ್ಣೋರ್ಲೋಮಕೂಪೇ ವಾಸೋ ಮೇ ಚಾಂಶತಃ ಸತಿ ।
ತಸ್ಯ ಸ್ತ್ರೀ ತ್ವಂ ಚ ಬೃಹತೀ ಸ್ವಾಂಶೇನ ಸುಭಗಾ ತಥಾ ॥ ೫೭ ॥

ತಸ್ಯ ವಿಶ್ವೇ ಚ ಪ್ರತ್ಯೇಕಂ ಬ್ರಹ್ಮವಿಷ್ಣುಶಿವಾದಯಃ ।
ಬ್ರಹ್ಮವಿಷ್ಣುಶಿವಾ ಅಂಶಾಶ್ಚಾನ್ಯಾಶ್ಚಾಪಿ ಚ ಮತ್ಕಲಾಃ ॥ ೫೮ ॥

ಮತ್ಕಲಾಂಶಾಂಶಕಲಯಾ ಸರ್ವೇ ದೇವಿ ಚರಾಚರಾಃ ।
ವೈಕುಂಠೇ ತ್ವಂ ಮಹಾಲಕ್ಷ್ಮೀರಹಂ ತತ್ರ ಚತುರ್ಭುಜಃ ॥ ೫೯ ॥

ಸ ಚ ವಿಶ್ವಾದ್ಬಹಿಶ್ಚೋರ್ಧ್ವಂ ಯಥಾ ಗೋಲೋಕ ಏವ ಚ ।
ಸರಸ್ವತೀ ತ್ವಂ ಸತ್ಯೇ ಚ ಸಾವಿತ್ರೀ ಬ್ರಹ್ಮಣಃ ಪ್ರಿಯಾ ॥ ೬೦ ॥

ಶಿವಲೋಕೇ ಶಿವಾ ತ್ವಂ ಚ ಮೂಲಪ್ರಕೃತಿರೀಶ್ವರೀ ।
ವಿನಾಶ್ಯ ದುರ್ಗಂ ದುರ್ಗಾ ಚ ಸರ್ವದುರ್ಗಾತಿನಾಶಿನೀ ॥ ೬೧ ॥

---

೫೭. ಈ ಕ್ಷುದ್ರವಿರಾಟನು ವಿಷ್ಣುವಿನ ಲೋಮಕೂಪದಲ್ಲಿ ಅಡಗಿರುವನು ಅಂದಮೇಲೆ ಎಲೌ ಸತಿಯೇ, ನಾನೇ ಅಂಶದಿಂದ ಅಲ್ಲಿದ್ದಂತಾಯಿತು. ಸೌಭಾಗ್ಯವತಿಯಾದ ನೀನೂ ಸಹ ನಿನ್ನ ಅಂಶದಿಂದ ಬೃಹದ್ರೂಪವನ್ನು ಹೊಂದಿ ಅವನ ಪತ್ನಿಯಾಗಿರುವೆ.

೫೮. ಆ ವಿರಾಟ್ಪುರುಷನ ಪ್ರತಿಬ್ರಹ್ಮಾಂಡದಲ್ಲಿಯೂ ಬ್ರಹ್ಮ ವಿಷ್ಣು ಶಿವಾದಿಗಳು ಪ್ರತ್ಯೇಕವಾಗಿರುವರು. ಬ್ರಹ್ಮ ವಿಷ್ಣು ಶಿವ ಈ ತ್ರಿಮೂರ್ತಿಗಳು ನನ್ನ ಅಂಶದಿಂದ ಸಂಭವಿಸುವರು. ಉಳಿದ ದೇವತೆಗಳೆಲ್ಲ ನನ್ನ ಕಲೆಯಿಂದಜನಿಸುವರು.

೫೯. ಎಲೌ ದೇವಿಯೇ, ಚರಾಚರಾತ್ಮಕವಾದ ನಿಖಿಲ ಜೀವರಾಶಿಗಳೂ ನನ್ನ ಕಲೆಯ ಅಂಶಾಂಶಕಲೆಯಿಂದ ಜನಿಸುವರು. ವೈಕುಂಠದಲ್ಲಿ ನೀನು ಮಹಾಲಕ್ಷ್ಮಿಯ ರೂಪದಿಂದಿರುವೆ. ನಾನು ಚತುರ್ಭುಜನಾಗಿ ನಾರಾಯಣನೆನಿಸಿರುವೆನು.

೬೦. ಆ ವೈಕುಂಠಲೋಕವೂ ಸಹ ಗೋಲೋಕದಂತೆ ಬ್ರಹ್ಮಾಂಡದ ಹೊರಗೂ ಮೇಲೂ ಎಲ್ಲೆಡೆಯಲ್ಲೂ ಇರುವುದು. ಸತ್ಯಲೋಕದಲ್ಲಿ ನೀನು ಸಾವಿತ್ರೀ ಮತ್ತು ಸರಸ್ವತಿಯರ ರೂಪದಿಂದ ಬ್ರಹ್ಮನಿಗೆ ಪ್ರಿಯಳಾಗಿರುವೆ.

೬೧. ಮೂಲಪ್ರಕೃತಿಯೂ ಸರ್ವೇಶ್ವರಿಯೂ ಆದ ನೀನು ಶಿವಲೋಕದಲ್ಲಿ ಶಿವೆ ಎನಿಸಿರುವೆ. ಎಲ್ಲರ ದುರ್ಗತಿಯನ್ನೂ ನಾಶಮಾಡಿ ದುರ್ಗ (ಕಷ್ಟ) ನಾಶಕಳಾದುದರಿಂದ ದುರ್ಗಿ ಎನಿಸುವೆ.

ಸಾ ಏವ ದಕ್ಷಕನ್ಯಾ ಚ ಸಾ ಏವಶೈಲಕನ್ಯಕಾ ।
ಕೈಲಾಸೇ ಪಾರ್ವತೀ ತೇನ ಸೌಭಾಗ್ಯಾ ಶಿವವಕ್ಷಸಿ ॥ ೬೨ ॥

ಸ್ವಾಂಶೇನ ತ್ವಂ ಸಿಂಧುಕನ್ಯಾ ಕ್ಷೀರೋದೇ ವಿಷ್ಣುವಕ್ಷಸಿ ।
ಅಹಂ ಸ್ವಾಂಶೇನ ಸೃಷ್ಟ್ವಾ ಚ ಬ್ರಹ್ಮವಿಷ್ಣುಮಹೇಶ್ವರಾಃ ॥ ೬೩ ॥

ತ್ವಂ ಚ ಲಕ್ಷ್ಮೀಃ ಶಿವಾ ಧಾತ್ರೀ ಸಾವಿತ್ರೀ ಚ ಪೃಥಕ್‌ಪೃಥಕ್ ।
ಗೋಲೋಕೇ ಚ ಸ್ವಯಂ ರಾಧಾ ರಾಸೇ ರಾಸೇಶ್ವರೀ ಸದಾ ॥ ೬೪ ॥

ವೃಂದಾ ವೃಂದಾವನೇ ರಮ್ಯೇ ವಿರಜಾ ವಿರಜಾತಟೇ ।
ಸಾ ತ್ವಂ ಸುದಾಮಶಾಪೇನ ಭಾರತಂ ಪುಣ್ಯಮಾಗತಾ ॥ ೬೫ ॥

ಪೂತಂ ಕರ್ತುಂ ಚ ಭಾರತಂ ವೃಂದಾರಣ್ಯಂ ಚ ಸುಂದರಿ ।
ತ್ವತ್ಕಲಾಂಶಾಂಶಕಲಯಾ ವಿಶ್ವೇಷು ಸರ್ವಯೋಷಿತಃ ॥ ೬೬ ॥

---

೬೨. ಆ ದುರ್ಗೆಯೇ ಜನ್ಮಾಂತರದಲ್ಲಿ ದಕ್ಷಕನ್ಯೆಯಾಗಿದ್ದು ಮತ್ತೊಂದು ಜನ್ಮದಲ್ಲಿ ಶೈಲಪುತ್ರಿಯಾದಳು. ಆ ಪರ್ವತರಾಜಪುತ್ರಿಯು ಕೈಲಾಸದಲ್ಲಿ ಶಿವನ ವಕ್ಷಃಸ್ಥಳದಲ್ಲಿದ್ದು ಸೌಭಾಗ್ಯವತಿಯೆನಿಸಿರುವಳು.

೬೩. ನೀನು ನನ್ನ ಅಂಶದಿಂದ ಸಿಂಧುಕನ್ಯೆ ಎನಿಸಿ ಕ್ಷೀರಸಾಗರದಲ್ಲಿ ವಿಷ್ಣುವಿನ ವಕ್ಷಃಸ್ಥಳದಲ್ಲಿರುವೆ. ನಾನು ಸೃಷ್ಟ್ಯುನ್ಮುಖನಾದಾಗ ನನ್ನ ಅಂಶದಿಂದ ಬ್ರಹ್ಮ ವಿಷ್ಣು ಮಹೇಶ್ವರರ ರೂಪವನ್ನು ತಾಳುವೆನು.

೬೪. ನೀನು ಪ್ರತ್ಯೇಕಪ್ರತ್ಯೇಕವಾಗಿ ಲಕ್ಷ್ಮೀ, ಪಾರ್ವತಿ, ಧಾತ್ರೀ ಮತ್ತು ಸಾವಿತ್ರಿರೂಪಗಳಲ್ಲಿದ್ದರೂ ಗೋಲೋಕದ ರಾಸಮಂಡಲದಲ್ಲಿ ರಾಧೆ ಎಂಬ ಹೆಸರಿನಿಂದ ಕೂಡಿ ರಾಸೇಶ್ವರಿಯಾಗಿರುವೆ.

೬೫. ರಮ್ಯವಾದ ವೃಂದಾವನದಲ್ಲಿ ವೃಂದೆ ಎಂದೂ, ವಿರಜಾನದಿಯ ತೀರದಲ್ಲಿ ವಿರಜೆಯೆಂದೂ ಖ್ಯಾತಿಗೊಂಡಿರುವ ನೀನು ಸುದಾಮನ ಶಾಪದಿಂದ ಪುಣ್ಯತಮವಾದ ಭಾರತದಲ್ಲಿ ಅವತರಿಸಿರುವೆ.

೬೬. ಎಲೌ ಸುಂದರಿಯೇ, ಭರತಖಂಡವನ್ನೂ, ವೃಂದಾವನವನ್ನೂ ನೀನು ಪವಿತ್ರಗೊಳಿಸಿದೆ. ಪ್ರಪಂಚದಲ್ಲಿರುವ ಸಕಲ ಸ್ತ್ರೀಯರೂ ನಿನ್ನ ಕಲೆಯ ಕಲಾಂಶದಿಂದ ಜನಿಸಿರುವರು.

ಯಾ ಯೋಷಿತ್ಸಾ ಚ ಭವತೀ ಯಃ ಪುಮಾನ್ಸೋಽಹಮೇವ ಚ ।
ಅಹಂ ಚ ಕಲಯಾ ವಹ್ನಿಸ್ತ್ವಂ ಸ್ವಾಹಾ ದಾಹಿಕಾ ಪ್ರಿಯಾ ॥ ೬೭ ॥

ತ್ವಯಾ ಸಹ ಸಮರ್ಥೋಽಹಂ ನಾಲಂ ದಗ್ಧುಂ ಚ ತ್ವಾಂ ವಿನಾ ।
ಅಹಂ ದೀಪ್ತಿಮತಾಂ ಸೂರ್ಯಃ ಕಲಯಾ ತ್ವಂ ಪ್ರಭಾಕರೀ ॥ ೬೮ ॥

ಸಂಜ್ಞಾ ತ್ವಂ ಚ ತ್ವಯಾ ಭಾಮಿ ತ್ವಾಂ ವಿನಾಽಹಂ ನ ದೀಪ್ತಿಮಾನ್ ।
ಅಹಂ ಚ ಕಲಯಾ ಚಂದ್ರಸ್ತ್ವಂ ಚ ಶೋಭಾ ಚ ರೋಹಿಣೀ ॥ ೬೯ ॥

ಮನೋಹರಸ್ತ್ವಯಾ ಸಾರ್ಧಂ ತ್ವಾಂ ವಿನಾ ನ ಚ ಸುಂದರಃ ।
ಅಹಮಿಂದ್ರಶ್ಚ ಕಲಯಾ ಸ್ವರ್ಗಲಕ್ಷ್ಮೀಶ್ಚ ತ್ವಂ ಶಚೀ ॥ ೭೦ ॥

ತ್ವಯಾ ಸಾರ್ಧಂ ದೇವರಾಜೋ ಹತಶ್ರೀಶ್ಚ ತ್ವಯಾ ವಿನಾ ।
ಅಹಂ ಧರ್ಮಶ್ಚ ಕಲಯಾ ತ್ವಂ ಚ ಮೂರ್ತಿಶ್ಚ ಧರ್ಮಿಣೀ ॥ ೭೧ ॥

---

೬೭. ನಿನ್ನ ಅಂಶವಿಲ್ಲದ ಹೆಂಗಸರಿಲ್ಲ. ನನ್ನ ಅಂಶವಿಲ್ಲದ ಪುರುಷರಿಲ್ಲ ನಾನು ನನ್ನ ಕಲೆಯಿಂದ ಅಗ್ನಿಯ ರೂಪವನ್ನು ತಾಳಿದರೆ ನೀನು ನಿನ್ನ ಕಲೆಯಿಂದ 'ಸ್ವಾಹಾ' ಎನಿಸಿ ದಾಹಶಕ್ತಿಸ್ವರೂಪಿಣಿಯಾಗುವೆ.

೬೮. ನಿನ್ನ ಶಕ್ತಿಯೊಡಗೂಡಿದ ಅಗ್ನಿರೂಪನಾದ ನಾನು ಸಮಸ್ತವನ್ನೂ ಸುಡಲು ಶಕ್ತನಾಗುವೆ. ನಿನ್ನನ್ನು ಬಿಟ್ಟರೆ ನಾನು ಅಶಕ್ತನಾಗುವೆನು. ತೇಜಸ್ವಿಗಳ ಮಧ್ಯದಲ್ಲಿ ನಾನು ಸೂರ್ಯನಾದರೆ ನೀನು ನಿನ್ನ ಕಲೆಯಿಂದ 'ಪ್ರಭಾಕರಿ' ಯಾಗುವೆ.

೬೯. ಸಂಜ್ಞೆ ಎನಿಸುವ ನಿನ್ನಿಂದ ನಾನು ಬೆಳಗುವೆನು. ನೀನಿಲ್ಲದಿದ್ದರೆ ನನಗೆ ತೇಜಸ್ಸಿಲ್ಲ. ನಾನು ಕಲೆಯಿಂದ ಚಂದ್ರರೂಪನಾದರೆ ನೀನು ರೋಹಿಣಿ ಎಂಬ ಹೆಸರಿನಿಂದ ನನ್ನ ಶೋಭಾರೂಪಳಾಗುವೆ.

೭೦. ನಿನ್ನೊಡನಿದ್ದರೆ ಮನೋಹರನೆನಿಸುವ ನಾನು ನಿನ್ನನಗಲಿದರೆ ಸೌಂದರ್ಯರಹಿತನಾಗುವೆನು. ನಾನು ನನ್ನ ಕಲೆಯಿಂದ ದೇವೇಂದ್ರನಾದರೆ ನೀನು ಶಚೀದೇವಿಯ ರೂಪದಿಂದ ಸ್ವರ್ಗಲಕ್ಷ್ಮಿಯಾಗುವೆ.

೭೧. ನಿನ್ನೊಡನಿದ್ದರೆ ಶೋಭಿಸುವ ದೇವರಾಜನು ನೀನಿಲ್ಲದಿದ್ದರೆ ಸಂಪದ್ಭ್ರಷ್ಟನಾಗುವನು. ನಾನು ನನ್ನ ಕಲೆಯಿಂದ ಧರ್ಮಪುರುಷನಾದರೆ ನೀನು ಮೂರ್ತಿ ಎಂಬ ಹೆಸರಿನಿಂದ ಧರ್ಮಪತ್ನಿಯಾಗುವೆ.

ನಾಹಂ ಶಕ್ತೋ ಧರ್ಮಕೃತ್ಯೇ ತ್ವಾಂ ಚ ಧರ್ಮಕ್ರಿಯಾಂ ವಿನಾ ।
ಅಹಂ ಯಜ್ಞಶ್ಚ ಕಲಯಾ ತ್ವಂ ಸ್ವಾಹಾಂಽಶೇನ ದಕ್ಷಿಣಾ ॥ ೭೨ ॥

ತ್ವಯಾ ಸಾರ್ಧಂ ಚ ಫಲದೋಽಪ್ಯಸಮರ್ಥಸ್ತ್ವಯಾ ವಿನಾ ।
ಕಲಯಾ ಪಿತೃಲೋಕೋಽಹಂ ಸ್ವಾಂಶೇನ ತ್ವಂ ಸ್ವಧಾ ಸತೀ ॥ ೭೩ ॥

ತ್ವಯಾಽಲಂ ಕವ್ಯದಾನೇ ಚ ಸದಾ ನಾಲಂ ತ್ವಯಾ ವಿನಾ ।
ಅಹಂ ಪುಮಾಂಸ್ತ್ವಂ ಪ್ರಕೃತಿರ್ನ ಸ್ರಷ್ಟಾಽಹಂ ತ್ವಯಾ ವಿನಾ ॥ ೭೪ ॥

ತ್ವಂ ಚ ಸಂಪತ್ಸ್ವರೂಪಾಽಹಮೀಶ್ವರಶ್ಚ ತ್ವಯಾ ಸಹ ।
ಲಕ್ಷ್ಮೀಯುಕ್ತಸ್ತ್ವಯಾ ಲಕ್ಷ್ಮ್ಯಾ ನಿಃಶ್ರೀಕಶ್ಚ ತ್ವಯಾ ವಿನಾ ॥ ೭೫ ॥

---

೭೨. ಧರ್ಮಕ್ರಿಯಾರೂಪಳಾದ ನಿನ್ನನ್ನು ಬಿಟ್ಟು ಧರ್ಮಕಾರ್ಯವೆಸಗಲು ನಾನು ಶಕ್ತನಾಗುವುದಿಲ್ಲ. ನಾನು ಕಲೆಯಿಂದ ಯಜ್ಞಪುರುಷನಾದರೆ ನೀನು ಸ್ವಾಹಾಂಶದಿಂದ ದಕ್ಷಿಣಾದೇವಿ ಎನಿಸುವೆ.

೭೩. ನಿನ್ನೊಡಗೂಡಿದ ನಾನು ಫಲದಾಯಕನಾಗವೆನು (ದಕ್ಷಿಣೆಯಿಂದ ಕೂಡಿದ ಯಜ್ಞವು ಸಫಲವಾಗುವುದು) ನೀನಿಲ್ಲದಿದ್ದರೆ ನಿಷ್ಫಲನಾಗುವೆನು. ನಾನು ನನ್ನ ಕಲೆಯಿಂದ ಪಿತೃದೇವತೆಯಾದರೆ ನೀನು ನಿನ್ನ ಅಂಶದಿಂದ ಸ್ವಧಾದೇವಿ ಎನಿಸುವೆ.

೭೪. ನಿನ್ನೊಡನಿದ್ದರೆ ಕವ್ಯ (ಪಿತೃದೇವತೆಗಳಿಗೆ ಕೊಡುವ ಪಿಂಡಾದಿಗಳು) ವನ್ನು ತೆಗೆದುಕೊಳ್ಳಲು ಶಕ್ತನಾಗುವ ನಾನು ನೀನಿಲ್ಲದಿದ್ದರೆ ಅಶಕ್ತನಾಗುವೆನು. ನಾನು ಪುರುಷ. ನೀನು ಪ್ರಕೃತಿ. ನೀನಿಲ್ಲದೆ ನಾನು ಸೃಷ್ಟಿ ಮಾಡುವಂತಿಲ್ಲ.

೭೫. ನೀನು ಸಂಪತ್ಸ್ವರೂಪಳಾದುದರಿಂದ ನಿನ್ನೊಡಗೂಡಿದ ನಾನು ಈಶ್ವರನೆನಿಸುವೆನು. ಲಕ್ಷ್ಮಿಯಾದ ನಿನ್ನೊಡಗೂಡಿ ಲಕ್ಷ್ಮೀವಂತನೆನಿಸುವ ನಾನು ನೀನಿಲ್ಲದಿರುವಾಗ ಕಾಂತಿಹೀನನಾಗುವೆನು.

ಯಥಾ ನಾಲಂ ಕುಲಾಲಶ್ಚ ಘಟಂ ಕರ್ತುಂ ಮೃದಾ ವಿನಾ ।
ಅಹಂ ಶೇಷಶ್ಚ ಕಲಯಾ ಸ್ವಾಂಶೇನ ತ್ವಂ ವಸುಂಧರಾ ॥ ೭೬ ॥

ತ್ವಾಂ ಸಸ್ಯರತ್ನಾಧಾರಾಂ ಚ ಬಿಭರ್ಮಿ ಮೂರ್ಧ್ನಿ ಸುಂದರಿ ।
ತ್ವಂ ಚ ಕಾಂತಿಶ್ಚ ಶಾಂತಿಶ್ಚ ಭೂತಿಮೂರ್ತಿಮತೀ ಸತೀ ॥ ೭೭ ॥

ತುಷ್ಟಿಃ ಪುಷ್ಟಿಃ ಕ್ಷಮಾ ಲಜ್ಜಾ ಕ್ಷುಧಾ ತೃಷ್ಣಾ ಪರಾ ದಯಾ ।
ನಿದ್ರಾ ಶ್ರದ್ಧಾ ಚ ತಂದ್ರಾ ಚ ಮೂರ್ಚ್ಛಾ ಚ ಸನ್ನತಿಃ ಕ್ರಿಯಾ ॥ ೭೮ ॥

ಮೂರ್ತಿರೂಪಾ ಭಕ್ತಿರೂಪಾ ದೇಹಿನಾಂ ದೇಹರೂಪಿಣೀ ।
ಮಮಾಧಾರಾ ಸದಾ ತ್ವಂ ಚ ತವಾತ್ಮಾಹಂ ಪರಸ್ಪರಂ ॥ ೭೯ ॥

ಯಥಾ ತ್ವಂ ಚ ತಥಾಹಂ ಚ ಸಮೌ ಪ್ರಕೃತಿಪೂರುಷೌ ।
ನಹಿ ಸೃಷ್ಟಿರ್ಭವೇದ್ದೇವಿ ದ್ವಯೋರೇಕತರಂ ವಿನಾ ॥ ೮೦ ॥

---

೭೬. ಕುಂಬಾರನು ಮಣ್ಣಿಲ್ಲದೆ ಗಡಿಗೆಯನ್ನು ಹೇಗೆ ಮಾಡಲಾರನೋ ಹಾಗೆ ನೀನಿಲ್ಲದೆ ನಾನು ಯಾವ ಕಾರ್ಯವನ್ನೂ ಮಾಡಲಾರೆನು. ನಾನು ನನ್ನ ಕಲೆಯಿಂದ ಆದಿಶೇಷನಾದರೆ ನೀನು ಕಲೆಯಿಂದ ವಸುಂಧರೆಯಾಗುವೆ.

೭೭. ಎಲೌ ಸುಂದರಿಯೇ, ಸಸ್ಯಸಂಪತ್ತಿಗೆ ಆಧಾರಳಾದ ನಿನ್ನನ್ನು ನಾನು ತಲೆಯಮೇಲೆ ಧರಿಸುವೆನು. ನೀನು ಮೂರ್ತಿಮತ್ತಾದ ಕಾಂತಿ, ಶಾಂತಿ ಮತ್ತು ಭೂತಿಯಾಗಿರುವೆ.

೭೮. ತುಷ್ಟಿ, ಪುಷ್ಟಿ, ಕ್ಷಮೆ, ಲಜ್ಜೆ, ಕ್ಷುಧೆ (ಹಸಿವೆ) ತೃಷ್ಣೆ, ದಯೆ, ನಿದ್ರೆ, ಶ್ರದ್ಧೆ, ತಂದ್ರೆ, (ತೂಕಡಿಕೆ) ಮೂರ್ಛೆ, ಸನ್ನತಿ, ಕ್ರಿಯೆ ಈ ಭಾವರೂಪಗಳನ್ನೆಲ್ಲ ನೀನು ಧರಿಸುವೆ. (ಅಂದರೆ ಎಲ್ಲವೂ ದೇವಿಯ ಅಂಶವೆಂದಾಯಿತು)

೭೯. ಮೂರ್ತಿಮತಿಯೂ ಭಕ್ತಿರೂಪಿಣಿಯೂ ಆದ ನೀನು ದೇಹಿಗಳ ದೇಹರೂಪಿಣಿಯಾಗಿರುವೆ. ನೀನು ಸರ್ವದಾ ನನಗೆ ಆಧಾರಳಾಗಿರುವೆ. ನಾನು ನಿನ್ನ ಆತ್ಮರೂಪನಾಗಿರುವೆನು. ಹೀಗೆ ನಮಗೆ ಪರಸ್ಪರ ಸಂಬಂಧವಿದೆ.

೮೦. ನೀನು ಹೇಗೊ ನಾನೂ ಹಾಗೆಯೇ. ಪ್ರಕೃತಿಪುರುಷರಾದ ನಾವಿಬ್ಬರೂ ಸಮಪ್ರಧಾನರು. ನಮ್ಮಿಬ್ಬರಲ್ಲಿ ಯಾರಿಲ್ಲದಿದ್ದರೂ ಸೃಷ್ಟಿಯಾಗುವಂತೆಯೇ ಇಲ್ಲ.

ಇತ್ಯುಕ್ತ್ವಾ ಪರಮಾತ್ಮಾ ಚ ರಾಧಾಂ ಪ್ರಾಣಾಧಿಕಾಂ ಪ್ರಿಯಾಂ ।
ಕೃತ್ವಾ ವಕ್ಷಸಿ ಸುಪ್ರೀತೋ ಬೋಧಯಾಮಾಸ ನಾರದ ॥ ೮೧ ॥

ಸ ಚ ಕ್ರೀಡಾನಿಯುಕ್ತಶ್ಚ ಬಭೂವ ರತ್ನಮಂದಿರೇ ।
ತಯಾ ಚ ರಾಧಯಾ ಸಾರ್ಧಂ ಕಾಮುಕ್ಯಾ ಸಹ ಕಾಮುಕಃ ॥ ೮೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣ ನಾರದಸಂವಾದೇ
ಅಧ್ಯಾತ್ಮಿಕಯೋಗಕಥನಂ ನಾಮ
ಸಪ್ತಷಷ್ಟಿತಮೋಽಧ್ಯಾಯಃ

---

೮೧. ಎಲೈ ನಾರದನೇ, ಪರಮಾತ್ಮರೂಪನಾದ ಶ್ರೀ ಕೃಷ್ಣನು ತನ್ನ ಪ್ರಾಣಕ್ಕಿಂತಲೂ ಅಧಿಕಪ್ರಿಯಳಾದ ರಾಧೆಗೆ ಈ ರೀತಿಯಾಗಿ ಉಪದೇಶಿಸಿ ವಕ್ಷಃಸ್ಥಲದಲ್ಲಿ ಅಪ್ಪಿಕೊಂಡು ಸುಪ್ರೀತನಾದನು.

೮೨. ಅನಂತರ ಕಾಮುಕಿಯಾದ ಆ ರಾಧೆಯೊಡನೆ ಕಾಮುಕನಾದ ಶ್ರೀ ಕೃಷ್ಣನು ರತ್ನಮಂದಿರದಲ್ಲಿ ರತಿಕ್ರೀಡಾಸಕ್ತನಾಗಿ ಸುಖವಾಗಿದ್ದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀ ಕೃಷ್ಣಜನ್ಮ ಖಂಡದ
ನಾರಾಯಣನಾರದ ಸಂವಾದದಲ್ಲಿ ಆಧ್ಯಾತ್ಮಿಕಯೋಗ ಕಥನವೆಂಬ
ಅರವತ್ತೇಳನೆಯ ಅಧ್ಯಾಯವು ಮುಗಿದುದು.

ಅರವತ್ತೇಳನೆಯ ಅಧ್ಯಾಯದ ಸಾರಾಂಶ

ಶ್ರೀ ಕೃಷ್ಣನು ರಾಧಾದೇವಿಯೊಡನೆ ಕ್ರೀಡಾಸರೋವರಕ್ಕೆ ಹೋಗಿ ಚಿರಕಾಲ ಕ್ರೀಡಿಸಿದನು. ಎಷ್ಟು ಕ್ರೀಡಿಸಿದರೂ ತೃಪ್ತಳಾಗದ ರಾಧೆಯು ಮುಂದೆ ಉಂಟಾಗುವ ತನ್ನ ಪ್ರಾಣಕಾಂತನ ವಿರಹವನ್ನು ನೆನೆನೆನೆಸಿಕೊಂಡು ಮತ್ತೆ ಮತ್ತೆ ಅತ್ತಳು. ಶ್ರೀ ಕೃಷ್ಣನು ಆಗ ರಾಧೆಗೆ ಪುನಃ ಆಧ್ಯಾತ್ಮಿಕ ತತ್ವಗಳನ್ನು ಉಪದೇಶಿಸಿದನು. ಆದರ ಸಾರಾಂಶವೇನೆಂದರೆ:—ನಾಮರೂಪಾತ್ಮಕವಾದ ನಿಖಿಲ ಪ್ರಪಂಚವೂ ಪ್ರಕೃತಿಪುರುಷರ ಸಮಾಗಮದಿಂದ ಉಂಟಾಗತಕ್ಕದ್ದು. ಆ ಪ್ರಕೃತಿಪುರುಷರು ನಿರ್ಲಿಪ್ತರಾದರೂ ಸೃಷ್ಟಿಗೆ ತೊಡಗಿದಾಗ ಪುರುಷನ ಅಂಶದಿಂದ ಮಹಾವಿರಾಟ್, ಬ್ರಹ್ಮ, ವಿಷ್ಣು ಮತ್ತು ಶಂಕರರೂ, ಪ್ರಕೃತಿಯ ಅಂಶದಿಂದ ಮಹಾಲಕ್ಷ್ಮಿ, ಸಾವಿತ್ರಿ ಸರಸ್ವತಿ ಮತ್ತು ದುರ್ಗಿಯರೂ ಆವಿರ್ಭವಿಸುವರು. ಆನಂದಾತ್ಮಕವಾದ ಗೋಲೋಕದಲ್ಲಿ ಪುರುಷನು ಶ್ರೀ ಕೃಷ್ಣನ ರೂಪದಿಂದಲೂ ಪ್ರಕೃತಿಯು ರಾಧೆಯ ರೂಪದಿಂದಲೂ ಇದ್ದು ಭಕ್ತರಿಗೆ ಅನುಗ್ರಹಮಾಡಿ ಮುಕ್ತಿಯನ್ನು ಕೊಡುವರು. ಬ್ರಹ್ಮಾದಿಗಳಿಂದ ಅಖಿಲ ಜಗತ್ತಿನ ಸೃಷ್ಟಿಸ್ಥಿತಿಲಯಕಾರ್ಯಗಳು ನಡೆಯುತ್ತಿರುವುವು. ಪ್ರತಿಯೊಬ್ಬ ಪುರುಷನಲ್ಲಿಯೂ ಪರಮಾತ್ಮನ ಕಲೆ ಇರುವುದು. ಜೀವಿಗಳು ಎಂದು ತಮ್ಮ ಆನಂದಮಯವಾದ ನಿಜಸ್ವರೂಪವನ್ನರಿತು ಸಾಂಸಾರಿಕ ಬಂಧನಗಳಿಂದ ಬಿಡಗಡೆ ಹೊಂದುವರೋ ಅಂದು ಪ್ರಕೃತಿಪುರುಷರಲ್ಲಿ ಲೀನರಾಗಿ ಶಾಶ್ವತ ಮುಕ್ತಿಯನ್ನು ಹೊಂದುವರು. ಪ್ರಕೃತಿಪುರುಷರೂ ಸಹ ನಾಮರೂಪಾತ್ಮಕವಾದ ಪ್ರಪಂಚದಲ್ಲಿ ರಾಧಾಕೃಷ್ಣಾದಿರೂಪಗಳಿಂದ ಭಾಗಿಗಳಾಗಿ ಪ್ರಾಪಂಚಿಕ ಕಷ್ಟಸುಖಗಳಿಗೀಡಾಗಬೇಕಾಗುವುದು. ಆದರಂತೆ ರಾಧೆಯು ಶ್ರೀ ಕೃಷ್ಣನ ವಿರಹವನ್ನನುಭವಿಸುವಂತೆ ಸುಧಾಮನಿಂದ ಶಪ್ತಳಾಗಿದ್ದುದರಿಂದ ಈಗ ಆಕೆಗೆ ಶ್ರೀ ಕೃಷ್ಣನ ವಿರಹವು ಅನಿವಾರ್ಯವಾದುದು. ಶಾಪವಿಮೋಚನಾನಂತರ ಪುನಃ ರಾಧಾಕೃಷ್ಣರಿಬ್ಬರೂ ಆನಂದಮಯವಾದ ಗೋಲೋಕದಲ್ಲಿ ಆನಂದಸ್ವರೂಪರಾಗಿರುವರು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಅಷ್ಟಷಷ್ಟಿತಮೋಽಧ್ಯಾಯಃ ॥

॥ ಶ್ರೀ ನಾರಾಯಣ ಉವಾಚ ॥

ಕೃತ್ವಾ ಕ್ರೀಡಾಂ ಸಮುತ್ಥಾಯ ಪುಷ್ಪತಲ್ಪಾತ್ಪುರಾತನಃ ।
ನಿದ್ರಿತಾಂ ಪ್ರಾಣಸದೃಶೀಂ ಬೋಧಯಾಮಾಸ ತತ್ಕ್ಷಣಂ ॥ ೧ ॥

ವಸ್ತ್ರಾಂಚಲೇನ ಸಂಸ್ಕೃತ್ಯ ಕೃತ್ವಾ ತನ್ನಿರ್ಮಲಂ ಮುಖಂ ।
ಉವಾಚ ಮಧುರಂ ಶಾಂತಂ ಶಾಂತಾಂ ಚ ಮಧುಸೂದನಃ ॥ ೨ ॥

॥ ಶ್ರೀ ಕೃಷ್ಣ ಉವಾಚ ॥

ಅಯಿ ತಿಷ್ಠ ಕ್ಷಣಂ ರಾಸೇ ರಾಸೇಶ್ವರಿ ಶುಚಿಸ್ಮಿತೇ ।
ವ್ರಜ ವೃಂದಾವನಂ ವಾಪಿ ವ್ರಜಂ ವ್ರಜ ವ್ರಜೇಶ್ವರಿ ॥ ೩ ॥

ಅರವತ್ತೆಂಟನೆಯ ಅಧ್ಯಾಯವು

೧. ಶ್ರೀನಾರಾಯಣ:—ಪುರಾಣಪುರುಷನಾದ ಶ್ರೀಕೃಷ್ಣನು ರಾಧೆಯೊಡನೆ ರತಿಕ್ರೀಡೆಯಾಡಿದನಂತರ ಪುಷ್ಪಶಯನದಿಂದೆದ್ದು ನಿದ್ದೆಮಾಡುತ್ತಿದ್ದ ತನ್ನ ಪ್ರಾಣ ಸದೃಶಳಾದ ರಾಧೆಯನ್ನು ಕೂಡಲೇ ಎಚ್ಚರಗೊಳಿಸಿದನು.

೨. ವಸ್ತ್ರದ ಸೆರಗಿನಿಂದ ಆಕೆಯ ಮುಖದ ಬೆವರನ್ನೊರಸಿ ನಿರ್ಮಲವಾಗಿ ಮಾಡಿ ಆ ಮಧುಸೂದನನು ಶಾಂತಳಾದ ಆ ರಾಧೆಯನ್ನು ಕುರಿತು ಮಧುರವೂ ಶಾಂತವೂ ಆದ ಕೆಲವು ಮಾತುಗಳನ್ನು ಹೇಳಿದನು.

೩. ಶ್ರೀಕೃಷ್ಣ:— ಎಲೌ ಶುಭ್ರವಾದ ನಗೆಯುಳ್ಳ ರಾಸೇಶ್ವರಿಯೇ, ಏಳು. ಕ್ಷಣಕಾಲ ರಾಸಮಂಡಲದಲ್ಲಿ ನಿಲ್ಲು. ಎಲೌ ವ್ರಜೇಶ್ವರಿಯೇ, ವೃಂದಾವನಕ್ಕಾಗಲೀ ಅಥವಾ ಗೋಕುಲಕ್ಕಾಗಲೀ ಬೇಕಾದರೆ ಹೋಗು.

ರಾಸಾಧಿಷ್ಠಾತೃದೇವಿ ತ್ವಂ ರಾಸಂ ರಾಸೇ ಕುರು ಕ್ಷಣಂ ।
ಗ್ರಾಮೇಗ್ರಾಮೇ ಯಥಾ ಸಂತಿ ಸರ್ವತ್ರ ಗ್ರಾಮದೇವತಾಃ ॥ ೪ ॥

ಪ್ರಿಯಾಲಿನಿವಹೈಃ ಸಾರ್ಧಂ ಕ್ಷಣಂ ಚಂದನಕಾನನಂ ।
ಕ್ಷಣಂ ವಾ ಚಂಪಕವನಂ ಗಚ್ಛ ವಾ ತಿಷ್ಠ ಸುಂದರಿ ॥ ೫ ॥

ಕ್ಷಣಂ ಗೃಹಂ ಚ ಯಾಸ್ಯಾಮಿ ವಿಶಿಷ್ಟಂ ಕಾರ್ಯಮಸ್ತಿ ಮೇ ।
ವಿರಾಮಂ ದೇಹಿ ಮೇ ಪ್ರೀತ್ಯಾ ಕ್ಷಣಂ ಮಾಂ ಪ್ರಾಣವಲ್ಲಭೇ ॥ ೬ ॥

ಪ್ರಾಣಾಧಿಷ್ಠಾತೃದೇವಿ ತ್ವಂ ಪ್ರಾಣಾಶ್ಚ ತ್ವಯಿ ಸಂತಿ ಮೇ ।
ಪ್ರಾಣೇ ವಿಹಾಯ ಪ್ರಾಣಾಂಶ್ಚ ಕುತ್ರ ಸ್ಥಾತುಂ ಕ್ಷಮಃ ಪ್ರಿಯೇ ॥ ೭ ॥

ತ್ವಯಿ ಮೇ ಮಾನಸಂ ಶಶ್ವತ್ತ್ವಂ ಮೇ ಸಂಸಾರವಾಸನಾ ।
ತ್ವತ್ತೋ ಮಮ ಪ್ರಿಯಾ ನಾಸ್ತಿ ತ್ವಮೇವ ಶಂಕರಾತ್ಪ್ರಿಯಾ ॥ ೮ ॥

---

೪. ರಾಸಮಂಡಲದ ಅಧಿಷ್ಠಾತೃದೇವಿಯಾದ ನೀನು ರಾಸಮಂಡಲದಲ್ಲಿ ಕ್ಷಣಕಾಲ ರಾಸಕ್ರೀಡೆಯಾಡು. ಪ್ರತಿಯೊಂದು ಗ್ರಾಮದಲ್ಲೂ ಗ್ರಾಮದೇವತೆ ಇರುವಂತೆ ನೀನೂ ರಾಸಮಂಡಲದ ಅಧಿಷ್ಠಾತ್ರಿದೇವಿಯಾಗಿರು.

೫. ಎಲೌ ಸುಂದರಿಯೇ, ನಿನ್ನ ಪ್ರಿಯ ಸಖಿಯರ ಸಮೂಹದೊಡನೆ ಚಂದನವನದಲ್ಲಿ ಕ್ಷಣಕಾಲ ವಿಹರಿಸು. ಮತ್ತೊಂದು ಕ್ಷಣ ಬೇಕಾದರೆ ಚಂಪಕ ವನಕ್ಕೆ ಹೋಗು ಅಥವಾ ಇಲ್ಲಿಯೇ ಇರು.

೬. ನನಗೆ ವಿಶೇಷಕಾರ್ಯವಿರುವುದರಿಂದ ನಾನು ಮನೆಗೆ ಹೋಗುವೆನು. ಎಲೌ ಪ್ರಾಣಕಾಂತೆಯೆ, ಪ್ರೀತಿಯಿಂದ ನನಗೆ ಕ್ಷಣಕಾಲ ವಿಶ್ರಾಂತಿಯನ್ನು ಕೊಡು.

೭. ನೀನು ನನ್ನ ಪ್ರಾಣಗಳ ಅಧಿಷ್ಠಾತೃದೇವಿಯಾದುದರಿಂದ ನನ್ನ ಪ್ರಾಣಗಳು ನಿನ್ನಲ್ಲಿಯೇ ಇವೆ. ಎಲೌ ಪ್ರಿಯಳೇ, ಜೀವಿಯು ತನ್ನ ಪ್ರಾಣಗಳನ್ನು ಬಿಟ್ಟು ಹೇಗೆ ತಾನೇ ಇರಬಲ್ಲನು.

೮. ನನ್ನ ಮನಸ್ಸು ನಿನ್ನಲ್ಲಿ ನೆಲೆಸಿರುವುದು. ನನಗೆ ಸಂಸಾರವಾಸನೆಯನ್ನುಂಟುಮಾಡುವವಳು ನೀನೇ. ನಿನಗಿಂತ ಪ್ರಿಯವಾದವರು ನನಗೆ ಮತ್ತಾರೂ ಇಲ್ಲ. ನೀನು ನನಗೆ ಶಂಕರನಿಗಿಂತಲೂ ಪ್ರೀತಿಪಾತ್ರಳು.

ಪ್ರಾಣಾ ಮೇ ಶಂಕರಃ ಸತ್ಯಂ ತ್ವಂ ಚ ಪ್ರಾಣಾಧಿಕಾ ಸತಿ ।
ಇತ್ಯುಕ್ತ್ವಾ ತಾಂ ಸಮಾಶ್ಲಿಷ್ಯ ಭಗವಾನ್ ಗಂತುಮುದ್ಯತಃ ॥ ೯ ॥

ಅಕ್ರೂರಾಗಮನಂ ಜ್ಞಾತ್ವಾ ಸರ್ವಜ್ಞಃ ಸರ್ವಸಾಧನಃ ।
ಆತ್ಮಾ ಪಾತಾ ಚ ಸರ್ವೇಷಾಂ ಸರ್ವೋಪಕಾರಕಃ ॥ ೧೦ ॥

ದೃಷ್ಟ್ವಾ ತಮೇವ ಗಚ್ಛಂತಮುತ್ಸುಕಂ ಭಿನ್ನಮಾನಸಂ ।
ಉವಾಚ ರಾಧಿಕಾ ದೇವೀ ಹೃದಯೇನ ವಿದೂಯತಾ ॥ ೧೧ ॥

॥ ರಾಧಿಕೋವಾಚ ॥

ಹೇ ನಾಥ ರಮಣಶ್ರೇಷ್ಠ ಶ್ರೇಷ್ಠಶ್ಚ ಪ್ರೇಯಸಾಂ ಮಮ ।
ಹೇ ಕೃಷ್ಣ ಹೇ ರಮಾನಾಥ ವ್ರಜೇಶ ಮಾ ವ್ರಜ ವ್ರಜಂ ॥ ೧೨ ॥

---

೯. ಶಂಕರನು ನನ್ನ ಪ್ರಾಣಗಳಿಗೆ ಸಮಾನನಾಗಿರುವುದು ಸತ್ಯವಾದುದು. ಆದರೆ ಎಲೌ ಸತಿಯೇ, ನೀನು ನನ್ನ ಪ್ರಾಣಕ್ಕಿಂತಲೂ ಅಧಿಕಳಾಗಿರುವೆ. ಹೀಗೆಂದು ಹೇಳಿ ಆಕೆಯನ್ನು ಆಲಂಗಿಸಿಕೊಂಡು ಭಗವಂತನಾದ ಶ್ರೀ ಕೃಷ್ಣನು ಹೊರಡಲನುವಾದನು.

೧೦. ಸರ್ವಜ್ಞನೂ, ಸರ್ವಕಾರಣನೂ, ಸರ್ವರಕ್ಷಕನೂ, ಸರ್ವೋಪಕಾರಕನೂ ಆದ ಪರಮಾತ್ಮನು ಮಧುರೆಯಿಂದ ತನ್ನನ್ನು ಕರೆಯಲು ಅಕ್ರೂರನು ಬಂದಿರುವುದನ್ನು ತಿಳಿದು ಹೊರಟನು.

೧೧. ಈ ರೀತಿಯಾಗಿ ತನ್ನನ್ನು ಬಿಟ್ಟುಹೋಗಲು ಕುತೂಹಲಿಯಾದ ಭಿನ್ನಮನಸ್ಕನಾದ ಶ್ರೀ ಕೃಷ್ಣನನ್ನು ನೋಡಿ ರಾಧಾದೇವಿಯು ಮನಸ್ಸಿನಲ್ಲೇ ಖೇದಗೊಂಡವಳಾಗಿ ಅವನನ್ನು ಕುರಿತಿಂತೆಂದಳು.

೧೨. ರಾಧಿಕಾ :—ರತಿಸುಖದಲ್ಲಿ ರಸಿಕನೂ, ನನ್ನ ಪ್ರೀತಿಪಾತ್ರರಲ್ಲಿ ಶ್ರೇಷ್ಠನೂ, ನನ್ನ ಪ್ರಾಣನಾಥನೂ, ರಮಾಪತಿಯೂ ಆದ ಎಲೈ ಕೃಷ್ಣನೇ, ಗೋಕುಲಾಧಿಪತಿಯಾದ ನೀನು ಈಗ ಗೋಕುಲಕ್ಕೆ ಹೋಗಬೇಡ.

ಅಧುನಾ ತ್ವಾಂ ಪ್ರಾಣನಾಥ ಪಶ್ಯಾಮಿ ಭಿನ್ನಮಾನಸಂ ।
ಗತೇ ತ್ವಯಿ ಮಮ ಪ್ರೇಮ ಗತಂ ಸೌಭಾಗ್ಯಮೇವ ಚ ॥ ೧೩ ॥

ಕ್ವ ಯಾಸಿ ಮಾಂ ವಿನಿಕ್ಷಿಪ್ಯ ಗಂಭೀರೇ ಶೋಕಸಾಗರೇ ।
ವಿರಹವ್ಯಾಕುಲಾಂ ದೀನಾಂ ತ್ವಯ್ಯೇವ ಶರಣಾಗತಾಂ ॥ ೧೪ ॥

ನ ಯಾಸ್ಯಾಮಿ ಪುನರ್ಗೇಹಂ ಯಾಸ್ಯಾಮಿ ಕಾನನಾಂತರಂ ।
ಕೃಷ್ಣ ಕೃಷ್ಣೇತಿ ಕೃಷ್ಣೇತಿ ಗಾಯಂಗಾಯಂ ದಿವಾನಿಶಂ ॥ ೧೫ ॥

ನ ಯಾಸ್ಯಾಮ್ಯಥವಾರಣ್ಯಂ ಯಾಸ್ಯಾಮಿ ಕಾಮಸಾಗರೇ ।
ತತ್ರ ತ್ವತ್ಕಾಮನಾಂ ಕೃತ್ವಾ ತ್ಯಕ್ಷ್ಯಾಮಿ ಚ ಕಲೇವರಂ ॥ ೧೬ ॥

ಯಥಾಕಾಶೋ ಯಥಾತ್ಮಾ ಚ ಯಥಾ ಚಂದ್ರೋ ಯಥಾ ರವಿಃ ।
ತಥಾ ತ್ವಂ ಯಾಸಿ ಮತ್ಪಾರ್ಶ್ವೇ ನಿಬದ್ಧೋ ವಸನಾಂಚಲೇ ॥ ೧೭ ॥

---

೧೩. ಎಲೈ ಪ್ರಾಣೇಶ್ವರನೇ, ನೀನು ಈಗ ನನ್ನ ವಿಷಯದಲ್ಲಿ ಭಿನ್ನ ಮನಸ್ಸುಳ್ಳವನಂತೆ ತೋರುವೆ. ನೀನು ಹೊರಟುಹೋದರೆ ನನ್ನ ಪ್ರೇಮವೂ ಸೌಭಾಗ್ಯವೂ ಅವಲಂಬನವಿಲ್ಲದೆ ನಾಶವಾದಂತೆಯೇ.

೧೪. ವಿರಹವ್ಯಥೆಯಿಂದ ಖೇದಗೊಂಡಿರುವವಳೂ, ದೀನಳೂ, ನಿನ್ನನ್ನೇ ಮರೆಹೊಕ್ಕಿರುವವಳೂ ಆದ ನನ್ನನ್ನು ಗಂಭೀರವಾದ ಶೋಕಸಾಗರದಲ್ಲಿ ಮುಳುಗಿಸಿ ನೀನೆಲ್ಲಿಗೆ ಹೋಗುವೆ

೧೫. ನೀನು ನನ್ನನ್ನು ಬಿಟ್ಟುಹೋದರೆ ನಾನು ಮನೆಗೆ ಹೋಗುವುದಿಲ್ಲ. 'ಕೃಷ್ಣ ಕೃಷ್ಣ' ಎಂದು ಹಗಲೂ ರಾತ್ರಿ ಗಾನಮಾಡುತ್ತಾ ಯಾವುದಾದರೂ ಕಾನನಕ್ಕೆ ಹೋಗುವೆನು.

೧೬. ಅಥವಾ ಅರಣ್ಯಕ್ಕೆ ಹೋಗುವುದಿಲ್ಲ. ಕಾಮಸಾಗರಕ್ಕೆ ಹೋಗಿ ಜನ್ಮಾಂತರಕ್ಕೂ ನೀನೇ ಪತಿಯಾಗಬೇಕೆಂದು ಬಯಸುತ್ತ ಅಲ್ಲಿ ನನ್ನ ದೇಹವನ್ನು ತ್ಯಾಗಮಾಡುವೆನು.

೧೭. ಆಕಾಶದಂತೆ, ಆತ್ಮನಂತೆ, ಚಂದ್ರ ಸೂರ್ಯರಂತೆ ನನ್ನನ್ನು ಎಡಬಿಡದೆ ನನ್ನ ಸೆರಗಿಗೆ ಸೆರಗನ್ನು ಗಂಟುಹಾಕಿಕೊಂಡು ನೀನು ಸರ್ವದಾ ನನ್ನೊಡನಿರುತ್ತಿದ್ದೆ.

ಅಧುನಾ ಯಾಸಿ ನೈರಾಶ್ಯಂ ಕೃತ್ವಾ ಮೇ ದೀನವತ್ಸಲ ।
ನ ಯುಕ್ತಂ ಹಿ ಪರಿತ್ಯಕ್ತುಂ ದೀನಾಂ ಮಾಂ ಶರಣಾಗತಾಂ ॥ ೧೮ ॥

ಯತ್ಪಾದಪದ್ಮಂ ಧ್ಯಾಯಂತೇ ಬ್ರಹ್ಮವಿಷ್ಣುಶಿವಾದಯಃ ।
ತ್ವಾಂ ಮಾಯಯಾ ಗೋಪವೇಷಂ ಕಥಂ ಜಾನಾಮಿ ಮತ್ಸರೀ ॥ ೧೯ ॥

ಕೃತಂ ಯದ್ದೇವ ದುರ್ನೀತಮಪರಾಧಸಹಸ್ರಕಂ ।
ಯದುಕ್ತಂ ಪತಿಭಾವೇನ ಚಾಭಿಮಾನೇನ ತತ್ ಕ್ಷಮ ॥ ೨೦ ॥

ಚೂರ್ಣೀಭೂತಶ್ಚ ಮದ್ಗರ್ವೋ ದೂರೀಭೂತೋ ಮನೋರಥಃ ।
ವಿಜ್ಞಾತುಮಾತ್ಮಸೌಭಾಗ್ಯಂ ಕಿಮನ್ಯತ್ಕಥಯಾಮಿ ತೇ ॥ ೨೧ ॥

ಜ್ಞಾತ್ವಾ ಗರ್ಗಮುಖಾಚ್ಛ್ರುತ್ವಾ ಮೋಹಿತಾ ತವ ಮಾಯಯಾ ।
ತ್ವಾಂ ಚ ವಕ್ತುಂ ನ ಶಕ್ನೋಮಿ ಪ್ರೇಮ್ಣಾ ವಾ ಭಕ್ತಿಪಾಶತಃ ॥ ೨೨ ॥

---

೧೮. ಎಲೈ ದೀನದಯಾಳುವೇ, ಈಗ ನನಗೆ ನಿರಾಶೆಯನ್ನುಂಟುಮಾಡಿ ಹೊರಟುಹೋಗುತ್ತಿರುವೆಯಲ್ಲಾ. ದೀನಳೂ ಶರಣಾಗತಳೂ ಆದ ನನ್ನನ್ನು ಬಿಟ್ಟುಹೋಗುವುದು ನಿನಗೆ ಉಚಿತವಲ್ಲ.

೧೯. ಯಾವ ಪರಮಾತ್ಮನ ಪಾದಪದ್ಮಗಳನ್ನು ಬ್ರಹ್ಮ ವಿಷ್ಣು ಶಿವಾದಿಗಳು ಸರ್ವದಾ ಧ್ಯಾನಿಸುವರೋ, ಮಾಯೆಯಿಂದ ಗೋಪವೇಷಧಾರಿಯಾದ ಆ ಪರಮಾತ್ಮನನ್ನು ಕಾಮಕ್ರೋಧಾದಿಗಳಿಗೆ ಸಿಲುಕಿರುವ ನಾನು ಹೇಗೆ ತಿಳಿಯಲಿ ?

೨೦. ಎಲೈ ದೇವದೇವನೇ, ನಿನ್ನನ್ನು ಪತಿಯೆಂದು ತಿಳಿದು ಅಭಿಮಾನದಿಂದ ನಾನು ಮಾಡಿರುವ ದುರ್ನೀತಿಯನ್ನೂ ಸಾವಿರಾರು ತಪ್ಪುಗಳನ್ನೂ ದಯವಿಟ್ಟು ಕ್ಷಮಿಸು.

೨೧. ನನ್ನ ಗರ್ವವು ಭಗ್ನವಾಯಿತು. ನನ್ನ ಮನೋರಥವು ಮುರಿಯಿತು. ನನ್ನ ಸೌಭಾಗ್ಯವು ವ್ಯಕ್ತವಾದಂತಾಯಿತು. ನಾನು ನಿನಗೆ ಮತ್ತೇನನ್ನು ಹೇಳಬಲ್ಲೆನು.

೨೨. ಗರ್ಗಾಚಾರ್ಯನ ಮುಖದಿಂದ ನಿನ್ನ ಮಹಿಮೆಯನ್ನು ಕೇಳಿ ತಿಳಿದಿದ್ದರೂ ಸಹ ನಿನ್ನ ಮಾಯೆಯಿಂದ ಮೋಹಿತಳಾದೆ. ಈಗ ಪ್ರೇಮದಿಂದಲೋ ಅಥವಾ ಭಕ್ತಿಪಾಶದಿಂದಲೋ ಏನನ್ನೂ ನಿನಗೆ ಹೇಳಲಾರೆ.

ಯಾಸಿ ಚೇನ್ಮಾಂ ಪರಿತ್ಯಜ್ಯ ಸಕಲಂಕೋ ಭವಿಷ್ಯಸಿ ।
ತ್ವತ್ಪುತ್ರಪೌತ್ರಾ ನಶ್ಯಂತಿ ಬ್ರಹ್ಮಕೋಪಾನಲೇನ ಚ || ೨೩ ||

ಕ್ಷಣಂ ಯುಗಶತಂ ಮನ್ಯೇ ತ್ವಾಂ ವಿನಾ ಪ್ರಾಣವಲ್ಲಭಂ ।
ಕಥಂ ಶತಾಬ್ದಂ ತ್ವಾಂ ತ್ಯಕ್ತ್ವಾ ಬಿಭರ್ಮಿ ಜೀವನಂ ಪ್ರಭೋ || ೨೪ ||

ಇತ್ಯುಕ್ತ್ವಾ ರಾಧಿಕಾ ಕೋಪಾತ್ಪಪಾತ ಧರಣೀತಲೇ ।
ಮೂರ್ಛಾಂ ಸಂಪ್ರಾಪ ಸಹಸಾ ಜಹಾರ ಚೇತನಾಂ ಮುನೇ || ೨೫ ||

ಕೃಷ್ಣಸ್ತಾಂ ಮೂರ್ಛಿತಾಂ ದೃಷ್ಟ್ವಾ ಕೃಪಯಾ ಚ ಕೃಪಾನಿಧಿಃ ।
ಚೇತನಾಂ ಕಾರಯಿತ್ವಾ ಚ ವಾಸಯಾಮಾಸ ವಕ್ಷಸಿ || ೨೬ ||

ಬೋಧಯಾಮಾಸ ವಿವಿಧಂ ಯೋಗ್ಯೈಃ ಶೋಕವಿಖಂಡನೈಃ ।
ತಥಾಪಿ ಶೋಕಂ ತ್ಯಕ್ತುಂ ಚ ನ ಶಶಾಕ ಶುಚಿಸ್ಮಿತಾ || ೨೭ ||

---

೨೩. ನನ್ನನ್ನು ಬಿಟ್ಟು ನೀನು ಹೋಗುವೆಯಾದರೆ ದೋಷಯುತನಾಗುವೆ. ಬ್ರಹ್ಮನ ಕೋಪಾಗ್ನಿಗೆ ಸಿಲುಕಿ ನಿನ್ನ ಪುತ್ರಪೌತ್ರರೆಲ್ಲರೂ ವಿನಾಶವನ್ನು ಹೊಂದುವರು.

೨೪. ನನ್ನ ಪ್ರಾಣವಲ್ಲಭನಾದ ನಿನ್ನನ್ನು ಅಗಲಿದ ಒಂದೊಂದು ಕ್ಷಣವೂ ನನಗೆ ಯುಗಶತವಾಗಿ ಪರಿಣಮಿಸುವುದು. ಹೀಗಿರುವಾಗ ಎಲೈ ಪ್ರಭುವೇ ನಿನ್ನನ್ನು ನೂರುವರ್ಷಗಳ ಕಾಲ ಅಗಲಿ ಹೇಗೆ ಜೀವವನ್ನು ಧರಿಸಿಕೊಂಡಿರಲಿ ?

೨೫. ಎಲೈ ನಾರದಮುನಿಯೇ, ರಾಧಾದೇವಿಯು ಹೀಗೆ ಹೇಳಿ ಕೋಪ ದಿಂದ ನೆಲದಮೇಲೆ ಬಿದ್ದಳು. ಕೂಡಲೇ ಮೂರ್ಛೆಯನ್ನು ಹೊಂದಿ ಚೇತನ ರಹಿತಳಾದಳು.

೨೬. ದಯಾಮಯನಾದ ಶ್ರೀ ಕೃಷ್ಣನು ಮೂರ್ಛೆಗೊಂಡ ರಾಧೆಯನ್ನು ನೋಡಿ ದಯೆಯಿಂದ ಆಕೆಯನ್ನು ಸಚೇತನಳನ್ನಾಗಿ ಮಾಡಿ ತನ್ನ ವಕ್ಷಃ ಸ್ಥಳದಲ್ಲಿ ಅಪ್ಪಿಕೊಂಡನು

೨೭. ಅಲ್ಲದೆ ಶೋಕಪರಿಹಾರಕವಾದ ಅನೇಕ ದಿವ್ಯತತ್ವಗಳನ್ನೂ ಆಕೆಗೆ ಉಪದೇಶಿಸಿದನು. ಆದರೂ ಸಹ ಶುಭ್ರವಾದ ಮಂದಹಾಸವುಳ್ಳ ಆ ರಾಧೆಯು ತನ್ನ ವಿರಹದುಃಖವನ್ನು ಮರೆಯಲಾಗಲಿಲ್ಲ.

ಸಾಮಾನ್ಯವಸ್ತುವಿಶ್ಲೇಷೋ ನೃಣಾಂ ಶೋಕಾಯ ಕೇವಲಂ ।
ದೇಹಾತ್ಮನೋಶ್ಚ ವಿಚ್ಛೇದಃ ಕ್ವ ಸುಖಾಯ ಪ್ರಕಲ್ಪತೇ ॥ ೨೮ ॥

ನ ಯಯೌ ತತ್ರ ದಿವಸೇ ವ್ರಜರಾಜೋ ವ್ರಜಂ ಪ್ರತಿ ।
ಕ್ರೀಡಾಸರೋವರಾಭ್ಯಾಶಂ ಪ್ರಯಯೌ ರಾಧಯಾ ಸಹ ॥ ೨೯ ॥

ತತ್ರ ಗತ್ವಾ ಪುನಃ ಕ್ರೀಡಾಂ ಚಕಾರ ಚ ತಯಾ ಸಹ ।
ವಿಜಹೌ ವಿರಹಜ್ವಾಲಾಂ ರಾಸೇ ರಾಸೇಶ್ವರೀ ಮುದಾ ॥ ೩೦ ॥

ರಾಧಾ ಸಾ ಸ್ವಾಮಿನಾ ಸಾರ್ಧಂ ಪುಷ್ಪಚಂದನಚರ್ಚಿತಾ ।
ಪುಷ್ಪಚಂದನತಲ್ಪೇ ಚ ತಸ್ಥೌ ರಹಸಿ ನಾರದ ॥ ೩೧ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣನಾರದಸಂವಾದೇ ರಾಧಾಶೋಕ
ವಿಮೋಚನಂ ನಾಮ ಅಷ್ಟಷಷ್ಟಿತಮೋಽಧ್ಯಾಯಃ

---

೨೮. ಮನುಷ್ಯರಿಗೆ ಕೇವಲ ಸಾಮಾನ್ಯವಸ್ತುವಿನ ವಿರಹವುಂಟಾದರೇ ಸಹಿಸಲಸಾಧ್ಯವಾಗುವಾಗ ದೇಹಾತ್ಮಗಳ ಅಗಲಿಕೆಯು ಹೇಗೆ ತಾನೆ ಸುಖಪ್ರದ ವಾದೀತು ?

೨೯. ಆದಿನ ವ್ರಜರಾಜನಾದ ಶ್ರೀ ಕೃಷ್ಣನು ಗೋಕುಲಕ್ಕೆ ಹೋಗಲಿಲ್ಲ. ರಾಧೆಯನ್ನು ಕರೆದುಕೊಂಡು ಕ್ರೀಡಾಸರೋವರದ ಸಮೀಪಕ್ಕೇ ಪುನಃ ಹೋದನು.

೩೦. ಅಲ್ಲಿಗೆ ಹೋಗಿ ಆ ರಾಧೆಯೊಡನೆ ಪುನಃ ರತಿಕ್ರೀಡೆಯಾಡಿದನು. ಆ ರತಿಸುಖದಿಂದ ರಸಿಕೇಶ್ವರಿಯಾದ ರಾಧೆಯು ತನ್ನ ವಿರಹವ್ಯಥೆಯನ್ನು ದೂರ ಮಾಡಿದಳು.

೩೧. ಎಲೈ ನಾರದನೇ, ಆ ರಾಧೆಯು ತನ್ನ ರಮಣನೊಡನೆ ಅಂಗಾಂಗ ಗಳಿಗೂ ಪುಷ್ಪಚಂದನಗಳನ್ನು ಲೇಪಿಸಿಕೊಂಡು, ಪುಷ್ಪಚಂದನ ಶಯನದಲ್ಲಿ ಏಕಾಂತ ಸುಖವನ್ನನುಭವಿಸಿಕೊಂಡಿದ್ದಳು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣ ಶ್ರೀಕೃಷ್ಣಜನ್ಮಖಂಡದಲ್ಲಿ ರಾಧಾಶೋಕ
ವಿಮೋಚನೆ ಎಂಬ ಅರವತ್ತೆಂಟನೆಯ ಅಧ್ಯಾಯವು ಮುಗಿದುದು.

ಅರವತ್ತೆಂಟನೆಯ ಅಧ್ಯಾಯದ ಸಾರಾಂಶ.

ಪುರಾಣ ಪುರುಷನಾದ ಶ್ರೀ ಕೃಷ್ಣನು ರಾಧೆಯೊಡನೆ ಚಿರಕಾಲ ರತಿಕ್ರೀಡೆ ಯಾಡಿದ ನಂತರ ಆಕೆಯನ್ನು ಎಚ್ಚರಗೊಳಿಸಿ ಸಮಾಧಾನಪಡಿಸಿ ಅಕ್ರೂರನು ತನ್ನನ್ನು ಕರೆಯುವುದಕ್ಕೆ ಬಂದಿರುವುದರಿಂದ ತಾನು ಗೋಕುಲಕ್ಕೆ ಹಿಂತಿರುಗುವು ದಾಗಿಯೂ, ರಾಧೆಯು ಬೃಂದಾವನದಲ್ಲೇ ಇರಬೇಕೆಂದೂ ಹೇಳಿದನು. ಆದರೆ ರಾಧೆಯು ಶ್ರೀ ಕೃಷ್ಣನ ವಿರಹವನ್ನು ಸಹಿಸಲಾರದೆ ಬಹಳವಾಗಿ ಗೋಳಾಡಿದಳು. ಕಡೆಗೆ ಕೃಷ್ಣನ ವಿರಹದಿಂದ ಆತ್ಮತ್ಯಾಗಮಾಡುವುದಾಗಿ ಹೇಳಿದಳು. ಆಗ ಕೃಷ್ಣನು ಆಕೆಗೆ ಸುದಾಮನ ಶಾಪವನ್ನು ಜ್ಞಾಪಿಸಿ ನೂರು ವರ್ಷಗಳ ಕಾಲ ವಿರಹ ದುಃಖ ವನ್ನು ಅನುಭವಿಸುವುದು ಅನಿವಾರ್ಯವೆಂದನು. ಆಗ ಕುಪಿತಳಾದ ರಾಧೆಯು ಬ್ರಹ್ಮನ ಶಾಪದಿಂದ ಕೃಷ್ಣನ ಪುತ್ರಪೌತ್ರರೆಲ್ಲರೂ ನಾಶಹೊಂದುವಂತಾಗಲೆಂದು ಹೇಳಿ ಮೂರ್ಛೆಗೊಂಡಳು. ದಯಾಮಯನಾದ ಶ್ರೀಕೃಷ್ಣನು ಆಕೆಯ ಕಷ್ಟವನ್ನು ನೋಡಲಾರದೆ, ಆಕೆಯನ್ನು ಚೇತನಗೊಳಿಸಿ, ಕ್ರೀಡಾ ಸರೋವರಕ್ಕೆ ಕರೆದೊಯ್ದು, ಪುನಃ ಆಕೆಯೊಡನೆ ಚಿರಕಾಲ ಕ್ರೀಡಿಸಿದನು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ನವಷಷ್ಟಿತಮೋಽಧ್ಯಾಯಃ ||

|| ನಾರದ ಉವಾಚ ||

ಅತಃ ಪರಂ ಕಿಂ ರಹಸ್ಯಂ ರಾಧಾಕೇಶವಯೋರ್ವದ ।
ನಿಗೂಢತತ್ತ್ವಮಸ್ಪಷ್ಟಂ ತನ್ಮೇ ವ್ಯಾಖ್ಯಾತುಮರ್ಹಸಿ || ೧ ||

|| ಶ್ರೀ ನಾರಾಯಣ ಉವಾಚ ||

ಶೃಣು ನಾರದ ವಕ್ಷ್ಯಾಮಿ ರಹಸ್ಯಂ ಪರಮಾದ್ಭುತಂ ।
ಗೋಪನೀಯಂ ಚ ವೇದೇಷು ಪುರಾಣೇಷು ಪುರಾವಿದಾಂ || ೨ ||

ಪುನಃ ಸಕಾಮೋ ಭಗವಾನ್ಕೃಷ್ಣಃ ಸ್ವೇಚ್ಛಾಮಯೋ ವಿಭುಃ ।
ರೇಮೇ ಸ ರಮಯಾ ಸಾರ್ಧಂ ವಿದಗ್ಧಶ್ಚ ವಿದಗ್ಧಯಾ || ೩ ||

ಅರವತ್ತೊಂಭತ್ತನೆಯ ಅಧ್ಯಾಯ

೧. ನಾರದ :—ಎಲೈ ನಾರಾಯಣಮಹರ್ಷಿಯೇ, ರಾಧಾಕೃಷ್ಣರ ರಹಸ್ಯ ವೃತ್ತಾಂತವು ಮತ್ತೇನಾದರೂ ಇದ್ದರೆ ನನಗೆ ತಿಳಿಸು. ಅಸ್ಪಷ್ಟವೂ ಗೂಢವೂ ಆದ ತತ್ತ್ವವಿದ್ದರೆ ಅದನ್ನು ನನಗೆ ವಿಸ್ತರಿಸಿ ಹೇಳುವವನಾಗು.

೨. ನಾರಾಯಣ:—ಎಲೈ ನಾರದನೇ - ಪುರಾತನರಿಗೂ ಸಹ ವೇದಪುರಾಣಗಳಲ್ಲಿ ತಿಳಿಯಲಾಗದ ಅತ್ಯದ್ಭುತವಾದ ರಹಸ್ಯವನ್ನು ಹೇಳುವೆನು. ಸಾವಧಾನದಿಂದ ಕೇಳು

೩. ಮೇಲೆ ಹೇಳಿದ ರೀತಿಯಲ್ಲಿ ಸ್ವೇಚ್ಛಾಮಯನೂ ವಿಶ್ವವ್ಯಾಪಕನೂ ಆದ ಆ ಕೃಷ್ಣನು ಸಕಾಮನಾದನು. ಕಾಮಕಲಾಚತುರನಾದ ಆ ಕಾಮಿಯು ಕ್ರೀಡೆಯಲ್ಲಿ ಪ್ರೌಢೆಯಾದ ರಾಧೆಯೊಡನೆ ರಮಿಸಿದನು.

ಚತುಃಷಷ್ಟಿಕಲಾಶಕ್ತ್ಯಾ ಯಥಾ ಕಾಂತಾ ಕಲಾವತೀ ।
ಕಾಮಶಾಸ್ತ್ರೇಷು ನಿಪುಣಾ ವಿದಗ್ಧಾ ರಸಿಕೇಶ್ವರೀ ॥ ೪ ॥

ಶೃಂಗಾರಲೀಲಾನಿಪುಣಾ ಶಶ್ವತ್ಕಾಮಾ ಚ ಕಾಮುಕೀ ।
ಸುಂದರೀ ಸುಂದರೀಷ್ವೇವ ಶಶ್ವತ್ಸುಸ್ಥಿರಯೌವನಾ ॥ ೫ ॥

ಪಿತೄಣಾಂ ಮಾನಸೀ ಕನ್ಯಾ ಧನ್ಯಾ ಮಾನ್ಯಾ ಚ ಮಾನಿನೀ ।
ಶಂಭೋಃ ಶಿಷ್ಯಾ ಜ್ಞಾನಯುತಾ ಶತಕಲ್ಪಾಂತಜೀವಿನೀ ॥ ೬ ॥

ವೇದವೇದಾಂಗನಿಪುಣಾ ಯೋಗನೀತಿವಿಶಾರದಾ ।
ನಾನಾರೂಪಧರಾ ಸಾಧ್ವೀ ಪ್ರಸಿದ್ಧಾ ಸಿದ್ಧಯೋಗಿನೀ ॥ ೭ ॥

ತತ್ಕನ್ಯಾ ರಾಧಿಕಾ ದೇವೀ ಮಾತೃತುಲ್ಯಾ ಚ ಕಾಮುಕೀ ।
ಚಕಾರ ನಾನಾಭಾವಂ ಸಾ ಸುಶೀಲಾ ಸ್ವಾಮಿನಂ ಪ್ರತಿ ॥ ೮ ॥

---

೪. ಪ್ರೌಢೆಯೂ, ರಸಿಕೇಶ್ವರಿಯೂ ಆದ ಕಲಾವತೀ ದೇವಿಯು ಅರವತ್ತು ನಾಲ್ಕು ಕಲೆಗಳನ್ನು ಅರಿತು ಕಾಮಶಾಸ್ತ್ರದಲ್ಲಿ ನಿಪುಣೆಯೆನಿಸಿದ್ದಳು

೫. ಶೃಂಗಾರ ಲೀಲೆಯಲ್ಲಿ ನಿಪುಣೆಯಾದ ಆ ಕಾಮುಕಿಯು ಸರ್ವದಾ ಸಕಾಮಳಾಗಿ ಸ್ಥಿರಯೌವನದಿಂದ ಕೂಡಿ ಸುಂದರಿಯರಿಗೆಲ್ಲ ಸುಂದರಿಎನಿಸಿದ್ದಳು.

೬. ಧನ್ಯಳೂ ಮಾನ್ಯಳೂ ಆದ ಆ ಕಲಾವತಿಯು ಪಿತೃಗಳ ಮಾನಸ ಕನ್ಯೆಯಾಗಿದ್ದುದಲ್ಲದೆ ಶಿವನ ಶಿಷ್ಯಳೂ ದಿವ್ಯಜ್ಞಾನವುಳ್ಳವಳೂ ನೂರುಕಲ್ಪಗಳವರೆಗೆ ಜೀವಿಸುವವಳೂ ಆಗಿದ್ದಳು.

೭. ವೇದವೇದಾಂಗ ನಿಪುಣಳೂ, ಯೋಗನೀತಿವಿಶಾರದಳೂ ಆಗಿದ್ದ ಆ ಸಿದ್ಧಿಯೋಗಿನಿಯು ನಾನಾರೂಪಧಾರಿಣಿಯಾಗಿ ಪ್ರಸಿದ್ಧಳಾದ ಸಾಧ್ವೀಮಣಿ ಎನಿಸಿದ್ದಳು.

೮. ಅವಳ ಮಗಳಾದ ರಾಧಾದೇವಿಯು ತಾಯಿಯಂತೆಯೇ ಕಾಮುಕತೆಯಲ್ಲಿ ನುರಿತವಳು. ಆ ಸುಶೀಲೆಯು ತನ್ನ ಪತಿಯೊಡನೆ ನಾನಾ ಪ್ರಕಾರವಾದ ಶೃಂಗಾರಭಾವಗಳನ್ನು ಅನುಭವಿಸಿದಳು.

ಚತುಃಷಷ್ಠಿಕಲಾಮಾನಂ ಶೃಂಗಾರಂ ಚ ಚಕಾರ ಸಃ ।
ತಥಾ ವಿಶಿಷ್ಟಯಾ ಸಾಕಂ ರಾಸೇ ರಾಸರಸೋತ್ಸುಕಃ ॥ ೯ ॥

ತಾಂ ನಖಾಗ್ರಕ್ಷತಶ್ರೋಣೀಂ ನಖಕ್ಷತಪಯೋಧರಾಂ ।
ಲುಪ್ತಚಂದನಸಿಂಧೂರಾಂ ಕಬರೀಶಿಥಿಲಾಂ ಸತೀಂ ॥ ೧೦ ॥

ಸುಖಸಂಭೋಗಮಗ್ನಾಂ ಚ ನಗ್ನಾಂ ಚ ಶೋಕಮೂರ್ಛಿತಾಂ ।
ಪುಲಕಾಂಚಿತಸರ್ವಾಂಗೀಂ ನಿದ್ರಾದೇವೀಂ ಸಮಾಯಯೌ ॥ ೧೧ ॥

ದೃಷ್ಟ್ವಾ ತಾಂ ನಿದ್ರಿತಾಂ ಕೃಷ್ಣಃ ಕೃಪಯಾ ಚ ಕೃಪಾನಿಧಿಃ ।
ರುರೋದ ಮಾಯಯಾ ಮಾಯೀ ಮಾಯೇಶೋ ಲೋಕಶಿಕ್ಷಯಾ ॥ ೧೨ ॥

ಕೃತ್ವಾ ವಕ್ಷಸಿ ರಾಧಾಂ ಚ ಚುಚುಂಬ ಚ ಪುನಃ ಪುನಃ ।
ಸ್ನಾತಾಂ ಚ ನೇತ್ರಸಲಿಲೈಃ ಪ್ರಾಣಾಧಿಷ್ಠಾತೃದೇವತಾಂ ॥ ೧೩ ॥

---

೯. ರಾಸಕ್ರೀಡೆಯಲ್ಲಿ ರಸಿಕನಾದ ಶ್ರೀಕೃಷ್ಣನೂ ಸಹ ಪ್ರೌಢೆಯಾದ ಆ ರಾಧೆಯೊಡನೆ ಅರವತ್ತುನಾಲ್ಕು ಕಲಾಪರಿಮಿತವಾದ ಶೃಂಗಾರಸುಖವನ್ನು ಅವಿಚ್ಛಿನ್ನವಾಗಿ ಅನುಭವಿಸಿದನು.

೧೦–೧೧. ಕೃಷ್ಣನ ಉಗುರ್ಗೊನೆಗಳಿಂದ ಗಾಯಗೊಂಡ ಶ್ರೋಣೀಬಿಂಬವುಳ್ಳ 'ನಖಕ್ಷತ' ದಿಂದ ಕೂಡಿದ ಸ್ತನಗಳುಳ್ಳ, ಅಳಿಸಿಹೋದ ಚಂದನಗಂಧ ಮತ್ತು ಚಂದ್ರನ ಬೊಟ್ಟುಳ್ಳ, ಕೆದರಿಹೋದ ತಲೆಕೂದಲುಳ್ಳ, ಸುಖಸಂಭೋಗ ಮಗ್ನಳಾಗಿ ಬೆತ್ತಲೆಯಾಗಿರುವ ರೋಮಾಂಚಿತವಾದ ಸಕಲಾವಯವಗಳುಳ್ಳ, ಪರಮಪತಿವ್ರತೆಯಾದ ಆ ರಾಧಾದೇವಿಗೆ ಗಾಢನಿದ್ರೆಯು ಬಂದಿತು.

೧೨. ಕೃಪಾನಿಧಿಯಾದ ಕೃಷ್ಣನು ಆವಳು ನಿದ್ರೆಮಾಡುತ್ತಿರುವುದನ್ನು ನೋಡಿ ಅವಳನ್ನು ಬಿಟ್ಟುಹೋಗಲು ಅದೇ ಸುಸಮಯವೆಂದು ತಿಳಿದಿದ್ದರೂ, ತಾನು ಮಾಯೆಗೆ ಸಿಲುಕಿ ಲೋಕಶಿಕ್ಷಣಾರ್ಥವಾಗಿ ಕರುಣೆಯಿಂದ ಅಳಲಾರಂಭಿಸಿದನು.

೧೩. ತನ್ನ ಕಣ್ಣೀರುಗಳಿಂದ ನೆನೆದಿರುವ ತನ್ನ ಪ್ರಾಣಗಳ ಅಧಿಷ್ಠಾತೃದೇವಿಯಾದ ಆ ರಾಧೆಯನ್ನು ಎದೆಗೆ ಅಪ್ಪಿಕೊಂಡು ಮತ್ತೆ ಮತ್ತೆ ಚುಂಬಿಸಿದನು.

ಪ್ರಾಣಾಧಿಕಾಂ ಪ್ರಿಯತಮಾಂ ಧಾರಯಾಮಾಸ ವಾಸಸೀ ।
ವಹ್ನಿಶುದ್ಧೇಽತಿಸೂಕ್ಷ್ಮೇ ಚಾಮೂಲ್ಯೇ ವಿಶ್ವಸುದುರ್ಲಭೇ ॥ ೧೪ ॥

ಕಬರೀಂ ರಚಯಾಮಾಸ ದದೌ ಕುಂಕುಮಚಂದನಂ ।
ತದ್ಗಾತ್ರೇ ಚ ಗಲೇ ಹಾರಮಮೂಲ್ಯಂ ರತ್ನನಿರ್ಮಿತಂ ॥ ೧೫ ॥

ಸಿಂದೂರಂ ಚ ದದೌ ತಸ್ಯಾಃ ಸೀಮಂತಾಧಃಸ್ಥಲೇಽಮಲೇ ।
ದಾಡಿಮೀಕುಸುಮಾಕಾರಂ ಯುಕ್ತಂ ಚಂದನಬಿಂದುಭಿಃ ॥ ೧೬ ॥

ಚಕಾರ ಪದ್ಮಕಂ ಗಂಡೇ ನಾನಾಚಿತ್ರವಿಚಿತ್ರಕಂ ।
ದದೌ ತತ್ಪಾದಪದ್ಮೇ ಚ ರತ್ನಮಂಜೀರರಂಜಿತಂ ॥ ೧೭ ॥

ಪಾದಾಂಗುಲಿನಖಾಗ್ರೇ ಚ ಸುಂದರಾಲಕ್ತಕಂ ದದೌ ।
ನಾನಾಸುವೇಷೋಜ್ಜ್ವಲಿತಾಂ ತಾಂ ನಿದ್ರಾಕುಲಿತಾಂ ವಿಭುಃ ॥ ೧೮ ॥

---

೧೪. ಅಗ್ನಿಯಂತೆ ಪರಿಶುದ್ಧವೂ, ಅತಿ ಸೂಕ್ಷ್ಮವೂ, ಅತ್ಯಮೂಲ್ಯವೂ, ವಿಶ್ವದಲ್ಲಿ ದುರ್ಲಭವೂ ಆದ ಎರಡು ವಸ್ತ್ರಗಳನ್ನು ಪ್ರಾಣಕ್ಕಿಂತಲೂ ಹೆಚ್ಚು ಪ್ರಿಯತಮಳಾದ ಆ ರಾಧೆಗೆ ಉಡಿಸಿದನು.

೧೫. ಅವಳ ತಲೆಕೂದಲನ್ನು ಬಾಚಿ ಹೆರಳು ಹಾಕಿದನು. ಅವಳ ಅಂಗಾಂಗಗಳಿಗೆಲ್ಲ ಚಂದನವನ್ನು ಲೇಪಿಸಿ ಕುಂಕುಮದ ಬೊಟ್ಟನ್ನಿಟ್ಟನು. ಕಂಠಕ್ಕೆ ಅಮೂಲ್ಯವಾದ ಒಂದು ರತ್ನಹಾರವನ್ನು ಹಾಕಿದನು.

೧೬. ಚಂದನದ ಬಿಂದುಗಳಿಂದ ಕೂಡಿದ ಚಂದ್ರದ ಬೊಟ್ಟನ್ನು ಆಕೆಯ ಬೈತಲೆಯ ಮುಂಭಾಗದಲ್ಲಿ ದಾಳಿಂಬೆ ಹೂವಿನ ಆಕಾರವಾಗಿ ರಚಿಸಿದನು

೧೭. ಕಪೋಲಸ್ಥಳಗಳಲ್ಲಿ ನಾನಾಚಿತ್ರಗಳಿಂದ ವಿಚಿತ್ರವಾದ ಪದ್ಮಕಪತ್ರ ವನ್ನು ರಚಿಸಿದನು. ಅಲ್ಲದೆ ಆಕೆಯ ಕಮಲದಂತಿರುವ ಪಾದಗಳಿಗೆ ರತ್ನದ ನೂಪುರ ವನ್ನು ತೊಡಿಸಿದನು

೧೮—೧೯ ಆಕೆಯ ಕಾಲ್ಬೆರಳುಗಳ ಉಗುರ್ಗೊನೆಗೆ ಸುಂದರವಾದ ಅರಗಿನ ರಸವನ್ನು ಬಳಿದನು. ವಿಶ್ವವ್ಯಾಪಕನಾದ ಶ್ರೀಕೃಷ್ಣನು ನಿದ್ರೆಮಾಡುತ್ತಿದ್ದ ರಾಧೆ

ಪುನಶ್ಚ ಕಾರ ಮೋಹೇನ ಗಾಢಾಲಿಂಗನಮೀಪ್ಸಿತಂ ।
ಪುನಶ್ಚ ಚುಂಬನಂ ಕೃತ್ವಾ ನಿವೇಶ್ಯ ಚ ಸ್ವವಕ್ಷಸಿ ॥ ೧೯ ॥

ಸುಷ್ವಾಪ ಜಗತಾಂ ಸ್ವಾಮೀ ಕಾಮೀ ವಿರಹಕಾತರಃ ।
ಏತಸ್ಮಿನ್ನಂತರೇ ಕಾಲೇ ಬ್ರಹ್ಮಾ ಲೋಕಪಿತಾಮಹಃ ॥ ೨೦ ॥

ಶಿವಶೇಷಾದಿಭಿರ್ದೇವೈರ್ಮುನೀಂದ್ರೈಸ್ಸಾರ್ಧಮಾಯಯೌ ।
ಆಗತ್ಯ ನತ್ವಾ ಶಿರಸಾ ತುಷ್ಟಾವ ಸಂಪುಟಾಂಜಲಿಃ ॥ ೨೧ ॥

ಸಾಮವೇದೋಕ್ತಸ್ತೋತ್ರೇಣ ಪರಿಪೂರ್ಣತಮಂ ವಿಭುಂ ॥ ೨೨ ॥

॥ ಬ್ರಹ್ಮೋವಾಚ ॥

ಜಯ ಜಯ ಜಗದೀಶ ವಂದಿತಚರಣ ನಿರ್ಗುಣ ನಿರಾಕಾರ ಸ್ವೇಚ್ಛಾಮಯ ಭಕ್ತಾನುಗ್ರಹ ನಿತ್ಯವಿಗ್ರಹ ಗೋಪವೇಷ ಮಾಯಯಾ ಮಾಯೇಶ ಸುಶೀಲ ಶಾಂತ ಸರ್ವಕಾಂತ ದಾಂತ ನಿತಾಂತಜ್ಞಾನಾನಂದ ಪರಾ-

---

ಯನ್ನು ಈರೀತಿ ಭೂಷಣಾದಿಗಳಿಂದ ಅಲಂಕರಿಸಿ ಅವಳನ್ನು ತನ್ನ ವಕ್ಷಃಸ್ಥಳದಲ್ಲಿರಿಸಿಕೊಂಡು ಪುನಃಚುಂಬಿಸಿ ಮೋಹದಿಂದ ಆಕೆಯನ್ನು ಗಾಢವಾಗಿ ಆಲಂಗಿಸಿಕೊಂಡನು.

೨೦-೨೧. ಜಗದೊಡೆಯನಾದ ಶ್ರೀಕೃಷ್ಣನು ಕಾಮಾತುರನಾಗಿ ಆಕೆಯ ವಿರಹವನ್ನು ತಡೆಯಲಾರದೆ ಪಕ್ಕದಲ್ಲಿಯೇ ಮಲಗಿದನು. ಈ ಸಮಯಕ್ಕೆ ಸರಿಯಾಗಿ ಲೋಕವಿಧಾತೃವಾದ ಬ್ರಹ್ಮನು ಶಿವ, ಆದಿಶೇಷ ಮುಂತಾದ ದೇವತೆಗಳೊಡನೆಯೂ ಮುನೀಂದ್ರರೊಡನೆಯೂ ಸಹ ಅಲ್ಲಿಗೆ ಬಂದನು. ಬಂದವನೇ ಶ್ರೀಕೃಷ್ಣನಿಗೆ ತಲೆಬಾಗಿ ನಮಸ್ಕರಿಸಿ ಕೈಗಳನ್ನು ಮುಗಿದುಕೊಂಡು ಸ್ತುತಿಸಲಾರಂಭಿಸಿದನು.

೨೨. ಸಾಮವೇದೋಕ್ತವಾದ ಸ್ತೋತ್ರದಿಂದ ಪರಿಪೂರ್ಣತಮನಾದ ಶ್ರೀಹರಿಯನ್ನು ಬ್ರಹ್ಮನು ಸ್ತುತಿಸಲಾರಂಭಿಸಿದನು.

೨೩. ಬ್ರಹ್ಮ:-ಜಗದೀಶ್ವರನೂ, ಜಗದ್ವಂದಿತಪಾದಪದ್ಮನೂ, ನಿರ್ಗುಣನೂ ನಿರಾಕಾರನೂ ಸ್ವೇಚ್ಛಾಮಯನೂ ಆದ ಪರಮಾತ್ಮನಿಗೆ ಜಯವಾಗಲಿ. ಭಕ್ತಾನು

ತ್ಪರತರ ಪ್ರಕೃತೇಃ ಪರ ಸರ್ವಾಂತರಾತ್ಮರೂಪ ನಿರ್ಲಿಪ್ತ ಸಾಕ್ಷಿಸ್ವರೂಪ ವ್ಯಕ್ತಾವ್ಯಕ್ತ ನಿರಂಜನ ಭಾರಾವತಾರಣ ಕರುಣಾರ್ಣವ ಶೋಕಸಂತಾಪಗ್ರಸನ ಜರಾಮೃತ್ಯುಭಯಾದಿಹರಣ ಶರಣಪಂಜರ ಭಕ್ತಾನುಗ್ರಹಕಾತರ ಭಕ್ತವತ್ಸಲ ಭಕ್ತಸಂಚಿತಧನ ಓಂ ನಮೋಽಸ್ತು ತೇ ॥ ೨೩ ॥

ಸರ್ವಾಧಿಷ್ಠಾತೃದೇವಾಯೇತ್ಯುಕ್ತ್ವಾ ವೈ ಪ್ರೀಣನಾಯ ಚ ।
ಪುನಃಪುನರುವಾಚೇದಂ ಮೂರ್ಚ್ಛಿತಶ್ಚ ಬಭೂವ ಹ ॥ ೨೪ ॥

ಇತಿ ಬ್ರಹ್ಮಕೃತಂ ಸ್ತೋತ್ರಂ ಯಃ ಶೃಣೋತಿ ಸಮಾಹಿತಃ ।
ತತ್ಸರ್ವಾಭೀಷ್ಟಸಿದ್ಧಿಶ್ಚ ಭವತ್ಯೇವ ನ ಸಂಶಯಃ ॥ ೨೫ ॥

ಗ್ರಹಕ್ಕಾಗಿ ನಿತ್ಯಶರೀರಧಾರಿಯೂ, ಗೋಪವೇಷಭೂಷಿತನೂ, ಮಾಯೆಗೆ ಒಡೆಯನೂ, ಸುವೇಷನೂ, ಸುಶೀಲನೂ, ಶಾಂತನೂ-ಆದ ಶ್ರೀಹರಿಗೆ ಜಯವಾಗಲಿ. ಸರ್ವರಿಗೂ ಕಾಂತನೂ, ದಮನಶೀಲನೂ, ಜ್ಞಾನಾನಂದಮಯನೂ, ಪರಾತ್ಪರನೂ, ಪ್ರಕೃತಿಗಿಂತ ಮೇಲಾದವನೂ ಆದ ಶ್ರೀಕೃಷ್ಣ ಪರಮಾತ್ಮನಿಗೆ ಜಯವಾಗಲಿ. ಸರ್ವಾಂತರಾತ್ಮನೂ, ನಿರ್ಲಿಪ್ತನೂ, ಸಾಕ್ಷಿಸ್ವರೂಪನೂ, ವ್ಯಕ್ತಾವ್ಯಕ್ತನೂ, ನಿರಂಜನನೂ, ಭೂಭಾರವನ್ನಿಳುಹುವವನೂ, ಕರುಣಾಸಿಂಧುವೂ ಆದ ಪರಮಾತ್ಮನಿಗೆ ಸಾಷ್ಟಾಂಗ ವೆರಗುವೆನು. ಭಕ್ತರ ಶೋಕಸಂತಾಪಗಳನ್ನು ಪರಿಹರಿಸುವವನೂ, ಜರಾಮೃತ್ಯು ಭಯಾದಿಗಳನ್ನು ಹೋಗಲಾಡಿಸುವವನೂ, ಶರಣಾಗತರಕ್ಷಣೆಯಲ್ಲಿ ಪಂಜರಸ್ವರೂಪನೂ, ಭಕ್ತಾನುಗ್ರಹಕಾತರನೂ, ಭಕ್ತವತ್ಸಲನೂ, ಭಕ್ತಸಮೂಹವೇ ಧನವಾಗಿಉಳ್ಳವನೂ, ಆದ ಎಲೈ ಪರಮಾತ್ಮನೇ ನಿನಗೆ ಸಾಷ್ಟಾಂಗವೆರಗುವೆನು.

೨೪. ಸರ್ವಾಧಿಷ್ಠಾತೃದೇವನಾದ ಪರಮಾತ್ಮನ ಪ್ರೀತಿಗಾಗಿ ಬ್ರಹ್ಮನು ಈ ರೀತಿ ಸ್ತುತಿಸಿ, ಆನಂದಪರವಶನಾಗಿ ಮತ್ತೆಮತ್ತೆ ಮೂರ್ಛೆಗೊಂಡನು.

೨೫. ಬ್ರಹ್ಮನು ಮಾಡಿದ ಈ ರೀತಿಯಾದ ಪರಮಾತ್ಮನ ಸ್ತುತಿಯನ್ನು ಏಕಾಗ್ರಚಿತ್ತದಿಂದ ಕೇಳುವವರು ತಮ್ಮ ಸಕಲವಾದ ಇಷ್ಟಾರ್ಥಸಿದ್ಧಿಯನ್ನು ಹೊಂದುವುದರಲ್ಲಿ ಸಂಶಯವಿಲ್ಲ.

ಅಪುತ್ರೋ ಲಭತೇ ಪುತ್ರಂ ಪ್ರಿಯಾಹೀನೋ ಲಭೇತ್ಪ್ರಿಯಾಂ।
ನಿರ್ಧನೋ ಲಭತೇ ಸತ್ಯಂ ಪರಿಪೂರ್ಣತಮಂ ಧನಂ ॥ ೨೬ ॥

ಇಹ ಲೋಕೇ ಸುಖಂ ಭುಕ್ತ್ವಾ ಚಾಂತೇ ದಾಸ್ಯಂ ಲಭೇದ್ಧರೇಃ।
ಅಚಲಾಂ ಭಕ್ತಿಮಾಪ್ನೋತಿ ಮುಕ್ತೇರಪಿ ಸುದುರ್ಲಭಾಂ ॥ ೨೭ ॥

ಸ್ತುತ್ವಾ ಚ ಜಗತಾಂ ಧಾತಾ ಪ್ರಣಮ್ಯ ಚ ಪುನಃಪುನಃ।
ಶನೈಃ ಶನೈಃ ಸಮುತ್ಥಾಯ ಭಕ್ತ್ಯಾ ಪುನರುವಾಚ ಹ ॥ ೨೮ ॥

॥ ಬ್ರಹ್ಮೋವಾಚ ॥

ಉತ್ತಿಷ್ಠ ದೇವದೇವೇಶ ಪರಮಾನಂದಕಾರಣ।
ನಂದನಂದನ ಸಾನಂದ ನಿತ್ಯಾನಂದ ನಮೋಽಸ್ತು ತೇ ॥ ೨೯ ॥

ವ್ರಜ ನಂದಾಲಯಂ ನಾಥ ತ್ಯಜ ವೃಂದಾವನಂ ವನಂ।
ಸ್ಮರ ಸುದಾಮಶಾಪಂ ಚ ಶತವರ್ಷನಿಬಂಧನಂ ॥ ೩೦ ॥

---

೨೬. ಈ ಸ್ತೋತ್ರವನ್ನು ಕೇಳುವವರು ಪುತ್ರಹೀನರಾದರೆ ಸತ್ಪುತ್ರರನ್ನೂ, ಪ್ರಿಯಾರಹಿತರಾದರೆ ಯೋಗ್ಯಳಾದ ಪ್ರಿಯೆಯನ್ನೂ, ಧನರಹಿತರಾದರೆ ಪರಿಪೂರ್ಣ ಧನವನ್ನೂ ಪಡೆಯುವುದರಲ್ಲಿ ಸಂದೇಹವಿಲ್ಲ.

೨೭. ಇಹಲೋಕದಲ್ಲಿರುವವರೆಗೂ ಸುಖವನ್ನನುಭವಿಸಿ ಅಂತ್ಯಕಾಲದಲ್ಲಿ ಶ್ರೀಹರಿಯ ದಾಸ್ಯವನ್ನು ಹೊಂದುವನು ಅಲ್ಲದೆ, ಮುಕ್ತಿಗಿಂತ ದುರ್ಲಭವಾದ ಸ್ಥಿರಭಕ್ತಿಯನ್ನು ಹೊಂದುವನು.

೨೮. ಜಗದೊಡೆಯನಾದ ಬ್ರಹ್ಮನು ಈ ರೀತಿ ಸ್ತುತಿಸಿ, ಪುನಃ ಪುನಃ ಪರಮಾತ್ಮನಿಗೆ ನಮಸ್ಕರಿಸಿ, ಮೆಲ್ಲಗೆ ಮೇಲಕ್ಕೆ ಎದ್ದು, ಭಕ್ತಿಪೂರ್ವಕವಾಗಿ ಈ ರೀತಿಯಾಗಿ ಹೇಳಿದನು.

೨೯. ಬ್ರಹ್ಮ:— ದೇವದೇವೇಶ್ವರನೂ, ಪರಮಾನಂದಕಾರಣನೂ ಆದ ಶ್ರೀಕೃಷ್ಣನೇ, ಮೇಲಕ್ಕೆ ಏಳುವವನಾಗು. ನಂದನಂದನನೂ, ನಿತ್ಯಾನಂದಸ್ವರೂಪನೂ ಆದ ನಿನಗೆ ಸಾಷ್ಟಾಂಗವೆರಗುವೆನು.

೩೦. ಎಲೈ ಜಗನ್ನಾಥನೇ, ನಂದಗೋಕುಲಕ್ಕೆ ಹೋಗುವವನಾಗು. ಬೃಂದಾವನವನ್ನು ಬಿಡು. ನೂರುವರ್ಷದ ಅವಧಿಯುಳ್ಳ ಸುಧಾಮನ ಶಾಪವನ್ನು ನೆನೆಸಿಕೊ.

ಭಕ್ತಶಾಪಾನುರೋಧೇನ ಶತವರ್ಷಂ ಪ್ರಿಯಾಂ ತ್ಯಜ ।
ಪುನರೇತಾಂ ಚ ಸಂಪ್ರಾಪ್ಯ ಗೋಲೋಕಂ ಚ ಗಮಿಷ್ಯಸಿ ॥ ೩೧ ॥

ಗತ್ವಾ ಪಿತೃಗೃಹಂ ದೇವ ಪಶ್ಯಾಕ್ರೂರಂ ಸಮಾಗತಂ ।
ಪಿತೃವ್ಯಮತಿಥಿಂ ಮಾನ್ಯಂ ಧನ್ಯಂ ವೈಷ್ಣವಮೀಶ್ವರಂ ॥ ೩೨ ॥

ತೇನ ಸಾರ್ಧಂ ಮಧುಪುರೀಂ ಭಗವನ್ ಗಚ್ಛ ಸಾಂಪ್ರತಂ ।
ಕುರು ಶಂಭೋರ್ಧನುರ್ಭಂಗಂ ಭಗ್ನಂ ವೈರಿಗಣಂ ಹರೇ ॥ ೩೩ ॥

ಹನ ಕಂಸಂ ದುರಾತ್ಮಾನಂ ತಾತಂ ಬೋಧಯ ಮಾತರಂ ।
ನಿರ್ಮಾಣಂ ದ್ವಾರಕಾಯಾಶ್ಚ ಭಾರಾವತರಣಂ ಭುವಃ ॥ ೩೪ ॥

ದಹ ವಾರಾಣಸೀಂ ಶಂಭೋಃ ಶಕ್ರಸ್ಯ ಸದನಂ ವಿಭೋ ।
ಶಿವಸ್ಯ ಜೃಂಭಣಂ ಯುದ್ಧೇ ಬಾಣಸ್ಯ ಭುಜಕೃಂತನಂ ॥ ೩೫ ॥

---

೩೧. ಭಕ್ತನಾದ ಸುದಾಮನ ಶಾಪಾನುರೋಧವಾಗಿ ನಿನ್ನ ಪ್ರಿಯೆಯಾದ ರಾಧೆಯನ್ನು ನೂರು ವರ್ಷಗಳಕಾಲ ತ್ಯಾಗಮಾಡು. ನೂರು ವರ್ಷಗಳು ಕಳೆದ ನಂತರ ಪುನಃ ಇವಳೊಡಗೂಡಿ ಗೋಲೋಕಕ್ಕೆ ಹೋಗುವೆಯಂತೆ.

೩೨. ಎಲೈ ದೇವನೇ, ನಂದಗೋಪನ ಮಂದಿರಕ್ಕೆ ಹೋಗಿ, ನಿಮ್ಮ ಚಿಕ್ಕಪ್ಪನೂ, ಮಾನ್ಯನಾದ ಅತಿಥಿಯೂ, ಧನ್ಯನೂ, ವಿಷ್ಣುಭಕ್ತನೂ ಆದ ಅಕ್ರೂರನನ್ನು ನೋಡುವವನಾಗು.

೩೩. ಎಲೈ ಭಗವಂತನೇ, ಅಲ್ಲಿಂದ ಅಕ್ರೂರನೊಡನೆ ಮಧುರೆಗೆ ಹೋಗುವವನಾಗು. ಅಲ್ಲಿ ಶಂಕರನ ಧನುರ್ಭಂಗವನ್ನೂ, ವೈರಿಗಳ ನಾಶವನ್ನೂ ಸಹ ಮಾಡುವವನಾಗು.

೩೪. ದುರಾತ್ಮನಾದ ಕಂಸನನ್ನು ವಧೆಮಾಡಿ ನಿನ್ನ ತಂದೆತಾಯಿಯರಾದ ವಸುದೇವ ದೇವಕಿಯರನ್ನು ಸಮಾಧಾನಗೊಳಿಸು. ಭೂಮಿಯ ಭಾರವನ್ನಿಳುಹಿ ದ್ವಾರಕಾ ನಗರಿಯನ್ನು ನಿರ್ಮಿಸುವವನಾಗು.

೩೫. ಶಿವನ ವಾಸಸ್ಥಾನವಾದ ವಾರಾಣಸಿಯನ್ನೂ, ಶಕ್ರನ ನಿವಾಸಸ್ಥಾನವಾದ ಅಮರಾವತಿಯನ್ನೂ ದಹಿಸಿ, ಯುದ್ಧದಲ್ಲಿ ಶಿವನ ಅಹಂಕಾರವನ್ನು ಮುರಿದು ಬಾಣಾಸುರನ ಬಾಹುಗಳನ್ನು ಕತ್ತರಿಸು.

ರುಕ್ಮಿಣೀಹರಣಂ ನಾಥ ಘಾತನಂ ನರಕಸ್ಯ ಚ ।
ಷೋಡಶಾನಾಂ ಸಹಸ್ರಂ ಚ ಸ್ತ್ರೀಣಾಂ ಪಾಣಿಗ್ರಹಂ ಕುರು ॥ ೩೬ ॥

ತ್ಯಜ ಪ್ರಿಯಾಂ ಪ್ರಾಣಸಮಾಂ ವ್ರಜೇಶ್ವರ ವ್ರಜಂ ವ್ರಜ ।
ಉತ್ತಿಷ್ಠೋತಿಷ್ಠ ಭದ್ರಂ ತೇ ಯಾವದ್ರಾಧಾ ನ ಜಾಗ್ರತಿ ॥ ೩೭ ॥

ಇತ್ಯೇವಮುಕ್ತ್ವಾ ಬ್ರಹ್ಮಾ ಚ ಸೇಂದ್ರೈರ್ದೇವಗಣೈಃ ಸಹ ।
ಜಗಾಮ ಬ್ರಹ್ಮಲೋಕಂ ಚ ಶೇಷಶ್ಚ ಶಂಕರಸ್ತಥಾ ॥ ೩೮ ॥

ಪುಷ್ಪಚಂದನವೃಷ್ಟಿಂ ಚ ಕೃಷ್ಣಸ್ಯೋಪರಿ ದೇವತಾಃ ।
ಚಕ್ರುಃ ಪ್ರೀತ್ಯಾ ಚ ಭಕ್ತ್ಯಾ ಚ ವಾಗ್ಬಭೂವಾಶರೀರಿಣೀ ॥ ೩೯ ॥

ವಧ ಕಂಸಂ ವಧಾರ್ಹಂ ಚ ಸ್ವಪಿತ್ರೋರ್ಮೋಕ್ಷಣಂ ಕುರು ।
ಕ್ಷಯಂ ಕುರು ಭುವೋ ಭಾರಂ ನಾರದೇತ್ಯೇವಮೇವ ಚ ॥ ೪೦ ॥

---

೩೬. ಎಲೈ ನಾಥನೇ, ರುಕ್ಮಿಣೀಹರಣವನ್ನೂ ನರಕಾಸುರನ ವಧೆಯನ್ನೂ ಮಾಡಿ, ಹದಿನಾರುಸಾವಿರ ಗೋಪಕನ್ನಿಕೆಯರ ಪಾಣಿಗ್ರಹಣವನ್ನು ಮಾಡು.

೩೭. ಎಲೈ ಗೋಕುಲನಾಥನೇ, ನಿನ್ನ ಪ್ರಾಣಸಮಾನಳಾದ ರಾಧೆಯನ್ನು ತ್ಯಜಿಸಿ ಗೋಲೋಕಕ್ಕೆ ಹೋಗು. ಏಳು ಏಳು. ರಾಧೆಯು ಎಚ್ಚರಗೊಳ್ಳುವುದಕ್ಕೆ ಮೊದಲು ಹೊರಡು ನಿನಗೆ ಮಂಗಳವಾಗಲಿ.

೩೮. ಈ ರೀತಿಯಾಗಿ ಹೇಳಿ ಬ್ರಹ್ಮನು ಇಂದ್ರ ಮತ್ತು ಇತರ ದೇವತೆಗಳೊಡಗೂಡಿ ಬ್ರಹ್ಮಲೋಕಕ್ಕೆ ಹಿಂತಿರುಗಿದನು. ಆದಿಶೇಷನೂ ಶಂಕರನೂ ತಮ್ಮ ತಮ್ಮ ಮಂದಿರಕ್ಕೆ ತೆರಳಿದರು.

೩೯. ದೇವತೆಗಳು ಭಕ್ತಿಯಿಂದ ಶ್ರೀಕೃಷ್ಣನ ಮೇಲೆ ಚಂದನಪುಷ್ಪಗಳ ಮಳೆಯನ್ನು ಕರೆದರು. ಅಲ್ಲದೆ ಅಶರೀರವಾಣಿಯು ಸಹ ಶ್ರೀಕೃಷ್ಣನಿಗೆ ಇಂತೆಂದಿತು.

೪೦. "ಎಲೈ ಪರಮಾತ್ಮನೇ, ವಧೆಗೆ ಯೋಗ್ಯನಾದ ಕಂಸನನ್ನು ವಧಿಸಿ ನಿನ್ನ ತಂದೆತಾಯಿಗಳ ಬಂಧನವನ್ನು ಬಿಡಿಸು. ಅಲ್ಲದೆ ಭೂಭಾರವನ್ನೆಲ್ಲ ಇಳುಹಿ ಭೂದೇವಿಯನ್ನುದ್ಧರಿಸು"

ಇತ್ಯೇವಂ ತದ್ವಚಃ ಶ್ರುತ್ವಾ ಭಗವಾನ್ ಭೂತಭಾವನಃ ।
ರಾಧಾಂ ಭಗವತೀಂ ತ್ಯಕ್ತ್ವಾ ಸಮುತ್ತಸ್ಥೌ ಶನೈಃ ಶನೈಃ ॥ ೪೧ ॥

ಯಯೌ ಹರಿಃ ಕಿಯದ್ದೂರಂ ನಿರೀಕ್ಷ್ಯ ಚ ಪುನಃ ಪುನಃ ।
ಕ್ಷಣಂ ತಸ್ಥೌ ಚಂದನಾನಾಂ ವನೇ ವಾಸಸಮೀಪತಃ ॥ ೪೨ ॥

ವಿಹಾಯ ರಾಧಾ ನಿದ್ರಾಂ ಸಾ ಸಮುತ್ತಸ್ಥೌ ಸ್ವತಲ್ಪತಃ ।
ನ ನಿರೀಕ್ಷ್ಯ ಹರಿಂ ಶಾಂತಂ ಕಾಂತಂ ಚ ಪ್ರಾಣವಲ್ಲಭಂ ॥ ೪೩ ॥

ಹಾ ನಾಥ ರಮಣ ಶ್ರೇಷ್ಠ ಪ್ರಾಣೇಶ ಪ್ರಾಣವಲ್ಲಭ ।
ಪ್ರಾಣಚೋರ ಪ್ರಿಯತಮ ಕ್ವ ಗತೋಽಸೀತ್ಯುವಾಚ ಹ ॥ ೪೪ ॥

ಕ್ಷಣಮನ್ವೇಷಣಂ ಕೃತ್ವಾ ಬಭ್ರಾಮ ಮಾಲತೀವನಂ ।
ಉವಾಸ ಕ್ಷಣಮುತ್ತಸ್ಥೌ ಕ್ಷಣಂ ಸುಷ್ವಾಪ ಭೂತಲೇ ॥ ೪೫ ॥

---

೪೧. ಎಲೈ ನಾರದನೇ, ಈರೀತಿಯಾದ ಅಶರೀರವಾಣಿಯನ್ನು ಕೇಳಿ ಭೂತ ಭವಿಷ್ಯತ್ತುಗಳನ್ನು ಬಲ್ಲ ಪರಮಾತ್ಮನು ಪ್ರಿಯಳಾದ ರಾಧೆಯನ್ನು ಅಲ್ಲಿಯೇ ಬಿಟ್ಟು ಮೆಲ್ಲಗೆ ಮೇಲಕ್ಕೆದ್ದನು.

೪೨. ಶ್ರೀಕೃಷ್ಣನು ಹಿಂದಕ್ಕೆ ತಿರುತಿರುಗಿ ನೋಡುತ್ತಲೇ ಬಹಳ ದೂರ ಹೊರಟುಹೋದನು. ಅಲ್ಲಿ ಚಂದನವನದಲ್ಲಿ ತಾವು ಹಿಂದೆ ನೆಲಸಿದ್ದ ಜಾಗದಲ್ಲಿ ಕ್ಷಣಕಾಲ ನಿಂತುಕೊಂಡನು.

೪೩. ಇತ್ತ ರಾಧಾದೇವಿಯು ನಿದ್ರೆಯಿಂದೆಚ್ಚೆತ್ತು ತನ್ನ ಹಾಸಿಗೆಯಿಂದ ಮೇಲಕ್ಕೆದ್ದು ಸುತ್ತಲೂ ನೋಡಿದಳು. ಆದರೆ ಶಾಂತನೂ ಕಾಂತನೂ ತನ್ನ ಪ್ರಾಣ ಪ್ರಿಯನೂ ಆದ ಶ್ರೀಕೃಷ್ಣನನ್ನು ಕಾಣಲಿಲ್ಲ.

೪೪. "ಎಲೈ ನಾಥನೇ, ರಸಿಕ ಶ್ರೇಷ್ಠನೇ, ಪ್ರಾಣೇಶನೇ, ಪ್ರಾಣವಲ್ಲಭನೇ, ನನ್ನ ಪ್ರಾಣವನ್ನಪಹರಿಸುವ ಪ್ರಿಯತಮನೇ, ಎಲ್ಲಿಗೆ ಹೊರಟುಹೋದೆ" ಎಂಬುದಾಗಿ ಪ್ರಲಾಪಮಾಡಿದಳು.

೪೫. ಕ್ಷಣಕಾಲ ಅಲ್ಲಿ ಇಲ್ಲಿ ಹುಡುಕಿ ಮಾಲತೀವನದಲ್ಲಿ ಅಲೆದಾಡಿದಳು. ಕ್ಷಣಕಾಲ ಕುಳಿತಳು. ಮತ್ತೊಂದು ಕ್ಷಣದಲ್ಲಿ ಎದ್ದುನಿಂತಳು. ಮರುಕ್ಷಣದಲ್ಲಿ ನೆಲದ ಮೇಲೆ ಮಲಗಿ ಮಲಗಿ ಹೊರಳಾಡಿದಳು.

ರುರೋದ ಕ್ಷಣಮುತ್ಥಾಯ ಚೈರ್ವಿಲಲಾಪ ಮುಹುರ್ಮುಹುಃ ।
ಆಗಚ್ಛಾಗಚ್ಛ ಹೇ ನಾಥೇತ್ಯೇವಮುಕ್ತ್ವಾ ಪುನಃ ಪುನಃ ॥ ೪೬ ॥

ಮೂರ್ಚ್ಛಾಂ ಸಂಪ್ರಾಪ ಸಂತಾಪಾತ್ಸಂತಪ್ತಾ ವಿರಹಾನಲೈಃ ।
ಭೂತಲೇ ಚ ತೃಣಾಚ್ಛನ್ನೇ ಪಪಾತ ಚ ಯಥಾ ಮೃತಾ ॥ ೪೭ ॥

ಆಯಯುಸ್ತತ್ರ ಗೋಪ್ಯಶ್ಚ ಬ್ರಹ್ಮನ್ ಶತಸಹಸ್ರಶಃ ।
ಕಾಶ್ಚಿಚ್ಚಾಮರಹಸ್ತಾಶ್ಚ ಗೃಹೀತ್ವಾ ಚಂದನದ್ರವಂ ॥ ೪೮ ॥

ತಾಸಾಂ ಮಧ್ಯೇ ಪ್ರಿಯಾಲೀ ತಾಂ ಕೃತ್ವಾ ರಾಧಾಂ ಸ್ವವಕ್ಷಸಿ ।
ಮೃತಾಮಿವ ಪ್ರಿಯಾಂ ದೃಷ್ಟ್ವಾ ರುರೋದ ಪ್ರೇಮವಿಹ್ವಲಾ ॥ ೪೯ ॥

ಸಜಲಂ ಪಂಕಜದಲಂ ಪಂಕೋಪರಿ ನಿಧಾಯ ಚ ।
ಸ್ಥಾಪಯಾಮಾಸ ತಾಂ ರಾಧಾಂ ನಿಶ್ಚೇಷ್ಟಾಂ ಚ ಮೃತಾಮಿವ ॥ ೫೦ ॥

---

೪೬. ಕ್ಷಣಕಾಲ ಗಟ್ಟಿಯಾಗಿ ಅತ್ತಳು. "ಎಲೈ ಪ್ರಾಣನಾಥನೇ, ಎಲ್ಲಿಗೆ ಹೋದೆ ಬೇಗ ಬಾ" ಎಂದು ಪುನಃ ಹೇಳುತ್ತ ಗಟ್ಟಿಯಾಗಿ ವಿಲಾಪಮಾಡ ಲಾರಂಭಿಸಿದಳು.

೪೭. ವಿರಹಾಗ್ನಿಯ ತಾಪಕ್ಕೆ ಸಿಲುಕಿ ಸಂಕಟಪಡುತ್ತಾ ಅವಳು ಮೂರ್ಛೆ ಯನ್ನು ಹೊಂದಿದಳು. ಮತ್ತು ಹುಲ್ಲು ಬೆಳೆದ ಭೂಮಿಯಮೇಲೆ ಬಿದ್ದು ಸತ್ತವ ಳಂತೆ ಮಲಗಿದಳು.

೪೮. ಎಲೈ ಬ್ರಾಹ್ಮಣೋತ್ತಮನೇ, ಆಗ ಅಲ್ಲಿಗೆ ನೂರಾರು ಸಾವಿರ ಗೋಪಿಯರು ಬಂದರು ಕೆಲವರು ಕೈಯ್ಯಲ್ಲಿ ಚಾಮರವನ್ನು ಧರಿಸಿದ್ದರು. ಮತ್ತೆ ಕೆಲವರು ಚಂದನ ಗಂಧವನ್ನು ತಂದಿದ್ದರು

೪೯. ಅವರ ಮಧ್ಯದಲ್ಲಿ ರಾಧೆಯ ಪ್ರಿಯಸಖಿಯೊಬ್ಬಳು ರಾಧೆಯನ್ನು ಎದೆಗಪ್ಪಿಕೊಂಡು ಅವಳು ಸತ್ತಂತೆ ನಿಶ್ಚೇಷ್ಟಳಾಗಿ ಮಲಗಿರುವುದನ್ನು ನೋಡಿ ಪ್ರೇಮಪರವಶಳಾಗಿ ಅಳಲಾರಂಭಿಸಿದಳು.

೫೦. ನೀರಿನಿಂದ ತಣ್ಣಗಿರುವ ನೆಲದ ಮೇಲೆ ನೀರಿನಲ್ಲಿ ನೆನೆದ ತಾವರೆ ಎಲೆಗಳನ್ನು ಹಾಸಿ, ಸತ್ತಂತೆ ನಿಶ್ಚೇಷ್ಟಳಾಗಿ ರಾಧೆಯನ್ನು ಅದರ ಮೇಲೆ ಮಲಗಿಸಿದಳು.

ಗೋಪೀಭಿಃ ಸೇವಿತಾಂ ತತ್ರ ರುಚಿರೈಃ ಶ್ವೇತಚಾಮರೈಃ ।
ಚಂದನದ್ರವಸಂಯುಕ್ತಾಂ ಸ್ನಿಗ್ಧವಸ್ತ್ರಾನ್ವಿತಾಂ ಸತೀಂ ॥ ೫೧ ॥

ದದರ್ಶ ಕೃಷ್ಣಸ್ತತ್ರೈತ್ಯ ತಾಮೇವ ಪ್ರಾಣವಲ್ಲಭಾಂ ।
ನಿವಾರಿತಶ್ಚ ಗೋಪೀಭಿರ್ಬಲಿಷ್ಠಾಭಿಶ್ಚ ನಾರದ ॥ ೫೨ ॥

ಯಥಾ ನೀತಃ ಸಾಪರಾಧೋ ದಂಡ್ಯೋ ರಾಜಭಯಾದಿಭಿಃ ।
ಚಕಾರ ರಾಧಾಂ ಕ್ರೋಡೇ ಚ ಸಮಾಗತ್ಯ ಕೃಪಾನಿಧಿಃ ॥ ೫೩ ॥

ಚೇತನಾಂ ಕಾರಯಾಮಾಸ ಬೋಧಯಾಮಾಸ ಬೋಧನೈಃ ।
ಸಂಪ್ರಾಪ್ಯ ಚೇತನಾಂ ದೇವೀ ದದರ್ಶ ಪ್ರಾಣವಲ್ಲಭಂ ॥ ೫೪ ॥

ಬಭೂವ ಸುಸ್ಥಿರಾ ದೇವೀ ತತ್ಯಾಜ ವಿರಹಜ್ವರಂ ।
ಚಕಾರ ಕಾಂತಂ ಸಾ ಕಾಂತಾ ಗಾತ್ರಾಲಿಂಗನಮೀಪ್ಸಿತಂ ॥ ೫೫ ॥

---

೫೧. ಗೋಪಿಯರು ಆಕೆಯ ಸಮೀಪದಲ್ಲಿ ಕುಳಿತು ಮನೋಹರವಾದ ಬಿಳಿಯ ಚಾಮರವನ್ನು ಬೀಸುತ್ತಿದ್ದರು. ಆ ರಾಧೆಯ ಅಂಗಾಂಗಗಳಿಗೂ ಚಂದನ ದ್ರವವನ್ನು ಲೇಪಿಸಿ ತೆಳುವಾದ ವಸ್ತ್ರವನ್ನು ಡಿಸಿದರು.

೫೨. ಎಲೈ ನಾರದನೇ, ಆ ಸಮಯಕ್ಕೆ ಕೃಷ್ಣನು ಅಲ್ಲಿಗೆ ಬಂದು ಬಲಿಷ್ಠ ರಾದ ಗೋಪಿಯರಿಂದ ತಡೆಯಲ್ಪಟ್ಟು ತನ್ನ ಪ್ರಾಣಕಾಂತೆಯಾದ ರಾಧೆಯ ದುಃಸ್ಥಿತಿಯನ್ನು ನೋಡಿದನು.

೫೩. ಅಪರಾಧಿಯು ರಾಜದಂಡಕ್ಕೊಳಗಾಗಿ ರಾಜಭಯದಿಂದ ಒಯ್ಯ ಲ್ಪಡುವಂತೆ ಆ ಗೋಪಿಯರಿಂದ ಕೃಷ್ಣನು ಒಯ್ಯಲ್ಪಟ್ಟು ರಾಧೆಯ ಸಮೀಪಕ್ಕೆ ಹೋಗಿ ದಯಾಮಯನಾದ ಅವನು ರಾಧೆಯನ್ನು ತನ್ನ ಬಾಹುಗಳಿಂದ ಆಲಿಂಗಿಸಿ ಕೊಂಡನು.

೫೪. ಆಕೆಗೆ ಚಾಟೂಕ್ತಿಗಳಿಂದ ಬೋಧಿಸಿ ಮೂರ್ಛೆ ತಿಳಿಯುವಂತೆ ಮಾಡಿ ದನು. ಆಗ ರಾಧಾದೇವಿಯು ಚೇತನವನ್ನು ಹೊಂದಿ ತನ್ನ ಪ್ರಾಣಕಾಂತನನ್ನು ಕಣ್ತೆರೆದು ನೋಡಿದಳು.

೫೫. ಕೂಡಲೇ ಆ ದೇವಿಯು ಸ್ಥಿರಮನಸ್ಕಳಾಗಿ ತನ್ನ ವಿರಹಜ್ವರವನ್ನು ತ್ಯಜಿಸಿದಳು. ಮನೋಹರಳಾದ ಆ ರಾಧೆಯು ತನಗೆ ಅಭೀಪ್ಸಿತವಾದ ಕಾಂತನ ಗಾಢಾಲಿಂಗನ ಸುಖವನ್ನು ಅನುಭವಿಸಿದಳು.

ನಾನಾಪ್ರಕಾರಶೃಂಗಾರಂ ಚಕಾರ ಮಧುಸೂದನಃ ।
ಉವಾಸ ರತ್ನತಲ್ಪೇ ಚ ರಾಧಾಂ ಕೃತ್ವಾ ಸ್ವವಕ್ಷಸಿ ॥ ೫೬ ॥

ರಾಧಾಸಖೀ ರತ್ನಮಾಲಾ ವಿದಗ್ಧಾ ಸರ್ವಪೂಜಿತಾ ।
ಉವಾಚ ಕೃಷ್ಣಂ ಮಧುರಂ ನೀತಿಸಾರಮನುತ್ತಮಂ ॥ ೫೭ ॥

॥ ರತ್ನಮಾಲೋವಾಚ ॥

ಶೃಣು ಕೃಷ್ಣ ಪ್ರವಕ್ಷ್ಯಾಮಿ ಪರಿಣಾಮಸುಖಾವಹಂ ।
ಹಿತಂ ತಥ್ಯಂ ನೀತಿಸಾರಂ ದಂಪತ್ಯೋಃ ಪ್ರೀತಿಕಾರಣಂ ॥ ೫೮ ॥

ಸಂಮತಂ ಕಾಮಶಾಸ್ತ್ರೇಷು ನೀತೌ ವೇದಪುರಾಣಯೋಃ ।
ಲೌಕಿಕವ್ಯವಹಾರೇಷು ಪ್ರಶಸ್ಯಂ ಸುಯಶಸ್ಕರಂ ॥ ೫೯ ॥

ನಾರೀಣಾಂ ಚ ಯಥಾ ಮಾತಾ ಪ್ರಿಯೋ ಭ್ರಾತಾ ಚ ಬಂಧುಷು ।
ತತಃ ಪ್ರಿಯಶ್ಚ ಪುತ್ರಶ್ಚ ಪುತ್ರಾದೇವ ಪ್ರಿಯಃ ಪತಿಃ ॥ ೬೦ ॥

---

೫೬. ಮಧುವೆಂಬ ರಾಕ್ಷಸನನ್ನು ನಿಗ್ರಹಿಸಿದ ಶ್ರೀಕೃಷ್ಣನೂ ಸಹ ರಾಧೆಯನ್ನು ತನ್ನ ಎದೆಗಪ್ಪಿಕೊಂಡು ರತ್ನದ ಮಂಚದಲ್ಲಿ ಪವಡಿಸಿ ನಾನಾರೀತಿಯ ಶೃಂಗಾರ ಸುಖವನ್ನನುಭವಿಸಿದನು.

೫೭. ಆಗ ಪ್ರೌಢಳೂ, ಸರ್ವಮಾನ್ಯಳೂ, ರಾಧೆಯ ಆಪ್ತಸಖಿಯೂ ಆದ ರತ್ನಮಾಲೆ ಎಂಬುವಳು ಶ್ರೀಕೃಷ್ಣನನ್ನು ಕುರಿತು ನೀತಿಸಾರವೂ ಮಧುರವೂ ಆದ ಕೆಲವು ಹಿತವಚನಗಳನ್ನಾಡಿದಳು.

೫೮ ರತ್ನಮಾಲೆ:—ಎಲೈ ಕೃಷ್ಣನೇ, ಪರಿಣಾಮದಲ್ಲಿ ಸುಖಕರವೂ, ಹಿತವೂ, ಸತ್ಯವೂ, ದಂಪತಿಗಳ ಪ್ರೇಮಕ್ಕೆ ಮೂಲಕಾರಣವೂ ಆದ ಕೆಲವು ನೀತಿಯನ್ನು ಹೇಳುವೆನು ಕೇಳು.

೫೯. ಕಾಮಶಾಸ್ತ್ರಕ್ಕೆ ಅನುಗುಣವಾದುದೂ, ವೇದಪುರಾಣಗಳಲ್ಲಿ ಪ್ರತಿಪಾದ್ಯವಾದುದೂ, ಲೌಕಿಕವ್ಯವಹಾರದಲ್ಲಿ ಪ್ರಶಸ್ತವಾದುದೂ, ಕೀರ್ತಿದಾಯಕವಾದುದೂ ಆದ ನನ್ನ ಮಾತುಗಳನ್ನು ಕೇಳು.

೬೦. ಸಾಮಾನ್ಯವಾಗಿ ಹೆಂಗಸರಿಗೆ ತಾಯಿಯರನ್ನು ಕಂಡರೆ ಬಲುಪ್ರೇಮ. ಅಂತೆಯೇ ಬಂಧುಗಳಲ್ಲಿ ಸಹೋದರನನ್ನು ಕಂಡರೆ ಪ್ರೀತಿ ಹೆಚ್ಚು. ಆ ಸಹೋದರನಿಗಿಂತಲೂ ಪುತ್ರನು ಪ್ರಿಯತಮನು. ಪುತ್ರನಿಗಿಂತಲೂ ಪತಿಯು ಹೆಚ್ಚು ಪ್ರೀತಿಪಾತ್ರನು.

ಶತಪುತ್ರಾತ್ಪ್ರಿಯಃ ಸ್ವಾಮೀ ಸಾಧ್ವೀನಾಂ ಸಾಧು ಸಂಮತಃ |
ರಸಿಕಾನಾಂ ವಿಧಗ್ಧಾನಾಂ ನಹಿ ಭರ್ತುಃ ಪರಃ ಪ್ರಿಯಃ || ೬೧ ||

ಯದಿ ಭರ್ತಾ ವಿದಗ್ಧಶ್ಚ ವಿದಗ್ಧಾನಾಂ ಸುಖಾವಹಃ |
ಅನ್ಯಥಾ ವಿಷತುಲ್ಯಶ್ಚ ವಿಷಮಶ್ಚೇತ್ಖಲಃ ಖಲು || ೬೨ ||

ಸಂಸಾರೇಚಾನೃತೇ ವತ್ಸ ದಂಪತ್ಯೋಃ ಪ್ರೀತಿರೇವ ಚ |
ಪರಸ್ಪರಂ ಚ ಸಮತಾ ಪ್ರಿಯಸೌಭಾಗ್ಯಮೀಪ್ಸಿತಂ || ೬೩ ||

ದಂಪತ್ಯೋಃ ಸಮತಾ ನಾಸ್ತಿ ಯತ್ರ ಯತ್ರ ಹಿ ಮಂದಿರೇ |
ಅಲಕ್ಷ್ಮೀಸ್ತತ್ರ ತತ್ರೈವ ವಿಫಲಂ ಜೀವನಂ ತಯೋಃ || ೬೪ ||

ಸುಸ್ವಾಮಿನಾಂ ವಿಭೇದಶ್ಚ ಪರಂ ದುಃಖಂ ಚ ಯೋಷಿತಾಂ |
ಶೋಕಸಂತಾಪಬೀಜಂ ಚ ಜೀವಿತಂ ಮರಣಾಧಿಕಂ || ೬೫ ||

---

೬೧. ಪತಿವ್ರತಾಸ್ತ್ರೀಯರಿಗೆ ನೂರುಜನಮಕ್ಕಳಿಗಿಂತಲೂ ಪತಿಯು ಹೆಚ್ಚು ಪ್ರೀತಿಪಾತ್ರನೆಂಬುದು ಸಾಧುಸಮಂತವಾಗಿದೆ. ಪ್ರೌಢೆಯರಾದ ರಸಿಕರಿಗೆ ಪತಿಗಿಂತಲೂ ಪ್ರಿಯತಮರಾರೂ ಇಲ್ಲ.

೬೨. ಒಂದು ವೇಳೆ ಪತಿಯೂ ಕಾಮಕಲಾ ಚತುರನಾಗಿದ್ದರೆ ಪ್ರೌಢೆಯರಾದ ಸ್ತ್ರೀಯರಿಗೆ ಅತ್ಯಂತ ಸುಖಕರನಾಗುವನು. ಹಾಗಿಲ್ಲದೆ ಆ ಪತಿಯು ದುಷ್ಟನಾಗಿಯೂ ವಕ್ರಮಾರ್ಗಗಾಮಿಯಾಗಿಯೂ ಇದ್ದರೆ ಆಕೆಗೆ ವಿಷಸಮಾನನಾಗುವನು

೬೩. ಎಲೈ ಶ್ರೀಕೃಷ್ಣನೇ, ಅನೃತಮಯವಾದ ಸಂಸಾರದಲ್ಲಿ ದಂಪತಿಗಳ ಪರಸ್ಪರ ಪ್ರೇಮವೂ, ಅನ್ಯೋನ್ಯಸಮಾನತೆಯೂ, ಪತ್ನಿಗೆ ಪ್ರಿಯನ ಸೌಭಾಗ್ಯವೂ ಅಭೀಪ್ಸಿತವಾದುದು. ಇಲ್ಲದಿದ್ದರೆ ನಿಸ್ಸಾರವೆನಿಸುವುದು.

೬೪. ಯಾವ ಯಾವ ಮನೆಯಲ್ಲಿ ದಂಪತಿಗಳಿಗೆ ಸಮಾನಪ್ರೇಮವಿಲ್ಲವೋ ಆ ಮನೆಗಳಲ್ಲಿ ದರಿದ್ರಲಕ್ಷ್ಮಿಯು ತಾಂಡವವಾಡುವಳು. ಅಲ್ಲದೆ ಅವರಿಬ್ಬರ ಜೀವನವು ನಿಷ್ಫಲವೆನಿಸುವುದು'

೬೫. ಸ್ತ್ರೀಯರಿಗೆ ಯೋಗ್ಯನಾದ ಪತಿಯ ವಿಚ್ಛೇದವು ಅತ್ಯಂತದುಃಖಕರವಾದುದು. ಅವರ ಜೀವಿತವೂ ಸಹ ಶೋಕ ಸಂತಾಪಗಳಿಗೆ ಆಶ್ರಯವಾಗಿ ಮರಣವೇ ಮೇಲೆನಿಸುವುದು.

ಸ್ವಪ್ನೇ ಜಾಗರಣೇ ಚಾಽಪಿ ಪತಿಃ ಪ್ರಾಣಾಶ್ಚ ಯೋಷಿತಃ ।
ಪತಿರೇವ ಗುರುಃ ಸ್ತ್ರೀಣಾಮಿಹಲೋಕೇ ಪರತ್ರ ಚ ॥ ೧೬ ॥

ತಸ್ಮಾತ್ತ್ವಯಿ ಗತೇ ನಾಥೇ ಮೂರ್ಚ್ಛಾಂ ಸಂಪ್ರಾಪ ರಾಧಿಕಾ ।
ಪಪಾತ ಸಹಸಾ ಭೂಮೌ ತೃಣಾಚ್ಛನ್ನೇ ಚ ಭೂತಲೇ ॥ ೧೭ ॥

ಮಯಾ ದತ್ತಂ ಮುಖೇಽಸ್ಯಾಶ್ಚ ಶೀತಲಂ ಜಲಮುತ್ತಮಂ ।
ತದಾಽಶ್ವಾಸೋ ಬಭೂವಾಸ್ಯಾಶ್ಚೇತನಂ ಬಾಲ್ಯಮೇವ ಚ ॥ ೧೮ ॥

ಕ್ಷಣಂ ವದತಿ ಹೇ ನಾಥ ಹೇ ಕೃಷ್ಣೇತಿ ಕ್ಷಣಂ ಸಖೀ ।
ಕ್ಷಣಂ ರೋದಿತಿ ಸಂತಪ್ತಾ ಮೂರ್ಚ್ಛಾಂ ಪ್ರಾಪ್ನೋತಿ ತತ್ ಕ್ಷಣಂ ॥ ೧೯ ॥

ರಾಧಿಕಾಯಾಃ ಶರೀರಂ ಚ ಸಂತಪ್ತಂ ವಿರಹಾನಲೈಃ ।
ದಗ್ಧಲೋಹಯಷ್ಟಿಸಮಮಸ್ಪೃಶ್ಯಮನಲೋಪಮಂ ॥ ೨೦ ॥

---

೧೬. ಹೆಂಗಸರಿಗೆ ನಿದ್ರಾವಸ್ಥೆಯಲ್ಲಿಯೂ, ಜಾಗ್ರದವಸ್ಥೆಯಲ್ಲಿಯೂ ಪತಿಯೇ ಪ್ರಾಣಸ್ವರೂಪನು. ಇಹಲೋಕದಲ್ಲೂ ಪರಲೋಕದಲ್ಲೂ ಹೆಂಗಸಿಗೆ ಪತಿಯೇ ಪರಮ ಗುರುವು.

೧೭. ಆದಕಾರಣ ಪ್ರಾಣನಾಥನಾದ ನೀನು ಹೊರಟುಹೋಗಲು ರಾಧಾದೇವಿಯು ಮೂರ್ಛೆಗೊಂಡು ಇದ್ದಕ್ಕಿದ್ದಂತೆ ಹುಲ್ಲು ಬೆಳೆದ ಭೂಭಾಗದ ಮೇಲೆ ಬಿದ್ದಳು.

೧೮. ನಾನು ಅವಳ ಮುಖದ ಮೇಲೆ ತಣ್ಣಗಿರುವ ನೀರಿನ ಹನಿಗಳನ್ನು ಚುಮುಕಿಸಿದೆನು ಆಗ ಅವಳಿಗೆ ನವ ಚೇತನವು ಬಂದುದಲ್ಲದೆ ನವ ಯೌವನವೂ ಬಂದಂತಾಯಿತು.

೧೯. ಆಗ ನನ್ನ ಗೆಳತಿಯಾದ ರಾಧೆಯು 'ಪ್ರಾಣನಾಥ! ಕೃಷ್ಣಾ! ಎಲ್ಲಿ ಹೋದೆ' ಎಂದು ಕ್ಷಣಕಾಲ ಕೂಗಿಕೊಂಡಳು. ಮತ್ತೊಂದು ಕ್ಷಣದಲ್ಲಿ ವಿರಹ ಸಂತಪ್ತಳಾಗಿ ಅಳುತ್ತ ಕೂಡಲೇ ಮೂರ್ಛೆಹೊಂದಿದಳು.

೨೦. ವಿರಹಾಗ್ನಿಯಿಂದ ಅಳುತ್ತ ಬಳಲಿದ ರಾಧೆಯ ಶರೀರವು, ಕೆಂಪಾಗಿ ಕಾದಿರುವ ಸುವರ್ಣದಂತೆ ಮುಟ್ಟಲಸಾಧ್ಯವೂ, ಅಗ್ನಿಯಂತೆ ತಾಪದಾಯಕವೂ ಆಗಿರುವುದು.

ಸ್ವಪ್ನೇ ಜಾಗರಣೇ ರಾತ್ರೌ ದಿವಾಸು ಚ ಗೃಹೇ ವನೇ ।
ಜಲೇ ಸ್ಥಲೇ ಚಾಂತರಿಕ್ಷೇಽಭ್ಯುದಯೇ ಚಂದ್ರಸೂರ್ಯಯೋಃ ॥ ೭೦ ॥

ನಾಸ್ತಿ ಭೇದಶ್ಚ ರಾಧಾಯಾ ಮೃತತುಲ್ಯಾ ಜಡಾಕೃತಿಃ ।
ಶಶ್ವತ್ಪಶ್ಯತಿ ಸ್ಥಾನಸ್ಥಾ ಸರ್ವಂ ವಿಷ್ಣುಮಯಂ ಜಗತ್ ॥ ೭೧ ॥

ಸ್ನಿಗ್ಧಪಂಕೇ ಪಂಕಜಾನಾಂ ಸಜಲಾನಿ ದಲಾನಿ ಚ ।
ನಿಪತ್ಯ ತತ್ಕೃತೇ ತಲ್ಪೇ ಸುಷ್ವಾಪ ವಿರಹಾತುರಾ ॥ ೭೩ ॥

ಸೇವಿತಾ ಸಾ ಪ್ರಿಯಾಲೀಭಿಃ ಸಂತತಂ ಶ್ವೇತಚಾಮರೈಃ ।
ಚಂದನದ್ರವಸಂಸಿಕ್ತಾ ಸ್ನಿಗ್ಧವಸ್ತ್ರಸಮನ್ವಿತಾ ॥ ೭೪ ॥

ರಾಧಾಂಗಸ್ಪರ್ಶಮಾತ್ರೇಣ ಪಂಕಃ ಸಂಪ್ರಾಪ ಶುಷ್ಕತಾಂ ।
ಸ್ನಿಗ್ಧಾನಿ ಪದ್ಮಪತ್ರಾಣಿ ಬಭೂವುರ್ಭಸ್ಮಸಾತ್ ಕ್ಷಣಂ ॥ ೭೫ ॥

೭೦–೭೨. ಮೃತಸಮಾನಳೂ ಜಡಾಕೃತಿಯೂ ಆದ ರಾಧೆಗೆ ಸ್ವಪ್ನಾವಸ್ಥೆಗೂ ಜಾಗ್ರದವಸ್ಥೆಗೂ, ರಾತ್ರಿ ಮತ್ತು ಹಗಲುಗಳಿಗೂ, ಮನೆ ಮತ್ತು ಕಾಡಿಗೂ ಯಾವ ಭೇದವೂ ಕಾಣುವುದಿಲ್ಲ. ಹಾಗೆಯೇ ಜಲ ಮತ್ತು ಸ್ಥಳಗಳಿಗೂ ಅಂತರಿಕ್ಷದಲ್ಲಿ ಚಂದ್ರಸೂರ್ಯರ ಉದಯಕ್ಕೂ ಯಾವ ಭೇದವೂ ತೋರುವುದಿಲ್ಲ. ಒಂದೆಡೆ ಕುಳಿತು ಪ್ರಪಂಚವೆಲ್ಲ ವಿಷ್ಣುಮಯವಾಗಿರುವಂತೆ ಸರ್ವದಾ ಭಾವಿಸಿ ನೋಡುವಳು.

೭೩. ತಂಪಾಗಿಯೂ ಮೆದುವಾಗಿಯೂ ಇರುವ ಮಣ್ಣಿನ ಮೇಲೆ ನೀರಿನಲ್ಲಿ ನೆನೆದ ತಾವರೆಎಲೆಯನ್ನು ಹಾಸಿಕೊಂಡು ಅದರ ಮೇಲೆ ಮಲಗಿ ತನ್ನ ವಿರಹಾನಲ ತಾಪವನ್ನು ಪರಿಹರಿಸಿಕೊಳ್ಳಲು ಬಯಸಿದಳು.

೭೪. ಮೈಗೆಲ್ಲ ಚಂದನಗಂಧವನ್ನು ಲೇಪಿಸಿಕೊಂಡು ಮೃದುವಾದ ವಸ್ತ್ರವನ್ನು ಧರಿಸಿ ಚಿಗುರಿನ ಹಾಸಿಗೆಯ ಮೇಲೆ ಮಲಗಿದ್ದ ಆಕೆಗೆ ಅವಳ ಪ್ರಿಯ ಸಖಿಯರು ಅಕ್ಕಪಕ್ಕದಲ್ಲಿ ಕುಳಿತು ಚಾಮರದಿಂದ ಬೀಸುತ್ತಿದ್ದರು.

೭೫. ರಾಧಾದೇವಿಯ ಶರೀರಸ್ಪರ್ಶಮಾತ್ರದಿಂದ ಚಂದನ ದ್ರವವು ಒಣಗಿ ಹೋಯಿತು ನೀರಾಗಿದ್ದ ತಾವರೆ ಎಲೆಗಳೆಲ್ಲ ಕ್ಷಣಮಾತ್ರದಲ್ಲಿ ಸುಟ್ಟು ಬೂದಿಯಾದುವು.

ಚಂದನಂ ಶುಷ್ಕತಾಂ ಪ್ರಾಪ ವರ್ಣಶ್ಚಂಪಕಸಂನ್ನಿಭಃ ।
ಬಭೂವ ಕಜ್ಜಲಾಕಾರಃ ಕೇಶಸ್ಯ ವರ್ಣತೋ ಹರೇ ॥ ೭೬ ॥

ಸಿಂದೂರಬಿಂದೂರುಚಿರಃ ಶ್ಯಾಮತಾಂ ಪ್ರಾಪ ತತ್ಕ್ಷಣಂ ।
ವೇಷೋ ವಿಲಾಸೋ ಲೀಲಾ ಚ ಕ್ರೀಡಾ ತ್ಯಕ್ತ್ವಾ ಬಭೂವ ಹ ॥ ೭೭ ॥

ರತ್ನಮಾಲಾ ತು ತಾಂ ದೃಷ್ಟ್ವಾ ಗತ್ವಾ ಕೃಷ್ಣಾಂತಿಕಂ ತದಾ ।
ಉವಾಚ ಮಧುರಂ ವಾಕ್ಯಂ ರಾಧಾಹಿತಕರಂ ಪರಂ ॥ ೭೮ ॥

॥ ರತ್ನಮಾಲೋವಾಚ ॥

ಹೇ ಕೃಷ್ಣ ಕಮಲಾಕಾಂತ ತ್ವದ್ವಿಯೋಗೇನ ಮತ್ಸಖೀ ।
ಪ್ರಾಣಾಂಸ್ತ್ಯಕ್ಷ್ಯತಿ ಶೀಘ್ರಂ ಸಾಯದಿ ನಾಯಾಸ್ಯಸಿ ಧ್ರುವಂ ॥ ೭೯ ॥

ವಿಚಾರ್ಯ ಮನಸಾ ಕೃಷ್ಣ ಯತ್ತತ್ಸಮುಚಿತಂ ಕುರು ।
ನ ಭವೇತ್ಕಾಮಿನೀಹತ್ಯಾ ಯೇನ ನೀತಿವಿಶಾರದ ॥ ೮೦ ॥

---

೭೬. ಅವಳಮೈಗೆ ಲೇಪಿಸಿಕೊಂಡಿದ್ದ ನೀರಾದ ಶ್ವೇತಗಂಧವು ಒಣಗಿ ಸಂಪಿಗೆಯ ಬಣ್ಣವನ್ನು ತಳೆದು, ಕ್ರಮವಾಗಿ ಬೆಂದ ತಲೆಗೂವಲಿನಂತೆ ಮತ್ತು ಕಾಡಿಗೆಯಂತೆ ಕಪ್ಪು ಬಣ್ಣವನ್ನು ಪಡೆಯಿತು.

೭೭. ಅವಳ ಹಣೆಯಲ್ಲಿ ಧರಿಸಿದ್ದ ಮನೋಹರವಾದ ಚಂದ್ರದ ಬೊಟ್ಟು ಬೆವರಿನಿಂದ ಒಂದು ಕ್ಷಣಕಾಲದಲ್ಲಿ ಅಳಿಸಿಹೋಯಿತು. ಆಕೆಯು ವೇಷಭೂಷಗಳನ್ನೂ ಲೀಲಾವಿಲಾಸಗಳನ್ನೂ ಆಟಪಾಟಗಳನ್ನೂ ದೂರ ಮಾಡಿದಳು

೭೮. ಈ ರೀತಿಯಾದ ರಾಧೆಯನ್ನು ನೋಡಿದ ರತ್ನಮಾಲೆಯು ಕೃಷ್ಣನ ಸಮೀಪಕ್ಕೆ ಹೋಗಿ ಅವನನ್ನು ಕುರಿತು ರಾಧೆಗೆ ಹಿತವಾಗುವಂತಹ ಕೆಲವು ಮಧುರ ವಾಕ್ಯಗಳನ್ನು ಹೇಳಿದಳು.

೭೯. ರತ್ನಮಾಲೆ:— ಎಲೈ ಶ್ರೀಕೃಷ್ಣನೇ ಕಮಲಾಪತಿಯೇ, ನೀನು ಜಾಗ್ರತೆಯಾಗಿ ಹಿಂತಿರುಗಿ ಬರದಿದ್ದರೆ, ನನ್ನ ಸಖಿಯಾದ ರಾಧೆಯು ನಿನ್ನ ವಿರಹವನ್ನು ಸಹಿಸಲಾರದೆ ನಿಶ್ಚಯವಾಗಿಯೂ ಪ್ರಾಣವನ್ನು ಬಿಡುವಳು.

೮೦. ನೀತಿವಿಶಾರದನಾದ ಎಲೈ ಕೃಷ್ಣನೇ, ನಿನ್ನ ಮನಸ್ಸಿನಲ್ಲಿ ಪರ್ಯಾಲೋಚಿಸಿ ಏನುಮಾಡಿದರೆ ಸ್ತ್ರೀಹತ್ಯೆಯಾಗುವುದಿಲ್ಲವೋ ಆ ಕಾರ್ಯವನ್ನು ಜಾಗ್ರತೆ ಮಾಡುವವನಾಗು.

ರತ್ನಮಾಲಾವಚಃ ಶ್ರುತ್ವಾ ಪ್ರಹಸ್ಯೋವಾಚ ಮಾಧವಃ ।
ಹಿತಂ ಸತ್ಯಂ ನೀತಿಸಾರಂ ಪರಿಣಾಮಸುಖಾವಹಂ ॥ ೮೧

॥ ಶ್ರೀ ಭಗವಾನುವಾಚ ॥

ಈಶೋ ಯದ್ಯಪಿ ಶಕ್ತೋಽಹಂ ನಿಷೇಧಂ ಖಂಡಿತುಂ ಪ್ರಿಯೇ ।
ತಥಾ ಪಿ ನ ಕ್ಷಮೋ ರತ್ನೇ ನಿಯತೇರ್ನ ಕರೋಮ್ಯಹಂ ॥ ೮೨ ॥

ಬ್ರಹ್ಮಾಂಡೇಷು ಚ ಸರ್ವೇಷು ಮರ್ಯಾದಾ ಸ್ಥಾಪಿತಾ ಮಯಾ ।
ತಯಾ ಕರ್ಮ ಪ್ರಕುರ್ವಂತಿ ಮುನಯಶ್ಚ ಸುರಾ ನರಾಃ ॥ ೮೩ ॥

ಸುದಾಮಶಾಪಾದ್ವಿಚ್ಛೇದಃ ಶತವರ್ಷಮನೀಪ್ಸಿತಃ ।
ಭವಿಷ್ಯತ್ಯೇವ ದಂಪತ್ಯೋರಾವಯೋರೇವ ಸುಂದರಿ ॥ ೮೪ ॥

---

೮೧. ಈ ರೀತಿಯಾದ ರತ್ನಮಾಲೆಯ ಮಾತುಗಳನ್ನು ಕೇಳಿದ ಮಾಧವನು ನಸುನಕ್ಕು, ಹಿತವೂ, ಸತ್ಯವೂ, ನೀತಿಸಾರವೂ, ಪರಿಣಾಮದಲ್ಲಿ ಸುಖಕರವೂ ಆದ ಕೆಲವು ಮಾತುಗಳನ್ನಾಡಿದನು

೮೨. ಶ್ರೀ ಭಗವಂತ :—ಎಲೌ ರತ್ನಮಾಲೆಯೇ, ಸರ್ವೇಶ್ವರನಾದ ನಾನು ಸಕಲ ಆಗುಹೋಗುಗಳಿಗೂ ಕಾರಣನಾದರೂ ವಿಧಿ ನಿಯಮಗಳನ್ನು ವ್ಯತ್ಯಾಸಗೊಳಿಸಲಿಷ್ಟಪಡುವುದಿಲ್ಲ

೮೩. ನಿಖಿಲಬ್ರಹ್ಮಾಂಡಗಳಲ್ಲೂ ಕೆಲವು ಕಟ್ಟುಕಟ್ಟಲೆಗಳನ್ನು ನಾನು ಮಾಡಿದ್ದೇನೆ. ಅದನ್ನನುಸರಿಸಿ ಮುನಿಗಳು ದೇವತೆಗಳು ಮತ್ತು ಮಾನವರು ತಮ್ಮ ತಮ್ಮ ಕರ್ತವ್ಯದಲ್ಲಿ ನಿರತರಾಗಿದ್ದಾರೆ.

೮೪. ಎಲೌ ಸುಂದರಿಯೇ, ಅದೇರೀತಿ ನನಗೂ ರಾಧೆಗೂ ಸಹ ಸುದಾಮನ ಶಾಪದಿಂದ ನೂರು ವರ್ಷ ವಿರಹವು ನಮಗಿಷ್ಟವಿಲ್ಲದಿದ್ದರೂ ಉಂಟಾಗುತ್ತವೆ. ಇದರಲ್ಲಿ ಸಂಶಯವಿಲ್ಲ.

ಭೇದೋ ಜಾಗರಣೇऽಸ್ಯಾಶ್ಚ ಮಯಾ ಸಹ ಸುಮಧ್ಯಮೇ ।
ಸಂಶ್ಲೇಷಃ ಸತತಂ ಸ್ವಪ್ನೇ ಮದ್ವರೇಣ ಭವಿಷ್ಯತಿ ॥ ೮೫ ॥

ಆಧ್ಯಾತ್ಮಿಕೇ ಮಯಾ ದತ್ತಾ ಶೋಕಚ್ಛೇದೋ ಭವಿಷ್ಯತಿ ।
ರಾಧಾಂ ಬೋಧಯ ಭದ್ರಂ ತೇ ಯಾಸ್ಯಾಮಿ ನಂದಮಂದಿರಂ ॥ ೮೬ ॥

ಇತ್ಯುಕ್ತ್ವಾ ಜಗತಾಂ ನಾಥೋ ಯಯೌ ನಂದಾಲಯಂ ಪ್ರತಿ ।
ರಾಧಿಕಾಂ ಬೋಧಯಾಮಾಸುರಾಲಿಸಂಘಾಶ್ಚ ನಾರದ ॥ ೮೭ ॥

ಗತ್ವಾ ಗೃಹಂ ಚ ಪಿತರಂ ನನಾಮ ಮಾತರಂ ತಥಾ ।
ಚಕಾರ ಮಾತಾ ಕ್ರೋಡೇ ಚ ನವನೀತಂ ಚ ನೂತನಂ ॥ ೮೮ ॥

ಮಾತೃದತ್ತಂ ಚ ತಾಂಬೂಲಂ ಚಖಾದ ಶೀತಲಂ ಜಲಂ ।
ಉವಾಚ ತತ್ರ ಜಗತಾಂ ನಾಥೋ ಮಾತೃಸಮೀಪತಃ ॥ ೮೯ ॥

---

೮೫. ಎಲೌ ಶೋಭನಾಂಗಿಯೇ, ನನಗೂ ರಾಧೆಗೂ ಜಾಗ್ರದವಸ್ಥೆಯಲ್ಲಿ ವಿರಹವುಂಟಾಗುವುದು ನಿಜ. ಆದರೆ, ನಿನ್ನ ವರದಿಂದ ಸ್ವಪ್ನಾವಸ್ಥೆಯಲ್ಲಿ ಸರ್ವದಾ ನಮ್ಮಿಬ್ಬರಿಗೂ ಸಂಶ್ಲೇಷವುಂಟಾಗುವುದು.

೮೬. ನಾನು ರಾಧೆಗೆ ಉಪದೇಶಿಸಿದ ಆಧ್ಯಾತ್ಮಿಕ ಯೋಗದಿಂದ ಆಕೆಯ ವಿರಹದುಃಖವು ದೂರವಾಗುವುದು. ನೀನೂ ಸಹ ರಾಧೆಗೆ ಸಮಾಧಾನವನ್ನು ಹೇಳು. ನಿನಗೆ ಮಂಗಳವಾಗಲಿ. ನಾನು ನಂದಗೋಪನ ಮಂದಿರಕ್ಕೆ ಹೋಗುವೆನು.

೮೭. ಈರೀತಿಯಾಗಿ ಹೇಳಿ ನಂದಕುಮಾರನಾದ ಶ್ರೀಕೃಷ್ಣನು ನಂದಗೋಕುಲಕ್ಕೆ ಹೋದನು. ಎಲೈ ನಾರದನೇ, ಇತ್ತ ರಾಧೆಯ ಸಖಿಯರೆಲ್ಲರೂ ಆಕೆಯನ್ನು ಸಮಾಧಾನಗೊಳಿಸಿದರು.

೮೮. ಶ್ರೀಕೃಷ್ಣನು ನಂದಗೋಕುಲಕ್ಕೆ ಹೋಗಿ ತಂದೆ ತಾಯಿಯರಿಗೆ ಸಾಷ್ಟಾಂಗವೆರಗಿದನು. ಹೊಸದಾದ ಬೆಣ್ಣೆಯಂತೆ ಕೋಮಲಾಂಗನಾದ ಆ ಕೃಷ್ಣನನ್ನು ತಾಯಿಯಾದ ಯಶೋದೆಯು ಎದೆಗಪ್ಪಿಕೊಂಡಳು.

೮೯. ತಾಯಿಯು ಕೊಟ್ಟ ಪಚ್ಚಕರ್ಪೂರಮಿಶ್ರಿತವಾದ ತಾಂಬೂಲವನ್ನೂ, ಶೀತಲವಾದ ನೀರನ್ನೂ ಸೇವಿಸಿ ಜಗದೊಡೆಯನಾದ ಶ್ರೀಕೃಷ್ಣನು ತಾಯಿಯ ಸಮೀಪದಲ್ಲಿ ಕುಳಿತನು.

ಸರ್ವೈರ್ಗೋಪಸಮೂಹೈಶ್ಚ ಸೇವಿತಃ ಶ್ವೇತಚಾಮರೈಃ ।
ಮಾಲ್ಯಚಂದನತಾಂಬೂಲಂ ತೇ ಚ ತಸ್ಮೈ ದದುರ್ಮುದಾ　　　॥ ೯೦ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣನಾರದಸಂವಾದೇ
ಶ್ರೀಕೃಷ್ಣಗಮನಂ ನಾಮ
ಏಕೋನಸಪ್ತತಿತಮೋಽಧ್ಯಾಯಃ

---

೯೦. ಗೋಪ ಬಾಲಕರೆಲ್ಲರೂ ಬಿಳಿಯ ಚಾಮರಗಳನ್ನು ಹಿಡಿದು ಶ್ರೀಕೃಷ್ಣನಿಗೆ ಸೇವೆ ಮಾಡಿದರು. ಅಲ್ಲದೆ, ಅವರೆಲ್ಲರೂ ಸಂತೋಷದಿಂದ ದಿವ್ಯ ಮಾಲೆಗಳನ್ನೂ, ಚಂದನವನ್ನೂ, ತಾಂಬೂಲವನ್ನೂ ಸಹ ಶ್ರೀಕೃಷ್ಣನಿಗೆ ಸಂತೋಷದಿಂದ ಸಮರ್ಪಿಸಿದರು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ ಶ್ರೀಕೃಷ್ಣಾಗಮನವನ್ನು ತಿಳಿಸುವ ಅರವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಅರವತ್ತೊಂಭತ್ತನೆಯ ಅಧ್ಯಾಯದ ಸಾರಾಂಶ

ಶ್ರೀಕೃಷ್ಣನು ರಾಧಾದೇವಿಯೊಡನೆ ಚಿರಕಾಲ ಅವಿಶ್ರಾಂತವಾದ ರತಿಸುಖವನ್ನನುಭವಿಸಿದನು. ಅದರ ಪರಿಣಾಮವಾಗಿ ರಾಧೆಯು ಗಾಢನಿದ್ರೆಯಲ್ಲಿ ಮುಳುಗಿದಳು. ಅವಳನ್ನು ಬಿಟ್ಟು ಹೋಗಲು ಅದೇ ಸುಸಮಯವೆಂದು ಭಾವಿಸಿ ಕೃಷ್ಣನು ಮೇಲಕ್ಕೆದ್ದು ರಾಧೆಯ ಕಡೆಗೆ ಕೊನೆಯದಾಗಿ ನೋಡಿದನು. ಅವಳ ಸೌಂದರ್ಯವು ಇವನನ್ನು ಆಕರ್ಷಿಸಿತು. ಪುನಃ ಆಕೆಗೆ ಮನದಣಿಯುವಂತೆ ಅಲಂಕಾರಮಾಡಿ ಆಕೆಯನ್ನು ಯಥೇಚ್ಛವಾಗಿ ಚುಂಬಿಸಿ ಪಕ್ಕದಲ್ಲೇ ಮಲಗಿದನು. ಆ ಸಮಯಕ್ಕೆ ಸರಿಯಾಗಿ ಬ್ರಹ್ಮ, ಶಿವ, ಆದಿಶೇಷ ಮುಂತಾದವರು ಅಲ್ಲಿಗೆ ಬಂದು ಶ್ರೀಕೃಷ್ಣ ಪರಮಾತ್ಮನನ್ನು ಸ್ತುತಿಸಿ, ಅವನಿಗೆ ಸುದಾಮನ ಶಾಪವನ್ನು ಜ್ಞಾಪಿಸಿ ನೂರುವರ್ಷಗಳಕಾಲ ರಾಧೆಯುನ್ನು ಬಿಟ್ಟು, ಕಂಸವಧೆ ಮುಂತಾದ ಕರ್ತವ್ಯದಲ್ಲಿ ತೊಡಗಬೇಕೆಂದು ವಿಜ್ಞಾಪಿಸಿಕೊಂಡರು. ಅಶರೀರವಾಣಿಯೂ ಸಹ ಶ್ರೀಕೃಷ್ಣನನ್ನು ಎಚ್ಚರಿಸಿತು. "ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ। ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥" ಎಂಬ ತನ್ನ ಪ್ರತಿಜ್ಞೆಯನ್ನು ಸ್ಮರಿಸಿಕೊಂಡು ರಾಧೆಯನ್ನು ತ್ಯಜಿಸಿ ಹೊರಟನು. ಇತ್ತ ರಾಧೆಯು ಕೂಡಲೇ ನಿದ್ರೆಯಿಂದೆಚ್ಚೆತ್ತು ತನ್ನ ಪ್ರಾಣಕಾಂತನನ್ನು ಕಾಣದೆ ಪ್ರಲಾಪಿಸತೊಡಗಿದಳು ವಿರಹಾಗ್ನಿಯಿಂದ ಬಳಲುತ್ತಿದ್ದ ಆಕೆಯನ್ನು ನೋಡಿ ಕೆಲವು ಸಖಿಯರು ಆಕೆಗೆ ಶೈತ್ಯೋಪಚಾರಮಾಡಿದರು. ಶ್ರೀಕೃಷ್ಣನು ದೂರದಲ್ಲೇ ನಿಂತು ಆಕೆಯ ಈ ದುಃಸ್ಥಿತಿಯನ್ನು ನೋಡಿ ಸಹಿಸಲಾರದೆ ಪುನಃ ಆಕೆಯ ಸಮೀಪಕ್ಕೆ ಬಂದು ಸುದಾಮನ ಶಾಪವೃತ್ತಾಂತವನ್ನೆಲ್ಲ ತಿಳಿಸಿ ಆಕೆಯನ್ನು ಮೃದುಮಧುರ ನುಡಿಗಳಿಂದ ಸಮಾಧಾನಗೊಳಿಸಿ, ರಾಧೆಯ ಪ್ರಿಯ ಸಖಿಯಾದ ರತ್ನಮಾಲೆಗೂ ಸಹ ರಾಧೆಯನ್ನು ಸಾಂತ್ವನಗೊಳಿಸುವಂತೆ ಹೇಳಿ ತಾನು ನಂದಗೋಕುಲಕ್ಕೆ ಹೋಗಿ ನಂದಗೋಪ ಯಶೋದೆಯರ ಗಾಢಾಲಿಂಗನವನ್ನು ಪಡೆದು ಸುಖವಾಗಿದ್ದನು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ
ಶ್ರೀ ಕೃಷ್ಣಜನ್ಮಖಂಡೇ

॥ ಸಪ್ತತಿತಮೋಽಧ್ಯಾಯಃ ॥

॥ ಶ್ರೀ ನಾರಾಯಣ ಉವಾಚ ॥

ಯಥಾಽಕ್ರೂರಃ ಸ್ವಶರಣಂ ಗತ್ವಾ ಕಂಸೇನ ಪ್ರೇಷಿತಃ ।
ಚಕಾರ ಶಯನಂ ತಲ್ಪೇ ಭುಕ್ತ್ವಾ ಮಿಷ್ಟಾನ್ನಮುತ್ತಮಂ ॥ ೧ ॥

ಸಕರ್ಪೂರಂ ಚ ತಾಂಬೂಲಂ ಚಖಾದ ವಾಸಿತಂ ಜಲಂ ।
ಜಗಾಮ ನಿದ್ರಾಂ ಸುಖತಃ ಸುಖಸಂಭೋಗಮಾತ್ರತಃ ॥ ೨ ॥

ತತೋ ದದರ್ಶ ಸುಸ್ವಪ್ನಂ ಪುರಾಣಶ್ರುತಿಸಂಮತಂ ।
ನಿಶಾವಶೇಷಸಮಯೇ ವಾದ್ಯಾದಿಪರಿವರ್ಜಿತೇ ॥ ೩ ॥

ಎಪ್ಪತ್ತನೆಯ ಅಧ್ಯಾಯ

೧. ಶ್ರೀ ನಾರಾಯಣ :— ಅತ್ತ ಅಕ್ರೂರನು ಕಂಸನಿಂದ ಪ್ರೇರಿತನಾಗಿ ತನ್ನ ಮನೆಗೆ ಹೋಗಿ, ಉತ್ತಮವಾದ ಮಿಷ್ಟಾನ್ನವನ್ನು ಊಟಮಾಡಿ ಸುಖಶಯನದಲ್ಲಿ ಪವಡಿಸಿದನು.

೨. ಪಚ್ಚಕರ್ಪೂರಸಹಿತವಾದ ತಾಂಬೂಲವನ್ನು ಸೇವಿಸಿ ನಿರ್ಮಲ ಜಲವನ್ನು ಪಾನಮಾಡಿದನು ಪತ್ನಿಯೊಡನೆ ಸುಖಸಂಭೋಗವನ್ನನುಭವಿಸಿ ಗಾಢ ನಿದ್ರೆಮಾಡಿದನು.

೩ ವಾದ್ಯಾದಿಗಳ ಧ್ವನಿಯಿಲ್ಲದ ಬೆಳಗಿನಝಾವದ ಸಮಯದಲ್ಲಿ ಒಂದು ಸುಖಸ್ವಪ್ನವನ್ನು ಕಂಡನು. ಅದು ಪುರಾಣ ಮತ್ತು ಶ್ರುತಿಗಳಲ್ಲಿ ಪ್ರತಿಪಾದಿಸಿರುವಂತೆ ಶುಭಸೂಚಕವಾಗಿತ್ತು.

ಅರೋಗೀ ಬದ್ಧಕೇಶಶ್ಚ ವಸ್ತ್ರಯುಗ್ಮಸಮನ್ವಿತಃ ।
ಸುತಲ್ಪಶಾಯೀ ಸುಸ್ನಿಗ್ಧಶ್ಚಿಂತಾಶೋಕವಿವರ್ಜಿತಃ ॥ ೪ ॥

ಕಿಶೋರವಯಸಂ ಶ್ಯಾಮಂ ದ್ವಿಭುಜಂ ಮುರಲೀಧರಂ ।
ಪೀತವಸ್ತ್ರಪರೀಧಾನಂ ವನಮಾಲಾವಿಭೂಷಿತಂ ॥ ೫ ॥

ಚಂದನೋಕ್ಷಿತಸರ್ವಾಂಗಂ ಮಾಲತೀಮಾಲ್ಯಶೋಭಿತಂ ।
ಭೂಷಿತಂ ಭೂಷಣಾರ್ಹಂ ಚ ಸದ್ರತ್ನಮಣಿಭೂಷಣೈಃ ॥ ೬ ॥

ಮಯೂರಪಿಚ್ಛಚೂಡಂ ಚ ಸಸ್ಮಿತಂ ಪದ್ಮಲೋಚನಂ ।
ಏವಂಭೂತಂ ದ್ವಿಜಶಿಶುಂ ದದರ್ಶ ಪ್ರಥಮಂ ಮುನೇ ॥ ೭ ॥

ತತೋ ದದರ್ಶ ರುಚಿರಾಂ ಪತಿಪುತ್ರವತೀಂ ಸತೀಂ ।
ಪೀತವಸ್ತ್ರಪರೀಧಾನಾಂ ರತ್ನಭೂಷಣಭೂಷಿತಾಂ ॥ ೮ ॥

---

೪. ರೋಗರಹಿತನೂ, ತಲೆಗೂದಲನ್ನು ಕಟ್ಟಿದವನೂ, ಎರಡುವಸ್ತ್ರಗಳನ್ನು ಧರಿಸಿದವನೂ, ಚಿಂತಾಶೋಕಗಳನ್ನು ಬಿಟ್ಟು ನಿರ್ಮಲಾಂತಃಕರಣನೂ ಆದ ಆ ಅಕ್ರೂರನು ಶೋಭನವಾದ ಹಾಸಿಗೆಯಲ್ಲಿ ಮಲಗಿ ಶುಭಸ್ವಪ್ನವನ್ನು ಕಂಡನು.

೫-೭. ಎಲೈ ನಾರದಮುನಿಯೇ, ಆ ಅಕ್ರೂರನು ಕನಸಿನಲ್ಲಿ ಒಬ್ಬ ಬ್ರಾಹ್ಮಣಕುಮಾರನನ್ನು ಕಂಡನು. ನವಮೇಘಶ್ಯಾಮನೂ, ಪ್ರಾಯದ ವಯಸ್ಸಿನವನೂ, ದ್ವಿಭುಜನೂ, ಕೈಯಲ್ಲಿ ಕೊಳಲನ್ನು ಧರಿಸಿದವನೂ, ಪೀತಾಂಬರವನ್ನುಟ್ಟು ವನಮಾಲೆಯನ್ನು ಧರಿಸಿದವನೂ, ಆದ ಆ ಬಾಲಕನು ಸರ್ವಾಂಗಗಳಿಗೂ ದಿವ್ಯಚಂದನವನ್ನು ಲೇಪಿಸಿಕೊಂಡು ಜಾಜೀ ಹೂಮಾಲೆಯನ್ನು ಧರಿಸಿ ಶ್ರೇಷ್ಠವಾದ ರತ್ನಭೂಷಣಗಳಿಂದ ಭೂಷಿತನಾಗಿದ್ದನು. ತಾವರೆಯಂತೆ ವಿಶಾಲವಾದ ದೃಷ್ಟಿಯುಳ್ಳವನೂ ಸ್ಮಿತವದನನೂ ಆದ ಆ ಬಾಲಕನು ತಲೆಗೆ ನವಿಲುಗರಿಯನ್ನು ಧರಿಸಿದ್ದನು. ಈ ರೀತಿಯಾದ ದ್ವಿಜಶಿಶುವನ್ನು ಮೊತ್ತಮೊದಲು ಅಕ್ರೂರನು ಕಂಡನು.

೮. ಅನಂತರ ಪೀತಾಂಬರವನ್ನು ಧರಿಸಿದವಳೂ, ರತ್ನಾಲಂಕಾರಭೂಷಿತಳೂ ಪತಿಪುತ್ರವತಿಯೂ, ಪತಿವ್ರತೆಯೂ ಆದ ಸುಂದರ ಸ್ತ್ರೀಯೊಬ್ಬಳನ್ನು ಕನಸಿನಲ್ಲಿ ಕಂಡನು.

ಜ್ವಲತ್ಪ್ರದೀಪಹಸ್ತಾಂ ಚ ಶುಕ್ಲಧಾನ್ಯಕರಾಂ ವರಾಂ ।
ಶರಚ್ಚಂದ್ರನಿಭಾಸ್ಯಾಂ ಚ ಸಸ್ಮಿತಾಂ ವರದಾಂ ಶುಭಾಂ ॥ ೯ ॥

ತತೋ ದದರ್ಶ ವಿಪ್ರಂ ಚ ಪ್ರಕುರ್ವಂತಂ ಶುಭಾಶಿಷಂ ।
ಶ್ವೇತಪದ್ಮಂ ರಾಜಹಂಸಂ ತುರಗಂ ಚ ಸರೋವರಂ ॥ ೧೦ ॥

ದದರ್ಶ ಚಿತ್ರಿತಂ ಚಾರು ಫಲಿತಂ ಪುಷ್ಪಿತಂ ಶುಭಂ ।
ಆಮ್ರನಿಂಬನಾರಿಕೇಲಗುರ್ವರ್ಕಕದಲೀತರುಂ ॥ ೧೧ ॥

ವಶಂತಂ ಶ್ವೇತಸರ್ಪಂ ಚ ಸ್ವಾತ್ಮಾನಂ ಪರ್ವತಸ್ಥಿತಂ ।
ವೃಕ್ಷಸ್ಥಂ ಚ ಗಜಸ್ಥಂ ಚ ಕರಿಸ್ಥಂ ತುರಗಸ್ಥಿತಂ ॥ ೧೨ ॥

ವೀಣಾಂ ವಾದಿತವಂತಂ ಚ ಭುಕ್ತವಂತಂ ಚ ಪಾಯಸಂ ।
ದಧಿಕ್ಷೀರಯುತಾನ್ನಂ ಚ ಪದ್ಮಪತ್ರಸ್ಥಮಿಷ್ಟಿತಂ ॥ ೧೩ ॥

---

೯. ಆ ಹೆಂಗಸು ಒಂದು ಕೈಯಲ್ಲಿ ಪ್ರಜ್ವಲಿಸುವ ದೀಪವೊಂದನ್ನು ಧರಿಸಿ ಮತ್ತೊಂದು ಕೈಯಲ್ಲಿ ಬಿಳಿಧಾನ್ಯವನ್ನು ಹಿಡಿದಿದ್ದಳು. ಆ ಮಹಾಪತಿವ್ರತೆಯು ಶರದೃತುವಿನ ಚಂದ್ರನಿಗೆ ಸಮಾನವಾದ ಸ್ಮಿತಮುಖದಿಂದ ಶೋಭಿಸುತ್ತಿದ್ದಳು.

೧೦. ಅದೇ ಕ್ರಮದಲ್ಲಿ ಶುಭಕರವಾದ ಆಶೀರ್ವಾದವನ್ನು ಮಾಡುತ್ತಿರುವ ಬ್ರಾಹ್ಮಣನನ್ನೂ, ಬಿಳಿದಾದ ತಾವರೆಯನ್ನೂ, ರಾಜಹಂಸಪಕ್ಷಿಯನ್ನೂ ಕುದುರೆಯನ್ನೂ ಸರೋವರವನ್ನೂ ಸಹ ಕಂಡನು.

೧೧ ಅಂತೆಯೇ ಚಿಗುರಿ ಹೂಹಣ್ಣುಗಳಿಂದ ಶೋಭಿಸುವ ಮಾವು, ಬೇವು, ತೆಂಗು, ಬಿಲ್ವ, ಎಕ್ಕ ಮತ್ತು ಬಾಳೆ ಮರಗಳನ್ನೂ ಸಹ ಕನಸಿನಲ್ಲಿ ಕಂಡನು.

೧೨. ಕಚ್ಚುತ್ತಿರುವ ಬಿಳೀಹಾವನ್ನೂ, ಪರ್ವತದ ಮೇಲಿರುವ ತನ್ನನ್ನೂ, ಅದೇ ರೀತಿಯಲ್ಲಿ ತಾನು ಮರದಮೇಲೂ, ಆನೆಯಮೇಲೂ, ದೋಣಿಯಮೇಲೂ, ಕುದುರೆಯಮೇಲೂ ಕುಳಿತಿರುವುದನ್ನೂ ಕನಸಿನಲ್ಲಿ ಕಂಡನು.

೧೩ ತಾನು ವೀಣೆನುಡಿಸುತ್ತಿರುವುದನ್ನೂ, ಪಾಯಸಾನ್ನ ಭೋಜನ ಮಾಡುತ್ತಿರುವುದನ್ನೂ, ತಾವರೆ ಎಲೆಯಲ್ಲಿರುವ ಹಾಲುಮೊಸರು ಕಲಸಿದ ಮಿಷ್ಟಾನ್ನವನ್ನೂ ಕನಸಿನಲ್ಲಿ ಕಂಡನು.

ಕೃಮಿವಿಟ್ಸಹಿತಾಂಗಂ ಚ ರುದಂತಂ ಮೋಹಿತಂ ತದಾ ।
ಶುಕ್ಲಧಾನ್ಯಪುಷ್ಪಕರಂ ಕ್ಷಣಂ ಚಂದನಚರ್ಚಿತಂ ॥ ೧೪ ॥

ಪ್ರಾಸಾದಸ್ಥಂ ಸಮುದ್ರಸ್ಥಮಾತ್ಮಾನಂ ಚ ಸಲೋಹಿತಂ ।
ಭಿನ್ನಭಿನ್ನಂ ಕ್ಷತಾಂಗಂ ಚ ಮೇದಪೂಯಸಮನ್ವಿತಂ ॥ ೧೫ ॥

ತತೋ ದದರ್ಶ ರಜತಂ ಮಣಿಂ ಶುಭ್ರಂ ಚ ಕಾಂಚನಂ ।
ಮುಕ್ತಾಮಾಣಿಕ್ಯರತ್ನಂ ಚ ಪೂರ್ಣಕುಂಭಜಲಂ ಶುಭಂ ॥ ೧೬ ॥

ಸುರಭಿಂ ಚ ಸವತ್ಸಾಂ ಚ ವೃಷಭೇಂದ್ರಂ ಮಯೂರಕಂ ।
ಶುಕಂ ಚ ಸಾರಸಂ ಹಂಸಂ ಚಿಲ್ಲಂ ಖಂಜನಮೇವ ಚ ॥ ೧೭ ॥

ತಾಂಬೂಲಂ ಪುಷ್ಪಮಾಲ್ಯಂ ಚ ಜ್ವಲದಗ್ನಿಂ ಸುರಾರ್ಚನಂ ।
ಪಾರ್ವತೀಪ್ರತಿಮಾಂ ಕೃಷ್ಣಪ್ರತಿಮಾಂ ಶಿವಲಿಂಗಕಂ ॥ ೧೮ ॥

---

೧೪. ಒಂದು ಕ್ಷಣ ಹಿಂದೆ ಕ್ರಿಮಿಗಳ ಮಲದಿಂದ ಲಿಪ್ತಾಂಗನಾಗಿ ಅಳುತ್ತಾ ಮೂರ್ಛೆಗೊಂಡಿದ್ದ ತಾನು ಮರುಕ್ಷಣದಲ್ಲಿ ಮೈಗೆಲ್ಲ ದಿವ್ಯ ಚಂದನವನ್ನು ಲೇಪಿಸಿಕೊಂಡು ಕೈಯಲ್ಲಿ ಶುಕ್ಲಧಾನ್ಯವನ್ನೂ ಶುಕ್ಲಪುಷ್ಪವನ್ನೂ ಹಿಡಿದಿರುವಂತೆ ಕನಸಿನಲ್ಲಿ ನೋಡಿದನು.

೧೫. ತಾನು ಒಮ್ಮೆ ಅರಮನೆಯಲ್ಲಿದ್ದಂತೆಯೂ, ಮತ್ತೊಮ್ಮೆ ಸಮುದ್ರದಲ್ಲಿದ್ದಂತೆಯೂ, ಇನ್ನೊಮ್ಮೆ ಭಿನ್ನಭಿನ್ನವಾಗಿ ಕೆಂಪಾಗಿರುವ ತನ್ನ ಅಂಗಾಂಗಗಳಿಗೆ ಮೇದಸ್ಸು ಕೀವು ಮುಂತಾದವುಗಳನ್ನು ಲೇಪಿಸಿಕೊಂಡಿದ್ದಂತೆಯೂ ಕಂಡನು.

೧೬. ಅನಂತರ ಬೆಳ್ಳಿಯನ್ನೂ, ಸ್ಫಟಿಕಮಣಿಯನ್ನೂ, ಚಿನ್ನವನ್ನೂ ಮುತ್ತುರತ್ನಗಳನ್ನೂ, ಶುಭಕರವಾದ ಪೂರ್ಣಕುಂಭಜಲವನ್ನೂ ಕನಸಿನಲ್ಲಿ ಕಂಡನು.

೧೭ ಹಾಗೆಯೇ ಕರುವಿನೊಡಗೂಡಿದ ದಿವ್ಯಧೇನುವನ್ನೂ, ಶ್ರೇಷ್ಠವಾದ ವೃಷಭನನ್ನೂ, ನವಿಲು, ಗಿಣಿ, ಸಾರಸ, ಹಂಸ, ಝಿಲ್ಲೀ ಮತ್ತು ಖಂಜರೀಟ ಪಕ್ಷಿಗಳನ್ನೂ ಕನಸಿನಲ್ಲಿ ಕಂಡನು.

೧೮. ತಾಂಬೂಲವನ್ನೂ, ಹೂಮಾಲೆಯನ್ನೂ, ಉರಿಯುತ್ತಿರುವ ಅಗ್ನಿಯನ್ನೂ, ದೇವಪೂಜೆಯನ್ನೂ, ಪಾರ್ವತೀ ಮತ್ತು ಕೃಷ್ಣನ ವಿಗ್ರಹವನ್ನೂ, ಶಿವಲಿಂಗವನ್ನೂ ಸಹ ಸ್ವಪ್ನದಲ್ಲಿ ಕಂಡನು.

ವಿಪ್ರಬಾಲಾಂ ಚ ಬಾಲಾಂ ಚ ಸುಪಕ್ವಫಲಿತಾಂ ಕೃಷಿಂ ।
ದೇವಸ್ಥಲೀಂ ಚ ರಾಜೇಂದ್ರಂ ಸಿಂಹಂ ವ್ಯಾಘ್ರಂ ಗುರುಂ ಸುರಂ ॥ ೧೯ ॥

ದೃಷ್ಟ್ವಾ ಸ್ವಪ್ನಂ ಸಮುತ್ತಸ್ಥೌ ಚಕಾರಾಹ್ನಿಕಮೀಪ್ಸಿತಂ ।
ಉದ್ಧವಂ ಕಥಯಾಮಾಸ ಸರ್ವಂ ವೃತ್ತಾಂತಮೇವ ಚ ॥ ೨೦ ॥

ಉದ್ಧವಾಜ್ಞಾಂ ಸಮಾದಾಯ ಕೃತ್ವಾ ಗುರುಸುರಾರ್ಚನಂ ।
ಯಾತ್ರಾಂ ಚಕಾರ ಶ್ರೀಕೃಷ್ಣಂ ಧ್ಯಾತ್ವಾ ಮನಸಿ ನಾರದ ॥ ೨೧ ॥

ದದರ್ಶ ವರ್ತ್ಮನ್ಯೇವಂ ಚ ಮಂಗಲಾರ್ಹಂ ಶುಭಪ್ರದಂ ।
ವಾಂಛಾಫಲಪ್ರದಂ ರಮ್ಯಂ ಪುರೋ ಮಂಗಲಸೂಚಕಂ ॥ ೨೨ ॥

ವಾಮೇ ಶಿವಂ ಶಿವಾಂ ಪೂರ್ಣಂ ಕುಂಭಂ ನಕುಲಚಾಷಕಂ ।
ಪತಿಪುತ್ರವತೀಂ ಸಾಧ್ವೀಂ ದಿವ್ಯಾಭರಣಭೂಷಿತಾಂ ॥ ೨೩ ॥

೧೯. ಬ್ರಾಹ್ಮಣಕನ್ನಿಕೆಯನ್ನೂ, ಚೆನ್ನಾಗಿ ಮಾಗಿ ಫಲಿಸಿರುವ ಕೃಷಿಯನ್ನೂ, ದೇವಸ್ಥಾನವನ್ನೂ, ರಾಜೇಂದ್ರನನ್ನೂ, ಸಿಂಹವ್ಯಾಘ್ರಗಳನ್ನೂ ಗುರು ಮತ್ತು ಸುರರನ್ನೂ ಸಹ ಅಕ್ರೂರನು ಕನಸಿನಲ್ಲಿ ಕಂಡನು.

೨೦. ಈ ರೀತಿಯಾಗಿ ಶುಭ ಸ್ವಪ್ನವನ್ನು ಕಂಡು ಹಾಸಿಗೆಯಿಂದೆದ್ದು ಕಾಲೋಚಿತವಾದ ಆಹ್ನಿಕಾದಿಗಳನ್ನು ಮಾಡಿ ಉದ್ಧವನ ಸಮೀಪಕ್ಕೆ ಹೋಗಿ ಸಕಲ ವೃತ್ತಾಂತವನ್ನೂ ಅವನಿಗೆ ತಿಳಿಸಿದನು.

೨೧. ಎಲೈ ನಾರದನೇ, ಉದ್ಧವನ ಅನುಜ್ಞೆಯನ್ನು ಸ್ವೀಕರಿಸಿ, ಗುರು ದೇವತೆಗಳನ್ನು ಅರ್ಚಿಸಿ, ಮನಸ್ಸಿನಲ್ಲಿಯೇ ಶ್ರೀ ಕೃಷ್ಣನನ್ನು ಧ್ಯಾನಿಸುತ್ತ ನಂದ ಗೋಕುಲಕ್ಕೆ ಹೊರಟನು.

೨೨. ಮಾರ್ಗದಲ್ಲಿಯೂ ಸಹ ಮಂಗಳಕರವೂ, ಶುಭಪ್ರದವೂ, ಇಷ್ಟಾರ್ಥ ಸಿದ್ಧಿದಾಯಕವೂ ಆದ ಮನೋಹರವಾದ ದೃಶ್ಯಗಳನ್ನು ಮುಂದೆ ಕಂಡನು.

೨೩. ವಾಮಪಾರ್ಶ್ವದಲ್ಲಿ ಶಿವಪಾರ್ವತಿಯರನ್ನೂ, ಪೂರ್ಣಕಲಶವನ್ನೂ ಮುಂಗಸಿ ಮತ್ತು ಕಲವಿಂಕಪಕ್ಷಿಯನ್ನೂ, ದಿವ್ಯಾಭರಣಭೂಷಿತಳೂ, ಪತಿಪುತ್ರವತಿಯೂ ಆದ ಪತಿವ್ರತೆಯನ್ನು ಸಹ ಕಂಡನು.

ಶುಕ್ಲಪುಷ್ಪಂ ಚ ಮಾಲ್ಯಂ ಚ ಧಾನ್ಯಂ ಚ ಖಂಜನಂ ಶುಭಂ ।
ದಕ್ಷಿಣೇ ಜ್ವಲದಗ್ನಿಂ ಚ ವಿಪ್ರಂ ಚ ವೃಷಭಂ ಗಜಂ ॥ ೨೪ ॥

ವತ್ಸಪ್ರಯುಕ್ತಾಂ ಧೇನುಂ ಚ ಶ್ವೇತಾಶ್ವಂ ರಾಜಹಂಸಕಂ ।
ವೇಶ್ಯಾಂ ಚ ಪುಷ್ಪಮಾಲಾಂ ಚ ಪತಾಕಾಂ ದಧಿ ಪಾಯಸಂ ॥ ೨೫ ॥

ಮಣಿಂ ಸುವರ್ಣಂ ರಜತಂ ಮುಕ್ತಾಮಾಣಿಕ್ಯಮೀಪ್ಸಿತಂ ।
ಮದ್ಯಂ ಮಾಂಸಂ ಚಂದನಂ ಚ ಮಾಧ್ವೀಕಂ ಘೃತಮುತ್ತಮಂ ॥ ೨೬ ॥

ಕೃಷ್ಣಸಾರಂ ಫಲಂ ಲಾಜಸಿದ್ಧಾನ್ನಂ ದರ್ಪಣಂ ತಥಾ ।
ವಿಚಿತ್ರಿತಂ ವಿಮಾನಂ ಚ ಸುದೀಪ್ತಾಂ ಪ್ರತಿಮಾಂ ತಥಾ ॥ ೨೭ ॥

ಶುಕ್ಲೋತ್ಪಲಂ ಪದ್ಮವನಂ ಶಂಖಚಿಲ್ಲಂ ಚ ಕೋರಕಂ ।
ಮಾರ್ಜಾರಂ ಪರ್ವತಂ ಮೇಘಂ ಮಯೂರಂ ಶುಕಸಾರಸಂ ॥ ೨೮ ॥

---

೨೪. ಹಾಗೆಯೇ ಬಿಳೀ ಹೂಮಾಲೆಯನ್ನೂ, ಬಿಳೀಧಾನ್ಯವನ್ನೂ, ಶುಭಕರವಾದ ಖಂಜರೀಟಪಕ್ಷಿಯನ್ನೂ ಕಂಡನು. ಬಲಭಾಗದಲ್ಲಿ ಉರಿಯುತ್ತಿರುವ ಅಗ್ನಿಯನ್ನೂ, ಬ್ರಾಹ್ಮಣನನ್ನೂ, ವೃಷಭನನ್ನೂ, ಆನೆಯನ್ನೂ ಸಹ ನೋಡಿದನು.

೨೫. ಕರುವಿನೊಡಗೂಡಿದ ದಿವ್ಯಧೇನುವನ್ನೂ, ಬಿಳಿಯ ಕುದುರೆಯನ್ನೂ, ರಾಜಹಂಸಪಕ್ಷಿಯನ್ನೂ, ವೇಶ್ಯೆಯನ್ನೂ, ಹೂಮಾಲೆಯನ್ನೂ, ಧ್ವಜಪಟವನ್ನೂ ಮೊಸರು ಮತ್ತು ಪಾಯಸವನ್ನೂ ಸಹ ನೋಡಿದನು.

೨೬. ಸ್ಫಟಿಕಮಣಿ. ಚಿನ್ನ, ಬೆಳ್ಳಿ, ಮುತ್ತು, ಮಾಣಿಕ್ಯ ಮುಂತಾದವುಗಳನ್ನೂ, ಮದ್ಯ, ಮಾಂಸ, ಚಂದನ, ಜೇನುತುಪ್ಪ ಮತ್ತು ಉತ್ತಮವಾದ ತುಪ್ಪವನ್ನೂ ಸಹ ಕಂಡನು.

೨೭. ಸಾರಂಗವನ್ನೂ, ಹಣ್ಣನ್ನೂ ಅರಳು ಮತ್ತು ಸಿದ್ಧಾನ್ನವನ್ನೂ, ಕನ್ನಡಿಯನ್ನೂ, ವಿಚಿತ್ರವಾದ ವಿಮಾನವನ್ನೂ, ಪ್ರಜ್ವಲಿಸುವ ಪ್ರತಿಮೆಯನ್ನೂ ಸಹ ಎದುರಿನಲ್ಲಿ ಕಂಡನು

೨೮. ಬಿಳಿಯ ನೈದಿಲೆಯನ್ನೂ, ತಾವರೆಯ ವನವನ್ನೂ, ಶಂಖಚಿಲ್ಲ ಮತ್ತು ಚಕೋರಪಕ್ಷಿಯನ್ನೂ, ಬೆಕ್ಕನ್ನೂ, ಪರ್ವತ ಮತ್ತು ಮೇಘಗಳನ್ನೂ, ನವಿಲು, ಗಿಣಿ ಮತ್ತು ಸಾರಸ ಪಕ್ಷಿಗಳನ್ನೂ ಕಂಡನು.

ಶಂಖಕೋಕಿಲವಾದ್ಯಾನಾಂ ಧ್ವನಿಂ ಶುಶ್ರಾವ ಮಂಗಲಂ ।
ವಿಚಿತ್ರಕೃಷ್ಣಸಂಗೀತಂ ಹರಿಶಬ್ದಂ ಜಯಧ್ವನಿಂ　　　　॥ ೨೯ ॥

ಏವಂಭೂತಂ ಶುಭಂ ದೃಷ್ಟ್ವಾ ಶ್ರುತ್ವಾ ಸಂಹೃಷ್ಟಮಾನಸಃ ।
ಪ್ರವಿವೇಶ ಹರಿಂ ಸ್ಮೃತ್ವಾ ಪುಣ್ಯಂ ವೃಂದಾವನಂ ವನಂ　　　　॥ ೩೦ ॥

ದದರ್ಶ ಪುರತೋ ರಮ್ಯಂ ರಾಸಮಂಡಲಮೀಪ್ಸಿತಂ ।
ಚಂದನಾಗುರುಕಸ್ತೂರೀ ಪುಷ್ಪಚಂದನವಾಯುನಾ　　　　॥ ೩೧ ॥

ವಾಸಿತಂ ಮಂಗಲಘಟೈ ರಂಭಾಸ್ತಂಭೈರ್ವಿರಾಜಿತಂ ।
ಆಮ್ರಪಲ್ಲವಸಂಘೈಶ್ಚ ಪಟ್ಟಸೂತ್ರವಿಚಿತ್ರಿತೈಃ　　　　॥ ೩೨ ॥

ಶೋಭಿತೈಃ ಪರಿತಃ ಶಶ್ವತ್ಪದ್ಮರಾಗವಿನಿರ್ಮಿತಂ ।
ಶೋಭಿತಂ ಶೋಭನಾರ್ಹಂ ಚ ತ್ರಿಕೋಟಿರತ್ನಮಂದಿರೈಃ　　　　॥ ೩೩ ॥

---

೨೯. ಮಂಗಳಕರವಾದ ಶಂಖಧ್ವನಿ ಮತ್ತು ಕೋಗಿಲೆಯ ಧ್ವನಿಗಳನ್ನು ಕೇಳಿದನು ಶ್ರೀ ಕೃಷ್ಣನನ್ನು ಕುರಿತ ಮನೋಹರವಾದ ಸಂಗೀತವನ್ನೂ ಹರಿ ಶಬ್ದವನ್ನೂ ಜಯಧ್ವನಿಯನ್ನೂ ಕೇಳಿದನು.

೩೦. ಈ ರೀತಿಯಾದ ಶುಭಶಕುನಗಳನ್ನು ನೋಡಿ, ಮಂಗಳಧ್ವನಿಗಳನ್ನು ಕೇಳಿ ಸಂತುಷ್ಟಾಂತರಂಗನಾದ ಅಕ್ರೂರನು ಶ್ರೀಹರಿಯನ್ನು ಸ್ಮರಿಸುತ್ತ ಪುಣ್ಯಕರ ವಾದ ಬೃಂದಾವನಕ್ಕೆ ತೆರಳಿದನು.

೩೧ ಅಲ್ಲಿ ಮುಂದೆ ರಮ್ಯವಾದ ರಾಸಮಂಡಲವನ್ನು ನೋಡಿದನು. ಆ ರಾಸಮಂಡಲವು ಚಂದನ, ಅಗುರು, ಕಸ್ತೂರಿ, ಪುಷ್ಪ ಮುಂತಾದವುಗಳ ಸುಗಂಧ ವಾಯುವಿನಿಂದ ಪರಿಪೂರ್ಣವಾಗಿದ್ದಿತು.

೩೨. ದ್ವಾರಪ್ರದೇಶದಲ್ಲಿ ಮಂಗಳಕಲಶಗಳೂ ಬಾಳೆಯ ಕಂಭಗಳೂ ವಿರಾಜಿಸುತ್ತಿದ್ದವು. ರೇಷ್ಮೆಯ ದಾರಗಳಿಂದ ಮಾವಿನ ಚಿಗುರಿನ ತೋರಣವನ್ನು ಮನೋಹರವಾಗಿ ನಿರ್ಮಿಸಿ ಬಾಗಿಲಿಗೆ ಕಟ್ಟಿದ್ದರು.

೩೩. ಆ ರಾಸಮಂಡಪದ ಸುತ್ತಲೂ ಪದ್ಮರಾಗರತ್ನದಿಂದ ವಿನಿರ್ಮಿತ ವಾದ ಮೂರು ಕೋಟಿ ರತ್ನಮಂದಿರಗಳು ಮನೋಹರವಾಗಿ ಕಂಗೊಳಿಸುತ್ತಿದ್ದವು.

ರಮ್ಯೈಃ ಕುಂಜಕುಟೀರೈಶ್ಚ ರಾಜಿತಂ ಶತಕೋಟಿಭಿಃ ।
ರಾಸಂ ವೃಂದಾವನಂ ದೃಷ್ಟ್ವಾ ಕಿಯದ್ದೂರಂ ಯಯೌ ಚ ಸಃ ॥ ೩೪ ॥

ದದರ್ಶ ಪುರತೋ ರಮ್ಯಂ ನಂದವ್ರಜಮನುತ್ತಮಂ ।
ಪರಂ ವೈಕುಂಠಸಂಕಾಶಂ ವೈಕುಂಠನಿಲಯಂ ಶುಭಂ ॥ ೩೫ ॥

ರತ್ನಸೋಪಾನಸಂಯುಕ್ತಂ ರತ್ನಸ್ತಂಭೈರ್ವಿರಾಜಿತಂ ।
ನಾನಾಚಿತ್ರವಿಚಿತ್ರಾಢ್ಯಂ ಸದ್ರತ್ನವಲಯಾನ್ವಿತಂ ॥ ೩೬ ॥

ಖಚಿತಂ ಮಣಿಸಾರೇಣ ರಚಿತಂ ವಿಶ್ವಕರ್ಮಣಾ ।
ದ್ವಾರಿ ದೃಷ್ಟೇನ ಮಾರ್ಗೇಣ ರಾಜದ್ವಾರಂ ವಿವೇಶ ಸಃ ॥ ೩೭ ॥

ಪತಾಕಾರತ್ನಜಾಲಾಢ್ಯಂ ಮುಕ್ತಾಮಾಣಿಕ್ಯಭೂಷಿತಂ ।
ರತ್ನದರ್ಪಣಶೋಭಾಢ್ಯಂ ರತ್ನಚಿತ್ರವಿಚಿತ್ರಿತಂ ॥ ೩೮ ॥

---

೩೪. ನೂರಾರು ಕೋಟಿ ರಮ್ಯವಾದ ಲತಾಗೃಹಗಳು ಆ ರಾಸಮಂಡಪದ ಸುತ್ತಲೂ ಶೋಭಿಸುತ್ತಿದ್ದವು. ಈ ರೀತಿಯಾದ ವೃಂದಾವನವನ್ನೂ ರಾಸಮಂಡಲವನ್ನೂ ಸಹ ನೋಡುತ್ತ ಅಕ್ರೂರನು ಬಹುದೂರ ಹೋದನು.

೩೫. ಅನಂತರ ಮುಂದೆ ಶ್ರೀಹರಿಯು ನೆಲೆಸಿದ್ದ ವೈಕುಂಠಕ್ಕೆ ಸಮಾನವೂ, ಮನೋಹರವೂ ಅತ್ಯುತ್ತಮವೂ ಆದ ನಂದಗೋಪನ ನಿವಾಸಸ್ಥಾನವನ್ನು ಕಂಡನು.

೩೬. ರತ್ನಸೋಪಾನಗಳಿಂದಲೂ, ರತ್ನಸ್ತಂಭಗಳಿಂದಲೂ ಶೋಭಿಸುತ್ತಿದ್ದ ಆ ಮಂದಿರವು ವಿಚಿತ್ರವಾದ ನಾನಾ ಚಿತ್ರಗಳಿಂದಲೂ ರತ್ನವಲಯಗಳಿಂದಲೂ ಕಂಗೊಳಿಸುತ್ತಿತ್ತು.

೩೭. ಶ್ರೇಷ್ಠಮಣಿಗಳಿಂದ ಖಚಿತವಾದ ಆ ಮಂದಿರವು ವಿಶ್ವಕರ್ಮನಿಂದ ರಚಿತವಾಗಿತ್ತು. ಅಕ್ರೂರನು ಎದುರಿನಲ್ಲಿ ಕಂಡಮಾರ್ಗದಿಂದ ರಾಜದ್ವಾರಕ್ಕೆ ಪ್ರವೇಶಿಸಿದನು.

೩೮. ಧ್ವಜಗಳಿಂದಲೂ ರತ್ನಮಾಲೆಗಳ ವೈಭವದಿಂದಲೂ ಪರಿಪೂರ್ಣವಾಗಿದ್ದ ಆ ರಾಜದ್ವಾರವು ಮುತ್ತುಮಾಣಿಕ್ಯಗಳಿಂದಲಂಕೃತವಾಗಿ ರತ್ನಗನ್ನಡಿಗಳಿಂದ ಶೋಭಿತವಾಗಿ ರತ್ನಚಿತ್ರಗಳಿಂದ ವಿಚಿತ್ರವಾಗಿದ್ದಿತು.

ರತ್ನವೀಥೀವಿರಚಿತಂ ಮಂಗಲಂ ಮಂಗಲೈರ್ಘಟೈಃ ।
ಅಕ್ರೂರಾಗಮನಂ ಶ್ರುತ್ವಾ ಸಾಹ್ಲಾದೋ ನಂದ ಏವ ಚ ।
ಸಹಿತೋ ರಾಮಕೃಷ್ಣಾಭ್ಯಾಂ ಜಗಾಮಾನುವ್ರಜಾಯ ವೈ ॥ ೩೯ ॥

ವೃಷಭಾನ್ವಾದಿಭಿರ್ಯುಕ್ತಃ ಕೃತ್ವಾ ವೇಶ್ಯಾಂ ಪುರಃಸ್ಸರಾಂ ।
ಪೂರ್ಣಕುಂಭಂ ಗಜೇಂದ್ರಂ ಚ ಕೃತ್ವಾಗ್ರೇ ಶುಕ್ಲಧಾನ್ಯಕಂ ॥ ೪೦ ॥

ಕೃಷ್ಣಾಂ ಗಾಂ ಮಧುಪರ್ಕಂ ಚ ಪಾದ್ಯಂ ರತ್ನಾಸನಾದಿಕಂ ।
ಗೃಹೀತ್ವಾ ಸಾದರಃ ಶಾಂತಃ ಸಸ್ಮಿತೋ ವಿನತಸ್ತಥಾ ॥ ೪೧ ॥

ಆನಂದಯುಕ್ತೋ ನಂದಶ್ಚ ಸಗಣಃ ಸಹ ಬಾಲಕಃ ।
ದೃಷ್ಟ್ವಾಽಕ್ರೂರಂ ಮಹಾಭಾಗಂ ತೂರ್ಣಮಾಲಿಂಗನಂ ದದೌ ॥ ೪೨ ॥

ಪ್ರಣೇಮುಃ ಶಿರಸಾ ಸರ್ವೇ ಗೋಪಾ ಜಗೃಹುರಾಶಿಷಂ ।
ಪರಸ್ಪರಂ ಚ ಸಂಯೋಗೋ ಬಭೂವ ಗುಣವಾನ್ಮುನೇ ॥ ೪೩ ॥

---

೩೯. ರತ್ನದ ಬೀದಿಗಳಿಂದ ಶೋಭಿಸುತ್ತಿದ್ದ ಆ ರಾಜದ್ವಾರವು ಮಂಗಳ ಕಲಶಗಳಿಂದಲಂಕೃತವಾಗಿದ್ದಿತು. ಅಕ್ರೂರನು ಅಲ್ಲಿಗೆ ಬಂದುದನ್ನು ಕೇಳಿ ನಂದ ಗೋಪನು ಸಂತಸಗೊಂಡು ಬಲರಾಮಕೃಷ್ಣರೊಡಗೂಡಿ ಅವನನ್ನು ಎದುರುಗೊಳ್ಳಲು ಅಲ್ಲಿಗೆ ಬಂದನು.

೪೦. ವೃಷಭಾನು ಮುಂತಾದ ಗೋಪರೊಡಗೂಡಿ ವೇಶ್ಯೆಯರನ್ನೂ, ಪೂರ್ಣಕಲಶವನ್ನೂ, ಶ್ರೇಷ್ಠವಾದ ಆನೆಯನ್ನೂ ಶುಕ್ಲಧಾನ್ಯವನ್ನೂ ಸಹ ಮುಂದೆ ಮಾಡಿಕೊಂಡು ನಂದಗೋಪನು ಅಲ್ಲಿಗೆ ಬಂದನು.

೪೧. ಕಪಿಲವರ್ಣದ ಗೋವನ್ನೂ, ಮಧುಪರ್ಕವನ್ನೂ, ಪಾದೋದಕವನ್ನೂ ರತ್ನಾಸನವನ್ನೂ ತೆಗೆದುಕೊಂಡು, ಶಾಂತನೂ, ಸ್ಮಿತಮುಖನೂ ಆದ ನಂದಗೋಪನು ವಿನಯಾದರಗಳಿಂದ ಕೂಡಿ ಅಲ್ಲಿಗೆ ಬಂದನು.

೪೨. ಬಲರಾಮಕೃಷ್ಣರೊಡನೆಯೂ ಇತರ ಪರಿವಾರದೊಡನೆಯೂ ಬಂದಿದ್ದ ನಂದಗೋಪನು, ಮಹಾಭಾಗ್ಯಶಾಲಿಯಾದ ಅಕ್ರೂರನನ್ನು ನೋಡಿ ಜಾಗ್ರತೆ ಗಾಢಾಲಿಂಗನ ಮಾಡಿಕೊಂಡನು.

೪೩. ಎಲ್ಲರೂ ಪರಸ್ಪರವಾಗಿ ತಲೆಬಾಗಿ ನಮಸ್ಕರಿಸಿದರು. ಗೋಪವೃದ್ಧರೆಲ್ಲ ಆಶೀರ್ವಾದಮಾಡಿದರು. ಎಲೈ ನಾರದಮುನಿಯೇ, ಈ ರೀತಿ ನಂದಗೋಪ ಮುಂತಾದವರಿಗೂ ಅಕ್ರೂರನಿಗೂ ವಿಶ್ವಾಸರೂಪವಾದ ಸಂಬಂಧ ಬೆಳೆಯಿತು.

ಕ್ರೋಡೇ ಚಕಾರಾಽಕ್ರೂರಶ್ಚ ಕೃಷ್ಣಂ ರಾಮಂ ಕ್ರಮೇಣ ಚ ।
ಚುಚುಂಬ ಗಂಡಯುಗಲೇ ಪುಲಕಾಂಚಿತವಿಗ್ರಹಃ ॥ ೪೪ ॥

ಸಾಶ್ರುನೇತ್ರೋಽತಿಸಾಹ್ಲಾದಃ ಕೃತಾರ್ಥಃ ಸಿದ್ಧವಾಂಛಿತಃ ।
ದದರ್ಶ ಕೃಷ್ಣಂ ದ್ವಿಭುಜಂ ಕ್ಷಣಂ ಶ್ಯಾಮಲಸುಂದರಂ ॥ ೪೫ ॥

ಪೀತವಸ್ತ್ರಪರೀಧಾನಂ ಮಾಲತೀಮಾಲ್ಯಭೂಷಿತಂ ।
ಚಂದನೋಕ್ಷಿತಸರ್ವಾಂಗಂ ಪರಂ ವಂಶೀಧರಂ ವರಂ ॥ ೪೬ ॥

ಸ್ತುತಂ ಬ್ರಹ್ಮೇಶಶೇಷಾದ್ಯೈರ್ಮುನೀಂದ್ರೈಃ ಸನಕಾದಿಭಿಃ ।
ವೀಕ್ಷಿತಂ ಗೋಪಕನ್ಯಾಭಿಃ ಪರಿಪೂರ್ಣತಮಂ ವಿಭುಂ ॥ ೪೭ ॥

ಕ್ಷಣಂ ದದರ್ಶ ಕ್ರೋಡಸ್ಥಂ ಸಸ್ಮಿತಂ ಚ ಚತುರ್ಭುಜಂ ।
ಲಕ್ಷ್ಮೀಸರಸ್ವತೀಯುಕ್ತಂ ವನಮಾಲಾವಿಭೂಷಿತಂ ॥ ೪೮ ॥

---

೪೪. ಅಕ್ರೂರನು ಕ್ರಮವಾಗಿ ಬಲರಾಮನನ್ನೂ ಕೃಷ್ಣನನ್ನೂ ಆಲಂಗಿಸಿಕೊಂಡನು ಮತ್ತು ರೋಮಾಂಚಿತ ಶರೀರನಾಗಿ ಎರಡು ಕಪೋಲಗಳಲ್ಲಿಯೂ ಇಬ್ಬರನ್ನೂ ಚುಂಬಿಸಿದನು.

೪೫. ತನ್ನ ಇಷ್ಟಾರ್ಥಸಿದ್ಧಿಯನ್ನು ಪಡೆದು ಕೃತಾರ್ಥನಾದ ಅಕ್ರೂರನು ಕಣ್ಣುಗಳಲ್ಲಿ ಆನಂದಬಾಷ್ಪಗಳನ್ನು ಸುರಿಸಿದನು. ಅನಂತರ ಕಣ್ತೆರೆದು ಕ್ಷಣಕಾಲ ಶ್ಯಾಮಸುಂದರನೂ ದ್ವಿಭುಜನೂ ಆದ ಕೃಷ್ಣನನ್ನು ಕಂಡನು.

೪೬. ಪೀತಾಂಬರವನ್ನುಟ್ಟು ಜಾಜೀಹೂವಮಾಲೆಯನ್ನು ಧರಿಸಿದ್ದ ಆ ಕೃಷ್ಣನು ಸರ್ವಾಂಗಗಳಿಗೂ ದಿವ್ಯಚಂದನವನ್ನು ಲೇಪಿಸಿಕೊಂಡು ಕೈಯ್ಯಲ್ಲಿ ಕೊಳಲನ್ನು ಧರಿಸಿದ್ದನು.

೪೭. ಬ್ರಹ್ಮ, ಈಶ್ವರ ಶೇಷ ಮುಂತಾದ ದೇವತೆಗಳಿಂದಲೂ, ಸನಕಾದಿ ಮುನಿವರ್ಯರಿಂದಲೂ ಸ್ತುತಿಸಲ್ಪಟ್ಟ ಪರಿಪೂರ್ಣತಮನಾದ ಆ ಕೃಷ್ಣನನ್ನು ಗೋಪಕನ್ನಿಕೆಯರು ಭಕ್ತಿಪ್ರೇಮಗಳಿಂದ ನೋಡುತ್ತಿದ್ದರು.

೪೮. ಮರುಕ್ಷಣದಲ್ಲಿ ಅದೇ ಕೃಷ್ಣನು ವನಮಾಲೆಯನ್ನು ಧರಿಸಿ ಚತುರ್ಭುಜನಾಗಿ ಅಕ್ಕಪಕ್ಕದಲ್ಲಿ ಲಕ್ಷ್ಮೀಸರಸ್ವತಿಯರನ್ನು ಕುಳ್ಳಿರಿಸಿಕೊಂಡು ಸ್ಮಿತಮುಖನಾಗಿ ಕುಳಿತಿರುವುದನ್ನು ಅಕ್ರೂರನು ಕಂಡನು.

ಸುನಂದನಂದಕುಮುದ್ಯೈಃ ಪಾರ್ಷದ್ಯೈಃ ಪರಿಸೇವಿತಂ ।
ಸೇವಿತಂ ಸಿದ್ಧಸಂಘೈಶ್ಚ ಭಕ್ತಿನವ್ರೈಃ ಪರಾತ್ಪರಂ ॥ ೪೯ ॥

ಕ್ಷಣಂ ದದರ್ಶ ದೇವಂ ತಂ ಪಂಚವಕ್ತ್ರಂ ತ್ರಿಲೋಚನಂ ।
ಶುದ್ಧಸ್ಫಟಿಕಸಂಕಾಶಂ ನಾಗರಾಜವಿರಾಜಿತಂ ॥ ೫೦ ॥

ದಿಗಂಬರಂ ಪರಂಬ್ರಹ್ಮ ಭಸ್ಮಾಂಗಂ ಚ ಜಟಾಯುತಂ ।
ಜಪಮಾಲಾಕರಂ ಧ್ಯಾನನಿಷ್ಠಂ ಶ್ರೇಷ್ಠಂ ಚ ಯೋಗಿನಾಂ ॥ ೫೧ ॥

ಕ್ಷಣಂ ಚತುರ್ಮುಖಂ ಧ್ಯಾನನಿಷ್ಠಂ ಶ್ರೇಷ್ಠಂ ಮನೀಷಿಣಾಂ ।
ಕ್ಷಣಂ ಧರ್ಮಸ್ವರೂಪಂ ಚ ಶೇಷರೂಪಂ ಕ್ಷಣಂ ಕ್ಷಣಂ ॥ ೫೨ ॥

ಕ್ಷಣಂ ಭಾಸ್ಕರರೂಪಂ ಚ ಜ್ಯೋತೀರೂಪಂ ಸನಾತನಂ ।
ಕ್ಷಣಂ ಪರಮಶೋಭಾಢ್ಯಂ ಕೋಟಿಕಂದರ್ಪನಿಂದಿತಂ ॥ ೫೩ ॥

---

೪೯. ಪರಾತ್ಪರನಾದ ಆ ಶ್ರೀಹರಿಯನ್ನು ಸುನಂದ ನಂದ ಕುಮುದ ಮುಂತಾದ ಪಾರ್ಷದರೂ, ಸಿದ್ಧರೂ ಸಹ ಭಕ್ತಿಯಿಂದ ತಲೆಬಾಗಿದವರಾಗಿ ಸೇವಿಸುತ್ತಿದ್ದರು.

೫೦. ಮತ್ತೊಂದುಕ್ಷಣದಲ್ಲಿ ಶುದ್ಧಸ್ಫಟಿಕದಂತೆ ತೇಜಸ್ವಿಯಾದ ಆ ದೇವನು ಐದು ಮುಖಗಳಿಂದಲೂ ಮೂರುಕಣ್ಣುಗಳಿಂದಲೂ ಶೋಭಿಸುವವನಾಗಿ ಮೈಗೆಲ್ಲ ಹಾವುಗಳನ್ನು ಸುತ್ತಿಕೊಂಡಿರುವುದನ್ನು ಅಕ್ರೂರನು ಕಂಡನು (ಶ್ರೀಕೃಷ್ಣನು ಮಹಾದೇವನ ರೂಪವನ್ನು ಧರಿಸಿದ್ದನು)

೫೧. ದಿಗಂಬರನೂ, ಮೈಗೆಲ್ಲ ಭಸ್ಮವನ್ನು ಲೇಪಿಸಿಕೊಂಡಿದ್ದವನೂ, ಜಟಾಧಾರಿಯೂ, ಯೋಗಿಗಳಿಗೆ ಶ್ರೇಷ್ಠನೂ ಆದ ಆ ಪರಶಿವನು ಕೈಯ್ಯಲ್ಲಿ ಜಪಮಾಲೆಯನ್ನು ಧರಿಸಿ ಪರಬ್ರಹ್ಮನನ್ನು ಧ್ಯಾನಿಸುತ್ತಿದ್ದನು.

೫೨. ಜ್ಞಾನಿಗಳಲ್ಲಿ ಶ್ರೇಷ್ಠನಾದ ಆ ಶ್ರೀಹರಿಯು ಮತ್ತೊಂದು ಕ್ಷಣದಲ್ಲಿ ಚತುರ್ಮುಖನಾಗಿ ಬ್ರಹ್ಮಧ್ಯಾನನಿಷ್ಠನಾಗಿದ್ದನು. ಹಾಗೆಯೇ ಒಂದು ಕ್ಷಣದಲ್ಲಿ ಧರ್ಮಸ್ವರೂಪನೂ ಮತ್ತೊಂದು ಕ್ಷಣದಲ್ಲಿ ಶೇಷರೂಪನೂ ಆಗಿದ್ದನು.

೫೩. ಕ್ಷಣಕಾಲ ಜ್ಯೋತಿರ್ಮಯನೂ ಸನಾತನನೂ ಆದ ಸೂರ್ಯಭಗವಾನನ ರೂಪವನ್ನೂ, ಮತ್ತೊಂದು ಕ್ಷಣದಲ್ಲಿ ಕೋಟಿಮನ್ಮಥರನ್ನು ನಿಂದಿಸುವ ದಿವ್ಯ ಸುಂದರಾಕಾರವನ್ನೂ ಧರಿಸಿದ ಶ್ರೀಕೃಷ್ಣನನ್ನು ಅಕ್ರೂರನು ಕಂಡನು.

ಕಾಮಿನೀಕಮನೀಯಂ ಚ ಕಾಮುಕಂ ಕಾಮಸಂಯುತಂ ।
ಏವಂಭೂತಂ ಶಿಶುಂ ದೃಷ್ಟ್ವಾ ಸ್ಥಾಪಯಾಮಾಸ ವಕ್ಷಸಿ ॥ ೫೪ ॥

ರತ್ನಸಂಹಾಸನೇ ರಮ್ಯೇ ನಂದದತ್ತೇ ಚ ನಾರದ ।
ಕೃತ್ವಾ ಪ್ರದಕ್ಷಿಣಂ ಭಕ್ತ್ಯಾ ಪುಲಕಾಂಚಿತವಿಗ್ರಹಃ ।
ಪ್ರಣಮ್ಯ ಶಿರಸಾ ಭೂಮೌ ತುಷ್ಟಾವ ಪುರುಷೋತ್ತಮಂ ॥ ೫೫ ॥

॥ ಅಕ್ರೂರ ಉವಾಚ ॥

ನಮಃ ಕಾರಣರೂಪಾಯ ಪರಮಾತ್ಮಸ್ವರೂಪಿಣೇ ॥ ೫೬ ॥

ಸರ್ವೇಷಾಮಪಿ ವಿಶ್ವಾನಾಮೀಶ್ವರಾಯ ನಮೋನಮಃ ।
ಪರಾಯ ಪ್ರಕೃತೇರೀಶಪರಾತ್ಪರತರಾಯ ಚ ॥ ೫೭ ॥

ನಿರ್ಗುಣಾಯ ನಿರೀಹಾಯ ನೀರೂಪಾಯ ಸ್ವರೂಪಿಣೇ ।
ಸರ್ವದೇವಸ್ವರೂಪಾಯ ಸರ್ವದೇವೇಶ್ವರಾಯ ಚ ॥ ೫೮ ॥

---

೫೪. ಕಾಮಿನಿಯರಿಂದ ಕಾಮಿತನೂ ಕಮನೀಯನೂ ಕಾಮುಕನೂ ಆಗಿದ್ದ ಆ ಗೋಪಕಿಶೋರನನ್ನು ನೋಡಿ ನಂದಗೋಪನು ತನ್ನ ವಕ್ಷಃಸ್ಥಳದಲ್ಲಿ ಅವನನ್ನು ಅಪ್ಪಿಕೊಂಡನು.

೫೫. ಎಲೈ ನಾರದನೇ, ನಂದಗೋಪನು ಕೊಟ್ಟರಮ್ಯವಾದ ಸಿಂಹಾಸನದಲ್ಲಿ ಕುಳಿತು ಅಕ್ರೂರನು ಶ್ರೀಕೃಷ್ಣನಿಗೆ ಭಕ್ತಿಯಿಂದ ಪ್ರದಕ್ಷಿಣೆಮಾಡಿ ರೋಮಾಂಚಿತ ಶರೀರನಾಗಿ ಭೂಮಿಯಮೇಲೆ ಸಾಷ್ಟಾಂಗವೆರಗಿ ಪುರುಷೋತ್ತಮನನ್ನು ಸ್ತುತಿಸ ಲಾರಂಭಿಸಿದನು.

೫೬. ಅಕ್ರೂರ: —ಜಗತ್ತಿಗೆ ಆದಿಕಾರಣನೂ. ಪರಮಾತ್ಮಸ್ವರೂಪನೂ ಆದ ಶ್ರೀಕೃಷ್ಣನಿಗೆ ನಮಸ್ಕರಿಸುವೆನು.

೫೭. ಸಮಸ್ತವಾದ ವಿಶ್ವಕ್ಕೆ ಒಡೆಯನೂ, ಸರ್ವಶ್ರೇಷ್ಠನೂ, ಪ್ರಕೃತಿಗೆ ಈಶ್ವರನೂ ಪರಾತ್ಪರನೂ ಆದ ಶ್ರೀಕೃಷ್ಣಪರಮಾತ್ಮನಿಗೆ ಸಾಷ್ಟಾಂಗವೆರಗುವೆನು.

೫೮. ನಿರ್ಗುಣನೂ, ಇಚ್ಛಾರಹಿತನೂ, ರೂಪರಹಿತನೂ ಸರ್ವದೇವ ಸ್ವರೂಪನೂ ಸರ್ವದೇವೇಶ್ವರನೂ ಆದ ಪರಮಾತ್ಮನಿಗೆ ನಮಸ್ಕರಿಸುವೆನು.

ಸರ್ವದೇವಾಧಿದೇವಾಯ ವಿಶ್ವಾದಿಭೂತರೂಪಿಣೇ ।
ಅಸಂಖ್ಯೇಷು ಚ ವಿಶ್ವೇಷು ಬ್ರಹ್ಮವಿಷ್ಣುಶಿವಾತ್ಮಕ ॥ ೫೯ ॥

ಸ್ವರೂಪಾಯಾದಿಬೀಜಾಯ ತದೀಶವಿಶ್ವರೂಪಿಣೇ ।
ನಮೋ ಗೋಪಾಂಗನೇಶಾಯ ಗಣೇಶೇಶ್ವರರೂಪಿಣೇ ॥ ೬೦ ॥

ನಮಃ ಸುರಗಣೇಶಾಯ ರಾಧೇಶಾಯ ನಮೋ ನಮಃ ।
ರಾಧಾರಮಣರೂಪಾಯ ರಾಧಾರೂಪಧರಾಯ ಚ ॥ ೬೧ ॥

ರಾಧಾರಾಧ್ಯಾಯ ರಾಧಾಯಾಃ ಪ್ರಾಣಾಧಿಕತರಾಯ ಚ ।
ರಾಧಾಸಾಧ್ಯಾಯ ರಾಧಾಧಿದೇವಪ್ರಿಯತಮಾಯ ಚ ॥ ೬೨ ॥

ರಾಧಾಪ್ರಾಣಾಧಿದೇವಾಯ ವಿಶ್ವರೂಪಾಯ ತೇ ನಮಃ ।
ವೇದಸ್ತುತಾತ್ಮವೇದಜ್ಞರೂಪಿಣೇ ವೇದಿನೇ ನಮಃ ॥ ೬೩ ॥

---

೫೯. ಸಮಸ್ತದೇವಾದಿದೇವನೂ, ವಿಶ್ವಕ್ಕೆ ಮೂಲಕಾರಣನೂ, ಅಸಂಖ್ಯ ಬ್ರಹ್ಮಾಂಡದಲ್ಲೂ ಬ್ರಹ್ಮ, ವಿಷ್ಣು, ಶಿವಸ್ವರೂಪದಲ್ಲಿರುವವನೂ ಆದ ಪರಮಾತ್ಮನಿಗೆ ಸಾಷ್ಟಾಂಗವೆರಗುವೆನು.

೬೦. ಪರಮಾತ್ಮಸ್ವರೂಪನೂ, ಆದಿಕಾರಣನೂ, ಸರ್ವೇಶ್ವರನೂ, ವಿಶ್ವಾತ್ಮಕನೂ, ಗೋಪಾಂಗನೆಯರೊಡೆಯನೂ, ಗಣೇಶ ಮತ್ತು ಈಶ್ವರಸ್ವರೂಪನೂ ಆದ ಶ್ರೀಕೃಷ್ಣನಿಗೆ ವಂದಿಸುವೆನು.

೬೧. ದೇವತೆಗಳಿಗೆ ಒಡೆಯನೂ, ರಾಧಾಪತಿಯೂ ಆದ ಶ್ರೀಹರಿಗೆ ನಮಸ್ಕರಿಸುವೆನು. ರಾಧೆಯ ರತಿಸುಖಕ್ಕೆ ಕಾರಣನೂ ರಾಧಾರೂಪಧರನೂ ಆದ ಪರಮಾತ್ಮನಿಗೆ ವಂದಿಸುವೆನು.

೬೨. ರಾಧೆಯಿಂದ ಆರಾಧ್ಯನೂ, ರಾಧೆಯ ಪ್ರಾಣಕ್ಕಿಂತ ಪ್ರಿಯತಮನೂ ರಾಧೆಯ ಭಕ್ತಿಗೊಳಗಾಗುವವನೂ ರಾಧೆಯ ಅಧಿದೇವತೆಯೂ ಪ್ರಿಯತಮನೂ ಆದ ಶ್ರೀ ಕೃಷ್ಣನಿಗೆ ನಮಸ್ಕರಿಸುವೆನು

೬೩. ರಾಧೆಯ ಪ್ರಾಣಾಧಿದೇವನೂ, ವಿಶ್ವರೂಪನೂ, ಆದ ಪರಮಾತ್ಮನಿಗೆ ವಂದಿಸುವೆನು. ವೇದದಿಂದ ಹೊಗಳಲ್ಪಡುವವನೂ, ಆತ್ಮಜ್ಞಾನಿಯೂ ಸರ್ವಜ್ಞನೂ ಆದ ಪರಮಾತ್ಮನಿಗೆ ವಂದಿಸುವೆನು.

ವೇದಾಧಿಷ್ಠಾತೃದೇವಾಯ ವೇದಬೀಜಾಯ ತೇ ನಮಃ ।
ಯಸ್ಯ ಲೋಮಸು ವಿಶ್ವಾನಿ ಚಾಸಂಖ್ಯಾನಿ ಚ ನಿತ್ಯಶಃ ॥ ೬೪ ॥

ಮಹದ್ವಿಷ್ಣೋರೀಶ್ವರಾಯ ವಿಶ್ವೇಶಾಯ ನಮೋ ನಮಃ ।
ಸ್ವಯಂ ಪ್ರಕೃತಿರೂಪಾಯ ಪ್ರಾಕೃತಾಯ ನಮೋ ನಮಃ ॥ ೬೫ ॥

ಪ್ರಕೃತೀಶ್ವರರೂಪಾಯ ಪ್ರಧಾನಪುರುಷಾಯ ಚ ।
ಇತ್ಯೇವಂ ಸ್ತವನಂ ಕೃತ್ವಾ ಮೂರ್ಛಾಮಾಪ ಸಭಾತಲೇ ॥ ೬೬ ॥

ಪಪಾತ ಸಹಸಾ ಭೂಮೌ ಪುನರೀಶಂ ದದರ್ಶ ಸಃ ।
ಬಹಿಃಸ್ಥಂ ಹೃದಯಸ್ಥಂ ಚ ಪರಮಾತ್ಮಾನಮೀಶ್ವರಂ ॥ ೬೭ ॥

ಪುರಿತಃ ಶ್ಯಾಮರೂಪಂ ಚ ವಿಶ್ವಸ್ಥಂ ವಿಶ್ವಮೇವ ಚ ।
ಅಕ್ರೂರಂ ಮೂರ್ಛಿತಂ ದೃಷ್ಟ್ವಾ ನಂದಃ ಸಾದರಪೂರ್ವಕಂ ॥ ೬೮ ॥

೬೪–೬೫. ವೇದಕ್ಕೆ ಅಧಿಷ್ಠಾತೃದೇವತೆಯೂ, ವೇದಕ್ಕೆ ಮೂಲಕಾರಣನೂ ಆದ ಶ್ರೀ ಕೃಷ್ಣನಿಗೆ ನಮಸ್ಕರಿಸುವೆನು. ಯಾವ ಮಹಾವಿಷ್ಣುವಿನ ಲೋಮಕೂಪಗಳಲ್ಲಿ ಅಸಂಖ್ಯ ಬ್ರಹ್ಮಾಂಡಗಳೂ ಅಡಗಿರುವುವೋ ಅಂಥ ಮಹಾವಿಷ್ಣುವಿಗೆ ಒಡೆಯನೂ, ನಿಖಿಲ ವಿಶ್ವಕ್ಕೆ ಈಶ್ವರನೂ ಆದ ಪರಮಾತ್ಮನಿಗೆ ವಂದಿಸುವೆನು. ಸ್ವಯಂ ಪ್ರಕೃತಿಸ್ವರೂಪನೂ ಪುರಾತನನೂ ಆದ ಶ್ರೀಹರಿಗೆ ನಮಸ್ಕರಿಸುವೆನು.

೬೬. ಪ್ರಕೃತಿಗೆ ಈಶ್ವರನೆನಿಸಿದವನೂ, ಪ್ರಧಾನಪುರುಷನೂ ಆದ ಶ್ರೀಕೃಷ್ಣನಿಗೆ ನಮಸ್ಕರಿಸುವೆನು. ಅಕ್ರೂರನು ಈ ರೀತಿಯಾಗಿ ಸ್ತೋತ್ರಮಾಡಿ ಆನಂದ ಪರವಶನಾಗಿ ಸಭಾಮಂಡಪದಲ್ಲಿ ಮೂರ್ಛೆಗೊಂಡನು.

೬೭. ಇದ್ದಕ್ಕಿದ್ದಂತೆಯೇ ಭೂಮಿಯ ಮೇಲೆ ಬಿದ್ದು, ಸರ್ವೇಶ್ವರನಾದ ಪರಮಾತ್ಮನು ವಿಶ್ವವ್ಯಾಪಕನಾದುದರಿಂದ ತನ್ನ ಹೃದಯದಲ್ಲಿರುವುದನ್ನೂ ಹೊರಗಡೆ ಎಲ್ಲ ಕಡೆಯಲ್ಲಿರುವುದನ್ನೂ ಅಕ್ರೂರನು ಕಂಡನು.

೬೮–೬೯. ಎದುರಿನಲ್ಲಿ ಮೇಘದಂತೆ ಶ್ಯಾಮವರ್ಣನೂ, ಇತರ ವಿಶ್ವದಲ್ಲಿ ವಿಶ್ವಸ್ವರೂಪನೂ ಆದ ಪರಮಾತ್ಮನನ್ನು ಕಂಡನು. ಈ ರೀತಿ ಮೂರ್ಛೆಗೊಂಡಿರುವ ಅಕ್ರೂರನನ್ನು ನೋಡಿ ನಂದಗೋಪನು ಅತ್ಯಾದರದಿಂದ ಅವನಿಗೆ ಉಪಚರಿಸಿ ರಮ್ಯ

ರತ್ನಸಿಂಹಾಸನೇ ರಮ್ಯೇ ವಾಸಯಾಮಾಸ ನಾರದ ।
ಪಪ್ರಚ್ಛ ಸರ್ವವೃತ್ತಾಂತಂ ಕಿಂಸ್ವಿದ್ದೃಷ್ಟಮಿತಿ ತ್ವಯಾ ॥ ೬೯ ।

ಮಿಷ್ಟಾನ್ನಂ ಭೋಜಯಾಮಾಸ ಕುಶಲಂ ಚ ಪುನಃಪುನಃ ।
ಅಕ್ರೂರಃ ಕಥಯಾಮಾಸ ಕಂಸವೃತ್ತಾಂತಮೀಪ್ಸಿತಂ ॥ ೭೦ ।

ಸ್ವಪಿತ್ರೋರ್ಮೋಕ್ಷಣಾರ್ಥಂ ಚ ಗಮನಂ ರಾಮಕೃಷ್ಣಯೋಃ ।
ಇತ್ಯಕ್ರೂರಕೃತಂ ಸ್ತೋತ್ರಂ ಯಃ ಪಠೇತ್ಸುಸಮಾಹಿತಃ ॥ ೭೧ ।

ಅಪುತ್ರೋ ಲಭತೇ ಪುತ್ರಮಭಾರ್ಯೋ ಲಭತೇ ಪ್ರಿಯಾಂ ।
ಅಧನೋ ಧನಮಾಪ್ನೋತಿ ನಿರ್ಭೂಮಿರುರ್ವರಾಂ ಮಹೀಂ ॥ ೭೨ ।

ಹತಪ್ರಜಃ ಪ್ರಜಾಲಾಭಂ ಪ್ರತಿಷ್ಠಾಂ ಚಾಪ್ರತಿಷ್ಠಿತಃ ।
ಯಶಃ ಪ್ರಾಪ್ನೋತಿ ವಿಪುಲಮಯಶಸ್ವೀ ಚ ಲೀಲಯಾ ॥ ೭೩ ।

ವಾದ ರತ್ನಸಿಂಹಾಸನದಲ್ಲಿ ಕುಳ್ಳಿರಿಸಿದನು. ಎಲೈ ನಾರದನೇ, ಅನಂತರ "ನೀನ ಪರಮಾತ್ಮನ ದರ್ಶನವನ್ನು ಮಾಡಿದೆಯಾ" ಎಂದು ಅಕ್ರೂರನನ್ನು ಪ್ರಶ್ನಿಸಿದನು.

೭೦. ಅಕ್ರೂರನಿಗೆ ಮಿಷ್ಟಾನ್ನ ಭೋಜನಮಾಡಿಸಿ ಪುನಃಪುನಃ ಕುಶಲ ಪ್ರಶ್ನೆ ಮಾಡಿದನು. ಅಕ್ರೂರನು ನಂದಗೋಪನಿಗೆ ಕಂಸನ ಸಕಲ ವೃತ್ತಾಂತವನ್ನೂ ವಿಸ್ತಾರವಾಗಿ ಹೇಳಿದನು.

೭೧-೭೨. ಹಾಗೆಯೇ ತಮ್ಮ ತಂದೆತಾಯಿಗಳಾದ ವಸುದೇವ ದೇವಕಿಯರನ್ನು ಬಂಧನದಿಂದ ಬಿಡಿಸಲೋಸುಗ ಬಲರಾಮಕೃಷ್ಣರು ಮಥುರೆಗೆ ಹೋಗಬೇಕೆಂದು ಹೇಳಿದನು. ಅಕ್ರೂರನು ಮಾಡಿದ ಪರಮಾತ್ಮನ ಸ್ತೋತ್ರವನ್ನು ಸ್ವಸ್ಥ ಚಿತ್ತದಿಂದ ಪಠಿಸುವವರು ಪುತ್ರರಿಲ್ಲದವರಾದರೆ ಯೋಗ್ಯನಾದ ಪುತ್ರನನ್ನೂ, ಭಾರ್ಯಾರಹಿತರಾದರೆ ಒಳ್ಳೆಯ ಭಾರ್ಯೆಯನ್ನೂ ಪಡೆಯುವರು. ಧನರಹಿತನಿಗೆ ಧನಪ್ರಾಪ್ತಿಯೂ, ಭೂಮಿರಹಿತನಿಗೆ ಸರ್ವ ಸಸ್ಯಭರಿತವಾದ ಭೂಮಿಯೂ ದೊರೆಯುವುದು.

೭೩. ಪ್ರಜಾರಹಿತನು ಪ್ರಜಾಲಾಭವನ್ನೂ, ಪ್ರತಿಷ್ಠಾರಹಿತನು ಸುಪ್ರತಿಷ್ಠೆಯನ್ನೂ, ಕೀರ್ತಿರಹಿತನು ವಿಶಾಲವಾದ ಕೀರ್ತಿಯನ್ನೂ ಲೀಲಾಮಾತ್ರದಿಂದ ಪಡೆಯುವುದರಲ್ಲಿ ಸಂಶಯವಿಲ್ಲ.

ಅಥ ಸುಷ್ವಾಪ ಸಸಮಯೇ ಪರಂಸಂಹೃಷ್ಟಮಾನಸಃ ।
ರಮ್ಯೇ ಚಂಪಕತಲ್ಪೇ ಚ ಕೃಷ್ಣಂ ಕೃತ್ವಾ ಸ್ವವಕ್ಷಸಿ ॥ ೭೪ ॥

ಸ್ನಾತರುತ್ಥಾಯ ಸಹಸಾ ಕೃತ್ವಾಹ್ನಿಕಮನುತ್ತಮಂ ।
ಸ್ವರಥೇ ಸ್ಥಾಪಯಾಮಾಸ ರಾಮಂ ಕೃಷ್ಣಂ ಜಗತ್ಪತಿಂ ॥ ೭೫ ॥

ಗವ್ಯಂ ಪಂಚಪ್ರಕಾರಂ ಚ ನಾನಾದ್ರವ್ಯಂ ಸುದುರ್ಲಭಂ ।
ವೃಷಭಾನುಂ ಚ ನಂದಂ ಚ ಸುನಂದಂ ಚಂದ್ರಭಾನಕಂ ॥ ೭೬ ॥

ನಾನಾಪ್ರಕಾರಂ ವಾದ್ಯಂ ಚ ಮೃದಂಗಮುರಜಾದಿಕಂ ।
ಪಟಹಂ ಪಣವಂ ಚೈವ ಢಕ್ಕಾಂ ದುಂದುಭಿಮಾನಕಂ ॥ ೭೭ ॥

ಸಜ್ಝಾಂ ಸಂನಹನೀಂ ಕಾಂಸ್ಯಪಟ್ಟಮರ್ದಲಮಂಡವೀಂ ।
ವಾದಯಾಮಾಸ ಸಾನಂದಂ ನಂದಗೋಪೋ ವ್ರಜೇಶ್ವರಃ ॥ ೭೮ ॥

---

೭೪ ಅತ್ತ ಅಕ್ರೂರನು ನಂದಗೋಕುಲದಲ್ಲಿ ಭೋಜನಾದಿಗಳನ್ನು ಮಾಡಿ ಸಂಹೃಷ್ಟಾಂತರಂಗನಾಗಿ ಕೃಷ್ಣನನ್ನು ವಕ್ಷಃಸ್ಥಲದಲ್ಲಿ ಅಪ್ಪಿಕೊಂಡು ರಮ್ಯವಾದ ಸಂಪಿಗೆಯ ಹಾಸಿಗೆಯಲ್ಲಿ ಮಲಗಿ ನಿದ್ರಿಸಿದನು

೭೫. ಮರುದಿನ ಪ್ರಾತಃಕಾಲದಲ್ಲಿ ಎದ್ದು ಸ್ನಾನಾಹ್ನಿಕಾದಿ ನಿತ್ಯಕರ್ಮಗಳನ್ನಾಚರಿಸಿ ಬಲರಾಮನನ್ನೂ ಜಗದೊಡೆಯನಾದ ಶ್ರೀ ಕೃಷ್ಣನನ್ನೂ ತನ್ನ ರಥದಲ್ಲಿ ಕುಳ್ಳಿರಿಸಿಕೊಂಡನು.

೭೬. ಅಂತೆಯೇ ಪಂಚವಿಧವಾದ ಗವ್ಯ (ಹಾಲು, ಮೊಸರು, ತುಪ್ಪ, ಸಗಣಿ, ಗಂಜಲ) ವನ್ನೂ, ಶ್ರೇಷ್ಠವಾದ ನಾನಾದ್ರವ್ಯಗಳನ್ನೂ ತೆಗೆದುಕೊಂಡು ವೃಷಭಾನು, ನಂದ ಸುನಂದ ಮತ್ತು ಚಂದ್ರಭಾನುವನ್ನೂ ಕರೆದು ತನ್ನ ರಥದಲ್ಲಿ ಕುಳ್ಳಿರಿಸಿದನು.

೭೭–೭೮. ಗೋಕುಲಾಧಿಪತಿಯಾದ ನಂದಗೋಪನು ಮೃದಂಗ, ಢಕ್ಕೆ. ತಮಟೆ, ಕೊಂಬು, ನಗಾರಿ, ಕಹಳೆ, ಸಜ್ಝೆ, ಸನ್ನಹನೀ, ಕಂಚಿನತಾಳ, ಮದ್ದಲೆ, ಮಂಡವಿ ಮುಂತಾದ ಅನೇಕ ಪ್ರಕಾರವಾದ ವಾದ್ಯಗಳು ಆನಂದಪೂರ್ವಕವಾಗಿ ಭೋರ್ಗರೆಯುವಂತೆ ಮಾಡಿದನು.

ಶ್ರುತ್ವಾ ವಾದ್ಯಂ ಚ ಗೋಪ್ಯಶ್ಚ ಗಮನಂ ರಾಮಕೃಷ್ಣಯೋಃ ।
ದೃಷ್ಟ್ವಾ ಕೃಷ್ಣಂ ರಥಸ್ಥಂ ತಮಾಯಯುಃ ಕೋಪಪೀಡಿತಾಃ ॥ ೭೯ ।

ಕೃಷ್ಣೇನ ವಾರಿತಾಃ ಸರ್ವಾಃ ಪ್ರೇರಿತಾ ರಾಧಯಾ ದ್ವಿಜ ।
ಬಭಂಜುರೀಶ್ವರರಥಂ ಪಾದಾಘಾತೇನ ಲೀಲಯಾ ॥ ೮೦ ।

ತತ್ರ ಸರ್ವೇಷು ಗೋಪೇಷು ಹಾಹಾಕಾರಂ ಕೃತೇಷು ಚ ।
ಪ್ರಯಯುರ್ಬಲವತ್ಯಶ್ಚ ಕೃಷ್ಣಂ ಕೃತ್ವಾ ಸ್ವವಕ್ಷಸಿ ॥ ೮೧ ।

ಕಾಚಿತ್ಕ್ರೂರಂ ತಮಕ್ರೂರಂ ಭರ್ತ್ಸಯಾಮಾಸ ಕೋಪತಃ ।
ಕಾಚಿದ್ಬದ್ಧ್ವಾ ಚ ವಸ್ತ್ರೇಣ ಚಾಕ್ರೂರಂ ಪ್ರಯಯುಸ್ತತಃ ॥ ೮೨ ।

ಕಾಚಿತ್ತಂ ತಾಡಯಾಮಾಸ ಕಂಕಣೇನ ಕರೇಣ ಚ ।
ತದ್ವಸ್ತ್ರಂ ಹಾರಯಾಮಾಸ ಕೃತ್ವಾ ವಿವಸನಂ ಮುನೇ ॥ ೮೩ ।

---

೭೯. ಈ ರೀತಿಯಾದ ವಾದ್ಯಧ್ವನಿಗಳನ್ನು ಕೇಳಿ ಗೋಪಸ್ತ್ರೀಯರೆಲ್ಲರೂ, ಬಲರಾಮಕೃಷ್ಣರ ಪ್ರಯಾಣವನ್ನು ಊಹಿಸಿ, ಅಲ್ಲಿಗೆ ಬಂದು ಕೃಷ್ಣನು ರಥದಲ್ಲಿ ಕುಳಿತಿರುವುದನ್ನು ನೋಡಿ ಕೋಪಾಕುಲಿತರಾದರು.

೮೦. ಆ ಗೋಪಿಯರು ಕೃಷ್ಣನಿಂದ ತಡೆಯಲ್ಪಟ್ಟರೂ ಸಹ ರಾಧೆಯಿಂದ ಪ್ರೇರಿತರಾಗಿ ಲೀಲಾಮಾತ್ರದಿಂದ ಶ್ರೀ ಕೃಷ್ಣನ ರಥವನ್ನು ಕಾಲಿನ ಒದೆತದಿಂದ ಪುಡಿಪುಡಿಮಾಡಿದರು.

೮೧. ಅನಂತರ ಸಕಲಗೋಪರೂ ಹಾಹಾಕಾರಮಾಡುತ್ತಿರಲಾಗಿ ಬಲಿಷ್ಠೆಯರಾದ ಕೆಲವರು ಗೋಪಿಯರು ಕೃಷ್ಣನನ್ನು ಎತ್ತಿಕೊಂಡು ಹೊರಟುಹೋದರು.

೮೨. ಒಬ್ಬ ಗೋಪಿಯು ಆ ಅಕ್ರೂರನನ್ನು ಕೋಪದಿಂದ ಬಹಳ ಕಠಿಣವಾಗಿ ಬೈದು ಬೆದರಿಸಿದಳು. ಮತ್ತೆ ಕೆಲವರು ಗೋಪಿಯರು ಅಕ್ರೂರನನ್ನು ತಮ್ಮ ವಸ್ತ್ರದಿಂದ ಬಂಧಿಸಿ ಎಳೆದುಕೊಂಡು ಹೋದರು.

೮೩. ಒಬ್ಬ ಗೋಪಿಯು ತನ್ನ ಕಂಕಣದಿಂದಲೂ ಕೈಯ್ಯಿಂದಲೂ ಸಹ ಆ ಅಕ್ರೂರನನ್ನು ಹೊಡೆದಳು. ಎಲೈ ಮುನಿಯೇ, ಅವನ ವಸ್ತ್ರವನ್ನು ಕಿತ್ತುಕೊಂಡು ಅವನನ್ನು ಬೆತ್ತಲೆಯಾಗಿ ಮಾಡಿದಳು.

ಕ್ಷತವಿಕ್ಷತಸರ್ವಾಂಗಂ ದೃಷ್ಟ್ವಾಽಕ್ರೂರಂ ಚ ಮಾಧವಃ ।
ಜಗಾಮ ರಾಧಾನಿಕಟಂ ಬೋಧಯಾಮಾಸ ತಾಂ ಪುನಃ ॥ ೮೪ ॥

ಆಧ್ಯಾತ್ಮಿಕೇನ ಯೋಗೇನ ವಿನಯೇನ ಚ ಸಾದರಂ ।
ಅಕ್ರೂರಂ ಬೋಧಯಾಮಾಸ ಬೋಧಯಾಮಾಸ ತಾಂ ವಿಭುಃ ॥ ೮೫ ॥

ಆಕಾಶಾತ್ಪತಿತಂ ದಿವ್ಯಂ ಮಂತ್ರಪ್ರಸ್ಥಾಪಿತಂ ರಥಂ ।
ವಿಚಿತ್ರವಸ್ತ್ರಸಂಯುಕ್ತಂ ದದರ್ಶ ಪುರತೋ ಹರಿಃ ॥ ೮೬ ॥

ಖಚಿತಂ ಮಣಿರಾಜೇನ ರಚಿತಂ ವಿಶ್ವಕರ್ಮಣಾ ।
ತಂ ದೃಷ್ಟ್ವಾ ಮಾತೃಭವನಮಾಜಗಾಮ ಜಗತ್ಪತಿಃ ॥ ೮೭ ॥

ಭುಕ್ತ್ವಾ ಪೀತ್ವಾ ಸುಖಂ ಸುಪ್ತ್ವಾ ಭಗವಾನ್ಸಹ ಬಾಂಧವೈಃ ।
ತಸ್ಥೌ ಮುನೀಂದ್ರ ದೇವೇಂದ್ರಬ್ರಹ್ಮೇಶಶೇಷವಂದಿತಃ ॥ ೮೮ ॥

---

೮೪. ಇವರುಗಳ ಪೆಟ್ಟಿನಿಂದ ಅಕ್ರೂರನ ಮೈಯೆಲ್ಲಾ ಗಾಯವಾಗಿರುವುದನ್ನು ನೋಡಿ ಶ್ರೀಕೃಷ್ಣನು ರಾಧೆಯ ಸಮೀಪಕ್ಕೆ ಹೋಗಿ, ಆಕೆಯನ್ನು ಒಳ್ಳೆಯ ಮಾತುಗಳಿಂದ ಸಮಾಧಾನಪಡಿಸಿದನು.

೮೫. ಶ್ರೀಕೃಷ್ಣನು ರಾಧೆಗೆ ವಿನಯದಿಂದ ಆಧ್ಯಾತ್ಮಿಕ ತತ್ವಗಳನ್ನು ಮತ್ತೊಮ್ಮೆ ಉಪದೇಶಿಸಿದನು. ವಿಶ್ವವ್ಯಾಪಕನಾದ ಶ್ರೀಹರಿಯು ಅಕ್ರೂರನಿಗೂ ಸಹ ಮೃದುಮಧುರ ವಚನಗಳನ್ನು ಹೇಳಿದನು.

೮೬. ಆ ಸಮಯಕ್ಕೆ ಸರಿಯಾಗಿ ಶ್ರೀ ಕೃಷ್ಣನು, ಮಂತ್ರಶಕ್ತಿಯಿಂದ ಹೊರಟು ಬಂದು ವಿಚಿತ್ರ ವಸ್ತ್ರಗಳಿಂದ ಶೋಭಿಸುತ್ತಿದ್ದ ದಿವ್ಯರಥವೊಂದು ಆಕಾಶದಿಂದ ಹಾರಿ ತನ್ನ ಎದುರಿಗೆ ಬರುತ್ತಿರುವುದನ್ನು ಕಂಡನು.

೮೭. ಶ್ರೇಷ್ಠ ಮಣಿಗಳಿಂದ ಖಚಿತವಾದ, ವಿಶ್ವಕರ್ಮನಿಂದ ನಿರ್ಮಿತವಾದ ಆ ರಥವನ್ನು ನೋಡಿ ಅದರಲ್ಲಿ ಕುಳಿತು ಜಗದೊಡೆಯನಾದ ಕೃಷ್ಣನು ತಾಯಿಯ ಮಂದಿರಕ್ಕೆ ಬಂದನು.

೮೮. ಬ್ರಹ್ಮ, ಈಶ್ವರ, ಶೇಷ ಮುಂತಾದ ದೇವತೆಗಳಿಂದ ವಂದಿತನಾದ ಆ ಶ್ರೀಹರಿಯು ಯಶೋದೆಯ ಮನೆಯಲ್ಲಿ ಊಟತಿಂಡಿಗಳನ್ನು ತಿಂದು, ನಿದ್ರೆ ಮಾಡಿ ಬಂಧುಬಳಗದವರೊಡನೆ ಸುಖವಾಗಿದ್ದನು.

ಸುಷುಪುರ್ಗೋಪಿಕಾಃ ಸರ್ವಾಃ ಪರಂ ಸಂಹೃಷ್ಟಮಾನಸಾಃ ।
ಪುಷ್ಪತಲ್ಪೇ ಚ ರಮ್ಯೇ ಚ ರಾಧಯಾ ಸಹ ನಾರದ ॥ ೮೯ ॥

ಸರ್ವೇ ಚಾನಂದಯುಕ್ತಾಶ್ಚ ಜನಾ ಗೋಕುಲವಾಸಿನಃ ।
ಕೇಚಿದ್ಗೋಪಾಶ್ಚ ನನೃತುಃ ಕೇಚಿತ್ಸಂಗೀತತತ್ಪರಾಃ ॥ ೯೦ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣನಾರದಸಂವಾದೇ ಗೋಪೀವಿಷಯೋ
ನಾಮ ಸಪ್ತತಿತಮೋಽಧ್ಯಾಯಃ

---

೮೯. ಎಲೈ ನಾರದನೇ, ಇತ್ತ ಗೋಪಿಯರು ಗೋಕುಲದಲ್ಲಿ ಸಂತುಷ್ಟ ಮನಸ್ಕರಾಗಿ ರಾಧೆಯೊಡನೆ ಪುಷ್ಪಶಯನದಲ್ಲಿ ಸುಖವಾಗಿ ಪವಡಿಸಿ ನಿದ್ರೆ ಮಾಡಿದರು.

೯೦. ಗೋಕುಲವಾಸಿಗಳಾದ ಜನರೆಲ್ಲರೂ ಶ್ರೀಕೃಷ್ಣನು ಕಂಸವಧೆ ಮಾಡುವನೆಂದೂಹಿಸಿ ಆನಂದಪರವಶರಾಗಿ ನರ್ತನಮಾಡಿದರು. ಮತ್ತೆ ಕೆಲವರು ಮನೋಹರವಾಗಿ ಹಾಡಿದರು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀ ಕೃಷ್ಣಜನ್ಮ ಖಂಡದ
ನಾರಾಯಣನಾರದ ಸಂವಾದದಲ್ಲಿ ಆಧ್ಯಾತ್ಮಿಕಯೋಗ ಕಥನವೆಂಬ
ಎಪ್ಪತ್ತನೆಯ ಅಧ್ಯಾಯವು ಮುಗಿದುದು.

ಎಪ್ಪತ್ತನೆಯ ಅಧ್ಯಾಯದ ಸಾರಾಂಶ

ಕೃಷ್ಣನನ್ನು ಕರೆತರಲು ಕಂಸನಿಂದ ಪ್ರೇರಿತನಾದ ಅಕ್ರೂರನು ತನ್ನ ಮನೆಗೆ ಹೋಗಿ ಊಟಮಾಡಿ " ಎಂದಿಗೆ ಶ್ರೀ ಕೃಷ್ಣಪರಮಾತ್ಮನ ದರ್ಶನಮಾಡುವೆನೋ " ಎಂಬ ಚಿಂತೆಯಿಂದಲೇ ಮಲಗಿ ನಿದ್ರಿಸಿ ಶುಭ ಸ್ವಪ್ನವನ್ನು ಕಂಡನು. ಬೆಳಗಿನ ಝಾವದಲ್ಲೆದ್ದು ತಾನು ಕಂಡ ಕನಸನ್ನು ಉದ್ಧವನಿಗೆ ಬಿನ್ನವಿಸಲು ಆತನು ಕೂಡಲೇ ಶ್ರೀ ಕೃಷ್ಣನನ್ನು ಕರೆತರಲು ಹೋಗುವಂತೆ ಅಕ್ರೂರನಿಗೆ ಆಜ್ಞಾಪಿಸಿದನು. ಅಕ್ರೂರನು ಮಾರ್ಗದಲ್ಲಿ ಉದ್ದಕ್ಕೂ ಶುಭಶಕುನಗಳನ್ನು ಕಾಣುತ್ತ ನಂದ ಗೋಕುಲಕ್ಕೆ ಬಂದು. ಅಲ್ಲಿ ಮನೋಹರವಾದ ಬೃಂದಾವನವನ್ನೂ, ರಾಸಮಂಡಲ ವನ್ನೂ, ಕಂಡು ಆನಂದಭರಿತನಾದನು. ನಂದಗೋಪನ ಮನೆಗೆ ಬಂದ ಅಕ್ರೂರ ನನ್ನು ನಂದಗೋಪ, ವೃಷಭಾನು ಮುಂತಾದವರೆಲ್ಲ ಸ್ವಾಗತಿಸಿ ಕುಶಲಪ್ರಶ್ನೆ ಮಾಡಿದರು. ಅಕ್ರೂರನು ಬಲರಾಮಕೃಷ್ಣರನ್ನು ಆಲಂಗಿಸಿಕೊಂಡು ರೋಮಾಂಚಿತ ಶರೀರನಾಗಿ ವಿಶ್ವರೂಪಧರನಾದ ಶ್ರೀ ಕೃಷ್ಣನ ನಾನಾ ರೂಪಗಳನ್ನು ಅಲ್ಲಿಯೇ ಕಂಡು ಆನಂದಪರವಶನಾದನು. ಮತ್ತು ಪರಮಾತ್ಮನನ್ನು ಅನನ್ಯಭಕ್ತಿಯಿಂದ ಸ್ತುತಿಸಿದನು. ಅನಂತರ ಅಕ್ರೂರನು ನಂದಗೋಪನನ್ನು ಕುರಿತು ಬಲರಾಮ ಕೃಷ್ಣರನ್ನು ಮಧುರೆಗೆ ಕಳುಹಿಸಿಕೊಡಬೇಕೆಂದೂ, ಅವರು ಅಲ್ಲಿ ಕಂಸನನ್ನು ನಿಗ್ರಹಿಸಿ ವಸುದೇವದೇವಕಿಯರನ್ನು ಬಂಧನದಿಂದ ಬಿಡಿಸುವರೆಂದೂ ಹೇಳಿದನು. ಅದರಂತೆ ಬಲರಾಮಕೃಷ್ಣರು ಅಕ್ರೂರನೊಡನೆ ಹೊರಡಲು ರಾಧಾ ಮುಂತಾದ ಗೋಪಿಯರು ಅಕ್ರೂರನನ್ನು ತಡೆದರು. ಆಗ ಶ್ರೀ ಕೃಷ್ಣನು ಆ ಗೋಪಿಯರನ್ನೆಲ್ಲ ಸಮಾಧಾನಗೊಳಿಸಿ ತಾನು ಬಲರಾಮ ಮತ್ತು ಅಕ್ರೂರನೊಡನೆ ದಿವ್ಯರಥದಲ್ಲಿ ಕುಳಿತು ಯಶೋದೆಯ ಮನೆಗೆ ಹೋಗಿ ತನ್ನ ತಾಯಿಯಾದ ಯಶೋದೆಯನ್ನು ಸಂತೋಷಪಡಿಸಿದನು. ಕೃಷ್ಣನು ಅಲ್ಲಿಯೇ ಇರುವುದನ್ನು ತಿಳಿದು ಗೋಪಗೋಪಿ ಯರೆಲ್ಲ ಆನಂದದಿಂದ ನಲಿದಾಡಿದರು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಏಕಸಪ್ತತಿತಮೋಽಧ್ಯಾಯಃ ॥

॥ ಶ್ರೀ ನಾರಾಯಣ ಉವಾಚ ॥

ರಾಧಿಕಾಯಾಂ ಚ ಸುಪ್ತಾಯಾಂ ಸುಪ್ತಾಸು ಗೋಪಿಕಾಸು ಚ ।
ಪುಷ್ಪಚಂದನತಲ್ಪೇ ಚ ವಾಯುನಾ ಸುರಭೀಕೃತೇ ॥ ೧ ॥

ತೃತೀಯಪ್ರಹರೇಽತೀತೇ ನಿಶಾಯಾಂ ಚ ಶುಭೇ ಕ್ಷಣೇ ।
ಶುಭಚಂದ್ರರ್ಕಯೋಗೇ ಚಾಽಮೃತಯೋಗಸಮನ್ವಿತೇ ॥ ೨ ॥

ಸೌಮ್ಯಸ್ವಾಮಿಯುತೇ ಲಗ್ನೇ ಸೌಮ್ಯಗ್ರಹವಿಲೋಕಿತೇ ।
ಪಾಪಗ್ರಹ ಸಮಾಸಕ್ತದುಷ್ಟದೋಷಾದಿವರ್ಜಿತೇ ॥ ೩ ॥

ಎಪ್ಪತ್ತೊಂದನೆಯ ಅಧ್ಯಾಯ

೧. ಶ್ರೀನಾರಾಯಣ :—ಎಲೈ ನಾರದನೇ ಅತ್ತ ರಾಧೆ ಮತ್ತು ಇತರ ಗೋಪಿಯರು ಮಲಗಿ ನಿದ್ರಿಸಲಾಗಿ ಶ್ರೀಕೃಷ್ಣನೂ ಸಹ ಮಂದಮಾರುತದಿಂದ ಆಹ್ಲಾದಕರವಾದ ಮತ್ತು ಸೌರಭ್ಯಯುತವಾದ ಪುಷ್ಪಚಂದನಶಯನದಲ್ಲಿ ಪವಡಿಸಿ ಸುಖನಿದ್ರೆಮಾಡಿದನು.

೨–೪. ರಾತ್ರಿಯ ಮೂರನೆಯ ಝಾಮವು ಕಳೆದನಂತರ, ಶುಭಕರವಾದ ಚಂದ್ರನಕ್ಷತ್ರಗಳ ಸಂಬಂಧವಿರುವ ಮತ್ತು ಅಮೃತಯೋಗದಿಂದ ಕೂಡಿರುವ, ಶುಭ ಮುಹೂರ್ತದಲ್ಲಿ, ಸೌಮ್ಯಗ್ರಹಗಳಿಂದ ನೋಡಲ್ಪಟ್ಟ ಮತ್ತು ಪಾಪಗ್ರಹ ಸಂಬಂಧಾದಿ ದುಷ್ಟದೋಷಾದಿಗಳಿಲ್ಲದಿರುವ ಸೌಮ್ಯಾಧಿಪತಿಯುಳ್ಳ ಲಗ್ನದಲ್ಲಿ

ಯಶೋದಾಂ ಬೋಧಯಾಮಾಸ ಕಾರಯಾಮಾಸ ಮಂಗಲಂ ।
ಬಂಧೂನಾಶ್ವಾಸಯಾಮಾಸ ಸಮುತ್ಥಾಯ ಹರಿಃ ಸ್ವಯಂ ॥ ೪ ॥

ವಾದ್ಯಂ ನಿಷೇಧಯಾಮಾಸ ರಾಧಿಕಾಭಯಭೀತವತ್ ।
ಸ್ವತಂತ್ರೋ ವಿಶ್ವಕರ್ತಾ ಚ ಪಾತಾ ಭರ್ತಾ ಸ್ವತಂತ್ರವತ್ ॥ ೫ ॥

ಪ್ರಕ್ಷಾಲ್ಯ ಪಾದಯುಗಲಂ ಧೃತ್ವಾ ಧೌತೇ ಚ ವಾಸಸೀ ।
ಉವಾಸ ಸಂಸ್ಕೃತೇ ಸ್ಥಾನೇ ವಿಲಿಪ್ತೇ ಚಂದನಾದಿನಾ ॥ ೬ ॥

ಫಲಪಲ್ಲವಸಂಯುಕ್ತಂ ಸಂಸ್ಕೃತಂ ಚಂದನಾದಿಭಿಃ ।
ವಾಮೇ ಕೃತ್ವಾ ಪೂರ್ಣಕುಂಭಂ ವಹ್ನಿಂ ವಿಪ್ರಂ ಸ್ವದಕ್ಷಿಣೇ ॥ ೭ ॥

ಪತಿಪುತ್ರವತೀಂ ದೀಪಂ ದರ್ಪಣಂ ಪುರತಸ್ತಥಾ ।
ದೂರ್ವಾಖಂಡಂ ಚ ಸುಸ್ನಿಗ್ಧಂ ಪುಷ್ಪಂ ಧಾನ್ಯಂ ಸಿತಂ ಶುಭಂ ॥ ೮ ॥

ಶ್ರೀಕೃಷ್ಣನು ಎಚ್ಚೆತ್ತು ಯಶೋದೆಯನ್ನೂ ಎಚ್ಚರಗೊಳಿಸಿ ಮಂಗಳ ಕಾರ್ಯಗಳನು. ಮಾಡಿಸಿ ಬಂಧುಗಳನ್ನು ಸಮಾಧಾನ ಪಡಿಸಿದನು.

೫. ಸ್ವತಂತ್ರನೂ, ವಿಶ್ವಕರ್ತನೂ, ಜಗತ್ಪಾಲಕನೂ, ಪೋಷಕನೂ ಆದ ಶ್ರೀಹರಿಯು ರಾಧೆಗೆ ಹೆದರಿದವನೋ ಎಂಬಂತೆ ಮಂಗಳವಾದ್ಯಗಳ ಧ್ವನಿಯನ್ನು ನಿಷೇಧಿಸಿದನು.

೬. ಕೈಕಾಲುಗಳನ್ನು ತೊಳೆದುಕೊಂಡು ಒಗೆದುಶುಭ್ರವಾದ ಎರಡು ವಸ್ತ್ರಗಳನ್ನುಟ್ಟು ಚಂದನಾದಿಗಳಿಂದ ವಿಲಿಪ್ತವಾದ ಸುಸಂಸ್ಕೃತಸ್ಥಾನದಲ್ಲಿ ಕುಳಿತುಕೊಂಡನು.

೭. ಹಣ್ಣು ಮತ್ತು ಚಿಗುರುಗಳಿಂದ ಕೂಡಿ ಚಂದನಾದಿಗಳಿಂದ ಸುಸಂಸ್ಕೃತವಾದ ಸ್ಥಳದಲ್ಲಿ ಕುಳಿತು ಎಡಭಾಗದಲ್ಲಿ ಪೂರ್ಣಕುಂಭವನ್ನೂ ಬಲಭಾಗದಲ್ಲಿ ಅಗ್ನಿ ಮತ್ತು ವಿಪ್ರರನ್ನೂ ಕುಳ್ಳಿರಿಸಿಕೊಂಡನು.

೮-೯. ಎದುರಿನಲ್ಲಿ ಪತಿಪುತ್ರವತಿಯರಾದ ಪತಿವ್ರತೆಯರಿದ್ದರು. ದೀಪ ಮತ್ತು ಕನ್ನಡಿಕಲಶವೂ ಇದ್ದಿತು. ಪುರೋಹಿತರು ಆಶೀರ್ವದಿಸಿ ಕೊಟ್ಟ ಹಸುರಾದ ಗರಿಕೆಯನ್ನೂ, ಸುವಾಸನೆಯಾದ ಹೂವನ್ನೂ, ಶುಕ್ಲಧಾನ್ಯವನ್ನೂ ಭಕ್ತಿಯಿಂದ

ಗುರುದತ್ತಂ ಗೃಹೀತ್ವಾ ಚ ಪ್ರದದೌ ಮಸ್ತಕೋಪರಿ ।
ಘೃತಂ ದದರ್ಶ ಮಾಧ್ವೀಕಂ ರಜತಂ ಕಾಂಚನಂ ದಧಿ　　॥ ೯ ॥

ಚಂದನಂ ಲೇಪನಂ ಕೃತ್ವಾ ಪುಷ್ಪಮಾಲಾಂ ಗಲೇ ದಧೌ ।
ಗುರುವರ್ಗಂ ಬ್ರಾಹ್ಮಣಂ ಚ ವಂದಯಾಮಾಸ ಭಕ್ತಿತಃ　　॥ ೧೦ ॥

ಶಂಖಧ್ವನಿಂ ವೇದಪಾಠಂ ಸಂಗೀತಂ ಮಂಗಲಾಷ್ಟಕಂ ।
ವಿಪ್ರಾಶೀರ್ವಚನಂ ರಮ್ಯಂ ಸುಶ್ರಾವ ಪರಮಾದರಂ　　॥ ೧೧ ॥

ಧ್ಯಾತ್ವಾ ಮಂಗಲರೂಪಂ ಚ ಸರ್ವತ್ರ ಮಂಗಲಪ್ರದಂ ।
ಚಿಕ್ಷೇಪ ದಕ್ಷಿಣಂ ಪಾದಂ ಸುಂದರಂ ಸ್ವಾತ್ಮವಿಗ್ರಹಂ　　॥ ೧೨ ॥

ವಿಧೃತ್ಯ ನಾಸಿಕಾಂ ವಾಮಭಾಗಂ ಮಧ್ಯಮಯಾ ವಿಭುಃ ।
ವಿಸೃಜ್ಯ ವಾಯುಸಂಪೂರ್ಣಂ ನಾಸಾದಕ್ಷಿಣರಂಧ್ರತಃ　　॥ ೧೩ ॥

ಸ್ವೀಕರಿಸಿ ತಲೆಯಮೇಲೆಧರಿಸಿಕೊಂಡು ತುಪ್ಪ, ಜೇನುತುಪ್ಪ, ಮೊಸರು ಮತ್ತು ಬೆಳ್ಳಿಚಿನ್ನಗಳನ್ನು ದರ್ಶನಮಾಡಿದನು.

೧೦. ಅಂಗಾಂಗಗಳಿಗೆಲ್ಲ ದಿವ್ಯಚಂದನವನ್ನು ಲೇಪಿಸಿಕೊಂಡು ಕಂಠದಲ್ಲಿ ಪುಷ್ಪಮಾಲಿಕೆಯನ್ನು ಧರಿಸಿದನು. ಅನಂತರ ಗುರುವರ್ಗದವರನ್ನೂ ಬ್ರಾಹ್ಮಣರನ್ನೂ ಭಕ್ತಿಯಿಂದ ವಂದಿಸಿದನು.

೧೧. ಶಂಖದ ಧ್ವನಿಯನ್ನೂ, ವೇದಘೋಷವನ್ನೂ, ಮಧುರವಾದ ಸಂಗೀತವನ್ನೂ, ಮಂಗಲಾಷ್ಟಕವನ್ನೂ, ರಮ್ಯವಾದ ವಿಪ್ರರ ಆಶೀರ್ವಚನವನ್ನೂ ಪರಮಾದರದಿಂದ ಕೇಳಿದನು.

೧೨. ಅತ್ಯಂತ ಸುಂದರವೂ, ಮಂಗಳಪ್ರದವೂ, ಆದ ಸ್ವಸ್ವರೂಪವನ್ನು (ಪರಮಾತ್ಮ ಸ್ವರೂಪವನ್ನು) ಮನಸ್ಸಿನಲ್ಲಿಯೇ ಧ್ಯಾನಮಾಡುತ್ತ ಬಲಗಾಲನ್ನು ಮುಂದಿಟ್ಟುಕೊಂಡು ಹೊರಟನು.

೧೩. ವಿಶ್ವವ್ಯಾಪಕನಾದ ಶ್ರೀಹರಿಯು ಮಧ್ಯಮನಾಡಿಯಿಂದ ವಾಯು ಪೂರ್ಣ ಮಾಡಿಕೊಂಡು ಎಡಭಾಗದ ನಾಸಾರಂಧ್ರವನ್ನು ಬಿಗಿಹಿಡಿದು ಪೂರ್ಣವಾದ ವಾಯುವನ್ನು ಮೂಗಿನ ಬಲಗಡೆಯ ರಂಧ್ರದಿಂದ ಹೊರಕ್ಕೆ ಬಿಟ್ಟನು

ತತೋ ಯಯೌ ನಂದನಂದೋ ನಂದಸ್ಯ ಪ್ರಾಂಗಣಂ ವರಂ ।
ಸಾನಂದಃ ಪರಮಾನಂದೋ ನಿತ್ಯಾನಂದಃ ಸನಾತನಃ ॥ ೧೪ ॥

ನಿತ್ಯೋಽನಿತ್ಯೋ ನಿತ್ಯಬೀಜಸ್ಸ್ವರೂಪೋ ನಿತ್ಯವಿಗ್ರಹಃ ।
ನಿತ್ಯಾಂಗಭೂತೋ ನಿತ್ಯೇಶೋ ನಿತ್ಯಕೃತ್ಯವಿಶಾರದಃ ॥ ೧೫ ॥

ನಿತ್ಯನೂತನರೂಪಶ್ಚ ನಿತ್ಯನೂತನಯೌವನಃ ।
ನಿತ್ಯೋ ನೂತನವೇಷಶ್ಚ ವಯಸಾ ನಿತ್ಯನೂತನಃ ॥ ೧೬ ॥

ನಿತ್ಯನೂತನಸಂಭಾಷೋ ಯತ್ಪ್ರೇಮ ನಿತ್ಯನೂತನಂ ।
ನಿತ್ಯನೂತನಸಂಪ್ರಾಪ್ತಿಃ ಸೌಭಾಗ್ಯಂ ನಿತ್ಯನೂತನಂ ॥ ೧೭ ॥

---

೧೪. ಅನಂತರ ನಂದನಂದನನೂ, ಪರಮಾನಂದಸ್ವರೂಪನೂ, ನಿತ್ಯಾನಂದನೂ ಸನಾತನನೂ ಆದ ಶ್ರೀ ಕೃಷ್ಣನು ನಂದಗೋಪನ ಮನೆಯ ಅಂಗಳಕ್ಕೆ ತೆರಳಿದನು.

೧೫. ನಿತ್ಯಾನಿತ್ಯನೂ, ನಿತ್ಯಕಾರಣನೂ, ನಿತ್ಯವಿಗ್ರಹನೂ, ನಿತ್ಯಾಂಗಭೂತನೂ. ನಿತ್ಯೇಶನೂ, ನಿತ್ಯಕೃತ್ಯ ವಿಶಾರದನೂ ಆದ ಶ್ರೀ ಕೃಷ್ಣನು ನಂದಗೋಪನ ಮನೆಗೆ ಹೋದನು.

೧೬. ಪ್ರತಿದಿನವೂ ಹೊಸಹೊಸ ರೂಪವನ್ನು ಧರಿಸುವವನೂ, ನವಯೌವನವುಳ್ಳವನೂ, ನವವೇಷಧಾರಿಯೂ, ನಿತ್ಯನೂತನ ವಯಸ್ಕನೂ ಆದ ಆ ನಿತ್ಯಸ್ವರೂಪನು ನಂದಗೋಪನ ಮನೆಗೆ ಹೋದನು.

೧೭. ಯಾವನೊಡನೆ ಸಂಭಾಷಿಸುವುದು ನಿತ್ಯನೂತನವಾಗಿರುವುದೋ, ಯಾವನ ಪ್ರೇಮವು ನಿತ್ಯನೂತನವಾಗಿರುವುದೋ, ಯಾವನ ಸಹವಾಸವೂ ಸೌಭಾಗ್ಯವೂ ನಿತ್ಯನೂತನವೋ ಅಂಥ ಶ್ರೀ ಕೃಷ್ಣನು ನಂದಗೋಪನ ಮನೆಗೆ ತೆರಳಿದನು.

ಸುಧಾರಸಪರಂ ಮಿಷ್ಟಂ ಯದ್ವಾಕ್ಯಂ ನಿತ್ಯನೂತನಂ ।
ನಿತ್ಯನೂತನಭಕ್ತಂ ಚ ಯತ್ಪದಂ ನಿತ್ಯನೂತನಂ ॥ ೧೮ ॥

ಸ್ಥಾಯಂಸ್ಥಾಯಂ ಪ್ರಾಂಗಣೇऽಸ್ಮಿನ್ಮಾಯೇಶೋ ಮಾಯಯಾ ಯುತಃ ।
ಅತೀವ ರಮ್ಯೇ ಸುಸ್ನಿಗ್ಧೇ ಬಭೂವ ಗಮನೋನ್ಮುಖಃ ॥ ೧೯ ॥

ರಂಭಾಸ್ತಂಭಸಮೂಹೈಶ್ಚ ರಸಾಲಪಲ್ಲವಾನ್ವಿತೈಃ ।
ಪಟ್ಟಸೂತ್ರನಿಬದ್ಧೈಶ್ಚ ಸುಂದರೈಶ್ಚ ಸುಸಂಸ್ಕೃತೇ ॥ ೨೦ ॥

ಪದ್ಮರಾಗೇಣ ಖಚಿತೇ ರಚಿತೇ ವಿಶ್ವಕರ್ಮಣಾ ।
ಕಸ್ತೂರೀಕುಂಕುಮಾಕ್ತೈಶ್ಚ ಚಂದನೈಶ್ಚ ಸುಸಂಸ್ಕೃತೇ ॥ ೨೧ ॥

ತತ್ರ ತಸ್ಥೌ ಸ್ವಯಂ ಕೃಷ್ಣಃ ಸಹಾऽಕ್ರೂರಃ ಸಬಾಂಧವಃ ।
ಯಶೋದಯಾ ಸಮಾಶ್ಲಿಷ್ಟೋ ವಾಮಪಾರ್ಶ್ವೇನ ಮಾಯಯಾ ॥ ೨೨ ॥

---

೧೮. ಅಮೃತರಸಕ್ಕಿಂತಲೂ ಮಧುರವಾದ ಯಾವನ ಮಾತು ನಿತ್ಯ ನೂತನವಾಗಿರುವುದೋ, ಯಾವನ ಭಕ್ತನೂ ಮತ್ತು ಪದವಿಯೂ ನಿತ್ಯನೂತನವೆನಿಸುವುವೋ ಆ ಶ್ರೀ ಕೃಷ್ಣನು ನಂದಗೋಪನ ಮನೆಗೆ ಬಂದನು.

೧೯. ಮಾಯಾಧಿಪತಿಯಾದ ಶ್ರೀ ಕೃಷ್ಣನು ಪ್ರಾಪಂಚಿಕ ಮಾಯೆಗೊಳಗಾಗಿ ತಂದೆಯಾದ ನಂದಗೋಪನ ರಮ್ಯವಾದ ಪ್ರಾಂಗಣದಲ್ಲಿ ಕ್ಷಣಕಾಲ ನಿಂತು ಪಿತೃಭಕ್ತಿಯಿಂದ ಕೂಡಿ ಪ್ರಯಾಣೋನ್ಮುಖನಾದನು.

೨೦. ನಂದಗೋಪನ ಪ್ರಾಂಗಣವು ಬಾಳೆಯ ಕಂಭಗಳಿಂದಲೂ, ಮಾವಿನ ಚಿಗುರುಗಳಿಂದಲೂ ಕಂಗೊಳಿಸುತ್ತಿದ್ದುದಲ್ಲದೆ ಸುಂದರವೂ ಸುಸಂಸ್ಕೃತವೂ ಆದ ರೇಷ್ಮೆಯ ದಾರಗಳಿಂದ ಶೋಭಿಸುತ್ತಿದ್ದಿತು.

೨೧-೨೨. ಪದ್ಮರಾಗರತ್ನಗಳಿಂದ ಖಚಿತವೂ, ವಿಶ್ವಕರ್ಮನಿಂದ ರಚಿತವೂ, ಕಸ್ತೂರಿ, ಕುಂಕುಮ ಮತ್ತು ಚಂದನಗಳಿಂದ ಸುಸಂಸ್ಕೃತವೂ ಆದ ಆ ನಂದಗೋಪನ ಮಂದಿರದಲ್ಲಿ ಶ್ರೀ ಕೃಷ್ಣನು ಅಕ್ರೂರನೊಡನೆಯೂ ಇತರ ಬಂಧುಗಳೊಡನೆಯೂ ಇದ್ದು ಮಾಯಾಮಾತೆಯಾದ ಯಶೋದೆಯಿಂದ ಎಡಭಾಗದಲ್ಲಿ ಗಾಢವಾಗಿ ಆಲಿಂಗಿತನಾದನು.

ನಂದೇನಾನಂದಯುಕ್ತೇನಾಶ್ಲಿಷ್ಟೋ ದಕ್ಷಿಣಪಾರ್ಶ್ವತಃ ।
ಸಂಭಾಷಿತೋ ಬಾಂಧವೈಶ್ಚ ಪಿತ್ರಾ ಮಾತ್ರಾ ಚ ಚುಂಬಿತಃ ॥ ೨೩ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣ ನಾರದಸಂವಾದೇ
ಯಾತ್ರಾಮಂಗಲಂ ನಾಮ
ಏಕಸಪ್ತತಿತಮೋಽಧ್ಯಾಯಃ

---

೨೩. ನಂದಗೋಪನೂ ಸಹ ಆನಂದದಿಂದ ಅವನನ್ನು ಬಲಭಾಗದಲ್ಲಿ ಆಲಂಗಿಸಿಕೊಂಡಿದ್ದನು. ಬಂಧು ಬಾಂಧವರೆಲ್ಲ ಅವನೊಡನೆ ಸಂಭಾಷಿಸುತ್ತಿರಲು ಮಾತಾಪಿತೃಗಳು ಅವನನ್ನು ಚುಂಬಿಸುತ್ತಿದ್ದರು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದ ಉತ್ತರಾರ್ಧದ
ನಾರಾಯಣ ನಾರದ ಸಂವಾದದಲ್ಲಿ ' ಯಾತ್ರಾಮಂಗಳ ' ವೆಂಬ
ಎಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

ಎಪ್ಪತ್ತೊಂದನೆಯ ಅಧ್ಯಾಯದ ಸಾರಾಂಶ

ಶ್ರೀ ಕೃಷ್ಣನು ಆದಿನ ರಾತ್ರಿ ಅಕ್ರೂರನೊಡನೆ ಯಶೋದೆಯ ಮಂದಿರದಲ್ಲಿ ಮಲಗಿದ್ದು, ಮರುದಿನ ಶುಭಮುಹೂರ್ತದಲ್ಲೆದ್ದು ಗುರುಹಿರಿಯರ ಆಶೀರ್ವಾದ ವನ್ನು ಪಡೆದು ನಂದಗೋಪನ ಮನೆಗೆ ಬಂದನು. ಯಶೋದೆಯೂ ಪುತ್ರವಿರಹ ವನ್ನು ಸಹಿಸಲಾರದೆ ಅಲ್ಲಿಗೆ ಬಂದಳು. ಅಲ್ಲಿ ಮಾತಾಪಿತೃಗಳಿಂದ ಆಲಿಂಗಿತನಾಗಿ ಶ್ರೀ ಕೃಷ್ಣನು ಬಂಧು ಬಳಗದವರೊಡನೆ ಸುಖವಾಗಿದ್ದನು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ದ್ವಿಸಪ್ತತಿತಮೋಽಧ್ಯಾಯಃ ॥

॥ ಶ್ರೀ ನಾರಾಯಣ ಉವಾಚ ॥

ಅಥ ಕೃಷ್ಣೋ ಗುರುಂ ನತ್ವಾ ನಿರ್ಗಮ್ಯ ಶಿಬಿರಾನ್ಮುನೇ ।
ಆರುಹ್ಯ ಸ್ವರ್ಗಯಾನಂ ಚ ಶುಭಾಂ ಮಧುಪುರೀಂ ಯಯೌ ॥ ೧ ॥

ವಿವೇಶ ಮಧುರಾಂ ರಮ್ಯಾಂ ಸಹಾಕ್ರೂರಗಣೈಃ ಸಮಂ ।
ನಿರ್ಜಿತ್ಯ ಶಕ್ರನಗರೀಂ ಶೋಭಯಾಯುಕ್ತಾಂ ಮನೋಹರಾಂ ॥ ೨ ॥

ರತ್ನಶ್ರೇಷ್ಠೇನ ಖಚಿತಾಂ ರಚಿತಾಂ ವಿಶ್ವಕರ್ಮಣಾ ।
ಅಮೂಲ್ಯರತ್ನಕಲಶೈ ರಾಜಿತೈಶ್ಚ ವಿರಾಜಿತಾಂ ॥ ೩ ॥

ಎಪ್ಪತ್ತೆರಡನೆಯ ಅಧ್ಯಾಯವು

೧. ಶ್ರೀನಾರಾಯಣಃ—ಅನಂತರ ಶ್ರೀಕೃಷ್ಣನು ಗುರುಹಿರಿಯರಿಗೆ ನಮಸ್ಕರಿಸಿ ನಂದಗೋಪನ ಶಿಬಿರದಿಂದ ಹೊರಟು ಸ್ವರ್ಗಯಾನವನ್ನೇರಿ ಶುಭಕರವಾದ ಮಧುರಾಪಟ್ಟಣಕ್ಕೆ ತೆರಳಿದನು.

೨. ಇಂದ್ರನ ರಾಜಧಾನಿಯಾದ ಅಮರಾವತಿಗಿಂತಲೂ ಶೋಭಾಯುತ್ತವೂ ಮನೋಹರವೂ ಆದ ಮಧುರಾನಗರಿಗೆ ಬಲರಾಮ ಅಕ್ರೂರ ಮುಂತಾದ ಪರಿವಾರದವರೊಡಗೂಡಿ ತೆರಳಿದನು.

೩. ವಿಶ್ವಕರ್ಮನಿಂದ ರಚಿತವಾದ ಆ ನಗರಿಯು ಅಮೂಲ್ಯರತ್ನಗಳಿಂದ ಖಚಿತವಾಗಿ ಥಳಥಳನೆ ಹೊಳೆಯುವ ಶ್ರೇಷ್ಠವಾದ ರತ್ನಕಲಶಗಳಿಂದ ವಿರಾಜಿಸುತ್ತಿದ್ದಿತು.

ರಾಜಮಾರ್ಗಶತೈರಿಷ್ಟೈರ್ವೇಷ್ಟಿತಾಂ ರುಚಿರೈರ್ವರೈಃ ।
ಚಂದ್ರಾಕಾರೈಶ್ಚಂದ್ರಸಾರೈರ್ಮಣಿಭಿಃ ಪರಿಸಂಸ್ಕೃತೈಃ ॥ ೪ ॥

ವಿಚಿತ್ರೈರ್ಮಣಿಸಾರೈಶ್ಚ ವೀಥೀಶತವಿನಿರ್ಮಿತೈಃ ।
ಶೋಭಿತೈರ್ವಣಿಜೈಃ ಶ್ರೇಷ್ಠೈಃ ಪುಣ್ಯವಸ್ತುಸಮನ್ವಿತೈಃ ॥ ೫ ॥

ಸರೋವರಸಹಸ್ರೈಶ್ಚ ಪರಿತಃ ಪರಿಶೋಭಿತಾಂ ।
ಶುದ್ಧಸ್ಫಟಿಕಸಂಕಾಶೈಃ ಪದ್ಮರಾಗವಿರಾಜಿತೈಃ ॥ ೬ ॥

ರತ್ನಾಲಂಕಾರಭೂಷಾಢ್ಯೈಃ ಶೋಭಿತಾಂ ಪದ್ಮಿನೀಗಣೈಃ ।
ಸ್ಥಿರಯೌವನಸಂಯುಕ್ತೈರ್ನಿಮೇಷರಹಿತೈಃ ಪರೈಃ ॥ ೭ ॥

ಸಾಕ್ಷತೈರೂರ್ಧ್ವವದನೈಃ ಕೃಷ್ಣದರ್ಶನಲಾಲಸೈಃ ।
ಭ್ರೂಭಂಗಲೀಲಾಲೋಲೈಶ್ಚ ಶಶ್ವಚ್ಚಂಚಲಲೋಚನೈಃ ॥ ೮ ॥

---

೪ ಅತ್ಯಂತಮನೋಹರವೂ, ಅಭಿಮತವೂ ಆದ ನೂರಾರು ರಾಜಮಾರ್ಗಗಳಿಂದ ಆ ನಗರಿಯು ಶೋಭಿಸುತ್ತಿದ್ದುದಲ್ಲದೆ ಚಂದ್ರಾಕಾರವಾದ ಚಂದ್ರಕಾಂತ ಮಣಿಗಳಿಂದ ಸುಸಂಸ್ಕೃತವಾಗಿದ್ದಿತು.

೫. ಆ ನಗರಿಯ ನೂರಾರು ಬೀದಿಗಳಲ್ಲಿ ವಿಚಿತ್ರವಾದ ಮಣಿಗಳ ರಾಶಿಗಳು ನಿರ್ಮಿತವಾಗಿದ್ದವು ಶ್ರೇಷ್ಠರಾದ ವರ್ತಕರು ಅನೇಕರೀತಿಯ ವಿಕ್ರಯ ವಸ್ತುಗಳನ್ನು ಸುಸಜ್ಜಿತವಾಗಿ ರಚಿಸಿದ್ದರು.

೬ ಪದ್ಮರಾಗರತ್ನಗಳಿಂದ ನಿರ್ಮಿತವಾಗಿ ಶುದ್ಧಸ್ಫಟಿಕದಂತೆ ತಿಳಿನೀರಿನಿಂದ ಕೂಡಿದ ನೂರಾರು ಸರೋವರಗಳಿಂದ ಆನಗರಿಯು ಸುತ್ತಲೂ ಸುತ್ತುವರಿಯಲ್ಪಟ್ಟದ್ದಿತು.

೭-೮. ಸ್ಥಿರಯೌವನವತಿಯಾದ ಅನೇಕ ಪದ್ಮಿನೀ ಜಾತಿಯ ಸ್ತ್ರೀಯರು ರತ್ನಭೂಷಣಗಳಿಂದಲಂಕೃತರಾಗಿ ಅನಿಮಿಷಲೋಚನರಾಗಿ, ಕೈಯಲ್ಲಿ ಅಕ್ಷತೆಯನ್ನು ಧರಿಸಿ ಕೃಷ್ಣನನ್ನು ನೋಡುವ ಬಯಕೆಯಿಂದ ಅವನಿಗೆ ಅಭಿಮುಖರಾಗಿ ಭ್ರೂಭಂಗಲೀಲೆಯಿಂದ ಕೂಡಿದ ಚಂಚಲವಾದ ಕಟಾಕ್ಷವನ್ನು ಬೀರುತ್ತಿದ್ದರು.

ಶಶ್ವತ್ಕಾಮಸಮಾಯುಕ್ತೈಃ ಪೀನಶ್ರೋಣಿಪಯೋಧರೈಃ ।
ಕೋಮಲಾಂಗೈರ್ಮಧ್ಯಕೂಷ್ಟೈ ರತಿರಾಸವಿಶಾರದೈಃ ॥ ೯ ॥

ರತ್ನನಿರ್ಮಾಣಯಾನಾನಾಂ ಕೋಟಿಭಿಃ ಪರಿಶೋಭಿತಾಂ ।
ಭೂಷಣೈರ್ಭೂಷಿತಾಭಿಶ್ಚ ಚಿತ್ರಿತಾಭಿಶ್ಚ ಚಿತ್ರಕೈಃ ॥ ೧೦ ॥

ನಾನಾಪ್ರಕಾರಶ್ರೀಯುಕ್ತಾಂ ಪುಷ್ಪೋದ್ಯಾನತ್ರಿಕೋಟಿಭಿಃ ।
ನಾನಾಪುಷ್ಪೈಃ ಪುಷ್ಪಿತಾಭಿರ್ಯುಕ್ತಾಭಿರ್ಮಧುಸೂದನೈಃ ॥ ೧೧ ॥

ಮಾಧುರ್ಯಮಧುಸಂಯುಕ್ತೈರ್ಮಧುಲುಬ್ಧೈರ್ಮುದಾನ್ವಿತೈಃ ।
ಮಾಧ್ವೀಕಮಧುಮತ್ತೈಶ್ಚ ಯುಕ್ತೈರ್ಮಧುಕರೀಚಯೈಃ ॥ ೧೨ ॥

ನಾನಾಪ್ರಕಾರದುರ್ಗೈಶ್ಚ ದುರ್ಗಮ್ಯಾಂ ವೈರಿಣಾಂ ಗಣೈಃ ।
ರಕ್ಷಿತಾಂ ರಕ್ಷಕೈಃ ಶಶ್ವದ್ರಕ್ಷಾ ಶಾಸ್ತ್ರವಿಶಾರದೈಃ ॥ ೧೩ ॥

---

೯. ಅತ್ಯುನ್ನತವಾದ ಶ್ರೋಣೀಬಿಂಬ ಮತ್ತು ಸ್ತನಗಳುಳ್ಳ ಆ ಕೋಮಲಾಂಗಿಯರು ಸರ್ವದಾ ಕಾಮಾಸಕ್ತರಾಗಿ ರತಿಕ್ರೀಡೆಯಲ್ಲಿಯೂ, ರಾಸಕ್ರೀಡೆಯಲ್ಲಿಯೂ ಚತುರೆಯರಾಗಿದ್ದರು.

೧೦. ದಿವ್ಯಭೂಷಣಗಳಿಂದ ಭೂಷಿತವಾಗಿ ಅನೇಕ ಚಿತ್ರಗಳಿಂದ ಚಿತ್ರಿತವಾಗಿದ್ದ ರತ್ನನಿರ್ಮಿತವಾದ ಕೋಟ್ಯಂತರ ವಾಹನಗಳು ಆ ನಗರದಲ್ಲಿ ಪರಿಶೋಭಿಸುತ್ತಿದ್ದವು.

೧೧–೧೨. ವಿಕಾಸಗೊಂಡು ಮಕರಂದವನ್ನು ಸುರಿಸುತ್ತಿದ್ದ ಮೂರುಕೋಟಿ ಪುಷ್ಪೋದ್ಯಾನಗಳಿಂದ ಆ ನಗರವು ಮನೋಹರವಾಗಿ ಕಂಗೊಳಿಸುತ್ತಿತ್ತು. ಮಧುರವಾದ ಆ ಪುಷ್ಪರಸವನ್ನು ಪಾನಮಾಡಲು ಮಧುಲುಬ್ಧವಾದ ಮಧುಕರಗಳು ಮುದದಿಂದ ಗುಂಪಾಗಿ ಸೇರಿ ಮಕರಂದ ಪಾನಮಾಡಿ ಮುದದಿಂದ ಝೇಂಕರಿಸುತ್ತಿದ್ದುವು.

೧೩. ಶತ್ರುಗಳಿಗೆ ಪ್ರವೇಶಿಸಲಸಾಧ್ಯವಾದ ನಾನಾವಿಧ ವಿಚಿತ್ರದುರ್ಗಗಳು ಆ ನಗರದ ಸುತ್ತಲೂ ಇದ್ದುವು. ರಕ್ಷಣಾಶಾಸ್ತ್ರದಲ್ಲಿ ನಿಪುಣರಾದ ರಕ್ಷಕರು ಆ ನಗರಿಯನ್ನು ರಕ್ಷಿಸಿಕೊಂಡಿದ್ದರು.

ತ್ರಿಕೋಟ್ಯಟ್ಟಾಲಿಕಾಭಿಶ್ಚ ಸಂಯುಕ್ತಾಂ ಸುಮನೋಹರಾಂ ।
ರಚಿತಾಂ ಕಿಲ ಸದ್ರತ್ನೈರ್ವಿಚಿತ್ರೈರ್ವಿಶ್ವಕರ್ಮಣಾ　　|| ೧೪ ||

ಏವಂಭೂತಾಂ ಚ ಮಥುರಾಂ ದೃಷ್ಟ್ವಾ ಕಮಲಲೋಚನಃ ||
ದದರ್ಶ ಪಥಿ ಕುಬ್ಜಾಂ ತಾಂ ವೃದ್ಧಾಮತಿಜರಾತುರಾಂ　　|| ೧೫ ||

ಯಾಂತೀಂ ದಂಡಸಹಾಯೇನ ಚಾತಿನಮ್ರಾಂ ನಮದ್ವಲೀಂ ।
ರುಷಿತಾಂ ವಿಕೃತಾಕಾರಾಂ ಬಿಭ್ರತೀಂ ಚಂದನದ್ರವಂ　　|| ೧೬ ||

ಕಸ್ತೂರೀಕುಂಕುಮಾಕ್ತಂ ಚ ಸ್ಪೃಷ್ಟಮಾತ್ರೇಣ ನಾರದ ।
ಸುಗಂಧಿಮಕರಂದೇನ ಗಂಧಾಢ್ಯಂ ಸುಮನೋಹರಂ　　|| ೧೭ ||

ಸಾ ದೃಷ್ಟ್ವಾ ಸಸ್ಮಿತಾ ವೃದ್ಧಾ ಶ್ರೀಕಾಂತಂ ಶಾಂತಮೀಶ್ವರಂ ।
ಶ್ರೀಯುಕ್ತಂ ಶ್ರೀನಿವಾಸಂ ತಂ ಶ್ರೀಬೀಜಂ ಶ್ರೀನಿಕೇತನಂ　　|| ೧೮ ||

---

೧೪. ದೇವಶಿಲ್ಪಿಯಾದ ವಿಶ್ವಕರ್ಮನಿಂದ ಶ್ರೇಷ್ಠರತ್ನಗಳಿಂದ ನಿರ್ಮಿತವಾದ ಮೂರು ಕೋಟಿ ಮಹಡಿಗಳಿಂದ ಆ ನಗರಿಯು ವಿಚಿತ್ರವೂ, ಮನೋಹರವೂ ಆಗಿದ್ದಿತು.

೧೫. ಈ ರೀತಿಯಾಗಿ ಮಥುರಾನಗರಿಯನ್ನು ನೋಡಿ ಕಮಲಲೋಚನನಾದ ಶ್ರೀ ಕೃಷ್ಣನು ವಿಸ್ಮಯಗೊಂಡು ಮಾರ್ಗಮಧ್ಯದಲ್ಲಿ ಅತಿವೃದ್ಧಳೂ, ಜರಾಪೀಡಿತಳೂ ಆದ ಕುಬ್ಜೆಯನ್ನು ನೋಡಿದನು.

೧೬. ಸೊಂಟವೂ, ತ್ರಿವಳಿಗಳೂ ಬಗ್ಗಿಹೋಗಿರುವ ಆ ಕುಬ್ಜೆಯು ದಂಡದ ಸಹಾಯದಿಂದ ಮುಂದಕ್ಕೆ ನಡೆಯುತ್ತಿದ್ದಳು. ವಿಕೃತಾಕಾರಳೂ ಕುಪಿತಳೂ ಆದ ಆ ಕುಜ್ಜೆಯು ಚಂದನ ದ್ರವವನ್ನು ಮೈಗೆಲ್ಲಾ ಲೇಪಿಸಿ ಕೊಂಡಿದ್ದಳು.

೧೭. ಎಲೈ ನಾರದನೇ, ಆ ಚಂದನ ದ್ರವವು ಕಸ್ತೂರೀ ಕುಂಕುಮಗಳಿಂದ ಮಿಶ್ರಿತವಾಗಿ ಸುಗಂಧವನ್ನು ಬೀರುವ ಮಕರಂದದಂತೆ ಮನೋಹರವಾಗಿದ್ದಿತು.

೧೮. ವೃದ್ಧೆಯಾದ ಆ ಕುಬ್ಜೆಯು ಲಕ್ಷ್ಮೀಕಾಂತನೂ, ಶಾಂತಾಕಾರನೂ, ಲಕ್ಷ್ಮಿಯ ಆವಾಸಸ್ಥಾನನೂ, ಸಂಪತ್ತಿಗೆ ತೌರುಮನೆಯೂ, ಸರ್ವೇಶ್ವರನೂ ಆದ ಆ ಶ್ರೀನಿವಾಸ (ಶ್ರೀ ಕೃಷ್ಣ) ನನ್ನು ನೋಡಿ ಸ್ಮಿತಮುಖಿಯಾದಳು.

ಪ್ರಣಮ್ಯ ಸಹಸಾ ಮೂರ್ಧ್ನಾ ಭಕ್ತಿನಮ್ರಾ ಪುಟಾಂಜಲಿಃ ।
ಪ್ರದದೌ ಚಂದನಂ ತಸ್ಯ ಗಾತ್ರೇ ಶ್ಯಾಮಲಸುಂದರೇ ॥ ೧೯ ॥

ಗಾತ್ರೇಷು ತದ್ಗಣಾನಾಂ ಚ ಸ್ವರ್ಣಪಾತ್ರಕರಾ ವರಾ ।
ಕೃತ್ವಾ ಪ್ರದಕ್ಷಿಣಂ ಕೃಷ್ಣಂ ಪ್ರಣನಾಮ ಪುನಃಪುನಃ ॥ ೨೦ ॥

ಶ್ರೀಕೃಷ್ಣದೃಷ್ಟಿಮಾತ್ರೇಣ ಶ್ರೀಯುಕ್ತಾ ಸಾ ಬಭೂವ ಹ ।
ಸಹಸಾ ಶ್ರೀಸಮಾ ರಮ್ಯಾ ರೂಪೇಣ ಯೌವನೇನ ಚ ॥ ೨೧ ॥

ವಹ್ನಿಶುದ್ಧಾ ಸುವಸನಾ ರತ್ನಭೂಷಣಭೂಷಿತಾ ।
ಯಥಾ ದ್ವಾದಶವರ್ಷೀಯಾ ಕನ್ಯಾ ಧನ್ಯಾ ಮನೋಹರಾ ॥ ೨೨ ॥

ಬಿಂಬೋಷ್ಠೀ ಸಸ್ಮಿತಾ ಶ್ಯಾಮಾ ತಪ್ತಕಾಂಚನಸನ್ನಿಭಾ ।
ಸುಶ್ರೋಣೀ ಸುದತೀ ಬಿಲ್ವಫಲತುಲ್ಯಪಯೋಧರಾ ॥ ೨೩ ॥

---

೧೯. ಕೂಡಲೇ ಭಕ್ತ್ಯುದ್ರೇಕದಿಂದ ಕೈ ಮುಗಿದುಕೊಂಡು ತಲೆಬಾಗಿ ನಮಸ್ಕರಿಸಿ, ಶ್ಯಾಮಸುಂದರನಾದ ಅವನ ಅಂಗಾಂಗಳಿಗೂ ಚಂದನ ಗಂಧವನ್ನು ಲೇಪಿಸಿದಳು.

೨೦. ಕೈಯಲ್ಲಿ ಸುವರ್ಣಪಾತ್ರೆಯನ್ನು ಧರಿಸಿದ್ದ ಆ ಕುಬ್ಜೆಯು ಅದರಲ್ಲಿದ್ದ ಚಂದನವನ್ನು ಶ್ರೀ ಕೃಷ್ಣನ ಪರಿವಾರದವರ ಅಂಗಾಂಗಗಳಿಗೂ ಲೇಪಿಸಿದಳು. ಅನಂತರ ಶ್ರೀ ಕೃಷ್ಣನಿಗೆ ಪ್ರದಕ್ಷಿಣೆಮಾಡಿ ಪುನಃ ಪುನಃ ನಮಸ್ಕರಿಸಿದಳು.

೨೧. ಶ್ರೀಕೃಷ್ಣನ ಪ್ರಸನ್ನದೃಷ್ಟಿಗೆ ಬಿದ್ದಮಾತ್ರದಿಂದಲೇ ಆಕುಬ್ಜೆಯು ಅತ್ಯಂತ ಸುಂದರಿಯಾದಳು. ಇದ್ದಕ್ಕಿದ್ದಂತೆಯೇ ಅವಳು ರೂಪಯೌವನಗಳಲ್ಲಿ ಲಕ್ಷ್ಮೀದೇವಿಯಂತೆ ಮನೋಹರಳಾದಳು.

೨೨. ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನುಟ್ಟು, ರತ್ನಭೂಷಣಗಳಿಂದ ಭೂಷಿತಳಾಗಿದ್ದ ಆ ಕುಬ್ಜೆಯು ಹನ್ನೆರಡುವರ್ಷದ ಕನ್ಯೆಯಂತೆ ಮನೋಹರ ಳಾದಳು.

೨೩ ಯೌವನಮಧ್ಯಸ್ಥಳೂ, ಪುಟಕ್ಕೆ ಹಾಕಿದ ಚಿನ್ನದಂತೆ ಹೊಂಬಣ್ಣ ವುಳ್ಳವಳೂ, ಸ್ಮಿತಮುಖಿಯೂ, ಸುಂದರವಾದ ದಂತಪಂಕ್ತಿಯುಳ್ಳವಳೂ, ಆದ ಆಕೆಯ ತುಟಿಯು ಬಿಂಬಫಲದಂತೆ ಮನೋಹರವಾಗಿಯೂ, ಸ್ತನಗಳು ಬಿಲ್ವಫಲ ದಂತೆ ವರ್ತುಳಾಕಾರವಾಗಿಯೂ ಶ್ರೋಣೀಬಿಂಬವು ವಿಸ್ತಾರವಾಗಿಯೂ ಇದ್ದವು.

ಅಮೂಲ್ಯರತ್ನನಿರ್ಮಾಣಹಾರಸಾರವಿರಾಜಿತಾ ।
ಗಜೇಂದ್ರರಾಜಗಮನಾ ರತ್ನಮಂಜೀರರಂಜಿತಾ ॥ ೨೪ ॥

ಬಿಭ್ರತೀ ಕಬರೀಭಾರಂ ಮಾಲತೀಮಾಲ್ಯವೇಷ್ಟಿತಂ ।
ರಕ್ಷಿತಂ ವಾಮಭಾಗೇನ ರುಚಿರಂ ವರ್ತುಲಾಕೃತಿಂ ॥ ೨೫ ॥

ಸಿಂದೂರಬಿಂದುಂ ದಧತೀ ದಾಡಿಮೀಕುಸುಮಾಕೃತಿಂ ।
ಕಸ್ತೂರೀಬಿಂದುಮುಪರಿ ಸಾರ್ಧಂ ಚಂದನಬಿಂದುಭಿಃ ॥ ೨೬ ॥

ರತ್ನದರ್ಪಣಹಸ್ತಾ ಚ ಪ್ರಶಸ್ತಾ ರತಿಕರ್ಮಸು ।
ಶ್ರೀಕೃಷ್ಣಂ ವರಯಾಮಾಸ ಲೋಲಲೋಚನಕೋಣತಃ ॥ ೨೭ ॥

ಶ್ರೀವಾಸಸ್ತಾಂ ಸಮಾಶ್ವಾಸ್ಯ ಯಯೌ ಸ್ಥಾನಾಂತರಂ ಪರಂ ।
ಕೃತಾರ್ಥರೂಪಾ ಸಾ ಪ್ರೀತ್ಯಾ ಯಯೌ ಪದ್ಮಾ ಯಥಾಲಯಂ ॥ ೨೮ ॥

---

೨೪. ಅಮೂಲ್ಯರತ್ನಗಳಿಂದ ನಿರ್ಮಿತವಾದ ಶ್ರೇಷ್ಠವಾದ ಹಾರಗಳನ್ನು ಕಂಠದಲ್ಲಿ ಧರಿಸಿ, ರತ್ನದ ನೂಪುರಗಳನ್ನು ಕಾಲಿಗೆ ಹಾಕಿಕೊಂಡಿದ್ದ ಆಕೆಯು ಗಜರಾಜನಂತೆ ಮಂದಗಮನೆಯಾಗಿದ್ದಳು.

೨೫. ಜಾಜೀಹೂವಿನ ಮಾಲೆಯಿಂದ ಅಲಂಕೃತವಾಗಿ ವರ್ತುಳಾಕಾರವೂ ಮನೋಹರವೂ ಆದ ಹೆರಳನ್ನು ಎಡಭಾಗದಲ್ಲಿ ಧರಿಸಿಕೊಂಡಿದ್ದಳು.

೨೬. ಹಣೆಯಲ್ಲಿ ದಾಳಿಂಬೇ ಹೂವಿನ ಆಕಾರದಲ್ಲಿ ಸಿಂಧೂರದ ಬೊಟ್ಟನ್ನಿಟ್ಟು ಅದರಮೇಲೆ ಕಸ್ತೂರಿ ಮತ್ತು ಚಂದನದ ಬೊಟ್ಟುಗಳನ್ನು ಅಲಂಕರಿಸಿಕೊಂಡಿದ್ದಳು.

೨೭. ರತಿಕರ್ಮದಲ್ಲಿ ನಿಪುಣೆಯಾದ ಆಕೆಯು ಕೈಯಲ್ಲಿ ರತ್ನಗನ್ನಡಿಯನ್ನು ಹಿಡಿದು ತನ್ನ ಚಂಚಲವಾದ ಕಟಾಕ್ಷಗಳಿಂದ ಶ್ರೀ ಕೃಷ್ಣನನ್ನು ನೋಡಿ ಕಾಮಿಸಿದಳು.

೨೮. ಅನಂತರ ಲಕ್ಷ್ಮೀನಿವಾಸನಾದ ಶ್ರೀ ಕೃಷ್ಣನು ಅವಳನ್ನು ಸಮಾಧಾನಪಡಿಸಿ ಸ್ಥಾನಾಂತರಕ್ಕೆ ತೆರಳಿದನು. ಕೃತಕೃತ್ಯಳಾದ ಆ ಕುಬ್ಜೆಯೂ ಸಹ ಸಂತೋಷಗೊಂಡವಳಾಗಿ ಲಕ್ಷ್ಮೀದೇವಿಯಂತೆ ತನ್ನ ಮಂದಿರಕ್ಕೆ ತೆರಳಿದಳು.

ಸಾ ದದರ್ಶ ಸ್ವಭವನಂ ಯಥಾ ಪದ್ಮಾಲಯಾಲಯಂ ।
ರತ್ನಶಯ್ಯಾವಿರಚಿತಂ ಸದ್ರತ್ನಸಾರನಿರ್ಮಿತಂ ॥ ೨೯ ॥

ರತ್ನಪ್ರದೀಪರಾಜೀಭೀ ರಾಜಿತಾಭಿಶ್ಚ ರಾಜಿತಂ ।
ರತ್ನದರ್ಪಣರಾಜ್ಯೈಶ್ಚ ರಾಜಿತಂ ಪರಿತಸ್ತತಃ ॥ ೩೦ ॥

ಸಿಂದೂರವಸ್ತ್ರತಾಂಬೂಲಂ ಶ್ವೇತಚಾಮರಮಾಲ್ಯಕಂ ।
ಬಿಭ್ರತೀಭಿಶ್ಚ ದಾಸೀಭಿರ್ವೇಷ್ಟಿತಂ ದಾರಸಂಘಕೈಃ ॥ ೩೧ ॥

ತತ್ರ ಗತ್ವಾ ಚ ಭುಕ್ತ್ವಾ ಚ ಮಿಷ್ಟಾನ್ನಂ ಪರಮಂ ಮುದಾ ।
ಸುಷ್ವಾಪ ರತ್ನಪರ್ಯಂಕೇ ಸಾ ದಾಸೀಭಿಶ್ಚ ಸೇವಿತಾ ॥ ೩೨ ॥

ಸಕರ್ಪೂರಂ ಚ ತಾಂಬೂಲಂ ಕಸ್ತೂರೀಕುಂಕುಮಾನ್ವಿತಂ ।
ಚಂದನಂ ಸ್ಥಾಪಯಾಮಾಸ ಸ್ವತಲ್ಪೇ ಹರಯೇ ಸತೀ ॥ ೩೩ ॥

---

೨೯. ಅಲ್ಲಿ ಲಕ್ಷ್ಮೀದೇವಿಯ ಮಂದಿರದಂತೆ ಶ್ರೇಷ್ಠರತ್ನಗಳಿಂದ ನಿರ್ಮಿತವಾಗಿ ರತ್ನಪರ್ಯಂಕದಿಂದ ಶೋಭಿಸುತ್ತಿರುವ ತನ್ನ ಸುಂದರ ಮಂದಿರವನ್ನು ನೋಡಿದಳು.

೩೦. ಆ ಮಂದಿರದ ಸುತ್ತಲೂ ರತ್ನದೀಪಗಳು ಶೋಭಿಸುತ್ತಿದ್ದುವಲ್ಲದೆ ಶ್ರೇಷ್ಠವಾದ ರತ್ನದ ಕನ್ನಡಿಗಳೂ ಕಂಗೊಳಿಸುತ್ತಿದ್ದುದರಿಂದ ಅದರ ಮನೋಹರತೆಯು ಅವರ್ಣನೀಯವಾಗಿತ್ತು.

೩೧. ಸಿಂದೂರ, ವಸ್ತ್ರ ಮತ್ತು ತಾಂಬೂಲವನ್ನೂ, ಶ್ವೇತಚಾಮರವನ್ನೂ, ಪುಷ್ಪಮಾಲೆಯನ್ನೂ ಧರಿಸಿರುವ ದಾಸಿಯರಿಂದ ಪರಿವೃತವಾಗಿದ್ದ ಆ ಮಂದಿರದಲ್ಲಿ ಅಸಂಖ್ಯದಾಸರೂ ಸಹ ಇದ್ದರು.

೩೨. ಕುಬ್ಜೆಯು ಅಲ್ಲಿಗೆ ಹೋಗಿ ಪರಮಸಂತೋಷದಿಂದ ಮಿಷ್ಟಾನ್ನವನ್ನು ಊಟಮಾಡಿ, ದಾಸಿಯರಿಂದ ಸೇವಿತಳಾಗಿ ರತ್ನಮಂಚದಲ್ಲಿ ಪವಡಿಸಿದಳು.

೩೩. ಪತಿವ್ರತೆಯಾದ ಆ ಕುಬ್ಜೆಯು ಪಚ್ಚಕರ್ಪೂರದಿಂದ ಸುವಾಸಿತವಾಗಿದ್ದ ತಾಂಬೂಲವನ್ನೂ, ಕಸ್ತೂರಿ ಮತ್ತು ಕುಂಕುಮದಿಂದ ಮಿಶ್ರಿತವಾದ ದಿವ್ಯ ಚಂದನವನ್ನೂ ಶ್ರೀಹರಿಗಾಗಿ ತನ್ನ ಮಂಚದಲ್ಲಿಟ್ಟಳು.

ಮಾಲತೀಮಾಲ್ಯಯುಗಲಂ ಕರ್ಪೂರಾದಿಸುವಾಸಿತಂ ।
ಶೀತಲಂ ಸಲಿಲಂ ಸ್ವಾದು ಮಿಷ್ಟಾನ್ನಂ ಸ್ವಸಮೀಪತಃ ॥ ೩೪ ॥

ಕರ್ಮಣಾ ಮನಸಾ ವಾಚಾ ಚಿಂತಯಂತೀ ಹರೇಃ ಪದಂ ।
ಹರೇರಾಗಮನಂ ಚಾಪಿ ಮುಖಚಂದ್ರಂ ಮನೋಹರಂ ॥ ೩೫ ॥

ಜಗತ್ಕೃಷ್ಣಮಯಂ ಶಶ್ವತ್ಪಶ್ಯಂತೀ ಕಾಮುಕೀ ಮುನೇ ।
ಕೋಟಿಕಂದರ್ಪಲೀಲಾಭಂ ಕಾಮಾಸಕ್ತಂ ಚ ಕಾಮುಕಂ ॥ ೩೬ ॥

ತತೋ ದದರ್ಶ ಶ್ರೀಕೃಷ್ಣೋ ಮಾಲಾಕಾರಂ ಮನೋಹರಂ ।
ಮಾಲಾಸಮೂಹಂ ಬಿಭ್ರಂತಂ ಗಚ್ಛಂತಂ ರಾಜಮಂದಿರಂ ॥ ೩೭ ॥

ಸೋಽಪಿ ದೃಷ್ಟ್ವಾ ಚ ಶ್ರೀಕಾಂತಂ ಪ್ರಣಮ್ಯ ಶಿರಸಾ ಭುವಿ ।
ದದೌ ಮಾಲ್ಯಸಮೂಹಂ ಚ ಕೃಷ್ಣಾಯ ಪರಮಾತ್ಮನೇ ॥ ೩೮ ॥

---

೩೪. ಎರಡು ಜಾಜೀಹೂಮಾಲೆಗಳನ್ನೂ, ಪಚ್ಚಕರ್ಪೂರಾದಿಗಳಿಂದ ಸುವಾಸಿತವಾದ ಶೀತಲಜಲವನ್ನೂ ಮಧುರವಾದ ಮಿಷ್ಟಾನ್ನವನ್ನೂ ತನ್ನ ಸಮೀಪದಲ್ಲಿಯೇ ಶ್ರೀಹರಿಗಾಗಿ ಇಟ್ಟುಕೊಂಡಿದ್ದಳು.

೩೫. ಕರ್ಮದಿಂದಲೂ, ಮಾತಿನಿಂದಲೂ, ಮನಸ್ಸಿನಿಂದಲೂ, ಶ್ರೀಹರಿಯ ಪಾದಗಳನ್ನೇ ಧ್ಯಾನಮಾಡುತ್ತಾ, ಮನೋಹರವಾದ ಶ್ರೀಹರಿಯ ಮುಖಚಂದ್ರವನ್ನು ನೋಡಬಯಸಿ ಅವನ ಆಗಮನವನ್ನು ನಿರೀಕ್ಷಿಸುತ್ತಿದ್ದಳು.

೩೬. ಎಲೈ ಮುನಿಯೇ, ಆ ಕಾಮುಕಿಯು ಕೋಟಿಮನ್ಮಥರ ಲಾವಣ್ಯದಿಂದ ಕೂಡಿದ ಕಾಮಾಸಕ್ತನಾದ ಶ್ರೀಕೃಷ್ಣನನ್ನು ಧ್ಯಾನಿಸುತ್ತಾ ಜಗತ್ತೇ ಶ್ರೀಕೃಷ್ಣಮಯವಾಗಿರುವುದೆಂದು ಭಾವಿಸಿದಳು.

೩೭. ಅತ್ತ ಶ್ರೀಕೃಷ್ಣನೂ ಸಹ ಪುಷ್ಪಮಾಲೆಗಳನ್ನು ಹಿಡಿದುಕೊಂಡು ರಾಜಮಂದಿರಕ್ಕೆ ಹೋಗುತ್ತಿದ್ದ ಮನೋಹರನಾದ ಮಾಲಾಕಾರ (ಹೂವಾಡಿಗ) ನೊಬ್ಬನನ್ನು ಕಂಡನು.

೩೮. ಆ ಹೂವಾಡಿಗನು ಶ್ರೀಕಾಂತನನ್ನು ಕಂಡು ಭೂಮಿಯ ಮೇಲೆ ಸಾಷ್ಟಾಂಗವೆರಗಿ, ಆ ಕೃಷ್ಣಪರಮಾತ್ಮನಿಗೆ ಮನೋಹರವಾದ ಪುಷ್ಪಮಾಲೆಗಳನ್ನು ಕೊಟ್ಟನು.

ಕೃಷ್ಣಸ್ತಸ್ಮೈ ವರಂ ದತ್ವಾ ಸ್ವದಾಸ್ಯಮತಿದುರ್ಲಭಂ ।
ಮಾಲ್ಯಂ ಗೃಹೀತ್ವಾ ಪ್ರಯಯೌ ರಾಜಮಾರ್ಗಂ ವರಂ ವರಃ ॥ ೩೯ ॥

ತತೋ ದದರ್ಶ ರಜಕಂ ಬಿಭ್ರಂತಂ ವಸ್ತ್ರಪುಂಜಕಂ ।
ಅಹಂಕೃತಿಬಲಿಷ್ಠಂ ಚ ಸತತಂ ಯೌವನೋದ್ಧತಂ ॥ ೪೦ ॥

ವಸ್ತ್ರಂ ಯಯಾಚೇ ತಂ ಕೃಷ್ಣೋ ವಿನಯೇನ ಮಹಾಮುನೇ ।
ಸ ತಸ್ಮೈ ನ ದದೌ ವಸ್ತ್ರಂ ತಮುವಾಚ ಚ ನಿಷ್ಠುರಂ ॥ ೪೧ ॥

॥ ರಜಕ ಉವಾಚ ॥

ಗೋರಕ್ಷಕಾನಾಂ ತ್ವಯೋಗ್ಯಂ ವಸ್ತ್ರಮೇತತ್ಸುದುರ್ಲಭಂ ।
ರಾಜಯೋಗ್ಯಂ ಚ ಹೇ ಮೂಢ ಹೇ ಗೋಪಜನವಲ್ಲಭ ॥ ೪೨ ॥

---

೩೯. ಆಗ ಶ್ರೀಕೃಷ್ಣನು ಅವನಿಗೆ ಇತರದುರ್ಲಭವಾದ ತನ್ನ ದಾಸ್ಯವನ್ನು ಅನುಗ್ರಹಿಸಿ ಆ ಪುಷ್ಪಮಾಲೆಯನ್ನು ತೆಗೆದುಕೊಂಡು ರಾಜಮಾರ್ಗದಲ್ಲಿ ಮುಂದು ವರೆದನು.

೪೦. ಮುಂದೆ ಹೋಗುತ್ತ, ಯೌವನೋದ್ಧತನಾಗಿ ಅಹಂಕಾರದಿಂದ ಮೆರೆಯುತ್ತ ಬಟ್ಟೆಯ ಗಂಟೊಂದನ್ನು ಹಿಡಿದುಕೊಂಡು ಹೋಗುತ್ತಿದ್ದ ಅಗಸನೊಬ್ಬನನ್ನು ಶ್ರೀಕೃಷ್ಣನು ನೋಡಿದನು.

೪೧. ಎಲೈ ಮಹರ್ಷಿಯೇ, ಶ್ರೀಕೃಷ್ಣನು ಆ ಅಗಸನನ್ನು ಕುರಿತು ವಿನಯದಿಂದ ವಸ್ತ್ರವನ್ನು ಬೇಡಿದನು. ಆದರೆ ಅವನು ಶ್ರೀಹರಿಗೆ ವಸ್ತ್ರವನ್ನು ಕೊಡದೆ ನಿಷ್ಠುರವಾಕ್ಯಗಳನ್ನಾಡಿದನು.

೪೨. ಅಗಸರವನು:—ಮೂರ್ಖನೂ, ಗೋಪಾಲಕರ ಪ್ರಿಯನೂ ಆದ ಎಲೈ ಕೃಷ್ಣನೇ, ಈ ಉತ್ತಮವಾದ ವಸ್ತ್ರಗಳು ಗೋಪಾಲಕರಿಗೆ ದುರ್ಲಭವಾದುವು. ಇವುಗಳನ್ನು ಧರಿಸಲು ರಾಜರು ಮಾತ್ರ ಅರ್ಹರು.

ಗೃಹೀತ್ವಾ ಗೋಪಕನ್ಯಾಶ್ಚ ಕನ್ಯಾಲೋಲುಪ ಲಂಪಟ ।
ಯದ್ವಿಹಾರಃ ಕೃತಸ್ತತ್ರ ವೃಂದಾರಣ್ಯೇಽಪ್ಯರಾಜಕೇ ॥ ೪೩ ॥

ನ ಚಾತ್ರ ತಾದೃಶಂ ಕರ್ಮ ರಾಜ್ಞಃ ಕಂಸಸ್ಯ ವರ್ತ್ಮನಿ ।
ವಿದ್ಯಮಾನೋಽತ್ರ ರಾಜೇಂದ್ರಃ ಶಾಸ್ತಾ ದುಷ್ಟಸ್ಯ ತತ್ಕ್ಷಣಂ ॥ ೪೪ ॥

ರಜಕಸ್ಯ ವಚಃ ಶ್ರುತ್ವಾ ಜಹಾಸ ಮಧುಸೂದನಃ ।
ಜಹಾಸ ಬಲದೇವಶ್ಚ ಸಾಕ್ರೂರೋ ಗೋಪವರ್ಗಕಃ ॥ ೪೫ ॥

ತಂ ನಿಹತ್ಯ ಚಪೇಟೇನ ಜಗ್ರಾಹ ವಸ್ತ್ರಪುಂಜಕಂ ।
ವಸ್ತ್ರಂ ಸಂಧಾರಯಾಮಾಸ ಶ್ರೀಕೃಷ್ಣಃ ಸಗಣಸ್ತಥಾ ॥ ೪೬ ॥

ರತ್ನಯಾನೇನ ಗೋಲೋಕಂ ಪಾರ್ಷದೈರ್ವೇಷ್ಟಿತೇನ ಚ ।
ಯಯೌ ರಜಕರಾಜಶ್ಚ ಧೃತ್ವಾ ದಿವ್ಯಕಲೇವರಂ ॥ ೪೭ ॥

೪೩–೪೪. ಕನ್ಯಾಲಂಪಟನಾದ ನೀನು ಗೋಪಕನ್ಯೆಯರೊಡನೆ ಅರಾಜಕವಾದ ಬೃಂದಾವನದಲ್ಲಿ ಸ್ವೇಚ್ಛೆಯಾಗಿ ವಿಹರಿಸಿದಂತೆ, ವೀರನಾದ ಕಂಸನ ರಾಜ್ಯದಲ್ಲಿ ವಿಹರಿಸಲಾಗುವುದಿಲ್ಲ. ದುಷ್ಟರನ್ನು ಕೂಡಲೇ ಶಿಕ್ಷಿಸುವಂಥ ರಾಜಶ್ರೇಷ್ಠನಾದ ಕಂಸನು ಇಲ್ಲಿರುವನು.

೪೫. ಈ ರೀತಿಯಾದ ಅಗಸನ ಮಾತನ್ನು ಕೇಳಿ ಮಧುಸೂದನನಾದ ಶ್ರೀಕೃಷ್ಣನು ನಕ್ಕನು. ಬಲರಾಮನೂ, ಅಕ್ರೂರನೂ ಇತರ ಗೋಪಾಲಕರೂ ಸಹ ನಕ್ಕುಬಿಟ್ಟರು.

೪೬. ಅನಂತರ ಶ್ರೀಕೃಷ್ಣನು ಅವನ ಕೆನ್ನೆಗೆ ಒಂದು ಪೆಟ್ಟನ್ನು ಕೊಟ್ಟು ಅವನನ್ನು ವಧಿಸಿ, ಅವನಲ್ಲಿದ್ದ ಬಟ್ಟೆಯ ಗಂಟನ್ನು ಕಿತ್ತುಕೊಂಡು, ತನ್ನ ಪರಿವಾರದವರಿಗೆಲ್ಲ ಕೊಟ್ಟು ತಾನೂ ಧರಿಸಿಕೊಂಡನು.

೪೭ ಆ ಅಗಸರವನೂ ಸಹ ಶ್ರೀಕೃಷ್ಣನ ಸ್ಪರ್ಶಮಾತ್ರದಿಂದ ದಿವ್ಯ ಶರೀರವನ್ನು ಧರಿಸಿದವನಾಗಿ, ಪಾರ್ಷದರಿಂದ ಪರಿವೇಷ್ಟಿತನಾಗಿ ರತ್ನಯಾನದಲ್ಲಿ ಕುಳಿತು ಗೋಲೋಕಕ್ಕೆ ತೆರಳಿದನು.

ಶಶ್ವದ್ಯೌವನಯುಕ್ತಂ ಚ ಜರಾಮೃತ್ಯುಹರಂ ವರಂ ।
ಪೀತವಸ್ತ್ರಸಮಾಸಕ್ತಂ ಸಸ್ಮಿತಂ ಶ್ಯಾಮಸುಂದರಂ ॥ ೪೮ ॥

ಬಭೂವ ಸೋಽಪಿ ಗೋಲೋಕೇ ಪಾರ್ಷದೇಷು ಚ ಪಾರ್ಷದಃ ।
ಕೃಷ್ಣಸ್ಯಾಗಮನಂ ತತ್ರ ಸಸ್ಮಾರ ಸತತಂ ವಶೀ ॥ ೪೯ ॥

ಅಸ್ತಂ ಗತೋ ದಿನಕರೋಽಪ್ಯಕ್ರೂರಃ ಸ್ವಗೃಹಂ ಯಯೌ ।
ಕೃಷ್ಣಸ್ಯಾನುಮತಿಂ ಪ್ರಾಪ್ಯ ಕೃಷ್ಣೋಽಪಿ ಕಸ್ಯಚಿದ್ಗೃಹಂ ॥ ೫೦ ॥

ವೈಷ್ಣವಸ್ಯ ಕುವಿಂದಸ್ಯ ತಸ್ಮಿನ್ನಸ್ತಧನಸ್ಯ ಚ ।
ಸಾನಂದೋ ನಂದಸಹಿತೋ ಬಲದೇವಾದಿಭಿರ್ಯುತಃ ॥ ೫೧ ॥

ಸ ಭಕ್ತಃ ಪೂಜಯಾಮಾಸ ಪ್ರಣಮ್ಯ ಶ್ರೀನಿಕೇತನಂ ।
ತಸ್ಮೈ ದದೌ ಸ್ವದಾಸ್ಯಂ ಚ ವರಂ ಬ್ರಹ್ಮಾದಿದುರ್ಲಭಂ ॥ ೫೨ ॥

೪೮–೪೯. ಸರ್ವದಾ ಯೌವನಪರಿಪೂರ್ಣವೂ, ಜರಾಮರಣವಿವರ್ಜಿತವೂ ಶ್ಯಾಮಸುಂದರವೂ ಆದ ದಿವ್ಯಶರೀರದಲ್ಲಿ ಪೀತಾಂಬರವನ್ನು ಧರಿಸಿ ಆ ರಜಕನು ಗೋಲೋಕದಲ್ಲಿ ಪಾರ್ಷದ ಪ್ರವರನಾಗಿದ್ದುದಲ್ಲದೆ ಜಿತೇಂದ್ರಿಯನಾಗಿ ಸರ್ವದಾ ಶ್ರೀ ಕೃಷ್ಣನ ಆಗಮನವನ್ನು ಅಲ್ಲಿ ನಿರೀಕ್ಷಿಸುತ್ತಿದ್ದನು.

೫೦. ಇತ್ತ ದಿನಕರನು ಅಸ್ತಂಗತನಾಗಲು ಅಕ್ರೂರನು ಶ್ರೀ ಕೃಷ್ಣನ ಅನುಮತಿಯನ್ನು ಪಡೆದು ತನ್ನ ಮಂದಿರಕ್ಕೆ ತೆರಳಿದನು. ಶ್ರೀ ಕೃಷ್ಣನೂ ಸಹ ಒಬ್ಬರ ಮನೆಗೆ ಹೋದನು.

೫೧. ಅದು ಪರಮದರಿದ್ರನೂ ಆದರೆ ವಿಷ್ಣುಭಕ್ತನೂ ಆಗಿದ್ದ ಕುವಿಂದ (ನೆಯ್ಗೆಯವ) ನೊಬ್ಬನ ಮನೆಯಾಗಿತ್ತು ಅಲ್ಲಿ ನಂದಗೋಪನೊಡನೆಯೂ ಬಲದೇವನೊಡನೆಯೂ ಶ್ರೀ ಕೃಷ್ಣನು ಆನಂದದಿಂದಿದ್ದನು.

೫೨. ಪರಮ ಭಕ್ತನಾದ ಕುವಿಂದನು ಶ್ರೀನಿಕೇತನನಾದ ಕೃಷ್ಣನನ್ನು ನಮಿಸಿ ಪೂಜಿಸಿದನು. ಶ್ರೀ ಕೃಷ್ಣನು ಬ್ರಹ್ಮಾದಿಗಳಿಗೂ ದುರ್ಲಭವಾದ ತನ್ನ ದಾಸ್ಯವನ್ನು ಅವನಿಗೆ ಅನುಗ್ರಹಿಸಿದನು.

ಪರ್ಯಂಕೇ ಸುಷುಪುಃ ಸರ್ವೇ ಭುಕ್ತ್ವಾ ಮಿಷ್ಟಾನ್ನಮುತ್ತಮಂ ।
ನಿದ್ರಾಂ ಚ ಲೇಭೇ ಸಾ ಕುಬ್ಜಾ ನಿದ್ರೇಶೋಽಪಿ ಯಯೌ ಮುದಾ ॥ ೫೩ ॥

ಗತ್ವಾ ದದರ್ಶ ಕುಬ್ಜಾಂ ತಾಂ ರತ್ನತಲ್ಪೇ ಚ ನಿದ್ರಿತಾಂ ।
ದಾಸೀಗಣೈಃ ಪರಿವೃತಾಂ ಸುಂದರೀಂ ಕಮಲಾಮಿವ ॥ ೫೪ ॥

ಬೋಧಯಾಮಾಸ ತಾಂ ಕೃಷ್ಣೋ ನ ದಾಸೀಶ್ಚಾಪಿ ನಿದ್ರಿತಾಃ ।
ತಾಮುವಾಚ ಜಗನ್ನಾಥೋ ಜಗನ್ನಾಥಪ್ರಿಯಾಂ ಸತೀಂ ॥ ೫೫ ॥

॥ ಶ್ರೀ ಭಗವಾನುವಾಚ ॥

ತ್ಯಜ ನಿದ್ರಾಂ ಮಹಾಭಾಗೇ ಶೃಂಗಾರಂ ದೇಹಿ ಸುಂದರಿ ॥
ಪುರಾ ಶೂರ್ಪಣಖಾ ತ್ವಂ ಚ ಭಗಿನೀ ರಾವಣಸ್ಯ ಚ ॥ ೫೬ ॥

ರಾಮಜನ್ಮನಿ ಮದ್ಧೇತೋಸ್ತ್ವಯಾ ಕಾಂತೇ ತಪಃ ಕೃತಂ ।
ತಪಃಪ್ರಭಾವಾನ್ಮಾಂ ಕಾಂತಂ ಭಜ ಶ್ರೀಕೃಷ್ಣಜನ್ಮನಿ ॥ ೫೭ ॥

---

೫೩. ಅನಂತರ ಎಲ್ಲರೂ ಮಧುರವಾದ ಮಿಷ್ಟಾನ್ನವನ್ನು ಭುಜಿಸಿ ಮಂಚದ ಮೇಲೆ ಪವಡಿಸಿದರು. ಅತ್ತ ಕುಬ್ಜೆಯೂ ಸಹ ಗಾಢನಿದ್ರೆಯಲ್ಲಿ ಮುಳುಗಿದ್ದಳು. ನಿದ್ರೇಶನಾದ ಶ್ರೀಹರಿಯು ಆಗ ಅವಳ ಸಮೀಪಕ್ಕೆ ಹೋದನು.

೫೪. ಅಲ್ಲಿ ರತ್ನಪರ್ಯಂಕದಲ್ಲಿ ಪವಡಿಸಿರುವ ದಾಸಿಯರಿಂದ ಪರಿವೃತಳಾದ ಲಕ್ಷ್ಮೀದೇವಿಯಂತೆ ಸುಂದರಿಯಾದ, ಕುಬ್ಜೆಯನ್ನು ಕಂಡನು.

೫೫. ಕೃಷ್ಣನು ನಿದ್ರಿಸುತ್ತಿದ್ದ ದಾಸಿಯರನ್ನು ಬಿಟ್ಟು ಆ ಕುಬ್ಜೆಯನ್ನು ಮಾತ್ರ ಎಚ್ಚರಗೊಳಿಸಿದನು. ತನಗೆ ಪ್ರಿಯಳಾದ ಅವಳನ್ನು ಕುರಿತು ಜಗದೊಡೆಯನಾದ ಶ್ರೀ ಕೃಷ್ಣನು ಇಂತೆಂದನು.

೫೬. ಶ್ರೀ ಭಗವಾನ್:—ಎಲೌ ಮಹಾ ಪತಿವ್ರತೆಯೇ, ನಿದ್ರೆಯನ್ನು ಬಿಟ್ಟು ನನಗೆ ಶೃಂಗಾರಸುಖವನ್ನು ಕೊಡುವವಳಾಗು. ನೀನು ಹಿಂದಿನ ಜನ್ಮದಲ್ಲಿ ರಾವಣನ ತಂಗಿಯಾಗಿ ಶೂರ್ಪಣಖಿ ಎಂದು ಪ್ರಖ್ಯಾತಳಾಗಿದ್ದೆ.

೫೭. ಎಲೌ ಕಾಂತೆಯೇ, ನಾನು ಶ್ರೀರಾಮನಾಗಿ ಅವತರಿಸಿದ್ದಾಗ ನನಗೋಸ್ಕರ ನೀನು ಬಹುಕಾಲ ತಪಸ್ಸು ಮಾಡಿದೆ. ಅಂದಿನ ತಪಸ್ಸಿನ ಫಲವಾಗಿ, ಶ್ರೀಕೃಷ್ಣನಾಗಿ ಅವತರಿಸಿರುವ ನನ್ನನ್ನು ಪತಿಯನ್ನಾಗಿ ವರಿಸು.

ಅಧುನಾ ಸುಖಸಂಭೋಗಂ ಕೃತ್ವಾ ಗಚ್ಛ ಮಮಾಲಯಂ ।
ಸುದುರ್ಲಭಂ ಚ ಗೋಲೋಕಂ ಜರಾಮೃತ್ಯುಹರಂ ಪರಂ ॥ ೫೮ ॥

ಇತ್ಯುಕ್ತ್ವಾ ಶ್ರೀನಿವಾಸಶ್ಚ ಕೃತ್ವಾ ತಾಮೇವ ವಕ್ಷಸಿ ।
ನಗ್ನಾಂ ಚಕಾರ ಶೃಂಗಾರಂ ಚುಂಬನಂ ಚಾಪಿ ಕಾಮುಕೀಂ ॥ ೫೯ ॥

ಸಾ ಸಸ್ಮಿತಾ ಚ ಶ್ರೀಕೃಷ್ಣಂ ನವಸಂಗಮಲಜ್ಜಿತಾ ।
ಚುಚುಂಬ ಗಂಡೇ ಕ್ರೋಡೇ ತಾಂ ಚಕಾರ ಕಮಲಾಂ ಯಥಾ ॥ ೬೦ ॥

ಸುರತೇ ವಿರತಿರ್ನಾಸ್ತಿ ದಂಪತೀ ರತಿಪಂಡಿತೌ ।
ನಾನಾಪ್ರಕಾರಸುರತಂ ಬಭೂವ ತತ್ರ ನಾರದ ॥ ೬೧ ॥

ಸ್ತನಶ್ರೋಣಿಯುಗಂ ತಸ್ಯಾ ವೀಕ್ಷಿತಂ ಚ ಚಕಾರ ಹ ।
ಭಗವಾನ್ನಖರೈಸ್ತೀಕ್ಷ್ಣೈರ್ದಶನೈರಧರಂ ವರಂ ॥ ೬೨ ॥

---

೫೮. ಈಗ ಸಂಭೋಗ ಸುಖವನ್ನನುಭವಿಸಿ ನನ್ನ ಮಂದಿರಕ್ಕೆ ತೆರಳುವವಳಾಗು. ಜರಾಮರಣ ಪರಿಹಾರಕವೂ, ಸರ್ವಸುದುರ್ಲಭವೂ ಆದ ಗೋಲೋಕದಲ್ಲಿ ಇರುವವಳಾಗು.

೫೯. ಈ ರೀತಿಯಾಗಿ ಹೇಳುತ್ತ ಶ್ರೀಕೃಷ್ಣನು ಆ ಕುಬ್ಜೆಯನ್ನು ವಕ್ಷಃಸ್ಥಳದಲ್ಲಿ ಅಪ್ಪಿಕೊಂಡು ಆ ಕಾಮುಕಿಯ ವಸ್ತ್ರವನ್ನು ಬಿಚ್ಚಿ ಆಕೆಯನ್ನು ಚುಂಬಿಸಿ ಶೃಂಗಾರಸುಖವನ್ನನುಭವಿಸಿದನು.

೬೦. ಸ್ಮಿತಮುಖಿಯಾದ ಆ ಕುಬ್ಜೆಯೂ ಸಹ ನವಸಂಗಮದಿಂದ ಲಜ್ಜಿತಳಾಗಿ ಅವನ ಕಪೋಲದಲ್ಲಿ ಚುಂಬಿಸಿದಳು. ಶ್ರೀ ಹರಿಯೂ ಲಕ್ಷ್ಮೀದೇವಿಯಂತಿರುವ ಅವಳನ್ನು ಎದೆಗಪ್ಪಿಕೊಂಡನು.

೬೧. ಎಲೈ ನಾರದನೇ, ರತಿಚತುರರಾದ ಆ ದಂಪತಿಗಳಿಗೆ ಸುರತಸುಖದಲ್ಲಿ ವಿರತಿಯುಂಟಾಗಲಿಲ್ಲ. ಅವರು ನಾನಾರೀತಿಯ ಶೃಂಗಾರಸುಖವನ್ನನುಭವಿಸಿದರು.

೬೨. ಅವಳ ಸ್ತನಗಳನ್ನೂ ಶ್ರೋಣಿಬಿಂಬಗಳನ್ನೂ ನಖಕ್ಷತಗಳಿಂದ ಅಲಂಕರಿಸಿದುದಲ್ಲದೆ ಅವಳ ಬಿಂಬಾಧರವನ್ನು ದಂತಕ್ಷತದಿಂದ ನೋಯಿಸಿದನು.

ನಿಶಾವಸಾನಸಮಯೇ ವೀರ್ಯಾಧಾನಂ ಚಕಾರ ಸಃ ।
ಸುಖಸಂಭೋಗಭೋಗೇನ ಮೂರ್ಚ್ಛಾಮಾಪ ಚ ಸುಂದರೀ ॥ ೬೩ ॥

ತತ್ರಾಜಗಾಮ ತಾಂ ತೇಂದ್ರಾ ಕೃಷ್ಣವಕ್ಷಃಸ್ಥಲಸ್ಥಿತಾಂ ।
ಬುಬುಧೇ ನ ದಿವಾರಾತ್ರಂ ಸ್ವರ್ಗಂ ಮರ್ತ್ಯಂ ಜಲಂ ಸ್ಥಲಂ ॥ ೬೪ ॥

ಸುಪ್ರಭಾತಾ ಚ ರಜನೀ ಬಭೂವ ರಜನೀಪತಿಃ ।
ಪತ್ಯುರ್ವ್ಯತಿಕ್ರಮೇಣೈವ ಲಜ್ಜಯೇವ ಮಲೀಮಸಃ ॥ ೬೫ ॥

ಅಥಾಜಗಾಮ ಗೋಲೋಕಾದ್ರಥೋ ರತ್ನವಿನಿರ್ಮಿತಃ ।
ಜಗಾಮ ತೇನ ತಂ ಲೋಕಂ ಧೃತ್ವಾ ದಿವ್ಯಕಲೇವರಂ ॥ ೬೬ ॥

ವಹ್ನಿಶುದ್ಧಾಂಶುಕಾಧಾನಂ ರತ್ನಭೂಷಣಭೂಷಿತಂ ।
ಪ್ರತಪ್ತಕಾಂಚನಾಭಾಸಂ ನಿತ್ಯಂ ಜನ್ಮಾದಿವರ್ಜಿತಂ ॥ ೬೭ ॥

---

೬೩. ರಾತ್ರಿಯು ಮುಗಿಯುತ್ತಾಬರಲು ಆಕೆಯ ಯೋನಿಯಲ್ಲಿ ವೀರ್ಯಾಧಾನ ಮಾಡಿದನು. ಆ ಸುಂದರಿಯು ಸುಖಭೋಗದಿಂದ ಮೂರ್ಛಿತಳಾದಳು.

೬೪. ಕೃಷ್ಣನ ವಕ್ಷಃಸ್ಥಳದಲ್ಲಿದ್ದ ಆಕೆಗೆ ತಂದ್ರೆ (ಮಂಕುತನ) ಯುಂಟಾಗಿ ಹಗಲುರಾತ್ರಿಯಾಗಲೀ, ಸ್ವರ್ಗಮರ್ತ್ಯಗಳಾಗಲೀ, ಜಲಸ್ಥಳಗಳಾಗಲೀ ಬಗೆಹರಿಯ ದಂತಾಯಿತು.

೬೫. ರಾತ್ರಿಯು ಕಳೆದು ಸುಪ್ರಭಾತವಾಯಿತು. ಚಂದ್ರನು ಜಗದೊಡೆಯನಾದ ಶ್ರೀ ಕೃಷ್ಣನ ಇಚ್ಛೆಗೆ ವಿರುದ್ಧವಾಗಿ ವರ್ತಿಸಿದುದರಿಂದಲೋ ಏನೋ ಕಾಂತಿಹೀನನಾದನು.

೬೬. ಅನಂತರದಲ್ಲಿ ರತ್ನನಿರ್ಮಿತವಾದ ದಿವ್ಯವಾದ ರಥವೊಂದು ಗೋಲೋಕದಿಂದ ಅಲ್ಲಿಗೆ ಬಂದಿತು. ಕುಬ್ಜೆಯು ದಿವ್ಯವಾದ ಶರೀರವನ್ನು ಧರಿಸಿ ಆ ರಥದಲ್ಲಿ ಕುಳಿತು ಗೋಲೋಕಕ್ಕೆ ತೆರಳಿದಳು.

೬೭. ಆವಳ ದಿವ್ಯಶರೀರವು ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನು ಧರಿಸಿ, ರತ್ನಭೂಷಣಗಳಿಂದ ಭೂಷಿತವಾಗಿ ಪುಟಕ್ಕೆ ಹಾಕಿದ ಚಿನ್ನದಂತೆ ಕಾಂತಿಯುತವಾಗಿದ್ದುದಲ್ಲದೆ ಜನ್ಮಜರಾಮರಣರಹಿತವೂ, ನಿತ್ಯವೂ ಆಗಿದ್ದಿತು.

ಸಾ ಬಭೂವ ಚ ತತ್ರೈವ ಗೋಪೀ ಚಂದ್ರಮುಖೀ ಮುನೇ ।
ಗೋಪ್ಯಃ ಕತಿವಿಧಾಸ್ತಸ್ಯಾ ಬಭೂವುಃ ಪರಿಚಾರಿಕಾಃ ॥ ೬೭ ॥

ಭಗವಾನಪಿ ತತ್ರೈವ ಕ್ಷಣಂ ಸ್ಥಿತ್ವಾ ಸ್ವಮಂದಿರಂ ।
ಜಗಾಮ ಯತ್ರ ಸಂದಶ್ಯ ಸಾನಂದೋ ನಂದನಂದನಃ ॥ ೬೮ ॥

ಅಥ ಕಂಸೋ ನಿಶಾಯಾಂ ಚ ನಿದ್ರಾಯಾಂ ಭಯವಿಹ್ವಲಃ ।
ದದರ್ಶ ದುಃಖದುಃಸ್ವಪ್ನಮಾತ್ಮನೋ ಮೃತ್ಯುಸೂಚಕಂ ॥ ೭೦ ॥

ದದರ್ಶ ಸೂರ್ಯಂ ಭೂಮಿಸ್ಥಂ ಚತುಃಖಂಡಂ ನಭಶ್ಚ್ಯುತಂ ।
ದಶಖಂಡಂ ಚಂದ್ರಬಿಂಬಂ ಭೂಮಿಸ್ಥಂ ಖಾಚ್ಚ್ಯುತಂ ಮುನೇ ॥ ೭೧ ॥

ಪುರುಷಾನ್ವಿಕೃತಾಕಾರಾನ್ರಜ್ಜುಹಸ್ತಾನ್ ದಿಗಂಬರಾನ್ ।
ವಿಧವಾಂ ಶೂದ್ರಪತ್ನೀಂ ಚ ನಗ್ನಾಂ ಚ ಛಿನ್ನನಾಸಿಕಾಂ ॥ ೭೨ ॥

---

೬೮. ಎಲೈ ನಾರದನೇ, ಆ ಕುಬ್ಜೆಯು ಗೋಕುಲದಲ್ಲಿ ಚಂದ್ರಮುಖಿಯೆಂಬ ಗೋಪಿಯಾದಳು ಅನೇಕವಿಧ ಗೋಪಿಯರು ಅವಳ ಪರಿಚಾರಿಕೆಯರಾದರು.

೬೯. ಷಡ್ಗುಣೈಶ್ವರ್ಯ ಪರಿಪೂರ್ಣನೂ, ನಂದನಂದನನೂ ಆದ ಶ್ರೀ ಕೃಷ್ಣನೂ ಸಹ ಕ್ಷಣಕಾಲ ಅಲ್ಲಿದ್ದು ಅಲ್ಲಿಂದ ನಂದಗೋಪನಿದ್ದೆಡೆಗೆ ಆನಂದದಿಂದ ಹಿಂತಿರುಗಿದನು

೭೦. ಅತ್ತ ಕಂಸನು ನಿದ್ರೆಮಾಡುತ್ತಿದ್ದಾಗ ಅರ್ಧರಾತ್ರಿಯಲ್ಲಿ ತನಗೆ ಮರಣಸೂಚಕವಾದ ದುಃಸ್ವಪ್ನವನ್ನು ಕಂಡು ಭಯಭ್ರಾಂತನಾಗಿ ವ್ಯಥೆಗೊಂಡನು.

೭೧. ಎಲೈ ಮುನಿಯೇ, ಕಂಸನು ಕನಸಿನಲ್ಲಿ ಸೂರ್ಯನು ಆಕಾಶದಿಂದ ನಾಲ್ಕು ಭಾಗವಾಗಿ ಭೂಮಿಗೆ ಬಿದ್ದುದನ್ನೂ ಚಂದ್ರನು ಹತ್ತು ಹೋಳಾಗಿ ಭೂಮಿಗೆ ಬಿದ್ದುದನ್ನೂ ಕಂಡನು.

೭೨. ವಿಕಾರಗೊಂಡ ಆಕಾರವುಳ್ಳವರೂ, ಪಾಶಹಸ್ತರೂ, ದಿಗಂಬರರೂ ಆದ ಪುರುಷರನ್ನೂ, ವಿಧವೆಯನ್ನೂ, ಶೂದ್ರನ ಪತ್ನಿಯನ್ನೂ, ಕತ್ತರಿಸಲ್ಪಟ್ಟ ಮೂಗುಳ್ಳ ಬೆತ್ತಲೆಯಾದ ಸ್ತ್ರೀಯನ್ನೂ ಕನಸಿದಲ್ಲಿ ಕಂಡನು.

ಹಸತೀಂ ಚೂರ್ಣತಿಲಕಾಂ ಶ್ವೇತಕೃಷ್ಣೋಚ್ಛ್ರಮೂರ್ಧಜಾಂ ।
ಖಡ್ಗಖರ್ಪರಹಸ್ತಾಂ ಚ ಲೋಲಜಿಹ್ವಾಂ ಚ ಬಿಭ್ರತೀಂ ॥ ೭೩ ॥

ರುಂಡಮಾಲಾಸಮಾಯುಕ್ತಾಂ ಗರ್ದಭಂ ಮಹಿಷಂ ವೃಷಂ ।
ಸೂಕರಂ ಭಲ್ಲುಕಂ ಕಾಕಂ ಗೃಧ್ರಂ ಕಂಕಂ ಚ ವಾನರಂ ॥ ೭೪ ॥

ಪಿರಜಂ ಕುಕ್ಕುರಂ ನಕ್ರಂ ಶೃಗಾಲಂ ಭಸ್ಮಪುಂಜಕಂ ।
ಅಸ್ಥಿರಾಶಿಂ ತಾಲಫಲಂ ಕೇಶಂ ಕಾರ್ಪಾಸಮುಲ್ಬಣಂ ॥ ೭೫ ॥

ನಿರ್ವಾಣಾಂಗಾರಮುಲ್ಕಾಂ ಚ ಶವಂ ಮರ್ತ್ಯಂ ಚಿತಾಶ್ರಿತಂ ।
ಕುಲಾಲತೈಲಕಾರಾಣಾಂ ಚಕ್ರಂ ವಕ್ರಂ ಕಪರ್ದಕಂ ॥ ೭೬ ॥

ಶ್ಮಶಾನಂ ದಗ್ಧಕಾಷ್ಠಂ ಚ ಶುಷ್ಕಕಾಷ್ಠಂ ಕುಶಂ ತೃಣಂ ।
ಗಚ್ಛಂತಂ ಚ ಕಬಂಧಂ ಚ ನದಂತಂ ಮೃತಮಸ್ತಕಂ ॥ ೭೭ ॥

---

೭೩. ನಗುತ್ತಿರುವ, ಅಳಸಿಹೋದ ತಿಲಕವುಳ್ಳ, ಅರ್ಧನರೆತ ತಲೆಗೂದಲನ್ನು ಮೇಲಕ್ಕೆ ಕಟ್ಟಿಕೊಂಡಿರುವ, ಕೈಯಲ್ಲಿ ಕತ್ತಿಯನ್ನೂ ಮಡಕೆಯ ಚೂರನ್ನೂ ಹಿಡಿದಿರುವ, ಚಂಚಲವಾದ ನಾಲಿಗೆಯುಳ್ಳ, ಭಯಂಕರ ಸ್ತ್ರೀಯನ್ನು ಕನಸಿನಲ್ಲಿ ಕಂಡನು.

೭೪. ರುಂಡಮಾಲೆಯನ್ನು ಧರಿಸಿಕೊಂಡಿರುವ ಸ್ತ್ರೀಯನ್ನೂ, ಕತ್ತೆ, ಕೋಣ, ಎತ್ತು, ಹಂದಿ, ಕರಡಿ, ಕಾಗೆ, ಹದ್ದು, ರಣಹದ್ದು ಮತ್ತು ಕೋತಿಯನ್ನೂ ಸಹ ಕಂಸನು ಕನಸಿನಲ್ಲಿ ಕಂಡನು.

೭೫. ದುಷ್ಟವಾದ ನಾಯಿಯನ್ನೂ, ಮೊಸಳೆಯನ್ನೂ, ನರಿಯನ್ನೂ, ಬೂದಿಯ ರಾಶಿಯನ್ನೂ, ಮೂಳೆಯ ರಾಶಿಯನ್ನೂ, ತಾಳೆಯ ಹಣ್ಣನ್ನೂ ತಲೆಗೂದಲು ಮತ್ತು ಭಯಂಕರವಾದ ಹತ್ತಿಯ ರಾಶಿಯನ್ನೂ ಕನಸಿನಲ್ಲಿ ಕಂಡನು.

೭೬. ಬೆಂಕಿಯು ಆರಿಹೋಗಿರುವ ಕೊಳ್ಳಿಯನ್ನೂ, ಹೆಣವನ್ನೂ, ಚಿತೆಯ ಮೇಲಿರುವ ಮನುಷ್ಯನನ್ನೂ, ಕುಂಬಾರ ಮತ್ತು ಗಾಣಿಗರ ಚಕ್ರ ಮತ್ತು ಗಾಣಗಳನ್ನೂ, ಸೊಟ್ಟಾದ ಕವಡೆಯನ್ನೂ ಕನಸಿನಲ್ಲಿ ಕಂಡನು.

೭೭. ಸುಟ್ಟ ಕಟ್ಟಿಗೆಯ ರಾಶಿಯಿಂದ ಕೂಡಿದ ಸ್ಮಶಾನವನ್ನೂ, ಒಣಗಿದ ಸೌದೆ, ದರ್ಭೆ ಮತ್ತು ಹುಲ್ಲನ್ನೂ, ನಡೆಯುತ್ತಿರುವ ರುಂಡವಿಲ್ಲದ ಮುಂಡವನ್ನೂ ನಗುತ್ತಲಿರುವ ಶರೀರರಹಿತವಾದ ರುಂಡವನ್ನೂ ಕಂಡನು.

ದಗ್ಧಸ್ಥಾನಂ ಭಸ್ಮಯುತಂ ತಡಾಗಂ ಜಲವರ್ಜಿತಂ ।
ದಗ್ಧಮತ್ಸ್ಯಂ ಚ ಲೋಹಂ ಚ ನಿರ್ವಾಣದಗ್ಧಕಾನನಂ ॥ ೭೮ ॥

ಗಲತ್ಕುಷ್ಠಂ ಚ ವೃಷಲಂ ನಗ್ನಂ ಚ ಮುಕ್ತಮೂರ್ಧಜಂ ।
ಅತೀವ ರುಷ್ಟಂ ವಿಪ್ರಂ ಚ ಜಪಂತಂ ಗುರುಮೀದೃಶಂ ॥ ೭೯ ॥

ಅತೀವ ರುಷ್ಟಂ ಭಿಕ್ಷುಂ ಚ ಯೋಗಿನಂ ವೈಷ್ಣವಂ ನರಂ ।
ಏವಂ ದೃಷ್ಟ್ವಾ ಸಮುತ್ಥಾಯ ಕಥಯಾಮಾಸ ಮಾತರಂ ॥ ೮೦ ॥

ಪಿತರಂ ಭ್ರಾತರಂ ಪತ್ನೀಂ ರುದಂತೀಂ ಪ್ರೇಮವಿಹ್ವಲಾಂ ।
ಮಂಚಕಾನ್ಕಾರಯಾಮಾಸ ಸ್ಥಾಪಯಾಮಾಸ ಹಸ್ತಿನಂ ॥ ೮೧ ॥

ಮಲ್ಲಂ ಸೈನ್ಯಂ ಚ ಯೋದ್ಧಾರಂ ಕಾರಯಾಮಾಸ ಮಂಗಲಂ ।
ಸಭಾಂ ಚ ಕಾರಯಾಮಾಸ ಪುಣ್ಯಂ ಸ್ವಸ್ತ್ಯಯನಂ ಶುಭಂ ॥ ೮೨ ॥

---

೭೮. ಸುಟ್ಟು ಬೂದಿಯಾಗಿರುವ ನೆಲವನ್ನೂ, ನೀರಿಲ್ಲದ ಕೆರೆಯನ್ನೂ, ಸುಟ್ಟ ಮೀನು ಮತ್ತು ಲೋಹವನ್ನೂ, ಸುಟ್ಟು ಮರಗಳಿಲ್ಲ ನಾಶವಾಗಿರುವ ಕಾಡನ್ನೂ ಕನಸಿನಲ್ಲಿ ಕಂಡನು.

೭೯. ಕುಷ್ಠರೋಗದಿಂದ ನರಳುತ್ತಿರುವ ವೃಷಳನನ್ನೂ, ತಲೆಕೆದರಿಕೊಂಡು ಬೆತ್ತಲೆಯಾಗಿರುವ ಮನುಷ್ಯನನ್ನೂ, ಬಹಳವಾಗಿ ಕೋಪಗೊಂಡು ತನ್ನ ಗುರುವನ್ನೇ ಬಯ್ಯುತ್ತಿರುವ ಬ್ರಾಹ್ಮಣನನ್ನೂ ಕನಸಿನಲ್ಲಿ ಕಂಡನು.

೮೦. ಬಹಳವಾಗಿ ಕೋಪಗೊಂಡಿರುವ ಭಿಕ್ಷುವನ್ನೂ, ಯೋಗಿಯನ್ನೂ ವಿಷ್ಣುಭಕ್ತನನ್ನೂ ಕಂಸನು ಕನಸಿನಲ್ಲಿ ಕಂಡನು. ಈ ರೀತಿಯಾಗಿ ಕನಸನ್ನು ಕಂಡ ಕಂಸನು ಎದ್ದು ತನ್ನ ತಾಯಿಗೆ ನಡೆದುದನ್ನೆಲ್ಲ ತಿಳಿಸಿದನು.

೮೧. ತನ್ನ ತಂದೆಗೂ, ಸಹೋದರರಿಗೂ, ಪ್ರೇಮವಿಹ್ವಲಳಾಗಿ ಅಳುತ್ತಿರುವ ಪತ್ನಿಗೂ ಸಹ ಕನಸಿನ ವೃತ್ತಾಂತವನ್ನು ತಿಳಿಸಿ ಮಲ್ಲಯುದ್ಧಕ್ಕೆ ಉಚಿತವಾದ ಮಂಚಗಳನ್ನು ಕಟ್ಟಿಸಿ ಆನೆಗಳನ್ನು ನಿಲ್ಲಿಸಿದನು.

೮೨. ಮಲ್ಲರನ್ನೂ, ಯುದ್ಧಕ್ಕೆ ಉಚಿತವಾದ ಸೈನ್ಯವನ್ನೂ ಸಿದ್ಧಗೊಳಿಸಿ, ಮಂಗಳಕಾರ್ಯಗಳನ್ನು ಮಾಡಿಸಿದನು. ಅಲ್ಲದೆ ಸಭಾಮಂಟಪವನ್ನು ಸಿದ್ಧಪಡಿಸಿ ಪುರೋಹಿತರಿಂದ ಉಚಿತವಾದ ಸ್ವಸ್ತಿವಾಚನವನ್ನು ಮಾಡಿಸಿದನು.

ಯತ್ನೇನ ಯೋಜಯಾಮಾಸ ಯೋಗೀ ಯುಕ್ತಂ ಪುರೋಹಿತಂ ।
ಉವಾಸ ಮಂಚಕೇ ರಮ್ಯೇ ಧೃತ್ವಾ ಖಡ್ಗಂ ವಿಲಕ್ಷಣಂ ।
ರಣೇ ನಿಯೋಜಯಾಮಾಸ ಯೋದ್ಧಾರಂ ಯುದ್ಧಕೋವಿದಂ ॥ ೮೩ ॥

ವಾಸಯಾಮಾಸ ರಾಜೇಂದ್ರಾನ್ ಬ್ರಾಹ್ಮಣಾಂಶ್ಚ ಮುನೀಶ್ವರಾನ್ ।
ಬ್ರಾಹ್ಮಣಾಂಶ್ಚ ಸುಹೃದ್ವರ್ಗಾನ್ ಧರ್ಮಿಷ್ಠಾನ್ರಣಕೋವಿದಾನ್ ॥ ೮೪ ॥

ಅಥಾಜಗಾಮ ಗೋವಿಂದೋ ರಾಮೇಣ ಸಹ ನಾರದ ।
ಮಹೇಶಸ್ಯ ಧನುರ್ಮಧ್ಯಂ ಬಭಂಜ ತತ್ರ ಲೀಲಯಾ ॥ ೮೫ ॥

ಶಬ್ದೇನ ತಸ್ಯ ಮಥುರಾ ಬಧಿರಾ ಚ ಬಭೂವ ಹ ।
ವಿಷಾದಂ ಪ್ರಾಪ ಕಂಸಶ್ಚ ಮುದಂ ಚ ದೇವಕೀಸುತಃ ॥ ೮೬ ॥

ಉಪಸ್ಥಿತಃ ಸಭಾಮಧ್ಯೇ ಗಜಮಲ್ಲಂ ನಿಹತ್ಯ ಚ ।
ಯೋಗೀ ದದರ್ಶ ತಂ ದೇವಂ ಪರಮಾತ್ಮಾನಮೀಶ್ವರಂ ॥ ೮೭ ॥

---

೮೩. ಅನಂತರ ನಾನು ವಿಲಕ್ಷಣವಾದ ಖಡ್ಗವೊಂದನ್ನು ಧರಿಸಿ ಮಂಚದ ಮೇಲೆ ಕುಳಿತನು ಯುದ್ಧದಲ್ಲಿ ನಿಪುಣರಾದ ಸೈನಿಕರನ್ನು ಯುದ್ಧಮಾಡಲ ನಿಯಮಿಸಿದನು.

೮೪. ರಾಜೇಂದ್ರನನ್ನೂ, ಬ್ರಾಹ್ಮಣನನ್ನೂ, ಮುನಿವರ್ಯರನ್ನೂ ಅವರವರಿಗೆ ಉಚಿತವಾದ ಕಾರ್ಯದಲ್ಲಿ ನಿಯಮಿಸಿದುದಲ್ಲದೆ, ಧರ್ಮಪರಾಯಣರೂ ಯುದ್ಧಚತುರರೂ ಆದ ಸ್ನೇಹಿತರನ್ನು ಯುದ್ಧಕ್ಕೆ ಸಿದ್ಧಗೊಳಿಸಿದನು.

೮೫. ಎಲೈ ನಾರದನೇ, ಅನಂತರ ಶ್ರೀ ಕೃಷ್ಣನು ಬಲರಾಮನೊಡನೆ ಅಲ್ಲಿಗೆ ಬಂದನು. ಬಂದವನೇ ಮಹೇಶನ ಧನುಸ್ಸನ್ನು ಲೀಲಾಮಾತ್ರದಿಂದ ಮಧ್ಯಕ್ಕೆ ಮುರಿದನು.

೮೬. ಆ ಭಯಂಕರ ಧ್ವನಿಯಿಂದ ಮಥುರೆ ಎಲ್ಲವೂ ಕಿವುಡಾಯಿತು. ಆದರಿಂದ ಕಂಸನು ವಿಷಾದಗೊಂಡನು. ದೇವಕೀ ಪುತ್ರನಾದ ಕೃಷ್ಣನು ಮುದಾನ್ವಿತನಾದನು.

೮೭–೮೮. ಗಜಮಲ್ಲನಾದ ಕುವಲಯಾಪೀಡನನ್ನು ವಧೆಮಾಡಿ ಸಭಾಮಧ್ಯದಲ್ಲಿ ಕುಳಿತಿದ್ದ ಪರಮಾತ್ಮನಾದ ಆ ಕೃಷ್ಣನನ್ನು ಯೋಗಿಯಾದವನು

ಯಥಾ ಹೃತ್ಪದ್ಮಮಧ್ಯಸ್ಥಂ ತಾದೃಶಂ ಬಹಿರೇವ ಚ ।
ರಾಜೇಂದ್ರರೂಪಂ ರಾಜಾನಃ ಶಾಸ್ತಾರಂ ದಂಡಧಾರಿಣಾಂ ॥ ೮೮ ॥

ಪಿತಾ ಮಾತಾ ದುಗ್ಧಮುಖಂ ಸ್ತನಾಂಧಂ ಬಾಲಕಂ ಯಥಾ ।
ಕಾಮಿನ್ಯಃ ಕೋಟಿಕಂದರ್ಪಲೀಲಾಲಾವಣ್ಯಧಾರಿಣಂ ॥ ೮೯ ॥

ಕಂಸಶ್ಚ ಕಾಲಪುರುಷಂ ವೈರಿಣಂ ತಸ್ಯ ಬಾಂಧವಾಃ ।
ಮಲ್ಲಾ ಮೃತ್ಯುಪ್ರದಂ ಚೈವ ಪ್ರಾಣತುಲ್ಯಂ ಚ ಯಾದವಾಃ ॥ ೯೦ ॥

ನಮಸ್ಕೃತ್ಯ ಮುನೀನ್ವಿಪ್ರಾನ್ ಪಿತರಂ ಮಾತರಂ ಗುರುಂ ।
ಜಗಾಮ ಮಂಚಕಾಭ್ಯಾಶಂ ಹಸ್ತೇ ಕೃತ್ವಾ ಸುದರ್ಶನಂ ॥ ೯೧ ॥

ದೃಷ್ಟ್ವಾ ಭಕ್ತಂ ಭಕ್ತಬಂಧುಃ ಕೃಪಯಾ ಚ ಕೃಪಾನಿಧಿಃ ।
ಆಕೃಷ್ಯ ಮಂಚಕಾತ್ಕಂಸಂ ಜಘಾನ ಲೀಲಯಾ ಮುನೇ ॥ ೯೨ ॥

ತನ್ನ ಹೃದಯ ಕಮಲದಲ್ಲಿ ಸಾಕ್ಷಾತ್ಕಾರ ಪಡೆಯುವಂತೆ ಹೊರಗಡೆಯೂ ಸಾಕ್ಷಾತ್ಕಾರ ಪಡೆದು ಆನಂದಿಸಿದನು. ರಾಜೇಂದ್ರರೆಲ್ಲರೂ ಆ ಪರಮಾತ್ಮನನ್ನು ನೋಡಿ ದಂಡಧಾರಿಯಾದ ಶಾಸಕನೆಂದು ತಿಳಿದರು.

೮೯. ತಾಯಿತಂದೆಯರು ಆ ಕೃಷ್ಣನನ್ನು ನೋಡಿ ಹಾಲುಗೆನ್ನೆಯ ಮುಖವುಳ್ಳ ಸ್ತನಾಂಧನಾದ ಬಾಲಕನೆಂದು ಭಾವಿಸಿದರು. ಕಾಮಿನಿಯರು ಕೋಟಿ ಕಂದರ್ಪರ ಲಾವಣ್ಯವುಳ್ಳವನೆಂದು ತಿಳಿದರು.

೯೦. ಕಂಸನು ಅವನನ್ನು ಕಾಲಪುರುಷನೆಂದು ತಿಳಿದನು. ಕಂಸನ ಬಂಧುಗಳು ಅವನನ್ನು ವೈರಿಯೆಂದು ತಿಳಿದರು. ಮಲ್ಲರು ಮೃತ್ಯುದಾಯಕನೆಂದು ಶ್ರೀಕೃಷ್ಣಪರಮಾತ್ಮನನ್ನು ತಿಳಿದರು.

೯೧. ಶ್ರೀಕೃಷ್ಣನು ಮುನಿಗಳಿಗೂ ವಿಪ್ರರಿಗೂ ವಂದಿಸಿ ತಂದೆತಾಯಿಗಳಿಗೂ ಗುರುಗಳಿಗೂ ನಮಸ್ಕರಿಸಿ, ಕೈಯಲ್ಲಿ ಸುದರ್ಶನಚಕ್ರವನ್ನು ಧರಿಸಿ ಕಂಸನು ಕುಳಿತಿದ್ದ ಮಂಚದ ಸಮೀಪಕ್ಕೆ ಹೋದನು.

೯೨. ಎಲೈ ನಾರದಮುನಿಯೇ, ಭಕ್ತಬಂಧುವೂ, ಕೃಪಾನಿಧಿಯೂ ಆದ ಶ್ರೀ ಕೃಷ್ಣನು ತನ್ನ ಭಕ್ತರ ಉದ್ಧಾರಕ್ಕಾಗಿ ಮಂಚದ ಮೇಲಿನಿಂದ ಕಂಸನನ್ನು ಸೆಳೆದು ಲೀಲಾಮಾತ್ರದಿಂದ ಅವನನ್ನು ಕೊಂದನು.

ರಾಜಾ ದದರ್ಶ ವಿಶ್ವಂ ಚ ಸರ್ವಂ ಕೃಷ್ಣಮಯಂ ಪರಂ ।
ಪುರತೋ ರತ್ನಯಾನಂ ಚ ಹೀರಕಾಹಾರಭೂಷಿತಂ ॥ ೯೩ ॥

ಯಯೌ ವಿಷ್ಣುಪದಂ ಸ್ಫೀತೋ ದಿವ್ಯರೂಪಂ ವಿಧಾಯ ಚ ।
ತೇಜೋ ವಿವೇಶ ಪರಮಂ ಕೃಷ್ಣಪಾದಾಂಬುಜೇ ಮುನೇ ॥ ೯೪ ॥

ನಿವೃತ್ಯ ತಸ್ಯ ಸತ್ಕಾರಂ ಬ್ರಾಹ್ಮಣೇಭ್ಯೋ ಧನಂ ದದೌ ।
ದದೌ ರಾಜ್ಯಂ ರಾಜಛತ್ರಮುಗ್ರಸೇನಾಯ ಧೀಮತೇ ॥ ೯೫ ॥

ಸ ಬಭೂವ ನೃಪೇಂದ್ರಶ್ಚ ಚಂದ್ರವಂಶಸಮುದ್ಭವಃ ।
ವಿಲಲಾಪ ಕಂಸಮಾತಾ ಪತ್ನೀವರ್ಗಶ್ಚ ತತ್ಪಿತಾ ॥ ೯೬ ॥

ಬಾಂಧವಾ ಮಾತೃವರ್ಗಶ್ಚ ಭಗಿನೀ ಭ್ರಾತೃಕಾಮಿನೀ ।
ದರ್ಶನಂ ದೇಹಿ ರಾಜೇಂದ್ರ ಸಮುತ್ತಿಷ್ಠ ನೃಪಾಸನೇ ॥ ೯೭ ॥

---

೯೩. ಆಗ ರಾಜನಾದ ಕಂಸನು ಪ್ರಪಂಚವೆಲ್ಲ ಕೃಷ್ಣಮಯವಾಗಿರುವುದನ್ನು ಕಂಡುದಲ್ಲದೆ, ವಜ್ರಾಹಾರಗಳಿಂದ ಭೂಷಿತವಾದ ಶ್ರೇಷ್ಠರಥವೊಂದನ್ನು ಮುಂದೆ ಕಂಡನು.

೯೪ ಶ್ರೀ ಕೃಷ್ಣನಿಂದ ಹತನಾದ ಆ ಕಂಸನು ದಿವ್ಯರೂಪಧಾರಿಯಾಗಿ ವೈಕುಂಠಕ್ಕೆ ತೆರಳಿದನು. ಎಲೈ ಮುನಿಯೇ, ತೇಜೋರೂಪವಾದ ಅವನ ಆತ್ಮವು ಶ್ರೀಕೃಷ್ಣನ ಪಾದಕಮಲಗಳಲ್ಲಿ ಐಕ್ಯತೆಯನ್ನು ಹೊಂದಿತು

೯೫. ಅನಂತರ ಶ್ರೀಕೃಷ್ಣನು ಕಂಸನಿಗೆ ಉತ್ತರಕ್ರಿಯಾದಿಗಳನ್ನು ಮಾಡಿಸಿ ಬ್ರಾಹ್ಮಣರಿಗೆ ಯಥೇಚ್ಛವಾಗಿ ದ್ರವ್ಯದಾನ ಮಾಡಿದುದಲ್ಲದೆ, ಧೀಮಂತನಾದ ಉಗ್ರಸೇನ ಗೆ [illegible] ವ ಕೊಟ್ಟನು.

೯೬–೯೭. ಚಂದ್ರವಂಶೋದ್ಭವನಾದ ಆ ಉಗ್ರಸೇನನು ಚಕ್ರವರ್ತಿಯಾದನು. ಅನಂತರ ಕಂಸನ ತಾಯಿಯೂ ಪತ್ನಿಯರೂ, ತಂದೆಯೂ, ಬಂಧುವರ್ಗದವರೂ, ಮಾತೃಬಂಧುಗಳೂ, ಸಹೋದರನಲ್ಲಿ ವಾತ್ಸಲ್ಯವುಳ್ಳ ಸಹೋದರಿಯೂ ಈ ರೀತಿ ಅಳಲಾರಂಭಿಸಿದರು. ಎಲೈ ರಾಜೇಂದ್ರನೇ, ಮೇಲಕ್ಕೆ ಎದ್ದು ಸಿಂಹಾಸನದಲ್ಲಿ ಕುಳಿತು ನಮಗೆ ದರ್ಶನವನ್ನು ಕೊಡು.

ರಾಜ್ಯಂ ರಕ್ಷ ಧನಂ ರಕ್ಷ ಬಾಂಧವಂ ಬಲಮೇವ ಚ ।
ಕ್ವ ಯಾಸಿ ಬಾಂಧವಾನ್ ಹಿತ್ವಾ ತ್ವಮನಾಥಾನ್ಮಹಾಬಲ ॥ ೯೮ ॥

ಬ್ರಹ್ಮಾದಿಸ್ತಂಬಪರ್ಯಂತಮಸಂಖ್ಯಂ ವಿಶ್ವಮೇವ ಚ ।
ಸರ್ವಂ ಚರಾಚರಾಧಾರಂ ಯಃ ಸೃಜತ್ಯೇವ ಲೀಲಯಾ ॥ ೯೯ ॥

ಬ್ರಹ್ಮೇಶಶೇಷಧರ್ಮಾಶ್ಚ ದಿನೇಶಶ್ಚ ಗಣೇಶ್ವರಃ ।
ಮುನೀಂದ್ರವರ್ಗೋ ದೇವೇಂದ್ರೋ ಧ್ಯಾಯತೇ ಯಮಹರ್ನಿಶಂ ॥೧೦೦॥

ವೇದಾಃ ಸ್ತುವಂತಿ ಯಂ ಕೃಷ್ಣಂ ಸ್ತೌತಿ ಭೀತಾ ಸರಸ್ವತೀ ।
ಸ್ತೌತಿ ಯಂ ಪ್ರಕೃತಿರ್ಹೃಷ್ಟಾ ಪ್ರಾಕೃತಂ ಪ್ರಕೃತೇಃ ಪರಂ ॥ ೧೦೧ ॥

ಸ್ವೇಚ್ಛಾಮಯಂ ನಿರೀಹಂ ಚ ನಿರ್ಗುಣಂ ಚ ನಿರಂಜನಂ ।
ಪರಾತ್ಪರತರಂ ಬ್ರಹ್ಮ ಪರಮಾತ್ಮಾನಮೀಶ್ವರಂ ॥ ೧೦೨ ॥

---

೯೮. ರಾಜ್ಯವನ್ನೂ ಕೋಶವನ್ನೂ, ಬಂಧುಗಳನ್ನೂ ಮತ್ತು ಸೈನ್ಯವನ್ನೂ ಕಾಪಾಡು. ಎಲೈ ಮಹಾಬಲಶಾಲಿಯೇ, ಬಂಧುಗಳನ್ನೆಲ್ಲ ಅನಾಥರನ್ನಾಗಿ ಮಾಡಿ ಬಿಟ್ಟು ನೀನೆಲ್ಲಿಗೆ ಹೋಗುವೆ.

೯೯. ಬ್ರಹ್ಮನಿಂದ ಮೊದಲಾಗಿ ತೃಣಪರ್ಯಂತವಾಗಿರುವ ಅಸಂಖ್ಯ ವಿಶ್ವವನ್ನೂ ಸ್ಥಾವರಜಂಗಮಾತ್ಮಕವಾದ ನಿಖಿಲಪ್ರಪಂಚವನ್ನೂ ಯಾವ ಪರಮಾತ್ಮನು ಲೀಲಾಮಾತ್ರದಿಂದ ಸೃಜಿಸುವನೋ ಅವನ ಮುಂದೆ ಹುಲುಮನುಜರಾದ ನಮ್ಮದೇನಿದೆ?

೧೦೦. ಬ್ರಹ್ಮ, ಈಶ್ವರ, ಆದಿಶೇಷ, ಧರ್ಮ, ಸೂರ್ಯ, ಮತ್ತು ಗಣೇಶನೂ, ಮುನಿವರ್ಯರೂ, ದೇವೇಂದ್ರನೂ ಯಾವ ಪರಮಾತ್ಮನನ್ನು ಹಗಲು ರಾತ್ರಿ ಧ್ಯಾನಮಾಡುವರೋ ಆ ಪರಮಾತ್ಮನಿಗೆ ಅಧೀನವಾಗದವರಾರು ?

೧೦೧. ಯಾವ ಶ್ರೀಕೃಷ್ಣಪರಮಾತ್ಮನನ್ನು ಚತುರ್ವೇದಗಳೂ ಸ್ತುತಿಸುವುವೋ ಸರಸ್ವತಿಯೂ ಭಯದಿಂದ ಸ್ತುತಿಸುವಳೋ ಪ್ರಾಚೀನನೂ, ಪ್ರಕೃತಿಗಿಂತ ಮೇಲಾದವನೂ ಆದ ಯಾವನನ್ನು ಪ್ರಕೃತಿದೇವಿಯೂ ಸಂತೋಷದಿಂದ ಸ್ತುತಿಸುವಳೋ, ಅಂಥ ಪರಮಾತ್ಮನಿಗೆ ಎದುರಾರು ?

೧೦೨ ಸ್ವೇಚ್ಛಾಮಯನೂ, ಇಚ್ಛಾರಹಿತನೂ, ನಿರ್ಗುಣನೂ, ನಿರ್ಲಿಪ್ತನೂ ಪರಾತ್ಪರನೂ ಪರಬ್ರಹ್ಮಸ್ವರೂಪನೂ ಆದ ಆ ಪರಮಾತ್ಮನು ಸರ್ವಶಕ್ತನಲ್ಲವೆ ?

ನಿತ್ಯಂ ಜ್ಯೋತಿಃಸ್ವರೂಪಂ ಚ ಭಕ್ತಾನುಗ್ರಹವಿಗ್ರಹಂ ।
ನಿತ್ಯಾನಂದಂ ಚ ನಿತ್ಯಂ ಚ ನಿತ್ಯಮಕ್ಷರವಿಗ್ರಹಂ ॥ ೧೦೩ ॥

ಸೋಽವತೀರ್ಣೋ ಹಿ ಭಗವಾನ್ ಭಾರಾವತರಣಾಯ ಚ ।
ಗೋಪಾಲಬಾಲವೇಷಶ್ಚ ಮಾಯೇಶೋ ಮಾಯಯಾ ಪ್ರಭುಃ ॥ ೧೦೪ ॥

ಸ ಯಂ ಹಂತಿ ಚ ಸರ್ವೇಶೋ ರಕ್ಷಿತಾ ತಸ್ಯ ಕಃ ಪುಮಾನ್ ।
ಸ ಯಂ ರಕ್ಷತಿ ಸರ್ವಾತ್ಮಾ ತಸ್ಯ ಹಂತಾ ನ ಕೋಽಪಿ ಚ ॥ ೧೦೫ ॥

ಇತ್ಯೇವಮುಕ್ತ್ವಾ ಸರ್ವಾಂಶ್ಚ ವಿರರಾಮ ಮಹಾಮುನೇ ।
ಬ್ರಾಹ್ಮಣಾನ್ ಭೋಜಯಾಮಾಸ ತೇಭ್ಯಃ ಸರ್ವಂ ಧನಂ ದದೌ ॥ ೧೦೬ ॥

ಭಗವಾನಪಿ ಸರ್ವಾತ್ಮಾ ಜಗಾಮ ಪಿತುರಂತಿಕಂ ।
ಛಿತ್ವಾ ಚ ಲೋಹನಿಗಡಂ ತಯೋರ್ಮೋಕ್ಷಂ ಚಕಾರ ಸಃ ॥ ೧೦೭ ॥

೧೦೩-೧೦೪. ಸರ್ವದಾ ಜ್ಯೋತಿರ್ಮಯನಾದರೂ, ಭಕ್ತಾನುಗ್ರಹಕ್ಕಾಗಿ ವಿಗ್ರಹಧಾರಿಯೂ, ನಿತ್ಯಾನಂದ ಸ್ವರೂಪನಾಗಿಯೂ, ಶಾಶ್ವತವೂ, ನಾಶರಹಿತವೂ ಆದ ವಿಗ್ರಹಧಾರಿಯಾಗಿಯೂ ಇರುವ ಆ ಪರಮಾತ್ಮನು ಮಾಯಾಪತಿಯಾದುದರಿಂದಲೂ, ಸರ್ವಶಕ್ತನಾದುದರಿಂದಲೂ ಭೂಭಾರವನ್ನಿಳುಹಲು ಗೋಪಾಲವೇಷಧಾರಿಯಾಗಿ ಭೂಮಿಯಲ್ಲಿ ಅವತಾರಮಾಡಿದ್ದಾನೆ.

೧೦೫. ಸರ್ವೇಶ್ವರನಾದ ಆ ಪರಮಾತ್ಮನು ಯಾರನ್ನು ನಾಶಪಡಿಸುವನೋ ಅವನನ್ನು ಕಾಪಾಡಲು ಶಕ್ತರಾರು ? ಅದೇ ರೀತಿ ಸರ್ವಾತ್ಮಕನಾದ ಅವನು ಯಾರನ್ನು ರಕ್ಷಿಸುವನೋ ಅವನನ್ನು ನಾಶಪಡಿಸಲು ಯಾರಿಂದಲೂ ಸಾಧ್ಯವಿಲ್ಲ.

೧೦೬. ಎಲೈ ಮಹಾಮುನಿಯೇ, ಎಲ್ಲರೂ ಹೀಗೆ ಹೇಳಿ ಸುಮ್ಮನಾದರು. ಶ್ರೀ ಕೃಷ್ಣನೂ ಸಹ ಕಂಸವಧೆಯ ಶಾಂತಿಗಾಗಿ ಬ್ರಾಹ್ಮಣರನೇಕರಿಗೆ ತೃಪ್ತಿಯಾಗಿ ಊಟಮಾಡಿಸಿ ಯಥೇಚ್ಛವಾಗಿ ದಕ್ಷಿಣೆಯನ್ನು ಕೊಟ್ಟನು.

೧೦೭. ಅನಂತರ ಭಗವಂತನಾದ ಶ್ರೀಹರಿಯು ತನ್ನ ತಂದೆತಾಯಿಗಳ ಸಮಾಪಕ್ಕೆ ಹೋಗಿ ಅವರ ಲೋಹಶೃಂಖಲೆಗಳ ಬಂಧನವನ್ನು ಕಿತ್ತು ಅವರ ಬಂಧ ವಿಮೋಚನೆಮಾಡಿದನು.

ನನಾಮ ದಂಡವದ್ಭೂಮೌ ಮಾತರಂ ಪಿತರಂ ತಥಾ ।
ತುಷ್ಟಾವ ಭಕ್ತ್ಯಾ ದೇವೇಶೋ ಭಕ್ತಿನಮ್ರಾತ್ಮಕಂಧರಃ ॥ ೧೦೮ ॥

॥ ಶ್ರೀ ಭಗವಾನುವಾಚ ॥

ಪಿತರಂ ಮಾತರಂ ವಿದ್ಯಾಮಂತ್ರದಂ ಗುರುಮೇವ ಚ ।
ಯೋ ನ ಪುಷ್ಣಾತಿ ಪುರುಷೋ ಯಾವಜ್ಜೀವಂ ಚ ಸೋಽಶುಚಿಃ ॥ ೧೦೯ ॥

ಸರ್ವೇಷಾಮಪಿ ಪೂಜ್ಯಾನಾಂ ಪಿತಾ ವಂದ್ಯೋ ಮಹಾನ್ ಗುರುಃ ।
ಪಿತುಃ ಶತಗುಣೈರ್ಮಾತಾ ಗರ್ಭಧಾರಣಪೋಷಣಾತ್ ॥ ೧೧೦ ॥

ಮಾತಾ ಚ ಪೃಥಿವೀರೂಪಾ ಸರ್ವೇಭ್ಯಶ್ಚ ಹಿತೈಷಿಣೀ ।
ನಾಸ್ತಿ ಮಾತುಃ ಪರೋ ಬಂಧುಃ ಸರ್ವೇಷಾಂ ಜಗತೀತಲೇ ॥ ೧೧೧ ॥

ವಿದ್ಯಾಮಂತ್ರಪ್ರದಃ ಸತ್ಯಂ ಮಾತುಃ ಪರತರೋ ಗುರುಃ ।
ನ ಹಿ ತಸ್ಮಾತ್ಪರಃ ಕೋಽಪಿ ವಂದ್ಯಃ ಪೂಜ್ಯಶ್ಚ ವೇದತಃ ॥ ೧೧೨ ॥

---

೧೦೮. ದೇವದೇವನಾದ ಶ್ರೀಕೃಷ್ಣನು ತನ್ನ ತಾಯಿತಂದೆಗಳಿಗೆ ದಂಡ ಪ್ರಣಾಮ ಮಾಡಿ ಭಕ್ತಿಯಿಂದ ತಲೆಬಾಗಿ ಅವರನ್ನು ಸ್ತುತಿಸಲಾರಂಭಿಸಿದನು.

೧೦೯. ಶ್ರೀಭಗವಾನ್ ;—ಯಾವ ಮನುಜನು ತಂದೆಯನ್ನೂ ತಾಯಿಯನ್ನೂ ವಿದ್ಯೆ ಮತ್ತು ಮಂತ್ರವನ್ನು ಉಪದೇಶಿಸಿದ ಗುರುವನ್ನೂ ಪೋಷಿಸುವುದಿಲ್ಲವೋ ಅವನು ಬದುಕಿರುವವರೆಗೂ ಅಶುಚಿಯೆನಿಸುವನು.

೧೧೦. ಪೂಜ್ಯರುಗಳಲ್ಲೆಲ್ಲ ಮಹಾಗುರುವಾದ ತಂದೆಯೇ ಪರಮಪೂಜ್ಯನು ತಾಯಿಯು ಗರ್ಭದಲ್ಲಿ ಧರಿಸುವುದರಿಂದಲೂ ಅನಂತರ ಶಿಶುವನ್ನು ಪೋಷಿಸುವುದರಿಂದಲೂ ತಂದೆಗಿಂತ ನೂರು ಪಾಲು ಪೂಜ್ಯಳೆನಿಸುವಳು.

೧೧೧. ಮಕ್ಕಳಿಗೆಲ್ಲ ಹಿತಕಾರಿಣಿಯಾದ ಮಾತೆಯು ಪೃಥ್ವಿಗೆ ಸಮಳೆನಿಸುವಳು. ಪ್ರಪಂಚದಲ್ಲಿ ಎಲ್ಲರಿಗೂ ತಾಯಿಗಿಂತ ಮೇಲಾದ ಬಂಧುವು ಬೇರೊಬ್ಬರಿಲ್ಲ.

೧೧೨. ವಿದ್ಯೆಯನ್ನೂ ಮಂತ್ರವನ್ನೂ ಉಪದೇಶಿಸುವ ಗುರುವಾದರೋ ತಾಯಿಗಿಂತ ಮೇಲಾದವನು. ಅವನಿಗಿಂತಲೂ ವಂದ್ಯನೂ ಪೂಜ್ಯನೂ ಮತ್ತಾರೂ ಇಲ್ಲವೆಂದು ವೇದೋಕ್ತವಾಗಿದೆ.

ಇತ್ಯೇವಮುಕ್ತ್ವಾ ಶ್ರೀಕೃಷ್ಣೋ ಬಲಭದ್ರೋ ನನಾಮ ಚ ।
ಮಾತಾ ಚಕಾರ ತೌ ಕ್ರೋಡೇ ಪಿತಾ ಚ ಸಾದರಂ ಮುನೇ ॥ ೧೧೩ ॥

ಮಿಷ್ಟಾನ್ನಂ ಪರಮಂ ತೌ ಚ ಭೋಜಯಾಮಾಸ ಸಾದರಂ ।
ನಂದಂ ಚ ಭೋಜಯಾಮಾಸ ಗೋಪಾಲಾನ್ಪರಮಾದರಂ ॥ ೧೧೪ ॥

ಮಂಗಲಂ ಕಾರಯಾಮಾಸ ಭೋಜಯಾಮಾಸ ಬ್ರಾಹ್ಮಣಾನ್ ।
ವಸುವರ್ಸುಸಮೂಹಂ ಚ ಬ್ರಾಹ್ಮಣೇಭ್ಯೋ ದದೌ ಮುದಾ ॥ ೧೧೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣನಾರದಸಂವಾದೇ
ಕಂಸವಧವಸುದೇವದೇವಕೀಮೋಕ್ಷಣಂ
ನಾಮದ್ವಿಸಪ್ತತಿತಮೋಽಧ್ಯಾಯಃ

---

೧೧೩. ಈ ರೀತಿಯಾಗಿ ಹೇಳಿ ಶ್ರೀ ಕೃಷ್ಣನು ತಾಯಿತಂದೆಗಳಿಗೆ ನಮಸ್ಕರಿಸಿದ ನಂತರ ಬಲರಾಮನೂ ಅವನಿಗೆ ನಮಸ್ಕರಿಸಿದನು ಅವರ ತಂದೆ ತಾಯಿಗಳಾದ ವಸುದೇವ ದೇವಕಿಯರು ಆ ಮಕ್ಕಳನ್ನು ಆಲಿಂಗಿಸಿಕೊಂಡರು.

೧೧೪. ಅವರಿಬ್ಬರಿಗೂ ಆದರದಿಂದ ಮಿಷ್ಟಾನ್ನ ಭೋಜನಮಾಡಿಸಿದುದಲ್ಲದೆ ನಂದಗೋಪನಿಗೂ ಇತರಗೋಪರಿಗೂ ಅತ್ಯಾದರದಿಂದ ತೃಪ್ತಿಯಾಗಿ ಊಟ ಮಾಡಿಸಿದರು.

೧೧೫. ಮಂಗಳಕಾರ್ಯಗಳನ್ನು ಮಾಡಿಸಿ ಬ್ರಾಹ್ಮಣರಿಗೆ ಮಿಷ್ಟಾನ್ನ ಭೋಜನ ಮಾಡಿಸಿದುದಲ್ಲದೆ ಯಥೇಚ್ಛವಾಗಿ ದ್ರವ್ಯ ದಕ್ಷಿಣೆಗಳನ್ನು ಸಂತೋಷದಿಂದ ಕೊಟ್ಟರು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀ ಕೃಷ್ಣಜನ್ಮ ಖಂಡದ
ಉತ್ತರಾರ್ಧದಲ್ಲಿ ನಾರಾಯಣನಾರದ ಸಂವಾದಪ್ರಸಂಗದಲ್ಲಿ
ಕಂಸವಧೆ ಮತ್ತು ವಸುದೇವ ದೇವಕಿಯರ ಮೋಕ್ಷಣ
ವನ್ನು ತಿಳಿಸುವ ಎಪ್ಪತ್ತೆರಡನೆಯ ಅಧ್ಯಾಯವು
ಮುಗಿದುದು.

ಎಪ್ಪತ್ತೆರಡನೆಯ ಅಧ್ಯಾಯದ ಸಾರಾಂಶ.

ಶ್ರೀ ಕೃಷ್ಣನು ಬಲರಾಮನೊಡನೆಯೂ ಅಕ್ರೂರ ಮುಂತಾದ ಆಪ್ತರೊಡನೆಯೂ ನಂದಗೋಕುಲವನ್ನು ಬಿಟ್ಟು ಮಧುರಾನಗರಿಗೆ ಹೋಗಿ ಆ ನಗರದ ವೈಭವವನ್ನು ನೋಡಿ ವಿಸ್ಮಯ ಪಡುತ್ತಿದ್ದಾಗ ಮಧ್ಯಮಾರ್ಗದಲ್ಲಿ ಕುಬ್ಜೆಯೊಬ್ಬಳನ್ನು ಕಂಡನು. ಕಂಸನಿಗೆ ಪರಿಮಳಭರಿತವಾದ ದಿವ್ಯ ಚಂದನವನ್ನು ತೆಗೆದುಕೊಂಡು ಹೋಗುತ್ತಿದ್ದ ಆ ಕುಬ್ಜೆಯು ಕೃಷ್ಣಬಲರಾಮರನ್ನೂ ಇತರ ಗೋಪರನ್ನೂ ಕಂಡು ಭಕ್ತಿಪರವಶಳಾಗಿ ಚಂದನವನ್ನು ಅವರಿಗೇ ಲೇಪಿಸಿದಳು. ಪ್ರಸನ್ನನಾದ ಶ್ರೀ ಕೃಷ್ಣನು ಆ ಕುಬ್ಜೆಗೆ ದಿವ್ಯ ಸುಂದರರೂಪವನ್ನು ಅನುಗ್ರಹಿಸಿದುದಲ್ಲದೆ ಆಕೆಯ ಇಷ್ಟಾರ್ಥವನ್ನು ಪೂರ್ಣಗೊಳಿಸಿ ಗೋಲೋಕಕ್ಕೆ ಕಳುಹಿದನು. (ಶ್ರೀ ರಾಮನ ದಿವ್ಯ ಸುಂದರರೂಪಕ್ಕೆ ಮೋಹಗೊಂಡಿದ್ದ ಶೂರ್ಪಣಖಿಯು ತನ್ನ ಇಷ್ಟಾರ್ಥವು ಕೈಗೂಡದಿದ್ದುದರಿಂದ ಕುಬ್ಜೆಯಾಗಿ ಹುಟ್ಟಿ ಕೃಷ್ಣಾವತಾರಿಯಾದ ಪರಮಾತ್ಮನ ಸಂಪರ್ಕವನ್ನು ಹೊಂದಿ ಮುಕ್ತಳಾದಳು) ಅನಂತರ ಶ್ರೀ ಕೃಷ್ಣನು ಮುಂದೆ ಹೋಗುತ್ತ ಒಬ್ಬ ಅಗಸನನ್ನೂ ಮತ್ತು ನೆಯ್ಗೆಯವನನ್ನೂ ಕಂಡು ಅವರ ಗರ್ವವನ್ನು ಭಂಗಗೊಳಿಸಿ ಅವರಿಗೆ ಮುಕ್ತಿಯನ್ನು ಕೊಟ್ಟನು. ಆ ಸಮಯದಲ್ಲಿ ಕಂಸನಿಗೆ ಕೆಟ್ಟ ಕನಸಾಗಿ ಗಾಭರಿಯಿಂದ ಎಚ್ಚೆತ್ತು ಧನುರ್ಯಾಗಕ್ಕೆ ಸಿದ್ಧಗೊಳಿಸಿ ಕುವಲಯಾಪೀಡವೆಂಬ ಆನೆಯನ್ನೂ, ಮುಷ್ಟಿಕ ಚಾಣೂರರೆಂಬ ಜಟ್ಟಿಗಳನ್ನೂ ಕೃಷ್ಣನೊಡನೆ ಯುದ್ಧಮಾಡಲು ಸಿದ್ಧಗೊಳಿಸಿದನು. ಶ್ರೀ ಕೃಷ್ಣನು ಬಲರಾಮನೊಡನೆ ಅಲ್ಲಿಗೆ ಬಂದು ಧನುರ್ಭಂಗ ಮಾಡಿದುದಲ್ಲದೆ ಆ ಆನೆಯನ್ನೂ ಜಟ್ಟಿಗಳನ್ನೂ ಸಂಹರಿಸಿ ಕಂಸನನ್ನೂ ವಧಿಸಿ ಉಗ್ರಸೇನನಿಗೆ ಪಟ್ಟಕಟ್ಟಿ, ಬಂಧನದಲ್ಲಿದ್ದ ತನ್ನ ತಂದೆತಾಯಿಗಳನ್ನು ಬಿಡಿಸಿದನು. ಬಂಧನಮುಕ್ತರಾದ ವಸುದೇವದೇವಕಿಯರು ಮಂಗಳಕಾರ್ಯಗಳನ್ನು ಮಾಡಿಸಿ ಬ್ರಾಹ್ಮಣರಿಗೆ ಭೋಜನಮಾಡಿಸಿದರು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ತ್ರಿಸಪ್ತತಿತಮೋಽಧ್ಯಾಯಃ ||

|| ಶ್ರೀ ನಾರಾಯಣ ಉವಾಚ ||

ಅಥ ಕೃಷ್ಣಶ್ಚ ಸಾನಂದಂ ನಂದಂ ತಂ ಪಿತರಂ ಬಲಃ ।
ಬೋಧಯಾಮಾಸ ಶೋಕಾರ್ತಂ ದಿವ್ಯೈರಾಧ್ಯಾತ್ಮಿಕಾದಿಭಿಃ ||೧||

ಉಚ್ಚೈ ರುದಂತಂ ನಿಶ್ಚೇಷ್ಟಂ ಪುತ್ರವಿಚ್ಛೇದಕಾತರಂ ।
ದತ್ವಾ ತಸ್ಮೈ ಮಣಿಶ್ರೇಷ್ಠಮಿತ್ಯುವಾಚ ಜಗತ್ಪತಿಃ ||೨||

|| ಶ್ರೀ ಭಗವಾನುವಾಚ ||

ನಿಬೋಧ ನಂದ ಸಾನಂದಂ ತ್ಯಜ ಶೋಕಂ ಮುದಂ ಲಭ ।
ಜ್ಞಾನಂ ಗೃಹಾಣ ಮದ್ದತ್ತಂ ಯದ್ದತ್ತಂ ಬ್ರಹ್ಮಣೇ ಪುರಾ ||೩||

ಎಪ್ಪತ್ತಮೂರನೆಯ ಅಧ್ಯಾಯ

೧. ಶ್ರೀನಾರಾಯಣ :—ಅನಂತರ ಶ್ರೀಕೃಷ್ಣನು ಪುತ್ರವಿರಹಶೋಕದಿಂದ ಪೀಡಿತನಾದ ನಂದಗೋಪನನ್ನು ಕುರಿತು ದಿವ್ಯವಾದ ಆಧ್ಯಾತ್ಮಿಕ ತತ್ವಗಳನ್ನು ಆನಂದದಿಂದ ಉಪದೇಶಿಸಿದನು.

೨. ಪುತ್ರವಿರಹದಿಂದ ಕಾತರನಾಗಿ ಗಟ್ಟಿಯಾಗಿ ಅಳುತ್ತಾ ನಿಶ್ಚೇಷ್ಟನಾಗಿ ಕುಳಿತಿದ್ದ ನಂದಗೋಪನಿಗೆ ಶ್ರೇಷ್ಠವಾದ ಮಣಿಯೊಂದನ್ನು ಕೊಟ್ಟು ಜಗದೊಡೆಯನಾದ ಶ್ರೀಕೃಷ್ಣನು ಇಂತೆಂದನು.

೩. ಶ್ರೀಭಗವಾನ್ :—ಎಲೈ ನಂದಗೋಪನೇ, ನೀನು ಶೋಕವನ್ನು ಬಿಟ್ಟು ಸಂತೋಷವನ್ನು ಹೊಂದುವವನಾಗು. ಪೂರ್ವದಲ್ಲಿ ಬ್ರಹ್ಮನಿಗೆ ನಾನು ಯಾವ ದಿವ್ಯಜ್ಞಾನವನ್ನು ಉಪದೇಶಿಸಿದೆನೋ ಅದೇ ದಿವ್ಯಜ್ಞಾನವನ್ನು ನಿನಗೆ ಉಪದೇಶಿಸುವೆನು ಸ್ವೀಕರಿಸು.

ಯದ್ವ್ಯದ್ದತ್ತಂ ಚ ಶೇಷಾಯ ಗಣೇಶಾಯೇಶ್ವರಾಯ ಚ ।
ದಿನೇಶಾಯ ಮುನೀಶಾಯ ಯೋಗೀಶಾಯ ಚ ಪುಷ್ಕರೇ ॥ ೪ ॥

ಕಃ ಕಸ್ಯ ಪುತ್ರಃ ಕಸ್ತಾತಃ ಕಾ ಮಾತಾ ಕಸ್ಯಚಿತ್ಕುತಃ ।
ಆಯಾಂತಿ ಯಾಂತಿ ಸಂಸಾರಂ ಪರಂ ಸ್ವಕೃತಕರ್ಮಣಾ ॥ ೫ ॥

ಕರ್ಮಾನುಸಾರಾಜ್ಜಂತುಶ್ಚ ಜಾಯತೇ ಸ್ಥಾನಭೇದತಃ ।
ಕರ್ಮಣಾ ಕೋಽಪಿ ಜಂತುಶ್ಚ ಯೋಗೀಂದ್ರಾಣಾಂ ನೃಪಸ್ತ್ರಿಯಾಂ ॥ ೬ ॥

ದ್ವಿಜಪತ್ನ್ಯಾಂ ಕ್ಷತ್ರಿಯಾಣಾಂ ವೈಶ್ಯಾಯಾಂ ಶೂದ್ರಯೋನಿಷು ।
ತಿರ್ಯಗ್ಯೋನಿಷು ಕಶ್ಚಿಚ್ಚ ಕಶ್ಚಿತ್ಪಶ್ವಾದಿಯೋನಿಷು ॥ ೭ ॥

ಮಮ್ಮೈವ ಮಾಯಯಾ ಸರ್ವೇ ಸಾನಂದಾ ವಿಷಯೇಷು ಚ ।
ದೇಹತ್ಯಾಗೇ ವಿಷಣ್ಣಾಶ್ಚ ವಿಚ್ಛೇದೇ ಬಾಂಧವಸ್ಯ ಚ ॥ ೮ ॥

---

೪. ಪೂರ್ವದಲ್ಲಿ ಆದಿಶೇಷನಿಗೂ, ಗಣೇಶನಿಗೂ, ಈಶ್ವರನಿಗೂ, ಸೂರ್ಯನಿಗೂ ಮುನೀಶ ಮತ್ತು ಯೋಗೀಶ್ವರನಿಗೂ ಪುಷ್ಕರಕ್ಷೇತ್ರದಲ್ಲಿ ಯಾವ ದಿವ್ಯ ಜ್ಞಾನವನ್ನು ಉಪದೇಶಿಸಿದೆನೋ ಅದನ್ನೇ ನಿನಗೂ ಉಪದೇಶಿಸುವೆನು.

೫. ಯಾರು ಯಾರಿಗೆ ಮಗ? ಯಾರು ಯಾರಿಗೆ ತಂದೆ? ತಾಯಿಯಾರು? ತಂದೆಯಾರು? ಎಲ್ಲರೂ ತಮ್ಮ ಜನ್ಮಾಂತರದ ಕರ್ಮಾನುಸಾರವಾಗಿ ಸಂಸಾರದಲ್ಲಿ ಜನಿಸುವರು ಮತ್ತು ಮೃತರಾಗುವರು.

೬. ಪ್ರಾಣಿಯು ತನ್ನ ಕರ್ಮಾನುಗುಣವಾಗಿ ಬೇರೆ ಬೇರೆ ಯೋನಿಯಲ್ಲಿ ಜನ್ಮವೆತ್ತುವನು ಒಬ್ಬ ಜೀವಿಯು ತನ್ನ ಜನ್ಮಾಂತರದ ಕರ್ಮಾನುಗುಣವಾಗಿ ಯೋಗೀಂದ್ರರಪುತ್ರನಾಗಿ ರಾಜಮಹಿಷಿಯರ ಉದರದಲ್ಲಿ ಜನಿಸುವನು.

೭. ಕೆಲವರು ದ್ವಿಜಪತ್ನಿಯರಲ್ಲಿಯೂ ಮತ್ತೆ ಕೆಲವರು ಕ್ಷತ್ರಿಯಸ್ತ್ರೀಯರಲ್ಲಿಯೂ, ವೈಶ್ಯ ಮತ್ತು ಶೂದ್ರಯೋನಿಯಲ್ಲಿಯೂ ಜನಿಸುವರು ಕೆಲವರು ಮೂಕಜಂತುಗಳಾಗಿಯೂ, ಕೆಲವರು ಪಶುಗಳಾಗಿಯೂ ಜನ್ಮಾಂತರದ ಕರ್ಮಾನುಸಾರವಾಗಿ ಜನಿಸುವರು.

೮. ಎಲ್ಲ ಜೀವಿಗಳೂ ನನ್ನ ಮಾಯಾಶಕ್ತಿಯಿಂದಲೇ ವಿಷಯಸುಖವನ್ನನುಭವಿಸುವರು. ಅಲ್ಲದೆ ದೇಹತ್ಯಾಗಮಾಡುವಾಗಲೂ, ಬಂಧುಗಳ ವಿರಹದಲ್ಲಿಯೂ ದುಃಖಿತರಾಗುವರು.

ಪ್ರಜಾಭೂಮಿಧನಾದೀನಾಂ ವಿಚ್ಛೇದೋ ಮರಣಾಧಿಕಃ ।
ನಿತ್ಯಂ ಭವತಿ ಮೂಢಸ್ಯ ನ ಚ ವಿದ್ವಾಂಸಃ ಚಾ ಯುತಃ ॥ ೯ ॥

ಮದ್ಭಕ್ತೋ ಭಕ್ತಿಯುಕ್ತಶ್ಚ ಮದ್ಯಾಜೀ ವಿಜಿತೇಂದ್ರಿಯಃ ।
ಮನ್ಮಂತ್ರೋಪಾಸಕಶ್ಚೈವ ಮತ್ಸೇವಾನಿರತಃ ಶುಚಿಃ ॥ ೧೦ ॥

ಮದ್ಭಯಾದ್ವಾತಿ ವಾತೋಽಯಂ ರವಿರ್ಭಾತಿ ಚ ನಿತ್ಯಶಃ ।
ಭಾತಿ ಚಂದ್ರೋ ಮಹೇಂದ್ರಶ್ಚ ಕಾಲಭೇದೇ ಚ ವರ್ಷತಿ ॥ ೧೧ ॥

ವಹ್ನಿರ್ದಹತಿ ಮೃತ್ಯುಶ್ಚ ಚರತ್ಯೇವ ಹಿ ಜಂತುಷು ।
ಬಿಭರ್ತಿ ವೃಕ್ಷಃ ಕಾಲೇನ ಪುಷ್ಪಾಣಿ ಚ ಫಲಾನಿ ಚ ॥ ೧೨ ॥

ನಿರಾಧಾರಶ್ಚ ವಾಯುಶ್ಚ ವಾಯ್ವಾಧಾರಶ್ಚ ಕಚ್ಛಪಃ ।
ಶೇಷಶ್ಚ ಕಚ್ಛಪಾಧಾರಃ ಶೇಷಾಧಾರಾಶ್ಚ ಪರ್ವತಾಃ ॥ ೧೩ ॥

---

೯ ಮೂಢನಿಗೆ ಬಂಧುವಿರಹವೂ, ಗೃಹಕ್ಷೇತ್ರಧನಾದಿಗಳ ವಿಚ್ಛೇದವೂ ಮರಣಕ್ಕಿಂತ ಹೆಚ್ಚು ದುಃಖಕರವಾಗುವುದು. ವಿದ್ವಾಂಸನಾದವನು ಇವುಗಳಿಂದ ದುಃಖಿತನಾಗುವುದಿಲ್ಲ.

೧೦. ನನ್ನ ಭಕ್ತನಾದ ವಿದ್ವಾಂಸನು ಸರ್ವದಾ ಜಿತೇಂದ್ರಿಯನಾಗಿ ಭಕ್ತಿಯಿಂದ ನನ್ನನ್ನು ಭಜಿಸುವುದಲ್ಲದೆ ನನ್ನ ಮಂತ್ರವನ್ನು ಉಪಾಸನೆ ಮಾಡುತ್ತ, ಶುಚಿಯಾಗಿ ನನ್ನ ಸೇವೆಯಲ್ಲಿ ನಿರತನಾಗಿರುವನು.

೧೧. ವಾಯುದೇವನು ಸರ್ವದಾ ಚಲಿಸುತ್ತಿರುವುದೂ, ಸೂರ್ಯದೇವನು ಬೆಳಗುತ್ತಿರುವುದೂ ನನ್ನ ಭಯದಿಂದಲೇ. ನನ್ನ ಭಯದಿಂದ ಚಂದ್ರನು ಬೆಳಗುವನು. ಮಹೇಂದ್ರನು ಕಾಲಾನುಗುಣವಾಗಿ ಮಳೆಗರೆಯುವನು

೧೨. ನನ್ನ ಭಯದಿಂದ ಅಗ್ನಿದೇವನು ಸುಡುವನು. ಮೃತ್ಯುದೇವತೆಯು ಸಕಲ ಜೀವಿಗಳಲ್ಲೂ ಸಂಚರಿಸುವಳು ಮರವು ಕಾಲಾನುಗುಣವಾಗಿ ಹೂವು ಹಣ್ಣುಗಳನ್ನು ಧರಿಸುವುದು.

೧೩. ವಿಶ್ವವ್ಯಾಪಿಯಾದ ವಾಯುವು ನಿರಾಧಾರವಾಗಿರುವುದು. ಆ ವಾಯುವು ಆದಿಕೂರ್ಮನಿಗೆ ಆಧಾರವಾಗಿರುವುದು. ಆದಿಶೇಷನಿಗೆ ಆ ಕೂರ್ಮನು ಆಧಾರನಾಗಿಯೂ, ಆದಿಶೇಷನು ಕುಲಪರ್ವತಗಳಿಗೆ ಆಧಾರನಾಗಿಯೂ ಇರುವನು.

ತದಾಧಾರಾಶ್ಚ ಪಾತಾಲಾಃ ಸಪ್ತ ಏವ ಹಿ ಪಂಕ್ತಿತಃ ।
ನಿಶ್ಚಲಂ ಚ ಜಲಂ ತೆಸ್ಮಾಜ್ಜಲಸ್ಥಾ ಚ ವಸುಂಧರಾ ॥ ೧೪ ॥

ಸಪ್ತಸ್ವರ್ಗಂ ಧರಾಧಾರಂ ಜ್ಯೋತಿಶ್ಚಕ್ರಂ ಗ್ರಹಾಶ್ರಯಂ ।
ನಿರಾಧಾರಶ್ಚ ವೈಕುಂಠೋ ಬ್ರಹ್ಮಾಂಡೇಭ್ಯಃ ಪರೋ ವರಃ ॥ ೧೫ ॥

ತತ್ಪರಶ್ಚಾಪಿ ಗೋಲೋಕಃ ಪಂಚಾಶತ್ಕೋಟಿಯೋಜನಾತ್ ।
ಊರ್ಧ್ವಂ ನಿರಾಶ್ರಯಶ್ಚಾಪಿ ರತ್ನಸಾರವಿನಿರ್ಮಿತಃ ॥ ೧೬ ॥

ಸಪ್ತದ್ವಾರಃ ಸಪ್ತಸಾರಃ ಪರಿಖಾಸಪ್ತಸಂಯುತಃ ।
ಲಕ್ಷಪ್ರಾಕಾರಯುಕ್ತಶ್ಚ ನದ್ಯಾ ವಿರಜಯಾ ಯುತಃ ॥ ೧೭ ॥

ವೇಷ್ಟಿತೋ ರತ್ನಶೈಲೇನ ಶತಶೃಂಗೇಣ ಚಾರುಣಾ ।
ಯೋಜನಾಯುತಮಾನಂ ಚ ಯಸ್ಯೈಕಂ ಶೃಂಗಮುಜ್ಜ್ವಲಂ ॥ ೧೮ ॥

---

೧೪. ಆ ಪರ್ವತಗಳು ಸಾಲಾಗಿರುವ ಸಪ್ತಪಾತಾಳಲೋಕಗಳಿಗೆ ಆಧಾರವಾಗಿರುವುವು. ನಿಶ್ಚಲವಾದ ಜಲಸಮೂಹದಲ್ಲಿ ಈ ಬ್ರಹ್ಮಾಂಡವೆಲ್ಲವೂ ತೇಲುತ್ತಿರುವುದು.

೧೫. ಜ್ಯೋತಿರ್ಮಂಡಲಕ್ಕೂ ಗ್ರಹಗಳಿಗೂ ಆಶ್ರಯವಾದ ಸಪ್ತಸ್ವರ್ಗಲೋಕಗಳಿಗೂ ವಸುಂಧರೆಯು ಆಧಾರವಾಗಿರುವುದು. ಬ್ರಹ್ಮಾಂಡದ ಆಚೆಯಲ್ಲಿರುವ ಪರಮಶ್ರೇಷ್ಠವಾದ ವೈಕುಂಠವು ಮಾತ್ರ ನಿರಾಧಾರವಾಗಿರುವುದು.

೧೬. ಆ ವೈಕುಂಠಕ್ಕಿಂತ ಐವತ್ತುಕೋಟಿಯೋಜನ ಮೇಲುಭಾಗದಲ್ಲಿ ಗೋಲೋಕವಿರುವುದು. ಆಶ್ರಯರಹಿತವಾದ ಆ ಲೋಕವು ಶ್ರೇಷ್ಠರತ್ನಗಳಿಂದ ನಿರ್ಮಿತವಾಗಿರುವುದು.

೧೭. ಸಪ್ತದ್ವಾರಗಳೂ, ಸಪ್ತಪ್ರಾಕಾರಗಳೂ, ಏಳುಕಂದಕಗಳೂ, ಅಸಂಖ್ಯ ಮಂದಿರಗಳೂ ಉಳ್ಳ ಆ ಗೋಲೋಕದಲ್ಲಿ ವಿರಜಾ ಎಂಬ ನದಿಯು ಹರಿಯುತ್ತಿರುವುದು.

೧೮. ಆ ಲೋಕವು ಮನೋಹರವಾದ 'ಶತಶೃಂಗವೆಂಬ ರತ್ನಶೈಲದಿಂದ ಪರಿವೃತವಾಗಿದೆ. ಆ ಪರ್ವತದ ಉಜ್ವಲವಾದ ಶಿಖರವೊಂದು ಹತ್ತುಸಾವಿರ ಯೋಜನ ಎತ್ತರವಿದೆ.

ಶತಕೋಟಿಯೋಜನಶ್ಚ ಶೈಲ ಉಚ್ಛ್ರಿತ ಏವ ಚ ।
ದೈರ್ಘ್ಯಂ ತಸ್ಯ ಶತಗುಣಂ ಪ್ರಸ್ಥಂ ಚ ಲಕ್ಷಯೋಜನಂ ॥ ೧೯ ॥

ಯೋಜನಾಯುತವಿಸ್ತೀರ್ಣಸ್ತತ್ರೈವ ರಾಸಮಂಡಲಃ ।
ಅಮೂಲ್ಯರತ್ನನಿರ್ಮಾಣೋ ವರ್ತುಲಶ್ಚಂದ್ರಬಿಂಬವತ್ ॥ ೨೦ ॥

ಪಾರಿಜಾತವನೇನೈವ ಪುಷ್ಪಿತೇನ ಚ ವೇಷ್ಟಿತಃ ।
ಕಲ್ಪವೃಕ್ಷಸಹಸ್ರೇಣ ಪುಷ್ಪೋದ್ಯಾನಶತೇನ ಚ ॥ ೨೧ ॥

ನಾನಾವಿಧೈಃ ಪುಷ್ಪವೃಕ್ಷೈಃ ಪುಷ್ಪಿತೇನ ಚ ಚಾರುಣಾ ।
ತ್ರಿಕೋಟಿರತ್ನಭವನೋ ಗೋಪೀಲಕ್ಷೈಶ್ಚ ರಕ್ಷಿತಃ ॥ ೨೨ ॥

ರತ್ನಪ್ರದೀಪಯುಕ್ತಶ್ಚ ರತ್ನತಲ್ಪಸಮನ್ವಿತಃ ।
ನಾನಾಭೋಗಸಮಾಯುಕ್ತೋ ಮಧುವಾಪೀಶತೈರ್ವೃತಃ ॥ ೨೩ ॥

---

೧೯. ಆ ಪರ್ವತವು ನೂರುಕೋಟಿ ಯೋಜನ ಉನ್ನತವಾಗಿದೆ. ಅದಕ್ಕೆ ನೂರರಷ್ಟು ದೀರ್ಘವಾಗಿರುವುದಲ್ಲದೆ ಅದರ ತಪ್ಪಲು ಪ್ರದೇಶವು ಲಕ್ಷಯೋಜನ ವಿಸ್ತೀರ್ಣವಾಗಿದೆ.

೨೦. ಆ ಪರ್ವತದಲ್ಲಿ ಹತ್ತುಸಾವಿರಯೋಜನ ವಿಸ್ತೀರ್ಣವುಳ್ಳ ರಾಸ ಮಂಡಲವಿದೆ. ಅಮೂಲ್ಯರತ್ನಗಳಿಂದ ನಿರ್ಮಿತವಾಗಿರುವ ಆ ರಾಸಮಂಡಲವು ಚಂದ್ರಬಿಂಬದಂತೆ ವರ್ತುಲಾಕಾರವಾಗಿದೆ.

೨೧. ಅದರ ಸುತ್ತಲೂ ಪುಷ್ಪಿತವಾದ ಪಾರಿಜಾತವನವೂ, ಸಾವಿರಾರು ಕಲ್ಪವೃಕ್ಷಗಳೂ, ನೂರಾರು ಪುಷ್ಪೋದ್ಯಾನಗಳೂ ಮನೋಹರವಾಗಿ ಕಂಗೊಳಿ ಸುತ್ತಿವೆ.

೨೨. ನಾನಾವಿಧವಾದ ಆ ಪುಷ್ಪವೃಕ್ಷಗಳು ಸುವಾಸನೆಯಾದ ಪುಷ್ಪಗಳಿಂದ ಶೋಭಿಸುತ್ತಿವೆ. ಅಲ್ಲಿ ಲಕ್ಷಾಂತರ ಗೋಪಿಯರಿಂದ ರಚಿಸಲ್ಪಟ್ಟ ಮೂರುಕೋಟಿ ರತ್ನಮಂದಿರಗಳಿವೆ.

೨೩. ರತ್ನದೀಪಗಳಿಂದಲೂ, ರತ್ನಮಂಚಗಳಿಂದಲೂ ಶೋಭಿಸುವ ಆ ರಾಸಮಂಡಲದಲ್ಲಿ ಅನೇಕವಿಧ ಭೋಗಸಾಮಗ್ರಿಗಳೂ, ಜೇನುತುಪ್ಪದ ನೂರಾರು ಭಾವಿಗಳೂ ಇವೆ.

ಪೀಯೂಷವಾಪೀಯುಕ್ತಶ್ಚ ಕಾಮಭೋಗಸಮನ್ವಿತಃ ।
ಗೋಲೋಕಗೃಹಸಂಖ್ಯಾನವರ್ಣನೇ ವಾ ವಿಶಾರದಃ || ೨೪ ||

ನ ಕೋಽಪಿ ವೇದ ವಿದ್ವಾನ್ನಾ ವೇದ ವಿದ್ವಾನ್ವ್ರಜೇಶ್ವರಃ ।
ಅಮೂಲ್ಯರತ್ನನಿರ್ಮಾಣಭವನಾನಾಂ ತ್ರಿಕೋಟಿಭಿಃ || ೨೫ ||

ಶೋಭಿತಂ ಸುಂದರಂ ರಮ್ಯಂ ರಾಧಾಶಿಬಿರಮುತ್ತಮಂ ।
ಅಮೂಲ್ಯರತ್ನಕಲಶೈರುಜ್ವಲಂ ರತ್ನದರ್ಪಣೈಃ || ೨೬ ||

ಅಮೂಲ್ಯರತ್ನಸ್ತಂಭಾನಾಂ ರಾಜಿಭಿಶ್ಚ ವಿರಾಜಿತಂ ।
ನಾನಾಚಿತ್ರವಿಚಿತ್ರೈಶ್ಚ ಚಿತ್ರಿತಂ ಶ್ವೇತಚಾಮರೈಃ || ೨೭ ||

ಮಾಣಿಕ್ಯಮುಕ್ತಾಸಂಸಕ್ತಂ ಹೀರಹಾರಸಮನ್ವಿತಂ ।
ರತ್ನಪ್ರದೀಪಸಂಸಕ್ತಂ ರತ್ನಸೋಪಾನಸುಂದರಂ || ೨೮ ||

೨೪-೨೬. ಅಲ್ಲದೆ ನೂರಾರು ಅಮೃತರಸದ ಭಾವಿಗಳೂ ಕಾಮೋಪಭೋಗ ಸಾಮಗ್ರಿಗಳೂ ಇವೆ. ಆ ಗೋಲೋಕದಲ್ಲಿರುವ ಮನೆಗಳನ್ನು ಎಣಿಸುವುದರಲ್ಲಾಗಲೀ ವರ್ಣಿಸುವುದರಲ್ಲಾಗಲೀ ಸಮರ್ಥನಾದ ವಿದ್ವಾಂಸನಾರೂ ಇಲ್ಲ. ಸರ್ವಜ್ಞನಾದ ವ್ರಜೇಶ್ವರ (ಶ್ರೀಕೃಷ್ಣ) ನೊಬ್ಬನೇ ಅದರಲ್ಲಿ ಸಮರ್ಥನು. ಆ ರಾಸ ಮಂಡಲದಲ್ಲಿ ಅಮೂಲ್ಯರತ್ನಗಳಿಂದ ನಿರ್ಮಿತವಾಗಿರುವ ಮೂರುಕೋಟಿ ಮಂದಿರಗಳಿಂದ ಶೋಭಿಸುವ ರಮ್ಯವಾದ ರಾಧಾದೇವಿಯ ಶಿಬಿರವಿರುವುದು. ಆ ಶಿಬಿರದಲ್ಲಿ ಅಮೂಲ್ಯವಾದ ರತ್ನಕಲಶಗಳೂ, ಉಜ್ಜ್ವಲವಾದ ರತ್ನದರ್ಪಣಗಳೂ ಇರುವುವು.

೨೭. ಅಮೂಲ್ಯವಾದ ರತ್ನಸ್ತಂಭಗಳ ಸಾಲಿನಿಂದ ಶೋಭಿಸುವ ಆ ಶಿಬಿರವು ನಾನಾ ಚಿತ್ರಗಳಿಂದ ವಿಚಿತ್ರಿತವಾಗಿಯೂ ಶ್ವೇತಚಾಮರಗಳಿಂದ ಶೋಭಿತವಾಗಿಯೂ ಇರುವುದು.

೨೮. ಮುತ್ತು ಮಾಣಿಕ್ಯಗಳಿಂದಲೂ ವಜ್ರಹಾರಗಳಿಂದಲೂ ಶೋಭಿಸುವ ಆ ಶಿಬಿರದಲ್ಲಿ ಉಜ್ಜ್ವಲವಾದ ರತ್ನಪ್ರದೀಪಗಳೂ, ಮನೋಹರವಾದ ರತ್ನಸೋಪಾನಗಳೂ ಇರುವುವು.

ಅಮೂಲ್ಯರತ್ನಪಾತ್ರೈಶ್ಚ ತಲ್ಪರಾಜಿವಿರಾಜಿತಂ ।
ಅಮೂಲ್ಯರತ್ನಚಿತ್ರೈಶ್ಚ ತ್ರಿಭಿಶ್ಚಿತ್ರವಿಚಿತ್ರಿತೈಃ ॥ ೨೯ ॥

ತಿಸೃಭಿಃ ಪರಿಖಾಭಿಶ್ಚ ತ್ರಿಭಿರ್ದ್ವಾರೈಶ್ಚ ದುರ್ಗಮೈಃ ।
ಯುಕ್ತಂ ಷೋಡಶಕಕ್ಷಾಭಿಃ ಪ್ರತಿದ್ವಾರೇಷು ವಾಂತರಂ ॥ ೩೦ ॥

ಗೋಪೀಷೋಡಶಲಕ್ಷೈಶ್ಚ ಸನ್ನಿಯುಕ್ತೈರಿತಸ್ತತಃ ।
ವಹ್ನಿಶುದ್ಧಾಂಶುಕಾಧಾನೈ ರತ್ನಭೂಷಣಭೂಷಿತೈಃ ॥ ೩೧ ॥

ತಪ್ತಕಾಂಚನವರ್ಣಾಭೈಃ ಶತಚಂದ್ರಸಮನ್ವಿತೈಃ ।
ರಾಧಿಕಾಕಿಂಕರೀವರ್ಗೈರ್ಯುಕ್ತಮಭ್ಯಂತರಂ ವರಂ ॥ ೩೨ ॥

ಅಮೂಲ್ಯರತ್ನನಿರ್ಮಾಣಪ್ರಾಂಗಣಂ ಸುಮನೋಹರಂ ।
ಅಮೂಲ್ಯರತ್ನಸ್ತಂಭಾನಾಂ ಸಮೂಹೈಶ್ಚ ಸುಶೋಭಿತಂ ॥ ೩೩ ॥

---

೨೯. ಅಮೂಲ್ಯವಾದ ರತ್ನಪಾತ್ರಗಳಿಂದ ಶೋಭಿಸುವ ಆ ಶಿಬಿರವು ಅಮೂಲ್ಯವಾದ ರತ್ನದ ಚಿತ್ರಗಳಿಂದಲೂ ಮೂರುವಿಧ ಚಿತ್ರ ವಿಚಿತ್ರಗಳಿಂದಲೂ ಕಂಗೊಳಿಸುತ್ತಿದೆ.

೩೦. ಮೂರು ಕಂದಕಗಳಿಂದಲೂ, ದುರ್ಗಮವಾದ ಮೂರು ದ್ವಾರಗಳಿಂದಲೂ ಶೋಭಿಸುವ ಹದಿನಾರು ಅವಾಂತರ ಕೊಠಡಿಗಳಿಂದಲೂ ಆ ಶಿಬಿರವು ಮನೋಹರವಾಗಿದೆ.

೩೧. ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನು ಧರಿಸಿ ರತ್ನಾಲಂಕಾರಗಳಿಂದ ಶೋಭಿಸುವ ಹದಿನಾರುಲಕ್ಷ ಗೋಪಿಯರು ಅಲ್ಲಿ ಸ್ವಕಾರ್ಯನಿಯುಕ್ತರಾಗಿ ಅತ್ತಿತ್ತ ಸಂಚರಿಸುತ್ತಿರುವರು.

೩೨. ಪುಟಕ್ಕೆ ಹಾಕಿದ ಚಿನ್ನದಂತೆ ಹೊಂಬಣ್ಣವುಳ್ಳ ನೂರು ಚಂದ್ರರಂತೆ ತೇಜಸ್ವಿನಿಯರಾದ ರಾಧಾದೇವಿಯ ಸೇವಕಿಯರು ಆ ಶಿಬಿರದ ಒಳಭಾಗದಲ್ಲಿ ನೆಲೆಸಿರುವರು.

೩೩. ಆ ಮಂದಿರದ ಅಂಗಣವು ಅಮೂಲ್ಯರತ್ನಗಳಿಂದ ನಿರ್ಮಿತವಾಗಿ ಮನೋಹರವಾಗಿದೆ. ಮತ್ತು ಅಮೂಲ್ಯವಾದ ರತ್ನಸ್ತಂಭಗಳ ಸಮೂಹದಿಂದ ಶೋಭಿಸುತ್ತಿದೆ.

ರತ್ನಮಂಗಲಕುಂಭೈಶ್ಚ ಫಲಪಲ್ಲವಸಂಯುತೈಃ ।
ಸಂಯುತಂ ರತ್ನವೇದೀಭಿರ್ಯುಕ್ತಾಯುಕ್ತಾಭಿರೀಪ್ಸಿತಂ ॥ ೩೪ ॥

ಅಮೂಲ್ಯರತ್ನಮುಕುರೈಃ ಶೋಭಿತಂ ಸುಂದರೈರಹೋ ।
ಅಮೂಲ್ಯರತ್ನನಿರ್ಮಾಣಂ ಭವನಾನಾಂ ವರಂ ಗೃಹಂ ॥ ೩೫ ॥

ರತ್ನಸಿಂಹಾಸನಸ್ಥಾ ಚ ಗೋಪೀಲಕ್ಷೈಶ್ಚ ಸೇವಿತಾ ।
ಕೋಟಿಪೂರ್ಣಂ ಸುಶೋಭಾಢ್ಯಾ ಶ್ವೇತಚಂಪಕಸಂನ್ನಿಭಾ ॥ ೩೬ ॥

ಅಮೂಲ್ಯರತ್ನನಿರ್ಮಾಣಭೂಷಣೈಶ್ಚ ವಿಭೂಷಿತಾ ।
ಅಮೂಲ್ಯರತ್ನವಸನಾ ಬಿಭ್ರತೀ ರತ್ನದರ್ಪಣಂ ॥ ೩೭ ॥

ರತ್ನಪದ್ಮಂ ಚ ರುಚಿರಂ ಸವ್ಯದಕ್ಷಿಣಹಸ್ತತಃ ।
ದಾಡಿಂಬಕುಸುಮಾಕಾರಂ ಸಿಂದೂರಂ ಸುಮನೋಹರಂ ॥ ೩೮ ॥

---

೩೪. ಹಣ್ಣು ಮತ್ತು ಚಿಗುರುಗಳಿಂದ ಶೋಭಿಸುವ ರತ್ನನಿರ್ಮಿತವಾದ ಮಂಗಳಕಲಶಗಳಿಂದಲೂ, ಸಮುಚಿತ ಸಾಮಗ್ರಿಗಳಿಂದ ಕೂಡಿದ ರತ್ನವೇದಿಕೆಗಳಿಂದಲೂ ಆ ಮಂದಿರವು ಕಂಗೊಳಿಸುತ್ತಿದೆ.

೩೫. ಅಮೂಲ್ಯವೂ ಸುಂದರವೂ ಆದ ರತ್ನಗನ್ನಡಿಗಳಿಂದ ಶೋಭಿಸುತ್ತಿರುವ ಅಮೂಲ್ಯ ರತ್ನಗಳಿಂದ ಖಚಿತವಾದ ದಿವ್ಯಸುಂದರ ಭವನಗಳು ಆ ಶಿಬಿರಕ್ಕೆ ಅಲಂಕಾರಪ್ರಾಯವಾಗಿವೆ.

೩೬. ಆ ಶಿಬಿರದಲ್ಲಿ ಬಿಳುಪಾದ ಸಂಪಿಗೆಯಂತೆ ಶೋಭಾನ್ವಿತಳೂ, ಲಕ್ಷಗೋಪಿಯರಿಂದ ಸೇವಿತಳೂ ಆದ ರಾಧಾದೇವಿಯು ರತ್ನಸಿಂಹಾಸನದಲ್ಲಿ ಮಂಡಿಸಿದ್ದಳು.

೩೭. ಅಮೂಲ್ಯರತ್ನಗಳಿಂದ ಖಚಿತವಾದ ಭೂಷಣಗಳನ್ನು ಅಲಂಕರಿಸಿಕೊಂಡು ಅಮೂಲ್ಯವಾದ ರತ್ನವಸನವನ್ನು ಧರಿಸಿ ರತ್ನಗನ್ನಡಿಯನ್ನು ಹಿಡಿದು ಶೋಭಿಸುತ್ತಿದ್ದಳು.

೩೮. ಆ ರಾಧಾದೇವಿಯು ಎರಡು ಕೈಗಳಲ್ಲಿಯೂ ಮನೋಹರವಾದ ರತ್ನಪದ್ಮಗಳಿದ್ದುವು ದಾಳಿಂಬೆ ಹೂವಿನ ಆಕಾರವುಳ್ಳ ಮನೋಹರವಾದ ಸಿಂದೂರದ ತಿಲಕವನ್ನು ಆಕೆಯು ಧರಿಸಿದ್ದಳು.

ಸುಶೋಭಿತಂ ಮೃಗಮದೈರಿಷ್ಟೈಶ್ಚಂದನಬಿಂದುಭಿಃ ।
ದಧತೀ ಕಬರೀಭಾರಂ ಮಾಲತೀಮಾಲ್ಯಮಂಡಿತಂ ॥ ೩೯ ॥

ರಚಿತಂ ವಾಮಭಾಗೇನ ಮುನೀಂದ್ರಾಣಾಂ ಮನೋಹರಂ ।
ಏವಂ ಭೂತಂ ತತ್ರ ರಾಧಾ ಗೋಪೀಭಿಃ ಪರಿಸೇವಿತಾ ॥ ೪೦ ॥

ಶ್ವೇತಚಾಮರಹಸ್ತಾಭಿಸ್ತತ್ತುಲ್ಯಾಭಿಶ್ಚ ಸರ್ವತಃ ।
ಅಮೂಲ್ಯರತ್ನನಿರ್ಮಾಣೈರ್ಭೂಷಿತಾಭಿಶ್ಚ ಭೂಷಣೈಃ ॥ ೪೧ ॥

ಮತ್ಪ್ರಾಣಾಧಿಷ್ಠಾತೃದೇವೀ ದೇವೀನಾಂ ಪ್ರವರಾ ವರಾ ।
ಸುದಾಮ್ನಃ ಸಾ ಚ ಶಾಪೇನ ವೃಷಭಾನಸುತಾಽಧುನಾ ॥ ೪೨ ॥

ಶತಾಬ್ದಿಕೋ ಹಿ ವಿಚ್ಛೇದೋ ಭವಿಷ್ಯತಿ ಮಯಾ ಸಹ ।
ತೇನ ಭಾರಾವತರಣಂ ಕರಿಷ್ಯಾಮಿ ಭುವಃ ಪಿತಃ ॥ ೪೩ ॥

---

೩೯. ಆ ತಿಲಕದ ಸುತ್ತಲೂ ಕಸ್ತೂರಿ ಮತ್ತು ಚಂದನದ ಬೊಟ್ಟುಗಳು ಶೋಭಿಸುತ್ತಿದ್ದವು. ಜಾಜೀ ಹೂಮಾಲೆಯಿಂದ ಅಲಂಕೃತವಾದ ಆಕೆಯ ಕಬರೀಭಾರವು ಬಹಳ ಮನೋಹರವಾಗಿದ್ದಿತು.

೪೦. ಮುನೀಂದ್ರರ ಮನಸ್ಸನ್ನೂ ಅಪಹರಿಸುವಂತಿದ್ದ ಆ ಕೇಶಪಾಶವು ವಾಮಭಾಗದಲ್ಲಿ ರಂಜಿಸುತ್ತಿತ್ತು. ಈ ರೀತಿಯಾಗಿ ಆ ರಾಧಾದೇವಿಯು ಆ ಮಂದಿರದಲ್ಲಿ ಗೋಪಿಯರಿಂದ ಸೇವಿತಳಾಗಿದ್ದಳು.

೪೧. ಸುಂದರಿಯರಾದ ಆ ಗೋಪಿಯರು ಅಮೂಲ್ಯವಾದ ರತ್ನಭೂಷಣಗಳಿಂದ ಅಲಂಕೃತರಾಗಿ ಕೈಯ್ಯಲ್ಲಿ ಶ್ವೇತಚಾಮರವನ್ನು ಹಿಡಿದು ಆ ರಾಧಾದೇವಿಗೆ ಸೇವೆಯನ್ನು ಸಲ್ಲಿಸುತ್ತಿದ್ದರು

೪೨. ನನ್ನ ಪ್ರಾಣಗಳಿಗೆ ಅಧಿಷ್ಠಾತೃದೇವಿಯೂ, ದೇವಿಯರಲ್ಲಿ ಶ್ರೇಷ್ಠಳೂ ಆದ ಆ ರಾಧಾದೇವಿಯು ಸುದಾಮನ ಶಾಪದಿಂದ ಈಗ ವೃಷಭಾನನ ಮಗಳಾಗಿ ಜನಿಸಿದ್ದಾಳೆ.

೪೩. ಸುದಾಮನ ಶಾಪದಿಂದ ಅವಳಿಗೆ ನೂರುವರ್ಷಗಳ ಕಾಲ ನನ್ನ ವಿರಹವುಂಟಾಗುತ್ತದೆ. ಆದುದರಿಂದ ಎಲೈ ತಂದೆಯೇ, ಈಗ ನಾನು ಭೂಮಿಯ ಭಾರವನ್ನು ಇಳುಹುತ್ತೇನೆ.

ತದಾ ಯಾಸ್ಯಾಮಿ ಗೋಲೋಕಂ ತಯಾ ಸಾರ್ಧಂ ಸುನಿಶ್ಚಿತಂ ।
ತ್ವಯಾ ಯಶೋದಯಾ ಚಾಪಿ ಗೋಪೈರ್ಗೋಪೀಭಿರೇವ ಚ ॥ ೪೪ ॥

ವೃಷಭಾನೇನ ತತ್ಪತ್ನ್ಯಾ ಕಲಾವತ್ಯಾ ಚ ಬಾಂಧವೈಃ ।
ಏವಂ ಚ ನಂದಂ ಸಾನಂದಂ ಯಶೋದಾಂ ಕಥಯಿಷ್ಯಸಿ ॥ ೪೫ ॥

ತ್ಯಜ ಶೋಕಂ ಮಹಾಭಾಗ ವ್ರಜೈಃ ಸಾರ್ಧಂ ವ್ರಜಂ ವ್ರಜ ।
ಅಹಮಾತ್ಮಾ ಚ ಸಾಕ್ಷೀ ಚ ನಿರ್ಲಿಪ್ತಃ ಸರ್ವಜೀವಿಷು ॥ ೪೬ ॥

ಜೀವೋ ಮತ್ಪ್ರತಿಬಿಂಬಶ್ಚ ಇತ್ಯೇವಂ ಸರ್ವಸಂಮತಂ ।
ಪ್ರಕೃತಿರ್ಮದ್ವಿಕಾರಾ ಚ ಸಾಪ್ಯಹಂ ಪ್ರಕೃತಿಃ ಸ್ವಯಂ ॥ ೪೭ ॥

ಯಥಾ ದುಗ್ಧೇ ಚ ಧಾವಲ್ಯಂ ನ ತಯೋರ್ಭೇದ ಏವ ಚ ।
ಯಥಾ ಜಲೇ ತಥಾ ಶೈತ್ಯಂ ಯಥಾ ವಹ್ನೌ ಚ ದಾಹಿಕಾ ॥ ೪೮ ॥

---

೪೪. ಅನಂತರ ಆ ರಾಧೆಯೊಡನೆ ನಾನು ಗೋಲೋಕಕ್ಕೆ ತೆರಳುತ್ತೇನೆ. ನೀನು ಯಶೋದೆಯೊಡನೆಯೂ ಗೋಪಗೋಪಿಯರೊಡನೆಯೂ ಗೋಲೋಕಕ್ಕೆ ಆಗಮಿಸುವೆ.

೪೫. ನಿನ್ನೊಡನೆ ವೃಷಭಾನನೂ ಅವನ ಹೆಂಡತಿಯಾದ ಕಲಾವತಿಯೂ ಮತ್ತು ಅವರ ಬಂಧುಗಳೂ ಸಹ ಬರುವರು. ಈ ರೀತಿಯಾಗಿ ಶ್ರೀಕೃಷ್ಣನು ನಂದಗೋಪನಿಗೂ ಯಶೋದೆಗೂ ಹೇಳಿ ಅವರನ್ನು ಆನಂದತುಂದಿಲರನ್ನಾಗಿ ಮಾಡಿದನು.

೪೬. ಎಲೈ ಮಹಾಭಾಗ್ಯಶಾಲಿಯೇ, ನೀನು ನನ್ನ ವಿರಹದುಃಖವನ್ನು ತ್ಯಜಿಸಿ ಗೋಪರೊಡನೆ ಗೋಕುಲಕ್ಕೆ ಹಿಂತಿರುಗು. ನಾನು ಸರ್ವಾಂತರ್ಯಾಮಿಯಾಗಿಯೂ ಸಕಲಜೀವಿಗ[illegible]ನು.

೪೭. ಜೀವಾತ್ಮವು ನನ್ನ ಪ್ರತಿಬಿಂಬವೆಂಬುದನ್ನು ಎಲ್ಲ ಶಾಸ್ತ್ರಗಳೂ ಸಮ್ಮತಿಸುವುವು. ಪ್ರಕೃತಿಯು ನನ್ನ ವಿಕಾರವಾದುದರಿಂದ ನನಗೂ ಆ ಪ್ರಕೃತಿಗೂ ಯಾವ ವಿಧದಲ್ಲೂ ಭೇದವಿರುವುದಿಲ್ಲ.

೪೮. ಹಾಲಿನ ಬಿಳುಪಿಗೂ ಹಾಲಿಗೂ ಹೇಗೆ ಭೇದವಿಲ್ಲವೋ, ಹಾಗೆ ಪ್ರಕೃತಿಗೂ ನನಗೂ ಭೇದವಿಲ್ಲ. ನೀರಿನಲ್ಲಿ ಶೈತ್ಯವೂ ಬೆಂಕಿಯಲ್ಲಿ ದಾಹಶಕ್ತಿಗೂ ಕೂಡಿರುವಂತೆ ನನ್ನಲ್ಲಿ ಪ್ರಕೃತಿಯು ಇರುವುದು.

ಯಥಾಕಾಶೇ ತಥಾಶಬ್ದೋ ಭೂಮೌ ಗಂಧೋ ಯಥಾ ನೃಪ ।
ಯಥಾ ಶೋಭಾ ಚ ಚಂದ್ರೇ ಚ ಯಥಾ ದಿನಕರೇ ಪ್ರಭಾ ॥ ೨೯ ॥

ಯಥಾ ಜೀವಸ್ತಥಾಽತ್ಮಾನಂ ತಥೈವ ರಾಧಯಾ ಸಹ ।
ತ್ಯಜ ತ್ವಂ ಗೋಪಿಕಾಬುದ್ಧಿಂ ರಾಧಾಯಾಂ ಮಯಿ ಪುತ್ರತಾಂ ॥ ೩೦ ॥

ಅಹಂ ಸರ್ವಸ್ಯ ಪ್ರಭವಃ ಸಾ ಚ ಪ್ರಕೃತಿರೀಶ್ವರೀ ।
ಶ್ರೂಯತಾಂ ನಂದ ಸಾನಂದಂ ಮದ್ವಿಭೂತಿಂ ಸುಖಾವಹಂ ॥ ೩೧ ॥

ಪುರಾ ಯಾ ಕಥಿತಾ ತಾತ ಬ್ರಹ್ಮಣೇ ವ್ಯಕ್ತಜನ್ಮನೇ ।
ಕೃಷ್ಣೋಽಹಂ ದೇವತಾನಾಂ ಚ ಗೋಲೋಕೇ ದ್ವಿಭುಜಃ ಸ್ವಯಂ ॥ ೩೨ ॥

ಚತುರ್ಭುಜೋಽಹಂ ವೈಕುಂಠೇ ಶಿವಲೋಕೇ ಶಿವಃ ಸ್ವಯಂ ।
ಬ್ರಹ್ಮಲೋಕೇ ಚ ಬ್ರಹ್ಮಾಽಹಂ ಸೂರ್ಯಸ್ತೇಜಸ್ವಿನಾಮಹಂ ॥ ೩೩ ॥

---

೨೯. ಎಲೈ ನಂದಗೋಪನೇ, ಆಕಾಶದಲ್ಲಿ ಶಬ್ದವೂ, ಭೂಮಿಯಲ್ಲಿ ಗಂಧವೂ, ಚಂದ್ರನಲ್ಲಿ ಶೋಭೆಯೂ, ಸೂರ್ಯನಲ್ಲಿ ಪ್ರಭೆಯೂ ಸಮವಾಯ ಸಂಬಂಧದಿಂದಿರುವಂತೆ ನನ್ನಲ್ಲಿ ಪ್ರಕೃತಿಯು ಇರುವುದು.

೩೦. ಜೀವನಿಗೂ ಆತ್ಮನಿಗೂ ಹೇಗೆ ಭೇದವಿಲ್ಲವೋ ಹಾಗೆಯೇ ನನಗೂ ರಾಧೆಗೂ ಭೇದವಿಲ್ಲ. ಅದುದರಿಂದ ರಾಧೆಯು ಸಾಮಾನ್ಯಗೋಪಿಯೆಂದೂ ನಾನು ನಿನ್ನ ಪುತ್ರಮಾತ್ರನೆಂದೂ ತಿಳಿಯದಿರು.

೩೧. ನಾನೂ ಸರ್ವೇಶ್ವರಿಯಾದ ಪ್ರಕೃತಿಯೂ ಚರಾಚರಾತ್ಮಕವಾದ ಪ್ರಪಂಚಕ್ಕೆ ಮೂಲಕಾರಣರು. ಎಲೈ ನಂದಗೋಪನೇ, ಸುಖದಾಯಕವಾದ ನನ್ನ ವಿಭೂತಿಯನ್ನು ಆನಂದದಿಂದ ಕೇಳುವವನಾಗು.

೩೨. ಚತುರ್ಮುಖಬ್ರಹ್ಮನು ಅವತರಿಸಿದಾಗ ಮೊದಲು ನನ್ನ ವಿಭೂತಿಯನ್ನು ಅವನಿಗೆ ಹೇಳಿದೆನು. ಕೃಷ್ಣರೂಪದಲ್ಲಿ ಅವತರಿಸಿರುವ ನಾನು ಗೋಲೋಕದಲ್ಲಿ ದ್ವಿಭುಜಗಳಿಂದ ಶೋಭಿಸುವೆನು.

೩೩. ವೈಕುಂಠದಲ್ಲಿ ಚತುರ್ಭುಜಗಳಿಂದ ಶೋಭಿಸುವ ನಾನೇ ಶಿವಲೋಕದಲ್ಲಿ ಪರಶಿವನೆನಿಸುವೆನು ಬ್ರಹ್ಮಲೋಕದಲ್ಲಿ ಬ್ರಹ್ಮನೆಸಿಸುವ ನಾನೇ ತೇಜಸ್ವಿಗಳಲ್ಲೆಲ್ಲಾ ಶ್ರೇಷ್ಠನಾದ ಸೂರ್ಯನೂ ಆಗಿರುವೆನು.

ಪವಿತ್ರಾಣಾಮಹಂ ವಹ್ನಿರ್ಜಲಮೇವ ದ್ರವೇಷು ಚ ।
ಇಂದ್ರಿಯಾಣಾಂ ಮನಶ್ಚಾಸ್ಮಿ ಸಮೀರಃ ಶೀಘ್ರಗಾಮಿನಾಂ ॥ ೫೪ ॥

ಯಮೋಽಹಂ ದಂಡಕರ್ತ್ರೂಣಾಂ ಕಾಲಃ ಕಲಯತಾಮಹಂ ।
ಅಕ್ಷರಾಣಾಮಕಾರೋಽಸ್ಮಿ ಸಾಮ್ನಾಂ ಚ ಸಾಮ ಏವ ಚ ॥ ೫೫ ॥

ಇಂದ್ರಶ್ಚತುರ್ದಶೇಂದ್ರೇಷು ಕುಬೇರೋ ಧನಿನಾಮಹಂ ।
ಈಶಾನೋಽಹಂ ದಿಗೀಶಾನಾಂ ವ್ಯಾಪಕಾನಾಂ ನಭಸ್ತಥಾ ॥ ೫೬ ॥

ಸರ್ವಾಂತರಾತ್ಮಾ ಜೀವೇಷು ಬ್ರಾಹ್ಮಣಶ್ಚಾಶ್ರಮೇಷು ಚ ।
ಧನಾನಾಂ ಚ ರತ್ನಮಹಮಮೂಲ್ಯಂ ಸರ್ವದುರ್ಲಭಂ ॥ ೫೭ ॥

ತೈಜಸಾನಾಂ ಸುವರ್ಣೋಽಹಂ ಮಣೀನಾಂ ಕೌಸ್ತುಭಃ ಸ್ವಯಂ ।
ಶಾಲಗ್ರಾಮಸ್ತಥಾರ್ಚ್ಯಾನಾಂ ಪತ್ರಾಣಾಂ ತುಲಸೀತಿ ಚ ॥ ೫೮ ॥

---

೫೪. ಪವಿತ್ರವಸ್ತುಗಳಲ್ಲಿ ನಾನು ಅಗ್ನಿರೂಪನಾಗಿಯೂ, ದ್ರವವಸ್ತುಗಳಲ್ಲಿ ಜಲರೂಪನಾಗಿಯೂ, ಇಂದ್ರಿಯಗಳಲ್ಲಿ ಮನೋರೂಪನಾಗಿಯೂ, ಶ್ರೀಘ್ರಗಾಮಿಗಳಲ್ಲಿ ವಾಯುರೂಪವಾಗಿಯೂ ಇರುವೆನು.

೫೫. ದಂಡಧಾರಿಗಳಲ್ಲಿ ನಾನು ಯಮನಾಗಿಯೂ, ಅಕ್ಷರಗಳಲ್ಲಿ ಅಕಾರನಾಗಿಯೂ, ವೇದಗಳಲ್ಲಿ ಸಾಮವೇದಸ್ವರೂಪನಾಗಿಯೂ ಇರುವೆನು.

೫೬. ಹದಿನಾಲ್ಕು ಇಂದ್ರರಲ್ಲಿ ನಾನು ದೇವೇಂದ್ರನಾಗಿಯೂ, ಧನಿಕರಲ್ಲಿ ಕುಬೇರನಾಗಿಯೂ, ದಿಕ್ಪಾಲಕರಲ್ಲಿ ಈಶಾನನಾಗಿಯೂ ಹಾಗೆಯೇ ವ್ಯಾಪಕವಸ್ತುಗಳಲ್ಲಿ ಆಕಾಶಸ್ವರೂಪನಾಗಿಯೂ ಇರುವೆನು.

೫೭. ಜೀವಿಗಳಲ್ಲಿ ಸರ್ವಾಂತರಾತ್ಮನಾಗಿಯೂ, ಚಾತುರ್ವರ್ಣ್ಯಗಳಲ್ಲಿ ಬ್ರಾಹ್ಮಣನಾಗಿಯೂ, ಘನವಸ್ತುಗಳಲ್ಲಿ ಅಮೂಲ್ಯವೂ ಸರ್ವದುರ್ಲಭವೂ, ಆದ ರತ್ನ ಸ್ವರೂಪನಾಗಿಯೂ ನಾನಿರುವೆನು.

೫೮. ತೈಜಸ ವಸ್ತುಗಳಲ್ಲಿ ನಾನು ಸುವರ್ಣರೂಪನಾಗಿಯೂ, ಮಣಿಗಳಲ್ಲಿ ಕೌಸ್ತುಭಮಣಿಯಾಗಿಯೂ, ಪೂಜ್ಯವಸ್ತುಗಳಲ್ಲಿ ಸಾಲಗ್ರಾಮ ಶಿಲೆಯಾಗಿಯೂ, ಪತ್ರಗಳಲ್ಲಿ ತುಲಸೀ ಸ್ವರೂಪನಾಗಿಯೂ ಇರುವೆನು.

ಪುಷ್ಪಾಣಾಂ ಪಾರಿಜಾತೋಽಹಂ ತೀರ್ಥಾನಾಂ ಪುಷ್ಕರಃ ಸ್ವಯಂ ।
ವೈಷ್ಣವಾನಾಂ ಕುಮಾರೋಽಹಂ ಯೋಗೀಂದ್ರಾಣಾಂ ಗಣೇಶ್ವರಃ ॥ ೫೯ ॥

ಸೇನಾಪತೀನಾಂ ಸ್ಕಂದೋಽಹಂ ಲಕ್ಷ್ಮಣೋಽಹಂ ಧನುಷ್ಮತಾಂ ।
ರಾಜೇಂದ್ರಾಣಾಂ ಚ ರಾಮೋಽಹಂ ನಕ್ಷತ್ರಾಣಾಮಹಂ ಶಶೀ ॥ ೬೦ ॥

ಮಾಸಾನಾಂ ಮಾರ್ಗಶೀರ್ಷೋಽಹಮೃತೂನಾಮಸ್ಮಿ ಮಾಧವಃ ।
ವಾರೇಷ್ವಾದಿತ್ಯವಾರೋಽಹಂ ತಿಥಿಷ್ವೇಕಾದಶೀತಿ ಚ ॥ ೬೧ ॥

ಸಹಿಷ್ಣೂನಾಂ ಚ ಪೃಥಿವೀ ಮಾತಾಽಹಂ ಬಾಂಧವೇಷು ಚ ।
ಅಮೃತಂ ಭಕ್ಷ್ಯವಸ್ತೂನಾಂ ಗವ್ಯೇಷ್ವಾಜ್ಯಮಹಂ ತಥಾ ॥ ೬೨ ॥

ಕಲ್ಪವೃಕ್ಷಶ್ಚ ವೃಕ್ಷಾಣಾಂ ಸುರಭಿಃ ಕಾಮಧೇನುಷು ।
ಗಂಗಾಽಹಂ ಸರಿತಾಂ ಮಧ್ಯೇ ಕೃತಪಾಪವಿನಾಶಿನೀ ॥ ೬೩ ॥

---

೫೯. ನಾನು ಪುಷ್ಪಗಳಲ್ಲಿ ಪಾರಿಜಾತವಾಗಿಯೂ, ತೀರ್ಥಗಳಲ್ಲಿ ಪುಷ್ಕರ ತೀರ್ಥವಾಗಿಯೂ, ವಿಷ್ಣುಭಕ್ತರಲ್ಲಿ ಷಣ್ಮುಖನಾಗಿಯೂ ಯೋಗೀಂದ್ರರಲ್ಲಿ ಗಣಪತಿ ಯಾಗಿಯೂ ಇರುವೆನು.

೬೦. ಸೇನಾಪತಿಗಳ ಮಧ್ಯೆ ನಾನು ಸ್ಕಂದನಾಗಿಯೂ, ಧನುರ್ಧಾರಿಗಳಲ್ಲಿ ನಾನು ಲಕ್ಷ್ಮಣನಾಗಿಯೂ, ರಾಜೇಂದ್ರರಲ್ಲಿ ನಾನು ರಾಮನಾಗಿಯೂ ನಕ್ಷತ್ರಗಳಲ್ಲಿ ನಾನು ಚಂದ್ರನಾಗಿಯೂ ಇರುವೆನು.

೬೧. ಮಾಸಗಳಲ್ಲಿ ನಾನು ಮಾರ್ಗಶೀರ್ಷಮಾಸವಾಗಿಯೂ, ಋತುಗಳಲ್ಲಿ ವಸಂತನಾಗಿಯೂ, ವಾರೆಗಳಲ್ಲಿ ಆದಿತ್ಯವಾರವಾಗಿಯೂ ತಿಥಿಗಳಲ್ಲಿ ಏಕಾದಶಿ ಯಾಗಿಯೂ ಇರುವೆನು.

೬೨. ಕ್ಷಮಾವಂತರಲ್ಲಿ ನಾನು ಪೃಥಿವಿಯಾಗಿಯೂ. ಭಕ್ಷ್ಯವಸ್ತುಗಳಲ್ಲಿ ಅಮೃತವಸ್ತುವಾಗಿಯೂ ಗೋವಿನಿಂದ ದೊರಕುವ ವಸ್ತುಗಳಲ್ಲಿ ಘೃತಸ್ವರೂಪ ನಾಗಿಯೂ ಇರುವೆನು.

೬೩. ವೃಕ್ಷಗಳಲ್ಲಿ ನಾನು ಕಲ್ಪವೃಕ್ಷವಾಗಿಯೂ, ಕಾಮಧೇನುಗಳಲ್ಲಿ ಸುರಭಿ ಯಾಗಿಯೂ, ನದಿಗಳಲ್ಲಿ ಮಾಡಿದ ಪಾಪಗಳನ್ನೆಲ್ಲ ಪರಿಹರಿಸುವ ಗಂಗೆಯಾಗಿಯೂ ಇರುವೆನು.

ವಾಣೀತಿ ಪಂಡಿತಾನಾಂ ಚ ಮಂತ್ರಾಣಾಂ ಪ್ರಣವಸ್ತಥಾ ।
ವಿದ್ಯಾಸು ಬೀಜರೂಪೋಽಹಂ ಸಸ್ಯಾನಾಂ ಧಾನ್ಯಮೇವ ಚ ॥ ೬೪ ॥

ಅಶ್ವತ್ಥಃ ಫಲಿನಾಮೇವ ಗುರೂಣಾಂ ಮಂತ್ರದಃ ಸ್ವಯಂ ।
ಕಶ್ಯಪಶ್ಚ ಪ್ರಜೇಶಾನಾಂ ಗರುಡಃ ಪಕ್ಷಿಣಾಂ ತಥಾ ॥ ೬೫ ॥

ಅನಂತೋಽಹಂ ಚ ನಾಗಾನಾಂ ನರಾಣಾಂ ಚ ನರಾಧಿಪಃ ।
ಬ್ರಹ್ಮರ್ಷೀಣಾಂ ಭೃಗುರಹಂ ದೇವರ್ಷೀಣಾಂ ಚ ನಾರದಃ ॥ ೬೬ ॥

ರಾಜರ್ಷೀಣಾಂ ಚ ಜನಕೋ ಮಹರ್ಷೀಣಾಂ ಶುಕಸ್ತಥಾ ।
ಗಂಧರ್ವಾಣಾಂ ಚಿತ್ರರಥಃ ಸಿದ್ಧಾನಾಂ ಕಪಿಲೋ ಮುನಿಃ ॥ ೬೭ ॥

ಬೃಹಸ್ಪತಿರ್ಬುದ್ಧಿಮತಾಂ ಕವೀನಾಂ ಶುಕ್ರ ಏವ ಚ ।
ಗ್ರಹಾಣಾಂ ಚ ಶನಿರಹಂ ವಿಶ್ವಕರ್ಮಾ ಚ ಶಿಲ್ಪಿನಾಂ ॥ ೬೮ ॥

---

೬೪. ಪಂಡಿತರಿಗೆಲ್ಲ ನಾನು ವಾಣೀರೂಪನಾಗಿಯೂ, ಮಂತ್ರಗಳಲ್ಲಿ ಓಂಕಾರರೂಪನಾಗಿಯೂ, ವಿದ್ಯೆಗಳಲ್ಲಿ ಬೀಜರೂಪನಾಗಿಯೂ, ಸಸ್ಯಗಳಲ್ಲಿ ಧಾನ್ಯ ಸ್ವರೂಪನಾಗಿಯೂ ಇರುವೆನು.

೬೫. ಫಲವೃಕ್ಷಗಳಲ್ಲಿ ನಾನು ಅಶ್ವತ್ಥವೃಕ್ಷವಾಗಿಯೂ, ಗುರುಗಳಲ್ಲಿ ಸ್ವಯಂ ಮಂತ್ರಪ್ರದನಾಗಿಯೂ, ಪ್ರಜಾಪತಿಗಳಲ್ಲಿ ನಾನು ಕಶ್ಯಪಪ್ರಜಾಪತಿಯಾಗಿಯೂ ಪಕ್ಷಿಗಳಲ್ಲಿ ಗರುಡನಾಗಿಯೂ ಇರುವೆನು.

೬೬. ಸರ್ಪಗಳಲ್ಲಿ ನಾನು ಆದಿಶೇಷನಾಗಿಯೂ, ಮನುಜರಲ್ಲಿ ರಾಜನಾಗಿಯೂ, ಬ್ರಹ್ಮರ್ಷಿಗಳಲ್ಲಿ ಭೃಗುಮಹರ್ಷಿಯಾಗಿಯೂ ದೇವರ್ಷಿಗಳಲ್ಲಿ ನಾರದನಾಗಿಯೂ ಇರುವೆನು.

೬೭. ರಾಜರ್ಷಿಗಳಲ್ಲಿ ನಾನು ಜನಕನಾಗಿಯೂ, ಮಹರ್ಷಿಗಳಲ್ಲಿ ಶುಕಮಹರ್ಷಿಯಾಗಿಯೂ, ಗಂಧರ್ವರಲ್ಲಿ ಚಿತ್ರರಥನಾಗಿಯೂ ಸಿದ್ಧರಲ್ಲಿ ಕಪಿಲಮುನಿಯಾಗಿಯೂ ಇರುವೆನು.

೬೮. ಬುದ್ಧಿವಂತರಲ್ಲಿ ಬೃಹಸ್ಪತಿಯಾಗಿಯೂ, ಕವಿಗಳಲ್ಲಿ ಶುಕನಾಗಿಯೂ, ಗ್ರಹಗಳಲ್ಲಿ ಶನಿಯಾಗಿಯೂ, ಶಿಲ್ಪಿಗಳಲ್ಲಿ ವಿಶ್ವಕರ್ಮನಾಗಿಯೂ ನಾನು ಹೆಸರಾಂತಿರುವೆನು.

ಮೃಗಾಣಾಂ ಚ ಮೃಗೇಂದ್ರೋಽಹಂ ವೃಷಾಣಾಂ ಶಿವವಾಹನಂ ।
ಐರಾವತೋ ಗಜೇಂದ್ರಾಣಾಂ ಗಾಯತ್ರೀ ಛಂದಸಾಮಹಂ ॥ ೬೯ ॥

ವೇದಾಶ್ಚ ಸರ್ವಶಾಸ್ತ್ರಾಣಾಂ ವರುಣೋ ಯಾದಸಾಮಹಂ ।
ಉರ್ವಶ್ಯಪ್ಸರಸಾಮೇವ ಸಮುದ್ರಾಣಾಂ ಜಲಾರ್ಣವಃ ॥ ೭೦ ॥

ಸುಮೇರುಃ ಪರ್ವತಾನಾಂ ಚ ರತ್ನವತ್ಸು ಹಿಮಾಲಯಃ ।
ದುರ್ಗಾ ಚ ಪ್ರಕೃತೀನಾಂ ಚ ದೇವೀನಾಂ ಕಮಲಾಲಯಾ ॥ ೭೧ ॥

ಶತರೂಪಾ ಚ ನಾರೀಣಾಂ ಮತ್ಪ್ರಿಯಾಣಾಂ ಚ ರಾಧಿಕಾ ।
ಸಾಧ್ವೀನಾಮಪಿ ಸಾವಿತ್ರೀ ವೇದಮಾತಾ ಚ ನಿಶ್ಚಿತಂ ॥ ೭೨ ॥

ಪ್ರಹ್ಲಾದಶ್ಚಾಪಿ ದೈತ್ಯಾನಾಂ ಬಲಿಷ್ಠಾನಾಂ ಬಲಿಃ ಸ್ವಯಂ ।
ನಾರಾಯಣರ್ಷಿರ್ಭಗವಾಞ್ಜ್ಞಾನಿನಾಂ ಮಧ್ಯ ಏವ ಚ ॥ ೭೩ ॥

---

೬೯. ಮೃಗಗಳಲ್ಲಿ ನಾನು ಮೃಗೇಂದ್ರನಾಗಿಯೂ. ವೃಷಭಗಳಲ್ಲಿ ಈಶ್ವರನ ವಾಹನನಾಗಿಯೂ, ಗಜೇಂದ್ರರಲ್ಲಿ ಐರಾವತನಾಗಿಯೂ ಛಂದಸ್ಸುಗಳಲ್ಲಿ ಗಾಯತ್ರಿಯಾಗಿಯೂ ಇರುವೆನು

೭೦. ಸಕಲಶಾಸ್ತ್ರಗಳಲ್ಲಿ ನಾನು ವೇದಸ್ವರೂಪನಾಗಿಯೂ, ಜಲವಾಸಿಗಳಲ್ಲಿ ನಾನು ವರುಣನಾಗಿಯೂ, ಅಪ್ಸರಸೆಯರಲ್ಲಿ ನಾನು ಊರ್ವಶಿಯಾಗಿಯೂ ಸಮುದ್ರಗಳಲ್ಲಿ ನೀರಿನ ಸಮುದ್ರನಾಗಿಯೂ ಇರುವೆನು.

೭೧. ಪರ್ವತಗಳಲ್ಲಿ ನಾನು ಸುಮೇರುವಾಗಿಯೂ, ರತ್ನಾಲಯಗಳಲ್ಲಿ ನಾನು ಹಿಮವಂತನಾಗಿಯೂ, ಪ್ರಕೃತಿ ದೇವಿಯರಲ್ಲಿ ನಾನು ದುರ್ಗಿಯಾಗಿಯೂ ದೇವಿಯರಲ್ಲಿ ಕಮಲಾಲಯಳಾದ ಲಕ್ಷ್ಮೀದೇವಿಯಾಗಿಯೂ ಇರುವೆನು.

೭೨. ಸ್ತ್ರೀಯರಲ್ಲಿ ಶತರೂಪೆಯಾಗಿಯೂ, ನನ್ನ ಪ್ರಿಯೆಯರಲ್ಲಿ ರಾಧಿಕೆಯಾಗಿಯೂ, ಸಾಧ್ವಿಯರಲ್ಲಿ ವೇದಮಾತೆಯಾದ ಸಾವಿತ್ರಿಯಾಗಿಯೂ ನಾನು ಇರುವುದು ನಿಶ್ಚಯ.

೭೩. ದೈತ್ಯರಲ್ಲಿ ನಾನು ಪ್ರಹ್ಲಾದನಾಗಿಯೂ, ಬಲಿಷ್ಠರಲ್ಲಿ ನಾನು ಸ್ವಯಂ ಬಲಿಚಕ್ರವರ್ತಿಯಾಗಿಯೂ ಜ್ಞಾನಿಗಳ ಮಧ್ಯದಲ್ಲಿ ಭಗವಂತನಾದ ನಾರಾಯಣ ಮಹರ್ಷಿಯಾಗಿಯೂ ಇರುವೆನು.

ಹನೂಮಾನ್ವಾನರಾಣಾಂ ಚ ಪಾಂಡವಾನಾಂ ಧನಂಜಯಃ ।
ಮನಸಾ ನಾಗಕನ್ಯಾನಾಂ ವಸೂನಾಂ ದ್ರೋಣ ಏವ ಚ ॥ ೭೪ ॥

ದ್ರೋಣೋ ಜಲಧರಾಣಾಂ ಚ ವರ್ಷಾಣಾಂ ಭಾರತಂ ತಥಾ ।
ಕಾಮಿನಾಂ ಕಾಮದೇವೋಽಹಂ ರಂಭಾ ಚ ಕಾಮುಕೀಷು ಚ ॥ ೭೫ ॥

ಗೋಲೋಕಶ್ಚಾಸ್ಮಿ ಲೋಕಾನಾಮುತ್ತಮಃ ಸರ್ವತಃ ಪರಃ ।
ಮಾತೃಕಾಸು ಶಾಂತಿರಹಂ ರತಿಶ್ಚ ಸುಂದರೀಷು ಚ ॥ ೭೬ ॥

ಧರ್ಮೋಽಹಂ ಸಾಕ್ಷಿಣಾಂ ಮಧ್ಯೇ ಸಂಧ್ಯಾ ಚ ವಾಸರೇಷು ಚ ।
ದೇವೇಷ್ವಹಂ ಚ ಮಾಹೇಂದ್ರೋ ರಾಕ್ಷಸೇಷು ವಿಭೀಷಣಃ ॥ ೭೭ ॥

ಕಾಲಾಗ್ನಿರುದ್ರೋ ರುದ್ರಾಣಾಂ ಸಂಹಾರೋ ಭೈರವೇಷು ಚ ।
ಶಂಖೇಷು ಪಾಂಚಜನ್ಯೋಽಹಮಂಗೇಷ್ವಪಿ ಚ ಮಸ್ತಕಃ ॥ ೭೮ ॥

---

೭೪. ವಾನರರಲ್ಲಿ ನಾನು ಹನುಮಂತನಾಗಿಯೂ, ಪಾಂಡವರ ಮಧ್ಯೆ ನಾನು ಧನಂಜಯನಾಗಿಯೂ, ನಾಗಕನ್ಯೆಯರಲ್ಲಿ ನಾನು ಮನಸೆಯಾಗಿಯೂ ಅಷ್ಟವಸುಗಳಲ್ಲಿ ನಾನು ದ್ರೋಣನಾಗಿಯೂ ಇರುವೆನು.

೭೫. ಮೇಘಗಳಲ್ಲಿ ದ್ರೋಣಮೇಘನಾಗಿಯೂ, ವರ್ಷಗಳಲ್ಲಿ ಭಾರತವರ್ಷವಾಗಿಯೂ, ಕಾಮಿಗಳಲ್ಲಿ ಕಾಮದೇವನಾಗಿಯೂ, ಕಾಮುಕಿಯರಲ್ಲಿ ರಂಭೆಯಾಗಿಯೂ ಇರುವವನು ನಾನೇ.

೭೬. ಲೋಕಗಳಲ್ಲೆಲ್ಲ ಉತ್ತಮವೂ ಸರ್ವಶ್ರೇಷ್ಠವೂ ಆದ ಗೋಲೋಕವೇ ನಾನಾಗಿರುವೆನು. ಸಪ್ತಮಾತೃಕೆಯರಲ್ಲಿ ನಾನು ಶಾಂತಿಯಾಗಿಯೂ, ಸುಂದರಿಯರಲ್ಲಿ ರತೀದೇವಿಯಾಗಿಯೂ ಇರುವೆನು.

೭೭. ಸಾಕ್ಷಿಗಳ ಮಧ್ಯೆ ನಾನು ಧರ್ಮಪುರುಷನಾಗಿಯೂ, ದಿವಸಗಳ ಮಧ್ಯೆ ನಾನು ಸಂಧ್ಯೆಯಾಗಿಯೂ, ದೇವತೆಗಳಲ್ಲಿ ನಾನು ಮಹೇಂದ್ರನಾಗಿಯೂ, ರಾಕ್ಷಸರಲ್ಲಿ ವಿಭೀಷಣನಾಗಿಯೂ ಇರುವೆನು.

೭೮. ಏಕಾದಶರುದ್ರರಲ್ಲಿ ಕಾಲಾಗ್ನಿ ರುದ್ರನಾಗಿಯೂ, ಅಷ್ಟಭೈರವರಲ್ಲಿ ಸಂಹಾರಭೈರವನಾಗಿಯೂ, ಶಂಖಗಳಲ್ಲಿ ಪಾಂಚಜನ್ಯವಾಗಿಯೂ, ಅಂಗಗಳಲ್ಲಿ ಪ್ರಧಾನಾಂಗವಾದ ಶಿರಸ್ಸಾಗಿಯೂ ಇರುವವನು ನಾನೇ.

ಪರಂ ಪುರಾಣಸೂತ್ರೇಷು ಚಾಹಂ ಭಾಗವತಂ ವರಂ ।
ಭಾರತಂ ಚೇತಿಹಾಸೇಷು ಪಂಚರಾತ್ರೇಷು ಕಾಪಿಲಂ ॥ ೭೯ ॥

ಸ್ವಾಯಂಭುವೋ ಮನೂನಾಂ ಚ ಮುನೀನಾಂ ವ್ಯಾಸದೇವಕಃ ।
ಸ್ವಧಾಽಹಂ ಪಿತೃಪತ್ನೀಷು ಸ್ವಾಹಾ ವಹ್ನಿಪ್ರಿಯಾಸು ಚ ॥ ೮೦ ॥

ಯಜ್ಞಾನಾಂ ರಾಜಸೂಯೋ ಽಹಂ ಯಜ್ಞಪತ್ನೀಷು ದಕ್ಷಿಣಾ ।
ಶಸ್ತ್ರಾಸ್ತ್ರಜ್ಞೇಷು ರಾಮೋಽಹಂ ಜಮದಗ್ನಿಸುತೋ ಮಹಾನ್ ॥ ೮೧ ॥

ಪೌರಾಣಿಕೇಷು ಸೂತೋಽಹಂ ನೀತಿವತ್ಸ್ವಂಗಿರಾ ಮುನಿಃ ।
ವಿಷ್ಣುವ್ರತಂ ವ್ರತಾನಾಂ ಚ ಬಲಾನಾಂ ದೈವಮೇವ ಚ ॥ ೮೨ ॥

ಓಷಧೀನಾಮಹಂ ದೂರ್ವಾ ತೃಣಾನಾಂ ಕುಶಮೇವ ಚ ।
ಧರ್ಮಕರ್ಮಸು ಸತ್ಯಂ ಚ ಸ್ನೇಹಪಾತ್ರೇಷು ಪುತ್ರಕಃ ॥ ೮೩ ॥

---

೭೯. ಪುರಾಣಗ್ರಂಥಗಳಲ್ಲೆಲ್ಲಾ ಪರಮಶ್ರೇಷ್ಠವಾದ ಭಾಗವತವೇ ನಾನಾಗಿರುವೆನು. ಇತಿಹಾಸಗಳಲ್ಲಿ ಭಾರತವೂ, ಪಂಚರಾತ್ರಗಳಲ್ಲಿ ಕಾಪಿಲವೂ ನನ್ನ ಅಂಶವಾಗಿರುವುವು.

೮೦. ಮನುಗಳಲ್ಲಿ ಸ್ವಾಯಂಭುವಮನುವೂ, ಮುನಿಗಳಲ್ಲಿ ವ್ಯಾಸಮುನಿಯೂ ಪಿತೃಪತ್ನಿಯರಲ್ಲಿ ಸ್ವಧಾದೇವಿಯೂ, ವಹ್ನಿಪ್ರಿಯರಲ್ಲಿ ಸ್ವಾಹಾದೇವಿಯೂ ನಾನಾಗಿರುವೆನು.

೮೧. ಯಜ್ಞಗಳಲ್ಲಿ ನಾನು ರಾಜಸೂಯ ಯಜ್ಞವಾಗಿಯೂ, ಯಜ್ಞಪತ್ನಿಯರಲ್ಲಿ ದಕ್ಷಿಣಾದೇವಿಯಾಗಿಯೂ, ಶಾಸ್ತ್ರಜ್ಞರಲ್ಲಿ ಜಮದಗ್ನಿ ಪುತ್ರನೂ ಮಹಾತ್ಮನೂ ಆದ ಪರಶುರಾಮನಾಗಿಯೂ ಇರುವೆನು

೮೨. ಪೌರಾಣಿಕರಲ್ಲಿ ನಾನು ಸೂತಪುರಾಣೀಕನಾಗಿಯೂ, ನೀತಿಜ್ಞರಲ್ಲಿ ಅಂಗಿರಸ್ಸಾಗಿಯೂ, ವ್ರತಗಳಲ್ಲಿ ವಿಷ್ಣುವ್ರತವಾಗಿಯೂ, ಬಲಗಳಲ್ಲಿ ದೈವಬಲವಾಗಿಯೂ ಇರುವೆನು.

೮೩. ಓಷಧಿಗಳಲ್ಲಿ ನಾನು ದೂರ್ವೆ (ಗರಿಕೆ) ಯಾಗಿಯೂ, ತೃಣಗಳಲ್ಲಿ ಕುಶ (ದರ್ಭೆ) ವಾಗಿಯೂ, ಧರ್ಮಕರ್ಮಗಳಲ್ಲಿ ಸತ್ಯಸ್ವರೂಪನಾಗಿಯೂ, ಸ್ನೇಹಪಾತ್ರರಲ್ಲಿ ಪುತ್ರನಾಗಿಯೂ ಇರುವೆನು.

ಅಹಂ ವ್ಯಾಧಿಶ್ಚ ಶತ್ರೂಣಾಂ ಜ್ವರೋ ವ್ಯಾಧಿಷ್ವಹಂ ತಥಾ ।
ಮದ್ಭಕ್ತಿಷ್ವಪಿ ಮದ್ದಾಸ್ಯಂ ವರೇಷು ಚ ವರಃ ಸ್ಮೃತಃ ॥ ೮೪ ॥

ಆಶ್ರಮಾಣಾಂ ಗೃಹಸ್ಥೋಽಹಂ ಸಂನ್ಯಾಸೀ ಚ ವಿವೇಕಿನಾಂ ।
ಸುದರ್ಶನಂ ಚ ಶಸ್ತ್ರಾಣಾಂ ಕುಶಲಂ ಚ ಶುಭಾಶಿಷಾಂ ॥ ೮೫ ॥

ಐಶ್ವರ್ಯಾಣಾಂ ಮಹಾಜ್ಞಾನಂ ವೈರಾಗ್ಯಂ ಚ ಸುಖೇಷ್ವಹಂ ।
ಮಿತ್ರವಾಕ್ಯಂ ಪ್ರೀತಿದೇಷು ದಾನೇಷು ಚಾತ್ಮದಾನಕಂ ॥ ೮೬ ॥

ಸಂಚಯೇಷು ಧರ್ಮಕರ್ಮ ಕರ್ಮಣಾಂ ಚ ಮದರ್ಚನಂ ।
ಕಠೋರೇಷು ತಪಶ್ಚಾಹಂ ಫಲೇಷು ಮೋಕ್ಷ ಏವ ಚ ॥ ೮೭ ॥

ಅಷ್ಟಸಿದ್ಧಿಷು ಪ್ರಾಕಾಮ್ಯಮಹಂ ಕಾಶೀ ಪುರೀಷು ಚ ।
ನಗರೇಷು ತಥಾ ಕಾಂಚೀ ಸ ದೇಶೋ ಯತ್ರ ವೈಷ್ಣವಃ ॥ ೮೮ ॥

---

೮೪. ನಾನು ಶತ್ರುಗಳಿಗೆ ವ್ಯಾಧಿಸ್ವರೂಪನಾಗಿಯೂ, ವ್ಯಾಧಿಗಳಲ್ಲಿ ಜ್ವರ ರೂಪನಾಗಿಯೂ, ನನ್ನ ನವವಿಧಭಕ್ತಿಗಳಲ್ಲಿ ದಾಸ್ಯಸ್ವರೂಪನಾಗಿಯೂ, ವರಗಳಿಗೆ ವರನಾಗಿಯೂ ಇರುವೆನು.

೮೫. ಆಶ್ರಮಗಳಲ್ಲಿ ಗೃಹಸ್ಥಾಶ್ರಮ ರೂಪದಿಂದಲೂ, ವಿವೇಕಿಗಳಲ್ಲಿ ಸನ್ಯಾಸಿಯ ರೂಪದಿಂದಲೂ, ಶಸ್ತ್ರಗಳಲ್ಲಿ ಸುದರ್ಶನಚಕ್ರರೂಪದಿಂದಲೂ, ಶುಭಾಶಂಸೆಗಳಲ್ಲಿ ಕುಶಲ ರೂಪದಿಂದಲೂ ಇರುವವನು ನಾನೇ.

೮೬. ಐಶ್ವರ್ಯಗಳಲ್ಲಿ ಮಹಾಜ್ಞಾನವೂ, ಸುಖಗಳಲ್ಲಿ ವೈರಾಗ್ಯವೂ, ಪ್ರೀತಿದಾಯಕವಾದವುಗಳಲ್ಲಿ ಹಿತನುಡಿಯೂ, ದಾನದಲ್ಲಿ ಆತ್ಮದಾನವೂ ನನಗೆ ಅಭಿನ್ನವಾದವುಗಳು.

೮೭. ಸಂಗ್ರಹಿಸಬೇಕಾದವುಗಳಲ್ಲಿ ಧರ್ಮಕರ್ಮಸ್ವರೂಪದಿಂದಲೂ ಕರ್ಮಗಳಲ್ಲಿ ಈಶ್ವರಾರ್ಚನರೂಪದಿಂದಲೂ, ಕಠಿಣಕರ್ಮಗಳಲ್ಲಿ ತಪೋರೂಪದಿಂದಲೂ, ಫಲಗಳಲ್ಲಿ ಮೋಕ್ಷಫಲರೂಪದಿಂದಲೂ ಇರುವವನು ನಾನೇ.

೮೮. ಅಣಿಮಾದಿ ಅಷ್ಟಸಿದ್ಧಿಗಳಲ್ಲಿ ನಾನು ಪ್ರಾಕಾಮ್ಯರೂಪದಿಂದಲೂ, ಕ್ಷೇತ್ರಗಳಲ್ಲಿ ಕಾಶಿಯ ರೂಪದಿಂದಲೂ, ನಗರಿಗಳಲ್ಲಿ ಕಾಂಚೀನಗರದ ರೂಪದಿಂದಲೂ ದೇಶಗಳಲ್ಲಿ ವಿಷ್ಣುಭಕ್ತನೊಡಗೂಡಿದ ದೇಶರೂಪದಿಂದಲೂ ನಾನಿರುವೆನು.

ಸರ್ವಾಧಾರೇಷು ಸ್ಥೂಲೇಷು ಅಹಮೇವ ಮಹಾನ್ ವಿರಾಟ್ ।
ಪರಮಾಣುರಹಂ ವಿಶ್ವೇ ಮಹಾಸೂಕ್ಷ್ಮೇಷು ನಿತ್ಯಶಃ ॥ ೮೯ ॥

ವೈದ್ಯಾನಾಮಶ್ವಿನೀಪುತ್ರೌ ಚೌಷಧೀಷು ರಸಾಯನಂ ।
ಧನ್ವಂತರಿರ್ಮಂತ್ರವಿದಾಂ ವಿಷಾದಃ ಕ್ಷಯಕಾರಿಣಾಂ ॥ ೯೦ ॥

ರಾಗಾಣಾಂ ಮೇಘಮಲ್ಲಾರಃ ಕಾಮೋದಸ್ತ್ರಿಯಾಸು ಚ ।
ಮತ್ಪಾರ್ಷದೇಷು ಶ್ರೀದಾಮಾ ಮದ್ಬಂಧುಷ್ವಹಮುದ್ಧವಃ ॥ ೯೧ ॥

ಪಶುಜಂತುಷು ಗೌಶ್ಚಾಹಂ ಚಂದನಂ ಕಾನನೇಷು ಚ ।
ತೀರ್ಥಪೂತಶ್ಚ ಪೂತೇಷು ನಿಃಶಂಕೇಷು ಚ ವೈಷ್ಣವಃ ॥ ೯೨ ॥

ನ ವೈಷ್ಣವಾತ್ಪರಃ ಪ್ರಾಣೀ ಮನ್ಮಂತ್ರೋಪಾಸಕಶ್ಚ ಯಃ ।
ವೃಕ್ಷೇಷ್ವಂಕುರರೂಪೋಽಹಮಾಕಾರಃ ಸರ್ವವಸ್ತುಷು ॥ ೯೩ ॥

---

೮೯. ಸರ್ವಾಧಾರವೂ ಅತಿಸ್ಥೂಲವೂ ಆದ ವಸ್ತುಗಳಲ್ಲಿ ನಾನು ಮಹಾವಿರಾಡ್ರೂಪದಿಂದಲೂ, ವಿಶ್ವದಲ್ಲಿರುವ ಅತಿಸೂಕ್ಷ್ಮವಸ್ತುಗಳಲ್ಲಿ ನಿತ್ಯವಾದ ಪರಮಾಣುರೂಪದಿಂದಲೂ ನಾನಿರುವೆನು.

೯೦. ವೈದ್ಯರಲ್ಲಿ ನಾನು ಅಶ್ವಿನೀಕುಮಾರನಾಗಿಯೂ, ಔಷಧಿಗಳಲ್ಲಿ ರಸಾಯನವಾಗಿಯೂ, ಮಂತ್ರಜ್ಞರಲ್ಲಿ ಧನ್ವಂತರಿಯಾಗಿಯೂ, ಕ್ಷಯಕಾರಿಗಳಲ್ಲಿ ವಿಷಾದರೂಪನಾಗಿಯೂ, ಇರುವೆನು.

೯೧. ಪುರುಷರಾಗಗಳಲ್ಲಿ ನಾನು ಮೇಘಮಲ್ಲಾರರಾಗರೂಪದಿಂದಲೂ, ಸ್ತ್ರೀರಾಗಗಳಲ್ಲಿ ಕಾಮೋದರಾಗರೂಪದಿಂದಲೂ, ನನ್ನ ಪಾರ್ಷದರಲ್ಲಿ ಶ್ರೀದಾಮನ ರೂಪದಿಂದಲೂ, ನನ್ನ ಬಂಧುಗಳಲ್ಲಿ ಉದ್ಧವರೂಪದಿಂದಲೂ, ಇರುವೆನು.

೯೨. ಪಶುಪ್ರಾಣಿಗಳಲ್ಲಿ ನಾನು ಗೋವಿನರೂಪದಿಂದಲೂ, ವನವೃಕ್ಷಗಳಲ್ಲಿ ಚಂದನವೃಕ್ಷರೂಪದಿಂದಲೂ, ಪವಿತ್ರವಸ್ತುಗಳಲ್ಲಿ ಪುಣ್ಯತೀರ್ಥರೂಪದಿಂದಲೂ, ನಿರ್ಭೀತರಲ್ಲಿ ವಿಷ್ಣುಭಕ್ತನರೂಪದಿಂದಲೂ, ಇರುವೆನು.

೯೩. ನನ್ನ ಮಂತ್ರವನ್ನು ಉಪಾಸನೆಮಾಡುವಂಥ ವಿಷ್ಣುಭಕ್ತನಿಗಿಂತ ಮೇಲಾದವನು ಮತ್ತಾರೂ ಇಲ್ಲ. ವೃಕ್ಷಗಳಲ್ಲಿ ನಾನು ಅಂಕುರರೂಪದಿಂದಲೂ, ಸಕಲವಸ್ತುಗಳಲ್ಲಿ ಸುಂದರವಾದ ಆಕಾರದಿಂದಲೂ, ಇರುವೆನು.

ಅಹಂ ಚ ಸರ್ವಭೂತೇಷು ಮಯಿ ಸರ್ವೇ ಚ ಸಂತತಂ ।
ಯಥಾ ವೃಕ್ಷೇ ಫಲಾನ್ಯೇವ ಫಲೇಷು ಚಾಂಕುರಸ್ತರೋಃ ॥ ೯೪ ॥

ಸರ್ವಕಾರಣರೂಪೋಽಹಂ ನ ಚ ಮತ್ಕಾರಣಂ ಪರಂ ।
ಸರ್ವೇಶೋಽಹಂ ನ ಮೇಽಪೀಶೋ ಹ್ಯಹಂ ಕಾರಣಕಾರಣಂ ॥ ೯೫ ॥

ಸರ್ವೇಷಾಂ ಸರ್ವಬೀಜಾನಾಂ ಪ್ರವದಂತಿ ಮನೀಷಿಣಃ ।
ಮನ್ಮಾಯಾಮೋಹಿತಜನಾ ಮಾಂ ನ ಜಾನಂತಿ ಪಾಪಿನಃ ॥ ೯೬ ॥

ಪಾಪಗ್ರಸ್ತೇನ ದುರ್ಬುದ್ಧ್ಯಾ ವಿಧಿನಾ ವಂಚಿತೇನ ಚ ।
ಸ್ವಾತ್ಮಾಽಹಂ ಸರ್ವಜಂತೂನಾಂ ಸ್ವಾಮ್ಯಹಂ ನಾದೃತಃ ಸ್ವಯಂ ॥ ೯೭ ॥

---

೯೪. ಮರದಲ್ಲಿ ಹಣ್ಣುಗಳೂ, ಹಣ್ಣುಗಳಲ್ಲಿ ಮರದ ಅಂಕುರವೂ ಇರುವಂತೆ ಸಕಲವಸ್ತುಗಳಲ್ಲಿ ನಾನೂ ನನ್ನಲ್ಲಿ ಸಕಲ ಲೋಕವೂ ಸಂತತವಾಗಿರುವುವು.

೯೫. ನಾನು ಎಲ್ಲಕ್ಕೂ ಕಾರಣರೂಪನಾಗಿರುವೆನು. ನನಗೆ ಆದಿಕಾರಣವು ಮತ್ತಾವುದೂ ಇರುವುದಿಲ್ಲ. ಸರ್ವೇಶ್ವರನಾದ ನನಗೆ ಈಶ್ವರನು ಮತ್ತಾರೂ ಇಲ್ಲ. ನಾನು ಕಾರಣಗಳಿಗೆಲ್ಲ ಆದಿಕಾರಣನು.

೯೬. ಸಕಲ ಬೀಜಗಳಿಗೂ ನಾನು ಮೂಲಕಾರಣನೆಂದು ಜ್ಞಾನಿಗಳು ತಿಳಿದಿರುವರು. ನನ್ನ ಮಾಯೆಯಿಂದ ಮೋಹಿತರಾದ ಪಾಪಿಗಳು ಮಾತ್ರ ನನ್ನನ್ನು ಅರಿತುಕೊಳ್ಳಲಾರರು.

೯೭. ನಾನು ಸಕಲ ಜೀವಿಗಳ ಆತ್ಮಸ್ವರೂಪನಾಗಿಯೂ, ಸರ್ವೇಶ್ವರನಾಗಿಯೂ ಇದ್ದರೂ ಸಹ ಪಾಪಗ್ರಸ್ತರಾದ ಜೀವಿಗಳು ದುರ್ಬುದ್ಧಿಯಿಂದಲೂ ದುರದೃಷ್ಟದಿಂದಲೂ ನನ್ನನ್ನು ಆದರಿಸುವುದಿಲ್ಲ.

ಯತ್ರಾಹಂ ಶಕ್ತಯಸ್ತತ್ರ ಕ್ಷುತ್ಪಿಪಾಸಾದಯಸ್ತಥಾ ।
ಗತೇ ಮಯಿ ತಥಾ ಯಾಂತಿ ನರದೇಹೇ ಯಥಾಽನುಗಾಃ ॥ ೯೮ ॥

ಹೇ ವ್ರಜೇಶ ನಂದ ತಾತ ಜ್ಞಾನಂ ಜ್ಞಾತ್ವಾ ವ್ರಜಂ ವ್ರಜ ।
ಕಥಯಸ್ವ ಚ ತಾಂ ರಾಧಾಂ ಯಶೋದಾಂ ಜ್ಞಾನಮೇವ ಚ ॥ ೯೯ ॥

ಜ್ಞಾತ್ವಾ ಜ್ಞಾನಂ ವ್ರಜೇಶಶ್ಚ ಜಗಾಮ ಸ್ವಾನುಗೈಃ ಸಹ ।
ಗತ್ವಾ ಚ ಕಥಯಾಮಾಸ ತೇ ದ್ವೇ ಚ ಯೋಷಿತಾಂ ವರೇ ॥ ೧೦೦ ॥

ತೇ ಚ ಸರ್ವೇ ಜಹುಃ ಶೋಕಂ ಮಹಾಜ್ಞಾನೇನ ನಾರದ ।
ಕೃಷ್ಣೋ ಯದ್ಯಪಿ ನಿರ್ಲಿಪ್ತೋ ಮಾಯೇಶೋ ಮಾಯಯಾ ರತಃ ॥೧೦೧॥

ಯಶೋದಯಾ ಪ್ರೇರಿತಶ್ಚ ಪುನರಾಗತ್ಯ ಮಾಧವಂ ।
ತುಷ್ಟಾವ ಪರಮಾನಂದಂ ನಂದಶ್ಚ ನಂದನಂದನಂ ॥ ೧೦೨ ॥

---

೯೮. ಯಾವ ಜೀವಿಗಳಲ್ಲಿ ನಾನಿರುವೆನೋ ಅಲ್ಲಿ ದೇಹಬಲ ಬುದ್ಧಿಬಲ ಇತ್ಯಾದಿಗಳಿರುವುದಲ್ಲದೆ ಹಸಿವು ಬಾಯಾರಿಕೆ ಮುಂತಾದ ಅನುಭವಗಳಿರುವುವು. ನಾಯಕನನ್ನು ಅನುಜೀವಿಗಳು ಅನುಸರಿಸುವಂತೆ ನಾನು ಹೊರಟುಹೋದರೆ ಇತರ ಶಕ್ತಿಗಳೂ ಹೊರಟುಹೋಗುವುವು.

೯೯. ವ್ರಜೇಶ್ವರನೂ ನನ್ನ ತಂದೆಯೂ ಆದ ಎಲೈ ನಂದಗೋಪನೇ, ಈ ದಿವ್ಯಜ್ಞಾನವನ್ನು ಅರಿತುಕೊಂಡು ಈಗ ಗೋಕುಲಕ್ಕೆ ಹಿಂತಿರುಗು. ಅಲ್ಲಿ ರಾಧೆಗೂ ಮತ್ತು ಯಶೋದೆಗೂ ಸಹ ಈ ದಿವ್ಯಜ್ಞಾನವನ್ನು ಬೋಧಿಸು.

೧೦೦. ಈ ರೀತಿ ಕೃಷ್ಣನಿಂದ ಬೋಧಿತವಾದ ದಿವ್ಯಜ್ಞಾನವನ್ನು ತಿಳಿದು ನಂದಗೋಪನು ತನ್ನ ಹಿಂಬಾಲಕರೊಡನೆ ಗೋಕುಲಕ್ಕೆ ಹಿಂತಿರುಗಿ ಸ್ತ್ರೀಯರಲ್ಲಿ ಶ್ರೇಷ್ಠರಾದ ರಾಧಾಯಶೋದೆಯರಿಗೆ ಆ ದಿವ್ಯಜ್ಞಾನವನ್ನು ಬೋಧಿಸಿದನು.

೧೦೧. ಎಲೈ ನಾರದನೇ, ದಿವ್ಯಜ್ಞಾನವನ್ನು ಪಡೆದ ಆ ಯಶೋದಾದಿಗಳೆಲ್ಲರೂ ಶ್ರೀ ಕೃಷ್ಣನ ವಿರಹದುಃಖವನ್ನು ಮರೆತರು. ಮಾಯೇಶನಾದ ಶ್ರೀ ಕೃಷ್ಣನು ನಿರ್ಲಿಪ್ತನಾಗಿದ್ದರೂ ಸಹ ಮಾಯೆಯಲ್ಲಿ ರತನಾಗುವನು.

೧೦೨–೧೦೩. ಅತ್ತ ನಂದಗೋಪನು ಯಶೋದೆಯಿಂದ ಪ್ರೇರಿತನಾಗಿ ಮತ್ತೊಮ್ಮೆ ಶ್ರೀ ಕೃಷ್ಣನ ಸಮೀಪಕ್ಕೆ ಬಂದು, ಪೂರ್ವದಲ್ಲಿ ಬ್ರಹ್ಮನು ಸ್ತೋತ್ರ

ಸಾಮವೇದೋಕ್ತಸ್ತೋತ್ರೇಣ ಕೃತೇನ ಬ್ರಹ್ಮಣಾ ಪುರಾ ।
ಪುತ್ರಸ್ಯ ಪುರತಃ ಸ್ಥಿತ್ವಾ ರುರೋದ ಚ ಪುನಃಪುನಃ ॥ ೧೦೩ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣ ನಾರದಸಂವಾದೇ
ನಂದಾದಿಶೋಕಪ್ರಮೋಚನಂ ನಾಮ
ತ್ರಿಸಪ್ತತಿತಮೋಽಧ್ಯಾಯಃ

ಮಾಡಿದ ಸಾಮವೇದೋಕ್ತವಾದ:ಸ್ತೋತ್ರದಿಂದ ಶ್ರೀ ಕೃಷ್ಣನನ್ನು ಸ್ತುತಿಸಿ ಅವನ ಮುಂದೆ ಭಯಭಕ್ತಿಯಿಂದ ಕೈಮುಗಿದು ನಿಂತುಕೊಂಡು ಮತ್ತೆ ಮತ್ತೆ ಕಣ್ಣೀರಿಟ್ಟನು

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದ ಉತ್ತರಾರ್ಧದ
ನಾರಾಯಣ ನಾರದ ಸಂವಾದದಲ್ಲಿ ನಂದಾದಿಗಳ ಶೋಕಪ್ರಮೋಚನವೆಂಬ
ಎಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

ಎಪ್ಪತ್ತಮೂರನೆಯ ಅಧ್ಯಾಯದ ಸಾರಾಂಶ

ಚರಾಚರಾತ್ಮಕವಾದ ನಿಖಿಲಪ್ರಪಂಚವೂ ಪರಮಾತ್ಮನ ಅಂಶವನ್ನೊಳಗೊಂಡಿರುವುದು. ಎಲ್ಲಕ್ಕೂ ಪರಮಾತ್ಮನು ಮೂಲಕಾರಣನು. ಆದಿಕಾರಣನಾದ ಪರಮಾತ್ಮನು ಮಾತ್ರ ಕಾರಣರಹಿತನಾಗಿರುವನು 'ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ । ತತ್ತದೇವಾವಗಚ್ಛ ತ್ವಂ ಮಮ ತೇಜೋಂಽಶಸಂಭವಂ ಎಂಬ ಭಗವದ್ಗೀತೆಯ ವಾಣಿಯಂತೆ ಶ್ರೇಷ್ಠವಸ್ತುಗಳಲ್ಲೆಲ್ಲ ಪರಮಾತ್ಮನ ಅಂಶ ವಿಶೇಷವಿರುವುದು. ನಿರ್ಗುಣನೂ, ನಿರೀಹನೂ, ನಿರ್ಲಿಪ್ತನೂ ಆದ ಪರಮಾತ್ಮನೂ ಸಹ ದುಷ [illegible] ಅದೇ ರೀತಿ ಪ್ರಕೃತಿಪುರುಷರಾದ ರಾಧಾಕೃಷ್ಣರು ಭೂಮಿಯಲ್ಲಿ ಅವತರಿಸಿ ಕಂಸಾದಿದುಷ್ಟರನ್ನು ನಿಗ್ರಹಿಸಿ, ನಂದಾದಿ, ಶಿಷ್ಟರನ್ನು ಪರಿಪಾಲಿಸಿದರು. ತನ್ನ ಅವತಾರ ಪ್ರಯೋಜನವು ಮುಗಿದನಂತರ ಶ್ರೀಕೃಷ್ಣನು ರಾಧೆಯನ್ನೂ ನಂದಗೋಪ ಯಶೋದೆಯರನ್ನೂ ಬಿಟ್ಟು ಮಥುರೆಗೆ ತೆರಳಿದನು. ಮಗನ ವಿರಹದುಃಖವನ್ನು ಸಹಿಸಲಾರದೆ ಬಂದ ನಂದಗೋಪನಿಗೆ ಶ್ರೀಕೃಷ್ಣನು ವೇದಾಂತ ತತ್ತ್ವವನ್ನು ಉಪದೇಶಿಸಿ ತಂದೆ, ತಾಯಿ, ಮಗ, ಹೆಂಡತಿ ಮುಂತಾದ ಸಂಬಂಧವೆಲ್ಲ ಕಾಲ್ಪನಿಕವೆಂಬುದನ್ನು ತಿಳಿಸಿದನು. ಇದನ್ನು ಅರಿತ ನಂದಗೋಪನು ಗೋಕುಲಕ್ಕೆ ಹಿಂತಿರುಗಿ ಯಶೋದೆ ರಾಧೆ ಮುಂತಾದವರಿಗೆ ಆ ತತ್ತ್ವವನ್ನು ಬೋಧಿಸಿ ಸಮಾಧಾನಗೊಳಿಸಿದನು. ಆದರೂ ಯಶೋದೆಯಿಂದ ಪ್ರೇರಿತನಾಗಿ ಮತ್ತೊಮ್ಮೆ ಶ್ರೀಕೃಷ್ಣನ ಸಮೀಪಕ್ಕೆ ಬಂದು ಭಕ್ತಿಯಿಂದ ಸ್ತುತಿಸಲಾರಂಭಿಸಿದನು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಚತುಸ್ಸಪ್ತತಿತಮೋಽಧ್ಯಾಯಃ ॥

॥ ಶ್ರೀ ನಾರಾಯಣ ಉವಾಚ ॥

ಶ್ರೀಕೃಷ್ಣಃ ಪರಮಾನಂದಃ ಪರಿಪೂರ್ಣತಮಃ ಪ್ರಭುಃ ।
ಪರಮಾತ್ಮಾ ಚ ಪರಮೋ ಭಕ್ತಾನುಗ್ರಹಕಾರಕಃ ॥ ೧ ॥

ಭುವೋ ಭಾರಾವತರಣೇ ನಿರ್ಗುಣಃ ಪ್ರಕೃತೇಃ ಪರಃ ।
ಪರಾತ್ಪರಸ್ತು ಭಗವಾನ್ಬ್ರಹ್ಮೇಶಶೇಷವಂದಿತಃ ॥ ೨ ॥

ತುಷ್ಟೋ ನಂದಸ್ತವಂ ಶ್ರುತ್ವಾ ತಮುವಾಚ ಜಗತ್ಪತಿಃ ।
ಆಗಚ್ಛಂತಂ ಗೋಕುಲಾಚ್ಚ ವಿರಹಜ್ವರಕಾತರಂ ॥ ೩ ॥

ಎಪ್ಪತ್ತ ನಾಲ್ಕನೆಯ ಅಧ್ಯಾಯ.

೧-೩. ಶ್ರೀ ನಾರಾಯಣ :—ಪರಮಾನಂದ ಸ್ವರೂಪನೂ, ಪರಿಪೂರ್ಣತಮನೂ, ಭಕ್ತಾನುಗ್ರಹಕಾರಕನೂ, ನಿರ್ಗುಣನೂ, ಪ್ರಕೃತಿಗಿಂತ ಮೇಲಾದವನೂ, ಪರಾತ್ಪರನೂ, ಬ್ರಹ್ಮ, ಈಶ, ಶೇಷ ಮುಂತಾದ ದೇವತೆಗಳಿಂದ ವಂದಿತನೂ ಭಗವಂತನೂ ಆದ ಶ್ರೀ ಕೃಷ್ಣಪರಮಾತ್ಮನು ಭೂಮಿಯ ಭಾರಾವತಾರಣಾರ್ಥವಾಗಿ ನಂದಗೋಕುಲದಲ್ಲಿ ಅವತರಿಸಿ ತನ್ನ ಕರ್ತವ್ಯವನ್ನು ಮಾಡಿ ಮಧುರೆಗೆ ಬಂದನು. ಅತ್ತ ನಂದಗೋಪನು ಶ್ರೀ ಕೃಷ್ಣನ ವಿರಹವನ್ನು ಸಹಿಸಲಾರದೆ ಮಧುರೆಗೆ ಬಂದು ಆವನನ್ನು ಸ್ತುತಿಸಲು ಜಗದೊಡೆಯನು ಅವನನ್ನು ಕುರಿತಿಂತೆಂದನು.

॥ ಶ್ರೀ ಭಗವಾನುವಾಚ ॥

ಗಚ್ಛ ನಂದವ್ರಜಂ ನಂದತ್ಯಜ ಶೋಕಂ ಭ್ರಮಂ ಭುವಿ ।
ಶೃಣು ಸತ್ಯಂ ಪರಂ ಜ್ಞಾನಂ ಶೋಕಗ್ರಂಥಿನಿಕೃಂತನಂ ॥ ೪ ॥

ವಾಯುಶ್ಚ ಭೂಮಿರಾಕಾಶೋ ಜಲಂ ತೇಜಶ್ಚ ಪಂಕಜಂ ।
ಉಕ್ತಾಃ ಶ್ರುತಿಗುಣೈರೇತೈಃ ಪಂಚಭೂತೈಶ್ಚ ನಿತ್ಯಶಃ ॥ ೫ ॥

ಸರ್ವೇಷಾಂ ದೇಹಿನಾಂ ತಾತ ದೇಹಶ್ಚ ಪಾಂಚಭೌತಿಕಃ ।
ಮಿಥ್ಯಾಭ್ರಮಃ ಕೃತ್ರಿಮಶ್ಚ ಸ್ವಪ್ನವನ್ಮಾಯಯಾನ್ವಿತಃ ॥ ೬ ॥

ದೇಹಂ ಗೃಹ್ಣಂತಿ ಸರ್ವೇಷಾಂ ಪಂಚಭೂತಾನಿ ನಿತ್ಯಶ· ।
ಮಾಯಾಸಂಕೇತರೂಪಂ ತದಭಿಜ್ಞಾನಂ ಭ್ರಮಾತ್ಮಕಂ ॥ ೭ ॥

---

೪. ಭಗವಾನ್ :—ಎಲೈ ನಂದಗೋಪನೇ, ನೀನು ಶೋಕವನ್ನೂ ಭ್ರಮೆಯನ್ನೂ ಬಿಟ್ಟು ಗೋಕುಲಕ್ಕೆ ಹಿಂತಿರುಗು. ನಿನ್ನ ಶೋಕ ಪರಂಪರೆಯನ್ನು ದೂರಮಾಡುವಂಥ ನನ್ನ ದಿವ್ಯಜ್ಞಾನೋಪದೇಶವನ್ನು ಕೇಳುವವನಾಗು.

೫. ವಾಯು, ಭೂಮಿ, ಆಕಾಶ, ನೀರು ಮತ್ತು ತೇಜಸ್ಸು ಈ ಐದು ಪಂಚಮಹಾಭೂತಗಳೆಂದು ಶ್ರುತಿಯಲ್ಲಿ ಉಕ್ತವಾಗಿದೆ. (ಪಂಚಮಮ್)

೬ ಆದುದರಿಂದ ಎಲೈ ತಾತನೇ, ಎಲ್ಲರ ದೇಹವೂ ಪಾಂಚಭೌತಿಕವೆಂದರೆ ಪಂಚಮಹಾಭೂತಗಳಿಂದ ನಿರ್ಮಿತವಾಗಿವೆ. ಈ ಪಾಂಚಭೌತಿಕ ಶರೀರವು ಕಲ್ಪಿತವಾದುದರಿಂದ ಮಿಥ್ಯಾಭ್ರಮರೂಪವಾಗಿರುವುದಲ್ಲದೆ ಸ್ವಪ್ನದಂತೆ ಮಾಯಾನ್ವಿತವಾಗಿದೆ.

೭. ಈ ಪಂಚಮಹಾಭೂತಗಳು ಮಾಯಾಸಂಕೇತರೂಪವೂ ಭ್ರಮಾತ್ಮಕವೂ ಆದ ನಿಖಿಲ ಜೀವಿಗಳ ದೇಹಗಳಲ್ಲಿ ತಮ್ಮ ತಮ್ಮ ಅಂಶಗಳಲ್ಲಿ ಸೇರಿಕೊಂಡಿರುತ್ತವೆ.

ಕೋ ವಾ ಕಸ್ಯ ಸುತಸ್ತಾತ ಕಾ ಸ್ತ್ರೀ ಕಸ್ಯ ಪತಿಸ್ತು ವಾ |
ಕ[illegible] ರ್ಣೇಷಾಂ [illegible] ನಿ || ೮ ||

ಕರ್ಮಣಾ ಜಾಯತೇ ಜಂತುಃ ಕರ್ಮಣೈವ ಪ್ರಲೀಯತೇ |
ಸುಖಂ ದುಃಖಂ ಭಯಂ ಶೋಕಂ ಕರ್ಮಣಾ ಚ ಪ್ರಪದ್ಯತೇ || ೯ ||

ಕೇಷಾಂ ವಾ ಜನ್ಮಸರ್ಗೇಷು ಕೇಷಾಂ ವಾ ಬ್ರಹ್ಮಣೋ ಗೃಹೇ |
ಕೇಷಾಂ ವಿಪ್ರೇಷು ಕ್ಷತ್ರೇಷು ಕೇಷಾಂ ವಾ ವೈಶ್ಯಶೂದ್ರಯೋಃ || ೧೦ ||

ಅತಿನೀಚೇಷು ಕೇಷಾಂ ವಾ ಕೇಷಾಂ ಕೃಮಿಷು ವಿಟ್ಸುಚ |
ಪಶುಪಕ್ಷಿಷು ಕೇಷಾಂ ವಾ ಕೇಷಾಂ ವಾ ಕ್ಷುದ್ರಜಂತುಷು || ೧೧ ||

ಪುನಃಪುನರ್ಭ್ರಮಂತ್ಯೇವ ಸರ್ವೇ ತಾತ ಸ್ವಕರ್ಮಣಾ |
ಕರೋತಿ ಕರ್ಮ ನಿರ್ಮೂಲಂ ಮದ್ಭಕ್ತೋ ಮತ್ಪ್ರಿಯಃ ಸದಾ || ೧೨ ||

---

೮. ಎಲೈ ತಂದೆಯೇ, ಯಾರು ಯಾರಿಗೆ ಮಗನು ? ಯಾರು ಹೆಂಡತಿ ? ಯಾರು ಗಂಡ ? ಎಲ್ಲ ಜೀವಿಗಳೂ ತಮ್ಮ ಕರ್ಮಾನುಗುಣವಾಗಿ ಕ್ಷಣಿಕವಾದ ಅನೇಕ ಜನ್ಮಗಳನ್ನು ಎತ್ತುವರು.

೯. ಜಂತುವು ಕರ್ಮಾನುಗುಣವಾಗಿ ಜನ್ಮವೆತ್ತಿ ಕರ್ಮಾನುಸಾರವಾಗಿ ಲಯ ಹೊಂದುತ್ತದೆ. ಸುಖ, ದುಃಖ, ಭಯ, ಶೋಕ ಮುಂತಾದುವೆಲ್ಲವೂ ಕರ್ಮಾನುಸಾರವಾಗಿ ಉಂಟಾಗುವುದು.

೧೦. ಕೆಲವು ಜೀವಿಗಳು ಕರ್ಮಾನುಗುಣವಾಗಿ ಬ್ರಾಹ್ಮಣಜನ್ಮದಲ್ಲಿಯೂ, ಮತ್ತೆ ಕೆಲವು ಕ್ಷತ್ರಿಯಜನ್ಮದಲ್ಲಿಯೂ ಕೆಲವು ವೈಶ್ಯ ಮತ್ತು ಶೂದ್ರಜನ್ಮಗಳಲ್ಲಿಯೂ ಜನಿಸುವುವು.

೧೧. ಕೆಲವು ಜಂತುಗಳು ಅತಿನೀಚವಾದ ಯೋನಿಯಲ್ಲಿಯೂ, ಮತ್ತೆ ಕೆಲವು ಕ್ರಿಮಿಕೀಟಗಳ ಯೋನಿಯಲ್ಲಿಯೂ ಜನಿಸುವುವು. ಕೆಲವು ಮಲಕ್ರಿಮಿಯಾಗಿ ಜನಿಸುವುವು. ಕೆಲವು ಪಶುಪಕ್ಷಿಗಳಾಗಿಯೂ ಮತ್ತೆ ಕೆಲವು ಅದಕ್ಕಿಂತ ನೀಚಜಂತುಗಳಾಗಿಯೂ ಜನಿಸುವುವು.

೧೨. ಎಲೈ ಪೂಜ್ಯನಾದ ತಾತನೇ, ಎಲ್ಲರೂ ತಮ್ಮ ತಮ್ಮ ಕರ್ಮಾನುಗುಣವಾಗಿ ಪುನರ್ಜನ್ಮವನ್ನೆತ್ತುತ್ತಲೇ ಇರುವರು. ನನ್ನ ಭಕ್ತನೂ ನನ್ನ ಪ್ರೀತಿಗೆ ಪಾತ್ರನಾದವನೂ ಸಹ ಕರ್ಮಬಂಧನವನ್ನು ಬಿಡಿಸಿಕೊಂಡು ಬರುವನು.

ಸತ್ಯಂ ತ್ರೇತಾ ದ್ವಾಪರಶ್ಚ ಕಲಿಶ್ಚೇತಿ ಚತುರ್ಯುಗಂ ।
ಪಂಚವಿಂಶತ್ಸಹಸ್ರಾಣಾಂ ಯುಗಾಂತೇ ನಿಧನಂ ಮನೋಃ ॥ ೧೩ ॥

ಮನೋಃ ಸಮಂ ಮಹೇಂದ್ರಸ್ಯ ಪರಮಾಯುರ್ವಿನಿರ್ಮಿತಂ ।
ಚತುರ್ದಶೇಂದ್ರವಿಚ್ಛಿತ್ತೌ ಬ್ರಹ್ಮಣೋ ದಿನಮುಚ್ಯತೇ ॥ ೧೪ ॥

ಏವಂ ಪರಿಮಿತಾ ರಾತ್ರಿಃ ಕಾಲವಿದ್ಭಿರ್ವಿನಿರ್ಮಿತಾ ।
ಏವಂ ಪರಿಮಿತಾ ಮಾಸಾ ವರ್ಷಂ ಚ ಪರಿನಿಶ್ಚಿತಂ ॥ ೧೫ ॥

ಬ್ರಹ್ಮಣಶ್ಚ ವರ್ಷಶತಂ ಪರಮಾಯುರ್ವಿನಿರ್ಮಿತಂ ।
ನಿಮೇಷಮಾತ್ರಂ ಕಾಲೋಽಯಂ ಬ್ರಹ್ಮಣೋ ನಿಧನೇ ಮಮ ॥ ೧೬ ॥

ಬ್ರಹ್ಮಾದಿತೃಣಪರ್ಯಂತಂ ಸರ್ವಂ ವಿಶ್ವೇ ವಿನಿಶ್ಚಿತಂ ।
ಸತ್ಯೋಽಹಂ ಪರಮಾತ್ಮಾ ಚ ಭಕ್ತಾನುಗ್ರಹವಿಗ್ರಹಃ ॥ ೧೭ ॥

---

೧೩. ಸತ್ಯ, ತ್ರೇತಾ ದ್ವಾಪರ ಮತ್ತು ಕಲಿ ಎಂದು ನಾಲ್ಕು ಯುಗಗಳಿರುವುವು. ಇಪ್ಪತ್ತೈದುಸಾವಿರ ಯುಗಗಳು ಕಳೆದನಂತರ ಒಬ್ಬಮನುವಿನ ಕಾಲಾವಧಿಯು ಮುಗಿಯುವುದು.

೧೪. ಮನುವಿಗಿರುವಂತೆಯೇ ಮಹೇಂದ್ರನ ಆಯುಸ್ಸೂ ನಿಯಮಿತವಾಗಿರುವುದು. ಹದಿನಾಲ್ಕು ಮಂದಿ ಇಂದ್ರರ ಅವಧಿಯು ಕಳೆದರೆ ಬ್ರಹ್ಮನ ಒಂದು ದಿನವಾಗುವುದು.

೧೫. ಇದೇ ರೀತಿ ಹದಿನಾಲ್ಕುಮಂದಿ ಇಂದ್ರರ ಅವಧಿಯು ಮತ್ತೊಮ್ಮೆ ಕಳೆದರೆ ಬ್ರಹ್ಮನ ಒಂದು ರಾತ್ರಿಯಾಗುವುದು. ಈ ಪರಿಮಾಣದಿಂದಲೇ ತಿಂಗಳು ಮತ್ತು ವರ್ಷಗಳು ಎಣಿಸಲ್ಪಡುವುವು.

೧೬. ಈ ಪರಿಮಾಣದ ನೂರು ವರ್ಷಗಳು ಬ್ರಹ್ಮನ ಆಯುಃಪ್ರಮಾಣವೆಂದು ಪರಿಗಣಿತವಾಗಿರುವುದು. ಈ ರೀತಿಯಿಂದ ಬ್ರಹ್ಮನ ಜೀವಿತಕಾಲವು ನನ್ನ ನಿಮೇಷ(ರೆಪ್ಪೆಬಡಿಯುವ) ಕಾಲಕ್ಕೆ ಸಮವೆನಿಸುವುದು.

೧೭. ಬ್ರಹ್ಮಾದಿ ಸ್ತಂಭಪರ್ಯಂತವಾದ ನಿಖಿಲ ವಸ್ತುಗಳೂ ಪ್ರಪಂಚದಲ್ಲಿ ವಿನಾಶಿಯಾದುವುಗಳೆಂದು ನಿಶ್ಚಿತವಾಗಿವೆ. ಸತ್ಯಸ್ವರೂಪನೂ ಪರಮಾತ್ಮನೂ ಆದ ನಾನು ಮಾತ್ರ ಭಕ್ತರ ಅನುಗ್ರಹಕ್ಕಾಗಿ ವಿಗ್ರಹಧಾರಿಯಾಗಿರುವೆನು

ಮನ್ಮಂತ್ರೋಪಾಸಕಃ ಸತ್ಯೋ ದೇಹಂ ತ್ಯಕ್ತ್ವಾ ಧರಾಸು ಚ ।
ಯಾಸ್ಯತ್ಯೇವಹಿ ಗೋಲೋಕಂ ಭಿತ್ವಾ ಕರ್ಮ ಪುರಾತನಂ ॥ ೧೮ ॥

ಅಸಂಖ್ಯಬ್ರಹ್ಮಣಾಂ ಪಾತೇ ನ ಭವೇತ್ತಸ್ಯ ಪಾತನಂ ।
ಗೃಹ್ಣಾತಿ ನಿತ್ಯಂ ಸ್ವಂ ದೇಹಂ ಜನ್ಮಮೃತ್ಯುಜರಾಪಹಂ ॥ ೧೯ ॥

ನ ನಂದ ಮಮ ಭಕ್ತಾನಾಮಶುಭಂ ವಿದ್ಯತೇ ಕ್ವಚಿತ್ ।
ನಿತ್ಯಂ ಸುದರ್ಶನಂ ತಂ ಚ ಪರಿರಕ್ಷತಿ ಸರ್ವತಃ ॥ ೨೦ ॥

ಮತ್ತೋ ಹಿ ಬಲವಾನ್ಭಕ್ತಶ್ಚಿಂತಿತೋಽಹಂ ನ ಚಿಂತಿತಃ ।
ಅಹಂ ಸ್ವಾಮೀ ಚ ತಸ್ಯೈವ ನ ಮೇ ಸ್ವಾಮೀ ಪಿತಾ ಪ್ರಸೂಃ ॥ ೨೧ ॥

ಪುತ್ರಬುದ್ಧಿಂ ಪರಿತ್ಯಜ್ಯ ಭಜ ಮಾಂ ಬ್ರಹ್ಮರೂಪಿಣಂ ।
ಭಿತ್ವಾ ಬ್ರಹ್ಮನಿಗಡಂ ಗೋಲೋಕಂ ತದ್ವ್ರಜ ಸ್ವಯಂ ॥ ೨೨ ॥

---

೧೮. ಭೂಮಂಡಲದಲ್ಲಿ ನನ್ನ ಮಂತ್ರೋಪಾಸಕನು ಪಾಂಚ ಭೌತಿಕ ದೇಹವನ್ನು ತ್ಯಜಿಸಿದನಂತರ ಪುರಾತನ ಕರ್ಮಬಂಧನಗಳಿಂದ ಮುಕ್ತನಾಗಿ ಗೋಲೋಕಕ್ಕೆ ಬಂದು ಸೇರುವನು.

೧೯. ಅಸಂಖ್ಯ ಬ್ರಹ್ಮರ ಕಾಲಾವಧಿಯು ಮುಗಿದರೂ ಸಹ ಆ ನನ್ನ ಭಕ್ತನು ಶಾಶ್ವತವಾಗಿರುವನು. ಅವನು ಜನ್ಮಜರಾಮೃತ್ಯುಪರಿಹಾರಕವಾದ ನಿತ್ಯ ಶರೀರವನ್ನು ಧರಿಸಿರುವನು.

೨೦. ಎಲೈ ನಂದನೇ, ನನ್ನ ಭಕ್ತರಿಗೆ ಎಂದೆಂದಿಗೂ ಅಶುಭವುಂಟಾಗುವುದಿಲ್ಲ. ಅವನನ್ನು ಯಾವಾಗಲೂ ನನ್ನ ಸುದರ್ಶನ ಚಕ್ರವು ಅಪಾಯಗಳಿಂದ ರಕ್ಷಿಸುತ್ತಿರುವುದು.

೨೧. ನನಗಿಂತ ನನ್ನ ಭಕ್ತನು ಪ್ರಬಲನೆಂದು ಜ್ಞಾನಿಗಳು ಹೇಳುವರು. ಆದರೆ ನಾನು ನನ್ನ ಭಕ್ತನಿಗೂ ಒಡೆಯನಾಗಿರುವೆನು. ನನಗೆ ಒಡೆಯನಾಗಲೀ ತಂದೆಯಾಗಲೀ ತಾಯಿಯಾಗಲೀ ಯಾರೂ ಇಲ್ಲ.

೨೨. ಆದುದರಿಂದ ಎಲೈ ನಂದನೇ, ನನ್ನಲ್ಲಿ ಪುತ್ರನೆಂದು ಬುದ್ಧಿಯನ್ನು ದೂರಮಾಡಿ ಬ್ರಹ್ಮರೂಪಿಯಾದ ನನ್ನನ್ನು ಭಜಿಸು. ಅನಂತರ ಸಂಸಾರದ ಬಂಧನದಿಂದ ವಿಮುಕ್ತನಾಗಿ ಗೋಲೋಕಕ್ಕೆ ಹೋಗುವವನಾಗು.

ಕಥಯಸ್ವ ಯಶೋದಾಂ ಚ ಗೋಪೀಂ ಗೋಪಗಣಂ ವ್ರಜ ।
ತೈಶ್ಚ ಸರ್ವೈರ್ಜನೈಃ ಶೋಕಂ ತ್ಯಜ ಸ್ವಮಂದಿರಂ ವ್ರಜ ॥ ೨೩ ॥

ಇತ್ಯೇವಮುಕ್ತ್ವಾ ಭಗವಾನ್ವಿರರಾಮ ಚ ಸಂಸದಿ ।
ಪಪ್ರಚ್ಛ ಪುನರೇವಂ ತಂ ನಂದಶ್ಚಾನಂದಸಂಪ್ಲುತಃ ॥ ೨೪ ॥

॥ ನಂದ ಉವಾಚ ॥

ವದ ಸಾಂಸಾರಿಕಂ ಜ್ಞಾನಂ ಯೇನ ಯಾಸ್ಯಾಮಿ ತ್ವತ್ಪದಂ ।
ಮೂಢೋऽಹಂ ಪರಮಾನಂದ ಶ್ರುತೀನಾಂ ಜನಕೋ ಭವಾನ್ ॥ ೨೫ ॥

ನಂದಸ್ಯ ವಚನಂ ಶ್ರುತ್ವಾ ಸರ್ವಜ್ಞೋ ಭಗವಾನ್ಸ್ವಯಂ ।
ಆಹ್ನಿಕಂ ಕಥಯಾಮಾಸ ಶ್ರುತಿಭಿರ್ನ ಶ್ರುತಂ ಹಿ ಯತ್ ॥ ೨೬ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣನಾರದಸಂವಾದೇ ಭಗವನ್ನಂದ
ಸಂವಾದೋನಾಮ ಚತುಃಸಪ್ತತಿತಮೋऽಧ್ಯಾಯಃ

---

೨೩. ಯಶೋದೆಗೂ, ಗೋಪಿಯರಿಗೂ, ಗೋಪರಿಗೂ ಸಹ ನನ್ನ ಮಹಿಮೆಯನ್ನು ತಿಳಿಸಿ ಅವರೆಲ್ಲರೊಡನೆ ನನ್ನ ವಿರಹದುಃಖವನ್ನು ತ್ಯಜಿಸಿ ನಿನ್ನ ಮಂದಿರದಲ್ಲಿ ಸುಖವಾಗಿರು.

೨೪. ಭಗವಂತನಾದ ಶ್ರೀಕೃಷ್ಣನು ಈ ರೀತಿಯಾಗಿ ಹೇಳಿ ಸುಮ್ಮನಾಗಲು ಆನಂದತುಂದಿಲನಾದ ನಂದಗೋಪನು ಪುನಃ ಶ್ರೀಕೃಷ್ಣನನ್ನು ಕುರಿತಿಂತೆಂದನು.

೨೫. ನಂದಗೋಪ :—ಎಲೈ ಪರಮಾನಂದಮಯನಾದ ಶ್ರೀ ಹರಿಯೇ, ಶ್ರುತಿಗಳ ಜನಕನಾದ ನೀನು ಮೂಢನಾದ ನನಗೆ ಸಂಸಾರಬಂಧನದಿಂದ ಮುಕ್ತನಾಗಿ ನಿನ್ನ ಪಾದವನ್ನು ಸೇರುವಂಥ ದಿವ್ಯಜ್ಞಾನವನ್ನು ಬೋಧಿಸು

೨೬. ಈ ರೀತಿಯಾದ ನಂದನ ಪ್ರಶ್ನೆಯನ್ನು ಕೇಳಿ ಸ್ವಯಂ ಸರ್ವಜ್ಞನಾದ ಭಗವಂತನು ಶ್ರುತಿಗಳಲ್ಲೂ ಸಹ ಉಕ್ತವಾಗದಿರುವ ನಿತ್ಯವಿಧಿಯನ್ನು ನಂದಗೋಪನಿಗೆ ಉಪದೇಶಮಾಡಿದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀ ಕೃಷ್ಣಜನ್ಮಖಂಡದ ಉತ್ತರಾರ್ಧದಲ್ಲಿ
ನಾರಾಯಣ ನಾರದ ಸಂವಾದಾಂತರ್ಗತವಾದ ನಂದಕೃಷ್ಣರ ಸಂವಾದದಲ್ಲಿ
ಎಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು

ಎಪ್ಪತ್ತನಾಲ್ಕನೆಯ ಅಧ್ಯಾಯದ ಸಾರಾಂಶ

ಪ್ರಾಪಂಚಿಕ ಮಾಯೆಗೊಳಗಾದ ನಂದಗೋಪನಿಗೆ ಪುತ್ರನಾದ ಶ್ರೀ ಕೃಷ್ಣನ ವಿರಹವನ್ನು ಸಹಿಸಲಾಗಲಿಲ್ಲ. ಅವನು ಮತ್ತೊಮ್ಮೆ ಶ್ರೀ ಕೃಷ್ಣನ ಸಮೀಪಕ್ಕೆ ಬಂದು ಅವನನ್ನು ಸ್ತುತಿಸಲಾರಂಭಿಸಿದನು. ಆಗ ಶ್ರೀ ಕೃಷ್ಣನು ನಂದಗೋಪನಿಗೆ ಪರಮಾತ್ಮಜೀವಾತ್ಮರುಗಳ ಬೇಧವನ್ನು ವಿವರಿಸಿ ಜೀವಿಯು ಜನ್ಮಾಂತರದ ತನ್ನ ಕರ್ಮಕ್ಕೆ ಅನುಗುಣವಾಗಿ ಭವಬಂಧನಕ್ಕೆ ಒಳಗಾಗುವನೆಂದೂ, ಯಾವನು ಆತ್ಮಾರ್ಪಣ ಬುದ್ಧಿಯಿಂದ ಕೇವಲ ನಿಷ್ಕಾಮ ಕರ್ಮವನ್ನು ಮಾಡಿಕೊಂಡಿರುವನೋ ಅವ [illegible] ಬಂ ವಿಮುಕ [illegible] ಗಂಡ ಹೆಂಡತಿ ಮುಂತಾದ ಸಂಬಂಧವೆಲ್ಲ ಕೇವಲ ಭ್ರಮರೂಪವಾದುದೆಂದೂ ಬೋಧಿಸಿದನು. ಅನಂತರ ನಂದಗೋಪನ ಇಷ್ಟದಂತೆ ಆಹ್ನಿಕ ವಿಧಿಯನ್ನು ಬೋಧಿಸಲುಪಕ್ರಮಿಸಿದನು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀ ಕೃಷ್ಣಜನ್ಮಖಂಡೇ

|| ಪಂಚಸಪ್ತತಿತಮೋಽಧ್ಯಾಯಃ ||

|| ಶ್ರೀ ಭಗವಾನುವಾಚ ||

ಶೃಣುನಂದ ಪ್ರವಕ್ಷ್ಯಾಮಿ ಜ್ಞಾನಂ ಚ ಪರಮಾದ್ಭುತಂ |
ಸುಗೋಪನೀಯಂ ವೇದೇಷು ಪುರಾಣೇಷು ಚ ದುರ್ಲಭಂ || ೧ ||

ನ ವಿಶ್ವಾಸೋ ಹಿ ನಾರೀಷು ಸಂತತಂ ಕುಲಟಾಸು ಚ |
ಮೋಕ್ಷಮಾರ್ಗಾರ್ಗಲಾಸ್ವೇವ ಭ್ರಮಮಾಯಾಸು ಭೂಮಿಷು || ೨ ||

ಹರಿಭಕ್ತೇರಸಾಧ್ವೀನಾಂ ವಿರುದ್ಧಾಸು ಯುತಾಸು ಚ |
ಬೀಜರೂಪಾಸು ನಾಶಾನಾಂ ಪ್ರಮದಾಸು ವ್ರಜೇಶ್ವರ || ೩ ||

ಎಪ್ಪತ್ತೈದನೆಯ ಅಧ್ಯಾಯವು

೧. ಶ್ರೀಭಗವಾನ್ :—ಎಲೈ ನಂದಗೋಪನೇ, ವೇದಪುರಾಣಗಳಲ್ಲಿ ದುರ್ಲಭವೂ ಅತ್ಯದ್ಭುತವೂ ಆದ ದಿವ್ಯಜ್ಞಾನವನ್ನು ಬೋಧಿಸುವೆನು. ಸಾವಧಾನದಿಂದ ಅವಧರಿಸು.

೨. ಕುಲಟೆಯರಾದ ಸ್ತ್ರೀಯರಲ್ಲಿ ಎಂದೆಂದಿಗೂ ವಿಶ್ವಾಸವನ್ನಿಡಬಾರದು. ಭೂಮಿಯಲ್ಲಿ ಭ್ರಾಂತಿಮಾಯಾ ಸ್ವರೂಪಿಣಿಯರಾದ ಸ್ತ್ರೀಯರು ಪುರುಷರ ಮೋಕ್ಷಮಾರ್ಗಕ್ಕೆ ಅಗಣಿಯಂತಿದ್ದಾರೆ.

೩. ಪತಿವ್ರತೆಯರಲ್ಲದ ಅಸಾಧ್ವಿಯರು ಹರಿಭಕ್ತಿಗೆ ಪ್ರತಿಕೂಲೆಯರಾಗಿರುವರು. ಎಲೈ ವ್ರಜೇಶ್ವರನೇ, ಎಲ್ಲರ ನಾಶಕ್ಕೂ ಬೀಜರೂಪಿಣಿಯಾದ ದುಷ್ಟಸ್ತ್ರೀಯಲ್ಲಿ ವಿಶ್ವಾಸವನ್ನಿಡಬಾರದು.

ನಿತ್ಯಂ ಚ ಪ್ರಾತರುತ್ಥಾಯ ರಾತ್ರಿವಾಸೋ ವಿಹಾಯ ಚ ।
ಅಭೀಷ್ಟದೇವಂ ಹೃತ್ಪದ್ಮೇ ಬ್ರಹ್ಮರಂಧ್ರೇ ಗುರುಂ ಪರಂ ॥ ೪ ॥

ವಿಚಿಂತ್ಯ ಮನಸಾ ಪ್ರಾತಃಕೃತ್ಯಂ ಕೃತ್ವಾ ಸುನಿಶ್ಚಿತಂ ।
ಸ್ನಾನಂ ಕರೋತಿ ಸುಪ್ರಾಜ್ಞೋ ನಿರ್ಮಲೇಷು ಜಲೇಷು ಚ ॥ ೫ ॥

ನ ಸಂಕಲ್ಪಂ ಚ ಕುರುತೇ ಭಕ್ತಃ ಕರ್ಮನಿಕೃಂತನಃ ।
ಸ್ನಾತ್ವಾ ಹರಿಂ ಸ್ಮರೇತ್ಸಂಧ್ಯಾಂ ಕೃತ್ವಾ ಯಾತಿ ಗೃಹಂ ಪ್ರತಿ ॥ ೬ ॥

ಪ್ರಕ್ಷಾಲ್ಯ ಪಾದೌ ಪ್ರವಿಶೇನ್ನಿಧಾಯ ಧೌತವಾಸಸೀ ।
ಪೂಜಯೇತ್ಪರಮಾತ್ಮಾನಂ ಮಾಮೇವ ಮುಕ್ತಿಕಾರಣಂ ॥ ೭ ॥

ಶಾಲಗ್ರಾಮೇ ಮಣೌ ಯಂತ್ರೇ ಪ್ರತಿಮಾಯಾಂ ಜಲೇಽಪಿ ಚ ।
ತಥಾ ಚ ವಿಪ್ರೇ ಗವಿ ಚ ಗುರುಷ್ವೇವ ವಿಶೇಷತಃ ॥ ೮ ॥

೪-೫. ಪ್ರತಿದಿನವೂ ಉಷಃಕಾಲದಲ್ಲೆದ್ದು ರಾತ್ರಿಯುಟ್ಟಿದ್ದ ಬಟ್ಟೆಯನ್ನು ಬಿಚ್ಚಿ ಹೃತ್ಪದ್ಮದಲ್ಲಿಯೂ ಬ್ರಹ್ಮರಂಧ್ರದಲ್ಲಿಯೂ ಅಭೀಷ್ಟದೇವತೆಯನ್ನೂ ಪರಮ ಗುರುವನ್ನೂ ಧ್ಯಾನಮಾಡಿ ಅನಂತರ ವಿಧಿವಿಹಿತವಾದ ಪ್ರಾತಃಕೃತ್ಯವನ್ನು ಮಾಡಿ ಪ್ರಾಜ್ಞನಾದವನು. ನಿರ್ಮಲವಾದ ಬಹಿರ್ಜಲದಲ್ಲಿ ಅವಗಾಹನಸ್ನಾನ ಮಾಡಬೇಕು.

೬. ಕರ್ಮಬಂಧನದಿಂದ ಮುಕ್ತನಾಗಲು ಬಯಸುವ ಭಕ್ತನು ಫಲಾಕಾಂಕ್ಷೆಯುಳ್ಳ ಯಾವ ಸಂಕಲ್ಪವನ್ನೂ ಮಾಡದೆ ಹರಿಸ್ಮರಣ ಪೂರ್ವಕವಾಗಿ ಸ್ನಾನಮಾಡಿ ಸಂಧ್ಯಾಕರ್ಮವನ್ನಾಚರಿಸಿ ಮನೆಗೆ ಬರಬೇಕು.

೭. ಅನಂತರ ಕಾಲುಗಳನ್ನು ತೊಳೆದುಕೊಂಡು ಮನೆಯೊಳಕ್ಕೆ ಪ್ರವೇಶಿಸಿ ಶುಭ್ರವಾದ ಎರಡು ಬಟ್ಟೆಗಳನ್ನುಟ್ಟು ಮುಕ್ತಿಕಾರಣನೂ ಪರಮಾತ್ಮಸ್ವರೂಪನೂ ಆದ ನನ್ನನ್ನೇ ಭಕ್ತಿಯಿಂದ ಪೂಜಿಸಬೇಕು.

೮. ಸಾಲಿಗ್ರಾಮದಲ್ಲಾಗಲೀ, ಮಣಿಯಲ್ಲಾಗಲೀ, ಯಂತ್ರದಲ್ಲಾಗಲೀ ಪ್ರತಿಮೆಯಲ್ಲಾಗಲೀ, ನೀರಿನಲ್ಲಾಗಲೀ, ಹಾಗೇಯೇ ಬ್ರಾಹ್ಮಣ ಮತ್ತು ಗೋವುಗಳಲ್ಲಾಗಲೀ ವಿಶೇಷತಃ ಗುರುವಿನಲ್ಲಾಗಲೀ. ನನ್ನನ್ನು ಆವಾಹನೆಮಾಡಿ ಪೂಜಿಸಬೇಕು.

ಘಟೇऽಷ್ಟದಲಪದ್ಮೇ ಚ ಪಾತ್ರೇ ಚಂದನನಿರ್ಮಿತೇ ।
ಆವಾಹನಂ ಚ ಸರ್ವತ್ರ ಶಾಲಗ್ರಾಮೇ ಜಲೇನ ಚ ॥ ೯ ॥

ಮಂತ್ರಾನುರೂಪಧ್ಯಾನೇನ ಧ್ಯಾತ್ವಾ ಮಾಂ ಪೂಜಯೇದ್ವ್ರತೀ ।
ಷೋಡಶೋಪಚಾರದ್ರವ್ಯಾಣಿ ದದ್ಯಾನ್ಮೂಲೇನ ಭಕ್ತಿತಃ ॥ ೧೦ ॥

ಶ್ರೀದಾಮಾನಂ ಸುದಾಮಾನಂ ವಸುದಾಮಾನಮೇವ ಚ
ವೀರಭಾನುಂ ಶೂರಭಾನುಂ ಗೋಪಾನ್ಪಂಚ ಪ್ರಪೂಜಯೇತ್ ॥ ೧೧ ॥

ಸುನಂದನಂದಕುಮುದಂ ಪಾರ್ಷದಂ ಮೇ ಸುದರ್ಶನಂ ।
ಲಕ್ಷ್ಮೀಂ ಸರಸ್ವತೀಂ ದುರ್ಗಾಂ ರಾಧಾಂ ಗಂಗಾಂ ವಸುಂಧರಾಂ ॥ ೧೨ ॥

ಗುರುಂ ಚ ತುಲಸೀಂ ಶಂಭುಂ ಕಾರ್ತಿಕೇಯಂ ವಿನಾಯಕಂ ।
ನವಗ್ರಹಾಂಶ್ಚ ದಿಕ್ಪಾಲಾನ್ಪರಿತಃ ಪೂಜಯೇತ್ ಸುಧೀಃ ॥ ೧೩ ॥

---

೯. ಅದೇರೀತಿ ಕಲಶದಲ್ಲಾಗಲೀ, ಅಷ್ಟದಳಪದ್ಮದಲ್ಲಾಗಲೀ. ಚಂದನ ನಿರ್ಮಿತವಾದ ಪಾತ್ರೆಯಲ್ಲಾಗಲೀ, ನನ್ನನ್ನು ಆವಾಹನೆ ಮಾಡಬಹುದು. ಆದರೆ ಸಾಲಿಗ್ರಾಮದಲ್ಲಿ ಆವಾಹನೆ ಮಾಡುವುದು ಶ್ರೇಷ್ಠವಾದುದು.

೧೦. ವ್ರತಪರನಾದವನು ಮಂತ್ರಕ್ಕೆ ಅನುಗುಣವಾದ ಧ್ಯಾನಸ್ತೋತ್ರದಿಂದ ಧ್ಯಾನಮಾಡಿ ಭಕ್ತಿಯಿಂದ ಮಂತ್ರಪೂರ್ವಕವಾಗಿ ಷೋಡಶೋಪಚಾರ ದ್ರವ್ಯಗಳನ್ನು ನನಗೆ ಸಮರ್ಪಣೆ ಮಾಡಬೇಕು.

೧೧. ಅನಂತರ ಶ್ರೀದಾಮ, ಸುದಾಮ, ವಸುದಾಮ, ವೀರಭಾನು ಮತ್ತು ಶೂರಭಾನು ಎಂಬ ಐವರು ಗೋಪರನ್ನು ಪೂಜಿಸಬೇಕು.

೧೨. ಅದೇ ರೀತಿಯಲ್ಲಿ ನನ್ನ ಪಾರ್ಷದರಾದ ಸುನಂದ ನಂದಕುಮುದರನ್ನೂ ಸುದರ್ಶನಚಕ್ರವನ್ನೂ, ಲಕ್ಷ್ಮೀ, ಸರಸ್ವತೀ, ದುರ್ಗಾ, ರಾಧಾ, ಗಂಗಾ ಮತ್ತು ವಸುಂಧರೆಯನ್ನೂ ಪೂಜಿಸಬೇಕು.

೧೩. ಗುರುವನ್ನೂ ತುಲಸಿಯನ್ನೂ ಶಂಭುವನ್ನೂ ಕಾರ್ತಿಕೇಯನನ್ನೂ ವಿನಾಯಕನನ್ನೂ ಸುತ್ತಲೂ ನವಗ್ರಹ ಮತ್ತು ದಿಕ್ಪಾಲಕರನ್ನೂ ಬುದ್ಧಿವಂತನಾದವನು ಪೂಜಿಸಬೇಕು

ದೇವಷಟ್ಕಂ ಚ ಸಂಪೂಜ್ಯ ಸರ್ವಾದೌ ವಿಘ್ನವಿಘ್ನತಃ ।
ಗಣೇಶಂ ಚ ದಿನೇಶಂ ಚ ವಹ್ನಿಂ ವಿಷ್ಣುಂ ಶಿವಂ ಶಿವಾಂ ॥ ೧೪ ॥

ಶ್ರುತೌ ವಿನಿರ್ಮಿತಾನ್ದೇವಾನ್ಮೋಕ್ಷದಾನ್ಕರ್ಮಕೃಂತನಾನ್ ।
ಗಣೇಶಂ ವಿಘ್ನನಾಶಾಯ ಸೂರ್ಯಂ ವ್ಯಾಧಿವಿನಾಶಿನೇ ॥ ೧೫ ॥

ವಹ್ನಿಂ ಪ್ರಾಪ್ತಿನಿಮಿತ್ತೇನ ಶಾಂತೌ ಶುದ್ಧೌ ಭವೇದ್ಧ್ರುವಂ ।
ವಿಷ್ಣುಂ ಮೋಕ್ಷನಿಮಿತ್ತೇನ ಜ್ಞಾನದಾನಾಯ ಶಂಕರಂ ॥ ೧೬ ॥

ಬುದ್ಧಿಮುಕ್ತಿನಿಮಿತ್ತೇನ ಪಾರ್ವತೀಂ ಪೂಜಯೇತ್ಸುಧೀಃ ।
ಪುಷ್ಪಾಂಜಲಿತ್ರಯಂ ದತ್ವಾ ಸ್ವಸ್ತೋತ್ರಂ ಕವಚಂ ಪಠೇತ್ ॥ ೧೭ ॥

ಗುರುಂ ಪ್ರಣಮ್ಯ ಸಂಪೂಜ್ಯ ತತ್ಪಶ್ಚಾತ್ಪ್ರಣಮೇತ್ಸುರಂ ।
ಕೃತ್ವಾऽಹ್ನಿಕಂ ಚ ಸಂಪೂಜ್ಯ ಯಥಾಸುಖಮುದೀರಿತಂ ॥ ೧೮ ॥

---

೧೪. ಎಲ್ಲಕ್ಕಿಂತ ಮೊದಲು ವಿಘ್ನ ಪರಿಹಾರಕ್ಕಾಗಿ ಗಣೇಶ, ದಿನೇಶ, ವಹ್ನಿ, ವಿಷ್ಣು, ಶಿವ ಮತ್ತು ಪಾರ್ವತಿ ಎಂಬ ಆರು ದೇವತೆಗಳನ್ನು ಭಕ್ತಿಪೂರ್ವಕವಾಗಿ ಪೂಜಿಸಬೇಕು.

೧೫. ಕರ್ಮಬಂಧನವನ್ನು ಪರಿಹರಿಸಿ ಮೋಕ್ಷದಾಯಕರಾದ ಶ್ರುತಿಪ್ರತಿಪಾದಕರಾದ ಈ ಆರುದೇವತೆಗಳನ್ನು ಪೂಜಿಸಬೇಕು. ವಿಘ್ನನಾಶಕ್ಕಾಗಿ ಗಣಪತಿಯನ್ನೂ ವ್ಯಾಧಿವಿನಾಶಕ್ಕಾಗಿ ಸೂರ್ಯನನ್ನೂ ಪೂಜಿಸಬೇಕು.

೧೬. ಮನಃಶಾಂತಿ ಮತ್ತು ಆತ್ಮಶುದ್ಧಿಗಾಗಿ ಅಗ್ನಿಯನ್ನೂ, ಮೋಕ್ಷಪ್ರಾಪ್ತಿಗಾಗಿ ವಿಷ್ಣುವನ್ನೂ, ಜ್ಞಾನದಾನಮಾಡಲೆಂದು ಶಂಕರನನ್ನೂ ಭಕ್ತಿಯಿಂದ ಪೂಜಿಸಬೇಕು.

೧೭. ಬುದ್ಧಿ ಮತ್ತು ಮುಕ್ತಿಯ ಸಲುವಾಗಿ ಬುದ್ಧಿವಂತನಾದವನು ಪಾರ್ವತಿಯನ್ನು ಪೂಜಿಸಬೇಕು. ಮೂರುಸಾರಿ ಪುಷ್ಪಾಂಜಲಿಯನ್ನು ಸಮರ್ಪಿಸಿ ವಿಷ್ಣುಸ್ತೋತ್ರವನ್ನೂ ಮತ್ತು ಕವಚವನ್ನೂ ಪಠನೆಮಾಡಬೇಕು.

೧೮. ಮೊದಲು ಗುರುವಿಗೆ ಪೂಜಿಸಿ ನಮಸ್ಕರಿಸಿದನಂತರ ದೇವತೆಗಳಿಗೆ ನಮಸ್ಕರಿಸಬೇಕು ಆಹ್ನಿಕ ಮತ್ತು ಪೂಜೆಗಳನ್ನು ತನ್ನ ಶಕ್ತ್ಯನುಗುಣವಾಗಿ ಮಾಡಬೇಕು.

ಸಮಾಚರೇತ್ಸ್ವಕರ್ಮೈತದ್ವೇದೋಕ್ತಂ ಸ್ವಾತ್ಮಶುದ್ಧಯೇ ।
ವಿಷ್ಠಾಂ ನ ಪಶ್ಯೇತ್ಪ್ರಾಜ್ಞಶ್ಚ ವ್ಯಾಧಿಬೀಜಸ್ವರೂಪಿಣೀಂ ॥ ೧೯ ॥

ಮೂತ್ರಂ ಚ ವ್ಯಾಧಿಬೀಜಂ ಚ ವರಂ ನರಕಕಾರಣಂ ।
ಲಿಂಗಯೋನಿಂ ಪಾಪದುಃಖವ್ಯಾಧಿದಾರಿದ್ರ್ಯದಾಯಿನೀಂ ॥ ೨೦ ॥

ಉರೋಮುಖಂ ಸ್ತನಂ ಸ್ತ್ರೀಣಾಂ ಕಟಾಕ್ಷಂ ಹಾಸ್ಯಮೇವ ಚ ।
ವಿನಾಶಬೀಜಂ ರೂಪಂ ಚ ವಿಪದಾಂ ಕಾರಣಂ ಸದಾ ॥ ೨೧ ॥

ದಿವಾಭೋಗಂ ಚ ಸ್ವಸ್ತ್ರೀಣಾಂ ಸ್ವರ್ಲೋಪಂ ಪರಿವರ್ಜಯೇತ್ ।
ರೋಗಾಣಾಂ ಕಾರಣಂ ಚೈವ ಚಕ್ಷುಷೋಃ ಕರ್ಣಯೋಸ್ತಥಾ ॥ ೨೨ ॥

ಏಕತಾರಂ ಚ ಗಗನಂ ನ ಪಶ್ಯೇತ್ತು ರುಜಾಂ ಭಯಾತ್ ।
ದೇವಾನ್ದೃಷ್ಟ್ವಾ ಹರಿಂ ಸ್ಮೃತ್ವಾ ಸಪ್ತಧಾ ನಾರದಂ ಭಜೇತ್ ॥ ೨೩ ॥

---

೧೯. ವೇದೋಕ್ತವಾದ ಸ್ವಕರ್ಮವನ್ನು ಆತ್ಮಶುದ್ಧಿಗಾಗಿ ಮನುಜನು ಆಚರಿಸಬೇಕು. ಪ್ರಾಜ್ಞನಾದವನು ರೋಗಕ್ಕೆ ಮೂಲರೂಪವಾದ ವಿಷ್ಠೆ (ಮಲ) ಯನ್ನು ನೋಡಬಾರದು.

೨೦. ವ್ಯಾಧಿಬೀಜವೂ ನರಕಕ್ಕೆ ಕಾರಣವೂ ಆದ ಮೂತ್ರವನ್ನೂ ಪಾಪ ದುಃಖ ವ್ಯಾಧಿ ಮತ್ತು ದಾರಿದ್ರ್ಯವನ್ನು ಉಂಟುಮಾಡುವ ಲಿಂಗ ಮತ್ತು ಯೋನಿಪ್ರದೇಶವನ್ನೂ ಪ್ರಾಜ್ಞನು ನೋಡಬಾರದು.

೨೧. ಸ್ತ್ರೀಯರ ಎದೆ, ಮುಖ, ಸ್ತನ, ಕಟಾಕ್ಷ ಮತ್ತು ನಗುವು ಪುರುಷರ ವಿನಾಶ ಮತ್ತು ವಿಪತ್ತಿಗೆ ಕಾರಣವಾದುದರಿಂದ ಬುದ್ಧಿವಂತನು ಅವುಗಳನ್ನು ದೃಷ್ಟಿಸಿ ನೋಡಬಾರದು.

೨೨. ತನ್ನ ಸ್ತ್ರೀಯಲ್ಲಿ ಹಗಲಿನ ಹೊತ್ತು ಭೋಗಪಡುವುದು ಸ್ವರ್ಗನಾಶಕವಾದುದರಿಂದ ಅದನ್ನು ಬಿಟ್ಟುಬಿಡಬೇಕು. ಆ ರೀತಿಯಾದ ದಿವಾಸಂಭೋಗವು ರೋಗಕ್ಕೆ ಕಾರಣವಾಗುವುದಲ್ಲದೆ ಕಣ್ಣು ಮತ್ತು ಕಿವಿಗಳ ಶಕ್ತಿಯನ್ನು ಕಮ್ಮಿ ಮಾಡುವುದು.

೨೩. ರೋಗದ ಭಯವುಳ್ಳವನು ಒಂದೇನಕ್ಷತ್ರವಿರುವ ಆಕಾಶವನ್ನು ನೋಡಬಾರದು. ಒಂದು ವೇಳೆ ನೋಡಿದರೆ ದೇವತೆಗಳನ್ನೂ ಶ್ರೀಹರಿಯನ್ನೂ ಸ್ಮರಿಸಿಕೊಂಡು ನಾರದರನ್ನು ಏಳು ಸಾರಿ ಜಪಿಸಬೇಕು.

ಅಸ್ತಕಾಲೇ ರವಿಂ ಚಂದ್ರಂ ನ ಪಶ್ಯೇದ್ವ್ಯಾಧಿಕಾರಣಂ ।
ಖಂಡಂ ಸಮುದಿತಂ ಚಂದ್ರಂ ನಪಶ್ಯೇದ್ವ್ಯಾಧಿಕಾರಣಂ ॥ ೨೪ ॥

ಜಲಸ್ಥಂ ಚ ರವಿಂ ಚಂದ್ರಂ ದೃಷ್ಟ್ವಾ ಶೋಕಂ ಲಭೇನ್ನರಃ ।
ಬಂಧುವಿಚ್ಛೇದಹೇತುಂ ಚ ನ ಪಶ್ಯೇತ್ಪರಮೈಥುನಂ ॥ ೨೫ ॥

ಏಕತ್ರ ಶಯನಸ್ಥಾನಂ ಭೋಜನಂ ಚ ಗತಂ ತಥಾ ।
ನ ಕುರ್ಯಾತ್ಪಾಪಿನಾ ಸಾರ್ಧಂ ಸರ್ವಂ ನಾಶಸ್ಯ ಲಕ್ಷಣಂ ॥ ೨೬ ॥

ಆಲಾಪಾದ್ಗಾತ್ರಸಂಸ್ಪರ್ಶಾಚ್ಛಯನಾಶ್ರಯಭೋಜನಾತ್ ।
ಸಂಚರಂತಿ ಧ್ರುವಂ ಪಾಪಾಸ್ತೈಲಬಿಂದುರಿವಾಂಭಸಾ ॥ ೨೭ ॥

ಹಿಂಸ್ರಜಂತುಸಮೀಪಂ ಚ ನ ಗಚ್ಛೇದ್ದುಃಖಕಾರಣಂ ।
ಜಲೇನ ಸಾರ್ಧ್ಧಂ ಮಿಲನಂ ನ ಕುರ್ಯಾಚ್ಛೋಕಕಾರಣಂ ॥ ೨೮ ॥

---

೨೪. ಸೂರ್ಯ ಮತ್ತು ಚಂದ್ರರನ್ನು ಅಸ್ತವಾಗುವ ಸಮಯದಲ್ಲಿ ನೋಡಿದರೆ ರೋಗ ಪ್ರಾಪ್ತಿಯಾಗುವುದು. ಉದಯಿಸುತ್ತಿರುವ ಖಂಡಚಂದ್ರನನ್ನು ನೋಡಿದರೂ ವ್ಯಾಧಿಯುಂಟಾಗುತ್ತದೆ.

೨೫. ನೀರಿನಲ್ಲಿ ಪ್ರತಿಬಿಂಬಿಸಿರುವ ಚಂದ್ರಸೂರ್ಯರನ್ನು ನೋಡಿದರೆ ಮನುಜನಿಗೆ ಶೋಕಪ್ರಾಪ್ತಿಯಾಗುವುದು. ಪರಪುರುಷ ಮತ್ತು ಸ್ತ್ರೀಯರ ಸಂಭೋಗವನ್ನು ನೋಡುವುದರಿಂದ ಬಂಧುವಿರಹವುಂಟಾಗುವುದು.

೨೬. ಉತ್ತಮನಾದವನು ಪಾಪಿಯೊಡನೆ ಒಂದೆಡೆ ಕುಳಿತುಕೊಳ್ಳುವುದು ಊಟಮಾಡುವುದು ಸಂಚರಿಸುವುದು ಇವೆಲ್ಲವೂ ನಾಶಕ್ಕೆ ಕಾರಣವಾಗುವುದರಿಂದ ಹಾಗೆ ಮಾಡಬಾರದು.

೨೭. ಪಾಪಿಯೊಡನೆ ಮಾತನಾಡುವುದರಿಂದಲೂ, ಅವನನ್ನು ಸ್ಪರ್ಶ ಮಾಡುವುದರಿಂದಲೂ ಅವನೊಡನೆ ಊಟಮಾಡುವುದು ಮತ್ತು ಮಲಗುವುದರಿಂದಲೂ ಎಣ್ಣೆಯು ನೀರಿನಲ್ಲಿ ಹರಡಿಕೊಳ್ಳುವಂತೆ ಪಾಪವು ಸತ್ಪುರುಷನಲ್ಲಿ ವ್ಯಾಪಿಸುವುದು.

೨೮. ಕ್ರೂರಜಂತುಗಳ ಸಮೀಪಕ್ಕೆ ಹೋಗುವುದು ದುಃಖಕ್ಕೆ ಕಾರಣವಾಗುವುದು. ದುಷ್ಟನೊಡನೆ ಬೆರೆಯುವುದರಿಂದ ಮನುಜನು ಶೋಕಭಾಜನನಾಗುವನು.

ಬ್ರಾಹ್ಮಣಾನಾಂ ಗವಾಂ ಚೈವ ವೈಷ್ಣವಾನಾಂ ವಿಶೇಷತಃ ।
ನ ಕುರ್ಯಾದ್ಧಿಂಸನಂ ಹಾನಿಂ ಸರ್ವನಾಶಸ್ಯ ಕಾರಣಂ ॥ ೨೯ ॥

ದೇವದೇವಲವಿಪ್ರಾಣಾಂ ವೈಷ್ಣವಾನಾಂ ತಥೈವ ಚ ।
ವಿತ್ತಂ ಧನಂ ಚ ನ ಹರೇತ್ಸರ್ವನಾಶಸ್ಯ ಕಾರಣಂ ॥ ೩೦ ॥

ಸ್ವದತ್ತಂ ಪರದತ್ತಂ ವಾ ಬ್ರಹ್ಮವಿತ್ತಂ ಹರೇತ್ತು ಯಃ ।
ಷಷ್ಟಿವರ್ಷಸಹಸ್ರಾಣಿ ವಿಷ್ಠಾಯಾಂ ಜಾಯತೇ ಕೃಮಿಃ ॥ ೩೧ ॥

ಗೃಧ್ರಃ ಕೋಟಿಸಹಸ್ರಾಣಿ ಶತಜನ್ಮಾನಿ ಸೂಕರಃ ।
ಶ್ವಾಪದಃ ಶತಜನ್ಮಾನಿ ಗಂಡಕಃ ಸಪ್ತಜನ್ಮನಿ ॥ ೩೨ ॥

ಘೋಟಕಃ ಸಪ್ತಜನ್ಮಾನಿ ಕುಂಭೀರಃ ಸಪ್ತಜನ್ಮಸು ।
ಪುಂಶ್ಚಲೀನಾಂ ಯೋನಿಕೀಟಂ ಶತಜನ್ಮಸು ನಿಶ್ಚಿತಂ ॥ ೩೩ ॥

---

೨೯. ಬ್ರಾಹ್ಮಣರನ್ನು ಮತ್ತು ಗೋವುಗಳನ್ನು ಹಿಂಸಿಸುವವನು ವಿಶೇಷತಃ ವಿಷ್ಣುಭಕ್ತರನ್ನು ಹಿಂಸಿಸುವವನು ಸರ್ವನಾಶವನ್ನು ಹೊಂದುವುದರಿಂದ ಎಂದೆಂದಿಗೂ ಅವರನ್ನು ಹಿಂಸಿಸಬಾರದು.

೩೦. ದೇವರ, ದೇವಪೂಜಕರ, ವಿಪ್ರರ ಮತ್ತು ವೈಷ್ಣವರ ಆಸ್ತಿಯನ್ನು ಅಪಹರಿಸಬಾರದು. ಹಾಗೆ ಅಪಹರಿಸುವುದರಿಂದ ತನಗೆ ಸರ್ವನಾಶವುಂಟಾಗುವುದು

೩೧. ತಾನು ಕೊಟ್ಟದ್ದೇ ಆಗಲೀ ಅಥವಾ ಇತರರು ಕೊಟ್ಟದ್ದೇ ಆಗಲಿ ಬ್ರಾಹ್ಮಣರ ಧನವನ್ನು ಯಾರು ಅಪಹರಿಸುವರೋ ಅವರು ಅರವತ್ತುಸಾವಿರ ವರ್ಷಗಳ ಕಾಲ ಮಲಕ್ರಿಮಿಯಾಗಿ ಜನಿಸಿ ನರಳುವರು.

೩೨. ಅಲ್ಲದೆ ಕೋಟಿಸಹಸ್ರಜನ್ಮಗಳಲ್ಲಿ ಹದ್ದಾಗಿಯೂ, ನೂರುಜನ್ಮಗಳಲ್ಲಿ ಹಂದಿಯಾಗಿಯೂ, ನೂರುಜನ್ಮಗಳಲ್ಲಿ ದುಷ್ಟಪ್ರಾಣಿಯಾಗಿಯೂ ಏಳುಜನ್ಮಗಳಲ್ಲಿ (ಗಂಡಕ) ಖಡ್ಗಮೃಗವಾಗಿಯೂ ಜನಿಸುವರು.

೩೩. ಏಳು ಜನ್ಮಗಳಲ್ಲಿ ಕುದುರೆಯಾಗಿಯೂ, ಐದು ಜನ್ಮಗಳಲ್ಲಿ ಸರ್ಪವಾಗಿಯೂ ನೂರು ಜನ್ಮಗಳಲ್ಲಿ ವೇಶ್ಯಾಸ್ತ್ರೀಯರ ಯೋನಿಕೀಟವಾಗಿಯೂ ಜನಿಸಿ ನರಳುವರು.

ಬ್ರಹ್ಮಕೀಟಂ ಚ ತೇಷಾಂ ಚ ಶತಜನ್ಮಸು ನಾರದ ।
ಗೋಪಿಕಾ ಸಪ್ತಜನ್ಮಾನಿ ಗರ್ದಭಃ ಸಪ್ತಜನ್ಮಸು ॥ ೩೪ ॥

ಸಪ್ತಜನ್ಮಾನಿ ಮಾರ್ಜಾರೋ ನಕುಲಸ್ತ್ರಿಷು ಜನ್ಮಸು ।
ಉಚ್ಚೈಃಶ್ರವಾ ಜನ್ಮಶತಂ ಖರಶ್ಚಾಪಿ ತಥೈವ ಚ ॥ ೩೫ ॥

ಕ್ರೂರಸರ್ಪಶ್ಚ ಶಾರ್ದೂಲೋ ಮಹಿಷಃ ಸಪ್ತಜನ್ಮಸು ।
ಭೇಕಶ್ಚ ಶತಜನ್ಮಾನಿ ಚ್ಛಾಗಲಃ ಸಪ್ತಜನ್ಮಸು ॥ ೩೬ ॥

ಭಲ್ಲೂಕಃ ಶತಜನ್ಮಾನಿ ಸೃಗಾಲೋ ಲಕ್ಷಜನ್ಮಸು ।
ತತೋ ಜಲೌಕಾ ಭವತಿ ಬ್ರಹ್ಮಸ್ವಹರಣಾದ್ಧ್ರುವಂ ॥ ೩೭ ॥

ಕುಂಭೀಪಾಕೇ ಚ ಪಚ್ಯಂತೇ ಪಾಪಿನೋ ಬ್ರಹ್ಮಣಃ ಶತಂ ।
ದಕ್ಷಿಣಾ ವಿಪ್ರಮುದ್ದಿಶ್ಯ ತತ್ಕಾಲಂ ಚೇನ್ನ ದೀಯತೇ ॥ ೩೮ ॥

---

೩೪. ಎಲೈ ನಾರದನೇ ಬ್ರಹ್ಮಸ್ವತ್ತನ್ನು ಅಪಹರಿಸುವವರು ನೂರು ಜನ್ಮಗಳಲ್ಲಿ ಬ್ರಹ್ಮಕೀಟವಾಗಿಯೂ, ಏಳು ಜನ್ಮಗಳಲ್ಲಿ ಇಂದ್ರಗೋಪವೆಂಬ ಹುಳುವಾಗಿಯೂ, ಏಳು ಜನ್ಮಗಳಲ್ಲಿ ಕತ್ತೆಯಾಗಿಯೂ ಹುಟ್ಟುವರು.

೩೫. ಬೆಕ್ಕಾಗಿ ಏಳು ಜನ್ಮಗಳನ್ನೂ, ಮುಂಗುಸಿಯಾಗಿ ಮೂರು ಜನ್ಮಗಳನ್ನೂ, ಕುದುರೆಯಾಗಿ ನೂರು ಜನ್ಮಗಳನ್ನೂ, ಕತ್ತೆಯಾಗಿ ನೂರು ಜನ್ಮಗಳನ್ನೂ ಬ್ರಹ್ಮಸ್ವಾಪಹಾರಿಗಳು ಕಳೆಯಬೇಕಾಗುವುದು.

೩೬. ಏಳೇಳು ಜನ್ಮಗಳಲ್ಲಿ ಕ್ರೂರವಾದ ಸರ್ಪ ಶಾರ್ದೂಲ ಮತ್ತು ಮಹಿಷವಾಗಿಯೂ ನೂರು ಜನ್ಮಗಳಲ್ಲಿ ಕಪ್ಪೆಯಾಗಿಯೂ ಏಳು ಜನ್ಮಗಳಲ್ಲಿ ಹೋತವಾಗಿಯೂ ಆ ಪಾಪಿಯು ಜನಿಸುವನು.

೩೭ ಬ್ರಾಹ್ಮಣರ ಸ್ವತ್ತನ್ನು ಅಪಹಾರ ಮಾಡುವುದರಿಂದ ನೂರು ಜನ್ಮಗಳನ್ನು ಕರಡಿಯಾಗಿಯೂ, ಲಕ್ಷಜನ್ಮಗಳನ್ನು ನರಿಯಾಗಿಯೂ. ಅನಂತರ ಜಿಗಣೆಯಾಗಿಯೂ ಕಳೆಯಬೇಕಾಗುವುದು.

೩೮. ಬ್ರಾಹ್ಮಣರಿಗೆ ಉದ್ದಿಷ್ಟವಾದ ದಕ್ಷಿಣೆಯನ್ನು ಆ ಕೂಡಲೇ ಕೊಡದಿದ್ದರೆ ಆ ಪಾಪಿಗಳು ನೂರು ಬ್ರಹ್ಮರ ಜೀವಿತಕಾಲಪರ್ಯಂತ ಕುಂಭೀಪಾಕವೆಂಬ ನರ ದಲ್ಲಿ ನರಳುವರು.

ಏಕರಾತ್ರೇ ವ್ಯತೀತೇ ತು ತದ್ದಾನಂ ದ್ವಿಗುಣಂ ಭವೇತ್ ।
ಮಾಸೇ ಶತಗುಣಂ ಪ್ರೋಕ್ತಂ ದ್ವಿಮಾಸೇ ತು ಸಹಸ್ರಕಂ　|| ೩೯ ||

ಸಂವತ್ಸರೇ ವ್ಯತೀತೇ ತು ಸ ದಾತಾ ನರಕಂ ವ್ರಜೇತ್ ।
ದಾತ್ರಾ ನ ದೀಯತೇ ಮೂರ್ಖೋ ಗೃಹೀತಾ ಚ ನ ಯಾಚತೇ　|| ೪೦ ||

ಉಭೌ ತೌ ನರಕಂ ಯಾತೋ ದಾತಾ ವ್ಯಾಧಿಯುಕ್ತೋ ಭವೇತ್ ।
ವಿಪ್ರಾಣಾಂ ಹಿಂಸನಂ ಕೃತ್ವಾ ವಂಶಹಾನಿಂ ವ್ರಜೇದ್ ಧ್ರುವಂ　|| ೪೧ ||

ಧನಂ ಲಕ್ಷ್ಮೀಂ ಪರಿತ್ಯಜ್ಯ ಭಿಕ್ಷುಕಶ್ಚ ಭವೇದ್ವ್ರಜನ್ ।
ದೇವಂ ಚ ಬ್ರಾಹ್ಮಣಂ ದೃಷ್ಟ್ವಾ ನ ನಮೇದ್ಯೋ ಲಭೇಚ್ಛುಚಂ　|| ೪೨ ||

ನ ಕುರ್ಯಾದ್ಗುರುಭಕ್ತಿಂ ಯೋ ಲಭತೇ ರೌರವಂ ಶುಚಂ ।
ಯಾ ಸ್ತ್ರೀ ಮೂಢಾ ದುರಾಚಾರಾ ಸ್ವಪತಿಂ ಹರಿರೂಪಿಣಂ　|| ೪೩ ||

---

೩೯. ಒಂದ ರಾತ್ರಿ ಕಳೆದರೆ ಆ ದಾನವನ್ನು ಒಂದಕ್ಕೆರಡರಷ್ಟು ಕೊಡಬೇಕಾಗುವುದು. ಒಂದು ತಿಂಗಳು ಕಳೆದರೆ ನೂರರಷ್ಟನ್ನೂ ಎರಡುತಿಂಗಳು ಕಳೆದರೆ ಸಾವಿರದಷ್ಟನ್ನೂ ಕೊಡಬೇಕಾಗುವುದು.

೪೦–೪೧. ಹೀಗೆಯೇ ಒಂದು ವರ್ಷವು ಕಳೆದರೆ ದಾನ ಕೊಡಬೇಕೆಂದಿದ್ದವನು ನರಕಕ್ಕೆ ಹೋಗುವನು. ದಾನಿಯಾದವನು ಕೊಡದಿದ್ದರೂ ಅಥವಾ ತೆಗೆದುಕೊಳ್ಳುವವನು ಬೇಡಿ ತೆಗೆದುಕೊಳ್ಳದಿದ್ದರೂ ಅವರಿಬ್ಬರೂ ನರಕಕ್ಕೆ ಹೋಗುವರಲ್ಲದೆ ದಾನಿಯಾದವನು ರೋಗಗ್ರಸ್ತನಾಗುವನು. ವಿಪ್ರರನ್ನು ಹಿಂಸೆಮಾಡುವುದರಿಂದ ನಿಶ್ಚಯವಾಗಿಯೂ ವಂಶಹಾನಿಯಾಗುವುದು.

೪೨. ದೇವರನ್ನೂ ಬ್ರಾಹ್ಮಣರನ್ನೂ ನೋಡಿ ನಮಸ್ಕರಿಸದಿರುವವನು ಧನ ಲಕ್ಷ್ಮಿಯಿಂದ ದೂರನಾಗಿ ದರಿದ್ರನಾಗುವುದಲ್ಲದೆ ಭಿಕ್ಷುಕನೂ ದುಃಖಭಾಗಿಯೂ ಆಗುವುದರಲ್ಲಿ ಸಂಶಯವಿಲ್ಲ.

೪೩–೪೪. ಯಾವನು ಗುರುವಿನಲ್ಲಿ ಭಕ್ತಿಯನ್ನಿಡುವುದಿಲ್ಲವೋ ಅವನು ರೌರವ ನರಕದಲ್ಲಿ ದುಃಖಭಾಗಿಯಾಗುವನು. ಮೂಢಳೂ ದುರಾಚಾರಳೂ ಆದ ಯಾವ ಹೆಂಗಸು ಶ್ರೀಹರಿಗೆ ಸಮಾನನಾದ ತನ್ನ ಪತಿಯನ್ನು ದೂಷಿಸುವಳೋ ಅವಳು

ನ ಪಶ್ಯೇತ್ತರ್ಜನಂ ಕೃತ್ವಾ ಕುಂಭೀಪಾಕೇ ವ್ರಜೇದ್ಧ್ರುವಂ ।
ವಾಕ್ತರ್ಜನಾದ್ಭವೇತ್ಕಾಕೋ ಹಿಂಸನಾತ್ಸೂಕರೋ ಭವೇತ್ ॥ ೪೫ ॥

ಸರ್ಪೋ ಭವತಿ ಕೋಪೇನ ದರ್ಪೇಣ ಗರ್ದಭೋ ಭವೇತ್ ।
ಕುಕ್ಕುರೀ ಚ ಕುವಾಕ್ಯೇನಾಪ್ಯಂಧಶ್ಚ ವಿಷದರ್ಶನಾತ್ ॥ ೪೬ ॥

ಪತಿವ್ರತಾ ಚ ವೈಕುಂಠಂ ಪತ್ಯಾ ಸಹ ವ್ರಜೇದ್ಧ್ರುವಂ ।
ಶಿವಂ ದುರ್ಗಾಂ ಗಣಪತಿಂ ಸೂರ್ಯಂ ವಿಪ್ರಂ ಚ ವೈಷ್ಣವಂ ॥ ೪೭ ॥

ವಿಷ್ಣುಂ ನಿಂದತಿ ಯೋ ಮೂಢಃ ಸ ಮಹಾರೌರವಂ ವ್ರಜೇತ್ ।
ಪಿತರಂ ಮಾತರಂ ಪುತ್ರಂ ಸತೀಂ ಭಾರ್ಯಾಂ ಗುರುಂ ತಥಾ ॥ ೪೮ ॥

ಅನಾಥಾಂ ಭಗಿನೀಂ ಕನ್ಯಾಂ ವಿನಿಂದ್ಯ ನರಕಂ ವ್ರಜೇತ್ ।
ವಿಪ್ರಭಕ್ತಿವಿಹೀನಾಶ್ಚ ಕ್ಷತ್ರವಿಟ್ಶೂದ್ರಯೋನಿಜಾಃ ॥ ೪೯ ॥

ಕುಂಭೀಪಾಕವೆಂಬ ನರಕಕ್ಕೆ ಹೋಗುವುದರಲ್ಲಿ ಸಂಶಯವಿಲ್ಲ. ಕೇವಲ ಮಾತಿನಿಂದ ಪತಿಯನ್ನು ಬೆದರಿಸಿದ್ದರೆ ಕಾಗೆಯೂ ಹಿಂಸೆಗೊಳಿಸುವುದರಿಂದ ಹಂದಿಯೂ ಆಗುವಳು.

೪೬. ಪತಿಯಮೇಲೆ ಕೋಪಮಾಡಿಕೊಂಡವಳು ಹಾವಾಗಿಯೂ, ದರ್ಪತೋರಿದವಳು ಕತ್ತೆಯಾಗಿಯೂ, ಕೆಟ್ಟಮಾತನಾಡಿದವಳು ಹೆಣ್ಣುನಾಯಿಯಾಗಿಯೂ ವಿಷಪ್ರಾಶನಮಾಡಿಸಿದವಳು ಅಂಧಳಾಗಿಯೂ ಹುಟ್ಟುವಳು.

೪೭-೪೯. ಪತಿವ್ರತೆಯಾದ ಹೆಂಗಸು ಪತಿಯೊಡನೆ ವೈಕುಂಠಕ್ಕೆ ಹೋಗುವುದರಲ್ಲಿ ಸಂಶಯವಿಲ್ಲ. ಶಿವನನ್ನೂ, ದುರ್ಗಾದೇವಿಯನ್ನೂ, ಗಣಪತಿಯನ್ನೂ, ಸೂರ್ಯನನ್ನೂ, ವಿಪ್ರನನ್ನೂ, ವೈಷ್ಣವನನ್ನೂ, ವಿಷ್ಣುವನ್ನೂ ಸಹ ನಿಂದಿಸುವ ಮೂರ್ಖನು ಮಹಾರೌರವ ನರಕಕ್ಕೆ ಹೋಗುವನು. ತಂದೆ, ತಾಯಿ, ಮಗ, ಪತಿವ್ರತೆಯಾದ ಹೆಂಡತಿ ಮತ್ತು ಗುರುವನ್ನೂ ಅನಾಥಳಾದ ತಂಗಿಯನ್ನೂ ಕನ್ಯೆಯನ್ನೂ ದೂಷಿಸುವವನು ನರಕಕ್ಕೆ ಹೋಗುವನು. ಕ್ಷತ್ರಿಯ, ವೈಶ್ಯ ಮತ್ತು ಶೂದ್ರಯೋನಿಯಲ್ಲಿ ಜನಿಸಿ ಬ್ರಾಹ್ಮಣರಲ್ಲಿ ಭಕ್ತಿಯಿಲ್ಲದವರೂ ಸಹ ನರಕದ ಯಾತನೆಗೆ ಒಳಗಾಗುವರು.

ಹರಿಭಕ್ತಿವಿಹೀನಾಶ್ಚ ಪಚ್ಯಂತೇ ನರಕೇ ಧ್ರುವಂ ।
ಪತಿಭಕ್ತಿವಿಹೀನಾಶ್ಚ ಯುವತ್ಯಶ್ಚ ನರಾಧಮಾಃ ॥ ೪೯ ॥

ಶಾಲಗ್ರಾಮಜಲಂ ವಿಷ್ಣು ಪ್ರಸಾದಂ ಯೇ ಚ ಭುಂಜತೇ ।
ತೀರ್ಥಂ ಪುನಂತಿ ಯೇ ವಿಪ್ರಾಃ ಶತಂ ಪುಂಸಾಂ ವಸುಂಧರಾಂ ॥ ೫೦ ॥

ಪಿತ್ರ್ಯಾನ್ದೇವಾನ್ ಸಮಭ್ಯರ್ಚ್ಯ ಖಾದನ್ಮಾಂಸಂ ದ್ವಿಜಃ ಶುಚಿಃ ।
ಯೋ ಭಕ್ಷತಿ ವೃಥಾ ಮಾಂಸಂ ಸ ಮಹಾರೌರವಂ ವ್ರಜೇತ್ ॥ ೫೧ ॥

ಮತ್ಸ್ಯಾಂಶ್ಚ ಕಾಮತೋ ದಗ್ಧ್ವಾ ಚೋಪವಾಸಂ ವಸೇದ್ದ್ವಿಜಃ ।
ಪ್ರಾಯಶ್ಚಿತ್ತಂ ತತಃ ಕುರ್ಯಾದ್ವ್ರತಂ ಚಾಂದ್ರಾಯಣಂ ಚರೇತ್ ॥ ೫೨ ॥

ಸೋಽಶುಚಿಃ ಸತತಂ ನಂದ ಹಂ ಪುಣ್ಯಂ ಪುರಾಕೃತಂ ।
ಕಾಮತೋ ಬ್ರಾಹ್ಮಣೋ ಮತ್ಸ್ಯಂ ಭುಂಕ್ತೇ ಯೋ ಜ್ಞಾನದುರ್ಬಲಃ ॥

---

೪೯. ಹರಿಭಕ್ತಿವಿಹೀನರಾದ ಮನುಜರೂ ಪತಿಭಕ್ತಿರಹಿತರಾದ ಸ್ತ್ರೀಯರೂ ಸಹ ನರಕ ಭಾಗಿಗಳಾಗುವುದರಲ್ಲಿ ಸಂಶಯವಿಲ್ಲ.

೫೦. ಸಾಲಿಗ್ರಾಮಕ್ಕೆ ಅಭಿಷೇಕಮಾಡಿದ ತೀರ್ಥವನ್ನೂ, ವಿಷ್ಣುವಿಗೆ ನಿವೇದಿಸಿದ ಪ್ರಸಾದವನ್ನೂ ಪ್ರತಿದಿನವೂ ಸೇವಿಸುವ ಬ್ರಾಹ್ಮಣರು ಪುಣ್ಯತೀರ್ಥಗಳನ್ನೂ ಸಹ ಪವಿತ್ರಗೊಳಿಸುವರಲ್ಲದೆ ತಮ್ಮ ವಂಶದ ನೂರಾರು ಪುರುಷರನ್ನೂ ಭೂಮಂಡಲವನ್ನೂ ಸಹ ಪಾವನಗೊಳಿಸುವರು.

೫೧. ಪಿತೃಗಳನ್ನೂ ದೇವತೆಗಳನ್ನೂ ಪೂಜಿಸಿ ಅವರಿಗೆ ಅರ್ಪಿಸಿದ ಮಾಂಸವನ್ನು ಬ್ರಾಹ್ಮಣರು ತಿಂದರೆ ಅವನು ಅಶುಚಿಯಾಗುವುದಿಲ್ಲ. ಹಾಗಲ್ಲದೆ ಯಾವನು ಕೇವಲ ಮಾಂಸವನ್ನು ತಿನ್ನುವನೋ ಅವನು ಮಹಾ ರೌರವನರಕಕ್ಕೆ ಹೋಗುವನು.

೫೨. ಇಚ್ಛಾಪೂರ್ವಕವಾಗಿ ಮೀನುಗಳನ್ನು ಸುಡುವ ವಿಪ್ರನು ಉಪವಾಸವನ್ನಾಚರಿಸಿ ಅನಂತರ ಪ್ರಾಯಶ್ಚಿತ್ತಮಾಡಿಕೊಂಡು ಚಾಂದ್ರಾಯಣ ವ್ರತವನ್ನಾಚರಿಸಬೇಕು.

೫೩. ಯಾವ ಬ್ರಾಹ್ಮಣನು ತಿಳಿವಳಿಕೆ ಸಾಲದೆ ಇಚ್ಛಾಪೂರ್ವಕವಾಗಿ ಮೀನನ್ನು ತಿನ್ನುವನೋ ಅವನು ಅಶುಚಿಯಾಗುವುದಲ್ಲದೆ ಜನ್ಮಾಂತರದ ಪುಣ್ಯಗಳನ್ನೆಲ್ಲ ಕಳೆದುಕೊಳ್ಳುವನು.

ವಿಷ್ಣೋರುಚ್ಛಿಷ್ಟಭೋಜೀ ಯೋ ಮತ್ಸ್ಯಂ ಮಾಂಸಂ ನ ಖಾದತಿ ।
ಪದೇಪದೇಽಶ್ವಮೇಧಸ್ಯ ಲಭತೇ ನಿಶ್ಚಿತಂ ಫಲಂ ॥ ೫೪ ॥

ಏಕಾದಶೀಂ ಯೇ ಕುರ್ವಂತಿ ಕೃಷ್ಣಜನ್ಮಾಷ್ಟಮೀವ್ರತಂ ।
ಶತಜನ್ಮಕೃತಾತ್ಪಾಪಾನ್ಮುಚ್ಯಂತೇ ನಾತ್ರ ಸಂಶಯಃ ॥ ೫೫ ॥

ಯದ್ಬಾಲ್ಯೇ ಯಚ್ಚ ಕೌಮಾರೇ ವಾರ್ಧಕೇ ಯಚ್ಚ ಯೌವನೇ ।
ಭಸ್ಮೀಭೂತಾನಿ ಕುರ್ವಂತಿ ಪಾತಕಾನಿ ಕೃತಾನಿ ಚ ॥ ೫೬ ॥

ಏಕಾದಶೀದಿನೇ ಭುಂಕ್ತೇ ಕೃಷ್ಣಜನ್ಮಾಷ್ಟಮೀವ್ರತೇ ।
ತ್ರೈಲೋಕ್ಯಜನಿತಂ ಪಾಪಂ ಸೋಽಪಿ ಭುಂಕ್ತೇ ನ ಸಂಶಯಃ ॥ ೫೭ ॥

ಆತುರೇ ನಿಯಮೋ ನ ಸ್ಯಾದಪಿ ವೃದ್ಧೇ ಚ ಬಾಲಕೇ ।
ಭಕ್ತಸ್ಯ ದ್ವಿಗುಣಂ ದತ್ವಾ ಬ್ರಾಹ್ಮಣಾಯ ಶುಚಿರ್ಭವೇತ್ ॥ ೫೮ ॥

---

೫೪. ಯಾವನು ವಿಷ್ಣುವಿನ ಉಚ್ಛಿಷ್ಟವನ್ನು ಮಾತ್ರ ತಿಂದುಕೊಂಡು ಮೀನನ್ನೂ ಮಾಂಸವನ್ನೂ ತಿನ್ನುವುದಿಲ್ಲವೋ ಅವನು ಅನೇಕಸಾರಿ ಅಶ್ವಮೇಧ ಯಾಗ ಮಾಡಿದ ಫಲವನ್ನು ನಿಶ್ಚಯವಾಗಿಯೂ ಹೊಂದುವನು.

೫೫. ಯಾರು ಏಕಾದಶೀ ವ್ರತವನ್ನೂ, ಕೃಷ್ಣಜನ್ಮಾಷ್ಟಮೀ ವ್ರತವನ್ನೂ ಆಚರಿಸುವರೋ ಅವರು ನೂರುಜನ್ಮಗಳಲ್ಲಿ ಮಾಡಿದ ಪಾಪಗಳಿಂದ ಮುಕ್ತರಾಗುವುದರಲ್ಲಿ ಸಂಶಯವಿಲ್ಲ.

೫೬. ಬಾಲ್ಯದಲ್ಲಾಗಲೀ, ಕೌಮಾರವಯಸ್ಸಿನಲ್ಲಾಗಲೀ, ಯೌವನದಲ್ಲಾಗಲೀ, ವಾರ್ಧಕ್ಯದಲ್ಲಾಗಲೀ, ಮಾಡಿದ ಮಹಾ ಪಾಪಗಳೆಲ್ಲವೂ ಮೇಲೆ ಹೇಳಿದ ವ್ರತಾಚರಣೆಯಿಂದ ಭಸ್ಮವಾಗುವುವು.

೫೭. ಏಕಾದಶೀ ದಿವಸದಲ್ಲಿಯೂ ಕೃಷ್ಣಜನ್ಮಾಷ್ಟಮೀ ದಿವಸದಲ್ಲಿಯೂ ಊಟಮಾಡುವವನು ಮೂರು ಲೋಕದ ಜೀವಿಗಳ ಪಾಪವನ್ನೂ ಅನುಭವಿಸುವುದರಲ್ಲಿ ಸಂಶಯವಿಲ್ಲ.

೫೮. ಬಾಲರಿಗೂ, ವೃದ್ಧರಿಗೂ ರೋಗಿಗಳಿಗೂ ಈ ವ್ರತದ ನಿಯಮವಿಲ್ಲ. ಬ್ರಾಹ್ಮಣನೂ ವಿಷ್ಣುಭಕ್ತನೂ ಆದವನಿಗೆ ದ್ವಿಗುಣವಸ್ತುವನ್ನು ದಾನಮಾಡಿ ಅವರುಗಳು ಆ ಪಾಪದಿಂದ ಮುಕ್ತರಾಗಿ ಶುಚಿಯಾಗುವರು.

ಯೋ ಭುಂಕ್ತೇ ಶಿವರಾತ್ರೌ ಚ ಶ್ರೀರಾಮನವಮೀದಿನೇ ।
ಉಪವಾಸೇ ಸಮರ್ಥಶ್ಚ ಸ ಮಹಾರೌರವಂ ವ್ರಜೇತ್ ॥ ೫೯ ॥

ಕುಹೂಪೂರ್ಣೇಂದುಸಂಕ್ರಾಂತಿ ಚತುರ್ದಶ್ಯಷ್ಟಮೀಷು ಚ ।
ನರಶ್ಚಾಂಡಾಲಯೋನಿಃ ಸ್ಯಾತ್ ಸ್ತ್ರೀತೈಲಮಾಂಸಸೇವನಾತ್ ॥ ೬೦ ॥

ಮತ್ಸ್ಯಂ ಮಾಂಸಂ ಮಸೂರಂ ಚ ಕಾಂಸ್ಯಪಾತ್ರೇ ಚ ಭೋಜನಂ ।
ಆರ್ದ್ರಕಂ ರಕ್ತಶಾಕಂ ಚ ರವೌ ಚ ಪರಿವರ್ಜಯೇತ್ ॥ ೬೧ ॥

ಅನ್ಯಥಾ ನರಕಂ ಯಾತಿ ಕುಂಭೀಪಾಕಂ ನ ಸಂಶಯಃ ।
ರಜಸ್ವಲಾನ್ನಂ ವೇಶ್ಯಾನ್ನಂ ಮದಿರಾನ್ನಂ ವ್ರಜೇಶ್ವರ ॥ ೬೨ ॥

ಯೋ ಭುಂಕ್ತೇ ಬ್ರಾಹ್ಮಣೋ ದೈವಾದ್ವಿಡ್ಭೋಜೀ ಸ ಭವೇದ್ಧ್ರುವಂ ।
ಯದಹ್ನಾ ಕುರುತೇ ಕರ್ಮ ನ ತಸ್ಯ ಫಲಭಾಗ್ಭವೇತ್ ॥ ೬೩ ॥

---

೫೯. ಉಪವಾಸಮಾಡುವುದರಲ್ಲಿ ಸಮರ್ಥನಾಗಿದ್ದರೂ ಸಹ ಶಿವರಾತ್ರಿ ಮತ್ತು ಶ್ರೀರಾಮನವಮಿಯ ದಿವಸ ಊಟಮಾಡುವವನು ಮಹಾರೌರವನರಕಕ್ಕೆ ಹೋಗುವನು.

೬೦. ಅಮಾವಾಸ್ಯೆ, ಪೂರ್ಣಿಮೆ, ಸಂಕ್ರಾಂತಿ, ಚತುರ್ದಶೀ ಮತ್ತು ಅಷ್ಟಮೀ ದಿವಸಗಳಲ್ಲಿ ಮನುಷ್ಯನು ಸ್ತ್ರೀ, ತೈಲ ಮತ್ತು ಮಾಂಸವನ್ನು ಸೇವಿಸುವುದರಿಂದ ಚಂಡಾಲಯೋನಿಯಲ್ಲಿ ಜನಿಸುವನು.

೬೧ ಭಾನುವಾರದ ದಿವಸ ಮೀನನ್ನೂ, ಮಾಂಸವನ್ನೂ, ಕಾಡುಕಡಲೆಯನ್ನೂ, ಹಸೀಶುಂಠಿಯನ್ನೂ, ಕೆಂಪುತರಕಾರಿಯನ್ನೂ ತಿನ್ನಬಾರದು. ಅಲ್ಲದೆ ಕಂಚಿನ ಪಾತ್ರೆಯಲ್ಲಿ ಭೋಜನಮಾಡಬಾರದು.

೬೨-೬೩. ಹಾಗೆ ಮಾಡಿದರೆ ಕುಂಭೀಪಾಕವೆಂಬ ನರಕಕ್ಕೆ ಹೋಗುವುದರಲ್ಲಿ ಸಂಶಯವಿಲ್ಲ. ಎಲೈ ನಂದಗೋಪನೇ ಯಾವ ಬ್ರಾಹ್ಮಣನು ರಜಸ್ವಲೆಯಾದ ಹೆಂಗಸು ಮುಟ್ಟಿದ ಅನ್ನವನ್ನೂ, ಮದ್ಯಮಿಶ್ರವಾದ ಅನ್ನವನ್ನೂ ತಿನ್ನುವನೋ ಅವನು ಅಮೇಧ್ಯವನ್ನು ತಿಂದಂತಾಗುವುದು ಅಂಥವನು ಆಯಾಯ ದಿನಗಳಲ್ಲಿ ಮಾಡಿದ ಸತ್ಕರ್ಮಗಳ ಫಲವನ್ನು ಹೊಂದಲಾರನು. ಇದು ನಿಶ್ಚಯ.

ಸ ಭವೇದಶುಚಿರ್ನಿತ್ಯಂ ಭಸ್ಮಾಂತಂ ತಸ್ಯ ಸೂತಕಂ ।
ನಾರೀ ವೇಶ್ಯಾ ಪ್ರತಿಜ್ಞೇಯಾ ಚತುಷ್ಪುರುಷಗಾಮಿನೀ ॥ ೬೪ ॥

ಪಾಕೇ ಚ ಪಿತೃದೇವಾನಾಮಧಿಕಾರೋ ನ ತದ್ಭವೇತ್ ।
ಯದ್ಗ್ರಾಮಯಾಜಿನಾಮನ್ನಂ ಶೂದ್ರಶ್ರಾದ್ಧಾನ್ನಭೋಜನಂ ॥ ೬೫ ॥

ಭುಕ್ತ್ವಾ ಚ ನರಕಂ ಯಾತಿ ಯಾವಚ್ಚಂದ್ರದಿವಾಕರೌ ।
ಶೂದ್ರಾಣಾಂ ಶ್ರಾದ್ಧದಿವಸೇ ತದನ್ನಂ ಭುಂಜತೇ ದ್ವಿಜಾಃ ॥ ೬೬ ॥

ಕುಂಭೀಪಾಕೇ ಚ ಪಚ್ಯಂತೇ ಯಾವದ್ವೈ ಬ್ರಹ್ಮಣಃ ಶತಂ ।
ಯಃ ಶೂದ್ರೇಣಾಭ್ಯನುಜ್ಞಾತೋ ಭುಂಕ್ತೇ ಶ್ರಾದ್ಧದಿನೇಽನ್ಯತಃ ॥ ೬೭ ॥

ಸುರಾಪೀತೀ ಸ ವಿಜ್ಞೇಯಃ ಸರ್ವಧರ್ಮಬಹಿಷ್ಕೃತಃ ।
ಅಸಿಜೀವೀ ಮಷೀಜೀವೀ ದೇವಲೋ ವೃಷವಾಹಕಃ ॥ ೬೮ ॥

ಶೂದ್ರಾಣಾಂ ಶವದಾಹೀ ಚ ಯೋ ಹಿ ಶೂದ್ರಾಪತಿರ್ದ್ವಿಜಃ ।
ಸ ಶೂದ್ರವದ್ಬಹಿಷ್ಕಾರ್ಯಸ್ತದನ್ನಂ ವಿಟ್ಸಮಂ ಸತಾಂ ॥ ೬೯ ॥

---

೬೪. ಅವನು ಅಶುಚಿಯಾಗುವುದಲ್ಲದೆ ಅವನ ಬಂಧುಗಳು ಅವನ ಶರೀರವು ಭಸ್ಮವಾಗುವವರೆಗೆ ಮಾತ್ರ ಸೂತಕವನ್ನನುಭವಿಸುವರು ನಾಲ್ವರು ಪುರುಷರನ್ನು ಸಮಾಗಮಮಾಡುವ ಹೆಂಗಸು ವೇಶ್ಯೆ ಎನಿಸಿಕೊಳ್ಳುವಳು.

೬೫–೬೯. ಅಂಥ ವೇಶ್ಯಾಸ್ತ್ರೀಗೆ ಪಿತೃದೇವತೆಗಳ ಶ್ರಾದ್ಧಾನ್ನ ಮಾಡುವ ಯೋಗ್ಯತೆ ಇರುವುದಿಲ್ಲ. ಗ್ರಾಮಯಾಜಿಗಳ ಅನ್ನವನ್ನೂ ಶೂದ್ರರ ಶ್ರಾದ್ಧಾನ್ನವನ್ನೂ ತಿನ್ನುವ ಬ್ರಾಹ್ಮಣನು ಚಂದ್ರಸೂರ್ಯರಿರುವವರೆಗೆ ನರಕಯಾತನೆಯನ್ನು ಅನುಭವಿಸುವನು. ಶ್ರಾದ್ಧದಿವಸದಲ್ಲಿ ಶೂದ್ರರ ಅನ್ನವನ್ನು ತಿನ್ನುವ ಬ್ರಾಹ್ಮಣನು ನೂರು ಬ್ರಹ್ಮರ ಜೀವಿತಕಾಲಪರ್ಯಂತ ಕುಂಭೀಪಾಕವೆಂಬ ನರಕದಲ್ಲಿ ನರಳುವನು. ಯಾವ ಬ್ರಾಹ್ಮಣನು ಶೂದ್ರನ ಅನುಜ್ಞೆಯನ್ನು ಪಡೆದು ಶ್ರಾದ್ಧದ ದಿವಸ ಬೇರೊಬ್ಬರ ಅನ್ನವನ್ನು ತಿನ್ನುವನೋ ಅವನು ಮದ್ಯಪಾಯಿಗೆ ಸಮನೆನಿಸಿ ಸರ್ವಧರ್ಮಗಳಿಂದಲೂ ಬಹಿಷ್ಕೃತನೆನಿಸುವನು. ಕತ್ತಿಯಿಂದ ಜೀವಿಸುವವನೂ, ಬರವಣಿಗೆಯಿಂದ ಜೀವಿಸುವವನೂ, ದೇವಗೃಹದ ಪೂಜಾರಿಯೂ, ವೃಷವಾಹಕನೂ ಶೂದ್ರರ ಶವದಾಹಕನೂ, ಶೂದ್ರಾಪತಿಯೂ ಆದ ಬ್ರಾಹ್ಮಣನು ಶೂದ್ರನಂತೆಯೇ ಬಹಿಷ್ಕೃತನಾಗುವನು. ಸತ್ಪುರುಷರಿಗೆ ಅವನ ಅನ್ನವು ಮಲಕ್ಕೆ ಸದೃಶವೆನಿಸುವುದು.

ನೋಪತಿಷ್ಠತಿ ಯಃ ಪೂರ್ವಾಂ ನೋಪಾಸ್ತೇ ಯಸ್ತು ಪಶ್ಚಿಮಾಂ ।
ಸ ಶೂದ್ರವದ್ಬಹಿಷ್ಕಾರ್ಯಃ ಸರ್ವಸ್ಮಾದ್ದ್ವಿಜಕರ್ಮಣಃ ॥ ೭೦ ॥

ಸಂಧ್ಯಾಹೀನೋಽಶುಚಿರ್ನಿತ್ಯಮನರ್ಹಃ ಸರ್ವಕರ್ಮಸು ।
ಯದಹ್ನಾ ಕುರುತೇ ಕರ್ಮ ನ ತಸ್ಯ ಫಲಭಾಗ್ಭವೇತ್ ॥ ೭೧ ॥

ವಾಮಮಂತ್ರೋಪಾಸಕಶ್ಚ ಬ್ರಾಹ್ಮಣೋ ನರಕಂ ವ್ರಜೇತ್ ।
ನದೀಗರ್ಭೇ ಚ ಗರ್ತೇ ಚ ವೃಕ್ಷಮೂಲೇ ಜಲಾಂತಿಕೇ ॥ ೭೨ ॥

ದೇವಾಂತಿಕೇ ಸಸ್ಯಭೂಮೌ ಪುರೀಷಂ ನೋತ್ಸೃಜೇದ್ ಬುಧಃ ।
ವಲ್ಮೀಕಮೂಷಕೋತ್ಖಾತಾಂ ಮೃದಮಂತರ್ಜಲಾಂ ತಥಾ ॥ ೭೩ ॥

ಶೌಚಾವಶಿಷ್ಟಾಂ ಗೇಹಾಶ್ಚ ನಾದದ್ಯಾಲ್ಲೇಪಸಂಭವಾಂ ।
ಅಂತಃ ಪ್ರಾಣಿಪಿಪೀಲ್ಯಾಂ ಚ ಹಲೋತ್ಖಾತಾಂ ವ್ರಜೇಶ್ವರ ॥ ೭೪ ॥

---

೭೦. ಯಾವನು ಪ್ರಾತಃ ಸಂಧ್ಯೆ ಮತ್ತು ಸಾಯಂಸಂಧ್ಯೆಯನ್ನು ಆಚರಿಸುವುದಿಲ್ಲವೋ ಅವನು ಶೂದ್ರನಂತೆ ಪರಿಗಣಿಸಲ್ಪಟ್ಟು ಬ್ರಾಹ್ಮಣರ ನಿತ್ಯಕರ್ಮಗಳಿಂದ ಬಹಿಸ್ಕೃತನಾಗುವನು.

೭೧. ಸಂಧ್ಯಾವಂದನೆಮಾಡದವನು ಸರ್ವದಾ ಅಶುಚಿಯಾಗಿರುವುದಲ್ಲದೆ ಸಕಲ ಸತ್ಕರ್ಮಗಳಿಗೂ ಅನರ್ಹನೆನಿಸುವನು ಅಂಥವನು ಆಯಾಯ ದಿವಸ ಮಾಡಿದ ಸತ್ಕರ್ಮಗಳ ಫಲವನ್ನು ಹೊಂದುವುದಿಲ್ಲ.

೭೨–೭೩. ನೀಚದೇವತೆಗಳ ಮಂತ್ರವನ್ನು ಉಪಾಸನೆ ಮಾಡುವ ಬ್ರಾಹ್ಮಣನು ನರಕಗಾಮಿಯಾಗುವನು. ಪಂಡಿತನಾದವನು ನದಿಯ ಮಧ್ಯದಲ್ಲೂ, ಹಳ್ಳದಲ್ಲೂ. ಮರದ ಬುಡದಲ್ಲೂ. ನೀರಿನ ಸಮೀಪದಲ್ಲೂ, ದೇವಗೃಹದ ಸಮೀಪದಲ್ಲೂ, ಸಸ್ಯವಿರುವ ಭೂಮಿಯಲ್ಲೂ ಮಲವಿಸರ್ಜನೆ ಮಾಡಬಾರದು. ಹುತ್ತದ ಮತ್ತು ಇಲಿಯಬಿಲದ ಮಣ್ಣನ್ನೂ ನೀರಿನೊಳಗಿರುವ ಮಣ್ಣನ್ನೂ ಶೌಚಕ್ಕಾಗಿ ತೆಗೆದುಕೊಳ್ಳಬಾರದು.

೭೪. ಅದೇರೀತಿ ಶೌಚಮಾಡಿಕೊಂಡು ಉಳಿದಿರುವ ಮಣ್ಣನ್ನೂ, ಲೇಪ ಮಾಡಿಕೊಂಡು ಉಳಿದಿರುವ ಮಣ್ಣನ್ನೂ ಒಳಗೆ ಸಣ್ಣಕ್ರಿಮಿ ಮತ್ತು ಇರುವೆಗಳಿರುವ ಸ್ಥಳದ ಮಣ್ಣನ್ನೂ, ನೇಗಿಲಿನಿಂದ ಉತ್ತಿರುವ ಮಣ್ಣನ್ನೂ ಶೌಚಕ್ಕಾಗಿ ಉಪಯೋಗಿಸ ಕೂಡದು.

ಆಲವಾಲೋತ್ಥಿತಾಂ ಚೈವ ಸಸ್ಯಕ್ಷೇತ್ರೋತ್ಥಿತಾಂ ತಥಾ ।
ವೃಕ್ಷಮೂಲೋತ್ಥಿತಾಂ ನಂದ ನದೀಗರ್ಭೋತ್ಥಿತಾಂ ತಥಾ ॥ ೭೫ ॥

ಪರಿತ್ಯಜೇನ್ಮೃದಸ್ತ್ವೇತಾಃ ಸಕಲಾ ಶೌಚಸಾಧನೇ ।
ಕೂಷ್ಮಾಂಡಘಾತಿಕಾ ಯಾ ಸ್ತ್ರೀ ದೀಪನಿರ್ವಾಣಕಃ ಪುಮಾನ್ ॥ ೭೬ ॥

ಸಪ್ತಜನ್ಮ ಭವೇದ್ರೋಗೀ ದರಿದ್ರೋ ಜನ್ಮಜನ್ಮನಿ ।
ಪ್ರದೀಪಂ ಶಿವಲಿಂಗಂ ಚ ಶಾಲಗ್ರಾಮಂ ಮಣಿಂ ತಥಾ ॥ ೭೭ ॥

ಪ್ರತಿಮಾಂ ಯಜ್ಞಸೂತ್ರಂ ಚ ಸುವರ್ಣಂ ಶಂಖಮೇವ ಚ ।
ಹೀರಕಂ ಚ ತಥಾ ಮುಕ್ತಾಂ ಗೋಮೂತ್ರಂ ಗೋಮಯಂ ಘೃತಂ ॥ ೭೮ ॥

ಶಾಲಗ್ರಾಮಶಿಲಾತೋಯಂ ಭೂಮೌ ತ್ಯಕ್ತ್ವಾ ವ್ರಜೇದಧಃ ।
ದರಿದ್ರಃ ಕೃಪಣಃ ಕುಷ್ಠೀ ವಂಶಹೀನೋऽಪ್ಯಭಾರ್ಯಕಃ ॥ ೭೯ ॥

೭೫–೭೭. ಗಿಡಗಳ ಪಾತಿಯಲ್ಲಿರುವ ಮಣ್ಣನ್ನೂ, ಸಸ್ಯಕ್ಷೇತ್ರದಲ್ಲಿರುವ ಮಣ್ಣನ್ನೂ, ವೃಕ್ಷಮೂಲದಲ್ಲಿಯೂ ನದೀಗರ್ಭದಲ್ಲಿಯೂ ಇರುವ ಮಣ್ಣನ್ನೂ ಶೌಚ ಕರ್ಮಕ್ಕಾಗಿ ತೆಗೆದುಕೊಳ್ಳಬಾರದು. ಯಾವ ಹೆಂಗಸು ಬೂದುಗುಂಬಳಕಾಯನ್ನು ಒಡೆಯುವಳೋ ಮತ್ತು ಯಾವ ಪುರುಷನು ದೀಪವನ್ನು ಬಾಯಿಯಿಂದ ಊದಿ ಆರಿಸುವನೋ ಅವರಿಬ್ಬರೂ ಏಳುಜನ್ಮಗಳವರೆಗೆ ರೋಗಿಗಳಾಗುವರಲ್ಲದೆ ದರಿದ್ರ ರಾಗಿರುವರು. ದೀಪವನ್ನೂ, ಶಿವಲಿಂಗವನ್ನೂ, ಸಾಲಿಗ್ರಾಮ ಶಿಲೆಯನ್ನೂ, ಸ್ಫಟಿಕಮಣಿಯನ್ನೂ ಸಹ ನೆಲದಮೇಲಿಡಬಾರದು.

೭೮–೭೯. ಅದೇ ರೀತಿ ದೇವತಾಪ್ರತಿಮೆಯನ್ನೂ, ಯಜ್ಞೋಪವೀತ ವನ್ನೂ, ಚಿನ್ನ, ಶಂಖ, ವಜ್ರ ಮುತ್ತು ಮುಂತಾದವುಗಳನ್ನೂ ಗೋಮೂತ್ರ (ಗಂಜಲ), ಗೋಮಯ (ಸಗಣಿ), ತುಪ್ಪ, ಸಾಲಿಗ್ರಾಮಶಿಲೆಯ ತೀರ್ಥ ಇವು ಗಳನ್ನು ನೆಲದಮೇಲೆ ಇಡುವವರು ಪಾತಾಳಲೋಕಕ್ಕೆ ಹೋಗುವರು. ಅಲ್ಲದೆ ಅಂಥವರು ದರಿದ್ರರೂ, ಕೃಪಣರೂ, ಕುಷ್ಠರೋಗಿಗಳೂ, ವಂಶಹೀನರೂ, ಪತ್ನೀ ವಿಹೀನರೂ ಆಗುವುದರಲ್ಲಿ ಸಂಶಯವಿಲ್ಲ.

ಭೂಮಿಹೀನಃ ಪ್ರಜಾಹೀನೋ ಬಂಧುಹೀನಶ್ಚ ಕುತ್ಸಿತಃ ।
ಅಂಧಃ ಪಂಗುರ್ವಾ ಖರ್ವಶ್ಚ ಖಂಜಶ್ಚೈವಾಂಗಹೀನಕಃ ॥ ೮೦ ॥

ಭವೇತ್ಕ್ರಮೇಣ ಪಾಪೀ ಸಹ್ಯೇತಾನ್ಭುವೌ ತ್ಯಜೇತ್ತು ಯಃ ।
ದಿವಸೇ ಸಂಧ್ಯಯೋರ್ನಿದ್ರಾಂ ಸ್ತ್ರೀಸಂಭೋಗಂ ಕರೋತಿ ಯಃ ॥ ೮೧ ॥

ಸಪ್ತಜನ್ಮ ಭವೇದ್ರೋಗೀ ದರಿದ್ರಃ ಸಪ್ತಜನ್ಮಸು ।
ಉದಿತೇ ಜಗತೀನಾಥೇ ಯಃ ಕುರ್ಯಾದ್ದಂತಧಾವನಂ ॥ ೮೨ ॥

ಸ ಪಾಪಿಷ್ಠಃ ಕಥಂ ಬ್ರೂತೇ ಪೂಜಯಾಮಿ ಜನಾರ್ದನಂ ।
ಮೃದ್ಭಸ್ಮಗೋಶಕೃತ್ಪಿಂಡೈಸ್ತಥಾ ವಾಲುಕಯಾಪಿ ವಾ ॥ ೮೩ ॥

ಕೃತ್ವಾ ಲಿಂಗಂ ಸಕೃತ್ಪೂಜ್ಯ ವಸೇತ್ಕಲ್ಪಶತಂ ದಿವಿ ।
ಸಹಸ್ರಪೂಜನಾತ್ಸೋಽಪಿ ಲಭತೇ ವಾಂಛಿತಂ ಫಲಂ ॥ ೮೪ ॥

---

೮೦. ಮೇಲೆ ಹೇಳಿದ ವಸ್ತುಗಳನ್ನು ನೆಲದಮೇಲಿಡುವವರು ಭೂಮಿಹೀನರೂ, ಪ್ರಜಾಹೀನರೂ, ಬಂಧುಹೀನರೂ, ಕುತ್ಸಿತಾಕಾರವುಳ್ಳವರೂ ಆಗುವರಲ್ಲದೆ ಕುರುಡ, ಕುಂಟ, ಕುಳ್ಳ, ಹೆಳವ ಮುಂತಾದ ಅಂಗವಿಹೀನರಾಗುವರು.

೮೧–೮೪. ಈ ವಸ್ತುಗಳನ್ನು ನೆಲದಮೇಲಿಡುವವನು ಪಾಪಭಾಗಿಯಾಗುವುದರಲ್ಲಿ ಸಂಶಯವಿಲ್ಲ. ಹಗಲು ಮತ್ತು ಸಂಜೆಯ ಹೊತ್ತಿನಲ್ಲಿ ಸ್ತ್ರೀಸಂಭೋಗವನ್ನು ಮಾಡುವವನು ಏಳು ಜನ್ಮಗಳಲ್ಲಿ ರೋಗಿಯಾಗಿಯೂ ಮತ್ತೇಳು ಜನ್ಮಗಳಲ್ಲಿ ದರಿದ್ರನಾಗಿಯೂ ನರಳುವನು. ಸೂರ್ಯನು ಉದಯಿಸಿದನಂತರ ಹಲ್ಲುಗಳನ್ನು ತೊಳೆಯುವ ಮನುಜನು ಜನಾರ್ದನನನ್ನು ಪೂಜಿಸಿದರೂ ಸಹ ಪಾಪಭಾಗಿಯಾಗುವುದರಲ್ಲಿ ಸಂಶಯವಿಲ್ಲ. ಮಣ್ಣಿನಿಂದಾಗಲೀ, ವಿಭೂತಿಯಿಂದಾಗಲೀ, ಗೋವಿನ ಸಗಣಿಯಿಂದಾಗಲೀ, ಮರಳಿನಿಂದಾಗಲಿ ಶಿವಲಿಂಗವನ್ನು ಮಾಡಿಕೊಂಡು ಒಮ್ಮೆ ಪೂಜಿಸುವ ಮನುಷ್ಯನು ನೂರು ಕಲ್ಪಗಳಕಾಲ ಸ್ವರ್ಗಲೋಕದಲ್ಲಿ ವಾಸಿಸುವನು. ಈ ರೀತಿ ಸಾವಿರಸಾರಿ ಪೂಜಿಸುವುದರಿಂದ ತನ್ನ ಇಷ್ಟಾರ್ಥವನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

ಲಕ್ಷಂ ಚ ಪೂಜಯೇದ್ಯಸ್ತು ಶಿವತ್ವಂ ಲಭತೇ ಧ್ರುವಂ ।
ಜೀವನ್ಮುಕ್ತೋ ಭವೇದ್ವಿಪ್ರೋ ಲಿಂಗಮಭ್ಯರ್ಚಯೇತ್ತುಯಃ ॥ ೮೫ ॥

ಶಿವಪೂಜಾವಿಹೀನಶ್ಚ ಬ್ರಾಹ್ಮಣೋ ನರಕಂ ವ್ರಜೇತ್ ।
ಮತ್ಪೂಜಿತಂ ಪ್ರಿಯತಮಂ ಶಿವಂ ನಿಂದಂತಿ ಯೇ ನರಾಃ ॥ ೮೬ ॥

ಪಚ್ಯಂತೇ ನಿರಯೇ ತಾವದ್ಯಾವದ್ವೈ ಬ್ರಹ್ಮಣಃ ಶತಂ ।
ಪೂಜಿತೇ ಶಿವಲಿಂಗೇ ಚ ಯದಿ ಸ್ಯಾತ್ಕೇಶವಾಲುಕಾ ॥ ೮೭ ॥

ಸ ಮದಾಂಧೋ ವಾಲುಕಯಾ ಕೇಶೇನ ಯವನೋ ಭವೇತ್ ।
ಕ್ಷುದ್ರೋ ದರಿದ್ರಃ ಕೃಪಣೋ ವ್ಯಾಧಿಃ ಸ್ಯಾತ್ಕುತ್ಸಿತೇ ಯಥಾ ॥ ೮೮ ॥

ಸರ್ವೇಭ್ಯೋ ಮಾನಹಾನಿಃ ಸ್ಯಾಜ್ಜಾಯತೇ ನೀಚಯೋನಿಷು ।
ಸರ್ವೇಷು ಪ್ರಿಯಮಾತ್ರೇಷು ಬ್ರಾಹ್ಮಣಶ್ಚ ಮಮ ಪ್ರಿಯಃ ॥ ೮೯ ॥

---

೮೫. ಲಕ್ಷಬಾರಿ ಪೂಜಿಸುವವನು ನಿಜವಾಗಿಯೂ ಶಿವಸ್ವರೂಪವನ್ನೇ ಹೊಂದುವನು. ಶಿವಲಿಂಗವನ್ನು ಪೂಜಿಸುವ ಬ್ರಾಹ್ಮಣನು ಜೀವನ್ಮುಕ್ತನಾಗುವುದರಲ್ಲಿ ಸಂಶಯವಿಲ್ಲ.

೮೬-೮೮. ಶಿವಪೂಜೆಯನ್ನು ಮಾಡದಿರುವ ಬ್ರಾಹ್ಮಣನು ನರಕಕ್ಕೆ ಹೋಗುವನು. ನನ್ನಿಂದ ಪೂಜಿತನೂ ನನಗೆ ಪ್ರಿಯತಮನೂ ಆದ ಶಿವನನ್ನು ನಿಂದಿಸುವ ಮನುಜರು ನೂರು ಬ್ರಹ್ಮರ ಜೀವಿತಕಾಲದವರೆಗೆ ನರಕದಲ್ಲಿ ಬಿದ್ದು ನರಳುವರು. ಶಿವಲಿಂಗವನ್ನು ಪೂಜಿಸುವಾಗ ಪೂಜಿತವಾದ ಪುಷ್ಪದಲ್ಲಿ ಮರಳಿದ್ದರೆ ಪೂಜಿಸಿದವನು ಮದಾಂಧನಾಗಿಯೂ ಕೇಶವಿದ್ದರೆ ಪೂಜಿಸುವವನು ಯವನನಾಗಿಯೂ ಜೀವಿಸುವನು. ಅಷ್ಟೇಅಲ್ಲದೆ ಕ್ಷುದ್ರನೂ, ದರಿದ್ರನೂ, ಕೃಪಣನೂ, ಕುತ್ಸಿತ ರೋಗಿಯೂ ಆಗುವನು.

೮೯. ಎಲ್ಲಕಿಂತ ಹೆಚ್ಚಾಗಿ ಮಾನಹಾನಿಯುಂಟಾಗುವುದಲ್ಲದೆ ನೀಚಯೋನಿಯಲ್ಲಿ ಜನಿಸುವನು. ನನ್ನ ಪ್ರೀತಿಗೆ ಪಾತ್ರರಾದವರಲ್ಲೆಲ್ಲಾ ಬ್ರಾಹ್ಮಣನು ಅತ್ಯಂತ ಪ್ರೀತಿಪಾತ್ರನು.

ಬ್ರಾಹ್ಮಣಾಚ್ಚ ಪ್ರಿಯಾ ಲಕ್ಷ್ಮೀಃ ಸತತಂ ವಕ್ಷಸಿ ಸ್ಥಿತಾ ।
ತತೋಽಧಿಕಾ ಪ್ರಿಯಾ ರಾಧಾ ಪ್ರಿಯಾ ಭಕ್ತಾಸ್ತತೋಽಧಿಕಾಃ ॥ ೯೦ ॥

ತತೋಽಧಿಕಃ ಶಂಕರೋ ಮೇ ನಾಸ್ತಿ ಮೇ ಶಂಕರಾತ್ಪ್ರಿಯಃ ।
ಮಹಾದೇವ ಮಹಾದೇವ ಮಹಾದೇವೇತಿ ವಾದಿನಃ ॥ ೯೧ ॥

ಪಶ್ಚಾದ್ಯಾಮಿ ಚ ಸಂತೃಪ್ತೋ ನಾಮಶ್ರವಣಲೋಭತಃ ।
ಮನೋ ಮೇ ಭಕ್ತಮೂಲೇ ಚ ಪ್ರಾಣಾ ರಾಧಾತ್ಮಿಕಾ ಧ್ರುವಂ ॥ ೯೨ ॥

ಆತ್ಮಾ ಮೇ ಶಂಕರಸ್ಥಾನಂ ಶಿವಃ ಪ್ರಾಣಾಧಿಕಶ್ಚ ಯಃ ।
ಆದ್ಯಾ ನಾರಾಯಣೀ ಶಕ್ತಿಃ ಸೃಷ್ಟಿಸ್ಥಿತ್ಯಂತಕಾರಿಣೀ ॥ ೯೩ ॥

ಕರೋಮಿ ಚ ಯಯಾ ಸೃಷ್ಟಿಂ ಯಯಾ ಬ್ರಹ್ಮಾದಿದೇವತಾಃ ।
ಯಯಾ ಜಯತಿ ವಿಶ್ವಂ ಚ ಯಯಾ ಸೃಷ್ಟಿಃ ಪ್ರಜಾಯತೇ ॥ ೯೪ ॥

---

೯೦. ಬ್ರಾಹ್ಮಣನಿಗಿಂತಲೂ ಸರ್ವದಾ ನನ್ನ ವಕ್ಷಃಸ್ಥಳದಲ್ಲಿ ನೆಲಸಿರುವ ಲಕ್ಷ್ಮಿಯು ನನಗೆ ಪ್ರೀತಿಪಾತ್ರಳು. ಅದಕ್ಕಿಂತಲೂ ರಾಧೆಯು ಅಧಿಕಪ್ರಿಯಳು. ರಾಧೆಗಿಂತಲೂ ಭಕ್ತರು ನನಗೆ ವಿಶೇಷಪ್ರಿಯರು.

೯೧–೯೨. ಅವರಿಗಿಂತಲೂ ಶಂಕರನು ನನಗಿ ವಿಶೇಷಪ್ರಿಯನು. ನನಗೆ ಶಂಕರನಿಗಿಂತ ವಿಶೇಷಪ್ರಿಯರಾದವರು ಮತ್ತಾರೂ ಇಲ್ಲ. ಯಾರು 'ಮಹಾದೇವ, ಮಹಾದೇವ, ಮಹಾದೇವ' ಎಂದು ಹೇಳುತ್ತಿರುವರೋ ಅವರ ಹಿಂದೆ ನಾನು ಆ ದಿವ್ಯನಾಮವನ್ನು ಕೇಳುವ ಲೋಭದಿಂದ ಹೋಗುವೆನು. ನನ್ನ ಮನಸ್ಸು ಯಾವಾಗಲೂ ನನ್ನ ಭಕ್ತರಲ್ಲಿಯೇ ಇರುವುದು. ನನ್ನ ಪ್ರಾಣವು ರಾಧೆಯಲ್ಲಿಯೇ ಇರುವುದು.

೯೩. ಶಿವನು ನನ್ನ ಪ್ರಾಣಕ್ಕಿಂತ ಅಧಿಕನಾದುದರಿಂದ ನನ್ನ ಆತ್ಮವೇ ಶಂಕರ ಸ್ಥಾನಾಪನ್ನವಾಗಿರುವುದು. ಜಗತ್ತಿನ ಸೃಷ್ಟಿ ಸ್ಥಿತಿಲಯಗಳಿಗೆ ಕಾರಣವಾಗಿರುವ ನಾರಾಯಣೀ ಶಕ್ತಿಯು ಎಲ್ಲಕ್ಕೂ ಆದಿಯಾದುದು.

೯೪. ದಿವ್ಯವಾದ ಆನಾರಾಯಣೀ ಶಕ್ತಿಯಿಂದಲೇ ಬ್ರಹ್ಮಾದಿದೇವತೆಗಳನ್ನು ಸೃಷ್ಟಿಮಾಡುವೆನು. ಆ ಶಕ್ತಿಯಿಂದಲೇ ವಿಶ್ವದ ಸೃಷ್ಟಿಯಾಗಿ ಅಭಿವೃದ್ಧಿಯುಂಟಾಗುತ್ತದೆ.

ಯಯಾ ವಿನಾ ಜಗನ್ನಾಸ್ತಿ ಮಯಾ ದತ್ತಾ ಶಿವಾಯ ಸಾ ।
ದಯಾ ನಿದ್ರಾ ಚ ಕ್ಷುತ್ತೃಪ್ತಿಸ್ತೃಷ್ಣಾ ಶ್ರದ್ಧಾ ಕ್ಷಮಾ ಧೃತಿಃ ॥ ೯೫ ॥

ತುಷ್ಟಿಃ ಪುಷ್ಟಿಸ್ತಥಾ ಶಾಂತಿರ್ಲಜ್ಜಾಧಿದೇವತಾ ಹಿ ಸಾ ।
ವೈಕುಂಠೇ ಸಾ ಮಹಾಲಕ್ಷ್ಮೀರ್ಗೋಲೋಕೇ ರಾಧಿಕಾ ಸತೀ ॥ ೯೬ ॥

ಮರ್ತ್ಯೇ ಲಕ್ಷ್ಮೀಶ್ಚ ಕ್ಷೀರೋದೇ ದಕ್ಷಕನ್ಯಾ ಸತೀ ಚ ಸಾ ।
ಸಾ ದುರ್ಗಾ ಮೇನಕಾಕನ್ಯಾ ದೈನ್ಯದುರ್ಗತಿನಾಶಿನೀ ॥ ೯೭ ॥

ಸ್ವರ್ಗಲಕ್ಷ್ಮೀಶ್ಚ ದುರ್ಗಾ ಸಾ ಶಕ್ರಾದೀನಾಂ ಗೃಹೇಗೃಹೇ ।
ಸಾ ವಾಣೀ ಸಾ ಚ ಸಾವಿತ್ರೀ ವಿದ್ಯಾಧಿಷ್ಠಾತೃದೇವತಾ ॥ ೯೮ ॥

ವಹ್ನೌ ಸಾ ದಾಹಿಕಾಶಕ್ತಿಃ ಪ್ರಭಾಶಕ್ತಿಶ್ಚ ಭಾಸ್ಕರೇ ।
ಶೋಭಾಶಕ್ತಿಃ ಪೂರ್ಣಚಂದ್ರೇ ಜಲೇ ಶಕ್ತಿಶ್ಚ ಶೀತತಾ ॥ ೯೯ ॥

೯೫–೯೬. ಆ ಶಕ್ತಿಯೊಂದಿಲ್ಲದಿದ್ದರೆ ಜಗತ್ತೇ ಇಲ್ಲದಂತಾಗುವುದು. ನಾನು ಆ ದಿವ್ಯ ಶಕ್ತಿಯನ್ನು ಶಿವನಿಗೆ ಅನುಗ್ರಹಿಸಿರುವೆನು. ದಯೆ, ನಿದ್ರೆ, ಹಸಿವು, ತೃಪ್ತಿ, ಬಾಯಾರಿಕೆ, ಆಸೆ, ಶ್ರದ್ಧೆ, ಕ್ಷಮೆ, ಧೃತಿ, ತುಷ್ಟಿ, ಪುಷ್ಟಿ, ಶಾಂತಿ, ಲಜ್ಜೆ, ಮುಂತಾದ ಭಾವಗಳಿಗೆಲ್ಲ ಆ ನಾರಾಯಣೀ ಶಕ್ತಿಯೇ ಮೂಲವಾದುದು. ಆ ಶಕ್ತಿಯು ವೈಕುಂಠದಲ್ಲಿ ಮಹಾಲಕ್ಷ್ಮಿಯ ರೂಪದಿಂದಲೂ, ಗೋಲೋಕದಲ್ಲಿ ರಾಧಾದೇವಿಯ ರೂಪದಿಂದಲೂ, ಇರುವುದು.

೯೭. ಭೂಲೋಕದಲ್ಲಿ ಮರ್ತ್ಯಲಕ್ಷ್ಮಿಯ ರೂಪದಿಂದಲೂ ಕ್ಷೀರಸಾಗರದಲ್ಲಿ ಲಕ್ಷ್ಮಿಯ ರೂಪದಿಂದಲೂ ದಕ್ಷಬ್ರಹ್ಮನ ಮಗಳಾದ ಸತಿಯ ರೂಪದಿಂದಲೂ ಇರುವ ಆ ದಿವ್ಯಶಕ್ತಿಯೇ ಮೇನಕೆಯ ಮಗಳಾದ ದುರ್ಗೆಯಾಗಿ ಅವತರಿಸಿ ಜನರ ದೈನ್ಯ ಮತ್ತು ದುರ್ಗತಿಯನ್ನು ನಾಶಗೊಳಿಸುವಳು.

೯೮. ಆ ದುರ್ಗೆಯು ,ಸ್ವರ್ಗದಲ್ಲಿ ಇಂದ್ರಾದಿಲೋಕಪಾಲಕರ ಗೃಹದಲ್ಲಿ ಸ್ವರ್ಗಲಕ್ಷ್ಮಿಯಾಗಿಯೂ, ಬ್ರಹ್ಮಲೋಕದಲ್ಲಿ ಸರಸ್ವತೀ ಮತ್ತು ವಿದ್ಯಾಧಿಷ್ಠಾತೃ ದೇವತೆಯಾದ ಸಾವಿತ್ರಿಯಾಗಿಯೂ ಇರುವಳು.

೯೯. ಆ ಪ್ರಕೃತಿಯೇ ಅಗ್ನಿಯಲ್ಲಿ ದಾಹಶಕ್ತಿರೂಪದಿಂದಲೂ. ಸೂರ್ಯನಲ್ಲಿ ಪ್ರಭಾರೂಪದಿಂದಲೂ, ಪೂರ್ಣಚಂದ್ರನಲ್ಲಿ ಶೋಭಾರೂಪದಿಂದಲೂ ಜಲದಲ್ಲಿ ಶೈತ್ಯರೂಪದಿಂದಲೂ ಇರುವಳು.

ಸಸ್ಯ ಪ್ರಸೂತಾಶಕ್ತಿಶ್ಚ ಧಾರಣಾ ಚ ಧರಾಸು ಸಾ ।
ಬ್ರಹ್ಮಣ್ಯಶಕ್ತಿರ್ವಿಪ್ರೇಷು ದೇವಶಕ್ತಿಃ ಸುರೇಷು ಸಾ || ೧೦೦ ||

ತಪಸ್ವಿನಾಂ ತಪಸ್ಯಾ ಸಾ ಗೃಹಿಣಾಂ ಗೃಹದೇವತಾ ।
ಮುಕ್ತಿಶಕ್ತಿಶ್ಚ ಮುಕ್ತಾನಾಮಾಶಾ ಸಾಂಸಾರಿಕಸ್ಯ ಸಾ || ೧೦೧ ||

ಮದ್ಭಕ್ತಾನಾಂ ಭಕ್ತಿಶಕ್ತಿರ್ಮಯಿ ಭಕ್ತಿಪ್ರದಾ ಸದಾ ।
ನೃಪಾಣಾಂ ರಾಜ್ಯಲಕ್ಷ್ಮೀಶ್ಚ ವಣಿಜಾಂ ಲಭ್ಯರೂಪಿಣೀ || ೧೦೨ ||

ಪಾರೇ ಸಂಸಾರಸಿಂಧೂನಾಂ ತ್ರಯೀತತ್ತ್ವಾತು ತಾರಿಣೀ ।
ಸತ್ಸು ಸದ್ಬುದ್ಧಿರೂಪಾ ಸಾ ಮೇಧಾಶಕ್ತಿಸ್ವರೂಪಿಣೀ || ೧೦೩ ||

ವ್ಯಾಖ್ಯಾಶಕ್ತಿಃ ಶ್ರುತೌ ಶಾಸ್ತ್ರೇ ದಾತೃಶಕ್ತಿಶ್ಚ ದಾತೃಷು ।
ಕ್ಷತ್ರಾದೀನಾಂ ವಿಪ್ರಭಕ್ತಿಃ ಪತಿಭಕ್ತಿಃ ಸತೀಷು ಚ ।
ಏವಂ ರೂಪಾ ಚ ಯಾ ಶಕ್ತಿರ್ಮಯಾ ದತ್ತಾ ಶಿವಾಯ ಸಾ || ೧೦೪ ||

---

೧೦೦. ಸಸ್ಯಗಳ - ಪ್ರಸವಶಕ್ತಿಯಾಗಿಯೂ, ಭೂಮಿಯಲ್ಲಿ ಧಾರಣಾಶಕ್ತಿಯಾಗಿಯೂ ಬ್ರಾಹ್ಮಣರಲ್ಲಿ ಬ್ರಾಹ್ಮಣ್ಯಶಕ್ತಿರೂಪಿಣಿಯಾಗಿಯೂ ದೇವತೆಗಳಲ್ಲಿ ದೇವಶಕ್ತಿಯಾಗಿಯೂ ಇರುವವಳೂ ಆ ಆದಿಶಕ್ತಿಯೇ.

೧೦೧. ಆ ಪ್ರಕೃತಿಯೇ ತಪಸ್ವಿಗಳ ತಪಃಶಕ್ತಿಯಾಗಿಯೂ ಗೃಹಸ್ಥರ ಗೃಹದೇವತೆಯಾಗಿಯೂ, ಮುಕ್ತರ ಮುಕ್ತಿಶಕ್ತಿಯಾಗಿಯೂ, ಸಂಸಾರಿಗಳ ಆಶಾ ರೂಪಿಣಿಯಾಗಿಯೂ ಇರುವಳು.

೧೦೨. ಆ ಪ್ರಕೃತಿಯು ನನ್ನ ಭಕ್ತರಲ್ಲಿ ಭಕ್ತಿರೂಪದಿಂದಿದ್ದು ಸರ್ವದಾ ನನ್ನಲ್ಲಿ ಭಕ್ತಿಯನ್ನು ಅನುಗ್ರಹಿಸುವಳು. ರಾಜರಿಗೆ ರಾಜ್ಯಲಕ್ಷ್ಮಿಯಾಗಿಯೂ ವ್ಯಾಪಾರಿಗಳಿಗೆ ಲಾಭಲಕ್ಷ್ಮಿಯಾಗಿಯೂ ಇರುವಳು.

೧೦೩. ಸಂಸಾರಸಮುದ್ರವನ್ನು ದಾಟಿಸುವುದರಲ್ಲಿ ಉಪನಿಷತ್ಸ್ವರೂಪಿಣಿಯಾಗಿರುವ ಆ ದಿವ್ಯಶಕ್ತಿಯು ಸತ್ಪುರುಷರಲ್ಲಿ ಸದ್ಬುದ್ಧಿರೂಪದಿಂದಲೂ ಮೇಧಾಶಕ್ತಿರೂಪದಿಂದಲೂ ಇರುವಳು.

೧೦೪. ವೇದ ಶಾಸ್ತ್ರಗಳಲ್ಲಿ ವ್ಯಾಖ್ಯಾಶಕ್ತಿರೂಪದಿಂದಲೂ ದಾನಿಗಳಲ್ಲಿ ದಾತೃಶಕ್ತಿರೂಪದಿಂದಲೂ, ಕ್ಷತ್ರಿಯರು ವೈಶ್ಯರು ಮತ್ತು ಶೂದ್ರರಲ್ಲಿ ವಿಪ್ರಭಕ್ತಿರೂಪದಿಂದಲೂ, ಪತಿವ್ರತೆಯರಲ್ಲಿ ಪತಿಭಕ್ತಿರೂಪದಿಂದಲೂ ಇರುವ ಆ ದಿವ್ಯಶಕ್ತಿಯನ್ನೇ ನಾನು ಶಿವನಿಗೆ ಅನುಗ್ರಹಿಸಿರುವೆನು.

ಏವಂ ತೇ ಕಥಿತಂ ಸರ್ವಂ ಕಿಂ ಭೂಯಃ ಶ್ರೋತುಮಿಚ್ಛಸಿ ।
ಪ್ರಶ್ನಂ ಕರೋಷಿ ಯದ್ಯನ್ಮಾಂ ತತ್ಸರ್ವಂ ಕಥಯಾಮಿ ತೇ ॥ ೧೦೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣನಾರದಸಂವಾದೇ
ಭಗವನ್ನಂದಸಂವಾದೇ
ಪಂಚಸಪ್ತತಿತಮೋಽಧ್ಯಾಯಃ

---

೧೦೫. ಎಲೈ ನಂದನೇ, ಈ ರೀತಿಯಾಗಿ ನಿನಗೆ ಸೃಷ್ಟಿತತ್ವವನ್ನು ಬೋಧಿಸಿಯಾಯಿತು. ಇನ್ನೇನನ್ನು ಕೇಳಬೇಕೆಂದು ನಿನಗೆ ಇಚ್ಛೆಯಿದೆ? ನೀನು ಏನೇನು ಪ್ರಶ್ನೆಯನ್ನು ಕೇಳುವೆಯೋ ಅವುಗಳಿಗೆಲ್ಲ ಉತ್ತರವನ್ನು ನಾನು ನಿನಗೆ ಹೇಳುವೆನು

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀ ಕೃಷ್ಣಜನ್ಮ ಖಂಡದ
ಉತ್ತರಾರ್ಧದಲ್ಲಿ ನಾರಾಯಣನಾರದ ಸಂವಾದಪ್ರಸಂಗದಲ್ಲಿ
ನಂದಕೃಷ್ಣರ ಸಂವಾದವನ್ನು ತಿಳಿಸುವ ಎಪ್ಪತ್ತೈದನೆಯ
ಅಧ್ಯಾಯವು ಮುಗಿದುದು.

ಎಪ್ಪತ್ತೈದನೆಯ ಅಧ್ಯಾಯದ ಸಾರಾಂಶ

ಶ್ರೀ ಕೃಷ್ಣನು ನಂದಗೋಪನನ್ನು ಕುರಿತು ಪ್ರಪಂಚದ ಕ್ಷಣಿಕತೆಯನ್ನು ವಿವರಿಸಿ ನಿಷ್ಕಾಮನಾಗಿ ನಿತ್ಯಕರ್ಮಗಳನ್ನು ಮಾಡಿಕೊಂಡಿರುವವನು ಮುಕ್ತನಾಗುವನೆಂದು ತಿಳಿಸಿ ಸೃಷ್ಟಿತತ್ವವನ್ನೂ ಪ್ರಕೃತಿಯ ಮಹಿಮೆಯನ್ನೂ ವರ್ಣಿಸಿದನು. ಈ ಅಧ್ಯಾಯದಲ್ಲಿ ವಿವರಿಸಿರುವ ನಿತ್ಯಕರ್ಮದ ವಿಧಿಯನ್ನೂ ಕರ್ತವ್ಯಾಕರ್ತವ್ಯಗಳನ್ನೂ ಅರಿತು ಅದರಂತೆ ಆಚರಿಸುವ ಬ್ರಾಹ್ಮಣನು ಸತ್ಕೀರ್ತಿಭಾಗಿಯಾಗಿ ಮುಕ್ತನಾಗುವುದರಲ್ಲಿ ಸಂಶಯವಿಲ್ಲ.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ಷಟ್‌ಸಪ್ತತಿತಮೋಽಧ್ಯಾಯಃ ||

|| ಶ್ರೀ ನಂದ ಉವಾಚ ||

ಯೇಷಾಂ ಚ ದರ್ಶನೇ ಪುಣ್ಯಂ ಪಾಪಂ ಯಸ್ಯ ಚ ದರ್ಶನೇ ।
ತತ್ಸರ್ವಂ ವದ ಸರ್ವೇಶ ಶ್ರೋತುಂ ಕೌತೂಹಲಂ ಮಮ ॥ ೧ ॥

|| ಶ್ರೀ ಭಗವಾನುವಾಚ ||

ಸುಬ್ರಾಹ್ಮಣಾನಾಂ ತೀರ್ಥಾನಾಂ ವೈಷ್ಣವಾನಾಂ ಚ ದರ್ಶನೇ ।
ದೇವತಾಪ್ರತಿಮಾದರ್ಶೀ ತೀರ್ಥಸ್ನಾಯೀ ಭವೇನ್ನರಃ ॥ ೨ ॥

ಸೂರ್ಯಸ್ಯ ದರ್ಶನೇ ಭಕ್ತ್ಯಾ ಸತೀನಾಂ ದರ್ಶನೇ ತಥಾ ।
ಸಂನ್ಯಾಸಿನಾಂ ಯತೀನಾಂ ಚ ತಥೈವ ಬ್ರಹ್ಮಚಾರಿಣಾಂ ॥ ೩ ॥

ಎಪ್ಪತ್ತಾರನೆಯ ಅಧ್ಯಾಯ

೧. ಶ್ರೀ ನಂದಗೋಪ :—ಎಲೈ ಸರ್ವೇಶ್ವರನೇ, ಯಾರ ದರ್ಶನದಿಂದ ಪುಣ್ಯವೂ, ಯಾರ ದರ್ಶನದಿಂದ ಪಾಪವೂ ಸಂಘಟಿಸುವುದೆಂಬುದನ್ನು ನನಗೆ ಹೇಳು. ಕೇಳಲು ನನಗೆ ಬಹಳ ಕುತೂಹಲವಿದೆ.

೨. ಶ್ರೀ ಭಗವಾನ್ :—ಯೋಗ್ಯರಾದ ಬ್ರಾಹ್ಮಣರ ದರ್ಶನದಿಂದಲೂ, ಪುಣ್ಯತೀರ್ಥಗಳ ಮತ್ತು ವೈಷ್ಣವರ ದರ್ಶನದಿಂದಲೂ ಮನುಷ್ಯನು ದೇವತಾ ಪ್ರತಿಮೆಯನ್ನು ನೋಡಿದ ಪುಣ್ಯವನ್ನೂ, ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿದ ಪುಣ್ಯವನ್ನೂ ಪಡೆಯುವನು.

೩. ಭಕ್ತಿಯಿಂದ ಸೂರ್ಯನ ದರ್ಶನಮಾಡುವುದರಿಂದಲೂ, ಪತಿವ್ರತೆಯರ ದರ್ಶನಮಾಡುವುದರಿಂದಲೂ, ಸಂನ್ಯಾಸಿಗಳ, ಯತಿಗಳ ಮತ್ತು ಬ್ರಹ್ಮಚಾರಿಗಳ ದರ್ಶನಮಾಡುವುದರಿಂದಲೂ ಪುಣ್ಯಬರುವುದು.

ಭಕ್ತ್ಯಾ ಗವಾಂ ಚ ವಹ್ನೀನಾಂ ಗುರೂಣಾಂ ಚ ವಿಶೇಷತಃ ।
ಗಜೇಂದ್ರಾಣಾಂ ಚ ಸಿಂಹಾನಾಂ ಶ್ವೇತಾಶ್ವಾನಾಂ ತಥೈವ ಚ ॥ ೪ ॥

ಶುಕಾನಾಂ ಚ ಪಿಕಾನಾಂ ಚ ಖಂಜನಾನಾಂ ತಥೈವ ಚ ।
ಹಂಸಾನಾಂ ಚ ಮಯೂರಾಣಾಂ ಚಾಷಾಣಾಂ ಶಙ್ಖಪಕ್ಷಿಣಾಂ ॥ ೫ ॥

ವತ್ಸಪ್ರಯುಕ್ತಧೇನೂನಾಮಶ್ವತ್ಥಾನಾಂ ತಥೈವ ಚ ।
ಪತಿಪುತ್ರವತೀನಾಂ ಚ ನರಾಣಾಂ ತೀರ್ಥಯಾಯಿನಾಂ ॥ ೬ ॥

ಪ್ರದೀಪಾನಾಂ ಸುವರ್ಣಾನಾಂ ಮಣೀನಾಂ ಚ ವಿಶೇಷತಃ ।
ಮುಕ್ತಾನಾಂ ಹೀರಕಾಣಾಂ ಚ ಮಾಣಿಕ್ಯಾನಾಂ ಮಹಾಶಯ ॥ ೭ ॥

ತುಲಸೀಶುಕ್ಲಪುಷ್ಪಾಣಾಂ ದರ್ಶನಂ ಪಾಪನಾಶನಂ ।
ಫಲಾನಿ ಶುಕ್ಲಧಾನ್ಯಾನಿ ಘೃತಂ ದಧಿ ಮಧೂನಿ ಚ ॥ ೮ ॥

---

೪. ಭಕ್ತಿಪೂರ್ವಕವಾಗಿ ಗೋವುಗಳನ್ನೂ, ಅಗ್ನಿಯನ್ನೂ ವಿಶೇಷತಃ ಗುರುಗಳನ್ನೂ ದರ್ಶನಮಾಡುವುದರಿಂದಲೂ, ಗಜೇಂದ್ರ, ಸಿಂಹ ಮತ್ತು ಬಿಳಿದಾದ ಕುದುರೆಯ ದರ್ಶನದಿಂದಲೂ ಮಾನವನು ಪುಣ್ಯಭಾಗಿಯಾಗುವನು.

೫. ಶುಕಪಿಕಗಳ ದರ್ಶನದಿಂದಲೂ, ಖಂಜನ, ಹಂಸ, ನವಿಲು, ಗುಬ್ಬಚ್ಚಿ ಮತ್ತು ಶಂಖಪಕ್ಷಿಗಳ ದರ್ಶನದಿಂದಲೂ ಮಾನವನಿಗೆ ಪುಣ್ಯಪ್ರಾಪ್ತಿಯುಂಟಾಗುವುದು.

೬. ಕರುಗಳೊಡಗೂಡಿದ ಗೋವುಗಳನ್ನು ದರ್ಶನಮಾಡುವುದರಿಂದಲೂ, ಅಶ್ವತ್ಥವೃಕ್ಷಗಳ ದರ್ಶನದಿಂದಲೂ, ಪತಿಪುತ್ರವತಿಯರಾದ ಪತಿವ್ರತೆಯರ ದರ್ಶನದಿಂದಲೂ ತೀರ್ಥಯಾತ್ರೆ ಮಾಡಿದ ಪುರುಷರ ದರ್ಶನದಿಂದಲೂ ಪುಣ್ಯವು ಲಭಿಸುವುದು.

೭. ಎಲೈ ಮಹಾಶಯನೇ, ಪ್ರದೀಪ, ಸುವರ್ಣ ಮತ್ತು ಮಣಿಗಳ ದರ್ಶನದಿಂದಲೂ, ಮುತ್ತು, ಮಾಣಿಕ್ಯ ಮತ್ತು ವಜ್ರಗಳ ದರ್ಶನದಿಂದಲೂ ಮಾನವನು ಪುಣ್ಯಭಾಗಿಯಾಗುವನು.

೮. ತುಲಸೀ ಮತ್ತು ಬಿಳುಪಾದ ಪುಷ್ಪಗಳ ದರ್ಶನದಿಂದ ಪಾಪವು ನಾಶವಾಗುವುದು. ಹಣ್ಣುಗಳು, ಬಿಳುಪಾದ ಧಾನ್ಯಗಳು, ತುಪ್ಪ ಮೊಸರು, ಮತ್ತು, ಜೇನು, ಇವುಗಳ ದರ್ಶನದಿಂದ ಪುಣ್ಯವು ಲಭಿಸುವುದು.

ಪೂರ್ಣಕುಂಭಂ ಚ ಲಾಜಾಂಶ್ಚ ರಾಜೇಂದ್ರ ದರ್ಪಣಂ ಜಲಂ ।
ಮಾಲಾಂ ಚ ಶುಕ್ಲಪುಷ್ಪಾಣಾಂ ದೃಷ್ಟ್ವಾ ಪುಣ್ಯಂ ಲಭೇನ್ನರಃ ॥ ೯ ॥

ಗೋರೋಚನಂ ಚ ಕರ್ಪೂರಂ ರಜತಂ ಚ ಸರೋವರಂ ।
ಪುಷ್ಪೋದ್ಯಾನಂ ಪುಷ್ಪಿತಂ ಚ ದೃಷ್ಟ್ವಾ ಪುಣ್ಯಂ ಲಭೇನ್ನರಃ ॥ ೧೦ ॥

ಶುಕ್ಲಪಕ್ಷಸ್ಯ ಚಂದ್ರಂ ಚ ಪೀಯೂಷಂ ಚಂದನಂ ತಥಾ ।
ಕಸ್ತೂರೀಂ ಕುಂಕುಮಂ ದೃಷ್ಟ್ವಾ ನಂದ ಪುಣ್ಯಂ ಲಭೇನ್ನರಃ ॥ ೧೧ ॥

ಪತಾಕಾಮಕ್ಷಯವಟತರುಂ ದೇವೋತ್ಥಿತಂ ಶುಭಂ ।
ದೇವಾಲಯಂ ದೇವಖಾತಂ ದೃಷ್ಟ್ವಾ ಪುಣ್ಯಂ ಲಭೇನ್ನರಃ ॥ ೧೨ ॥

ದೇವಾಶ್ರಿತಂ ದೇವಘಟಂ ಸುಗಂಧಿಪವನಂ ತಥಾ ।
ಶಂಖಂ ಚ ದುಂದುಭಿಂ ದೃಷ್ಟ್ವಾ ಸದ್ಯಃ ಪುಣ್ಯಂ ಲಭೇನ್ನರಃ ॥ ೧೩ ॥

---

೯. ಪೂರ್ಣಕಲಶವನ್ನೂ, ಬಿಳುಪಾದ ಅರಳನ್ನೂ, ರಾಜೇಂದ್ರನನ್ನೂ, ಕನ್ನಡಿಯನ್ನೂ, ಶುದ್ಧೋದಕವನ್ನೂ ಬಿಳುಪಾದ ಪುಷ್ಪಗಳ ಮಾಲೆಯನ್ನೂ, ನೋಡಿದರೆ ಮಾನವನಿಗೆ ಪುಣ್ಯಪ್ರಾಪ್ತಿಯುಂಟಾಗುವುದು.

೧೦. ಗೋರೋಚನವನ್ನೂ ಪಚ್ಚಕರ್ಪೂರವನ್ನೂ, ಬೆಳ್ಳಿಯನ್ನೂ, ತಿಳಿ ನೀರಿನ ಕೊಳವನ್ನೂ, ಅರಳಿದ ಪುಷ್ಪಗಳ ಉದ್ಯಾನವನ್ನೂ, ನೋಡಿದ ಮನುಜನು ಪುಣ್ಯಭಾಗಿಯಾಗುವನು.

೧೧. ಶುಕ್ಲಪಕ್ಷದ ಚಂದ್ರನನ್ನೂ, ಅಮೃತವನ್ನೂ, ಚಂದನವನ್ನೂ, ಕಸ್ತೂರಿಯನ್ನೂ ಕುಂಕುಮಕೇಸರಿಯನ್ನೂ, ನೋಡುವ ಮನುಷ್ಯನು ಪುಣ್ಯವನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

೧೨, ಧ್ವಜಪಟವನ್ನೂ, ಅಕ್ಷಯ ವಟವೃಕ್ಷವನ್ನೂ, ದೇವಾಲಯವನ್ನು, ದೇವಖಾತ ಗುಹೆಗಳನ್ನೂ, ದರ್ಶನ ಮಾಡಿದ ಮನುಜನು ಪುಣ್ಯಭಾಗಿಯಾಗುವುದರಲ್ಲಿ ಸಂಶಯವಿಲ್ಲ.

೧೩. ದೇವಾಶ್ರಿತ ಪ್ರದೇಶವನ್ನೂ, ದೇವಕಲಶವನ್ನೂ, ಸುಗಂಧವನ್ನು, ಬೀರುವ ವಾಯುವನ್ನೂ, ಶಂಖ ಮತ್ತು ನಗಾರಿಯನ್ನೂ, ನೋಡಿದ ಮನುಷ್ಯನು ಆ ಕೂಡಲೇ ಪುಣ್ಯಭಾಗಿಯಾಗುವನು.

ಶುಕ್ತಿಂ ಪ್ರವಾಲಂ ರಜತಂ ಸ್ಫಟಿಕಂ ಕುಶಮೂಲಕಂ ।
ಗಂಗಾಮೃದಂ ಕುಶಂ ತಾಮ್ರಂ ದೃಷ್ಟ್ವಾ ಪುಣ್ಯಂ ಲಭೇನ್ನರಃ ॥ ೧೪ ॥

ಪುರಾಣಪುಸ್ತಕಂ ಶುದ್ಧಂ ಸಬೀಜಂ ವಿಷ್ಣುಯಂತ್ರಕಂ ।
ಸ್ನಿಗ್ಧದೂರ್ವಾಕ್ಷತಂ ರತ್ನಂ ದೃಷ್ಟ್ವಾ ಪುಣ್ಯಂ ಲಭೇನ್ನರಃ ॥ ೧೫ ॥

ತಪಸ್ವಿನಾಂ ಸಿದ್ಧಮಂತ್ರಂ ಸಮುದ್ರಂ ಕೃಷ್ಣಸಾರಕಂ ।
ಯಜ್ಞಂ ಮಹೋತ್ಸವಂ ದೃಷ್ಟ್ವಾ ಸ ಪುಣ್ಯಂ ಲಭತೇ ನರಃ ॥ ೧೬ ॥

ಗೋಮೂತ್ರಂ ಗೋಮಯಂ ದುಗ್ಧಂ ಗೋಧೂಲಿಂ ಗೋಷ್ಠಗೋಷ್ಪದಂ ।
ಪಕ್ವಸಸ್ಯಾನ್ವಿತಂ ಕ್ಷೇತ್ರಂ ದೃಷ್ಟ್ವಾ ಪುಣ್ಯಂ ಲಭೇದ್ಧ್ರುವಂ ॥ ೧೭ ॥

ರುಚಿರಾಂ ಪದ್ಮಿನೀಂ ಶ್ಯಾಮಾಂ ನ್ಯಗ್ರೋಧಪರಿಮಂಡಲಾಂ ।
ಸುವೇಷಕಾಂ ಸುವಸನಾಂ ದಿವ್ಯಭೂಷಣಭೂಷಿತಾಂ ॥ ೧೮ ॥

---

೧೪. ಕಪ್ಪೆಚಿಪ್ಪು, ಹವಳ, ಬೆಳ್ಳಿ, ಸ್ಫಟಿಕ ಮತ್ತು ದರ್ಭೆಯ ಬೇರನ್ನೂ, ಗಂಗೆಯ ಮಣ್ಣು, ದರ್ಭೆ ಮತ್ತು ತಾಮ್ರವನ್ನೂ ನೋಡಿದ ಮನುಷ್ಯನು ಪುಣ್ಯವನ್ನು ಹೊಂದುವನು.

೧೫. ಶುದ್ಧವಾದ ಪುರಾಣಪುಸ್ತಕವನ್ನೂ, ಬೀಜಾಕ್ಷರಸಹಿತವಾದ ವಿಷ್ಣುಯಂತ್ರವನ್ನೂ, ಘೃತಮಿಶ್ರವಾದ ದೂರ್ವಾಕ್ಷತೆಯನ್ನೂ, ರತ್ನವನ್ನೂ, ಸಹ ನೋಡುವ ಮನುಷ್ಯನು ಪುಣ್ಯಭಾಗಿಯಾಗುವುದರಲ್ಲಿ ಸಂಶಯವಿಲ್ಲ.

೧೬. ತಪಸ್ವಿಗಳ ಸಿದ್ಧಮಂತ್ರವನ್ನೂ, ಸಮುದ್ರವನ್ನೂ, ಗಂಡು ಜಿಂಕೆಯನ್ನೂ, ಯಜ್ಞವನ್ನೂ, ಮಹೋತ್ಸವವನ್ನೂ ನೋಡುವ ಮನುಷ್ಯನು ಪುಣ್ಯಭಾಗಿಯಾಗುವನು.

೧೭. ಗೋಮೂತ್ರವನ್ನೂ, ಗೋಮಯ (ಸಗಣಿ)ವನ್ನೂ, ಹಾಲನ್ನೂ, ಗೋಧೂಲಿಯನ್ನೂ, ಕೊಟ್ಟಿಗೆಯಲ್ಲಿರುವ ಗೋಪಾದ ಚಿಹ್ನೆಯನ್ನೂ, ಪಕ್ವವಾದ ಸಸ್ಯಗಳಿಂದ ಪರಿಪೂರ್ಣವಾದ ಕ್ಷೇತ್ರವನ್ನೂ ನೋಡಿದ ಮಾನವನು ಪುಣ್ಯ ಭಾಗಿಯಾಗುವನು.

೧೮–೧೯. ಮನೋಹರಳೂ, ಪದ್ಮಿನೀಜಾತಿಯವಳೂ, ಯೌವನಮಧ್ಯಸ್ಥಳೂ ಆಲದ ಎಲೆಯಂತೆ ಉದರವುಳ್ಳವಳೂ, ಸುಂದರವಾದ ವೇಷದಿಂದಲೂ ವಸ್ತ್ರದಿಂದಲೂ

ವೇಶ್ಯಾಂ ಕ್ಷೇಮಕರೀಂ ಗಂಧಂ ಸುದೂರ್ವಾಕ್ಷತತಂಡುಲಂ ।
ಸಿದ್ಧಾನ್ನಂ ಪರಮಾನ್ನಂ ಚ ದೃಷ್ಟ್ವಾ ಪುಣ್ಯಂ ಲಭೇನ್ನರಃ ॥ ೧೯ ॥

ಕಾರ್ತಿಕೀಪೂರ್ಣಿಮಾಯಾಂ ಚ ರಾಧಿಕಾಪ್ರತಿಮಾಂ ಶುಭಾಂ ।
ಸಂಪೂಜ್ಯ ದೃಷ್ಟ್ವಾ ನತ್ವಾ ಚ ಕರೋತಿ ಜನ್ಮಖಂಡನಂ ॥ ೨೦ ॥

ಹಿಂಗುಲಾಯಾಂ ತಥಾಽಷ್ಟಮ್ಯಾಮಿಷೇ ಮಾಸಿ ಸಿತೇ ಶುಭೇ ।
ಶ್ರೀದುರ್ಗಾಪ್ರತಿಮಾಂ ದೃಷ್ಟ್ವಾ ಕರೋತಿ ಜನ್ಮಖಂಡನಂ ॥ ೨೧ ॥

ಶಿವರಾತ್ರೌ ಚ ಕಾಶ್ಯಾಂ ಚ ವಿಶ್ವನಾಥಸ್ಯ ದರ್ಶನಂ ।
ಕೃತ್ವೋಪವಾಸಂ ಪೂಜಾಂ ಚ ಕರೋತಿ ಜನ್ಮಖಂಡನಂ ॥ ೨೨ ॥

ಜನ್ಮಾಷ್ಟಮೀದಿನೇ ಭಕ್ತೋ ದೃಷ್ಟ್ವಾ ಮಾಂ ಬಿಂದುಮಾಧವಂ ।
ಪ್ರಣಮ್ಯ ಪೂಜಾಂ ಕೃತ್ವಾ ಚ ಕರೋತಿ ಜನ್ಮಖಂಡನಂ ॥ ೨೩ ॥

ಅಲಂಕೃತಳೂ, ದಿವ್ಯಭೂಷಣ ಭೂಷಿತಳೂ, ಕ್ಷೇಮಕಾರಿಣಿಯೂ ಆದ ವೇಶ್ಯೆಯನ್ನೂ, ದಿವ್ಯಗಂಧವನ್ನೂ, ಗರಿಕೆ ಅಕ್ಷತೆ ಮತ್ತು ತೊಳೆದ ಅಕ್ಕಿಯನ್ನೂ, ಸಿದ್ಧವಾದ ಅನ್ನವನ್ನೂ ಪಾಯಸವನ್ನೂ ನೋಡಿದ ಮಾನವನು ಪುಣ್ಯಭಾಗಿಯಾಗುವನು

೨೦. ಕಾರ್ತೀಕಮಾಸದ ಪೂರ್ಣಿಮೆಯ ದಿವಸ ಮಂಗಳಕರವಾದ ರಾಧಾಪ್ರತಿಮೆಯನ್ನು ನೋಡಿ ಪೂಜಿಸಿ ನಮಸ್ಕರಿಸುವ ಮಾನವನು ಪುನರ್ಜನ್ಮರಹಿತನಾಗುವನು.

೨೧. ಧನುರ್ಮಾಸದ ಶುಕ್ಲಪಕ್ಷದ ಅಷ್ಟಮಿಯ ದಿವಸ ಹಿಂಗುಲಾಕ್ಷೇತ್ರದಲ್ಲಿ ಶ್ರೀ ದುರ್ಗಾಪ್ರತಿಮೆಯ ದರ್ಶನವನ್ನು ಮಾಡಿ ಪೂಜಿಸಿದವನು ಜನ್ಮಮೃತ್ಯುರಹಿತನಾಗುವನು.

೨೨. ಶಿವರಾತ್ರಿಯ ದಿವಸ ಕಾಶಿಯಲ್ಲಿ ವಿಶ್ವನಾಥನ ದರ್ಶನಮಾಡಿ ಉಪವಾಸಮಾಡಿ ಪೂಜೆಮಾಡುವುದರಿಂದ ಮನುಷ್ಯನು ಪುನರ್ಜನ್ಮರಹಿತನಾಗುವನು.

೨೩. ಜನ್ಮಾಷ್ಟಮಿಯ ದಿವಸ ಭಕ್ತನಾದವನು ಬಿಂದು ಮಾಧವ ಸ್ವರೂಪನಾದ ನನ್ನನ್ನು ನೋಡಿ ನಮಸ್ಕರಿಸಿ ಭಕ್ತಿಯಿಂದ ಪೂಜೆಮಾಡಿದರೆ ಜನ್ಮಬಂಧನದಿಂದ ಮುಕ್ತನಾಗುವನು.

ಪೌಷೇ ಮಾಸಿ ಶುಕ್ಲರಾತ್ರೌ ಯತ್ರ ಯತ್ರ ಸ್ಥಲೇ ನರಃ ।
ಪದ್ಮಾಯಾಃ ಪ್ರತಿಮಾಂ ದೃಷ್ಟ್ವಾ ಕರೋತಿ ಜನ್ಮಖಂಡನಂ ॥ ೨೪ ॥

ಸಪ್ತಜನ್ಮ ಭವೇತ್ತಸ್ಯ ಪುತ್ರಃಪೌತ್ರೋ ಧನೇಶ್ವರಃ ।
ಉಪೋಷ್ಯೈಕಾದಶೀಂ ಸ್ನಾತ್ವಾ ಪ್ರಭಾತೇ ದ್ವಾದಶೀದಿನೇ ।
ದೃಷ್ಟ್ವಾ ಕಾಶ್ಯಾಮನ್ನಪೂರ್ಣಾಂ ಕರೋತಿ ಜನ್ಮಖಂಡನಂ ॥ ೨೫ ॥

ಚೈತ್ರೇ ಮಾಸಿ ಚತುರ್ದಶ್ಯಾಂ ಕಾಮರೂಪೇಷು ಪುಣ್ಯದೇ ।
ದೃಷ್ಟ್ವಾ ನತ್ವಾ ಭದ್ರಕಾಲೀಂ ಕರೋತಿ ಜನ್ಮಖಂಡನಂ ॥ ೨೬ ॥

ಅಯೋಧ್ಯಾಯಾಂ ಚ ರಾಮಂ ಚ ಶ್ರೀ ರಾಮನವಮಿದಿನೇ ।
ಸಂಪೂಜ್ಯ ದೃಷ್ಟ್ವಾ ನತ್ವಾ ಚ ಕರೋತಿ ಜನ್ಮಖಂಡನಂ ॥ ೨೭ ॥

ಉಪೋಷ್ಯ ಪುಷ್ಕರೇ ಸ್ನಾತ್ವಾ ಕಿಂ ವಾ ಬದರಿಕಾಶ್ರಮೇ ।
ಸಂಪೂಜ್ಯ ದೃಷ್ಟ್ವಾ ಮಾಮೇಕಂ ಕರೋತಿ ಜನ್ಮಖಂಡನಂ ॥ ೨೮ ॥

---

೨೪. ಪುಷ್ಯಮಾಸದ ಶುಕ್ಲಪಕ್ಷದ ರಾತ್ರಿಯಲ್ಲಿ ಯಾವಸ್ಥಳದಲ್ಲಿಯಾದರೂ ಮನುಷ್ಯನು ಲಕ್ಷ್ಮೀಪ್ರತಿಮೆಯು ದರ್ಶನಮಾಡುವುದರಿಂದ ಜನ್ಮರಹಿತನಾಗುವನು.

೨೫. ಏಳುಜನ್ಮಗಳವರೆಗೆ ಅವನ ಪುತ್ರಪೌತ್ರರು ಧನವಂತರಾಗುವರು. ಏಕಾದಶಿಯದಿವಸ ಉಪವಾಸಮಾಡಿ ದ್ವಾದಶೀದಿನ ಪ್ರಾತಃಕಾಲದಲ್ಲಿ ಗಂಗಾಸ್ನಾನ ಮಾಡಿ ಕಾಶಿಯಲ್ಲಿ ಅನ್ನಪೂರ್ಣೆಯನ್ನು ದರ್ಶನಮಾಡುವ ಮಾನವನು ಜನ್ಮ ಬಂಧನದಿಂದ ಪಾರಾಗುವನು.

೨೬. ಚೈತ್ರಮಾಸದ ಚತುರ್ದಶಿಯಲ್ಲಿ ಕಾಮರೂಪದೇಶದಲ್ಲಿರುವ ಪುಣ್ಯ ಕರಳಾದ ಭದ್ರಕಾಳಿಯನ್ನು ದರ್ಶನಮಾಡಿ ನಮಿಸುವವನು ಪುನರ್ಜನ್ಮರಹಿತ ನಾಗುವನು.

೨೭. ಶ್ರೀರಾಮನವಮಿಯ ದಿವಸ ಅಯೋಧ್ಯೆಯಲ್ಲಿ ಶ್ರೀರಾಮನ ವಿಗ್ರಹ ವನ್ನು ನೋಡಿ ಪೂಜಿಸಿ ನಮಸ್ಕರಿಸುವವನು ಜನ್ಮಬಂಧನದಿಂದ ಪಾರಾಗುವನು.

೨೮. ಉಪವಾಸಮಾಡಿ ಪುಷ್ಕರ ತೀರ್ಥದಲ್ಲಿ ಸ್ನಾನಮಾಡಿ ಬದರಿಕಾಶ್ರಮ ದಲ್ಲಿರುವ ನನ್ನನ್ನು ದರ್ಶನಮಾಡಿ ಪೂಜಿಸುವ ಮಾನವನು ಪುನರ್ಜನ್ಮರಹಿತ ನಾಗುವನು.

ದತ್ವಾ ವಿಷ್ಣುಪದೇ ಪಿಂಡಂ ವಿಷ್ಣುಂ ಯಶ್ಚ ಪ್ರಪೂಜಯೇತ್ ।
ಪಿತೄಣಾಂ ಸ್ವಾತ್ಮನಶ್ಚೈವ ಕರೋತಿ ಜನ್ಮಖಂಡನಂ ॥ ೨೯ ॥

ಪ್ರಯಾಗೇ ಮುಂಡನಂ ಕೃತ್ವಾ ದಾನಂ ಚ ಕುರುತೇ ಯದಿ ।
ಉಪೋಷ್ಯ ನೈಮಿಷಾರಣ್ಯೇ ಕರೋತಿ ಜನ್ಮಖಂಡನಂ ॥ ೩೦ ॥

ಸಿದ್ಧಿಂ ಕೃತ್ವಾ ಚ ಬದರೀಂ ಭುಂಕ್ತೇ ಬದರಿಕಾಶ್ರಮೇ ।
ದೃಷ್ಟ್ವಾ ಮತ್ಪ್ರತಿಮಾಂ ನಂದ ಕರೋತಿ ಜನ್ಮಖಂಡನಂ ॥ ೩೧ ॥

ದೋಲಾಯಮಾನಂ ಗೋವಿಂದಂ ಪುಣ್ಯೇ ವೃಂದಾವನೇ ಚ ಮಾಂ ।
ದೃಷ್ಟ್ವಾ ಸಂಪೂಜ್ಯ ನತ್ವಾ ಚ ಕರೋತಿ ಜನ್ಮಖಂಡನಂ ॥ ೩೨ ॥

ಮದ್ರೇ ದೃಷ್ಟ್ವಾ ಚ ಮಂಚಸ್ಥಂ ಮಾಮೇವ ಮಧುಸೂದನಂ ।
ಸಂಪೂಜ್ಯ ನತ್ವಾ ಭಕ್ತಶ್ಚ ಕರೋತಿ ಜನ್ಮಖಂಡನಂ ॥ ೩೩ ॥

---

೨೯. ಗಯಾಕ್ಷೇತ್ರದ ವಿಷ್ಣುಪಾದದಲ್ಲಿ ಪಿತೃದೇವತೆಗಳಿಗೂ ತನಗೂ ಪಿಂಡವನ್ನು ಸಮರ್ಪಿಸಿ ವಿಷ್ಣುವನ್ನು ಪೂಜಿಸುವ ಮಾನವನು ಜನ್ಮಮೃತ್ಯುರಹಿತನಾಗುವನು.

೩೦. ಪ್ರಯಾಗಕ್ಷೇತ್ರದಲ್ಲಿ ಶಿರೋಮುಂಡನ ಮಾಡಿಸಿಕೊಂಡು ಇಷ್ಟದ್ರವ್ಯವನ್ನು ದಾನಮಾಡುವವನೂ, ನೈಮಿಷಾರಣ್ಯದಲ್ಲಿ ಉಪವಾಸಮಾಡುವವನೂ ಜನ್ಮಮೃತ್ಯುರಹಿತನಾಗುವನು

೩೧. ಎಲೈ ನಂದನೇ, ಬದರಿಕಾಶ್ರಮದಲ್ಲಿ ತಪಸ್ಸಿದ್ಧಿಯನ್ನು ಪಡೆದು ಬದರ ಫಲವನ್ನು ತಿಂದು ಜೀವಿಸುತ್ತಾ ಪ್ರತಿದಿನವೂ ಯಾರು ನನ್ನ ದರ್ಶನವನ್ನು ಪಡೆಯುವರೋ ಅವರು ಪುನರ್ಜನ್ಮವಿಲ್ಲದಂತಾಗುವರು.

೩೨. ಪುಣ್ಯಕರವಾದ ಬೃಂದಾವನದಲ್ಲಿ ದೋಲಾಧಿರೂಢನಾದ ಗೋವಿಂದನನ್ನು ನೋಡಿ ಭಕ್ತಿಯಿಂದ ಪೂಜಿಸಿ ನಮಸ್ಕರಿಸುವ ಮಾನವನು ಜನ್ಮಮೃತ್ಯುರಹಿತನಾಗುವನು.

೩೩. ಮದ್ರನಗರಿಯಲ್ಲಿ ಮಂಚಾಧಿರೂಢನಾದ ಮಧುಸೂದನನನ್ನು ನೋಡಿ ಪೂಜಿಸಿ ನಮಸ್ಕರಿಸುವ ಭಕ್ತನು ಪುನರ್ಜನ್ಮದಿಂದ ಪಾರಾಗುವನು.

ರಥಸ್ಥಂ ಚ ಜಗನ್ನಾಥಂ ಯೋ ದ್ರಕ್ಷ್ಯತಿ ಕಲೌ ನರಃ ।
ಸಂಪೂಜ್ಯ ನತ್ವಾ ಭಕ್ತ್ಯಾ ಚ ಕರೋತಿ ಜನ್ಮಖಂಡನಂ ॥ ೩೪ ॥

ಉತ್ತರಾಯಣಸಂಕ್ರಾಂತ್ಯಾಂ ಪ್ರಯಾಗೇ ಸ್ನಾನಮಾಚರೇತ್ ।
ಸಂಪೂಜ್ಯ ನತ್ವಾ ಮಾಮೇವ ಕರೋತಿ ಜನ್ಮಖಂಡನಂ ॥ ೩೫ ॥

ಕಾರ್ತಿಕೀಪೌರ್ಣಮಾಸ್ಯಾಂ ಚ ದೃಷ್ಟ್ವಾ ಮತ್ಪ್ರತಿಮಾಂ ಶುಭಾಂ ।
ಉಪೋಷ್ಯ ಕೃತ್ವಾ ಪೂಜಾಂ ಚ ಕರೋತಿ ಜನ್ಮಖಂಡನಂ ॥ ೩೬ ॥

ಚಂದ್ರಭಾಗಾಸಮೀಪೇ ಚ ಮಾಘ್ಯಾಂ ಚ ಮಾಂ ನಮೇತ್ಸುಧೀಃ ।
ರಾಧಯಾ ಸಹ ಮಾಂ ದೃಷ್ಟ್ವಾ ಕರೋತಿ ಜನ್ಮಖಂಡನಂ ॥ ೩೭ ॥

ರಾಮೇಶ್ವರಂ ಸೇತುಬಂಧೇ ಆಷಾಢೀಪೂರ್ಣಿಮಾದಿನೇ ।
ಉಪೋಷ್ಯ ದೃಷ್ಟ್ವಾ ಸಂಪೂಜ್ಯ ಕರೋತಿ ಜನ್ಮಖಂಡನಂ ॥ ೩೮ ॥

---

೩೪. ಕಲಿಯುಗದಲ್ಲಿ ಯಾವ ಮನುಷ್ಯನು ರಥಾಧಿರೂಢನಾದ ಜನಾರ್ದನನ ದರ್ಶನಮಾಡಿ ಭಕ್ತಿಯಿಂದ ಪೂಜಿಸಿ ನಮಿಸುವನೋ ಅವನು ಜನ್ಮಮೃತ್ಯುರಹಿತನಾಗುವನು.

೩೫. ಉತ್ತರಾಯಣದ ಮಕರಸಂಕ್ರಾಂತಿಯ ದಿವಸ ಪ್ರಯಾಗದ ತ್ರಿವೇಣಿ ಸಂಗಮದಲ್ಲಿ ಸ್ನಾನಮಾಡಿ ಪರಮಾತ್ಮನನ್ನು ಭಕ್ತಿಯಿಂದ ಪೂಜಿಸಿ ನಮಸ್ಕರಿಸುವವನು ಪುನರ್ಜನ್ಮವಿಲ್ಲದಂತಾಗುವನು.

೩೬. ಕಾರ್ತೀಕಮಾಸದ ಪೂರ್ಣಿಮೆಯದಿವಸ ಉಪವಾಸಮಾಡಿ ಮಂಗಳಕರವಾದ ನನ್ನ ಪ್ರತಿಮೆಯನ್ನು ದರ್ಶನಮಾಡಿ ಭಕ್ತಿಯಿಂದ ಪೂಜಿಸುವ ಮಾನವನು ಜನ್ಮಮೃತ್ಯುರಹಿತನಾಗುವನು.

೩೭. ಮಾಘಮಾಸದಲ್ಲಿ ಚಂದ್ರಭಾಗಾನದಿಯಲ್ಲಿ ಸ್ನಾನಮಾಡಿ ರಾಧಾಸಹಿತನಾದ ನನ್ನನ್ನು ಭಕ್ತಿಪೂರ್ವಕವಾಗಿ ಪೂಜಿಸಿ ನಮಸ್ಕರಿಸುವವನು ಪುನರ್ಜನ್ಮರಹಿತನಾಗುವನು.

೩೮. ಆಷಾಢಮಾಸದ ಪೂರ್ಣಿಮೆಯ ದಿವಸ ರಾಮಸೇತುವಿನಲ್ಲಿರುವ ರಾಮೇಶ್ವರನ ದರ್ಶನಮಾಡಿ ಉಪವಾಸದಿಂದ ನನ್ನನ್ನು ಪೂಜಿಸುವ ಮಾನವನು ಜನ್ಮಮೃತ್ಯುರಹಿತನಾಗುವನು.

ಸ್ವರ್ಗೇ ವಿದ್ಯಾಧರಾ ರಾತ್ರೌ ನೃತ್ಯಂತಿ ಚ ಮುಹುರ್ಮುಹುಃ ।
ಪ್ರಣಾಮಂ ಕರ್ತುಮೀಶಂ ತಂ ಸಮಾಯಾತಿ ವಿಭೀಷಣಃ ॥ ೩೯ ॥

ಗಾಯಂತಿ ಕಿನ್ನರಾ ರಾತ್ರೌ ಗಂಧರ್ವಾಶ್ಚ ಮನೋಹರಂ ।
ಪ್ರಣಾಮಂ ಕರ್ತುಮೀಶಂ ತಂ ಸಮಾಯಾತಿ ಚ ಮಾಧವಃ ॥ ೪೦ ॥

ದೃಷ್ಟ್ವಾ ಸಾಕ್ಷಾದ್ವಸಂತಂ ಚ ಸರ್ವೇಶಂ ಚಂದ್ರಶೇಖರಂ ।
ಜೀವನ್ಮುಕ್ತೋ ಭವೇದಂತೇ ಪ್ರಯಾತಿ ಹರಿಮಂದಿರಂ ॥ ೪೧ ॥

ದೀನನಾಥಂ ದಿನಕರಂ ಕೋಣಾರ್ಕೇ ಚೋತ್ತರಾಯಣೇ ।
ಉಪೋಷ್ಯ ದೃಷ್ಟ್ವಾ ಸಂಪೂಜ್ಯ ಕರೋತಿ ಜನ್ಮನಃ ಕ್ಷಯಂ ॥ ೪೨ ॥

ಕೃಷಿಕೋಷ್ಠೇ ಸುವಸನೇ ಕಲವಿಂಕೇ ವಸುಂಧರೇ ।
ವಿಸ್ಪಂದಕೇ ರಾಜಕೋಷ್ಠೇ ನಂದಕೇ ಪುಷ್ಪಭದ್ರಕೇ ॥ ೪೩ ॥

---

೩೯. ರಾತ್ರಿಕಾಲದಲ್ಲಿ ಸ್ವರ್ಗದಲ್ಲಿ ವಿದ್ಯಾಧರಸ್ತ್ರೀಯರು ರಾಮೇಶ್ವರನಿಗಾಗಿ ನರ್ತನಮಾಡುವರು. ವಿಭೀಷಣನು ರಾಮೇಶ್ವರನಿಗೆ ಭಕ್ತಿಪೂರ್ವಕವಾಗಿ ನಮಸ್ಕರಿಸಲೋಸ್ಕರ ಅಲ್ಲಿಗೆ ಬರುವನು.

೪೦. ರಾತ್ರಿಕಾಲದಲ್ಲಿ ಕಿಂನರರೂ ಗಂಧರ್ವರೂ ಮನೋಹರವಾಗಿ ಹಾಡುವರು. ಮಾಧವನೂ ಸಹ ಆ ರಾಮೇಶ್ವರನಿಗೆ ನಮಸ್ಕರಿಸಲೋಸುಗ ಅಲ್ಲಿಗೆ ಬರುವನು.

೪೧. ರಾಮಸೇತುವಿನಲ್ಲಿ ಸಾಕ್ಷಾತ್ತಾಗಿ ವಾಸಮಾಡುವ ಸರ್ವೇಶ್ವರನಾದ ಚಂದ್ರಶೇಖರನ ದರ್ಶನಮಾಡುವವನು ಜೀವನ್ಮುಕ್ತನಾಗಿ ಅಂತ್ಯಕಾಲದಲ್ಲಿ ಶ್ರೀಹರಿಯ ಮಂದಿರವಾದ ವೈಕುಂಠಕ್ಕೆ ತೆರಳುವನು.

೪೨. ಕೋಣಾರ್ಕಕ್ಷೇತ್ರದಲ್ಲಿ ಉತ್ತರಾಯಣ ಸಮಯದಲ್ಲಿ ದೀನನಾಥನಾದ ದಿನಕರ (ಸೂರ್ಯ) ನನ್ನು ನೋಡಿ ಉಪವಾಸದಿಂದ ಪೂಜೆಮಾಡುವವನು ಜನ್ಮಮೃತ್ಯುರಹಿತನಾಗುವನು.

೪೩–೪೪. ಕೃಷಿಕೋಷ್ಠ, ಸುವಸನ ಕಲವಿಂಕ ವಸುಂಧರ, ವಿಸ್ಪಂದಕ, ರಾಜಕೋಷ್ಠ ನಂದಕ, ಪುಷ್ಪಭದ್ರಕ ಮುಂತಾದ ಕ್ಷೇತ್ರಗಳಲ್ಲಿ ಪಾರ್ವತಿಯ ಪ್ರತಿಮೆ

ಪಾರ್ವತೀಪ್ರತಿಮಾಂ ದೃಷ್ಟ್ವಾ ಕಾರ್ತಿಕೇಯಂ ಗಣೇಶ್ವರಂ ।
ನಂದಿನಂ ಶಂಕರಂ ದೃಷ್ಟ್ವಾ ಕರೋತಿ ಜನ್ಮನಃ ಫಲಂ ॥ ೪೪ ॥

ಉಪೋಷ್ಯ ಪ್ರತಿಸಂಪೂಜ್ಯ ದೃಷ್ಟ್ವಾ ಸ್ತುತ್ವಾ ಚ ತೌ ನತಃ ।
ಪಾರಣಂ ಚ ದಧಿ ಪ್ರಾಶ್ಯ ಕರೋತಿ ಜನ್ಮನಃ ಫಲಂ ॥ ೪೫ ॥

ತ್ರಿಕೂಟೇ ಮಣಿಭದ್ರೇ ಚ ಪಶ್ಚಿಮೋದಧಿಸನ್ನಿಧೌ ।
ಸಮುಪೋಷ್ಯ ದಧಿ ಪ್ರಾಶ್ಯ ಮಾಂ ದೃಷ್ಟ್ವಾ ಮುಕ್ತಿಮಾಪ್ನುಯಾತ್ ॥

ಪ್ರತಿಮಾಸು ಮದೀಯಾಸು ಪಾರ್ವತೀಪ್ರತಿಮಾಸು ಚ ।
ಜೀವಂ ಸನ್ಯಸ್ಯ ಸಂಪೂಜ್ಯ ಕರೋತಿ ಜನ್ಮನಃ ಫಲಂ ॥ ೪೭ ॥

ಶಿವದುರ್ಗಾಲಯಂ ಕೃತ್ವಾ ಮದೀಯಂ ಚ ವಿಶೇಷತಃ ।
ಶಿವಸಂಸ್ಥಾಪನಂ ಕೃತ್ವಾ ಕರೋತಿ ಜನ್ಮನಃ ಕ್ಷಯಂ ॥ ೪೮ ॥

ಯನ್ನೂ ಕಾರ್ತಿಕೇಯ, ಗಣಪತಿ, ನಂದಿಕೇಶ್ವರ ಮತ್ತು ಶಂಕರನನ್ನೂ, ದರ್ಶನ ಮಾಡಿದವನು ತನ್ನ ಜನ್ಮದ ಸಾರ್ಥಕತೆಯನ್ನು ಹೊಂದುವನು.

೪೫. ಉಪವಾಸ ಮಾಡಿ ಪಾರ್ವತೀಪರಮೇಶ್ವರರ ದರ್ಶನಮಾಡಿ ಸ್ತುತಿಸಿ ನಮಸ್ಕರಿಸುವ ಮತ್ತು ಪಾರಣೆಗಾಗಿ ಮೊಸರನ್ನು ಸೇವಿಸುವ ಮನುಷ್ಯನು ಜನ್ಮ ಮೃತ್ಯುರಹಿತನಾಗುವನು.

೪೬. ತ್ರಿಕೂಟ ಮತ್ತು ಮಣಿಭದ್ರ ಪರ್ವತಗಳಲ್ಲೂ ಪಶ್ಚಿಮ ಸಮುದ್ರದ ಸಮೀಪದಲ್ಲೂ ಉಪವಾಸ ಮಾಡಿ ನನ್ನ ದರ್ಶನ ಪಡೆದನಂತರ ಪಾರಣೆಗಾಗಿ ಮೊಸರನ್ನು ಸೇವಿಸುವವರು ಮುಕ್ತಿಯನ್ನು ಹೊಂದುವರು.

೪೭. ನನ್ನ ಪ್ರತಿಮೆಗಳಲ್ಲಿಯೂ ಪಾರ್ವತಿಯ ಪ್ರತಿಮೆಗಳಲ್ಲಿಯೂ ಪ್ರಾಣ ಪ್ರತಿಷ್ಠಾಪನೆ ಮಾಡಿ ಪೂಜಿಸುವ ಮನುಜನು ಜನ್ಮ ಮೃತ್ಯುರಹಿತನಾಗಿ ಮುಕ್ತಿಯನ್ನು ಹೊಂದುವನು.

೪೮. ಶಿವ ಮತ್ತು ದುರ್ಗಿಯ ದೇವಸ್ಥಾನಗಳನ್ನು ವಿಶೇಷತಃ ನನ್ನ ದೇವಸ್ಥಾನವನ್ನು ಕಟ್ಟಿಸಿ ಪ್ರತಿಮೆಯನ್ನು ಪ್ರತಿಷ್ಠೆಮಾಡಿಸುವ ಮನುಜನು ಜನ್ಮಮೃತ್ಯುರಹಿತನಾಗುವನು.

ಪುಷ್ಪೋದ್ಯಾನಂ ಚ ಶಂಕುಂ ಚ ಸೇತುಂ ಖಾತಂ ಸರೋವರಂ ।
ವಿಪ್ರಸಂಸ್ಥಾಪನಂ ಕೃತ್ವಾ ಕರೋತಿ ಜನ್ಮನಃ ಫಲಂ ॥ ೪೯ ॥

ನ ಚ ವೇದಾಃ ಪುರಾಣಾನಿ ಬ್ರಹ್ಮಸಂಸ್ಥಾಪನಂ ಫಲಂ ।
ಜಾನಂತಿ ಸಂತೋ ಮುನಯಃ ಸುರಾ ವಿಪ್ರಾದಯಃ ಪಿತಃ ॥ ೫೦ ॥

ಗಣ್ಯಂತೇ ಪಾಂಸವೋ ಭೂಮೇರ್ಗಣ್ಯಂತೇ ವೃಷ್ಟಿಬಿಂದವಃ ।
ನ ಗಣ್ಯತೇ ವಿಧಾತ್ರಾಽಪಿ ವಿಪ್ರಸಂಸ್ಥಾಪನೇ ಫಲಂ ॥ ೫೧ ॥

ಕೃತ್ವೋಪಜೀವ್ಯಂ ವಿಪ್ರಸ್ಯ ಜೀವನ್ಮುಕ್ತೋ ಭವೇನ್ನರಃ ।
ಅಚಲಾಂ ಶ್ರಿಯಮಾಪ್ನೋತಿ ಪರಂ ಮುಕ್ತಿಚತುಷ್ಟಯಂ ॥ ೫೨ ॥

ಮದ್ದಾಸ್ಯಭಕ್ತಿಂ ಸ ಲಭೇದ್ವೈಕುಂಠೇ ಮೋದತೇ ಚಿರಂ ।
ನ ಹಿ ಪಾತೋ ಭವೇತ್ತಸ್ಯ ಯಥಾ ಮೇ ಪರಮಾತ್ಮನಃ ॥ ೫೩ ॥

---

೪೯. ಪುಷ್ಪೋದ್ಯಾನವನ್ನೂ, ಧ್ವಜಸ್ತಂಭವನ್ನೂ, ಸೇತುವೆಯನ್ನೂ, ಸರೋವರವನ್ನೂ ರಚಿಸಿ ಬ್ರಾಹ್ಮಣರಿಗೆ ದಾನಮಾಡುವ ಮನುಷ್ಯನು ತನ್ನ ಜನ್ಮದ ಸಾರ್ಥಕ್ಯವನ್ನು ಹೊಂದುವನು.

೫೦. ಎಲೈ ನಂದನೇ, ವೇದಪುರಾಣಗಳ ಪಠನೆಗಿಂತಲೂ ಬ್ರಾಹ್ಮಣರಿಗೆ ಸದ್ವಸ್ತುಗಳನ್ನು ದಾನಮಾಡುವುದರಿಂದ ವಿಶೇಷಫಲ ದೊರಕುವುದೆಂದು ಸತ್ಪುರುಷರೂ ಮುನಿಗಳೂ ಮತ್ತು ಸುರರೂ ಪ್ರತಿಪಾದಿಸಿರುವರು

೫೧. ಭೂಮಿಯ ಧೂಳಿಕಣಗಳನ್ನಾದರೂ ಎಣಿಸಬಹುದು ಮಳೆಯ ಹನಿಗಳನ್ನಾದರೂ ಎಣಿಸಬಹುದು. ಆದರೆ ವಿಪ್ರಸಂಸ್ಥಾಪನೆಯ ಫಲವನ್ನು ಬ್ರಹ್ಮನಿಂದಲೂ ಎಣಿಸಲಾಗುವುದಿಲ್ಲ.

೫೨. ಬ್ರಾಹ್ಮಣನಿಗೆ ಜೀವಿಕೆಯನ್ನು ಕಲ್ಪಿಸಿಕೊಟ್ಟವನು ಜೀವನ್ಮುಕ್ತನಾಗುವನಲ್ಲದೆ ಶಾಶ್ವತಸಂಪತ್ತನ್ನು ಪಡೆದು ಅಂತ್ಯಕಾಲದಲ್ಲಿ ಸಾಲೋಕ್ಯ ಸಾರೂಪ್ಯ ಸಾಮೀಪ್ಯ ಮತ್ತು ಸಾಯುಜ್ಯರೂಪವಾದ ಮುಕ್ತಿಯನ್ನು ಪಡೆಯುವನು.

೫೩. ಆ ಮನುಜನು ನನ್ನ ದಾಸ್ಯವನ್ನೂ ಭಕ್ತಿಯನ್ನೂ ಪಡೆದು ವೈಕುಂಠದಲ್ಲಿ ಚಿರಕಾಲ ಆನಂದದಿಂದಿರುವನಲ್ಲದೆ, ಪರಮಾತ್ಮನಾದ ನನ್ನಂತೆ ಅವನಿಗೂ ಎಂದೆಂದಿಗೂ ಚ್ಯುತಿಯಿರುವುದಿಲ್ಲ.

ಕುಮಾರೀಮಷ್ಟವರ್ಷೀಯಾಂ ಸುವಿಪ್ರಾಯ ದದಾತಿ ಯಃ ।
ಸಂಪೂಜ್ಯ ಸರ್ವಾಭರಣಾಂ ದುರ್ಗಾದಾನಫಲಂ ಲಭೇತ್ ॥ ೫೪ ॥

ಸರ್ವಂ ಸ್ವರ್ಗ್ಯಂ ಸಮಾಲೋಕ್ಯ ಬ್ರಹ್ಮಲೋಕೇಷು ಪೂಜಿತಃ ।
ಲಭತೇ ಮಮ ದಾಸ್ಯಂ ಚ ವೈಕುಂಠೇ ಮೋದತೇ ಚಿರಂ ॥ ೫೫ ॥

ವಿವಾಹದರ್ಶನೇ ಕೋಟಿಸ್ವರ್ಣದಾನಫಲಂ ಲಭೇತ್ ।
ಅಂತೇ ಸ್ವರ್ಗೇ ಪ್ರಯಾತ್ಯೇವಮಿಹೈವ ನಿಶ್ಚಲಾಂ ಶ್ರಿಯಂ ॥ ೫೬ ॥

ಯಃ ಸುವಿಪ್ರಮನಾಥಂ ಚ ದರಿದ್ರಂ ಚ ಸುಪಂಡಿತಂ ।
ದೃಷ್ಟ್ವಾ ಕುರ್ಯಾತ್ತದ್ವಿವಾಹಂ ಸ ಮೋಕ್ಷಂ ಲಭತೇ ಧ್ರುವಂ ॥ ೫೭ ॥

ಯಚ್ಛತ್ರಪಾದುಕಾದಾನಂ ಶಾಲಗ್ರಾಮಸ್ಯ ಯೋಷಿತಃ ।
ಕರೋತಿ ಭಕ್ತ್ಯಾ ಪುಣ್ಯಾಹೇ ಪೃಥ್ವೀದಾನಫಲಂ ಲಭೇತ್ ॥ ೫೮ ॥

---

೫೪. ಯಾವ ಮನುಜನು ಎಂಟುವರ್ಷದ ಹೆಣ್ಣುಮಗಳನ್ನು ಸರ್ವಾಭರಣ ಭೂಷಿತಳನ್ನಾಗಿ ಮಾಡಿ ಯೋಗ್ಯನಾದ ಬ್ರಾಹ್ಮಣನಿಗೆ ದಾನ ಮಾಡುವನೋ ಅವನು ದುರ್ಗಾದಾನದ ಫಲವನ್ನು ಪಡೆಯುವನು.

೫೫. ಅಲ್ಲದೆ ಸಮಸ್ತ ಸ್ವರ್ಗಸುಖವನ್ನೂ ಅನುಭವಿಸಿ ಬ್ರಹ್ಮಲೋಕದಲ್ಲಿ ಪೂಜಿತನಾಗಿ ವೈಕುಂಠದಲ್ಲಿ ನನ್ನ ದಾಸ್ಯವನ್ನು ಪಡೆದು ಚಿರಕಾಲ ಸಂತೋಷ ದಿಂದಿರುವನು.

೫೬. ಆ ರೀತಿಯಾದ ಕನ್ಯಾದಾನಮಾಡುವುದರಿಂದ ಕೋಟಿ ಸುವರ್ಣ ದಾನಮಾಡಿದ ಫಲವನ್ನು ಪಡೆಯುವುದಲ್ಲದೆ ಶಾಶ್ವತಸಂಪತ್ತನ್ನು ಪಡೆದು ಅಂತ್ಯ ಕಾಲದಲ್ಲಿ ಸ್ವರ್ಗವನ್ನು ಸೇರುವನು.

೫೭. ಯಾವನು ಅನಾಥನೂ, ದರಿದ್ರನೂ, ಪಂಡಿತನೂ ಆದ ಯೋಗ್ಯ ಬ್ರಾಹ್ಮಣನಿಗೆ ತನ್ನ ಕನ್ಯೆಯನ್ನು ಕೊಟ್ಟು ವಿವಾಹ ಮಾಡುವನೋ ಅವನಿಗೆ ಮೋಕ್ಷವು ಲಭಿಸುವುದರಲ್ಲಿ ಸಂಶಯವಿಲ್ಲ,

೫೮. ಯಾವನು ಶುಭದಿವಸದಲ್ಲಿ ಛತ್ರಿ, ಪಾದುಕೆ ಮತ್ತು ಸಾಲಿಗ್ರಾಮ ವನ್ನು ಕನ್ಯೆಯೊಡನೆ ಭಕ್ತಿಪೂರ್ವಕವಾಗಿ ದಾನ ಮಾಡುವನೋ ಅವನಿಗೆ ಪೃಥಿವೀ ದಾನದ ಫಲವು ಲಭಿಸುವುದರಲ್ಲಿ ಸಂಶಯವಿಲ್ಲ.

ಗಜದಾನೇ ಚ ತಲ್ಲೋಮಮಾನವರ್ಷಂ ಶ್ರುತೌ ಶ್ರುತಂ ।
ಚತುರ್ಗುಣಂ ಗಜೇಂದ್ರೇ ಚ ಮೋದತೇ ಮಮ ಮಂದಿರೇ ॥ ೫೯ ॥

ಗಜಾರ್ಧಂ ಶ್ವೇತತುರಗೇ ತದರ್ಧಂ ಚೇತರೇ ಪಿತಃ ।
ಗಜತುಲ್ಯಂ ಕೃಷ್ಣಗವಾಂ ದಾನೇ ಚ ತತ್ಫಲಂ ಲಭೇತ್ ॥ ೬೦ ॥

ತತ್ತುಲ್ಯಂ ಧೇನುದಾನೇ ಚ ಅರ್ಧಂ ಸಾಮಾನ್ಯಗೋಸ್ತಥಾ ।
ಲಭೇದ್ವತ್ಸಪ್ರಸೂತಾನಾಂ ದಾನೇ ದಾನೇ ಫಲಂ ವಿಭೋ ॥ ೬೧ ॥

ಭೂಮಿದಾನೇ ರೇಣುಮಾನವರ್ಷಸ್ಥಾನಂ ಚ ಮತ್ಪದೇ ।
ಜ್ಞಾನದಾನೇ ಮಹತ್ಪುಣ್ಯಂ ವೈಕುಂಠೇ ಮೋದತೇ ಚಿರಂ ॥ ೬೨ ॥

---

೫೯. ಸಾಮಾನ್ಯವಾದ ಆನೆಯೊಂದನ್ನು ದಾನಮಾಡುವುದರಿಂದ ಅದರ ಮೈಯಿನಲ್ಲಿರುವ ಲೋಮಗಳ ಸಂಖ್ಯೆಯಷ್ಟು ಕಾಲ ಸ್ವರ್ಗದಲ್ಲಿ ಸಂತೋಷ ಪಡುವನು. ಶ್ರೇಷ್ಠವಾದ ಆನೆಯನ್ನು ದಾನಮಾಡುವುದರಿಂದ ಅದರ ನಾಲ್ಕರಷ್ಟು ಫಲವನ್ನು ಹೊಂದುವನು.

೬೦. ಎಲೈ ಪೂಜ್ಯನಾದ ತಂದೆಯೇ, ಬಿಳೀ ಕುದುರೆಯನ್ನು ದಾನಮಾಡು ವುದರಿಂದ ಗಜದಾನದ ಅರ್ಧಫಲವನ್ನೂ, ಇತರವರ್ಣದ ಕುದುರೆಗಳನ್ನು ದಾನ ಮಾಡುವುದರಿಂದ ಅದರ ಅರ್ಧಫಲವನ್ನೂ ಮಾನವನು ಪಡೆಯುವನು. ಕಪಿಲ ಗೋವನ್ನು ದಾನಮಾಡುವುದರಿಂದ ಗಜದಾನಕ್ಕೆ ಸಮಾನವಾದ ಫಲವುದೊರಕುವುದು.

೬೧. ಎಳೆಗರುವಿನ ಹಸುವನ್ನು ದಾನಮಾಡುವುದರಿಂದ ಅದಕ್ಕೆ ಸಮಾನ ವಾದ ಫಲವು ದೊರಕುವುದು. ಸಾಮಾನ್ಯಗೋವನ್ನು ದಾನಮಾಡುವುದರಿಂದ ಅದರ ಅರ್ಧಫಲವೂ ಕರುಗಳನ್ನು ಹಾಕಿರುವ ಗೋವುಗಳನ್ನು ದಾನಮಾಡುವುದರಿಂದ ಅದಕ್ಕೆ ಉಚಿತವಾದ ಫಲವೂ ದೊರಕುವುದು.

೬೨. ಭೂಮಿದಾನ ಮಾಡುವವರು ಆ ಭೂಮಿಯ ಧೂಳಿಕಣಗಳಷ್ಟು ಕಾಲ ವೈಕುಂಠದಲ್ಲಿರುವರು. ಅದೇ ರೀತಿ ಪರಮಾತ್ಮಜ್ಞಾನವನ್ನು ಬೋಧಿಸುವ ಮನುಜನೂ ಸಹ ಮಹತ್ಪುಣ್ಯವನ್ನು ಪಡೆದು ಚಿರಕಾಲ ವೈಕುಂಠದಲ್ಲಿ ನೆಲೆಸುವನು

ಶ್ರಿಯಂ ಲಭೇತ್ಸ್ವರ್ಣದಾನೇ ರಾಜತ್ವಂ ರಜತೇನ ಚ ।
ಅನ್ನದಾನೇ ಫಲಂ ನಾಹಂ ಕಥಂ ಜಾನಾಮಿ ವೈ ಶ್ರುತಂ ॥ ೬೩ ॥

ಲಭತೇ ಸರ್ವದಾನಸ್ಯ ಫಲಂ ಬ್ರಾಹ್ಮಣಭೋಜನೇ ।
ಅನ್ನದಾನಾತ್ಪರಂ ದಾನಂ ನ ಭೂತಂ ನ ಭವಿಷ್ಯತಿ ॥ ೬೪ ॥

ನಾತ್ರ ಪಾತ್ರಪರೀಕ್ಷಾ ಸಾ ನ ಕಾಲನಿಯಮಃ ಕ್ವಚಿತ್ ।
ಅನ್ನದಾನೇ ಶುಭಂ ಪುಣ್ಯಂ ದಾತುಃ ಪಾತ್ರಂ ತ್ವಪಾತಕೀ ॥ ೬೫ ॥

ಅನ್ನದಾನಂ ಚ ಧನ್ಯಂ ಸ್ಯಾದ್ಭೂಮೌ ವೈಕುಂಠಹೇತುಕಂ ।
ವಸ್ತ್ರಂ ದದಾತಿ ವಿಪ್ರಾಯ ದರಿದ್ರಾಯ ಕುಟುಂಬಿನೇ ॥ ೬೬ ॥

ವಸ್ತ್ರಸೂತ್ರಮಾನವರ್ಷಂ ವೈಕುಂಠೇ ಮೋದತೇ ಚಿರಂ ।
ಸುರಮ್ಯೇ ಚಂದ್ರಲೋಕೇ ಚ ವಾರುಣೇ ಚ ತಥೈವ ಚ ॥ ೬೭ ॥

---

೬೩ ಸುವರ್ಣದಾನದಿಂದ ದಿವ್ಯಸಂಪತ್ತೂ, ರಜತ (ಬೆಳ್ಳಿ) ದಾನದಿಂದ ದೊರೆತನವೂ, ದೊರಕುವುದು. ಅನ್ನದಾನದ ಫಲವು ಇಷ್ಟೇ ಎಂದು ನಾನೇ ಹೇಳಲಾಗದಿರುವಾಗ ಶ್ರುತಿಯು ಹೇಗೆತಾನೇ ಹೇಳೀತು ?

೬೪. ಬ್ರಾಹ್ಮಣರಿಗೆ ಅನ್ನದಾನಮಾಡುವುದರಿಂದ ಸಕಲ ದಾನಗಳ ಫಲವೂ ದೊರಕುವುದು. ಅನ್ನದಾನಕ್ಕಿಂತ ಮೇಲಾದ ದಾನವು ಭೂತಕಾಲದಲ್ಲಿರಲಿಲ್ಲ. ಭವಿಷ್ಯತ್ತಿನಲ್ಲಿರುವುದಿಲ್ಲ.

೬೫. ಅನ್ನದಾನದ ವಿಷಯದಲ್ಲಿ ಪಾತ್ರಾಪಾತ್ರ ವಿವೇಚನೆಯಾಗಲೀ ಕಾಲ ನಿಯಮವಾಗಲೀ ಇರುವುದಿಲ್ಲ. ಅನ್ನದಾನಮಾಡುವುದರಿಂದ ದಾನಿಗೆ ವಿಶೇಷ ಪುಣ್ಯಬರುವುದಲ್ಲದೆ ಅವನ ಪಾಪಗಳು ನಾಶವಾಗುವುವು.

೬೬-೬೭. ಅನ್ನದಾನವು ವೈಕುಂಠಪ್ರದವಾದುದರಿಂದ ಭೂಮಿಯಲ್ಲಿ ಅದೇ ಶ್ರೇಷ್ಠವಾದುದು. ದರಿದ್ರನೂ ಸಂಸಾರಿಯೂ ಆದ ಬ್ರಾಹ್ಮಣನಿಗೆ ವಸ್ತ್ರದಾನ ಮಾಡುವವನು ವಸ್ತ್ರದಲ್ಲಿರುವ ದಾರಗಳ ಸಂಖ್ಯೆಯಷ್ಟು ಕಾಲ ವೈಕುಂಠದಲ್ಲಿ ಸಂತೋಷದಿಂದಿರುವನು. ಅದೇ ರೀತಿಯಲ್ಲಿ ರಮ್ಯವಾದ ಚಂದ್ರಲೋಕದಲ್ಲಿಯೂ, ವರುಣಲೋಕದಲ್ಲಿಯೂ ಸುಖದಿಂದಿರುವನು.

ಕೃತ್ವಾ ಲೋಹಪ್ರದೀಪಂ ಚ ಸ್ವರ್ಣವರ್ತಿಸಮನ್ವಿತಂ ।
ದತ್ವಾ ಘೃತಪ್ರದೀಪಂ ಚ ಹರಯೇ ಪರಮಾತ್ಮನೇ ॥ ೬೮ ॥

ಅಂಧಕಾರಂ ಚ ನ ಗೃಹಂ ಯಮದೂತಂ ಯಮಂ ತಥಾ ।
ನ ಹಿ ಪಶ್ಯತಿ ದಾತಾ ಚ ಪ್ರಯಾತಿ ಮಮ ಮಂದಿರಂ ॥ ೬೯ ॥

ಬ್ರಾಹ್ಮಣಾಯ ಚ ದತ್ವೈವ ನ ಯಾತಿ ಯಮಯಾತನಾಂ ।
ದಿವ್ಯವರ್ಷಸಹಸ್ರಂ ಚ ಮೋದತೇ ಶಕ್ರಮಂದಿರೇ ॥ ೭೦ ॥

ಆಸನಂ ಲಭತೇ ಸ್ವರ್ಗೇ ವಸ್ತುಮಾನಾನುರೂಪತಃ ।
ಉತ್ತಮಂ ಲಕ್ಷವರ್ಷಂ ಚ ತದರ್ಧಂ ಚೇತರೇ ವ್ರಜೇತ್ ॥ ೭೧ ॥

ತಾಂಬೂಲೇನ ಲಭೇದ್ಭೋಗಂ ಸ್ವರ್ಗೇ ವರ್ಷಶತಂ ವ್ರಜೇತ್ ।
ಮಾಲ್ಯದಾನೇ ಪ್ರಿಯಂ ಸ್ವರ್ಗಂ ವಸ್ತುಪಾತ್ರಾನುರೂಪತಃ ॥ ೭೨ ॥

೬೮-೬೯. ಶ್ರೀಹರಿಗೆ ಸುವರ್ಣವರ್ತಿ (ಬತ್ತಿ) ಯೊಡಗೂಡಿದ ಲೋಹ ಪ್ರದೀಪವನ್ನೂ ತುಪ್ಪದ ದೀಪವನ್ನೂ ಭಕ್ತಿಯಿಂದ ಅರ್ಪಿಸುವ ಮನುಷ್ಯನು ಅಂಧ ಕಾರಮಯವಾದ ಯಮನ ಮಂದಿರವನ್ನಾಗಲೀ ಯಮ ಅಥವಾ ಯಮದೂತ ರನ್ನಾಗಲೀ ದರ್ಶನ ಮಾಡುವಂತಿಲ್ಲ. ಆ ಭಕ್ತನು ನನ್ನ ಮಂದಿರವಾದ ವೈಕುಂಠಕ್ಕೆ ಬರುವನು.

೭೦. ಬ್ರಾಹ್ಮಣನಿಗೆ ದೀಪದಾನ ಮಾಡಿದವನು ಯಮನ ಬಾಧೆಗೆ ಒಳ ಗಾಗುವುದಿಲ್ಲ. ದಿವ್ಯಸಹಸ್ರವರ್ಷಗಳಕಾಲ ಇಂದ್ರನ ಭವನದಲ್ಲಿ ಸುಖದಿಂದಿರುವನು.

೭೧. ತಾವು ದಾನಮಾಡಿದ ವಸ್ತುವಿನ ಯೋಗ್ಯತೆಗೆ ತಕ್ಕಂತೆ ಸ್ವರ್ಗದಲ್ಲಿ ಸ್ಥಾನವನ್ನು ಹೊಂದುವರು. ಉತ್ತಮವಸ್ತುವನ್ನು ದಾನಮಾಡಿದವರು ಲಕ್ಷವರ್ಷ ಗಳ ಕಾಲವೂ ಸಾಮಾನ್ಯ ವಸ್ತುವನ್ನು ದಾನಮಾಡಿದವರು ಅದರ ಅರ್ಧ ಪರಿಮಾಣ ದಷ್ಟು ವರ್ಷಗಳ ಕಾಲವೂ ಸ್ವರ್ಗದಲ್ಲಿ ಸುಖವಾಗಿರುವರು.

೭೨. ತಾಂಬೂಲದಾನಮಾಡುವುದರಿಂದ ಸ್ವರ್ಗದಲ್ಲಿ ನೂರುವರ್ಷಗಳಕಾಲ ಸುಖವಾಗಿರುವನು. ಮಾಲ್ಯದಾನಮಾಡುವುದರಿಂದ ಧಾನ್ಯದ ವಸ್ತು ಮತ್ತು ಪಾತ್ರಕ್ಕೆ ಅನುಗುಣವಾದ ಸ್ವರ್ಗವು ಲಭಿಸುವುದು.

ಫಲದಾನಫಲಂ ಸ್ವರ್ಗಂ ಲಭತೇ ನಾತ್ರ ಸಂಶಯಃ ।
ಸಮಾನ್ಯ ಶಯ್ಯಾದಾನೇನ ಸ್ವರ್ಗಂ ವರ್ಷಶತಂ ವ್ರಜೇತ್ ॥ ೭೩ ॥

ಚತುರ್ಗುಣಂ ಪ್ರಕೃಷ್ಟಾನಾಂ ಗುಣಲಕ್ಷಂ ವಿಲಕ್ಷಣೇ ।
ಅನಾಥಾಯ ಸುವಿಪ್ರಾಯ ಯದಿ ಗೇಹಂ ಪ್ರದೀಯತೇ ॥ ೭೪ ॥
ಅತ್ರೈವ ಮಾನವರ್ಷಂ ಚ ಶಕ್ರಲೋಕೇ ಮಹೀಯತೇ ।

ದೃಷ್ಟ್ವಾ ಬಭುಕ್ಷಿತಂ ವಿಪ್ರಮನ್ನಂ ತಸ್ಮೈ ಪ್ರದೀಯತೇ ।
ಅಚಲಾಂ ಶ್ರಿಯಮಾಪ್ನೋತಿ ಪುತ್ರಪೌತ್ರವಿವರ್ಧಿನೀಂ ॥ ೭೫ ॥

ವ್ರಜನಾಥ ವ್ರಜಂ ಗತ್ವಾ ವ್ರಜಭೂಮೌ ವ್ರಜಾಧುನಾ ।
ವ್ರಜ ಭೋಜಯ ವಿಪ್ರಾಂಶ್ಚ ವ್ರಜ ಸರ್ವಂ ವ್ರಜೇವ್ರಜೇ ॥ ೭೬ ॥

ಗೋಕುಲೇ ಗೋಕುಲೇ ವತ್ಸ ವಸ ವತ್ಸ ನಿರಾಕುಲೇ ।
ವ್ಯಾಕುಲಾನಾಂ ಗೋಕುಲಾನಾಂ ಸಂಕುಲೇ ಚ ವ್ರಜೇ ವ್ರಜೇ ॥ ೭೭ ॥

---

೭೩. ಫಲದಾನಮಾಡುವುದರಿಂದ ಸ್ವರ್ಗಫಲದೊರಕುವುದರಲ್ಲಿ ಸಂಶಯವಿಲ್ಲ. ಸಾಮಾನ್ಯವಾದ ಹಾಸಿಗೆಯನ್ನು ದಾನಮಾಡುವುದರಿಂದ ನೂರುವರ್ಷಗಳ ಕಾಲ ಸ್ವರ್ಗದಲ್ಲಿ ಸುಖವಾಗಿರುವರು.

೭೪-೭೫. ಪ್ರಶಸ್ತವಾದ ಶಯ್ಯಾದಾನದಿಂದ ಅದರ ನಾಲ್ಕರಷ್ಟು ಫಲವನ್ನೂ ವಿಶೇಷ ಲಕ್ಷಣದಿಂದ ಕೂಡಿದ ಶಯ್ಯೆಯನ್ನು ಕೊಡುವುದರಿಂದ ಲಕ್ಷದಷ್ಟು ಫಲವನ್ನೂ ಪಡೆಯುವರು. ಅನಾಥನಾದ ಬ್ರಾಹ್ಮಣನಿಗೆ ಗೃಹದಾನ ಮಾಡಿದರೆ ಅಸಂಖ್ಯ ವರ್ಷಗಳ ಕಾಲ ಇಂದ್ರಲೋಕದಲ್ಲಿ ದಾನಿಯು ಸುಖವಾಗಿರುವನು. ಹಸಿವಿನಿಂದ ಪೀಡಿತನಾದ ಬ್ರಾಹ್ಮಣನಿಗೆ ಅನ್ನದಾನಮಾಡುವುದರಿಂದ ಪುತ್ರಪೌತ್ರಾಭಿವೃದ್ಧಿಯುಂಟಾಗುವುದಲ್ಲದೆ ಶಾಶ್ವತವಾದ ಸಂಪತ್ಸಮೃದ್ಧಿಯುಂಟಾಗುವುದು.

೭೬. ಎಲೈ ವ್ರಜೇಶ್ವರನಾದ ನಂದನೇ, ನೀನು ಗೋಕುಲಕ್ಕೆ ಹಿಂತಿರುಗಿ, ಬ್ರಾಹ್ಮಣ ಸಂತರ್ಪಣೆಮಾಡಿ ವ್ರಜನಿವಾಸಿಗಳನ್ನೆಲ್ಲ ಆನಂದಗೊಳಿಸು.

೭೭. ಎಲೈ ನಂದಗೋಪನೇ, ನಿರಾಕುಲವಾದ ಗೋಕುಲದಲ್ಲಿ ವ್ಯಾಕುಲವಾಗಿರುವ ಗೋಪಸಂಕುಲವನ್ನು ಸಮಾಧಾನಪಡಿಸಿ ನೆಮ್ಮದಿಯಿಂದಿರು.

ಏತತ್ತೇ ಕಥಿತಂ ನಂದ ಸಾನಂದಂ ಪುಣ್ಯವರ್ಧನಂ ।
ಸುಸ್ವಪ್ನದರ್ಶನಂ ಪುಣ್ಯಂ ಯದಿ ನೀಚಂ ನ ವಕ್ತಿ ಚ ॥ ೭೮ ॥

ಕಾಶ್ಯಪಂ ದುರ್ಭಗಂ ನೀಚಂ ಶತ್ರುಮಜ್ಞಾನಿನಂ ಸ್ತ್ರಿಯಂ ।
ತ್ಯಕ್ತ್ವಾ ರಾತ್ರಿಂ ಚ ದಿವಸೇ ವಕ್ತಿ ವಿಪ್ರಂ ಸುಪಂಡಿತಂ ॥ ೭೯ ॥

ದೇವಾಲಯೇ ಚ ದೇವಂ ವಾಪ್ಯಶ್ವತ್ಥ ತುಲಸೀವಟಂ ।
ಉಕ್ತ್ವಾ ತದ್ದ್ವಿಗುಣಂ ಪುಣ್ಯಮಪ್ರಕಾಶ್ಯಂ ಚತುರ್ಗುಣಂ ॥ ೮೦ ॥

ಸುಸ್ವಪ್ನದರ್ಶನೇ ಪ್ರಾಜ್ಞೋ ಗಂಗಾಸ್ನಾನಫಲಂ ಲಭೇತ್ ।
ಅರ್ಥಂ ವಿತ್ತಂ ಚ ಭಾರ್ಯಾಂ ಚ ಭೂಮಿಂ ಪುತ್ರಂ ಲಭೇಚ್ಚ ಸಃ ॥ ೮೧ ॥

---

೭೮. ಎಲೈ ನಂದನೇ, ಆನಂದಕರವೂ, ಪುಣ್ಯವರ್ಧಕವೂ ಆದ ವಿಷಯವನ್ನು ನಿನಗೆ ಹೇಳಿರುವೆನು. ನೀಚ ನುಡಿಗಳನ್ನಾಡದಿದ್ದರೆ ಸುಸ್ವಪ್ನವನ್ನು ಕಂಡ ಪುಣ್ಯವು ಮನುಜನಿಗೆ ಇದನ್ನು ಕೇಳಿದುದರಿಂದ ಲಭಿಸುವುದು.

೭೯. (ಕಾಶ್ಯಪನಿಗೂ) ದುಷ್ಟನಿಗೂ, ನೀಚನಿಗೂ ಅಜ್ಞಾನಿಯಾದ ಶತ್ರುವಿಗೂ, ಹೆಂಗಸಿಗೂ ಈ ಪುಣ್ಯಪಾಪಗಳ ಬೋಧನೆಯನ್ನು ಪಂಡಿತನಾದವನು ಹಗಲು ಹೊತ್ತಿನಲ್ಲಿ ಮಾಡಬೇಕು.

೮೦. ದೇವಾಲಯದಲ್ಲಿ ದೇವಸನ್ನಿಧಿಯಲ್ಲಾಗಲೀ ಅಶ್ವತ್ಥ, ತುಳಸೀ ಮತ್ತು ವಟವೃಕ್ಷದ ಸಮೀಪದಲ್ಲಾಗಲೀ ಕುಳಿತು ಇದನ್ನು ಬೋಧಿಸುವುದರಿಂದ ದ್ವಿಗುಣ ಚತುರ್ಗುಣ ಪುಣ್ಯಗಳು ಲಭಿಸುವುವು.

೮೧. ಸುಸ್ವಪ್ನವನ್ನು ಕಂಡ ಪ್ರಾಜ್ಞನು ಗಂಗಾ ಸ್ನಾನಮಾಡಿದ ಪುಣ್ಯಭಾಗಿಯಾಗುವನು. ಅಲ್ಲದೆ ಯಥೇಚ್ಛದ್ರವ್ಯವನ್ನೂ, ಯೋಗ್ಯಳಾದ ಹೆಂಡತಿಯನ್ನೂ, ಭೂಮಿಯನ್ನೂ, ಸತ್ಪುತ್ರನನ್ನೂ, ಪಡೆಯುವುದರಲ್ಲಿ ಸಂಶಯವಿಲ್ಲ.

ಮೋಕ್ಷಂ ಚ ಪರಮೈಶ್ವರ್ಯಂ ಲಭತೇ ಸರ್ವವಾಂಛಿತಂ ।
ಇತ್ಯೇವಂ ಕಥಿತಂ ತಾತ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೮೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣ ನಾರದಸಂವಾದೇ
ನಂದಾದಿಶೋಕಪ್ರಮೋಚನಂ ನಾಮ
ಷಟ್‌ಸಪ್ತತಿತಮೋಽಧ್ಯಾಯಃ

---

೮೨. ಮೋಕ್ಷವನ್ನೂ, ಎಲ್ಲರೂ ಬಯಸುವ ಪರಮೈಶ್ವರ್ಯವನ್ನೂ ಪಡೆಯುವನು. ಎಲೈ ತಂದೆಯೇ ಈ ರೀತಿಯಾಗಿ ಪುಣ್ಯಾಪುಣ್ಯಗಳ ಸ್ವರೂಪವನ್ನು ನಿರೂಪಿಸಿದೆನು. ಇನ್ನೇನನ್ನು ಕೇಳಲು ನಿನಗಿಚ್ಛೆಯಿದೆ?

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀ ಕೃಷ್ಣಜನ್ಮಖಂಡದ ಉತ್ತರಾರ್ಧದ
ನಾರಾಯಣ ನಾರದ ಸಂವಾದದಲ್ಲಿ ಎಪ್ಪತ್ತಾರನೆಯ
ಅಧ್ಯಾಯವು ಮುಗಿದುದು.

ಎಪ್ಪತ್ತಾರನೆಯ ಅಧ್ಯಾಯದ ಸಾರಾಂಶ

"ಜಾತಾ ಜಾತೌ ಯದುತ್ಕೃಷ್ಟಂ ತದ್ರತ್ನಮಭಿಧೀಯತೇ" ಎಂಬಂತೆ ಪ್ರತಿಯೊಂದು ಜಾತಿಯಲ್ಲೂ ಇರುವ ಶ್ರೇಷ್ಠ ವಸ್ತುಗಳೆಲ್ಲ ರತ್ನವೆನಿಸಿಕೊಳ್ಳುವುವು. ಅಂಥ ರತ್ನಗಳ ದರ್ಶನದಿಂದ ಪುಣ್ಯವು ಲಭಿಸುವುದು. ಅದೇ ರೀತಿ ತೀರ್ಥಕ್ಷೇತ್ರಗಳ ದರ್ಶನದಿಂದಲೂ ಮನಸ್ಸಿಗೆ ಪ್ರಸನ್ನತೆಯನ್ನುಂಟುಮಾಡುವ ವಸ್ತುಗಳ ದರ್ಶನದಿಂದಲೂ ಪುಣ್ಯಪ್ರಾಪ್ತಿಯಾಗುವುದು. ಕನ್ಯಾದಾನ, ಗೋದಾನ, ಭೂದಾನ, ಸುವರ್ಣದಾನ ಮುಂತಾದ ದಾನಗಳಿಂದಲೂ ಸತ್ಪುಣ್ಯಲಭಿಸುವುದು. ಮನಸ್ಸಿಗೆ ವ್ಯಥೆಯನ್ನುಂಟುಮಾಡುವ ವಸ್ತುಗಳ ದರ್ಶನದಿಂದ ಪಾಪವು ಸಂಘಟಿಸುವುದು. ದರ್ಶನೀಯ ಮತ್ತು ಅದರ್ಶನೀಯವಾದ ವಸ್ತುಗಳ ವಿವರವು ಈ ಅಧ್ಯಾಯದಲ್ಲಿ ತಿಳಿದುಬರುತ್ತದೆ.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಸಪ್ತಸಪ್ತತಿತಮೋಽಧ್ಯಾಯಃ ॥

॥ ನಂದ ಉವಾಚ ॥

ಕೇನ ಸ್ವಪ್ನೇನ ಕಿಂ ಪುಣ್ಯಂ ಕೇನ ಮೋಕ್ಷೋ ಭವೇತ್ಸುಖಂ ।
ಕೋಽಪಿ ಕೋಽಪಿ ಚ ಸುಸ್ವಪ್ನಸ್ತತ್ಸರ್ವಂ ಕಥಯ ಪ್ರಭೋ ॥ ೧ ॥

॥ ಶ್ರೀ ಭಗವಾನುವಾಚ ॥

ವೇದೇಷು ಸಾಮವೇದಶ್ಚ ಪ್ರಶಸ್ತಃ ಸರ್ವಕರ್ಮಸು ।
ತಥೈವ ಕಣ್ವಶಾಖಾಯಾಂ ಪುಣ್ಯಕಾಂಡೇ ಮನೋಹರೇ ॥ ೨ ॥

ಸ ವ್ಯಕ್ತೋ ಯಶ್ಚ ದುಃಸ್ವಪ್ನಃ ಶಶ್ವತ್ಪುಣ್ಯಫಲಪ್ರದಃ ।
ತತ್ಸರ್ವಂ ನಿಖಿಲಂ ತಾತ ಕಥಯಾಮಿ ನಿಶಾಮಯ ॥ ೩ ॥

ಎಪ್ಪತ್ತೇಳನೆಯ ಅಧ್ಯಾಯ.

೧. ನಂದಗೋಪ :—ಎಲೈ ಸರ್ವೇಶ್ವರನಾದ ಶ್ರೀ ಕೃಷ್ಣನೇ, ಯಾವ [illegible] ಲಭಿಸುವುದು ? ಒಳ್ಳೆಯ ಕನಸೆಂಬುದಾವುದು ? ದಯವಿಟ್ಟು ವಿವರಿಸು.

೨-೩. ಶ್ರೀ ಭಗವಾನ್ :—ವೇದಗಳಲ್ಲಿ ಸಾಮವೇದವು ಸಕಲ ಪುಣ್ಯಕರ್ಮಗಳನ್ನು ವಿವರಿಸತಕ್ಕದ್ದಾಗಿರುವುದು. ಸಾಮವೇದದ ಕಣ್ವಶಾಖೆಯಲ್ಲಿ ಮನೋಹರವಾದ ಪುಣ್ಯಕಾಂಡದಲ್ಲಿ ಯಾವುದು ದುಃಸ್ವಪ್ನ, ಯಾವುದು ಪುಣ್ಯಫಲದಾಯಕವಾದ ಶುಭಸ್ವಪ್ನ ಎಂಬುದು ವಿವೃತವಾಗಿರುವುದು. ಎಲೈ ತಾತನೇ, ಅದೆಲ್ಲವನ್ನೂ ನಾನು ಹೇಳುವೆನು. ಸಾವಧಾನದಿಂದ ಕೇಳು

ಸ್ವಪ್ನಾಧ್ಯಾಯಂ ಪ್ರವಕ್ಷ್ಯಾಮಿ ಬಹುಪುಣ್ಯ ಫಲಪ್ರದಂ ।
ಸ್ವಪ್ನಾಧ್ಯಾಯಂ ನರಃ ಶ್ರುತ್ವಾ ಗಂಗಾಸ್ನಾನಫಲಂ ಲಭೇತ್ ॥ ೪ ॥

ಸ್ವಪ್ನಸ್ತು ಪ್ರಥಮೇ ಯಾಮೇ ಸಂವತ್ಸರಫಲಪ್ರದಃ ।
ದ್ವಿತೀಯೇ ಚಾಷ್ಟಭಿರ್ಮಾಸೈಸ್ತ್ರಿಭಿರ್ಮಾಸೈಸ್ತೃತೀಯಕೇ ॥ ೫ ॥

ಚತುರ್ಥೇ ಚಾರ್ಧಮಾಸೇನ ಸ್ವಪ್ನಃ ಸ್ಯಾತ್ಫಲಪ್ರದಃ ।
ದಶಾಹೇ ಫಲದಃ ಸ್ವಪ್ನೋಽಪ್ಯರುಣೋದಯ ದರ್ಶನೇ ॥ ೬ ॥

ಪ್ರಾತಃ ಸ್ವಪ್ನಶ್ಚ ಫಲದಸ್ತತ್ಕ್ಷಣಂ ಯದಿ ಬೋಧಿತಃ ।
ದಿನೇ ಮನಸಿ ಯದ್ದೃಷ್ಟಂ ತತ್ಸರ್ವಂ ಚ ಲಭೇದ್ಧ್ರುವಂ ॥ ೭ ॥

ಚಿಂತಾವ್ಯಾಧಿಸಮಾಯುಕ್ತೋ ನರಃ ಸ್ವಪ್ನಂ ಚ ಪಶ್ಯತಿ ।
ತತ್ಸರ್ವಂ ನಿಷ್ಫಲಂ ತಾತ ಪ್ರಯಾತ್ಯೇವ ನ ಸಂಶಯಃ ॥ ೮ ॥

---

೪. ವಿಶೇಷ ಪುಣ್ಯಫಲವನ್ನು ಕೊಡುವ ಸ್ವಪ್ನಾಧ್ಯಾಯವನ್ನು ವಿವರಿಸುವೆನು. ಈ ಸ್ವಪ್ನಾಧ್ಯಾಯವನ್ನು ಕೇಳುವ ಮನುಷ್ಯನು ಗಂಗಾಸ್ನಾನಮಾಡಿದ ಫಲಕ್ಕೆ ಪಾತ್ರನಾಗುವನು.

೫. ಮೊದಲನೆಯ ಜಾವದಲ್ಲಿ ಕಂಡ ಕನಸು ಒಂದು ವರ್ಷದಲ್ಲಿ ಫಲ ಕೊಡತಕ್ಕದ್ದಾಗಿಯೂ, ಎರಡನೆಯ ಜಾವದಲ್ಲಿ ಕಂಡ ಕನಸು ಎಂಟು ತಿಂಗಳಲ್ಲಿ ಫಲದಾಯಕವಾಗಿಯೂ, ಮೂರನೆಯ ಜಾವದಲ್ಲಿ ಕಂಡ ಕನಸು ಮೂರು ತಿಂಗಳಲ್ಲಿ ಫಲಪ್ರದವಾಗಿಯೂ ಇರುವುದು.

೬. ನಾಲ್ಕನೆಯ ಜಾವದ ಕನಸು ಅರ್ಧತಿಂಗಳಿನಲ್ಲಿಯೇ ಫಲವನ್ನು ಕೊಡುವುದು. ಅರುಣೋದಯ ಸಮಯದಲ್ಲಿ ಕಂಡ ಕನಸು ಹತ್ತು ದಿವಸಗಳಲ್ಲಿಯೇ ಫಲವನ್ನು ಕೊಡುವುದು.

೭. ಹಗಲಿನಲ್ಲಿ ಕನಸನ್ನು ಕಂಡಕೂಡಲೇ ಎಚ್ಚರವಾದರೆ, ಕನಸಿನಲ್ಲಿ ಮನಸ್ಸಿಗೆ ಗೋಚರವಾದ ವಿಷಯವು ಆ ದಿವಸವೇ ಫಲದಾಯಕವಾಗುವುದರಲ್ಲಿ ಸಂಶಯವಿಲ್ಲ.

೮. ಮನಸ್ಸಿನಲ್ಲಿ ಚಿಂತೆಯಿರುವಾಗಲೂ, ರೋಗಗ್ರಸ್ತನಾದಾಗಲೂ ಮನುಜನು ಕನಸ್ಸನ್ನು ಕಂಡರೆ ಆ ಕನಸ್ಸೆಲ್ಲವೂ ನಿಷ್ಫಲವಾಗುವುದರಲ್ಲಿ ಸಂಶಯವಿಲ್ಲ.

ಜಡೋ ಮೂತ್ರಪುರೀಷೇಣ ಪೀಡಿತಶ್ಚ ಭಯಾಕುಲಃ ।
ದಿಗಂಬರೋ ಮುಕ್ತಕೇಶೋ ನ ಲಭೇತ್ಸ್ವಪ್ನಜಂ ಫಲಂ ॥ ೯ ॥

ದೃಷ್ಟ್ವಾ ಸ್ವಪ್ನಂ ಚ ನಿದ್ರಾಲುರ್ಯದಿ ನಿದ್ರಾಂ ಪ್ರಯಾತಿ ಚ ।
ವಿಮೂಢೋ ವಕ್ತಿ ಚೇದ್ರಾತ್ರೌ ನ ಲಭೇತ್ಸ್ವಪ್ನಜಂ ಫಲಂ ॥ ೧೦ ॥

ಉಕ್ತ್ವಾ ಕಾಶ್ಯಪಗೋತ್ರಂ ಚ ವಿಪತ್ತಿಂ ಲಭತೇ ಧ್ರುವಂ ।
ದುರ್ಗತೇ ದುರ್ಗತಿಂ ಯಾತಿ ನೀಚೇ ವ್ಯಾಧಿಂ ಪ್ರಯಾತಿ ಚ ॥ ೧೧ ॥

ಶತ್ರೌ ಭಯಂ ಚ ಲಭತೇ ಮೂರ್ಖೇ ಚ ಕಲಹಂ ಲಭೇತ್ ।
ಕಾಮಿನ್ಯಾಂ ಧನಹಾನಿಃ ಸ್ಯಾದ್ರಾತ್ರೌ ಚೋರಭಯಂ ಭವೇತ್ ॥ ೧೨ ॥

ನಿದ್ರಾಯಾಂ ಲಭತೇ ಶೋಕಂ ಪಂಡಿತೇ ವಾಂಛಿತಂ ಫಲಂ ।
ನ ಪ್ರಕಾಶ್ಯಶ್ಚ ಸ ಸ್ವಪ್ನಃ ಪಂಡಿತೈಃ ಕಾಶ್ಯಪೇ ವ್ರಜ ॥ ೧೩ ॥

---

೯. ಜಡನೂ, ಮಲಮೂತ್ರಗಳಿಂದ ಪೀಡಿತನೂ, ಭಯಾಕುಲನೂ, ದಿಗಂಬರನೂ, ಕೆದರಿದ ತಲೆಗೂದಲುಳ್ಳವನೂ ಆದ ಮನುಜನು ಕಂಡ ಕನಸಿನ ಫಲವನ್ನು ಹೊಂದುವುದಿಲ್ಲ.

೧೦. ನಿದ್ರಾಪೀಡಿತನಾದವನು ಕನಸನ್ನು ಕಂಡು ಪುನಃ ನಿದ್ರಿಸಲು ತೊಡಗಿದರೆ ಮತ್ತು ಕನಸಾಯಿತೆಂದು ರಾತ್ರಿಯಲ್ಲಿ ಹೇಳಿದರೆ ಅವನು ಆ ಸ್ವಪ್ನದ ಫಲವನ್ನು ಹೊಂದುವುದಿಲ್ಲ.

೧೧ ಕನಸಿನಲ್ಲಿ ಕಾಶ್ಯಪ ಗೋತ್ರೋಚ್ಚಾರಣೆ ಮಾಡಿದವನು ವಿಪತ್ತನ್ನು ಹೊಂದುವನು. ಕನಸಿನಲ್ಲಿ ಬಡತನವನ್ನು ಕಂಡವನು ಬಡವನಾಗಿಯೂ, ನೀಚ ವೃತ್ತಿಯಲ್ಲಿದ್ದವನು ರೋಗಿಯಾಗಿಯೂ ವ್ಯಥೆಪಡುವನು.

೧೨. ಕನಸಿನಲ್ಲಿ ಶತ್ರುವನ್ನು ಕಂಡವನು ಭಯಗ್ರಸ್ತನಾಗಿಯೂ, ಮೂರ್ಖನನ್ನು ನೋಡಿದವನು ಕಲಹ ಜೀವಿಯಾಗಿಯೂ, ದುಷ್ಟಸ್ತ್ರೀದರ್ಶನದಿಂದ ಧನಹೀನನಾಗಿಯೂ, ವ್ಯಥೆಪಡುವನು. ರಾತ್ರಿಯ ಕಾಲದಲ್ಲಿ ಕೆಟ್ಟಕನಸನ್ನು ಕಾಣುವುದರಿಂದ ಚೋರಭೀತಿಯುಂಟಾಗುವುದು.

೧೩. ನಿದ್ರಾವಸ್ಥೆಯಲ್ಲಿಯೇ ಕನಸನ್ನು ಕಾಣುವುದರಿಂದ ಶೋಕವುಂಟಾಗುವುದು. ಕನಸನ್ನು ಪಂಡಿತನಿಗೆ ಹೇಳುವುದರಿಂದ ಇಷ್ಟಾರ್ಥವು ಲಭಿಸುವುದು. ಎಲೈ ನಂದನೇ, ಪಂಡಿತನಾದವನು ಕಾಶ್ಯಪಗೋತ್ರೋತ್ಪನ್ನನಿಗೆ ತನ್ನ ಸ್ವಪ್ನವನ್ನು ಹೇಳಬಾರದು.

ಗವಾಂ ಚ ಕುಂಜರಾಣಾಂ ಚ ಹಯಾನಾಂ ಚ ವ್ರಜೇಶ್ವರ ।
ಪ್ರಾಸಾದಾನಾಂ ಚ ಶೈಲಾನಾಂ ವೃಕ್ಷಾಣಾಂ ಚ ತಥೈವ ಚ ॥ ೧೪ ॥

ಆರೋಹಣಂ ಚ ಧನದಂ ಭೋಜನಂ ರೋದನಂ ತಥಾ ।
ಪ್ರತಿಗೃಹ್ಯ ತಥಾ ವೀಣಾಂ ಸಸ್ಯಾಢ್ಯಾಂ ಭೂಮಿಮಾಲಭೇತ್ ॥ ೧೫ ॥

ಶಸ್ತ್ರಾಸ್ತ್ರೇಣ ಯದಾ ವಿದ್ಧೋ ವ್ರಣೇನ ಕೃಮಿಣಾ ತಥಾ ।
ವಿಷ್ಠಯಾ ರುಧಿರೇಣೈವ ಸ ಯುಕ್ತೋಽಪ್ಯರ್ಥವಾನ್ಭವೇತ್ ॥ ೧೬ ॥

ಸ್ವಪ್ನೇಽಪ್ಯಗಮ್ಯಾಗಮನೋ ಭಾರ್ಯಾಲಾಭಂ ಕರೋತಿ ಯಃ ।
ಮೂತ್ರಸಿಕ್ತಃ ಪಿಬೇಚ್ಛುಕ್ರಂ ನರಕಂ ಚ ವಿಶತ್ಯಪಿ ॥ ೧೭ ॥

ನಗರಂ ಪ್ರವಿಶೇದ್ರಕ್ತಂ ಸಮುದ್ರಂ ವಾ ಸುಧಾಂ ಪಿಬೇತ್ ।
ಶುಭವಾರ್ತಾಮವಾಪ್ನೋತಿ ವಿಪುಲಂ ಚಾರ್ಥಮಾಲಭೇತ್ ॥ ೧೮ ॥

೧೪-೧೫. ಎಲೈ ವ್ರಜೇಶ್ವರನಾದ ನಂದನೇ, ಕನಸಿನಲ್ಲಿ ಗೋವು, ಆನೆ, ಕುದುರೆಗಳನ್ನು ಹತ್ತಿ ಕುಳಿತುಕೊಳ್ಳುವುದೂ, ಉಪ್ಪರಿಗೆ, ಬೆಟ್ಟ ಮತ್ತು ಮರಗಳನ್ನೇರುವುದೂ ಸಹ ಧನಪ್ರದವಾದುದು. ಕನಸಿನಲ್ಲಿ ಊಟಮಾಡುವುದು ದುಃಖಕ್ಕೆ ಕಾರಣವಾಗುವುದು. ಕನಸಿನಲ್ಲಿ ವೀಣೆಯನ್ನು ಹಿಡಿದುಕೊಂಡವನು ಸಸ್ಯಪರಿಪೂರ್ಣವಾದ ಭೂಮಿಯನ್ನು ಹೊಂದುವನು.

೧೬. ಕನಸಿನಲ್ಲಿ ಶಸ್ತ್ರಾಸ್ತ್ರಗಳಿಂದ ಗಾಯಗೊಂಡವನೂ ಗಾಯ ಮತ್ತು ಕ್ರಿಮಿಗಳಿಂದ ಪೀಡಿತನಾದವನೂ ಅಮೇಧ್ಯ ಮತ್ತು ರಕ್ತದಿಂದ ವ್ಯಾಪ್ತನಾದವನೂ ಸಹ ಹಣವಂತನಾಗುವನು.

೧೭. ಸ್ವಪ್ನದಲ್ಲಿ ಅಗಮ್ಯಾಗಮನ ಮಾಡಿದರೂ ಸಹ ಅಂಥವನಿಗೆ ಭಾರ್ಯಾಲಾಭವುಂಟಾಗುವುದು. ಕನಸಿನಲ್ಲಿ ಮೂತ್ರದಿಂದ ನೆನೆಸಲ್ಪಟ್ಟವನೂ ಶುಕ್ರ (ರೇತಸ್ಸು) ಪಾನಮಾಡಿದವನೂ ನರಕವನ್ನು ಪ್ರವೇಶಿಸುವನು.

೧೮. ಕನಸಿನಲ್ಲಿ ನಗರಪ್ರವೇಶವೂ, ರಕ್ತಸಮುದ್ರದ ಪ್ರವೇಶವೂ, ಸುಧಾಪಾನವೂ ಸಹ ಶುಭಕರವಾದ ವಾರ್ತೆಯನ್ನು ತರುವುದಲ್ಲದೆ ವಿಶೇಷವಾದ ದ್ರವ್ಯಲಾಭವನ್ನುಂಟುಮಾಡುವುದು.

ಗಜಂ ನೃಪಂ ಸುವರ್ಣಂ ಚ ವೃಷಭಂ ಧೇನುಮೇವ ಚ ।
ದೀಪಮನ್ನಂ ಫಲಂ ಪುಷ್ಪಂ ಕನ್ಯಾಂ ಛತ್ರಂ ರಥಂ ಧ್ವಜಂ ॥ ೧೯ ॥

ಕುಟುಂಬಂ ಲಭತೇ ದೃಷ್ಟ್ವಾ ಕೀರ್ತಿಂ ಚ ವಿಪುಲಾಂ ಶ್ರಿಯಂ ।
ಪೂರ್ಣಕುಂಭಂ ದ್ವಿಜಂ ವಹ್ನಿಂ ಪುಷ್ಪತಾಂಬೂಲಮಂದಿರಂ ॥ ೨೦ ॥

ಶುಕ್ಲಧಾನ್ಯಂ ನಟಂ ವೇಶ್ಯಾಂ ದೃಷ್ಟ್ವಾ ಶ್ರಿಯಮವಾಪ್ನುಯಾತ್ ।
ಗೋಕ್ಷೀರಂ ಚ ಘೃತಂ ದೃಷ್ಟ್ವಾ ಚಾರ್ಥಂ ಪುಣ್ಯಧನಂ ಲಭೇತ್ ॥ ೨೧ ॥

ಪಾಯಸಂ ಪದ್ಮಪಾತ್ರೇ ಚ ದಧಿ ದುಗ್ಧಂ ಘೃತಂ ಮಧು ।
ಮಿಷ್ಟಾನ್ನಂ ಸ್ವಸ್ತಿಕಂ ಭುಕ್ತ್ವಾ ಧ್ರುವಂ ರಾಜಾ ಭವಿಷ್ಯತಿ ॥ ೨೨ ॥

ಪಕ್ಷಿಣಾಂ ಮಾನುಷಾಣಾಂ ಚ ಭುಂಕ್ತೇ ಮಾಂಸಂ ನರೋ ಯದಿ ।
ಬಹ್ವರ್ಥಂ ಶುಭವಾರ್ತಾಂ ಚ ಲಭತೇ ವಾಂಛಿತಂ ಫಲಂ ॥ ೨೩ ॥

೧೯–೨೧. ಆನೆ, ರಾಜ, ಚಿನ್ನ, ವೃಷಭ ಮತ್ತು ಹಸುವನ್ನೂ, ದೀಪ, ಅನ್ನ, ಫಲ, ಪುಷ್ಪ, ಕನ್ಯೆ, ಛತ್ರಿ, ರಥ ಮತ್ತು ಧ್ವಜವನ್ನೂ ಸಹ ಕನಸಿನಲ್ಲಿ ಕಂಡವನು ಯೋಗ್ಯವಾದ ಕುಟುಂಬವನ್ನೂ, ವಿಶಾಲ ಕೀರ್ತಿಯನ್ನೂ, ವಿಪುಲ ಸಂಪತ್ತನ್ನೂ ಪಡೆಯುವನು. ಪೂರ್ಣ ಕಲಶವನ್ನೂ, ಬ್ರಾಹ್ಮಣರನ್ನೂ, ಅಗ್ನಿಯನ್ನೂ, ಪುಷ್ಪತಾಂಬೂಲಗಳನ್ನೂ, ದಿವ್ಯಮಂದಿರವನ್ನೂ, ಶುಕ್ಲಧಾನ್ಯವನ್ನೂ ನಟರನ್ನೂ ವೇಶ್ಯೆಯರನ್ನೂ ಕನಸಿನಲ್ಲಿ ಕಂಡವನು ಸಂಪತ್ತನ್ನು ಪಡೆಯುವನು. ಹಸುವಿನ ಹಾಲನ್ನೂ ತುಪ್ಪವನ್ನೂ ಕನಸಿನಲ್ಲಿ ಕಂಡವನು ವಿಶೇಷ ಧನವನ್ನೂ ಪುಣ್ಯವನ್ನೂ ಪಡೆಯುವನು.

೨೨. ಕನಸಿನಲ್ಲಿ ಪಾಯಸವನ್ನೂ, ಮೊಸರು, ಹಾಲು, ತುಪ್ಪ, ಜೇನು, ಮಿಷ್ಟಾನ್ನ ಮತ್ತು ಸ್ವಸ್ತಿಕ ಪಾಯಸವನ್ನೂ ಪದ್ಮಪತ್ರದಲ್ಲಿ ತಿನ್ನುವವನು ನಿಶ್ಚಯವಾಗಿಯೂ ರಾಜನಾಗುವನು.

೨೩. ಮನುಷ್ಯನು ಕನಸಿನಲ್ಲಿ ಪಕ್ಷಿಗಳ ಮತ್ತು ಮನುಷ್ಯರ ಮಾಂಸವನ್ನು ತಿಂದರೆ ಶುಭವಾರ್ತೆಯನ್ನು ಕೇಳುವುದಲ್ಲದೆ ತನ್ನ ಇಷ್ಟಾರ್ಥವನ್ನು ಪಡೆಯುವುದರಲ್ಲಿ ಸಂಶಯವಿಲ್ಲ

ಛತ್ರಂ ವಾ ಪಾದುಕಾಂ ವಾಪಿ ಲಬ್ಧ್ವಾ ಧಾನ್ಯಂ ಚ ಗಚ್ಛತಿ ।
ಅಸಿಂ ಚ ನಿರ್ಮಲಂ ತೀಕ್ಷ್ಣಂ ತತ್ರೈವ ಭವಿಷ್ಯತಿ ॥ ೨೪ ॥

ಹೇಲಯಾ ಸಂತರೇದ್ಯೋ ಹಿ ಸ ಪ್ರಧಾನೋ ಭವಿಷ್ಯತಿ ।
ದೃಷ್ಟ್ವಾ ಚ ಫಲಿತಂ ವೃಕ್ಷಂ ಧನಮಾಪ್ನೋತಿ ನಿಶ್ಚಿತಂ ॥ ೨೫ ॥

ಸರ್ಪೇಣ ಭಕ್ಷಿತೋ ಯೋ ಹಿ ಅರ್ಥಲಾಭಶ್ಚ ತದ್ಭವೇತ್ ।
ಸ್ವಪ್ನೇ ಸೂರ್ಯಂ ವಿಧುಂ ದೃಷ್ಟ್ವಾ ಮುಚ್ಯತೇ ವ್ಯಾಧಿಬಂಧನಾತ್ ॥೨೬॥

ಬಡವಾಂ ಕುಕ್ಕುಟೀಂ ದೃಷ್ಟ್ವಾ ಕ್ರೌಂಚೀಂ ಭಾರ್ಯಾಂ ಲಭೇದ್ಧ್ರುವಂ ।
ಸ್ವಪ್ನೇ ಯೋ ನಿಗಡೈರ್ಬದ್ಧಃ ಪ್ರತಿಷ್ಠಾಂ ಪುತ್ರಮಾಲಭೇತ್ ॥ ೨೭ ॥

ದಧ್ಯನ್ನಂ ಪಾಯಸಂ ಭುಂಕ್ತೇ ಪದ್ಮಪತ್ರೇ ನದೀತಟೇ ।
ವಿಶೀರ್ಣಪದ್ಮಪಾತ್ರೇ ಚ ಸೋಽಪಿ ರಾಜಾ ಭವಿಷ್ಯತಿ ॥ ೨೮ ॥

---

೨೪. ಕನಸಿನಲ್ಲಿ ಛತ್ರಿ ಮತ್ತು ಪಾದುಕೆಯನ್ನು ಪಡೆದವನೂ ನಿರ್ಮಲವೂ ಅತಿ ತೀಕ್ಷ್ಣವೂ ಆದ ಕತ್ತಿಯನ್ನು ಪಡೆವವನೂ ಸಹ ವಿಶೇಷಧಾನ್ಯವನ್ನು ಹೊಂದುತ್ತಾನೆ.

೨೫. ಯಾರು ಕನಸಿನಲ್ಲಿ ಲೀಲಾಮಾತ್ರದಿಂದ ನದಿನದಗಳನ್ನು ದಾಟುವನೋ ಅವನು ಪ್ರಧಾನನಾಗುವನು. ಫಲಪರಿಪೂರ್ಣವಾದ ವೃಕ್ಷವನ್ನು ಕಂಡವನು ಯಥೇಚ್ಛವಾಗಿ ಧನವನ್ನು ಹೊಂದುವುದರಲ್ಲಿ ಸಂಶಯವಿಲ್ಲ

೨೬. ಕನಸಿನಲ್ಲಿ ಸರ್ಪಗಳಿಂದ ಭಕ್ಷಿತನಾದವನು ಧನಲಾಭವನ್ನು ಹೊಂದುವನು. ಸ್ವಪ್ನದಲ್ಲಿ ಸೂರ್ಯಚಂದ್ರರನ್ನು ನೋಡುವವನು ರೋಗಬಂಧನದಿಂದ ಮುಕ್ತನಾಗುತ್ತಾನೆ.

೨೭. ಹೆಣ್ಣುಕುದುರೆ, ಹೆಣ್ಣುಕೋಳಿ, ಮತ್ತು ಹೆಣ್ಣು ಕ್ರೌಂಚಪಕ್ಷಿಯನ್ನು ಕಂಡವನು ಉತ್ತಮಳಾದ ಹೆಂಡತಿಯನ್ನು ಹೊಂದುವನು. ಕನಸಿನಲ್ಲಿ ನಿಗಡಬಂಧನಕ್ಕೊಳಗಾದವನು ಯೋಗ್ಯ ಪಾತ್ರವನ್ನೂ ಸತ್ಪುತ್ರನನ್ನೂ ಪಡೆಯುವನು.

೨೮. ನದೀತೀರದಲ್ಲಿ ತಾವರೆಯ ಎಲೆಯಲ್ಲಿ ಮೊಸರನ್ನವನ್ನೂ ಪಾಯಸವನ್ನೂ ಊಟಮಾಡಿದಂತೆ ಕನಸುಕಂಡವನು ರಾಜನಾಗುವನು.

ಜಲೌಕಸಂ ವೃಶ್ಚಿಕಂ ಚ ಸರ್ಪಂ ಚ ಯದಿ ಪಶ್ಯತಿ ।
ಧನಂ ಪುತ್ರಂ ಚ ವಿಜಯಂ ಪ್ರತಿಷ್ಠಾಂ ವಾ ಲಭೇದಿತಿ　　॥ ೨೯ ॥

ಶೃಂಗಿಭಿರ್ದಂಷ್ಟ್ರಿಭಿಃ ಕೋಲೈರ್ವಾನರೈಃ ಪೀಡಿತೋ ಯದಿ ।
ನಿಶ್ಚಿತಂ ಚ ಭವೇದ್ರಾಜಾ ಧನಂ ಚ ವಿಪುಲಂ ಲಭೇತ್　　॥ ೩೦ ॥

ಮತ್ಸ್ಯಂ ಮಾಂಸಂ ಮೌಕ್ತಿಕಂ ಚ ಶಂಖಂ ಚಂದನಹೀರಕಂ ।
ವಸ್ತು ಪಶ್ಯತಿ ಸ್ವಪ್ನಾಂತೇ ವಿಪುಲಂ ಧನಮಾಲಭೇತ್　　॥ ೩೧ ॥

ಸುತಂ ಚ ರುಧಿರಂ ಸ್ವರ್ಣಂ ಭುಕ್ತ್ವಾ ವಿಷ್ಠಾಂ ಧನಂ ಲಭೇತ್ ।
ಪ್ರತಿಮಾಂ ಶಿವಲಿಂಗಂ ಚ ಲಭೇದ್ದೃಷ್ಟ್ವಾ ಜಯಂ ಧನಂ　　॥ ೩೨ ॥

ಫಲಿತಂ ಪುಷ್ಪಿತಂ ಬಿಲ್ವಮಾಮ್ರಂ ದೃಷ್ಟ್ವಾ ಲಭೇದ್ಧನಂ ।
ದೃಷ್ಟ್ವಾ ಚ ಜ್ವಲದಗ್ನಿಂ ಚ ಧನಂ ಬುದ್ಧಿಂ ಪ್ರಿಯಂ ಲಭೇತ್　　॥ ೩೩ ॥

---

೨೯. ಜಲಜಂತುಗಳು ಚೇಳು ಮತ್ತು ಸರ್ಪಗಳನ್ನು ಕನಸಿನಲ್ಲಿ ಕಂಡವನು ಧನವನ್ನೂ ಪುತ್ರನನ್ನೂ ವಿಜಯವನ್ನೂ ಪಡೆಯುವುದಲ್ಲದೆ ಶಾಶ್ವತವಾದ ಕೀರ್ತಿಯನ್ನು ಪಡೆಯುವನು.

೩೦. ಕನಸಿನಲ್ಲಿ ಕೊಂಬುಗಳಿರುವ ಪ್ರಾಣಿಗಳಿಂದಲೂ, ಕೋರೆಹಲ್ಲಿರುವ ಪ್ರಾಣಿಗಳಿಂದಲೂ, ಹಂದಿಗಳಿಂದಲೂ, ಕೋತಿಗಳಿಂದಲೂ, ಪೀಡಿತನಾದ ಮನುಷ್ಯನು ರಾಜನಾಗುವನಲ್ಲದೆ ಯಥೇಚ್ಛವಾಗಿ ಧನವನ್ನು ಪಡೆಯುವನು.

೩೧. ಮೀನು, ಮಾಂಸ, ಮುತ್ತು, ಶಂಖ, ಚಂದನ, ವಜ್ರ ಮುಂತಾದುವನ್ನು ಕನಸಿನ ಕೊನೆಯಲ್ಲಿ ಕಂಡವನು ವಿಪುಲಧನವನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

೩೨. ಸುರಿಯುತ್ತಿರುವ ರಕ್ತವನ್ನೂ, ಸುವರ್ಣವನ್ನೂ, ಕನಸಿನಲ್ಲಿ ಕಂಡವನೂ, ವಿಷ್ಠೆಯನ್ನು ಕನಸಿನಲ್ಲಿ ತಿಂದವನೂ ಧನವನ್ನು ಹೊಂದುವನು. ಶಿವಲಿಂಗವನ್ನೂ ದೇವತಾಪ್ರತಿಮೆಯನ್ನೂ ಕಂಡವನು ಜಯವನ್ನೂ ಧನವನ್ನೂ ಗಳಿಸುವನು.

೩೩. ಫಲಪುಷ್ಪಗಳಿಂದ ಕೂಡಿದ ಬಿಲ್ವ ಮತ್ತು ಮಾವಿನಮರಗಳನ್ನು ಕನಸಿನಲ್ಲಿ ಕಂಡವನು ಧನವಂತನಾಗುವನು. ಉರಿಯುವ ಅಗ್ನಿಯನ್ನು ಕಂಡವನು ಯಥೇಚ್ಛವಾಗಿ ಧನ, ಬುದ್ಧಿ ಮತ್ತು ಸಂಪತ್ತನ್ನು ಪಡೆಯುವನು.

ಧಾತ್ರೀಫಲಂ ಚಾಮಲಕಮುತ್ಪಲಂ ಚ ಧನಾಗಮಂ ।
ದೇವತಾಶ್ಚ ದ್ವಿಜಾ ಗಾವಃ ಪಿತರೋ ಲಿಂಗಿನಸ್ತಥಾ ॥ ೩೪ ॥

ಯದ್ದದಾತಿ ಮಿಥಃ ಸ್ವಪ್ನೇ ತತ್ತಥೈವ ಭವಿಷ್ಯತಿ ।
ಶುಕ್ಲಾಂಬರಧರಾ ನಾರ್ಯಃ ಶುಕ್ಲಮಾಲ್ಯಾನುಲೇಪನಾಃ ॥ ೩೫ ॥

ಸಮಾಶ್ಲಿಷ್ಯಂತಿ ಯಂ ಸ್ವಪ್ನೇ ತಸ್ಯ ಶ್ರೀಃ ಸರ್ವತಃ ಸುಖಂ ।
ಪೀತಾಂಬರಧರಾಂ ನಾರೀಂ ಪೀತಮಾಲ್ಯಾನುಲೇಪನಾಂ ।
ಅವಗೂಹತಿ ಯಃ ಸ್ವಪ್ನೇ ಕಲ್ಯಾಣಂ ತಸ್ಯ ಜಾಯತೇ ॥ ೩೬ ॥

ಸರ್ವಾಣಿ ಶುಕ್ಲಾನಿ ಪ್ರಶಂಸಿತಾನಿ
ಭಸ್ಮಾಸ್ಥಿಕಾರ್ಪಾಸವಿವರ್ಜಿತಾನಿ ।
ಸರ್ವಾಣಿ ಕೃಷ್ಣಾನ್ಯತಿನಿಂದಿತಾನಿ
ಗೋಹಸ್ತಿವಾಜಿ ದ್ವಿಜದೇವವರ್ಜ್ಯಂ ॥ ೩೭ ॥

---

೩೪. ಕನಸಿನಲ್ಲಿ ನೆಲ್ಲಿಕಾಯಿ, ಯುಗಚೀಕಾಯಿ ಮತ್ತು ನೈದಿಲೆ ಪುಷ್ಪವನ್ನು ನೋಡಿದವನು ಹಣವನ್ನು ಹೊಂದುವನು. ದೇವತೆಗಳನ್ನೂ, ದ್ವಿಜರನ್ನೂ, ಗೋವುಗಳನ್ನೂ, ಪಿತೃಗಳನ್ನೂ, ಸಂನ್ಯಾಸಾದಿ ಚಿಹ್ನೆಯಿಂದ ಕೂಡಿರುವವರನ್ನೂ ಕನಸಿನಲ್ಲಿ ಕಂಡವರು ಹಣವಂತರಾಗುವರು.

೩೫–೩೬. ಕನಸಿನಲ್ಲಿ ಅನ್ಯೋನ್ಯವಾಗಿ ಕೊಟ್ಟದ್ದು ಅದೇ ರೀತಿ ಫಲಿಸುತ್ತದೆ. ಬಿಳೀ ಬಟ್ಟೆಯನ್ನುಟ್ಟಿರುವ ಮತ್ತು ಬಿಳುಪಾದ ಪುಷ್ಪಮಾಲೆಯನ್ನು ಧರಿಸಿ ದಿವ್ಯಗಂಧವನ್ನು ಲೇಪಿಸಿಕೊಂಡಿರುವ ಸ್ತ್ರೀಯರು ಕನಸಿನಲ್ಲಿ ಆಲಂಗಿಸಿಕೊಂಡರೆ ಅಂಥವನಿಗೆ ಸರ್ವತೋಮುಖವಾದ ಸುಖವುಂಟಾಗುವುದು. ಹಳದಿಯ ಬಟ್ಟೆಯನ್ನುಟ್ಟು ಹಳದಿಯ ಹೂಮಾಲೆಯನ್ನು ಧರಿಸಿ ಗಂಧವನ್ನು ಲೇಪಿಸಿಕೊಂಡಿರುವ ಸ್ತ್ರೀಯೊಡನೆ ಕನಸಿನಲ್ಲಿ ಸೇರಿದವನು ಕಲ್ಯಾಣಪರಂಪರೆಯನ್ನು ಹೊಂದುವನು.

೩೭. ಬೂದಿ, ಮೂಳೆ ಮತ್ತು ಹತ್ತಿ ಈ ಮೂರನ್ನೂ ಬಿಟ್ಟು ಬಿಳುಪಾದ ಇತರ ವಸ್ತುಗಳನ್ನು ಕನಸಿನಲ್ಲಿ ನೋಡುವುದು ಶ್ರೇಯಸ್ಕರವಾದುದು. ಹಸು,

ದಿವ್ಯಾ ಸ್ತ್ರೀ ಸಸ್ಮಿತಾ ವಿಪ್ರಾ ರತ್ನಭೂಷಣಭೂಷಿತಾ ।
ಯಸ್ಯ ಮಂದಿರಮಾಯಾತಿ ಸ ಪ್ರಿಯಂ ಲಭತೇ ಧ್ರುವಂ　　　॥ ೩೮ ॥

ಸ್ವಪ್ನೇ ಚ ಬ್ರಾಹ್ಮಣೋ ದೇವೋ ಬ್ರಾಹ್ಮಣೀ ದೇವಕನ್ಯಕಾ ।
ಬ್ರಾಹ್ಮಣೋ ಬ್ರಾಹ್ಮಣೀ ವಾಽಪಿ ಸಂತುಷ್ಟಾ ಸಸ್ಮಿತಾ ಸತೀ ।
ಫಲಂ ದದಾತಿ ಯಸ್ಮೈ ಚ ತಸ್ಯ ಪುತ್ರೋ ಭವಿಷ್ಯತಿ　　　॥ ೩೯ ॥

ಯಂ ಸ್ವಪ್ನೇ ಬ್ರಾಹ್ಮಣಾ ನಂದ ಕುರ್ವಂತಿ ಚ ಶುಭಾಶಿಷಂ ।
ಯದ್ವದಂತಿ ಭವೇತ್ತಸ್ಯ ತಸ್ಯೈಶ್ವರ್ಯಂ ಭವೇದ್ಧ್ರುವಂ　　　॥ ೪೦ ॥

ಪರಿತುಷ್ಟೋ ದ್ವಿಜಶ್ರೇಷ್ಠಶ್ಚಾಯಾತಿ ಯಸ್ಯ ಮಂದಿರಂ ।
ನಾರಾಯಣಃ ಶಿವೋ ಬ್ರಹ್ಮಾ ಪ್ರವಿಶೇತ್ತು ತದಾಶ್ರಮಂ　　　॥ ೪೧ ॥

ಆನೆ, ಕುದುರೆ, ಬ್ರಾಹ್ಮಣ ಮತ್ತು ದೇವತೆ ಇವುಗಳನ್ನು ಬಿಟ್ಟು ಕಪ್ಪಾದ ಇತರ ವಸ್ತುಗಳನ್ನು ನೋಡುವುದು ನಿಂದನೀಯವಾದುದು.

೩೮. ರತ್ನಭೂಷಣಭೂಷಿತಳಾದ ದಿವ್ಯ ಸ್ತ್ರೀಯೂ, ಸ್ಮಿತಮುಖವುಳ್ಳ ವಿಪ್ರನೂ ಕನಸಿನಲ್ಲಿ ಯಾರ ಮನೆಗೆ ಬರುವರೋ ಆ ಮನುಷ್ಯನು ತನ್ನ ಇಷ್ಟಾರ್ಥವನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

೩೯. ಕನಸಿನಲ್ಲಿ ಬ್ರಾಹ್ಮಣನಾಗಲೀ, ದೇವತೆಯಾಗಲೀ, ಬ್ರಾಹ್ಮಣಸ್ತ್ರೀಯಾಗಲೀ, ದೇವಕನ್ನಿಕೆಯಾಗಲೀ, ಬ್ರಾಹ್ಮಣದಂಪತಿಗಳಾಗಲೀ ಸಂತುಷ್ಟರಾಗಿ ನಗುಮುಖದಿಂದ ಯಾರಿಗೆ ಫಲವನ್ನು ಅನುಗ್ರಹಿಸುವರೋ ಅವರಿಗೆ ಸತ್ಪುತ್ರಲಾಭವುಂಟಾಗುವುದು.

೪೦. ಎಲೈ ನಂದನೇ, ಬ್ರಾಹ್ಮಣರು ಕನಸಿನಲ್ಲಿ ಯಾರಿಗೆ ಶುಭಾಶೀರ್ವಾದ ಮಾಡುವರೋ ಏನನ್ನು ಹರಸುವರೋ ಅದು ಹಾಗೆಯೇ ಫಲಿಸುವುದಲ್ಲದೆ ಅವರಿಗೆ ವಿಪುಲೈಶ್ವರ್ಯವು ದೊರಕುವುದು.

೪೧. ಸಂತುಷ್ಟನಾದ ಬ್ರಾಹ್ಮಣಶ್ರೇಷ್ಠನು ಕನಸಿನಲ್ಲಿ ಯಾರ ಮನೆಗೆ ಬರುವನೋ ಅವನ ಮಂದಿರಕ್ಕೆ ಬ್ರಹ್ಮ, ವಿಷ್ಣು, ಮತ್ತು ಶಿವರೆಂಬ ತ್ರಿಮೂರ್ತಿಗಳೂ ಪ್ರವೇಶಿಸುವರು.

ಸಂಪತ್ತಿಸ್ತಸ್ಯ ಭವತಿ ಯಶಶ್ಚ ವಿಪುಲಂ ಶುಭೇ ।
ಪದೇಪದೇ ಸುಖಂ ತಸ್ಯ ಸಮಾನಂ ಗೌರವಂ ಲಭೇತ್ ॥ ೪೨ ॥

ಅಕಸ್ಮಾದಪಿ ಸ್ವಪ್ನೇತು ಲಭತೇ ಸುರಭಿಂ ಯದಿ ।
ಭೂಮಿಲಾಭೋ ಭವೇತ್ತಸ್ಯ ಭಾರ್ಯಾ ಚಾಪಿ ಪತಿವ್ರತಾ ॥ ೪೩ ॥

ಕರೇಣ ಕೃತ್ವಾ ಹಸ್ತೀ ಯಂ ಮಸ್ತಕೇ ಸ್ಥಾಪಯೇದ್ಯದಿ ।
ರಾಜ್ಯಲಾಭೋ ಭವೇತ್ತಸ್ಯ ನಿಶ್ಚಿತಂ ಚ ಶ್ರುತೌ ಮತಂ ॥ ೪೪ ॥

ಸ್ವಪ್ನೇತು ಬ್ರಾಹ್ಮಣಸ್ತುಷ್ಟಃ ಸಮಾಶ್ಲಿಷ್ಯತಿ ಯಂ ವ್ರಜ ।
ತೀರ್ಥಸ್ನಾಯೀ ಭವೇತ್ಸೋಽಪಿ ನಿಶ್ಚಿತಂ ಚ ಶ್ರಿಯಾನ್ವಿತಃ ॥ ೪೫ ॥

ಸ್ವಪ್ನೇ ದದಾತಿ ಪುಷ್ಪಂ ಚ ಯಸ್ಮೈ ಪುಣ್ಯವತೇ ದ್ವಿಜಃ ।
ಜಯಯುಕ್ತೋ ಭವೇತ್ಸೋಽಪಿ ಯಶಸ್ವೀ ಚ ಧನೀ ಸುಖೀ ॥ ೪೬ ॥

---

೪೨. ಅವನಿಗೆ ವಿಶೇಷ ಸಂಪತ್ತು ಬರುವುದಲ್ಲದೆ ವಿಪುಲವಾದ ಕೀರ್ತಿಯೂ ಲಭಿಸುವುದು. ಕ್ಷಣಕ್ಷಣಕ್ಕೂ ಅವನಿಗೆ ಸುಖವುಂಟಾಗುವುದಲ್ಲದ ಉಚಿತವಾದ ಗೌರವವೂ ದೊರಕುವುದು.

೪೩. ಅಕಸ್ಮಾತ್ತಾಗಿ ಕನಸಿನಲ್ಲಿ ಕಾಮಧೇನುವನ್ನು ಕಂಡವನು ಭೂಮಿ ಲಾಭವನ್ನು ಪಡೆಯುವುದಲ್ಲದೆ ಅವನ ಹೆಂಡತಿಯು ಪತಿವ್ರತೆಯಾಗಿ ಪತಿಸೇವಾ ಪರಾಯಣೆಯಾಗುವಳು.

೪೪. ಕನಸಿನಲ್ಲಿ ಆನೆಯು ಸೊಂಡಲಿನಿಂದ ಎತ್ತಿಕೊಂಡು ತನ್ನ ತಲೆಯ ಮೇಲೆ ಕುಳ್ಳಿರಿಸಿಕೊಂಡಂತಾದರೆ ಅಂಥವನಿಗೆ ನಿಜವಾಗಿಯೂ ರಾಜ್ಯ ಲಾಭವಾಗುವುದೆಂದು ಶ್ರುತ್ಯುಕ್ತವಾಗಿದೆ.

೪೫. ಎಲೈ ನಂದನೇ, ಸ್ವಪ್ನದಲ್ಲಿ ಬ್ರಾಹ್ಮಣನು ಸಂತುಷ್ಟನಾಗಿ ಯಾರನ್ನು ಆಲಂಗಿಸಿಕೊಳ್ಳುವನೋ ಅಂಥವನಿಗೆ ತೀರ್ಥಸ್ನಾನಮಾಡಿದ ಪುಣ್ಯವು ಲಭಿಸುವುದಲ್ಲದೆ ಸಂಪತ್ಸಮೃದ್ಧಿಯು ಉಂಟಾಗುವುದು.

೪೬. ಸ್ವಪ್ನದಲ್ಲಿ ಬ್ರಾಹ್ಮಣನು ಪುಣ್ಯವಂತನಾದ ಯಾವನಿಗೆ ಅರಳಿದ ಹೂವನ್ನು ಕೊಡುವನೋ ಅವನು ಜಯಶಾಲಿಯೂ, ಕೀರ್ತಿವಂತನೂ, ಹಣವಂತನೂ ಮತ್ತು ಸುಖಿಯೂ ಆಗುವನು.

ಸ್ವಪ್ನೇ ದೃಷ್ಟ್ವಾ ಚ ತೀರ್ಥಾನಿ ಸೌಧರತ್ನಗೃಹಾಣಿ ಚ ।
ಜಯಯುಕ್ತಶ್ಚ ಧನವಾಂಸ್ತೀರ್ಥಸ್ನಾಯೀ ಭವೇನ್ನರಃ ॥ ೪೭ ॥

ಸ್ವಪ್ನೇ ತು ಪೂರ್ಣಕಲಶಂ ಕಶ್ಚಿತ್ಕಸ್ಮೈ ದದಾತಿ ಚ ।
ಪುತ್ರಲಾಭೋ ಭವೇತ್ತಸ್ಯ ಸಂಪತ್ತಿಂ ವಾ ಸಮಾಲಭೇತ್ ॥ ೪೮ ॥

ಹಸ್ತೇ ಕೃತ್ವಾ ತು ಕುಡವಮಾಢಕಂ ವಾರಸುಂದರೀ ।
ಯಸ್ಯಮಂದಿರಮಾಯಾತಿ ಸ ಲಕ್ಷ್ಮೀಂ ಲಭತೇ ಧ್ರುವಂ ॥ ೪೯ ॥

ದಿವ್ಯಾ ಸ್ತ್ರೀ ಯದ್ಗೃಹಂ ಗತ್ವಾ ಪುರೀಷಂ ವಿಸೃಜೇದ್ದ್ವಿಜ ।
ಅರ್ಥಲಾಭೋ ಭವೇತ್ತಸ್ಯ ದಾರಿದ್ರ್ಯಂ ಚ ಪ್ರಯಾತಿ ಚ ॥ ೫೦ ॥

ಯಸ್ಯ ಗೇಹಂ ಸಮಾಯಾತಿ ಬ್ರಾಹ್ಮಣೋ ಭಾರ್ಯಯಾ ಸಹ ।
ಪಾರ್ವತ್ಯಾ ಸಹ ಶಂಭುರ್ವಾ ಲಕ್ಷ್ಮ್ಯಾ ನಾರಾಯಣೋಽಥವಾ ॥ ೫೧ ॥

---

೪೭. ಕನಸಿನಲ್ಲಿ ಪುಣ್ಯತೀರ್ಥಗಳನ್ನೂ, ರತ್ನದ ಉಪ್ಪರಿಗೆಯ ಮನೆಗಳನ್ನೂ ನೋಡುವವನು ಜಯಶಾಲಿಯೂ ಧನವಂತನೂ ಆಗುವುದಲ್ಲದೆ ತೀರ್ಥಸ್ನಾನ ಮಾಡಿದ ಫಲವನ್ನು ಹೊಂದುವನು.

೪೮. ಸ್ವಪ್ನದಲ್ಲಿ ಪೂರ್ಣಕಲಶವನ್ನು ಯಾರಾದರೂ ಕೊಟ್ಟಂತೆ ತೋರಿದರೆ ಆ ಕನಸನ್ನು ಕಂಡವರಿಗೆ ಪುತ್ರಲಾಭವುಂಟಾಗುವುದಲ್ಲದೆ ಸಂಪತ್ಸಮೃದ್ಧಿಯೂ ಉಂಟಾಗುವುದು

೪೯. ಸುಂದರಿಯಾದ ವೇಶ್ಯಾಸ್ತ್ರೀಯು ಕೈಯಲ್ಲಿ ಸೇರು ಮತ್ತು ಕೊಳಗಗಳನ್ನು ಹಿಡಿದು ಕನಸಿನಲ್ಲಿ ಯಾರಮನೆಗೆ ಪ್ರವೇಶಿಸುವಳೋ ಆ ಮನುಷ್ಯನಿಗೆ ನಿಶ್ಚಯವಾಗಿಯೂ ಸಂಪತ್ಪ್ರಾಪ್ತಿಯುಂಟಾಗುವುದು.

೫೦. ಎಲೈ ದ್ವಿಜೋತ್ತಮನೇ, ಕನಸಿನಲ್ಲಿ ದಿವ್ಯಸ್ತ್ರೀಯು ಯಾರ ಮನೆಗೆ ಹೋಗಿ ಮಲವಿಸರ್ಜನೆಮಾಡುವಳೋ ಅವನಿಗೆ ಅರ್ಥಲಾಭವುಂಟಾಗುವುದಲ್ಲದೆ ಅವನ ಬಡತನವೂ ನಶಿಸಿಹೋಗುವುದು.

೫೧–೫೨. ಕನಸಿನಲ್ಲಿ ಯಾರ ಮನೆಗೆ ಬ್ರಾಹ್ಮಣನು ತನ್ನ ಪತ್ನಿಯೊಡನೆ ಬರುವನೋ ಅಥವಾ ಈಶ್ವರನು ಪಾರ್ವತಿಯೊಡನೆ ಬರುವನೋ ಅಥವಾ

ಬ್ರಾಹ್ಮಣೋ ಬ್ರಾಹ್ಮಣೀ ವಾऽಪಿ ಸ್ವಪ್ನೇ ತಸ್ಮೈ ಪ್ರದೀಯತೇ ।
ಧಾನ್ಯಂ ಪುಷ್ಪಾಂಜಲಿಂ ವಾऽಪಿ ತಸ್ಯ ಶ್ರೀಃ ಸರ್ವತೋಮುಖೀ ॥ ೫೨ ॥

ಮುಕ್ತಾಹಾರಂ ಪುಷ್ಪಮಾಲ್ಯಂ ಚಂದನಂ ಚ ಲಭೇದ್ವ್ರಜ ।
ಸ್ವಪ್ನೇ ದದಾತಿ ವಿಪ್ರಶ್ಚ ತಸ್ಯ ಶ್ರೀಃ ಸರ್ವತೋಮುಖೀ ॥ ೫೩ ॥

ಗೋರೋಚನಂ ಪತಾಕಾಂ ವಾ ಹರಿದ್ರಾಮಿಕ್ಷುದಂಡಕಂ ।
ಸಿದ್ಧಾನ್ನಂ ಚ ಲಭೇತ್ಸ್ವಪ್ನೇ ತಸ್ಯ ಶ್ರೀಃ ಸರ್ವತೋಮುಖೀ ॥ ೫೪ ॥

ಬ್ರಾಹ್ಮಣೋ ಬ್ರಾಹ್ಮಣೀ ವಾऽಪಿ ದದಾತಿ ಯಸ್ಯ ಮಸ್ತಕೇ ।
ಛತ್ರಂ ವಾ ಶುಕ್ಲಧಾನ್ಯಂ ವಾ ಸ ಚ ರಾಜಾ ಭವಿಷ್ಯತಿ ॥ ೫೫ ॥

ಸ್ವಪ್ನೇ ರಥಸ್ಥಃ ಪುರುಷಃ ಶುಕ್ಲಮಾಲ್ಯಾನುಲೇಪನಃ ।
ತತ್ರಸ್ಥೋ ದಧಿ ಭುಂಕ್ತೇ ಚ ಪಾಯಸಂ ವಾ ನೃಪೋ ಭವೇತ್ ॥ ೫೬ ॥

ಶ್ರೀಮನ್ನಾರಾಯಣನು ಲಕ್ಷ್ಮಿಯೊಡನೆ ಬರುವನೋ, ಬ್ರಾಹ್ಮಣನಾಗಲೀ, ಬ್ರಾಹ್ಮಣಿಯಾಗಲೀ ಯಾರಿಗೆ ಕನಸಿನಲ್ಲಿ ಧಾನ್ಯವನ್ನೂ ಪುಷ್ಪಾಂಜಲಿಯನ್ನೂ ಕೊಡುವರೋ ಅವನಿಗೆ ಸರ್ವತೋಮುಖವಾದ ಸಂಪತ್ತು ಒದಗುವುದು

೫೩. ಕನಸಿನಲ್ಲಿ ಬ್ರಾಹ್ಮಣನು ಮುತ್ತಿನಹಾರವನ್ನೂ, ಪುಷ್ಪಮಾಲೆಯನ್ನೂ ದಿವ್ಯಚಂದನವನ್ನೂ ಯಾರಿಗೆ ಕೊಡುವನೋ ಅವನಿಗೆ ಸರ್ವತೋಮುಖವಾದ ಸಂಪತ್ತು ದೊರಕುವುದು.

೫೪. ಸ್ವಪ್ನದಲ್ಲಿ ಗೋರೋಚನವನ್ನೂ, ಧ್ವಜಪಟವನ್ನೂ, ಅರಿಶಿನವನ್ನೂ, ಕಬ್ಬಿನಜಲ್ಲೆಯನ್ನೂ, ಸಿದ್ಧಾನ್ನವನ್ನೂ, ಯಾವನು ಪಡೆಯುವನೋ ಅವನಿಗೆ ಸರ್ವತೋಮುಖವಾದ ಸಂಪತ್ತು ದೊರಕುವುದು.

೫೫. ಬ್ರಾಹ್ಮಣನಾಗಲೀ, ಬ್ರಾಹ್ಮಿಣಿಯಾಗಲೀ, ಕನಸಿನಲ್ಲಿ ಯಾರ ತಲೆಯಮೇಲೆ ಛತ್ರಿಯನ್ನು ಹಿಡಿಯುವರೋ ಅವನು ನಿಶ್ಚಯವಾಗಿಯೂ ರಾಜನಾಗುವನು.

೫೬. ಕನಸಿನಲ್ಲಿ ರಥದಲ್ಲಿ ಕುಳಿತುಕೊಂಡು ಶುಕ್ಲಮಾಲೆಯನ್ನು ಧರಿಸಿ ದಿವ್ಯಗಂಧವನ್ನು ಲೇಪಿಸಿಕೊಂಡು ಮೊಸರನ್ನಾಗಲೀ, ಪಾಯಸವನ್ನಾಗಲೀ ಭುಜಿಸುವ ಮನುಜನು ರಾಜನಾಗುವನು.

ಸ್ವಪ್ನೇ ದದಾತಿ ವಿಪ್ರಶ್ಚ ಬ್ರಾಹ್ಮಣೀ ಚ ಸುಧಾಂ ದಧಿ ।
ಪ್ರಶಸ್ತಪಾತ್ರಂ ಯಸ್ಮೈ ವಾ ಸೋಽಪಿ ರಾಜಾ ಭವೇದ್ಧ್ರುವಂ ॥ ೫೭ ॥

ಕುಮಾರೀ ಚಾಷ್ಟವರ್ಷೀಯಾ ರತ್ನಭೂಷಣಭೂಷಿತಾ ।
ಯಸ್ಯ ತುಷ್ಟಾ ಭವೇತ್ಸ್ವಪ್ನೇ ಸ ಭವೇತ್ಕವಿಪಂಡಿತಃ ॥ ೫೮ ॥

ದದಾತಿ ಪುಸ್ತಕಂ ಸ್ವಪ್ನೇ ಯಸ್ಮೈ ಪುಣ್ಯವತೇ ಚ ಸಾ ।
ಸ ಭವೇದ್ವಿಶ್ವವಿಖ್ಯಾತಃ ಕವೀಂದ್ರಃ ಪಂಡಿತೇಶ್ವರಃ ॥ ೫೯ ॥

ಯಂ ಪಾಠಯತಿ ಸ್ವಪ್ನೇ ವಾ ಮಾತೇವ ಚ ಸುತಂ ಯಥಾ ।
ಸರಸ್ವತೀ ಸುತಃ ಸೋಽಪಿ ತತ್ಪರೋ ನಾಸ್ತಿ ಪಂಡಿತಃ ॥ ೬೦ ॥

ಬ್ರಾಹ್ಮಣಃ ಪಾಠಯೇದ್ಯಂ ಚ ಪಿತೇವ ಯತ್ನಪೂರ್ವಕಂ ।
ದದಾತಿ ಪುಸ್ತಕಂ ಪ್ರೀತ್ಯಾ ಸ ಚ ತತ್ಸದೃಶೋ ಭವೇತ್ ॥ ೬೧ ॥

---

೫೭. ಬ್ರಾಹ್ಮಣನಾಗಲೀ ಬ್ರಾಹ್ಮಿಣಿಯಾಗಲೀ ಕನಸಿನಲ್ಲಿ ಅಮೃತವನ್ನಾಗಲೀ ಮೊಸರನ್ನಾಗಲೀ ಶ್ರೇಷ್ಠಪಾತ್ರೆಯಲ್ಲಿ ಕೊಟ್ಟಂತೆ ತೋರಿದರೆ ಆ ಕನಸನ್ನು ಕಂಡ ಮನುಷ್ಯನು ರಾಜನಾಗುವನು.

೫೮. ರತ್ನಾಭರಣಭೂಷಿತಳಾದ ಎಂಟುವರ್ಷದ ಕನ್ಯೆಯು ಕನಸಿನಲ್ಲಿ ಯಾರಿಗೆ ಪ್ರಸನ್ನಳಾಗುವಳೋ ಅವನು ಕವಿಯೂ ಪಂಡಿತನೂ ಆಗುವುದರಲ್ಲಿ ಸಂಶಯವಿಲ್ಲ.

೫೯. ಆ ಕನ್ಯೆಯು ಯಾವ ಪುಣ್ಯವಂತನಿಗೆ ಕನಸಿನಲ್ಲಿ ಪುಸ್ತಕವನ್ನು ಕೊಡುವಳೋ ಅವನು ವಿಶ್ವವಿಖ್ಯಾತನಾದ ಕವೀಂದ್ರನೂ ಪಂಡಿತಶ್ರೇಷ್ಠನೂ ಆಗುವುದರಲ್ಲಿ ಸಂಶಯವಿಲ್ಲ.

೬೦. ತಾಯಿಯು ಮಗನಿಗೆ ಉಪದೇಶಿಸುವಂತೆ ಆ ಕನ್ಯೆಯು ಯಾರಿಗೆ ಕನಸಿನಲ್ಲಿ ಬೋಧಿಸುವಳೋ ಅವನು ಸರಸ್ವತೀಪುತ್ರನಾಗುವನು. ಅವನಿಗಿಂತ ಮೇಲಾದ ಪಂಡಿತನಿರುವುದಿಲ್ಲ.

೬೧. ಯಾರಿಗೆ ಕನಸಿನಲ್ಲಿ ಬ್ರಾಹ್ಮಣನು ತಂದೆಯಂತೆ ಪ್ರಯತ್ನಪೂರ್ವಕವಾಗಿ ಬೋಧಿಸುವನೋ ಅಥವಾ ಪ್ರೀತಿಪೂರ್ವಕವಾಗಿ ಪುಸ್ತಕವನ್ನು ಕೊಡುವನೋ ಅವನೂ ಸಹ ಶ್ರೇಷ್ಠಪಂಡಿತನಾಗುವನು.

ಪ್ರಾಪ್ನೋತಿ ಪುಸ್ತಕಂ ಸ್ವಪ್ನೇ ಪಥಿ ವಾ ಯತ್ರ ತತ್ರ ವಾ ।
ಸ ಪಂಡಿತೋ ಯಶಸ್ವೀ ಚ ವಿಖ್ಯಾತಶ್ಚ ಮಹೀತಲೇ ॥ ೬೨ ॥

ಸ್ವಪ್ನೇ ಯತೋ ಮಹಾಮಂತ್ರಂ ವಿಪ್ರೋ ವಿಪ್ರೇ ದದಾತಿ ಚೇತ್ ।
ಸ ಭವೇತ್ಪುರುಷಃ ಪ್ರಾಜ್ಞೋ ಧನವಾನ್ಗುಣವಾನ್ಸುಧೀಃ ॥ ೬೩ ॥

ಸ್ವಪ್ನೇ ದದಾತಿ ವಿಪ್ರಂ ವಾ ಪ್ರತಿಮಾಂ ವಾ ಶಿಲಾಮಯೀಂ ।
ಯಸ್ಮೈ ದದಾತಿ ವಿಪ್ರಶ್ಚ ಮಂತ್ರಸಿದ್ಧಿಶ್ಚ ತದ್ಭವೇತ್ ॥ ೬೪ ॥

ವಿಪ್ರೌ ವಿಪ್ರಸಮೂಹಂ ಚ ದೃಷ್ಟ್ವಾ ನತ್ವಾಽಽಶಿಷಂ ಲಭೇತ್ ।
ರಾಜೇಂದ್ರಃ ಸ ಭವೇದ್ವಾಽಪಿ ಕಿಂ ವಾ ಚ ಕವಿಪಂಡಿತಃ ॥ ೬೫ ॥

ಶುಕ್ಲಧಾನ್ಯಯುತಾಂ ಭೂಮಿಂ ಯಸ್ಮೈ ವಿಪ್ರಃ ಸಮುತ್ಸೃಜೇತ್ ।
ಸ್ವಪ್ನೇಽಪಿ ಪರಿತುಷ್ಟಶ್ಚ ಸ ಭವೇತ್ಪೃಥಿವೀಪತಿಃ ॥ ೬೬ ॥

---

೬೨. ಕನಸಿನಲ್ಲಾಗಲೀ ಮಾರ್ಗದಲ್ಲಿ ಎಲ್ಲಾದರೂ ಆಗಲೀ ಪುಸ್ತಕವನ್ನು ಪಡೆಯುವವನು ಪಂಡಿತನೂ ಯಶಸ್ವಿಯೂ ಆಗಿ ಭೂಮಂಡಲದಲ್ಲಿ ಪ್ರಖ್ಯಾತಿಯನ್ನು ಪಡೆಯುವನು.

೬೩. ಸ್ವಪ್ನದಲ್ಲಿ ಬ್ರಾಹ್ಮಣನು ಮತ್ತೊಬ್ಬ ಬ್ರಾಹ್ಮಣನಿಂದ ಮಹಾಮಂತ್ರೋಪದೇಶವನ್ನು ಪಡೆದರೆ ಅವನು ಮಹಾಪ್ರಾಜ್ಞನೂ ಹಣವಂತನೂ ಗುಣವಂತನೂ ಆಗುವುದರಲ್ಲಿ ಸಂಶಯವಿಲ್ಲ.

೬೪. ಸ್ವಪ್ನದಲ್ಲಿ ಒಬ್ಬ ಬ್ರಾಹ್ಮಣನಿಗೆ ಮತ್ತೊಬ್ಬ ಬ್ರಾಹ್ಮಣನು ಶಿಲಾಮಯವಾದ ಪ್ರತಿಮೆಯನ್ನು ದಾನಮಾಡಿದರೆ ಅವನು ಮಂತ್ರಸಿದ್ಧಿಯನ್ನು ಹೊಂದುವುದರಲ್ಲಿ ಸಂಶಯವಿಲ್ಲ.

೬೫. ಇಬ್ಬರು ಬ್ರಾಹ್ಮಣರನ್ನಾಗಲೀ ಬ್ರಾಹ್ಮಣರ ಸಮೂಹವನ್ನಾಗಲೀ ಕನಸಿನಲ್ಲಿ ಕಂಡು ಅವರಿಗೆ ನಮಸ್ಕರಿಸಿ ಆಶೀರ್ವಾದ ಪಡೆದರೆ ಅವನು ರಾಜೇಂದ್ರನಾಗಲೀ ಕವಿಪಂಡಿತನಾಗಲೀ ಆಗುವುದರಲ್ಲಿ ಸಂಶಯವಿಲ್ಲ.

೬೬. ವಿಪ್ರನು ಸಂತುಷ್ಟನಾಗಿ ಕನಸಿನಲ್ಲಾದರೂ ಶುಕ್ಲಧಾನ್ಯದಿಂದ ಕೂಡಿದ ಭೂಮಿಯನ್ನು ದಾನಮಾಡಿದರೆ ಅವನು ಪೃಥಿವೀಪತಿಯಾಗುವುದರಲ್ಲಿ ಸಂಶಯವಿಲ್ಲ.

ಸ್ವಪ್ನೇ ವಿಪ್ರೋ ರಥೇ ಕೃತ್ವಾ ನಾನಾಸ್ವರ್ಗಂ ಪ್ರದರ್ಶಯೇತ್ ।
ಚಿರಂಜೀವೀ ಭವೇದಾಯುರ್ಧನವೃದ್ಧಿರ್ಭವೇದ್ಧ್ರುವಂ ॥ ೬೭ ॥

ವಿಪ್ರಾಯ ವಿಪ್ರಃ ಸಂತುಷ್ಟೋ ಯಸ್ಮೈ ಕನ್ಯಾಂ ದದಾತಿ ಚ ।
ಸ್ವಪ್ನೇ ಚ ಸ ಭವೇನ್ನಿತ್ಯಂ ಧನಾಢ್ಯೋ ಭೂಪತಿಃ ಸ್ವಯಂ ॥ ೬೮ ॥

ಸ್ವಪ್ನೇ ಸರೋವರಂ ದೃಷ್ಟ್ವಾ ಸಮುದ್ರಂ ವಾ ನದೀಂ ನದಂ ।
ಶುಕ್ಲಾಹಿಂ ಶುಕ್ಲಶೈಲಂ ಚ ದೃಷ್ಟ್ವಾ ಶ್ರಿಯಮವಾಪ್ನುಯಾತ್ ॥ ೬೯ ॥

ಯಂ ಪಶ್ಯಂತಿ ಮೃತಂ ಸ್ವಪ್ನೇ ಸ ಭವೇಚ್ಚಿರಜೀವನಃ ।
ಅರೋಗೀ ರೋಗಿಣಂ ದುಃಖೀ ಸುಖಿನಂ ಚ ಧ್ರುವಂ ಭವೇತ್ ॥ ೭೦ ॥

ದಿವ್ಯಾ ಸ್ತ್ರೀ ಯಂ ಪ್ರವದತಿ ಮಮ ಸ್ವಾಮೀ ಭವಾನಿತಿ ।
ಸ್ವಪ್ನೇ ದೃಷ್ಟ್ವಾ ಚ ಜಾಗರ್ತಿ ಸ ಚ ರಾಜಾ ಭವೇದ್ಧ್ರುವಂ ॥ ೭೧ ॥

---

೬೭. ವಿಪ್ರನೊಬ್ಬನು ರಥದಲ್ಲಿ ಕುಳ್ಳಿರಿಸಿಕೊಂಡು ನಾನಾಸ್ವರ್ಗಗಳನ್ನು ತೋರಿಸಿದಂತೆ ಕನಸಾದರೆ ಆ ಸ್ವಪ್ನವನ್ನು ಕಂಡವನು ಚಿರಂಜೀವಿಯಾಗುವನಲ್ಲದೆ ಅವನಿಗೆ ಧನವೃದ್ಧಿಯಾಗುವುದರಲ್ಲಿ ಸಂಶಯವಿಲ್ಲ.

೬೮. ಕನಸಿನಲ್ಲಿ ಒಬ್ಬಬ್ರಾಹ್ಮಣನು ಮತ್ತೊಬ್ಬ ಬ್ರಾಹ್ಮಣನಿಗೆ ಕನ್ಯಾದಾನ ಮಾಡಿದರೆ ಅವನು ಸರ್ವದಾ ಧನವಂತನಾಗುವನಲ್ಲದೆ ಮುಂದಿನ ಜನ್ಮದಲ್ಲಿ ರಾಜನಾಗಿ ಹುಟ್ಟುವನು.

೬೯. ಸ್ವಪ್ನದಲ್ಲಿ ಸರೋವರವನ್ನಾಗಲೀ, ಸಮುದ್ರವನ್ನಾಗಲೀ, ನದನದಿಯನ್ನಾಗಲೀ, ಬಿಳುಪಾದ ಹಾವನ್ನಾಗಲೀ, ಬಿಳೀ ಬೆಟ್ಟವನ್ನಾಗಲೀ ಕಂಡರೆ ಅವರಿಗೆ ಸಂಪತ್ತು ಬರುವುದು.

೭೦. ಕನಸಿನಲ್ಲಿ ಸತ್ತವನನ್ನು ಕಂಡವನು ಚಿರಂಜೀವಿಯಾಗುವನು. ರೋಗಿಯನ್ನು ನೋಡಿದವನು ರೋಗರಹಿತನಾಗಿಯೂ, ಸುಖವಾಗಿದ್ದವನನ್ನು ಕಂಡವನು ದುಃಖಿಯಾಗಿಯೂ ಇರುವನು.

೭೧. ಕನಸಿನಲ್ಲಿ ದಿವ್ಯಸ್ತ್ರೀಯು ಕಾಣಿಸಿಕೊಂಡು 'ನೀನು ನನ್ನ ಪತಿ' ಎಂದು ಯಾರಿಗೆ ಹೇಳುವಳೋ ಅವನು ಕೂಡಲೇ ನಿದ್ರೆಯಿಂದ ಎಚ್ಚರಗೊಂಡರೆ ಮುಂದಿನ ಜನ್ಮದಲ್ಲಿ ರಾಜನಾಗುವನು.

ಸ್ವಪ್ನೇ ವಾ ಕಾಲಿಕಾಂ ದೃಷ್ಟ್ವಾ ಲಬ್ಧ್ವಾ ಸ್ಫಾಟಿಕಮಾಲಿಕಾಂ ।
ಇಂದ್ರಚಾಪಂ ಶಕ್ರವಜ್ರಂ ಸ ಪ್ರತಿಷ್ಠಾಂ ಲಭೇದ್ಧ್ರುವಂ ॥ ೭೨ ॥

ಸ್ವಪ್ನೇ ವದತಿ ಯಂ ವಿಪ್ರೋ ಮಮ ದಾಸೋ ಭವೇತಿ ಚ ।
ಹರಿದಾಸ್ಯಂ ಚ ಮದ್ಭಕ್ತಿಂ ಸ ಲಬ್ಧ್ವಾ ವೈಷ್ಣವೋ ಭವೇತ್ ॥ ೭೩ ॥

ಸ್ವಪ್ನೇ ವಿಪ್ರೋ ಹರಿಃ ಶಂಭುರ್ಬ್ರಹ್ಮಾಣೀ ಕಮಲಾ ಶಿವಾ ।
ಶುಕ್ಲಾ ಸ್ತ್ರೀ ದೇವಮಾತಾ ವಾ ಜಾಹ್ನವೀ ವಾ ಸರಸ್ವತೀ ॥ ೭೪ ॥

ಗೋಪಾಲಿಕಾವೇಷಧರೀ ಬಾಲಿಕಾ ರಾಧಿಕಾ ಮಮ ।
ಬಾಲಶ್ಚ ಬಾಲಗೋಪಾಲಃ ಸ್ವಪ್ನವಿದ್ಭಿಃ ಪ್ರಕಾಶಿತಃ ॥ ೭೫ ॥

ಏಷ ತೇ ಕಥಿತೋ ನಂದ ಸುಸ್ವಪ್ನಃ ಪುಣ್ಯಹೇತುಕಃ ।
ಶ್ರೋತುಮಿಚ್ಛಸಿ ಕಿಂ ವಾ ತ್ವಂ ಕಿಂ ಭೂಯಃ ಕಥಯಾಮಿ ತೇ ॥ ೭೬ ॥

---

೭೨. ಕನಸಿನಲ್ಲಿ ಕಾಳಿಕಾದೇವಿಯನ್ನು ನೋಡಿದರಾಗಲೀ, ಸ್ಫಟಿಕದ ಜಪ ಮಾಲೆಯನ್ನು ಪಡೆದರಾಗಲೀ ಕಾಮನ ಬಿಲ್ಲು ಮತ್ತು ವಜ್ರಾಯುಧವನ್ನು ಕಂಡ ರಾಗಲೀ ಶಾಶ್ವತ ಪ್ರತಿಷ್ಠೆಯನ್ನು ಹೊಂದುವನು.

೭೩. ಸ್ವಪ್ನದಲ್ಲಿ ವಿಪ್ರನು ಬಂದು ' ನೀನು ನನಗೆ ದಾಸನಾಗು ' ಎಂದು ಹೇಳಿದರೆ ಆ ಸ್ವಪ್ನವನ್ನು ಕಂಡವನು ಹರಿದಾಸನೂ, ಹರಿಭಕ್ತನೂ ಪರಮ ವೈಷ್ಣವನೂ ಆಗುವುದರಲ್ಲಿ ಸಂಶಯವಿಲ್ಲ.

೭೪-೭೫. ಸ್ವಪ್ನದಲ್ಲಿ ಬ್ರಾಹ್ಮಣ, ವಿಷ್ಣು, ಈಶ್ವರ, ಸಾವಿತ್ರಿ, ಕಮಲೆ, ಪಾರ್ವತೀ ಬಿಳುಪಾದ ಹೆಂಗಸು, ದೇವಮಾತೆ, ಜಾಹ್ನವಿ, ಸರಸ್ವತಿ ಗೋಪಾಲಿಕಾ ವೇಷಧಾರಿಣಿಯಾದ ರಾಧೆ ಮತ್ತು ಬಾಲಗೋಪಾಲವೇಷಧಾರಿಯಾದ ನಾನು ಕಾಣಿಸಿಕೊಂಡರೆ ಅವರಿಗೆ ಶ್ರೇಯಸ್ಸಾಗುವುದೆಂದು ಸ್ವಪ್ನಶಾಸ್ತ್ರಜ್ಞರು ಹೇಳುವರು.

೭೬. ಎಲೈ ನಂದನೇ, ಪುಣ್ಯಕಾರಣವಾದ ಸುಸ್ವಪ್ನಗಳ ವಿಷಯವನ್ನು ನಿನಗೆ ತಿಳಿಸಿದಂತಾಯಿತು. ನಿನಗೆ ಇನ್ನೇನನ್ನು ಕೇಳಬೇಕೆಂದು ಇಚ್ಛೆಯಿದೆ. ನಾನು ನಿನಗೆ ಮತ್ತೇನನ್ನು ಹೇಳಲಿ.?

**ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರದ ನಾರಾಯಣಸಂವಾದೇ
ಸುಸ್ವಪ್ನದರ್ಶನಂ ನಾಮ
ಸಪ್ತಸಪ್ತತಿತಮೋಽಧ್ಯಾಯಃ**

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀ ಕೃಷ್ಣಜನ್ಮ ಖಂಡದ
ಉತ್ತರಾರ್ಧದಲ್ಲಿ ನಾರಾಯಣನಾರದ ಸಂವಾದಪ್ರಸಂಗದಲ್ಲಿ
ಸುಸ್ವಪ್ನದರ್ಶನವೆಂಬ ಎಪ್ಪತ್ತೇಳನೆಯ
ಅಧ್ಯಾಯವು ಮುಗಿದುದು.

ಎಪ್ಪತ್ತೇಳನೆಯ ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಶುಭಾಶುಭಸ್ವಪ್ನಗಳ ಸ್ವರೂಪವನ್ನೂ ಅವುಗಳ ಫಲವನ್ನೂ ತಿಳಿಸಿದೆ ರಾತ್ರಿಯ ಮೊದಲನೆಯಝಾವದಲ್ಲಿ ಕಂಡ ಕನಸು ಒಂದು ವರ್ಷದಲ್ಲಿಯೂ, ಎರಡನೆಯಝಾವದಲ್ಲಿ ಕಂಡದ್ದು ಎಂಟುತಿಂಗಳಲ್ಲಿಯೂ, ಮೂರನೆಯಝಾವದ ಕನಸು ಮೂರುತಿಂಗಳಲ್ಲಿಯೂ, ನಾಲ್ಕನೆಯಝಾವದ ಕನಸು ಅರ್ಧತಿಂಗಳಿನಲ್ಲಿಯೂ, ಅರುಣೋದಯಕಾಲದ ಕನಸು ಹತ್ತುದಿನಗಳಲ್ಲಿಯೂ ಫಲಪ್ರದವಾಗುವುದು. ಕನಸನ್ನು ಯೋಗ್ಯರಾದವರಿಗೆ ಮಾತ್ರ ತಿಳಿಸಬೇಕು ನೀಚರಿಗೆ ತಿಳಿಸಬಾರದು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ಅಷ್ಟಸಪ್ತತಿತಮೋಽಧ್ಯಾಯಃ ||

|| ನಂದ ಉವಾಚ ||

ಶ್ರೀಕೃಷ್ಣ ಜಗತಾಂ ನಾಥ ಸುಸ್ವಪ್ನಶ್ಚ ಶ್ರುತೋ ಮಯಾ |
ವೇದಸಾರೋ ನೀತಿಸಾರೋ ಲೌಕಿಕೋ ವೈದಿಕಸ್ತಥಾ || ೧ ||

ಅಧುನಾ ಶ್ರೋತುಮಿಚ್ಛಾಮಿ ಪಾಪಂ ಯೇಷಾಂ ಚ ದರ್ಶನೇ |
ಯಸ್ಮಿನ್ಕರ್ಮಣೀ ವಾ ವತ್ಸ ತನ್ಮಾಂ ಕಥಿತುಮರ್ಹಸಿ || ೨ ||

ವಚನಂ ವೇದಶಾಸ್ತ್ರೋಕ್ತಂ ತಥಾ ವೇದಾನುಯಾಯಿನಃ |
ಶ್ರೋತುಮಿಚ್ಛಂತಿ ಸಂತಪ್ತಾ ಲೋಕಾಸ್ತ್ವನ್ಮುಖತಸ್ತಥಾ || ೩ ||

ಎಪ್ಪತ್ತೆಂಟನೆಯ ಅಧ್ಯಾಯವು

೧. ನಂದಗೋಪ :—ಎಲೈ ಜಗನ್ನಾಥನಾದ ಶ್ರೀ ಕೃಷ್ಣನೇ, ವೇದಸಾರವೂ ನೀತಿಸಾರವೂ ವೈದಿಕಲೌಕಿಕಸಂಮಿಶ್ರವೂ ಆದ ಸುಸ್ವಪ್ನಗಳ ವಿಷಯವನ್ನು ನಾನು ಕೇಳಿದುದಾಯಿತು.

೨. ಈಗ, ಸ್ವಪ್ನದಲ್ಲಿ ಯಾವವಸ್ತುಗಳನ್ನು ದರ್ಶನಮಾಡಿದರೆ ಪಾಪವುಂಟಾಗುವುದು ? ಯಾವ ಕಾರ್ಯಮಾಡಿದರೆ ದುಃಖ ಸಂಘಟಿಸುವುದು ? ಎಂಬುದನ್ನು ತಿಳಿಯಲಿಚ್ಛಿಸುತ್ತೇನೆ. ಅವುಗಳನ್ನು ನನಗೆ ವಿವರಿಸು.

೩. ದುಃಖಸಂತಪ್ತರಾದ ವೇದಾನುಯಾಯಿಗಳಾದ ಜನರು ವೇದಶಾಸ್ತ್ರೋಕ್ತವಾದ ನೀತಿಯನ್ನು ನಿನ್ನ ಬಾಯಿಂದ ಕೇಳಿ ತಿಳಿಯಲಿಚ್ಛಿಸುತ್ತಾರೆ.

ವೇದಾನಾಂ ಜನಕಸ್ತ್ವಂ ಚ ವೈದಿಕಾನಾಂ ಸತಾಮಪಿ ।
ಬ್ರಹ್ಮಾದೀನಾಂ ಸುರಾಣಾಂ ಚ ಮುನೀನಾಂ ಜಗತಾಮಪಿ ॥ ೪ ॥

ಶ್ರುತಂ ಯತ್ವನ್ಮುಖಾಂಭೋಜಾತ್ಪ್ರಮಾಣಂ ವಚನಾಮೃತಂ ।
ತೇನ ದೇಹೋऽಭಿಷಿಕ್ತೋ ಮೇ ವತ್ಸ ವಿಚ್ಛೇದದಾಹನಃ ॥ ೫ ॥

ಸ್ವಪ್ನೇ ಯಚ್ಚರಣಾಂಭೋಜಂ ಸರ್ವಕಾಮಫಲಪ್ರದಂ ।
ಬ್ರಹ್ಮಾದಯೋ ನ ಪಶ್ಯಂತಿ ತದದ್ಯ ದೃಷ್ಟಿಗೋಚರಂ ॥ ೬ ॥

ಅತಃ ಪರಂ ತ್ವತ್ಪದಾಬ್ಜಂ ಕ್ವ ಪಶ್ಯಾಮಿ ಚ ಪಾತಕೀ ।
ವಿಣ್ಮೂತ್ರಧಾರೀ ದೇಹೋ ಮೇ ನಿಬದ್ಧಶ್ಚ ಸ್ವಕರ್ಮಣಾ ॥ ೭ ॥

ಈದೃಶಂ ಚ ದಿನಂ ವತ್ಸ ಕದಾ ಮಮ ಭವಿಷ್ಯತಿ ।
ತ್ವಯಾ ಬ್ರಹ್ಮಾದಿನಾಥೇನ ಸಂವಾದೋ ಮಮ ಪಾಪಿನಃ ॥ ೮ ॥

---

೪. ನೀನು ವೇದಗಳಿಗೂ ಸನ್ಮಾರ್ಗಗಾಮಿಗಳಾದ ವೈದಿಕರಿಗೂ, ಬ್ರಹ್ಮಾದಿ ಸುರರಿಗೂ, ಮುನಿಗಳಿಗೂ, ಜಗತ್ತಿಗೂ ಕೂಡ ಮೂಲಕಾರಣನಾಗಿರುವೆ.

೫. ಎಲೈ ವತ್ಸನೇ, ನಿನ್ನ ವಿರಹಾಗ್ನಿಯಿಂದ ಸುಡುತ್ತಿದ್ದ ನನ್ನ ದೇಹವು ನಿನ್ನ ಮುಖಕಮಲದಿಂದ ಹೊರಟ ಪ್ರಮಾಣವಚನಾಮೃತದಿಂದ ನೆನೆಸಲ್ಪಟ್ಟು ಪ್ರಶಾಂತವಾಗಿದೆ.

೬. ಸರ್ವಕಾಮಫಲಗಳನ್ನು ಕೊಡುವ ಯಾವ ಪರಮಾತ್ಮನ ಪಾದಕಮಲಗಳನ್ನು ಬ್ರಹ್ಮಾದಿಗಳು ಕನಸಿನಲ್ಲಿಯೂ ಕೂಡ ಕಾಣಲಾರರೋ ಆ ಚರಣಕಮಲಗಳನ್ನು ಇಂದು ನಾನು ನೋಡಿ ಧನ್ಯನಾದೆನು.

೭. ಪಾಪಿಯಾದ ನನಗೆ ನಿನ್ನ ಪಾದಕಮಲಗಳನ್ನು ಮತ್ತೊಮ್ಮೆ ನೋಡುವ ಪುಣ್ಯವು ದೊರಕೀತೆ? ಮಲಮೂತ್ರಧಾರಿಯಾದ ನನ್ನ ದೇಹವು ಜನ್ಮಾಂತರ ಕರ್ಮಗಳ ಬಂಧನಕ್ಕೊಳಗಾಗಿದೆ.

೮. ಎಲೈ ವತ್ಸನೇ, ಬ್ರಹ್ಮಾದಿಗಳಿಗೂ ಒಡೆಯನಾದ ನಿನ್ನೊಡನೆ ಪಾಪಿಯಾದ ನಾನು ಸಂವಾದಮಾಡಿದಂಥ ಇಂಥ ಶುಭದಿವಸವು ಮತ್ತೊಮ್ಮೆ ನನಗೆ ಯಾವಾಗ ಒದಗುವುದು ?

ಕೃಪಾಂ ಕುರು ಕೃಪಾನಾಥ ಮಮ ದೋಷಂ ಕ್ಷಮಸ್ವ ಚ ।
ವತ್ಸಬುದ್ಧ್ಯಾ ಚ ದುರ್ನೀತಂ ಯತ್ಕೃತಂ ಚ ಮಹೇಶ್ವರ ॥ ೯ ॥

ಬ್ರಹ್ಮೇಶಶೇಷಮುನಯೋ ಧ್ಯಾಯಂತೇ ತ್ವತ್ಪದಾಂಬುಜಂ ।
ಸರಸ್ವತೀ ಶ್ರುತಿರ್ಯಸ್ಯ ಸ್ತವನೇ ಜಡತಾಂ ವ್ರಜೇತ್ ॥ ೧೦ ॥

ಇತ್ಯೇವಮುಕ್ತ್ವಾ ನಂದಶ್ಚ ನಿರಾನಂದಃ ಶುಚಾಽಽಕುಲಃ ।
ಮೂರ್ಛಾಮಾಪ ರುದಿತ್ವಾ ಚ ಪುತ್ರವಿಚ್ಛೇದವಿಹ್ವಲಃ ॥ ೧೧ ॥

ಸಂತ್ರಸ್ತೋ ಭಗವಾನ್ಕೃಷ್ಣೋ ಬೋಧಯಾಮಾಸ ಯತ್ನತಃ ।
ಪರಮಾಧ್ಯಾತ್ಮಿಕಂ ಜ್ಞಾನಂ ದದೌ ತಸ್ಮೈ ಜಗತ್ಪತಿಃ ॥ ೧೨ ॥

॥ ಶ್ರೀ ಭಗವಾನುವಾಚ ॥

ಹೇ ನಂದ ಜನಕಶ್ರೇಷ್ಠ ಸರ್ವಶ್ರೇಷ್ಠ ವ್ರಜೇಶ್ವರ ।
ಚೇತನಂ ಕುರು ಕಲ್ಯಾಣ ಜ್ಞಾನಂ ಚ ಪರಮಂ ಶೃಣು ॥ ೧೩ ॥

---

೯. ಎಲೈ ದಯಾಮಯನಾದ ಮಹೇಶ್ವರನೇ, ನೀನು ನನ್ನ ಮಗನೆಂಬ ಬುದ್ಧಿಯಿಂದ ನಾನು ನಿನಗೆ ಮಾಡಿದ ಅಪಚಾರ ಮತ್ತು ದೋಷಗಳನ್ನು ಕ್ಷಮಿಸಿ ನನ್ನನ್ನು ಕಾಪಾಡು.

೧೦. ಬ್ರಹ್ಮ, ಈಶ, ಶೇಷ ಮತ್ತು ಮುನಿಗಳು ಸರ್ವದಾ ನಿನ್ನ ಪಾದ ಕಮಲಗಳನ್ನು ಸ್ಮರಿಸುವರು. ಸರಸ್ವತೀ ದೇವಿಯೂ, ವೇದಗಳೂ ಸಹ ನಿನ್ನನ್ನು ಸ್ತುತಿಸಲಾರದೆ ಜಡವಾಗುವುವು.

೧೧. ನಂದಗೋಪನು ಈ ರೀತಿಯಾಗಿ ಹೇಳಿ ಪುತ್ರವಿರಹವ್ಯಾಕುಲಿತ ಯಿಂದ ಚಿಂತಾಕ್ರಾಂತನಾಗಿ ಅಳುತ್ತಾ ಮೂರ್ಛೆಗೊಂಡನು.

೧೨. ಆಗ ಭಗವಂತನಾದ ಕೃಷ್ಣನು ನಂದಗೋಪನಿಗೆ ಏನಾಯಿತೋ ಎಂದು ಭಯಗೊಂಡು ಅವನಿಗೆ ಪ್ರಯತ್ನಪೂರ್ವಕವಾಗಿ ಆಧ್ಯಾತ್ಮಿಕಜ್ಞಾನವನ್ನು ಭೋದಿಸಲು ಪ್ರಾರಂಭಿಸಿದನು.

೧೩. ಶ್ರೀ ಭಗವಾನ್ :—ಎಲೈ ನನ್ನ ಶ್ರೇಷ್ಠಜನಕನಾದ ನಂದಗೋಪನೇ ನೀನು ಸರ್ವಶ್ರೇಷ್ಠನೂ ವ್ರಜಾಧಿಪತಿಯೂ ಆಗಿರುವೆ. ಎಲೈ ಕಲ್ಯಾಣಸ್ವರೂಪನೇ, ಚೇತನವನ್ನು ಹೊಂದಿ ನಾನು ಬೋಧಿಸುವ ದಿವ್ಯಜ್ಞಾನವನ್ನು ಕೇಳು.

ಪರಮಾಧ್ಯಾತ್ಮಿಕಂ ಜ್ಞಾನಂ ಜ್ಞಾನಿನಾಂ ಚ ಸುದುರ್ಲಭಂ ।
ವೇದಶಾಸ್ತ್ರೇ ಗೋಪನೀಯಂ ತುಭ್ಯಮೇವ ದದಾಮ್ಯಹಂ ॥ ೧೪ ॥

ನಿಬೋಧ ಶ್ರೂಯತಾಂ ನಂದ ಸಾನಂದಃ ಸುಸಮಾಹಿತಃ ।
ಜನ್ಮಮೃತ್ಯುಜರಾವ್ಯಾಧಿರ್ಯದಭ್ಯಾಸಾನ್ನ ಜಾಯತೇ ॥ ೧೫ ॥

ಸ್ಥಿರೋ ಭವ ಮಹಾರಾಜ ವ್ರಜನಾಥ ವ್ರಜಂ ವ್ರಜ ।
ಜ್ಞಾನಂ ಲಬ್ಧ್ವಾ ಸದಾನಂದಃ ಶೋಕಮೋಹವಿವರ್ಜಿತಃ ॥ ೧೬ ॥

ಜಲಬುದ್ಬುದವತ್ಸರ್ವಂ ಸಂಸಾರಂ ಸಚರಾಚರಂ ।
ಪ್ರಭಾತೇ ಸ್ವಪ್ನವನ್ಮಿಥ್ಯಾ ಮೋಹಕಾರಣಮೇವ ಚ ॥ ೧೭ ॥

ಮಿಥ್ಯಾಕೃತ್ರಿಮನಿರ್ಮಾಣಹೇತುಶ್ಚ ಪಾಂಚಭೌತಿಕಃ ।
ಮಾಯಯಾ ಸತ್ಯಬುದ್ಧ್ಯಾ ಚ ಪ್ರತೀತಿಂ ಜಾಯತೇ ನರಃ ॥ ೧೮ ॥

---

೧೪. ಜ್ಞಾನಿಗಳಿಗೂ ಸುದುರ್ಲಭವಾದ ವೇದಶಾಸ್ತ್ರಗಳಲ್ಲಿ ವ್ಯಕ್ತವಾಗದಿರುವ ದಿವ್ಯವಾದ ಆಧ್ಯಾತ್ಮಿಕಜ್ಞಾನವನ್ನು ನಾನು ನಿನಗೆ ಬೋಧಿಸುವೆನು, ಸಾವಧಾನದಿಂದ ಕೇಳು.

೧೫. ಎಲೈ ನಂದನೇ, ಯಾವ ದಿವ್ಯಜ್ಞಾನವನ್ನು ಅಭ್ಯಾಸಮಾಡುವುದರಿಂದ ಜನ್ಮಮೃತ್ಯುಜರಾವ್ಯಾಧಿಗಳು ಪರಿಹಾರವಾಗುವುವೋ ಆ ದಿವ್ಯ ಜ್ಞಾನವನ್ನು ಬೋಧಿಸುವೆನು, ಸಾವಧಾನದಿಂದ ಕೇಳುವವನಾಗು.

೧೬. ಎಲೈ ವ್ರಜೇಶ್ವರನೇ, ನೀನು ಸ್ಥಿರಚಿತ್ತನಾಗಿ ಗೋಕುಲಕ್ಕೆ ಹಿಂತಿರುಗುವವನಾಗು. ನಾನು ಬೋಧಿಸುವ ದಿವ್ಯಜ್ಞಾನವನ್ನು ಪಡೆದು ಶೋಕ ಮೋಹರಹಿತನಾಗಿ ಸರ್ವದಾ ಆನಂದದಿಂದಿರು.

೧೭. ಸಚರಾಚರಾತ್ಮಕವಾದ ನಿಖಿಲಸಂಸಾರವೂ ಸಹ ನೀರಿನ ಗುಳ್ಳೆಯಂತೆ ಚಂಚಲವೂ ಮೋಹಕಾರಣವೂ ಆಗಿರುವುದಲ್ಲದೆ ಸ್ವಪ್ನವು ಎಚ್ಚರವಾದಾಗ ಹೇಗೆ ಸುಳ್ಳಾಗುವುದೋ ಹಾಗೆ ನಶ್ವರವಾದುದು.

೧೮. ಮಿಥ್ಯಾರೂಪವಾದ ಮತ್ತು ಕೃತ್ರಿಮವಾದ ಜಗತ್ತಿನ ನಿರ್ಮಾಣಕ್ಕೆ ಪಂಚ ಮಹಾಭೂತಗಳು ಕಾರಣವಾಗಿವೆ. ಮಾಯೆಗೊಳಗಾದ ಮನುಜನು ಈ ಜಗತ್ತಿನಲ್ಲಿ ಸತ್ಯಬುದ್ಧಿಯನ್ನು ಹೊಂದುವನು.

ಕಾಮಕ್ರೋಧಲೋಭಮೋಹೈರ್ವೇಷ್ಟಿತಃ ಸರ್ವಕರ್ಮಸು ।
ಮಾಯಯಾ ಮೋಹಿತಃ ಶಶ್ವಜ್ಜ್ಞಾನಹೀನಶ್ಚ ದುರ್ಬಲಃ ॥ ೧೯ ॥

ನಿದ್ರಾತಂದ್ರಾಕ್ಷುತ್ಪಿಪಾಸಾ ಕ್ಷಮಾಶ್ರದ್ಧಾದಯಾದಿಭಿಃ ।
ಲಜ್ಜಾ ಶಾಂತಿರ್ಧೃತಿಃ ಪುಷ್ಟಿಸ್ತುಷ್ಟಿಶ್ಚಾಭಿಶ್ಚ ವೇಷ್ಟಿತಃ ॥ ೨೦ ॥

ಮನೋಬುದ್ಧಿಚೇತನಾಭಿಃ ಪ್ರಾಣಜ್ಞಾನಾತ್ಮಭಿಃ ಸಹ ।
ಸಂಸಕ್ತಃ ಸರ್ವದೇವೈಶ್ಚ ಯಥಾ ವೃಕ್ಷಶ್ಚ ವಾಯಸೈಃ ॥ ೨೧ ॥

ಅಹಮಾತ್ಮಾ ಚ ಸರ್ವೇಶಃ ಸರ್ವಜ್ಞಾನಾತ್ಮಕಃ ಸ್ಮೃತಃ ।
ಮನೋ ಬ್ರಹ್ಮಾ ಚ ಪ್ರಕೃತಿರ್ಬುದ್ಧಿರೂಪಾ ಸನಾತನೀ ॥ ೨೨ ॥

ಪ್ರಾಣಾ ವಿಷ್ಣುಶ್ಚೇತನಾ ಸಾ ಪದ್ಮಾ ತು ಚಾಧಿದೇವತಾ ।
ಮಯಿ ಸ್ಥಿತೇ ಸ್ಥಿತಾಃ ಸರ್ವೇ ಗತಾಸ್ತೇಽಪಿ ಗತೇ ಮಯಿ ॥ ೨೩ ॥

---

೧೯. ಮನುಜನು ಕಾಮ ಕ್ರೋಧ ಲೋಭ ಮತ್ತು ಮೋಹಕ್ಕೆ ಒಳಗಾಗಿ ಸಕಲ ಕಾರ್ಯಗಳಲ್ಲೂ ನಿರತನಾಗುವನು. ದುರ್ಬಲನಾದ ಮನುಜನು ಮಾಯೆಯಿಂದ ಮೋಹಿತನಾಗಿ ಜ್ಞಾನಹೀನನಾಗುವನು.

೨೦. ನಿದ್ರೆ, ಸೋಮಾರಿತನ, ಹಸಿವು, ಬಾಯಾರಿಕೆ- ಅಸಹನೆ, ಅಶ್ರದ್ಧೆ, ಲಜ್ಜೆ, ಶಾಂತಿ, ಧೃತಿ, ತುಷ್ಟಿ, ಪುಷ್ಟಿ ಮುಂತಾದ ಭಾವಗಳಿಂದ ಕೂಡಿ ಮನುಜನು ಚಂಚಲನಾಗುವನು.

೨೧. ಮರವು ಕಾಗೆಗಳಿಂದ ಪರಿವೃತವಾಗಿರುವಂತೆ ಜೀವಿಯು ಮನಸ್ಸು ಬುದ್ಧಿ, ಚೇತನ, ಪ್ರಾಣ, ಜ್ಞಾನ ಮುಂತಾದ ರೂಪದಿಂದಿರುವ ದೇವತೆಗಳಿಂದ ಪರಿವೃತನಾಗಿರುವನು.

೨೨. ಸರ್ವೇಶ್ವರನಾದ ನಾನು ಸಕಲ ಜೀವಿಗಳ ಆತ್ಮಸ್ವರೂಪನೂ ಸರ್ವಜ್ಞಾನಾತ್ಮಕನೂ ಆಗಿರುವೆನು. ಬ್ರಹ್ಮನು ಮನೋರೂಪದಿಂದಲೂ, ಸನಾತನಿಯಾದ ಪ್ರಕೃತಿಯು ಬುದ್ಧಿರೂಪದಿಂದಲೂ ಇರುವರು.

೨೩. ವಿಷ್ಣುವು ಪ್ರಾಣಗಳ ರೂಪದಿಂದಲೂ, ಲಕ್ಷ್ಮಿಯು ಪ್ರಾಣದೇವತೆಯಾದ ಚೇತನಾರೂಪದಿಂದಲೂ ಇರುವರು. ನಾನು ದೇಹದಲ್ಲಿರುವವರೆವಿಗೂ ಆ ದೇವತೆಗಳೆಲ್ಲ ದೇಹದಲ್ಲಿರುವರು. ನಾನು ಹೊರಟು ಹೋದರೆ ಅವರೂ ಹೊರಟು ಹೋಗುವರು.

ಅಸ್ಮಾಭಿಶ್ಚ ವಿನಾ ದೇಹಃ ಸದ್ಯಃ ಪತತಿ ನಿಶ್ಚಿತಂ ।
ಪಾಂಚಭೌತೋ ವಿಲೀನಶ್ಚ ಪಂಚಭೂತೇಷು ತತ್ಕ್ಷಣಂ ॥ ೨೪ ॥

ನಾಮಸಂಕೇತರೂಪಂ ಚ ನಿಷ್ಫಲಂ ಮೋಹಕಾರಣಂ ।
ಶೋಕಶ್ಚಾಜ್ಞಾನಿನಾಂ ತಾತ ಜ್ಞಾನಿನಾಂ ನಾಸ್ತಿ ಕಿಂಚನ ॥ ೨೫ ॥

ನಿದ್ರಾದಯಃ ಶಕ್ತಯಶ್ಚ ತಾಃ ಸರ್ವಾ ಪ್ರಕೃತೇಃ ಕಲಾಃ ।
ಲೋಭಾದಯೋಽಧರ್ಮಾಂಶಾಸ್ತಥಾಽಹಂಕಾರಪಂಚಮಃ ॥ ೨೬ ॥

ತೇ ಬ್ರಹ್ಮವಿಷ್ಣುರುದ್ರಾಂಶಾ ಗುಣಾಃ ಸತ್ತ್ವಾದಯಸ್ತ್ರಯಃ ।
ಜ್ಞಾನಾತ್ಮಕಃ ಶಿವೋ ಜ್ಯೋತಿರಹಮಾತ್ಮಾ ಚ ನಿರ್ಗುಣಃ ॥ ೨೭ ॥

ಯದಾ ವಿಶಾಮಿ ಪ್ರಕೃತೌ ತದಾಽಹಂ ಸಗುಣಃ ಸ್ಮೃತಃ ।
ಸಗುಣಾ ವಿಷಯಾ ವಿಷ್ಣುಬ್ರಹ್ಮರುದ್ರಾದಯಸ್ತಥಾ ॥ ೨೮ ॥

---

೨೪. ಮೇಲೆ ಹೇಳಿದ ಈ ದೇವತೆಗಳೆಲ್ಲ ಹೊರಟುಹೋದರೆ ಕೂಡಲೇ ದೇಹದ ಪತನವಾಗುವುದು. ಕೂಡಲೇ ಪಂಚಭೂತಗಳು ಮಹಾ ಭೂತಗಳಲ್ಲಿ ಲೀನವಾಗುವುವು.

೨೫. ಜೀವಿಗಳ ಸಂಕೇತಾತ್ಮಕವಾದ ನಾಮರೂಪಾದಿಗಳೆಲ್ಲ ಅಜ್ಞಾನ ಮಯವಾದುದು. ಆದುದರಿಂದ ಎಲೈ ತಾತನೇ, ದೇಹವು ನಾಶವಾದರೆ ಅಜ್ಞಾನಿಗಳಿಗೆ ಶೋಕವುಂಟಾಗುವುದೇ ಹೊರತು ಜ್ಞಾನಿಗಳಿಗೆ ಇಲ್ಲ.

೨೬. ನಿದ್ರಾದಿ ಸಕಲ ಶಕ್ತಿಗಳೂ ಸಹ ಪ್ರಕೃತಿಯ ಅಂಶದಿಂದಿರುವುವು. ಲೋಭಾದಿಗಳೂ, ಪ್ರಾಣ, ಮನಸ್ಸು, ಬುದ್ಧಿ, ಚಿತ್ತ ಮತ್ತು ಅಹಂಕಾರಗಳೂ ಸಹ ಅಧರ್ಮದ ಅಂಶಗಳು.

೨೭. ಸತ್ವ, ರಜಸ್ಸು ಮತ್ತು ತಮಸ್ಸೆಂಬ ಗುಣಗಳು ಬ್ರಹ್ಮ, ವಿಷ್ಣು ಮತ್ತು ರುದ್ರನ ಅಂಶರೂಪವಾಗಿರುವುವು. ಶಿವನು ಜ್ಞಾನಾತ್ಮಕನಾಗಿರುವನು. ಜ್ಯೋತಿರ್ಮಯನೂ ನಿರ್ಗುಣನೂ ಆದ ನಾನು ಆತ್ಮಸ್ವರೂಪನಾಗಿರುವೆನು.

೨೮. ನಾನು ಪ್ರಕೃತಿಯೊಡನೆ ಸೇರಿದಾಗ ಸಗುಣಾತ್ಮಕನೆನಿಸುವೆನು ವಿಷ್ಣು, ಬ್ರಹ್ಮ, ರುದ್ರಾದಿಗಳೆಲ್ಲರೂ ಸಗುಣರು. ಇಂದ್ರಿಯ ವಿಷಯಗಳೆಲ್ಲವೂ ಸಗುಣಾತ್ಮಕವಾದುವು.

ಧರ್ಮೋ ಮದಂಶೋ ವಿಷಯೀ ಶೇಷಃ ಸೂರ್ಯಃ ಕಲಾನಿಧಿಃ ।
ಏವಂ ಸರ್ವೇ ಮತ್ಕಲಾಂಶಾ ಮುನಿ ಮನ್ವಾದಯಃ ಸುರಾಃ || ೨೯ ||

ಸರ್ವದೇಹೇ ಪ್ರವಿಷ್ಟೋಽಹಂ ನ ಲಿಪ್ತಃ ಸರ್ವಕರ್ಮಸು ।
ಜೀವನ್ಮುಕ್ತಶ್ಚ ಮದ್ಭಕ್ತೋ ಜನ್ಮಮೃತ್ಯುಜರಾಪರಃ || ೩೦ ||

ಸರ್ವಸಿದ್ಧೇಶ್ವರಃ ಶ್ರೀಮಾನ್ಕೀರ್ತಿಮಾನ್ಪಂಡಿತಃ ಕವಿಃ ।
ಚತುಸ್ತ್ರಿಂಶದ್ವಿಧಃ ಸಿದ್ಧಃ ಸರ್ವಕರ್ಮೋಽಪಹಾರಕಃ || ೩೧ ||

ತಮುಷ್ಯೆಮಿ ಸ್ವಯಂ ಸಿದ್ಧಂ ಭಕ್ತಸ್ತ್ವನ್ಯನ್ನ ವಾಂಛತಿ ।
ದ್ವಾವಿಂಶತಿವಿಧಂ ಸಿದ್ಧಂ ಸಿದ್ಧಿಸಾಧನಕಾರಣಂ || ೩೨ ||

ಮನ್ಮುಖಾಚ್ಛ್ರೂಯತಾಂ ನಂದ ಸಿದ್ಧಮಂತ್ರಂ ಗೃಹಾಣ ಚ ।
ಅಣಿಮಾ ಲಘಿಮಾ ಪ್ರಾಪ್ತಿಃ ಪ್ರಾಕಾಮ್ಯಂ ಮಹಿಮಾ ತಥಾ || ೩೩ ||

---

೨೯. ಧರ್ಮಪುರುಷನೂ, ಆದಿಶೇಷನೂ, ಸೂರ್ಯನೂ, ಕಲಾನಿಧಿಯೂ ಸಹ ನನ್ನ ಅಂಶಸಂಭೂತರು. ಹೀಗೆ ದೇವತೆಗಳೂ ಮುನಿಮನ್ವಾದಿಗಳೂ ಕೂಡ ನನ್ನ ಕಲಾಂಶಸಂಭೂತರು.

೩೦. ನಾನು ಸಕಲರ ದೇಹದಲ್ಲಿ ಪ್ರವೇಶಮಾಡಿದ್ದರೂ ಸಹ ಯಾವ ಕರ್ಮಲೇಪಕ್ಕೂ ನಾನು ಒಳಗಾಗುವವನಲ್ಲ. ನನ್ನ ಭಕ್ತನು ಜನ್ಮಮೃತ್ಯುಜರೆಯನ್ನು ಪರಿಹರಿಸಿಕೊಂಡು ಜೀವನ್ಮುಕ್ತನಾಗುವನು.

೩೧. ಸಕಲೇಷ್ಟಾರ್ಥಸಿದ್ಧಿಗಳನ್ನು ಪಡೆದ ನನ್ನ ಭಕ್ತನು ಶ್ರೀಮಂತನೂ ಕೀರ್ತಿವಂತನೂ ಪಂಡಿತನೂ ಕವಿಯೂ ಆಗಿರುವನು. ಸಕಲ ಕರ್ಮಗಳಿಂದಲೂ ಮುಕ್ತರಾಗುವ ಸಿದ್ಧರು ಮುವತ್ತನಾಲ್ಕು ವಿಧವಾಗಿರುವರು.

೩೨. ಸ್ವಯಂ ಸಿದ್ಧಪುರುಷನಾದ ಅವನನ್ನು ನಾನು ಮೆಚ್ಚುವೆನು. ಭಕ್ತನಾದವನು ನನ್ನನ್ನು ಬಿಟ್ಟು ಬೇರೆ ಏನನ್ನೂ ಬಯಸುವುದಿಲ್ಲ. ಸಿದ್ಧಿಸಾಧನೆಗಳಿಗೆ ಕಾರಣವಾದ ಸಿದ್ಧಿಯು ಇಪ್ಪತ್ತೆರಡು ವಿಧವಾಗಿರುವುದು.

೩೨-೩೬. ಎಲೈ ನಂದನೇ, ನಾನು ಹೇಳುವ ಸಿದ್ಧಿಗಳನ್ನೂ ಸಿದ್ಧಮಂತ್ರವನ್ನೂ ಕೇಳಿ ಆ ಮಂತ್ರೋಪದೇಶವನ್ನು ಸ್ವೀಕರಿಸು. ಅಣಿಮಾ, ಲಘಿಮಾ,

ಈಶಿತ್ವಂ ಚ ವಶಿತ್ವಂ ಚ ತಥಾ ಕಾಮಾವಸಾಯಿತಾ ।
ದೂರಶ್ರವಣಮೇವೇತಿ ಪರಕಾಯಪ್ರವೇಶನಂ ॥ ೩೪ ॥

ಮನೋಯಾಯಿತ್ವಮೇವೇತಿ ಸರ್ವಜ್ಞತ್ವಮಭೀಪ್ಸಿತಂ ।
ವಹ್ನಿಸ್ತಂಭಂ ಜಲಸ್ತಂಭಂ ಚಿರಂಜೀವಿತ್ವಮೇವ ಚ ॥ ೩೫ ॥

ಕಾಯವ್ಯೂಹಂ ಚ ವಾಕ್ಸಿದ್ಧಿಂ ಮೃತಾನಯನಮೀಪ್ಸಿತಂ ।
ಸೃಷ್ಟೀನಾಂ ಕಾರಣಂ ಚೈವ ಪ್ರಾಣಾಕರ್ಷಣಮೇವ ಚ ॥ ೩೬ ॥

ಓಂ ಸರ್ವೇಶ್ವರೇಶ್ವರಾಯ ಸರ್ವವಿಘ್ನವಿನಾಶಿನೇ ಮಧುಸೂಧನಾಯ ।
ಸ್ವಾಹೇತಿ ಅಯಂ ಮಂತ್ರೋ ಮಹಾಗೂಢಃ ಸರ್ವೇಷಾಂ ಕಲ್ಪಪಾದಪಃ ।
ಸಾಮವೇದೇ ಚ ಕಥಿತಃ ಸಿದ್ಧಾನಾಂ ಸರ್ವಸಿದ್ಧಿದಃ ॥ ೩೭ ॥

ಅನೇನ ಯೋಗಿನಃ ಸಿದ್ಧಾ ಮುನೀಂದ್ರಾಶ್ಚ ಸುರಾಸ್ತಥಾ ।
ಶತಲಕ್ಷಜಪೇನೈವ ಮಂತ್ರಸಿದ್ಧಿರ್ಭವೇತ್ಸತಾಂ ॥ ೩೮ ॥

ಪ್ರಾಪ್ತಿ, ಪ್ರಾಕಾಮ್ಯ, ಮಹಿಮಾ, ಈಶಿತ್ವ, ವಶಿತ್ವ, ಕಾಮಾವಸಾಯಿತಾ, ದೂರಶ್ರವಣ ಪರಕಾಯಪ್ರವೇಶನ ಮನೋಯಾಯಿತ್ವ, ಸರ್ವಜ್ಞತ್ವ, ವಹ್ನಿಸ್ತಂಭ, ಜಲಸ್ತಂಭ, ಚಿರಂಜೀವಿತ್ವ, ಕಾಯವ್ಯೂಹ, ವಾಕ್ಸಿದ್ಧಿ, ಮೃತಾನಯನ, ಸೃಷ್ಟಿ ಕಾರಣ, ಪ್ರಾಣಾಕರ್ಷಣ ಇವೆಲ್ಲವೂ ಸಿದ್ಧಿಯ ಭೇದಗಳು.

೩೭. ಓಂ ಸರ್ವೇಶ್ವರೇಶ್ವರಾಯ ಸರ್ವವಿಘ್ನವಿನಾಶಿನೇ ಮಧುಸೂಧನಾಯ ಸ್ವಾಹಾ ಮಹಾಗೋಪ್ಯವೂ, ಭಕ್ತರಿಗೆ ಕಲ್ಪವೃಕ್ಷಸದೃಶವೂ ಆದ ಈ ಮಹಾಮಂತ್ರವು ಸಾಮವೇದದಲ್ಲಿ ಹೇಳಲ್ಪಟ್ಟಿರುವುದಲ್ಲದೆ ಸಿದ್ಧರಿಗೆ ಸಕಲಸಿದ್ಧಿಯನ್ನುಂಟು ಮಾಡುತ್ತದೆ.

೩೮. ಈ ಮಂತ್ರದಿಂದಲೇ ಯೋಗಿಗಳು, ಸಿದ್ಧರು, ಮುನೀಂದ್ರರು ಮತ್ತು ಸುರರು ಇಷ್ಟಸಿದ್ಧಿಯನ್ನು ಪಡೆಯುವರು. ಸತ್ಪುರುಷರು ಇದನ್ನು ನೂರು ಲಕ್ಷಬಾರಿ ಜಪಿಸುವುದರಿಂದ ಮಂತ್ರಸಿದ್ಧಿಯುಂಟಾಗುವುದು.

ಯದಿ ನಾರಾಯಣೇ ಕ್ಷೇತ್ರೇ ಹವಿಷ್ಯಾನ್ನರತೋ ಜಪೇತ್ ।
ಗತ್ವಾ ಕುರು ಜಪಂ ತಾತ ಕಾಶಿಕಾಂ ಮಣಿಕರ್ಣಿಕಾಂ ॥ ೩೯ ॥

ಶೃಣು ನಾರಾಯಣಕ್ಷೇತ್ರಂ ಜಲಾಧಸ್ತಚ್ಚತುಷ್ಟಯಂ ।
ಅತ್ರ ನಾರಾಯಣಃ ಸ್ವಾಮೀ ನಾನ್ಯಃ ಸ್ವಾಮೀ ಕದಾಚನ ॥ ೪೦ ॥

ಜ್ಞಾನಂ ಚಾತ್ರ ಮೃತೇ ಲೋಕೇ ಮೂರ್ತಿರ್ಭವತಿ ತಸ್ಯ ವೈ ।
ವ್ರತಂ ವಿನಾsಪಿ ಮಂತ್ರೇಣ ಜೀವನ್ಮುಕ್ತೋ ನ ಸಂಶಯಃ ॥ ೪೧ ॥

ವ್ರಜಂ ಕುರು ಪವಿತ್ರಂ ಚ ವ್ರಜನಾಥ ವ್ರಜಂ ವ್ರಜ ।
ಪಾಪಂ ಯದ್ದರ್ಶನೇ ತಾತ ಕಥಯಾಮಿ ನಿಶಾಮಯ ॥ ೪೨ ॥

ದುಃಸ್ವಪ್ನಂ ಪಾಪಬೀಜಂ ಚ ಕೇವಲಂ ವಿಘ್ನಕಾರಣಂ ।
ಗೋಘ್ನಂ ಚ ಬ್ರಾಹ್ಮಣಘ್ನಂ ವಾ ಕೃತಘ್ನಂ ಕುಟಿಲಂ ತಥಾ ॥ ೪೩ ॥

---

೩೯. ನಾರಾಯಣಕ್ಷೇತ್ರದಲ್ಲಿ ಹವಿಷ್ಯಾನ್ನವನ್ನು ತಿಂದುಕೊಂಡು ಜಪಿಸುವವರು ಮಂತ್ರಸಿದ್ಧಿಯನ್ನು ಪಡೆಯುವರು. ಎಲೈ ತಂದೆಯೇ ನೀನು ಕಾಶೀಕ್ಷೇತ್ರಕ್ಕೆ ಹೋಗಿ ಮಣಿಕರ್ಣಿಕೆಯಲ್ಲಿ ಸ್ನಾನಮಾಡಿ ಈ ಮಂತ್ರವನ್ನು ಜಪಿಸು.

೪೦. ನಾರಾಯಣಕ್ಷೇತ್ರದಲ್ಲಾಗಲೀ, ನೀರಿನ ತಳಭಾಗದಲ್ಲಾಗಲೀ ಜಪಿಸುವುದರಿಂದ ನಾಲ್ಕರಷ್ಟು ಫಲ ದೊರಕುವುದು. ಈ ಕ್ಷೇತ್ರದಲ್ಲಿ ಶ್ರೀಮನ್ನಾರಾಯಣನೇ ಪ್ರಭುವು. ಮತ್ತಾರೂ ಪ್ರಭುವಿಲ್ಲ.

೪೧. ಈ ಕ್ಷೇತ್ರದಲ್ಲಿ ದಿವ್ಯಜ್ಞಾನವುಂಟಾಗುವುದಲ್ಲದೆ ಇಲ್ಲಿ ಮೃತರಾದವರು ಶ್ರೀಮನ್ನಾರಾಯಣನ ಮೂರ್ತಿಯನ್ನು ಹೊಂದುವರು. ಇಲ್ಲಿ ವ್ರತವನ್ನಾಚರಿಸದಿದ್ದರೂ ಮಂತ್ರಪಠನಮಾತ್ರದಿಂದಲೇ ಜೀವನ್ಮುಕ್ತರಾಗುವುದರಲ್ಲಿ ಸಂಶಯವಿಲ್ಲ.

೪೨. ಎಲೈ ವ್ರಜೇಶ್ವರನೇ, ಈಗ ನೀನು ಗೋಕುಲಕ್ಕೆ ಹಿಂತಿರುಗಿ ಅದನ್ನು ಪವಿತ್ರಗೊಳಿಸು. ಯಾವುದರ ದರ್ಶನದಿಂದ ಪಾಪಸಂಘಟನೆಯಾಗುವುದೆಂಬುದನ್ನು ಈಗ ಹೇಳುವೆನು. ಕೇಳು.

೪೩. ದುಃಸ್ವಪ್ನವು ಪಾಪಕ್ಕೆ ಮೂಲವೂ ವಿಘ್ನಕ್ಕೆ ಕಾರಣವೂ ಆಗಿದೆ. ಕನಸಿನಲ್ಲಿ ಗೋವುಗಳನ್ನು ಕೊಂದವನನ್ನಾಗಲೀ, ಬ್ರಹ್ಮಹತ್ಯೆ ಮಾಡಿದವನನ್ನಾಗಲೀ, ಉಪಕಾರಸ್ಮರಣೆಯಿಲ್ಲದವನನ್ನಾಗಲೀ ವಂಚಕನನ್ನಾಗಲೀ ನೋಡಬಾರದು.

ದೇವಘ್ನಂ ಪಿತೃಮಾತೃಘ್ನಂ ಪಾಪಂ ವಿಶ್ವಾಸಘಾತಿನಂ ।
ಮಿಥ್ಯಾಸಾಕ್ಷಿಪ್ರದಾತಾರಂ ಯಂ ಚಾತಿಥ್ಯವಿವಂಚನಂ ॥ ೪೪ ॥

ಗ್ರಾಮಯಾಜಿನಮೇವೇತಿ ದೇವವಿಪ್ರಸ್ವಹಾರಿಣಂ ।
ಅಶ್ವತ್ಥಘಾತಿನಂ ದುಷ್ಟಂ ಶಿವವಿಷ್ಣುವಿನಿಂದಕಂ ॥ ೪೫ ॥

ಅದೀಕ್ಷಿತಮನಾಚಾರಂ ಸಂಧ್ಯಾಹೀನಂ ದ್ವಿಜಂ ತಥಾ ।
ದೇವಲಂ ವೃಷವಾಹಂ ಚ ಶೂದ್ರಾಣಾಂ ಸೂಪಕಾರಕಂ ॥ ೪೬ ॥

ಶವದಾಹಂ ಚ ಶೂದ್ರಾಣಾಂ ಶೂದ್ರಶ್ರಾದ್ಧಾನ್ನಭೋಜಿನಂ ।
ಅವೀರಾಂ ಛಿನ್ನನಾಸಾಂಚ ದೇವಬ್ರಾಹ್ಮಣನಿಂದಕಾಂ ॥ ೪೭ ॥

ಪತಿಭಕ್ತಿವಿಹೀನಾಂ ಚ ವಿಷ್ಣುಭಕ್ತಿವಿಹೀನಕಾಂ ।
ಶೂದ್ರಾಣಾಂ ವಿಧವಾಂ ಚೈವ ಚಾಂಡಾಲೀಂ ವ್ಯಭಿಚಾರಿಣೀಂ ॥ ೪೮ ॥

---

೪೪. ದೇವತಾವಿಗ್ರಹವನ್ನು ನಾಶಮಾಡುವವನನ್ನೂ, ತಂದೆತಾಯಿಗಳ ಸಂಹಾರಕನನ್ನೂ, ಪಾಪಿಯನ್ನೂ, ವಿಶ್ವಾಸಘಾತುಕನನ್ನೂ, ಸುಳ್ಳುಸಾಕ್ಷಿಹೇಳುವವನನ್ನೂ ಅತಿಥಿಗೆ ವಂಚನೆಮಾಡುವವನನ್ನೂ ಕನಸಿನಲ್ಲಿ ನೋಡಬಾರದು.

೪೫. ಗ್ರಾಮಪುರೋಹಿತನನ್ನೂ, ದೇವತೆಗಳ ಮತ್ತು ಬ್ರಾಹ್ಮಣರ ಧನವನ್ನು ಅಪಹರಿಸುವವನನ್ನೂ, ಅರಳಿಮರವನ್ನು ನಾಶಪಡಿಸುವವನನ್ನೂ, ಶಿವ ವಿಷ್ಣು ಮುಂತಾದ ದೇವತೆಗಳ ನಿಂದಕನನ್ನೂ, ದುಷ್ಟನನ್ನೂ ಕನಸಿನಲ್ಲಿ ಕಾಣಬಾರದು.

೪೬. ಯಾವುದೇ ಒಂದು ದೀಕ್ಷೆಸ್ವೀಕರಿಸಿಕೊಳ್ಳದವನನ್ನೂ, ಆಚಾರರಹಿತನನ್ನೂ, ಸಂಧ್ಯಾಹೀನನಾದ ಬ್ರಾಹ್ಮಣನನ್ನೂ, ಗ್ರಾಮದೇವತೆಯ ಪೂಜಾರಿಯನ್ನೂ, ವೃಷಭದಿಂದ ಜೀವನಮಾಡುವ ಬ್ರಾಹ್ಮಣರನ್ನೂ ಸ್ವಪ್ನದಲ್ಲಿ ಕಾಣಬಾರದು.

೪೭. ಶೂದ್ರರ ಶವದಾಹಕನನ್ನೂ, ಶೂದ್ರರ ಶ್ರಾದ್ಧಾನ್ನ ಭೋಜಕನನ್ನೂ, ಗಂಡ ಮತ್ತು ಮಕ್ಕಳಿಲ್ಲದ ಸ್ತ್ರೀಯನ್ನೂ, ಕತ್ತರಿಸಲ್ಪಟ್ಟ ಮೂಗುಳ್ಳ ಮತ್ತು ದೇವಬ್ರಾಹ್ಮಣ ನಿಂದಕಳಾದ ಹೆಂಗಸನ್ನೂ ಕನಸಿನಲ್ಲಿ ನೋಡಬಾರದು

೪೮. ಪತಿಭಕ್ತಿರಹಿತಳೂ, ವಿಷ್ಣುಭಕ್ತಿವಿಹೀನಳೂ ಆದ ಹೆಂಗಸನ್ನೂ ಶೂದ್ರರ ವಿಧವೆಯನ್ನೂ, ಚಂಡಾಲಸ್ತ್ರೀಯನ್ನೂ, ವ್ಯಭಿಚಾರಿಣಿಯನ್ನೂ ಸ್ವಪ್ನದಲ್ಲಿ ಕಾಣಬಾರದು.

ತಶ್ವತ್ಕೋಪಯುತಂ ದುಷ್ಟಮೃಣಗ್ರಸ್ತಂ ಚ ಜಾರಜಂ ।
ಚೌರಂ ಮಿಥ್ಯಾವಾದಿನಂ ಚ ಶರಣಾಗತಯಾಯಿನಂ ॥ ೪೯ ॥

ಮಾಂಸಾಪಹಾರಿಣಂ ಚೈವ ಬ್ರಾಹ್ಮಣಂ ವೃಷಲೀಪತಿಂ ।
ಬ್ರಾಹ್ಮಣೀಗಾಮಿನಂ ಶೂದ್ರಂ ದ್ವಿಜಂ ವಾರ್ಧುಷಿಕಂ ತಥಾ ॥ ೫೦ ॥

ಅಗಮ್ಯಾಗಾಮಿನಂ ದುಷ್ಟಂ ಚತುರ್ವರ್ಣಂ ನರಾಧಮಂ ।
ಮಾತಾ ಸಪತ್ನೀಮಾತಾ ಚ ಶ್ವಶ್ರೂಶ್ಚ ಭಗಿನೀ ತಥಾ ॥ ೫೧ ॥

ಗುರುಪತ್ನೀ ಪುತ್ರಪತ್ನೀ ಸೋದರಸ್ಯ ಪ್ರಿಯಾ ಸತೀ ।
ಮಾತೃಷ್ವಸಾ ಪಿತೃಷ್ವಸಾ ಭಾಗೀನೇಯಪ್ರಿಯಾ ತಥಾ ॥ ೫೨ ॥

ಮಾತಲಾನೀ ನವೋಢಾ ಚ ಪಿತೃವ್ಯಸ್ತ್ರೀ ರಜಸ್ವಲಾ ।
ಪಿತೃಮಾತೃಪ್ರಸೂಶ್ಚೈವ ಚಾಗಮ್ಯಾಷ್ಟಾದಶ ಸ್ಮೃತಾಃ ॥ ೫೩ ॥

---

೪೯. ಪದೇಪದೇ ಕೋಪಗೊಳ್ಳುವವನನ್ನೂ, ದುಷ್ಟನನ್ನೂ, ಋಣಭಾಧೆಯಿಂದ ಕೂಡಿದವನನ್ನೂ, ಜಾರಪುರುಷನಿಗೆ ಜನಿಸಿದವನನ್ನೂ, ಕಳ್ಳನನ್ನೂ, ಸುಳ್ಳುಮಾತಾಡುವವನನ್ನೂ, ಶರಣಾಗತಪರಿತ್ಯಾಗಿಯನ್ನೂ ಕನಸಿನಲ್ಲಿ ನೋಡಬಾರದು.

೫೦. ಮಾಂಸಕದಿಯುವವನನ್ನೂ, ಶೂದ್ರಾಪತಿಯಾದ ಬ್ರಾಹ್ಮಣನನ್ನೂ ಬ್ರಾಹ್ಮಣಸ್ತ್ರೀಸಮಾಗಮಮಾಡುವ ಶೂದ್ರನನ್ನೂ, ಬಡ್ಡಿಯಿಂದ ಜೀವಿಸುವ ಬ್ರಾಹ್ಮಣನನ್ನೂ ಕನಸಿನಲ್ಲಿ ನೋಡಬಾರದು.

೫೧–೫೩. ಅಗಮ್ಯಳಾದ ಹೆಂಗಸಿನ ಸಂಗಮಮಾಡುವವನನ್ನೂ, ಚತುರ್ವರ್ಣಗಳಲ್ಲೂ ಹೀನನಾದ ಮನುಜನನ್ನೂ ಕನಸಿನಲ್ಲಿ ಕಾಣಬಾರದು. ಅಗಮ್ಯರಾದ ಸ್ತ್ರೀಯರು ಯಾರೆಂದರೆ :—ತಾಯಿ, ಸವತಿತಾಯಿ, ಅತ್ತೆ, ಸಹೋದರಿ, ಗುರುಪತ್ನಿ, ಸೊಸೆ, ಸಹೋದರನ ಹೆಂಡತಿ, ತಾಯಿಯ ಸಹೋದರಿ, ತಂದೆಯ ಸಹೋದರಿ, ಸಹೋದರಿಯ ಮಗನ ಹೆಂಡತಿ, ಸೋದರಮಾವನ ಹೆಂಡತಿ, ಋತುಮತಿಯಾಗದ ತನ್ನ ಪತ್ನಿ, ಚಿಕ್ಕಪ್ಪದೊಡ್ಡಪ್ಪಂದಿರ ಹೆಂಡತಿ, ರಜಸ್ವಲೆಯಾದ ಸ್ತ್ರೀ, ತಂದೆ ತಾಯಿಯರ ತಾಯಿ, ಈ ಹದಿನೆಂಟು ಮಂದಿ ಸ್ತ್ರೀಯರು ಅಗಮ್ಯರೆನಿಸುವರು.

ಕೀರ್ತಿತಾಃ ಸಾಮವೇದೇ ಚ ಪರಿಪಾಲ್ಯಾಃ ಸತಾಂ ವ್ರಜ ।
ಏತಾ ದೃಷ್ಟ್ವಾ ಚ ಸ್ಪೃಷ್ಟ್ವಾ ಚ ಬ್ರಹ್ಮಹತ್ಯಾಂ ಲಭೇನ್ನರಃ ॥ ೫೪ ॥
ತಸ್ಮಾದ್ದೈವೇನ ತಾ ದೃಷ್ಟ್ವಾ ಸೂರ್ಯಂ ದೃಷ್ಟ್ವಾ ಹರಿಂ ಸ್ಮರೇತ್ ।
ಕಾಮತೋ ಯದಿ ಪಶ್ಯಂತಿ ವಿನಿಂದ್ಯಾಸ್ತೇ ಭವಂತಿ ವೈ ॥ ೫೫ ॥

ತಸ್ಮಾತ್ಸಂತೋ ನ ಪಶ್ಯಂತಿ ಶಾಪಭೀತಾ ವ್ರಜೇಶ್ವರ ।
ರಾಹುಗ್ರಸ್ತಂ ರವಿಂ ಸೋಮಂ ನ ಪಶ್ಯಂತಿ ವಿಪಶ್ಚಿತಃ ॥ ೫೬ ॥

ಜನ್ಮಾಷ್ಟಸಪ್ತರಿಃಫಾಂಕದಶಮಸ್ಥೇ ದಿವಾಕರೇ ।
ಜನ್ಮರ್ಕ್ಷೇ ನಿಧನಂ ಚಾಪಿ ಚತುರ್ಥೇಽಪಿ ಕಲಾನಿಧೌ ॥ ೫೭ ॥

ನಷ್ಟಚಂದ್ರೋ ನ ದೃಶ್ಯಶ್ಚ ಭಾದ್ರೇ ಮಾಸಿ ಸಿತಾಸಿತೇ ।
ಚತುರ್ಥ್ಯಾಮುದಿತಶ್ಚಂದ್ರಃ ಪರಿತ್ಯಕ್ತೋ ಮನೀಷಿಭಿಃ ॥ ೫೮ ॥

---

೫೪. ಎಲೈ ನಂದನೇ, ಈ ಮೇಲೆ ಹೇಳಿದ ಸ್ತ್ರೀಯರನ್ನು ಮಾನವನು ಮಾನವಾಗಿ ಪಾಲಿಸಿಕೊಂಡಿರಬೇಕೆಂದು ಸಾಮವೇದದಲ್ಲಿ ಹೇಳಿದೆ. ಕಾಮುಕನಾದ ಮನುಜನು ಕನಸಿನಲ್ಲಿ ಈ ಸ್ತ್ರೀಯರನ್ನು ದರ್ಶನಮಾಡಿದರೂ ಅಥವಾ ಮುಟ್ಟಿದರೂ ಸಹ ಬ್ರಹ್ಮಹತ್ಯೆಗೆ ಗುರಿಯಾಗುವನು.

೫೫. ಆದುದರಿಂದ ಒಂದುವೇಳೆ ದುರ್ದೈವದಿಂದ ಈ ಸ್ತ್ರೀಯರನ್ನು ಕನಸಿನಲ್ಲಿ ಕಂಡರೆ ಬೆಳಗ್ಗೆ ಎದ್ದು ಸೂರ್ಯನದರ್ಶನಮಾಡಿ ಹರಿಸ್ಮರಣಮಾಡಬೇಕು. ಕಾಮಪೂರ್ವಕವಾಗಿ ಈ ಸ್ತ್ರೀಯರನ್ನು ನೋಡಿದವರು ನಿಂದ್ಯರಾಗುವುದರಲ್ಲಿ ಸಂಶಯವಿಲ್ಲ.

೫೬. ಎಲೈ ವ್ರಜನಾಥನೇ, ಆದಕಾರಣ ಪಾಪಭೀತರಾದ ಜನರು ಮೇಲೆ ಹೇಳಿದ ಈ ಸ್ತ್ರೀಯರನ್ನು ನೋಡುವುದಿಲ್ಲ. ಪಂಡಿತರಾದವರು ರಾಹುಗ್ರಸ್ತರಾದ ಸೂರ್ಯಚಂದ್ರರನ್ನು ಸಹ ನೋಡುವುದಿಲ್ಲ.

೫೭. ಜನ್ಮದಲ್ಲಿಯೂ, ಅಷ್ಟಮದಲ್ಲಿಯೂ, ಸಪ್ತಮದಲ್ಲಿಯೂ, ಹನ್ನೆರಡರಲ್ಲಿಯೂ, ಒಂಭತ್ತರಲ್ಲಿಯೂ, ದಶಮದಲ್ಲಿಯೂ ಸೂರ್ಯನಿದ್ದರೆ ಮತ್ತು ಚಂದ್ರನು ಜನ್ಮನಕ್ಷತ್ರದಲ್ಲಿಯೂ ನಾಲ್ಕನೆಯ ಸ್ಥಾನದಲ್ಲಿಯೂ ಇದ್ದರೆ ಜೀವಿಗೆ ಮರಣವುಂಟಾಗುವುದು.

೫೮. ಭಾದ್ರಪದಮಾಸದ ಶುಕ್ಲ ಕೃಷ್ಣಪಕ್ಷಗಳಲ್ಲಿ ನಷ್ಟ ಚಂದ್ರನನ್ನು ನೋಡಬಾರದು. ವಿದ್ವಾಂಸರು ವಿಶೇಷತಃ ಚತುರ್ಥಿಯ ದಿವಸ ಉದಯಿಸಿದ ಚಂದ್ರನನ್ನು ನೋಡಬಾರದು.

ಚಂದ್ರಸ್ತಾರಾಪಹರಣಂ ಕಲಂಕಮತಿದುಷ್ಕರಂ ।
ತಸ್ಮೈ ದದಾತಿ ಹೇ ನಂದ ಕಾಮತೋ ಯದಿ ಪಶ್ಯತಿ ॥ ೫೯ ॥

ಅಕಾಮತೋ ನರೋ ದೃಷ್ಟ್ವಾ ಮಂತ್ರಪೂತಂ ಜಲಂ ಪಿಬೇತ್ ।
ತದಾ ಶುದ್ಧೋ ಭವೇತ್ಸದ್ಯೋ ನಿಷ್ಕಲಂಕೀ ಮಹೀತಲೇ ॥ ೬೦ ॥

ಸಿಂಹಃ ಪ್ರಸೇನಮವಧೀತ್ಸಿಂಹೋ ಜಾಂಬವತಾ ಹತಃ ।
ಸುಕುಮಾರಕ ಮಾ ರೋದೀಸ್ತವ ಹ್ಯೇಷ ಸ್ಯಮಂತಕಃ ॥ ೬೧ ॥

ಇತಿ ಮಂತ್ರೇಣ ಪೂತಂ ಚ ಜಲಂ ಸಾಧು ಪಿಬೇದ್ ಧ್ರುವಂ ।
ಇತಿ ತೇ ಕಥಿತಂ ಸರ್ವಮಪರಂ ಕಥಯಾಮಿ ತೇ ॥ ೬೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣನಾರದಸಂವಾದೇ ಭಗವನ್ನಂದ
ಸಂವಾದೇಽಷ್ಟಸಪ್ತತಿತಮೋಽಧ್ಯಾಯಃ

---

೫೯. ಎಲೈ ನಂದನೇ, ಆ ದಿವಸ ಉದ್ದೇಶ ಪೂರ್ವಕವಾಗಿ ಚಂದ್ರನನ್ನು ನೋಡಿದವರಿಗೆ, ತಾರಾಪಹಾರ ರೂಪವಾದ ಚಂದ್ರನ ಕಳಂಕ ದೋಷವು ಸಂಘಟಿಸುವುದು.

೬೦. ಆ ದಿವಸ ಇಚ್ಛೆಯಿಲ್ಲದೆ ಆಕಸ್ಮಾತ್ ಚಂದ್ರನನ್ನು ನೋಡಿದ ಮನುಜನು ಮಂತ್ರದಿಂದ ಪವಿತ್ರವಾದ ನೀರನ್ನು ಕುಡಿದರೆ ಶುದ್ಧನಾಗುವನಲ್ಲದೆ ಕೂಡಲೇ ಕಲಂಕರಹಿತನಾಗುವನು.

೬೧-೬೨. 'ಸಿಂಹವು ಪ್ರಸೇನನನ್ನು ಕೊಂದಿತು. ಆ ಸಿಂಹವು ಜಾಂಬವಂತನೆಂಬ ಕರಡಿಯಿಂದ ಹತವಾಯಿತು. ಎಲೈ ಸುಕುಮಾರನೇ, ಅಳಬೇಡ ಇಗೋ ಈ ಸ್ಯಮಂತಕ ಮಣಿಯು ನಿನ್ನದಾಗಿದೆ.' ಈ ಅರ್ಥವನ್ನು ಕೊಡುವ ಮಂತ್ರೋಚ್ಚಾರಣೆ ಮಾಡಿ ಪವಿತ್ರವಾದ ನೀರನ್ನು ಕುಡಿಯುವುದರಿಂದ ಚತುರ್ಥೀ ಚಂದ್ರದರ್ಶನ ದೋಷವು ಪರಿಹಾರವಾಗುವುದು. ಈ ರೀತಿಯಾಗಿ ನಿನಗೆ ಎಲ್ಲ ವಿಷಯವನ್ನು ತಿಳಿಸಿದೆನು. ಇನ್ನು ಏನನ್ನು ನಿನಗೆ ತಿಳಿಸಲಿ ?

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದ ಉತ್ತರಾರ್ಧದ
ನಾರಾಯಣ ನಾರದ ಸಂವಾದಾಂತರ್ಗತವಾದ ಶ್ರೀ ಕೃಷ್ಣನಂದರ ಸಂವಾದದಲ್ಲಿ
ಎಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

ಎಪ್ಪತ್ತೆಂಟನೆಯ ಅಧ್ಯಾಯದ ಸಾರಾಂಶ.

ನಂದಗೋಪನ ಪ್ರಾರ್ಥನೆಯಂತೆ ಶ್ರೀ ಕೃಷ್ಣನು ಅವನಿಗೆ ಸೃಷ್ಟಿ ತತ್ವವನ್ನು ಉಪದೇಶಮಾಡಿ, ನಶ್ವರವಾದ ಜಗತ್ತಿನಲ್ಲಿ ತಂದೆ, ಮಗ ಮುಂತಾದ ಸಂಬಂಧಗಳು ಕೇವಲ ಭ್ರಾಂತಿಕಲ್ಪಿತವಾದುವುಗಳೆಂದೂ ಆದುದರಿಂದ ಬಂಧು ವಿಚ್ಛೇದಕ್ಕೆ ವ್ಯಥೆ ಪಡಬಾರದೆಂದೂ ತಿಳಿಸಿ ಗೋಕುಲಕ್ಕೆ ಹಿಂತಿರುಗುವಂತೆ ಹೇಳಿದನು. ಅನಂತರ ಕನಸಿನಲ್ಲಿ ಯಾವ ವಸ್ತುಗಳ ದರ್ಶನದಿಂದ ಪಾಪ ಸಂಘಟಿಸುವುದೆಂಬುದನ್ನು ವಿವರಿಸಿ ಕಾಯಾ ವಾಚಾ ಮನಸಾ ಪರಿಶುದ್ಧರಾಗಿರುವವರಿಗೆ ದುಃಸ್ವಪ್ನವುಂಟಾಗುವುದಿಲ್ಲವೆಂದು ತಿಳಿಸಿದನು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ನವಸಪ್ತತಿತಮೋಽಧ್ಯಾಯಃ ॥

॥ ಶ್ರೀ ನಂದ ಉವಾಚ ॥

ರಾಹುಗ್ರಸ್ತಃ ಕಥಂ ಸೂರ್ಯಶ್ಚಂದ್ರೋಽ ವಾಽಪಿ ಜಗತ್ಪ್ರಭೋ ।
ನೇಕ್ಷ್ಯಶ್ಚಂದ್ರಃ ಕಥಂ ಭಾದ್ರೇ ಚತುರ್ಥ್ಯಾಂ ಚಾಸಿತೇ ಸಿತೇ ॥ ೧ ॥

ವೇದಾನಾಂ ಜನಕಸ್ತ್ವಂ ಚ ಕಂ ಪೃಚ್ಛಾಮಿ ತ್ವಯಾ ವಿನಾ ।
ವೇದೇ ಪುರಾಣೇ ಗೋಪ್ಯಂ ಯನ್ನ ಜಾನಂತಿ ವಿಪಶ್ಚಿತಃ
ಇತಿ ತದ್ವಚನಂ ಶ್ರುತ್ವಾ ಚೇದಂ ವಚನಮಬ್ರವೀತ್ ॥ ೨ ॥

ಎಪ್ಪತ್ತೊಂಭತ್ತನೆಯ ಅಧ್ಯಾಯ.

೧. ಶ್ರೀನಂದ:— ಎಲೈ ಜಗದೊಡೆಯನೇ, ಸೂರ್ಯನಾಗಲೀ ಚಂದ್ರನಾಗಲೀ ರಾಹುಗ್ರಸ್ತರಾಗಲು ಕಾರಣವೇನು? ಭಾದ್ರಪದಮಾಸ ಶುಕ್ಲ ಕೃಷ್ಣ ಪಕ್ಷಗಳ ಚತುರ್ಥಿಯ ದಿವಸ ಚಂದ್ರನನ್ನು ಏಕೆ ನೋಡಬಾರದು ?

೨. ವೇದಗಳ ಜನಕನಾದ ನಿನ್ನನ್ನು ಬಿಟ್ಟು ಮತ್ತಾರಿಂದ ಈ ವಿಷಯಗಳನ್ನು ತಿಳಿಯಲು ಸಾಧ್ಯ? ವೇದ ಮತ್ತು ಪುರಾಣಗಳಲ್ಲಿ ಇಲ್ಲದಿರುವ ವಿಷಯವನ್ನು ವಿದ್ವಾಂಸರು ತಿಳಿಯಲಾರರು ಈ ರೀತಿಯಾದ ನಂದನ ಮಾತನ್ನು ಕೇಳಿ ಶ್ರೀ ಕೃಷ್ಣನು ಇಂತೆಂದನು.

॥ ಶ್ರೀ ಭಗವಾನುವಾಚ ॥

ಅತಥ್ಯಂ ವಚನಂ ಚೇದಂ ನಿಷಿದ್ಧಂ ವೈದಿಕೈರಪಿ ।
ಕ್ಷಮಸ್ವ ನಂದ ಭದ್ರಂ ತೇ ಪ್ರಶ್ನಮನ್ಯಂ ಕುರುಷ್ವ ಮಾಂ ॥ ೩ ॥

ವಿಶ್ವಸ್ತಂ ವಚನಂ ತಾತ ನ ಪ್ರಕಾಶ್ಯಂ ಮನೀಷಿಭಿಃ ।
ವಿಘ್ನಃ ಪ್ರಕಾಶೇ ಭವತಿ ಸತಾಂ ಛಿದ್ರಂ ಚ ದೈವತಃ ॥ ೪ ॥

॥ ಶ್ರೀ ನಂದ ಉವಾಚ ॥

ಕಥಯಸ್ವ ಜಗನ್ನಾಥ ನ ಭಕ್ತೇ ವಂಚನಂ ಕುರು ।
ಅದೃಶ್ಯೌ ಚಾಪಿ ದೇವೇಶೌ ರಾಹುಗ್ರಸ್ತೌ ಚ ಪುಣ್ಯದೌ ॥ ೫ ॥

॥ ಶ್ರೀ ಭಗವಾನುವಾಚ ॥

ಶೃಣು ನಂದ ಪ್ರವಕ್ಷ್ಯಾಮಿ ಕಥಾಮೇತಾಂ ಪುರಾತನೀಂ ।
ಯಾಂ ಶ್ರುತ್ವಾ ನಿಷ್ಕಲಂಕಶ್ಚ ತೀರ್ಥಸ್ನಾಯೀ ಭವೇನ್ನರಃ ॥ ೬ ॥

---

೩. ಶ್ರೀ ಕೃಷ್ಣ:— ಎಲೈ ನಂದನೇ, ಈ ವಿಷಯವು ಅಸತ್ಯವಾದುದು ಮತ್ತು ವೈದಿಕರಿಂದ ನಿಷಿದ್ಧವಾದುದು. ದಯವಿಟ್ಟು ಕ್ಷಮಿಸು. ಈ ಪ್ರಶ್ನೆಯನ್ನು ಬಿಟ್ಟು ಬೇರೆ ಯಾವುದಾದರೂ ಪ್ರಶ್ನೆಯನ್ನು ಕೇಳುವವನಾಗು.

೪. ಎಲೈ ತಂದೆಯೇ, ನಂಬಿರುವ ವಿಷಯಗಳ ಗುಟ್ಟನ್ನು ವಿದ್ವಾಂಸರು ವ್ಯಕ್ತ ಪಡಿಸಬಾರದು. ಅದನ್ನು ಪ್ರಕಟಪಡಿಸುವುದರಿಂದ ವಿಘ್ನವುಂಟಾಗುವುದರ ಜೊತೆಗೆ ಸತ್ಪುರುಷರಿಗೆ ದೇವತಾ ವಿಷಯಕವಾದ ಭಕ್ತಿಯು ಕಮ್ಮಿಯಾಗುವುದು.

೫. ನಂದ:— ಎಲೈ ಜಗನ್ನಾಥನೇ, ಭಕ್ತನಾದ ನನ್ನಲ್ಲಿ ಈ ವಂಚನೆ ಮಾಡದೆ ನಿಜವಾದ ವಿಷಯವನ್ನು ತಿಳಿಸು. ದೇವ ದೇವರೂ ಪುಣ್ಯದಾಯಕರೂ ಆದ ಚಂದ್ರಸೂರ್ಯರೂ ರಾಹುಗ್ರಸ್ತರಾಗಿ ಅದೃಶ್ಯರಾಗಲು ಕಾರಣವೇನು ?

೬. ಶ್ರೀ ಕೃಷ್ಣ:— ಎಲೈ ನಂದನೇ, ಪುರಾತನವಾದ ಈ ಕಥೆಯನ್ನು ಹೇಳುವೆನು ಸಾವಧಾನದಿಂದ ಕೇಳು. ಈ ಕಥೆಯನ್ನು ಕೇಳಿದ ಮನುಜನು ಕಳಂಕರಹಿತನಾಗಿ ತೀರ್ಥಸ್ನಾನ ಮಾಡಿದ ಪುಣ್ಯಕ್ಕೆ ಭಾಗಿಯಾಗುವನು.

ಸರ್ವಪಾತಕಿನಂ ದೃಷ್ಟ್ವಾ ಯತ್ಪಾಪಂ ಲಭತೇ ನರಃ ।
ಆಖ್ಯಾನಶ್ರವಣೇನೈವ ಭಸ್ಮೀಭೂತಂ ಭವಿಷ್ಯತಿ ॥ ೭ ॥

ಏಕದಾ ಜಮದಗ್ನಿಶ್ಚ ಮಹಾಕೌತೂಹಲಾನ್ವಿತಃ ।
ರೇಣುಕಾಸಹಿತಸ್ತುಷ್ಟೋ ಜಗಾಮ ನರ್ಮದಾತಟಂ ॥ ೮ ॥

ನಿರ್ಜನೇ ನರ್ಮದಾತೀರೇ ವಿಜಹಾರ ತಯಾ ಸಹ ।
ನವೋಢಯಾ ಚ ಸುಂದರ್ಯಾ ನವಯೌವನಯುಕ್ತಯಾ ॥ ೯ ॥

ಸುವೇಷಯಾ ಸುಸ್ಮಿತಯಾ ರತ್ನಭೂಷಣಯುಕ್ತಯಾ ।
ನತಯಾ ಸ್ತನಭಾರೇಣ ಶ್ರೋಣೀಭಾರೇಣ ಮಂದಯಾ ॥ ೧೦ ॥

ಸುಂದರೀಣಾಮತುಲಯಾ ಶ್ವೇತಚಂಪಕವರ್ಣಯಾ ।
ಸುಪೂರ್ಣಚಂದ್ರಾನನಯಾ ಕಟಾಕ್ಷಯುತಯಾ ತಥಾ ॥ ೧೧ ॥

---

೭. ಸಕಲ ಪಾಪಿಗಳನ್ನೂ ನೋಡುವುದರಿಂದ ಮನುಷ್ಯನಿಗೆ ಸಂಘಟಿಸುವ ಮಹಾ ಪಾಪವು ಈ ಕಥೆಯನ್ನು ಕೇಳಿದ ಮಾತ್ರದಿಂದ ಭಸ್ಮವಾಗುವುದರಲ್ಲಿ ಸಂಶಯವಿಲ್ಲ.

೮. ಒಮ್ಮೆ ಜಮದಗ್ನಿ ಮಹರ್ಷಿಯು ಕುತೂಹಲಾನ್ವಿತನಾಗಿ ರೇಣುಕಾದೇವಿಯೊಡಗೂಡಿ ನರ್ಮದಾ ನದಿಯ ತೀರದಲ್ಲಿ ವಿಹಾರ ಮಾಡಲು ಹೊರಟನು.

೯. ಆಗ ತಾನೇ ವಿವಾಹಿತಳೂ, ನವಯೌವನವತಿಯೂ, ಸುಂದರಿಯೂ ಆದ ಆ ರೇಣುಕೆಯೊಡನೆ ನಿರ್ಜನವಾದ ನರ್ಮದಾ ತೀರದಲ್ಲಿ ಸಂತೋಷದಿಂದ ವಿಹಾರ ಮಾಡಿದನು.

೧೦. ಸುವೇಷ ಭೂಷಿತಳೂ, ರತ್ನಾಲಂಕಾರಸಹಿತಳೂ, ಸ್ಮಿತಮುಖಿಯೂ ಆದ ಆ ರೇಣುಕೆಯು ಸ್ತನಗಳ ಭಾರದಿಂದ ಸ್ವಲ್ಪ ಬಗ್ಗಿದವಳು ನಿತಂಬ ಭಾರದಿಂದ ಮಂದಗಮನೆಯೂ ಆಗಿದ್ದಳು.

೧೧. ಸುಂದರಿಯರಲ್ಲೆಲ್ಲಾ ಅಸಮಾನ ಸುಂದರಿಯೂ, ಬಿಳುಪಾದ ಸಂಪಿಗೆಯ ವರ್ಣದವಳೂ ಆದ ಆ ರೇಣುಕೆಯು ಪೂರ್ಣ ಚಂದ್ರನಂತೆ ಆಹ್ಲಾದಕವಾದ ಮುಖವುಳ್ಳವಳೂ, ಮನೋಹರವಾದ ಕಟಾಕ್ಷವುಳ್ಳವಳೂ ಆಗಿದ್ದಳು.

ಅತೀವ ಸೂಕ್ಷ್ಮಾಂಬರಯಾ ಕಾಮಬಾಣಾರ್ತಯಾ ವ್ರಜ ।
ಪುಲಕಾಂಚಿತಸರ್ವಾಂಗ ಸಂಭೋಗೇನಾಪಿ ಮೂರ್ಛಯಾ ॥ ೧೨ ॥

ಪುಂಸ್ಕೋಕಿಲಯುತೇ ರಮ್ಯೇ ಶಬ್ದಿತೇ ಸುಮಧುವ್ರತೇ ।
ಸುಗಂಧಿವಾಯುಸಂಯುಕ್ತೇ ಪುಷ್ಪತಲ್ಪಾನ್ವಿತೇ ಶುಭೇ ॥ ೧೩ ॥

ಚಂದನೋ ಚಿತಸರ್ವಾಂಗಂ ವಸ್ತ್ರಮಾಲ್ಯಧರಂ ಮುನಿಂ ।
ಮಹಾರಾಸರಸಾಢ್ಯಂ ತಮುವಾಚ ಭಾಸ್ಕರಃ ಸ್ವಯಂ ॥ ೧೪ ॥

ವೇದಕರ್ತುಃ ಪ್ರಪೌತ್ರಸ್ತ್ವಂ ಬ್ರಹ್ಮಣಶ್ಚ ಜಗತ್ಪತೇ ।
ಚತುರ್ವೇದವಿಧೇಯೇಷು ಸುನಿಷ್ಣಾತಃ ಸದಾ ಶುಚಿಃ ॥ ೧೫ ॥

ವೇದಾಂಗಕರ್ತಾ ಧರ್ಮಜ್ಞಃ ಶ್ರೇಷ್ಠೋ ವೇದವಿದಾಂ ವರಃ ।
ಮಹಾತಪಸ್ವೀ ತೇಜಸ್ವೀ ಬ್ರಹ್ಮಚಾರೀ ಚ ಸುವ್ರತೀ ॥ ೧೬ ॥

---

೧೨. ಎಲೈ ನಂದನೇ, ಅತಿ ಸೂಕ್ಷ್ಮವಾದ ಬಟ್ಟೆಯನ್ನುಟ್ಟ ಕಾಮಬಾಣ ಪೀಡಿತಳಾದ ಆ ರೇಣುಕೆಯು ಸುಖ ಸಂಭೋಗದಿಂದ ರೋಮಾಂಚಿತ ಶರೀರಳಾಗಿ ಮೂರ್ಛೆಗೊಂಡಿದ್ದಳು.

೧೩–೧೪. ಗಂಡುಕೋಗಿಲೆಗಳ ಇಂಚರದಿಂದ ಮನೋಹರವಾಗಿಯೂ, ದುಂಬಿಗಳ ಝೇಂಕಾರದಿಂದ ರಮ್ಯವಾಗಿಯೂ, ಸುಗಂಧವನ್ನು ಬೀರುವ ವಾಯುವಿನಿಂದ ಆಕರ್ಷಕವಾಗಿಯೂ ಇದ್ದ ನರ್ಮದಾ ತೀರದಲ್ಲಿ ಪುಷ್ಪಶಯನದಲ್ಲಿ ಪವಡಿಸಿದ್ದ ಚಂದನಗಂಧದಿಂದ ಲಿಪ್ತಾಂಗನೂ, ವಸ್ತ್ರಮಾಲ್ಯಧರನೂ ರತಿ ಸುಖದಲ್ಲಿ ಚತುರನೂ ಆದ ಜಮದಗ್ನಿಯನ್ನು ಸೂರ್ಯದೇವನು ನೋಡಿ ಹೀಗೆಂದನು.

೧೫. ಎಲೈ ಜಮದಗ್ನಿ ಮಹರ್ಷಿಯೇ, ನೀನು ವೇದ ಕರ್ತೃವೂ ಜಗತ್ಪತಿಯೂ ಆದ ಬ್ರಹ್ಮನ ಮರಿಮಗನಾಗಿದ್ದೀಯೆ. ಚತುರ್ವೇದಗಳಲ್ಲಿ ವಿಹಿತವಾದ ಸನ್ಮಾರ್ಗದಲ್ಲಿ ನಿಷ್ಣಾತನೂ ಸರ್ವದಾ ಶುಚಿಯೂ ಆಗಿದ್ದೀಯೆ.

೧೬. ವೇದಾಂಗ ಕರ್ತೃವೂ, ಧರ್ಮಜ್ಞನೂ, ವೇದಜ್ಞರಲ್ಲಿ ಶ್ರೇಷ್ಠನೂ ಮಹಾ ತಪಸ್ವಿಯೂ, ತೇಜಸ್ವಿಯೂ, ಬ್ರಹ್ಮಚಾರಿಯೂ ಆದ ನೀನು ಸರ್ವದಾ ವ್ರತ ಪರಾಯಣನಾಗಿರುವೆ.

ಯುಷ್ಮದ್ವಿಧೋಕ್ತಂ ಶಾಸ್ತ್ರಂ ಚ ಪಠಿತ್ವಾನ್ಯಶ್ಚ ಪಂಡಿತಃ ।
ವೇದಪ್ರಣಿಹಿತೋ ಧರ್ಮೋ ಹ್ಯಧರ್ಮಸ್ತದ್ವಿಪರ್ಯಯಃ ॥ ೧೭ ॥

ಧರ್ಮಂ ತ್ಯಜತಿ ಧರ್ಮಜ್ಞೋ ಹ್ಯಧರ್ಮೇಣ ರತಃ ಕಥಂ ।
ದಿವಾಮೈಥುನದೋಷಂ ಚ ವಕ್ತಿ ವೇದೋ ವಿಶೇಷತಃ ॥ ೧೮ ॥

ಅಹಂ ಚ ಧರ್ಮಿಣಾಂ ಸಾಕ್ಷೀ ತೇನ ತ್ವಾಂ ಕಥಯಾಮಿ ತೇ ।
ಸೂರ್ಯಸ್ಯ ವಚನಂ ಶ್ರುತ್ವಾ ತತ್ಯಾಜಸ್ತ್ರೀಮೈಥುನಂ ದ್ವಿಜಃ ॥ ೧೯ ॥

ದೃಷ್ಟ್ವಾ ಪುರೋ ವಿಪ್ರರೂಪಂ ಸೂರ್ಯಂ ತೇಜಸ್ವಿನಂ ಸುರಂ ।
ಉವಾಚ ಸೂರ್ಯಂ ರಕ್ತಾಸ್ಯಃ ಕೋಪಲಜ್ಜಾಸಮನ್ವಿತಃ ॥ ೨೦ ॥

ರೇಣುಕಾ ಲಜ್ಜಿತಾ ತತ್ರ ವಿಧಾಯ ವಾಸಸೀ ಸತೀ ।

॥ ಜಮದಗ್ನಿರುವಾಚ ॥

ಕೋ ಭವಾನ್ಪಂಡಿತಂ ಮನ್ಯೋ ನ ತ್ವದನ್ಯೋಽಸ್ತಿ ಪಂಡಿತಃ ॥ ೨೧ ॥

---

೧೭. ನಿಮ್ಮಂಥವರು ರಚಿಸಿದ ಶಾಸ್ತ್ರವನ್ನು ಓದಿದ ಇತರ ಪಂಡಿತರು ಅದರಂತೆ ಆಚರಿಸಲು ಪ್ರಯತ್ನ ಪಡುತ್ತಾರೆ. ವೇದವಿಹಿತವಾದುದೇ ಧರ್ಮವು. ವೇದಬಾಹಿರವಾದುದೇ ಅಧರ್ಮವು.

೧೮. ಧರ್ಮಜ್ಞನಾದವನು ಅಧರ್ಮದಲ್ಲಿ ಆಸಕ್ತನಾಗಿ ಧರ್ಮವನ್ನು ಹೇಗೆ ಬಿಟ್ಟಾನು? ಹಗಲಿನ ಹೊತ್ತು ಸ್ತ್ರೀಸಂಗ ಮಾಡುವುದು ವಿಶೇಷ ದೋಷಕರವೆಂದು ವೇದದಲ್ಲಿ ಉಕ್ತವಾಗಿದೆ.

೧೯. ನಾನು ಧರ್ಮಿಷ್ಠರಿಗೆ ಸಾಕ್ಷಿಯಾದುದರಿಂದ ನಿನಗೆ ಈ ಮಾತನ್ನು ಹೇಳಬೇಕಾಗಿದೆ. ಸೂರ್ಯದೇವನಾಡಿದ ಈ ಮಾತನ್ನು ಕೇಳಿ ಜಮದಗ್ನಿಯು ರತಿಕ್ರೀಡೆಯನ್ನು ಬಿಟ್ಟಿದ್ದನು.

೨೦. ಮುಂದೆ ಬ್ರಾಹ್ಮಣನ ರೂಪದಲ್ಲಿ ಬಂದು ನಿಂತಿರುವ ತೇಜಸ್ವಿಯಾದ ಸೂರ್ಯನನ್ನು ನೋಡಿ ಕೋಪ ಮತ್ತು ಲಜ್ಜೆಯಿಂದ ಮುಖವನ್ನು ಕೆಂಪಗೆ ಮಾಡಿಕೊಂಡು ಈ ಮಹರ್ಷಿಯು ಇಂತೆಂದನು. ಲಜ್ಜಿತಳಾದ ರೇಣುಕೆಯೂ ಸಹ ತನ್ನ ವಸ್ತ್ರಗಳನ್ನು ಸರಿಯಾಗಿ ಧರಿಸಿಕೊಂಡಳು.

೨೧. ಜಮದಗ್ನಿ:— ನಾನೇ ಪಂಡಿತನೆಂದು ಅಹಂಭಾವದಿಂದ ಕೂಡಿರುವ ನೀನಾರು? ನಿನ್ನನ್ನು ಬಿಟ್ಟು ಉಳಿದವರಾರೂ ಪಂಡಿತರಿಲ್ಲವೋ?

ಅಹಂ ಭೃಗೋರ್ಭಗವತಃ ಶಿಷ್ಯಸ್ತ್ವಂ ಕಶ್ಯಪಸ್ಯ ಚ ।
ಚತುರ್ವೇದಾಂಶ್ಚ ಜಾನಾಮಿ ಧರ್ಮಾಧರ್ಮನಿರೂಪಣೇ ॥ ೨೨ ॥

ವೇದಪ್ರಣಿಹಿತೋ ಧರ್ಮೋ ಹ್ಯಧರ್ಮಸ್ತದ್ವಿಪರ್ಯಯಃ ।
ಅಜ್ಞಾನೀ ಪುರುಷಃ ಶಶ್ವಜ್ಜಡಿತಶ್ಚ ಸ್ವಕರ್ಮಣಾ ॥ ೨೩ ॥

ತೇಜೀಯಸಾಂ ನ ದೋಷಾಯ ವಹ್ನೇಃ ಸರ್ವಭುಜೋ ಯಥಾ ।
ಅನ್ಯೇ ಭವಾಂಶ್ಚ ಧರ್ಮಶ್ಚ ಸಾಕ್ಷೀ ಸರ್ವೇ ಚ ಕರ್ಮಣಾಂ ॥ ೨೪ ॥

ಫಲದಾತಾ ಚ ಶಾಸ್ತ್ರಜ್ಞೋ ಯತಸ್ತ್ವತ್ತನಯಃ ಸದಾ ।
ನ ವೈಷ್ಣವಾನಾಂ ಶಾಸ್ತಾರೋ ಯೂಯಮಸ್ಮಾಕಮೇವ ಚ ॥ ೨೫ ॥

ನ ವಾಸುದೇವಭಕ್ತಾನಾಮಶುಭಂ ವಿದ್ಯತೇ ಕ್ವಚಿತ್ ।
ಹರೇಃ ಸುದರ್ಶನಂ ಚಕ್ರಂ ಶಶ್ವದ್ರಕ್ಷತಿ ವೈಷ್ಣವಾನ್ ॥ ೨೬ ॥

---

೨೨. ನಾನು ಭಗವಂತನಾದ ಭೃಗುಮಹರ್ಷಿಯ ಪುತ್ರ ಮತ್ತು ಶಿಷ್ಯನು. ನೀನು ಕಶ್ಯಪಪ್ರಜಾಪತಿಯ ಪುತ್ರ ಮತ್ತು ಶಿಷ್ಯನು. ನಾನು ಚತುರ್ವೇದಗಳನ್ನು ತಿಳಿದಿರುವುದಲ್ಲದೆ ಧರ್ಮಾಧರ್ಮಗಳ ಸ್ವರೂಪವನ್ನು ತಿಳಿದಿರುವೆನು.

೨೩. ವೇದವಿಹಿತವಾದುದೆಲ್ಲವೂ ಧರ್ಮವೆನಿಸುವುದು. ಅದರಲ್ಲಿ ವಿಹಿತವಲ್ಲದುದು ಅಧರ್ಮವೆನಿಸುವುದು. ಅಜ್ಞಾನಿಯಾದ ಪುರುಷನು ತಾನು ಮಾಡುವ ಕರ್ಮಗಳ ಬಂಧನಕ್ಕೊಳಗಾಗುವನು.

೨೪. ಎಲ್ಲವನ್ನೂ ನುಂಗುವ ಅಗ್ನಿದೇವನಿಗೆ ಹೇಗೆ ಯಾವ ದೋಷವೂ ಇಲ್ಲವೋ ಹಾಗೆ ಯಾವ ಅಕಾರ್ಯವನ್ನು ಮಾಡಿದರೂ ತೇಜಸ್ವಿಗಳೂ ದೋಷಿಗಳಾಗುವುದಿಲ್ಲ. ನೀನೂ ಧರ್ಮಪುರುಷನೂ ಸಹ ಸಕಲ ಜೀವಿಗಳು ಮಾಡುವ ಕರ್ಮಗಳಿಗೆ ಸಾಕ್ಷಿಗಳಾಗಿದ್ದೀರಿ.

೨೫. ಶಾಸ್ತ್ರಜ್ಞನಾದ ನಿನ್ನ ಮಗನು(ಶನಿದೇವನು) ಸಕಲರ ಕರ್ಮಗಳ ಫಲದಾಯಕನಾಗಿರುವನು. ವಿಷ್ಣುಭಕ್ತರಾದ ನಮ್ಮಂಥವರಿಗೆ ನೀವು ಶಾಸಕರಾಗಲಾರಿರಿ.

೨೬ ವಾಸುದೇವನ ಭಕ್ತರಿಗೆ ಎಂದೆಂದಿಗೂ ಅಶುಭವುಂಟಾಗುವುದಿಲ್ಲ. ಶ್ರೀಹರಿಯ ಸುದರ್ಶನಚಕ್ರವು ಪದೇಪದೇ ವಿಷ್ಣುಭಕ್ತರನ್ನು ಕಾಪಾಡುತ್ತಿರುವುದು.

ನಾರಾಯಣಶ್ಚ ಭಗವಾನ್ಸ್ವಯಂ ಬ್ರಹ್ಮಾ ಚ ಶಂಕರಃ ।
ಶಾಸ್ತಾ ಯಮಶ್ಚ ನಾಸ್ಮಾಕಂ ತ್ವಂ ವೈ ನಾಪಿ ದಿವಾಕರ ॥ ೨೭ ॥

ರಾಜಪುತ್ರೋ ಯಥಾ ಸ್ಥಾನೇ ವಯಂ ಸ್ವಚ್ಛಂದಗಾಮಿನಃ ।
ಶಕ್ತೋಽಹಂ ಭಸ್ಮಸಾತ್ಕರ್ತುಂ ಯಮಂ ಸರ್ವಸುರಾಂಸ್ತಥಾ ॥ ೨೮ ॥

ಮಹೇಂದ್ರಪ್ರಭೃತಿನ್ಸೂರ್ಯ ಕ್ಷಣೇನೈವಾವಲೀಲಯಾ ।
ಕಸ್ತ್ವಂ ಧರ್ಮಪ್ರವಕ್ತಾ ಮೇ ಯಾಹಿ ಸ್ವಸ್ಥಾನಮೇವ ಚ ॥ ೨೯ ॥

ಮಮ ಶಾಸ್ತಾ ತು ಭಗವಾಞ್ಛ್ರೀಕೃಷ್ಣಃ ಪ್ರಕೃತೇಃ ಪರಃ ।
ಅದ್ಯ ಮೇ ನಿರ್ಜನೇ ಸ್ಥಾನೇ ರಸಭಂಗಸ್ತ್ವಯಾ ಕೃತಃ ॥ ೩೦ ॥

---

೨೭. ಎಲೈ ಸೂರ್ಯದೇವನೇ, ಸ್ವತಃ ಭಗವಂತನಾದ ನಾರಾಯಣನೇ ಆಗಲೀ, ಬ್ರಹ್ಮ ಮತ್ತು ಶಂಕರರಾಗಲೀ, ಯಮನಾಗಲೀ, ನೀನಾಗಲೀ ನಮ್ಮಂಥ ವೈಷ್ಣವರಿಗೆ ಶಾಸಕರಾಗಲಾರಿರಿ.

೨೮. ರಾಜಪುತ್ರರಂತೆ ನಾವೂ ಸಹ ಆಯಾಯ ಸ್ಥಾನಗಳಲ್ಲಿ ಸ್ವೇಚಾ ವಿಹಾರಿಗಳಾಗಿರುವೆವು. ನಾನು ಯಮನನ್ನೂ ಇತರ ದೇವತೆಗಳನ್ನೂ ಸಹ ನನ್ನ ತಪೋಬಲದಿಂದ ಬೂದಿಮಾಡಬಲ್ಲೆನು.

೨೯. ಎಲೈ ಸೂರ್ಯನೆ, ಮಹೇಂದ್ರನೇ ಮೊದಲಾದ ಅಷ್ಟದಿಕ್ಪಾಲಕರನ್ನೂ ಸಹ ಕ್ಷಣಕಾಲದಲ್ಲಿ ಲೀಲಾಮಾತ್ರದಿಂದ ನಾಶಗೊಳಿಸಬಲ್ಲೆನು. ನನಗೆ ಧರ್ಮಬೋಧನೆ ಮಾಡುವುದಕ್ಕೆ ನೀನಾರು ? ನಿನ್ನ ಸ್ಥಾನವನ್ನು ಕುರಿತು ನೀನು ಹೊರಡು.

೩೦. ಪ್ರಕೃತಿಗಿಂತ ಮೇಲಾದ ಶ್ರೀ ಕೃಷ್ಣನೊಬ್ಬನೇ ನನಗೆ ಶಾಸಕನಾಗಿರುವನು. ಇಂದು ಈ ನಿರ್ಜನಪ್ರದೇಶದಲ್ಲಿ ರತ್ಯಾಸಕ್ತನಾಗಿದ್ದ ನನಗೆ ನೀನು ರಸಭಂಗವನ್ನುಂಟುಮಾಡಿದೆ.

ಮಮ ಶಾಪಾತ್ಪಾಪದೃಶ್ಯೋ ರಾಹುಗ್ರಸ್ತೋ ಭವಿಷ್ಯಸಿ ।
ಪ್ರಪಶ್ಯಂ ತ್ವಾಂ ಯೇ ಘನಾಃ ಸರ್ವೇ ದೂರೀಭೂತಾ ಭವಂತಿ ತೇ ॥ ೩೧ ॥

ತ್ವಾಮುಚ್ಛನ್ನಂ ಕರಿಷ್ಯಂತಿ ವಾಯುನಾ ಪ್ರೇರಿತಾಸ್ತಥಾ ।
ಸ್ವತೇಜಸಾ ಭವಾನ್ಗರ್ವಾದ್ಧತತೇಜೋ ಭವಿಷ್ಯಸಿ ॥ ೩೨ ॥

ಮೇಘಾಚ್ಛನ್ನಃ ಸ್ವಲ್ಪತೇಜಾ ರಾಹುಗ್ರಸ್ತೋ ಭವಾನ್ಭವ ।
ಬ್ರಾಹ್ಮಣಸ್ಯ ವಚಃ ಶ್ರುತ್ವಾ ಭಗವಾನ್ಭಾಸ್ಕರಃ ಸ್ವಯಂ ॥ ೩೩ ॥

ತತಃ ಪುಟಾಂಜಲಿರ್ಭೂತ್ವಾ ತುಷ್ಟಾವ ಮುನಿಪುಂಗವಂ ।

॥ ಶ್ರೀ ಭಾಸ್ಕರ ಉವಾಚ ॥

ಅವಧ್ಯಾಃ ಸರ್ವಧರ್ಮಜ್ಞಾ ಧನ್ಯಾ ಮಾನ್ಯಾಃ ಪುರಸ್ಕೃತಾಃ ॥ ೩೪ ॥

ನಾರಾಯಣಶ್ಚ ಭಗವಾಞ್ಶಂಭುರ್ಬ್ರಹ್ಮಾ ಸ್ವಯಂ ಪ್ರಭುಃ ।
ಗಣೇಶಶ್ಚಾಪಿ ಶೇಷಶ್ಚ ಧರ್ಮಶ್ಚಾಪಿ ಸನಾತನಃ ॥ ೩೫ ॥

೩೧–೩೨. ಆದುದರಿಂದ ನೀನು ನನ್ನ ಶಾಪದಿಂದ ಪಾಪದರ್ಶನನೂ ರಾಹುಗ್ರಸ್ತನೂ ಆಗುವೆ. ಯಾವ ಮೋಡಗಳು ನಿನ್ನನ್ನು ನೋಡಲು ಹೆದರಿ ಬಹಳ ದೂರ ಓಡುತ್ತಿದ್ದವೋ ಅವುಗಳೆಲ್ಲವೂ ವಾಯುವಿನಿಂದ ಪ್ರೇರಿತವಾಗಿ ನಿನ್ನನ್ನು ಮುಚ್ಚಿಕೊಳ್ಳುತ್ತವೆ. ನಿನ್ನ ತೇಜಸ್ಸಿನಿಂದ ಗರ್ವಿತನಾದ ನೀನೂ ಸಹ ತೇಜೋಹೀನನಾಗುವೆ.

೩೩. ನೀನು ಮೇಘದಿಂದ ಮರೆಮಾಡಲ್ಪಟ್ಟವನೂ, ಅಲ್ಪತೇಜಸ್ವಿಯೂ, ರಾಹುಗ್ರಸ್ತನೂ ಆಗು. ಈ ರೀತಿಯಾದ ಬ್ರಾಹ್ಮಣನ ಶಾಪವನ್ನು ಕೇಳಿ ಭಗವಂತನಾದ ಭಾಸ್ಕರನು ಕೈಗಳನ್ನು ಮುಗಿದುಕೊಂಡು, ಮುನಿಶ್ರೇಷ್ಠನಾದ ಜಮದಗ್ನಿಯನ್ನು ಸ್ತುತಿಸಲಾರಂಭಿಸಿದನು.

೩೪. ಶ್ರೀ ಭಾಸ್ಕರ :—ಎಲೈ ಸಕಲ ಧರ್ಮಗಳನ್ನು ಅರಿತಿರುವವನೇ, ಧನ್ಯರೂ, ಮಾನ್ಯರೂ, ಸರ್ವಕಾರ್ಯಗಳಲ್ಲಿ ಪುರಸ್ಕೃತರೂ ಆದವರು ಶಾಪಕ್ಕೂ ವಧೆಗೂ ಅನರ್ಹರಾಗಿರುವರು.

೩೫–೩೬. ಭಗವಂತನಾದ ನಾರಾಯಣನೂ, ಶಂಭುವೂ, ಸ್ವಯಂಸೃಷ್ಟಿಕರ್ತನಾದ ಬ್ರಹ್ಮನೂ, ಗಣೇಶ, ಶೇಷ ಮತ್ತು ಸನಾತನನಾದ ಧರ್ಮಪುರುಷನೂ

ಸ್ತುವಂತಿ ಬ್ರಾಹ್ಮಣಂ ಸರ್ವೇ ವಿಪ್ರರೂಪಿಜನಾರ್ದನಂ ।
ಕ್ಷಮಸ್ವ ವೈಷ್ಣವಃ ಶುದ್ಧಃ ಸ್ವಧರ್ಮಂ ಚ ಸಮಾಚರ ॥ ३६ ॥

ವೈಷ್ಣವಾನಾಂ ಕುತಃ ಕೋಪೋ ಹೃದಿ ಯೇಷಾಂ ಜನಾರ್ದನಃ ।
ಅಸ್ಮಾಭಿಃ ಪೂಜಿತಾ ವಿಪ್ರಾ ಯುಷ್ಮಾಭಿಃ ಪೂಜಿತಾಃ ಸುರಾಃ ॥ ३೭ ॥

ಪರಸ್ಪರಂ ಸ್ನೇಹಪಾತ್ರಂ ಚೇಪಮಾಚರಣಂ ದ್ವಿಜ ।
ಅಹಮೇವ ತ್ವಯಾ ಶಪ್ತೋ ಮಯಾ ಶಪ್ತೋ ಭವಾನ್ಸವ ॥ ३೮ ॥

ಅನ್ಯಥಾ ಮಾಂ ವದಂತ್ಯೇವ ಸೂರ್ಯಂ ನಿಸ್ತೇಜಸಂ ಜನಾಃ ।
ಪರಾಭೂತಃ ಕ್ಷತ್ರಿಯೇಣ ಭವಿಷ್ಯಸಿ ದ್ವಿಜೇಶ್ವರ ॥ ३೯ ॥

ಮರಣಂ ಕ್ಷತ್ರಿಯಾಸ್ತ್ರೇಣ ಭವತಶ್ಚ ಭವಿಷ್ಯತಿ ।
ಸೂರ್ಯಸ್ಯ ವಚನಂ ಶ್ರುತ್ವಾ ಚುಕೋಪ ಬ್ರಾಹ್ಮಣಃ ಪುನಃ ।
ತಂ ಶಶಾಪಾತಿರಕ್ತಾಸ್ಯಃ ಶಂಭುನಾ ನಿರ್ಜಿತೋ ಭವಾನ್ ॥ ೪೦ ॥

ಸಹ 'ವಿಪ್ರರೂಪೀಜನಾರ್ದನ' ನೆನಿಸುವ ಬ್ರಾಹ್ಮಣನನ್ನು ಸ್ತೋತ್ರಮಾಡುವರು. ವೈಷ್ಣವನೂ ಶುದ್ಧಾಚಾರಪರನೂ ಆದ ನೀನು ನನ್ನನ್ನು ಕ್ಷಮಿಸಿ ನಿನ್ನ ಧರ್ಮವನ್ನು ಆಚರಿಸು.

೩೭. ಯಾರ ಹೃದಯದಲ್ಲಿ ಜನಾರ್ದನನಿರುವನೋ ಅಂಥ ವೈಷ್ಣವರಿಗೆ ಕೋಪವೆಲ್ಲಿಂದ ಬರಬೇಕು? ದೇವತೆಗಳಾದ ನಾವೆಲ್ಲರೂ ಬ್ರಾಹ್ಮಣರನ್ನು ಗೌರವಿಸುತ್ತೇವೆ. ಬ್ರಾಹ್ಮಣರಾದ ನೀವೆಲ್ಲರೂ ದೇವತೆಗಳನ್ನು ಪೂಜಿಸುತ್ತೀರಿ.

೩೮. ಎಲೈ ಬ್ರಾಹ್ಮಣೋತ್ತಮನೇ, ಈ ರೀತಿ ವರ್ತಿಸುವುದು ಅನ್ಯೋನ್ಯ ಸ್ನೇಹಕ್ಕೆ ಕಾರಣವಾಗುವುದು. ಈಗ ನೀನು ನನಗೆ ಶಾಪಕೊಟ್ಟುದರಿಂದ ನಾನೂ ನಿನಗೆ ಶಾಪಕೊಡುವೆನು.

೩೯–೪೦. ಇಲ್ಲದಿದ್ದರೆ ಜನರೆಲ್ಲರೂ ಸೂರ್ಯನು ತೇಜೋಹೀನನೆಂದು ಹೇಳಿಬಿಡುವರು. ಆದುದರಿಂದ ಎಲೈ ಬ್ರಾಹ್ಮಣೋತ್ತಮನೇ, ನೀನು ಕ್ಷತ್ರಿಯನಿಂದ ತಿರಸ್ಕೃತನಾಗುವೆ. ನಿನಗೆ ಕ್ಷತ್ರಿಯನ ಅಸ್ತ್ರಗಳಿಂದ ಮರಣವುಂಟಾಗುವುದು. ಸೂರ್ಯನ ಈ ಮಾತುಗಳನ್ನು ಕೇಳಿ ಜಮದಗ್ನಿಯು ಕುಪಿತನಾಗಿ ಮುಖವನ್ನು ಕೆಂಪುಮಾಡಿಕೊಂಡು 'ನೀನು ಈಶ್ವರನಿಂದ ಸೋಲುವವನಾಗು' ಎಂದು ಸೂರ್ಯನಿಗೆ ಶಾಪಕೊಟ್ಟನು

ಉಭಯೋಃ ಕಲಹಂ ಜ್ಞಾತ್ವಾ ಕಶ್ಯಪೇನ ಸಹ ವ್ರಜ ।
ಆಜಗಾಮ ಸ್ವಯಂ ಬ್ರಹ್ಮಾ ವಿಧಾತಾ ಜಗತಾಮಪಿ ॥ ೪೧ ॥

ಆಗತ್ಯ ಬ್ರಹ್ಮಾ ಸಂತ್ರಸ್ತಂ ಬೋಧಯಾಮಾಸ ಭಾಸ್ಕರಂ ।
ಮುನಿಶ್ರೇಷ್ಠಂ ಚ ಧರ್ಮಜ್ಞಂ ಧರ್ಮಜ್ಞಾನಾಂ ಗುರೋರ್ಗುರುಃ ॥ ೪೨ ॥

॥ ಬ್ರಹ್ಮೋವಾಚ ॥

ಕ್ಷಮಸ್ವ ಭಾಸ್ಕರ ತ್ವಂ ಚ ಸಾಕ್ಷಾನ್ನಾರಾಯಣೋ ಭವಾನ್ ।
ಯುಷ್ಮಾಕಂ ಪರಿಪಾಲ್ಯಶ್ಚಾಪ್ಯವಧ್ಯೋ ಬ್ರಾಹ್ಮಣಃ ಸದಾ ॥ ೪೩ ॥

ಅಹಂ ಕರೋಮಿ ಭವತೋ ವಿಪ್ರಶಾಪಾಂತಮುಲ್ಬಣಂ ।
ಅತ್ರಾಹಮಾಗತಸ್ತ್ರಸ್ತೋ ಭೃಗುಣಾ ಪ್ರೇರಿತಸ್ತತಃ ॥ ೪೪ ॥

ಸ್ಫುಟೋಽಹಂ ಪ್ರೇರಿತಶ್ಚಾಸ್ಮಿ ಕಶ್ಯಪೇನ ಮರೀಚಿನಾ ।
ಶಾಂತೋ ಭವ ಸುರಶ್ರೇಷ್ಠ ಸಾಕ್ಷೀ ತ್ವಂ ಸರ್ವಕರ್ಮಣಾಂ ॥ ೪೫ ॥

---

೪೧. ಎಲೈ ನಂದನೇ, ಅವರಿಬ್ಬರ ಜಗಳವನ್ನು ನೋಡಿ ಜಗತ್ಸೃಷ್ಟಿಕರ್ತನಾದ ಬ್ರಹ್ಮನು ಕಶ್ಯಪ ಪ್ರಜಾಪ್ರತಿಯೊಡಗೂಡಿ ಅಲ್ಲಿಗೆ ತಾನೇ ಬಂದನು.

೪೨. ಧರ್ಮಜ್ಞರ ಗುರುಗಳಿಗೆಲ್ಲ ಗುರುವಾದ ಬ್ರಹ್ಮನು ಅಲ್ಲಿಗೆ ಬಂದು ಬ್ರಹ್ಮ ಶಾಪದಿಂದ ಭೀತನಾಗಿದ್ದ ಸೂರ್ಯನನ್ನೂ, ಸೂರ್ಯನ ಶಾಪಕ್ಕೊಳಗಾಗಿದ್ದ ಧರ್ಮಜ್ಞನಾದ ಜಮದಗ್ನಿ ಮುನಿಯನ್ನೂ ಕುರಿತು ಇಂತು ಉಪದೇಶ ಮಾಡಿದನು.

೪೩. ಬ್ರಹ್ಮಾ:— ಎಲೈ ಸೂರ್ಯದೇವನೇ, ನೀನೇ ಸಾಕ್ಷಾನ್ನಾರಾಯಣನು. ಈ ಬ್ರಾಹ್ಮಣನನ್ನು ಕ್ಷಮಿಸು. ಬ್ರಾಹ್ಮಣರು ಸರ್ವದಾ ಅವಧ್ಯರೂ ನಿಮ್ಮಿಂದ ರಕ್ಷಿಸಲ್ಪಡತಕ್ಕವರೂ ಆಗಿರುವರು

೪೪. ನಾನು ನಿನಗೆ ಬಂದಿರುವ ಅತ್ಯುಲ್ಬಣವಾದ ಬ್ರಾಹ್ಮಣ ಶಾಪವನ್ನು ಕೊನೆಗಾಣಿಸುವೆನು. ನಾನು ಭೃಗುಮಹರ್ಷಿಯಿಂದ ಪ್ರೇರಿತನಾಗಿ ಭಯದಿಂದ ಇಲ್ಲಿಗೆ ಓಡಿ ಬಂದೆನು.

೪೫. ಕಶ್ಯಪ ಪ್ರಜಾಪ್ರತಿಯಿಂದಲೂ ಸಹ ನಾನು ಪ್ರೇರಿತನಾಗಿ ಬಂದಿದ್ದೇನೆ. ಎಲೈ ಸುರಶ್ರೇಷ್ಠನೇ, ಸರ್ವ ಕರ್ಮಗಳಿಗೂ ಸಾಕ್ಷಿಯಾದ ನೀನು ಶಾಂತನಾಗು.

ಕುತ್ರಚಿದ್ದಿವಸೇ ಬ್ರಹ್ಮಂಸ್ತ್ವಂ ತತ್ರ ಕುತ್ರಚಿತ್ಕ್ಷಣಂ ।
ಭವಿಷ್ಯಸಿ ಘನಾಚ್ಛನ್ನಃ ಸದ್ಯೋ ಮುಕ್ತೋ ಭವಿಷ್ಯಸಿ || ೪೬ ||

ನ್ಯೂನಾತಿರಿಕ್ತೇ ವರ್ಷೇ ಚ ರಾಹುಗ್ರಸ್ತೋ ಭವಿಷ್ಯಸಿ ।
ತತ್ರಾದೃಶ್ಯಶ್ಚ ಕೇಷಾಂಚಿತ್ಪುಣ್ಯದೃಶ್ಯೋ ಹಿ ಕಸ್ಯಚಿತ್ || ೪೭ ||

ಅನ್ಯಥಾ ಸರ್ವಕಾಲೇನ ಪುಣ್ಯದೃಶ್ಯೋ ಭವಾನ್ಭುವಿ ।
ತ್ವಾಂ ದೃಷ್ಟ್ವಾ ಚ ನಮಸ್ಕೃತ್ಯ ಸರ್ವೇ ನಿಷ್ಪಾಪಿನೋ ಜನಾಃ || ೪೮ ||

ಜನ್ಮಸಪ್ತಾಷ್ಟರಿಃಫಾಂಕಚತುರ್ಥೇ ದಶಮೇ ತಥಾ ।
ಜನ್ಮರ್ಕ್ಷೇ ನಿಧನಂ ನೃಣಾಮದೃಶ್ಯಸ್ತ್ವಂ ಭವಿಷ್ಯಸಿ || ೪೯ ||

ಅಸ್ತಕಾಲೇ ಘನಾಚ್ಛನ್ನೇ ಮಧ್ಯಾಹ್ನಸ್ಥೇ ಜಲೇಽಪಿ ವಾ ।
ಅರ್ಧೋದಿತೇ ಚ ಕಾಲೇ ಚ ಪಾಪದೃಶ್ಯೋ ಭವಿಷ್ಯಸಿ || ೫೦ ||

---

೪೬. ಈ ಬ್ರಾಹ್ಮಣ ಶಾಪವು ನಿನ್ನ ವಿಷಯದಲ್ಲಿ ಯಾವುದೋ ಒಂದು ದಿವಸ ಯಾವುದೋ ಕ್ಷಣದಲ್ಲಿ ಮಾತ್ರ ಫಲಿಸುವುದು. ಒಂದು ಕ್ಷಣಕಾಲ ಮಾತ್ರ ನೀನು ಮೇಘಾಚ್ಛಾದಿತನಾಗಿ ಕೂಡಲೇ ಮೇಘವಿಮುಕ್ತನಾಗುವೆ.

೪೭. ಮಳೆಯು ಹೆಚ್ಚು ಕಡಿಮೆಯಾದ ಕಾಲದಲ್ಲಿ ನೀನು ರಾಹುಗ್ರಸ್ತನಾಗುವೆ. ಆ ಕಾಲದಲ್ಲಿ ಕೆಲವರಿಗೆ ಅದೃಶ್ಯನಾಗಿಯೂ, ಕೆಲವು ಪುಣ್ಯವಂತರಿಗೆ ದೃಶ್ಯನಾಗಿಯೂ ಇರುವೆ.

೪೮. ಅದನ್ನು ಬಿಟ್ಟು ಉಳಿದ ಕಾಲದಲ್ಲೆಲ್ಲ ಭೂಲೋಕದಲ್ಲಿ ನಿನ್ನನ್ನು ನೋಡುವವರು ಪುಣ್ಯವಂತರು. ನಿನ್ನನ್ನು ನೋಡಿ ನಮಸ್ಕರಿಸಿದವರು ಪಾಪರಹಿತರಾಗುವುದರಲ್ಲಿ ಸಂಶಯವಿಲ್ಲ.

೪೯. ನೀನು ಜನ್ಮನಕ್ಷತ್ರದಲ್ಲಾಗಲೀ, ಜನ್ಮಾತ್ ಏಳು, ಎಂಟು, ಹನ್ನೆರಡು. ಒಂಭತ್ತು ನಾಲ್ಕು ಮತ್ತು ಹತ್ತರಲ್ಲಾಗಲೀ ಇದ್ದರೆ ಮನುಜರಿಗೆ ಮರಣವುಂಟಾಗುವುದಲ್ಲದೆ ನೀನು ದರ್ಶನಕ್ಕೆ ಅಯೋಗ್ಯನಾಗಿರುವೆ.

೫೦. ಅಸ್ತಮಯದಲ್ಲಾಗಲೀ, ಮೇಘವು ಮುಚ್ಚಿಕೊಂಡಾಗಲಾಗಲೀ, ಮಧ್ಯಾಹ್ನದಲ್ಲಾಗಲೀ, ನೀರಿನಲ್ಲಾಗಲೀ. ಅರ್ಧ ಉದಯಿಸಿರುವಾಗಲಾಗಲೀ, ನಿನ್ನನ್ನು ನೋಡುವುದರಿಂದ ಪಾಪವುಂಟಾಗುವುದು.

ಭಾರ್ಯಾದುಃಖನಿಮಿತ್ತೇನ ಭಾರ್ಯಯಾ ಹೇತುಭೂತಯಾ ।
ಶ್ವಶುರೇಣ ಶಾಲಕೇನ ಹತತೇಜಾ ಭವಿಷ್ಯಸಿ ॥ ೫೦ ॥

ಅನ್ಯಥಾ ತವ ತೇಜಶ್ಚ ಸಂಜ್ಞಾ ಸಹಿತುಮಕ್ಷಮಾ ।
ಮಾಲೀಸುಮಾಲಿಯುದ್ಧೇ ಚ ಶಂಭುನಾ ತ್ವಂ ಪರಾಜಿತಃ ॥ ೫೧ ॥

ಇತ್ಯೇವಮುಕ್ತ್ವಾ ಸೂರ್ಯಂ ಚ ಬೋಧಯಾಮಾಸ ಬ್ರಾಹ್ಮಣಂ ।
ನಮ್ರಂ ಶಾಪಪರಾಭೂತಂ ಲಜ್ಜಿತಂ ಕೋಪಿತಂ ವ್ರಜ ॥ ೫೨ ॥

ಹೇ ವಿಪ್ರ ಸ್ವಗೃಹಂ ಗಚ್ಛ ಗಚ್ಛ ವತ್ಸ ಯಥಾಸುಖಂ ।
ತ್ವತ್ತೇಜಸಾ ಕ್ಷಣೇನೈವ ಭಸ್ಮೀಭೂತಂ ಭವೇಜ್ಜಗತ್ ॥ ೫೪ ॥

ಸೂರ್ಯಸ್ತ್ವತ್ಪರಿಪಾಲ್ಯಶ್ಚ ಭವಾನ್ಸೂರ್ಯಸ್ಯ ನಿತ್ಯಶಃ ।
ಪರಸ್ಪರಂ ಚ ಪೂಜ್ಯಶ್ಚ ಸಂಬಂಧಃ ಪೋಷ್ಯಪೋಷಕಃ ॥ ೫೫ ॥

---

೫೦. ಹೆಂಡತಿಗುಂಟಾದ ದುಃಖವೇ ನಿಮಿತ್ತವಾಗಿ ಹೆಂಡತಿಯ ಕಾರಣ ಮಾವನಿಂದಲೂ, ಮೈದುನನಿಂದಲೂ, ತಿರಸ್ಕೃತನಾಗಿ ತೇಜೋಹೀನನಾಗುವೆ.

೫೧. ಇಲ್ಲದಿದ್ದರೆ ಸಂಜ್ಞಾದೇವಿಯು ನಿನ್ನ ತೇಜಸ್ಸನ್ನು ಸಹಿಸಲು ಅಸಮರ್ಥಳಾಗುತ್ತಿದ್ದಳು. ನೀನು ಮಾಲಿ ಮತ್ತು ಸುಮಾಲಿಯರ ಯುದ್ಧದಲ್ಲಿ ಈಶ್ವರನಿಂದ ಪರಾಜಿತನಾಗುವೆ.

೫೨. ಈರೀತಿಯಾಗಿ ಬ್ರಹ್ಮನು ಸೂರ್ಯನನ್ನು ಸಮಾಧಾನಗೊಳಿಸಿ ಜಮದಗ್ನಿಯನ್ನು ಕುರಿತಿಂತೆಂದನು. ಶಾಪದಿಂದ ತಿರಸ್ಕೃತನಾಗಿ ಕೋಪ ಮತ್ತು ಲಜ್ಜೆಯಿಂದ ಕೂಡಿದ್ದ ಆ ಮುನಿಯು ನಮ್ರಮುಖನಾಗಿ ನಿಂತಿದ್ದನು.

೫೪. ಎಲೈ ಬ್ರಾಹ್ಮಣೋತ್ತಮನೇ, ನೀನು ಮನೆಗೆ ಸಂತೋಷದಿಂದ ಹಿಂತಿರುಗು. ನಿನ್ನ ತೇಜಸ್ಸಿನಿಂದ ಕ್ಷಣಮಾತ್ರದಲ್ಲಿಯೇ ಪ್ರಪಂಚವು ಭಸ್ಮೀಭೂತವಾಗುವುದು.

೫೫. ಯಾವಾಗಲೂ ನೀನು ಸೂರ್ಯನ ಪರಿಪಾಲಕನಾಗಿರುವೆ. ಅಂತೆಯೇ ಸೂರ್ಯನೂ ನಿನ್ನ ಪರಿಪಾಲಕನಾಗಿರುವನು. ಅನ್ಯೋನ್ಯವಾಗಿ ನಿಮ್ಮಿಬ್ಬರಿಗೂ ಪೋಷ್ಯಪೋಷಕ ಸಂಬಂಧವುಂಟಾಗುವುದು.

ಹರ್ಯಂಶೇನ ಕ್ಷತ್ರಿಯೇಣ ಕಾರ್ತವೀರ್ಯಾರ್ಜುನೇನ ಚ ।
ಭವಿಷ್ಯಸಿ ನ ಸಂದೇಹಃ ಪರಾಭೂತೋ ದ್ವಿಜೋ ಮೃತಃ ॥ ೫೬ ॥

ಪುರಾ ತೇ ಪ್ರಾಕ್ತನಂ ಸರ್ವಂ ಕದಾಚಿನ್ನಹಿ ಖಂಡಿತಂ ।
ನಾರಾಯಣಶ್ಚ ಸ್ವಾಂಶೇನ ತವ ಪುತ್ರೋ ಭವಿಷ್ಯತಿ ॥ ೫೭ ॥

ತ್ರಿಃಸಪ್ತಕೃತ್ವೋ ಜಗತೀಂ ನಿಃಕ್ಷತ್ರಾಂ ಚ ಕರಿಷ್ಯತಿ ।
ಮೃತ್ಯುಸ್ತೇ ಯಶಸೋ ಬೀಜಂ ಭವಿಷ್ಯತಿ ಮಹೀತಲೇ ॥ ೫೮ ॥

ಇತ್ಯೇವಮುಕ್ತ್ವಾ ಬ್ರಹ್ಮಾ ಚ ಯಯೌ ಗೇಹಂ ವ್ರಜೇಶ್ವರ ।
ಪ್ರಯಯೌ ಜಮದಗ್ನಿಶ್ಚ ಭಾಸ್ಕರಶ್ಚ ಸ್ವಮಂದಿರಂ ॥ ೫೯ ॥

ಇತ್ಯೇವಂ ಕಥಿತಂ ತಾತ ಆಖ್ಯಾನಂ ಪುಣ್ಯಕಾರಕಂ ।
ರಾಹುಗ್ರಸ್ತೋ ಭಾಸ್ಕರಶ್ಚಾಪ್ಯದೃಶ್ಯೋ ಯೇನ ಹೇತುನಾ ॥ ೬೦ ॥

---

೫೬. ಎಲೈ ದ್ವಿಜೋತ್ತಮನೇ, ನೀನು ಶ್ರೀಹರಿಯ ಅಂಶದಿಂದ ಕ್ಷತ್ರಿಯ ಜಾತಿಯಲ್ಲಿ ಜನಿಸುವ ಕಾರ್ತವೀರ್ಯಾರ್ಜುನನಿಂದ ತಿರಸ್ಕೃತನಾಗಿ ಮೃತನಾಗುವೆ. ಇದರಲ್ಲಿ ಸಂಶಯವಿಲ್ಲ.

೫೭. ಪ್ರಾಕ್ತನ ಕರ್ಮವು ಅನುಗುಣವಾದ ಫಲವನ್ನು ಕೊಡದೇ ಬಿಡುವುದಿಲ್ಲವೆಂದು ನಿನಗೆ ತಿಳಿದೇ ಇದೆ. ಶ್ರೀಮನ್ನಾರಾಯಣನೂ ತನ್ನ ಅಂಶದಿಂದ ನಿನ್ನ ಪುತ್ರನಾಗಿ ಜನಿಸುವನು.

೫೮. ಅವನು ಇಪ್ಪತ್ತೊಂದು ಸಾರಿ ಪ್ರಪಂಚವನ್ನು ಪ್ರದಕ್ಷಿಣೆ ಮಾಡಿ ಕ್ಷತ್ರಿಯರನ್ನೆಲ್ಲ ನಿರ್ಮೂಲ ಮಾಡುವನು. ಭೂಮಂಡಲದಲ್ಲಿ ನಿನ್ನ ಮರಣವೇ ನಿನ್ನ ಕೀರ್ತಿಗೆ ಕಾರಣವಾಗುವುದು.

೫೯. ಎಲೈ ಪ್ರಜಾಧಿಪತಿಯೇ, ಈ ರೀತಿಯಾಗಿ ಬ್ರಹ್ಮನು ಹೇಳಿ ತನ್ನ ಲೋಕಕ್ಕೆ ಹಿಂತಿರುಗಿದನು. ಅನಂತರ ಜಮದಗ್ನಿ ಮತ್ತು ಸೂರ್ಯರು ತಮ್ಮ ತಮ್ಮ ಮಂದಿರಕ್ಕೆ ತೆರಳಿದರು.

೬೦. ಎಲೈ ತಂದೆಯೇ, ಸೂರ್ಯನು ರಾಹುಗ್ರಸ್ತನಾಗಲೂ ಅದೃಶ್ಯನಾಗಲೂ ಕಾರಣವನ್ನು ತಿಳಿಸಿ ಪುಣ್ಯಕಾರಕವಾದ ಈ ಆಖ್ಯಾನವನ್ನು ನಿನಗೆ ತಿಳಿಸಿದ್ದೇನೆ.

ಚತುರ್ಥ್ಯಾಮುದಿತಶ್ಚಂದ್ರೋ ಭಾದ್ರೇ ಮಾಸಿ ಸಿತಾಸಿತೇ ।
ಅದೃಶ್ಯೋ ನಷ್ಟರೂಪಶ್ಚ ಶ್ರೂಯತಾಂ ಯೇನ ಹೇತುನಾ ॥ ೬೧ ॥

ರಾಹುಗ್ರಸ್ತಃ ಕಲಂಕೀ ವಾ ಪುರಾ ಶಪ್ತೋ ಮಯಾ ಪಿತಃ ।
ಸರ್ವಂ ತ್ವಾಂ ಕಥಯಿಷ್ಯಾಮಿ ಕಥಾಮೇತಾಂ ಪುರಾತನೀಂ ॥ ೬೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣ ನಾರದಸಂವಾದೇ
ಭಗವನ್ನಂದಸಂವಾದೇ
ಏಕೋನಾಶೀತಿತಿತಮೋಽಧ್ಯಾಯಃ

---

೬೧ ಭಾದ್ರಪದ ಮಾಸದ ಶುಕ್ಲಕೃಷ್ಣಪಕ್ಷಗಳ ಚತುರ್ಥಿಯ ದಿವಸ ಉದಯಿಸುವ ಚಂದ್ರನು ಅದೃಶ್ಯನೂ ನಷ್ಟರೂಪನೂ ಆಗುವುದಕ್ಕೆ ಕಾರಣವನ್ನು ತಿಳಿಸುವೆನು. ಕೇಳು.

೬೨. ಎಲೈ ತಂದೆಯೇ, ಚಂದ್ರನು ರಾಹುಗ್ರಸ್ತನೂ ಕಲಂಕಿಯೂ ಆಗುವಂತೆ ನಾನು ಶಾಪವಿತ್ತಿರುವೆನು. ಪುರಾತನವಾದ ಈ ಕಥೆ ಎಲ್ಲವನ್ನೂ ನಿನಗೆ ಹೇಳುವೆನು. ಕೇಳುವವನಾಗು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀ ಕೃಷ್ಣಜನ್ಮಖಂಡದ ಉತ್ತರಾರ್ಧದ
ನಾರಾಯಣ ನಾರದ ಸಂವಾದಾಂತರ್ಗತವಾದ ಕೃಷ್ಣನಂದರ
ಸಂವಾದದಲ್ಲಿ ಎಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಎಪ್ಪತ್ತೊಂಭತ್ತನೆಯ ಅಧ್ಯಾಯದ ಸಾರಾಂಶ.

ಚಂದ್ರಸೂರ್ಯರು ರಾಹುಗ್ರಸ್ತರಾಗಿ ಅದೃಶ್ಯರಾಗಲು ಕಾರಣವೇನೆಂದು ಕೇಳಿದ ನಂದಗೋಪನನ್ನು ಕುರಿತು ಶ್ರೀ ಕೃಷ್ಣನು ಇಂತೆಂದನು. ಹಿಂದೊಮ್ಮೆ ಜಮದಗ್ನಿ ಮಹರ್ಷಿಯು ತನ್ನ ಪತ್ನಿಯಾದ ರೇಣುಕೆಯೊಡನೆ ನರ್ಮದಾತೀರದಲ್ಲಿ ಹಗಲುಹೊತ್ತಿನಲ್ಲಿ ರತಿಕ್ರೀಡೆಯಾಡುತ್ತಿದ್ದನು. ಅದನ್ನು ನೋಡಿದ ಸೂರ್ಯ ದೇವನು ಅವನ ಸಮೀಪಕ್ಕೆ ಬಂದು ಆ ರೀತಿ ಹಗಲುಹೊತ್ತಿನಲ್ಲಿ ಕ್ರೀಡಿಸುವುದು ಧರ್ಮವಿರುದ್ಧವಾದುದೆಂದು ಹೇಳಲು ಜಮದಗ್ನಿಯು ಕುಪಿತನಾಗಿ ತೇಜಸ್ವಿಗಳಿಗೆ ಯಾವ ದೋಷವೂ ಸಂಘಟಿಸುವುದಿಲ್ಲವೆಂದು ತಿಳಿಸಿದುದಲ್ಲದೆ ತನ್ನ ರತಿಕ್ರೀಡೆಗೆ ವಿಘ್ನಮಾಡಿದುದಕ್ಕಾಗಿ ರಾಹುಗ್ರಸ್ತನಾಗುವಂತೆ ಸೂರ್ಯನಿಗೆ ಶಪಿಸಿದನು. ಸೂರ್ಯನೂ ಸಹ ಕುಪಿತನಾಗಿ ಕಾರ್ತವೀರ್ಯಾರ್ಜುನನಿಂದ ಹತನಾಗುವಂತೆ ಜಮದಗ್ನಿಗೆ ಶಪಿಸಿದನು. ಈ ರೀತಿ ಪರಸ್ಪರ ಶಾಪಕೊಟ್ಟುದನ್ನು ತಿಳಿದ ಬ್ರಹ್ಮನು ಅಲ್ಲಿಗೆ ಬಂದು ಅವರಿಬ್ಬರನ್ನೂ ಸಮಾಧಾನಗೊಳಿಸಿ ಅವರವರ ಸ್ಥಾನಕ್ಕೆ ಹಿಂತಿರುಗುವಂತೆ ಹೇಳಿ ಹೊರಟುಹೋದನು. ಮುಂದಿನ ಅಧ್ಯಾಯದಲ್ಲಿ ಚಂದ್ರನಿಗೆ ಶಾಪ ಬಂದ ಕಥೆಯು ವಿವೃತವಾಗಿದೆ.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀ ಕೃಷ್ಣಜನ್ಮಖಂಡೇ

|| ಅಶೀತಿತಮೋಽಧ್ಯಾಯಃ ||

|| ಶ್ರೀ ಕೃಷ್ಣ ಉವಾಚ ||

ಪುರಾ ತಾರಾ ಗುರೋಃ ಪತ್ನೀ ನವಯೌವನಸಂಯುತಾ |
ರತ್ನಭೂಷಣಭೂಷಾಢ್ಯಾ ವರಸೂಕ್ಷ್ಮಾಂಬರಾ ಸತೀ || ೧ ||

ಸುಶ್ರೋಣೀ ಸಸ್ಮಿತಾ ರಮ್ಯಾ ಸುಂದರೀ ಸುಮನೋಹರಾ |
ಅತೀವಕಬರೀರಮ್ಯಾ ಮಾಲತೀಮಾಲ್ಯಭೂಷಿತಾ || ೨ ||

ಸಿಂದೂರಬಿಂದುನಾ ಸಾಕಂ ಚಾರುಚಂದನಬಿಂದುಭಿಃ |
ಕಸ್ತೂರೀಬಿಂದುನಾಽಧಶ್ಚ ಭಾಲಮಧ್ಯಸ್ಥಲೋಜ್ವಲಾ || ೩ ||

ಎಂಭತ್ತನೆಯ ಅಧ್ಯಾಯ

೧. ಶ್ರೀ ಕೃಷ್ಣಃ—ಹಿಂದೊಮ್ಮೆ ಗುರುಪತ್ನಿಯಾದ ತಾರೆಯು ನವಯೌವನ ಸಂಪನ್ನಳಾಗಿ ರತ್ನಾಲಂಕಾರ ಭೂಷಿತಳಾಗಿ ಸೂಕ್ಷ್ಮ ವಸ್ತ್ರವನ್ನು ಧರಿಸಿ ಶೋಭಿಸುತ್ತಿದ್ದಳು.

೨. ಪೀನವಾದ ಶ್ರೋಣಿ ಬಿಂಬವುಳ್ಳವಳೂ, ಸ್ಮಿತವದನೆಯೂ, ಮನೋಹರಳೂ ಸುಂದರಿಯೂ ಆದ ಆ ತಾರೆಯು ತಲೆಯನ್ನು ಬಾಚಿಕೊಂಡು ಹೆರಳು ಹಾಕಿ ಜಾಜೀ ಹೂಮಾಲೆಯನ್ನು ಮುಡಿದಿದ್ದಳು.

೩. ಹಣೆಯ ಮಧ್ಯದಲ್ಲಿ ಚಂದ್ರದ ಬೊಟ್ಟನ್ನೂ ಅದರ ಸುತ್ತಲೂ ಚಂದನ ಗಂಧದ ಬೊಟ್ಟನ್ನೂ ಧರಿಸಿ, ಕೆಳಭಾಗದಲ್ಲಿ ಕಸ್ತೂರಿ ಬೊಟ್ಟುಗಳನ್ನಿಟ್ಟು ಶೋಭಿಸುತ್ತಿದ್ದಳು.

ರತ್ನೇಂದ್ರಸಾರನಿರ್ಮಾಣಕ್ವಣನ್ಮಂಜೀರರಂಜಿತಾ ।
ಸುವಕ್ರಲೋಚನಾ ಶ್ಯಾಮಾ ಸುಚಾರುಕಜ್ಜಲೋಜ್ವಲಾ ॥ ೪ ॥

ಸುಚಾರುಸಾರಮುಕ್ತಾಭದಂತಪಂಕ್ತಿಮನೋಹರಾ ।
ರತ್ನಕುಂಡಲಯುಗ್ಮೇನ ಚಾರುಗಂಡಸ್ಥಲೋಜ್ವಲಾ ॥ ೫ ॥

ಕಾಮಿನೀಷ್ವತುಲಾ ಬಾಲಾ ಗಜೇಂದ್ರಮಂದಗಾಮಿನೀ ।
ಸುಕೋಮಲಾ ಚಂದ್ರಮುಖೀ ಕಾಮಾಧಾರಾ ಚ ಕಾಮುಕೀ ॥ ೬ ॥

ಸ್ವರ್ಗಮಂದಾಕಿನೀ ತೀರೇ ಸ್ನಾತಾ ಸ್ನಿಗ್ಧಾಂಬರಾ ವರಾ ।
ಧ್ಯಾಯಂತೀ ಗುರುಪಾದಂ ಸಾ ಸ್ವಗೃಹಂ ಗಮನೋನ್ಮುಖೀ ॥ ೭ ॥

ದೃಷ್ಟ್ವಾ ತಸ್ಯಾಶ್ಚ ಸರ್ವಾಂಗಮನಂಗಬಾಣಪೀಡಿತಃ ।
ಭಾದ್ರೇ ಚತುರ್ಥ್ಯಾಂ ಚಂದ್ರಶ್ಚ ಜಹಾರ ಚೇತಸಾಂ ಪ್ರಜ ॥ ೮ ॥

---

೪. ಶ್ರೇಷ್ಠರತ್ನದಿಂದ ನಿರ್ಮಿತವಾಗಿ ಮಧುರವಾಗಿ ಧ್ವನಿಗೈಯುವ ಕಾಲ್ಗೊಲಸುಗಳನ್ನು ಧರಿಸಿ, ಕಣ್ಣಿಗೆ ಕಪ್ಪಾದ ಕಾಡಿಗೆಯನ್ನು ಹಚ್ಚಿಕೊಂಡು ವಕ್ರವಾದ ಕಟಾಕ್ಷದಿಂದ ನೋಡುತ್ತಿದ್ದಳು.

೫. ಮನೋಹರವೂ ಸಾರಯುಕ್ತವೂ ಆದ ಮುತ್ತಿನ ಮಣಿಗಳಂತಿರುವ ದಂತ ಪಂಕ್ತಿಗಳಿಂದ ಶೋಭಿಸುತ್ತಿದ್ದ ಆ ತಾರೆಯು ಕಪೋಲ ಸ್ಥಲದಲ್ಲಿ ಪ್ರತಿಬಿಂಬಿಸಿರುವ ಎರಡು ರತ್ನ ಕುಂಡಲಗಳಿಂದ ಮನೋಹರಳಾಗಿದ್ದಳು.

೬. ಶ್ರೇಷ್ಠ ಗಜದಂತೆ ಮಂದಗಮನೆಯೂ, ಕೋಮಲಾಂಗಿಯೂ, ಚಂದ್ರಮುಖಿಯೂ, ಕಾಮಾಧಾರಳೂ, ಕಾಮುಕಿಯೂ ಆದ ಆ ತಾರೆಯು ಸ್ತ್ರೀಯರಲ್ಲಿ ಅಸದೃಶಳಾಗಿದ್ದಳು.

೭. ಆ ತಾರೆಯು ದೇವಗಂಗೆಯಲ್ಲಿ ಸ್ನಾನಮಾಡಿ ಸುಂದರವಾದ ವಸ್ತ್ರವನ್ನುಟ್ಟು, ಗುರುವಾದ ಬೃಹಸ್ಪತಿಯ ಪಾದಗಳನ್ನು ಧ್ಯಾನಮಾಡುತ್ತಾ ಮನೆಗೆ ಹೊರಡಲು ಸಿದ್ಧಳಾಗಿದ್ದಳು.

೮. ಎಲೈ ನಂದನೇ, ಭಾದ್ರಪದ ಮಾಸದ ಚತುರ್ಥಿಯ ದಿವಸ ಚಂದ್ರನು ಆಕೆಯ ಸರ್ವಾಂಗಗಳನ್ನೂ ನೋಡಿ ಕಾಮಬಾಣ ಪೀಡಿತನಾಗಿ ನಿಶ್ಚೇತನನಾದನು.

ಜ್ಞಾನಂ ಕ್ಷಣೇನ ಸಂಪ್ರಾಪ್ಯ ರಥಸ್ಥೋ ರಸಿಕೋ ಬಲೀ ।
ರಥಮಾರೋಹಯಾಮಾಸ ಕರೇ ಧೃತ್ವಾ ಚ ತಾರಕಾಂ ॥ ೯ ॥

ಕಾಮೋನ್ಮತ್ತಃ ಕಾಮಿನೀಂ ತಾಂ ಸಮಾಶ್ಲಿಷ್ಯ ಚುಚುಂಬ ಚ ।
ಶೃಂಗಾರಂ ಕರ್ತುಮುದ್ಯಂತಂ ತಮುವಾಚ ಗುರುಪ್ರಿಯಾ ॥ ೧೦ ॥

॥ ತಾರಕೋವಾಚ ॥

ತ್ಯಜ ಮಾಂ ತ್ಯಜ ಮಾಂ ಚಂದ್ರ ಸುರೇಷು ಕುಲಪಾಂಸನ ।
ಗುರುಪತ್ನೀಂ ಬ್ರಾಹ್ಮಣೀಂ ಚ ಪಾತಿವ್ರತ್ಯಪರಾಯಣಾಂ ।
ಗುರುಪತ್ನೀಸಂಗಮನೇ ಬ್ರಹ್ಮಹತ್ಯಾಶತಂ ಭವೇತ್ ॥ ೧೧ ॥

ಗುರುಪತ್ನೀ ವಿಪ್ರಪತ್ನೀ ಯದಿ ಸಾ ಚ ಪತಿವ್ರತಾ ।
ಬ್ರಹ್ಮಹತ್ಯಾಸಹಸ್ರಂಚ ತಸ್ಯಾಃ ಸಂಗಮನೇ ಲಭೇತ್ ॥ ೧೨ ॥

---

೯. ಕ್ಷಣಕಾಲಕಳೆದಮೇಲೆ ಚೇತನವನ್ನು ಹೊಂದಿದ ಆ ರಸಿಕನಾದ ಚಂದ್ರನು ತಾರಾದೇವಿಯ ಕೈಯನ್ನು ಹಿಡಿದು ರಥದಲ್ಲಿ ಕುಳ್ಳಿರಿಸಿಕೊಂಡನು.

೧೦. ಕಾಮೋನ್ಮತ್ತನಾದ ಆ ಚಂದ್ರನು ಆ ಕಾಮಿನಿಯನ್ನು ಆಲಿಂಗಿಸಿ ಕೊಂಡು ಚುಂಬಿಸಿದನು. ಶೃಂಗಾರಸುಖಾನುಭವದಲ್ಲಿ ನಿರತನಾದ ಆ ಚಂದ್ರನನ್ನು ನೋಡಿ ಗುರುಪತ್ನಿಯಾದ ತಾರೆಯು ಇಂತೆಂದಳು.

೧೧. ತಾರೆ:—ದೇವತೆಗಳ ಕುಲಕ್ಕೆ ಕಳಂಕ ತರುವಂಥ ಎಲೈ ಚಂದ್ರನೇ, ಬಿಡು, ಬಿಡು, ನನ್ನನ್ನು ಬಿಡು. ಗುರಪತ್ನಿಯೂ ಬ್ರಾಹ್ಮಣಿಯೂ, ಪಾತಿವ್ರತ್ಯಪರಾ, ಯಣೆಯೂ ಆದ ನನ್ನೊಡನೆ ನೀನು ಸಮಾಗಮ ಮಾಡುವುದರಿಂದ ನೂರು ಬ್ರಹ್ಮ ಹತ್ಯ ಮಾಡಿದ ಪಾಪಕ್ಕೆ ಒಳಗಾಗುವೆ.

೧೨. ಗುರುಪತ್ನಿ ಮತ್ತು ಮತ್ತು ವಿಪ್ರಪತ್ನಿಯಾದವಳು ಪತಿವ್ರತೆಯಾಗಿ ದ್ದರೆ ಆಕೆಯ ಸಮಾಗಮ ಮಾಡುವ ಪರಪುರುಷನು ಸಾವಿರ ಬ್ರಹ್ಮಹತ್ಯೆಯ ಪಾಪಕ್ಕೆ ಗುರಿಯಾಗುವನು.

ಪುತ್ರಸ್ತ್ವಂ ತವ ಮಾತಾऽಹಂ ಧೈರ್ಯಂ ಕುರು ಸುರೇಶ್ವರ ।
ಧಿಕ್ತ್ವಾಂ ಶ್ರುತ್ವಾ ಸುರಗುರುರ್ಭಸ್ಮೀಭೂತಂ ಕರಿಷ್ಯತಿ ॥ ೧೩ ॥

ಪುತ್ರಾಧಿಕಶ್ಚ ಶಿಷ್ಯಶ್ಚ ಪ್ರಿಯೋ ಮತ್ಸ್ವಾಮಿನೋ ಭವಾನ್ ।
ಸ್ವಧರ್ಮಂ ರಕ್ಷ ಪಾಪಿಷ್ಠ ಮಾಮೇವಂ ಮಾತರಂ ತ್ಯಜ ॥ ೧೪ ॥

ದಾಸ್ಯಾಮಿ ಸ್ತ್ರೀವಧಂ ತುಭ್ಯಂ ಯದಿ ಮಾಂ ಸಂಗ್ರಹೀಷ್ಯಸಿ ।
ವಿಲಂಘ್ಯ ತಾರಾವಚನಂ ತಾಂ ಚ ಸಂಭೋಕ್ತುಮುದ್ಯತಂ ॥ ೧೫ ॥

ಶಶಾಪ ತಾರಾ ಕೋಪೇನ ನಿಷ್ಕಾಮಾ ಸಾ ಪತಿವ್ರತಾ ।
ರಾಹುಗ್ರಸ್ತೋ ಘನಗ್ರಸ್ತಃ ಪಾಪದೃಶ್ಯೋ ಭವಾನ್ಭವ ॥ ೧೬ ॥

ಕಲಂಕೀ ಯಕ್ಷ್ಮಣಾ ಗ್ರಸ್ತೋ ಭವಿಷ್ಯಸಿ ನ ಸಂಶಯಃ ।
ಚಂದ್ರಂ ತಪ್ತ್ವಾ ತದಾ ತೂರ್ಣಂ ಕಾಮದೇವಂ ಶಶಾಪ ಸಾ ॥ ೧೭ ॥

---

೧೩. ಎಲೈ ಸುರಶ್ರೇಷ್ಠನೇ, ನೀನು ನನಗೆ ಪುತ್ರಸದೃಶನು. ನಾನು ನಿನಗೆ ಮಾತೃಸಮಾನಳು. ಧೈರ್ಯವಾಗಿರು. ನೀನು ಹೀಗೆ ಮಾಡಿದುದನ್ನು ಕೇಳಿದರೆ ಸುರಗುರುವು ನಿನ್ನನ್ನು ಭಸ್ಮೀಭೂತನನ್ನಾಗಿ ಮಾಡುವನು.

೧೪. ನಾನು ನನ್ನ ಪತಿಗೆ ಪುತ್ರನಿಗಿಂತ ಮೇಲಾಗಿ ಶಿಷ್ಯನೂ ಪ್ರೀತಿಪಾತ್ರನೂ ಆಗಿರುವೆ. ಎಲೈ ಪಾಪಿಷ್ಠನೇ, ಮಾತೃ ಸಮಾನಳಾದ ನನ್ನನ್ನು ಬಿಟ್ಟು ನಿನ್ನ ಧರ್ಮವನ್ನು ಕಾಪಾಡಿಕೋ.

೧೫–೧೬. ನನ್ನನ್ನೇನಾದರೂ ನೀನು ಉಪಭೋಗಿಸುವುದಾದರೆ ಸ್ತ್ರೀ ಹತ್ಯೆ ಮಾಡಿದ ಪಾಪಕ್ಕೆ ನೀನು ಗುರಿಯಾಗುವೆ. ತಾರೆಯು ಈ ರೀತಿ ಹೇಳಿದರೂ ಆ ಮಾತನ್ನು ಮೀರಿ ಆಕೆಯನ್ನು ಉಪಭೋಗಿಸಲುದ್ಯುಕ್ತನಾದ ಚಂದ್ರನಿಗೆ ನಿಷ್ಕಾಮಳೂ ಮಹಾಪತಿವ್ರತೆಯೂ ಆದ ತಾರೆಯು 'ನೀನು ರಾಹುಗ್ರಸ್ತನೂ, ಮೇಘಾಚ್ಛಾದಿತನೂ ಪಾಪದರ್ಶನನೂ ಆಗು' ಎಂದು ಶಾಪವಿತ್ತಳು.

೧೭. ಅಲ್ಲದೆ ನೀನು ಕಳಂಕಯುತನೂ ಕ್ಷಯರೋಗಗ್ರಸ್ತನೂ ಆಗುವುದರಲ್ಲಿ ಸಂಶಯವಿಲ್ಲ. ಈ ರೀತಿಯಾಗಿ ಚಂದ್ರನನ್ನು ಶಪಿಸಿದ ನಂತರ ತಾರೆಯು ಮನ್ಮಥನನ್ನು ಕುರಿತು ಮುಂದೆ ಹೇಳುವಂತೆ ಶಾಪವಿತ್ತಳು.

ತೇಜಸ್ವಿನಾ ಕೇನಚಿತ್ತ್ವಂ ಭಸ್ಮೀಭೂತೋ ಭವಿಷ್ಯಸಿ
ಚಂದ್ರಸ್ತಾರಾಂ ಗೃಹೀತ್ವಾ ಚ ಕೃತ್ವಾಽಪಿ ರಮಣಂ ವ್ರಜ || ೧೮ ||

ಕ್ರೋಡೇ ನಿಧಾಯ ಪ್ರೇಯಸೀಂ ರುದಂತೀಂ ತಾಂ ರುಚಾನ್ವಿತಾಂ |
ನಿರ್ಜನೇ ನಿರ್ಜನೇ ರಮ್ಯೇ ಶೈಲೇ ಶೈಲೇ ಮನೋಹರೇ || ೧೯ ||

ಸರೋನದನದೀನಾಂ ಚ ತೀರೇ ತೀರೇ ಮನೋಹರೇ |
ಮಧುವ್ರತಪಿಕೋಕ್ತೇ ಚ ಪುಷ್ಪೋದ್ಯಾನೇ ಸುಪುಷ್ಪಿತೇ || ೨೦ ||

ರಮ್ಯಾಯಾಂ ಪುಷ್ಪಶಯ್ಯಾಯಾಂ ಸ ರೇಮೇ ರಾಮಯಾ ಸಹ |
ಚಂದನೋಕ್ಷಿತಸರ್ವಾಂಗೋ ಮಧುಪಾನರತಃ ಸುರಃ || ೨೧ ||

ಸುಖಸಂಭೋಗಸಂಸಕ್ತೋ ಬುಬುಧೇ ನ ದಿವಾನಿಶಂ |
ಮಲಯೇ ಮಲಯಾರಣ್ಯೇ ಮಲಯಾನಿಲಸಂಯುತೇ || ೨೨ ||

---

೧೮. 'ಮಹಾತೇಜಸ್ವಿಯಾದ ಪುರುಷನಿಂದ ನೀನು ಭಸ್ಮೀಭೂತನಾಗು ಎಂದು ಮನ್ಮಥನಿಗೆ ಶಾಪವಿತ್ತಳು. ಆದರೂ ಕೂಡ ಅತಿಕಾಮಿಯಾದ ಚಂದ್ರನು ತಾರೆಯನ್ನು ಕರೆದುಕೊಂಡು ರಮಿಸಲು ಹೊರಟನು.

೧೯. ಬಲಾತ್ಕಾರಕ್ಕೊಳಗಾಗಿ ಅಳುತ್ತಿದ್ದ ತಾರೆಯನ್ನು ವಕ್ಷಃಸ್ಥಳದಲ್ಲಿ ಆಲಿಂಗಿಸಿಕೊಂಡು ನಿರ್ಜನವೂ ಮನೋಹರವೂ ಆದ ಅನೇಕ ಪರ್ವತಗಳ ತಪ್ಪಲಿನಲ್ಲಿ ಕ್ರೀಡಿಸಲಾರಂಭಿಸಿದನು.

೨೦. ಸರೋವರಗಳ ಮತ್ತು ನದನದಿಗಳ ಮನೋಹರವಾದ ತೀರದಲ್ಲಿಯೂ, ದುಂಬಿ ಮತ್ತು ಕೋಗಿಲೆಗಳ ಇಂಚರದಿಂದ ಮನೋಹರವಾಗಿ, ಪುಷ್ಪಿತವಾಗಿರುವ ಪುಷ್ಪೋದ್ಯಾನದಲ್ಲೂ ವಿಹರಿಸಿದನು.

೨೧. ಸರ್ವಾಂಗಗಳಿಗೂ ಚಂದನಗಂಧವನ್ನು ಲೇಪಿಸಿಕೊಂಡು ಮಧುಪಾನದಲ್ಲಿ ರತನಾದ ಆ ಚಂದ್ರನು ರಮ್ಯವಾದ ಪುಷ್ಪಶಯನದಲ್ಲಿ ಆ ತಾರೆಯೊಡನೆ ರಮಿಸಿದನು.

೨೨. ಆಕೆಯೊಡನೆ ಸುಖಸಂಭೋಗದಲ್ಲಿ ನಿರತನಾಗಿ ಹಗಲು ರಾತ್ರಿಗಳನ್ನೂ ಅರಿಯದವನಾದನು. ಒಮ್ಮೆ ಮಲಯಾನಿಲದಿಂದ ಮನೋಹರವಾಗಿರುವ ಮಲಯ ಪರ್ವತದ ತಪ್ಪಲಿನಲ್ಲಿ ರಮಿಸಿದನು.

ಸ್ಯಂದನೇ ಚಂದನವನೇ ಪಶ್ಚಿಮೋದಧಿಸಂನ್ನಿಧೌ ।
ತ್ರಿಕೂಟೇ ವಟಮೂಲೇ ಚ ತತ್ರ ಚಂದ್ರಸರೋವರೇ । ॥ ೨೩ ॥

ಸುಚಾರುಶತಪತ್ರಾಣಾಂ ಪತ್ರೇ ಚಂದನ ಚರ್ಚಿತೇ ।
ಸುಚಾರುಚಂಪಕೋದ್ಯಾನೇ ಚಂಪಕಾನಿಲಪೂಜಿತೇ ॥ ೨೪ ॥

ಕ್ಷೀರೋದಕಾಂಚನೀಭೂಮೌ ಕ್ರೌಂಚಕಾಂಚನಪರ್ವತೇ ।
ರತ್ನಶೈಲೇ ಮಣಿಮಯೇ ಮಣಿಮಂದಿರಸುಂದರೇ ॥ ೨೫ ॥

ಮಾಣಿಕ್ಯಮುಕ್ತಾಸಾರೇಣ ಹೀರಹಾರೇಣಶೋಭಿತೇ ।
ಸುಚಾರುವಸ್ತ್ರಚಿತ್ರಾಢ್ಯೇ ಶ್ವೇತಚಾಮರದರ್ಪಣೈಃ ॥ ೨೬ ॥

ಭೂಷಿತೇ ರತ್ನದೀಪೈಶ್ಚ ದೇವಕ್ರೀಡೇ ಪ್ರಿಯಸ್ಥಲೇ ।
ವಾರುಣೀಂ ಮದಿರಾಂ ಪೀತ್ವಾ ವರುಣಾನೀಸಮನ್ವಿತಃ ॥ ೨೭ ॥

---

೨೩. ಪಶ್ಚಿಮ ಸಮುದ್ರದ ತೀರದಲ್ಲಿರುವ ಚಂದನವನದಲ್ಲಿ ರಥಾರೂಢನಾಗಿಯೂ, ತ್ರಿಕೂಟಪರ್ವತದಲ್ಲಿ ಚಂದ್ರಸರೋವರದ ತೀರದಲ್ಲಿರುವ ವಟವೃಕ್ಷದ ಕೆಳಗೆ ಶಯನಾರೂಢನಾಗಿಯೂ ಆಕೆಯೊಡನೆ ರಮಿಸಿದನು.

೨೪. ಚಂದನಾನಿಲದಿಂದ ವ್ಯಾಪ್ತವಾದ ಮನೋಹರವಾದ ಕಮಲವನದಲ್ಲಿಯೂ, ಸಂಪಿಗೆ ಸುವಾಸನೆಯಿಂದ ವ್ಯಾಪ್ತವಾದ ಚಂಪಕವನದಲ್ಲಿಯೂ ತಾರೆಯೊಡನೆ ರಮಿಸಿದನು.

೨೫. ಕ್ಷೀರಸಮುದ್ರದ ತೀರದಲ್ಲಿರುವ ಸುವರ್ಣ ಭೂಮಿಯಲ್ಲಿಯೂ, ಕ್ರೌಂಚ ಮತ್ತು ಕಾಂಚನಪರ್ವತದಲ್ಲಿಯೂ, ಮಣಿಮಂದಿರಗಳಿಂದ ಸುಂದರವಾಗಿದ್ದ ಮಣಿಮಯವಾದ ರತ್ನಶೈಲದಲ್ಲಿಯೂ ಚಂದ್ರನು ರಮಿಸಿದನು.

೨೬. ಸಾರತರವಾದ ಮಾಣಿಕ್ಯ ಮುತ್ತು ವಜ್ರದ ಹಾರಗಳಿಂದ ಶೋಭಿಸುತ್ತಿದ್ದ, ಮನೋಹರವಾದ ವಸ್ತ್ರಗಳಿಂದ ಚಿತ್ರಿತವಾಗಿ ಬಿಳುಪಾದ ಚಾಮರ ಮತ್ತು ಕನ್ನಡಿಗಳಿಂದ ಅಲಂಕೃತವಾಗಿದ್ದ ಮಣಿಮಂದಿರದಲ್ಲಿ ಚಂದ್ರನು ತಾರೆಯೊಡನೆ ರಮಿಸಿದನು.

೨೭–೨೮. ರತ್ನದೀಪಗಳಿಂದ ದೀಪ್ತವಾಗಿದ್ದ ತನಗೆ ಅಭಿಮತವಾದ ಸ್ಥಳಗಳಲ್ಲೆಲ್ಲ ಕ್ರೀಡಿಸಿದನು. ವರುಣದೇವನು ವಾರುಣೀ ಮದ್ಯವನ್ನು ಕುಡಿದು ವರುಣಾ

ವರುಣೋ ರಮತೇ ಯತ್ರ ತತ್ರ ರೇಮೇ ತಯಾ ಸಹ ।
ಪಾವನೇ ಪವನೋದ್ಯಾನೇ ಪಾರಿಜಾತಾನಿಲೇನ ಚ ॥ ೨೮ ॥

ಸುಗಂಧಿಮೋಹಿತೇ ರತ್ನಮಾಲಾತೀರೇ ಚ ನಿರ್ಮಲೇ ।
ಖುಕ್ಷಶೈಲೇ ಕಲ್ಪವೃಕ್ಷವನೇ ವಹ್ನಿಪ್ರಿಯಾಶ್ರಮೇ ॥ ೨೯ ॥

ಪಪೌ ಚ ಕಾಮಧೇನೂನಾಂ ಕ್ಷೀರಂ ಕ್ಷೀರೋದಧೇಸ್ತಟೇ ।
ವಹ್ನಿಶುದ್ಧಾಂಶುಕಯುಗಂ ವಹ್ನಿಸ್ತಸ್ಮೈ ದದೌ ಮುದಾ ॥ ೩೦ ॥

ವರುಣೋ ರತ್ನಮಾಲಾಂ ಚ ರತ್ನಚ್ಛತ್ರಂ ಸಮೀರಣಃ ।
ತತ್ರ ದೃಷ್ಟ್ವಾಽಸುರಗುರುಂ ಬಲಿಗೇಹಾತ್ಸಮಾಗತಂ ॥ ೩೧ ॥

ಪ್ರಣಮ್ಯ ಸರ್ವಮುಕ್ತ್ವಾ ಚ ಚಂದ್ರಸ್ತಂ ಶರಣಂ ಯಯೌ ।
ಶುಕ್ರಸ್ತಂ ಬೋಧಯಾಮಾಸ ವಚನಂ ನೀತಿಯುಕ್ತತಃ ॥ ೩೨ ॥

ನಿಯೊಡನೆ ಎಲ್ಲೆಲ್ಲಿ ರಮಿಸುತ್ತಿದ್ದನೋ ಅಲ್ಲೆಲ್ಲ ರಮಿಸಿದನು. ಪಾರಿಜಾತಾನಿಲಯು ದಿಂದ ಪಾವನವಾದ ಪವನೋದ್ಯಾನದಲ್ಲಿಯೂ ಸಹ ವಿಹರಿಸಿದನು.

೨೯. ಸುವಾಸನೆಯಿಂದ ಮನಸ್ಸನ್ನು ಮೋಹಗೊಳಿಸುವ ರತ್ನಮಾಲಾ ತೀರದಲ್ಲಿಯೂ, ಖುಕ್ಷಶೈಲದಲ್ಲಿಯೂ, ಕಲ್ಪವೃಕ್ಷವನದಲ್ಲಿಯೂ, ವಹ್ನಿದೇವನ ಪ್ರಿಯೆಯಾದ ಸ್ವಾಹಾದೇವಿಯ ಅಶ್ರಮದಲ್ಲಿಯೂ ರಮಿಸಿದನು.

೩೦. ಕ್ಷೀರಸಮುದ್ರದ ತೀರದಲ್ಲಿ ಕಾಮಧೇನುಗಳ ಕ್ಷೀರವನ್ನು ಯಥೇಚ್ಛ ವಾಗಿ ಪಾನಮಾಡಿ ರಮಿಸಿದನು. ಅಗ್ನಿದೇವನು ಪ್ರಸನ್ನನಾಗಿ ಆ ಚಂದ್ರನಿಗೆ ಅಗ್ನಿಯಂತೆ ಪರಿಶುದ್ಧವಾದ ಎರಡು ವಸ್ತ್ರಗಳನ್ನು ಕೊಟ್ಟನು.

೩೧. ವರುಣನು ರತ್ನಮಾಲೆಯನ್ನೂ, ವಾಯುದೇವನು ರತ್ನದ ಛತ್ರಿ ಯನ್ನೂ ಆ ಚಂದ್ರನಿಗೆ ಕೊಟ್ಟನು. ಈ ರೀತಿ ವೈಭವಪರಿಪೂರ್ಣನಾಗಿ ತಾರೆ ಯೊಡನೆ ರಮಿಸುತ್ತಿದ್ದ ಚಂದ್ರನು ಬಲಿಯ ಮನೆಯಿಂದ ಬಂದ ಅಸುರಗುರುವಾದ ಶುಕ್ರಾಚಾರ್ಯನನ್ನು ನೋಡಿದನು.

೩೨. ಚಂದ್ರನು ಅವನಿಗೆ ನಮಸ್ಕಾರ ಮಾಡಿ ನಡೆದ ಸಮಾಚಾರವನ್ನೆಲ್ಲ ತಿಳಿಸಿ ಶರಣಾಗತನಾದನು. ಆಗ ಮುನಿಶ್ರೇಷ್ಠನೂ, ವೇದವೇದಾಂಗಪಾರಂಗತನೂ ಸಿಷ್ಠಾಮನೂ ಆದ ಶುಕ್ರಾಚಾರ್ಯನು ಚಂದ್ರನಿಗೆ ನೀತಿಯುತವಾದ ಕೆಲವು ಮಾತುಗಳನ್ನು ಉಪದೇಶಿಸಿದನು.

ನಿರಪೇಕ್ಷೋ ಮುನಿಶ್ರೇಷ್ಠೋ ವೇದವೇದಾಂಗಪಾರಗಃ ।

॥ ಶುಕ್ರ ಉವಾಚ ॥

ಶೃಣು ವತ್ಸ ಪ್ರವಕ್ಷ್ಯಾಮಿ ಗುರವೇ ದೇಹಿ ತಾರಕಾಂ ॥ ೩೩ ॥

ಶಂಭೋಶ್ಚ ಗುರುಪುತ್ರಾಯ ಪೌತ್ರಾಯ ಬ್ರಹ್ಮಣಶ್ಚ ವೈ ।
ಪೂಜಿತಾಯ ಸುರಾಣಾಂ ಚ ದೇಯಾ ತಸ್ಮೈ ನಿಶಾಪತೇ ।
ಪ್ರಿಯಾಯ ತತ್ಪ್ರಿಯಾಂ ದತ್ವಾ ಶೀಘ್ರಂ ತ್ವಂ ಶರಣಂ ವ್ರಜ ॥ ೩೪ ॥

ಗುರುಪತ್ನೀಂ ಮಾತೃತುಲ್ಯಾಂ ತ್ಯಜ ಮದ್ವಚನಾದ್ವಿಧೋ ।
ಕುರು ಪಾಪಕ್ಷಯಂ ಪಾಪನಿವೃತ್ತಿಸು ಮಹಾಫಲಾ ॥ ೩೫ ॥

ಸತೀನಾಂ ಗುರುಪತ್ನೀನಾಂ ಗ್ರಹಣೇ ಚ ಬಲೇನ ಚ ।
ಬ್ರಹ್ಮಹತ್ಯಾ ಸಹಸ್ರಾಣಾಂ ಪಾತಕಂ ಲಭತೇ ಜನಃ ॥ ೩೬ ॥

ಕುಂಭೀಪಾಕೇ ಚ ಪಚ್ಯಂತೇ ಯಾವದ್ವೈ ಬ್ರಹ್ಮಣಃ ಶತಂ।
ಸಾಮ್ಯಂ ನಾರಾಯಣಸ್ಥಾನೇ ತೃಣಪರ್ವತಯೋಃ ಸುರ ॥ ೩೭ ॥

೩೩-೩೪. ಶುಕ್ರಃ—ಎಲೈ ವತ್ಸ ಚಂದ್ರನೇ, ಶಂಭುವಿನ ಗುರುವಾದ ಅಂಗಿರಸನ ಮಗನೂ, ಬ್ರಹ್ಮನ ಮೊಮ್ಮಗನೂ ದೇವತೆಗಳಿಂದ ಪೂಜಿತನೂ ಆದ ಬೃಹಸ್ಪತ್ಯಾಚಾರ್ಯನಿಗೆ ತಾರೆಯನ್ನು ಕೊಟ್ಟು ಕ್ಷಮೆಯನ್ನು ಬೇಡು. ಎಲೈ ಚಂದ್ರನೇ, ಆ ಬೃಹಸ್ಪತಿಗೆ ಅವನ ಪ್ರಿಯೆಯಾದ ತಾರೆಯನ್ನೊಪ್ಪಿಸಿ ಜಾಗ್ರತೆಯಾಗಿ ಶರಣಾಗತನಾಗು.

೩೫. ಎಲೈ ವಿಧುವೇ, ನನ್ನ ಮಾತನ್ನು ಕೇಳಿ ಮಾತೃಸದೃಶಳಾದ ಗುರುಪತ್ನಿಯನ್ನು ಬಿಟ್ಟುಬಿಡು. ಆಕೆಯನ್ನು ಹಿಂದಕ್ಕೆ ಒಪ್ಪಿಸಿ ನಿನ್ನ ಪಾಪವನ್ನು ಪರಿಹರಿಸಿಕೋ

೩೬. ಪತಿವ್ರತೆಯರಾದ ಗುರುಪತ್ನಿಯರನ್ನು ಬಲಾತ್ಕಾರದಿಂದ ಭೋಗಿಸಿದರೆ ಸಾವಿರ ಬಹ್ಮಹತ್ಯೆಯನ್ನು ಮಾಡಿದಷ್ಟು ಪಾಪವು ಮನುಜನಿಗೆ ಸಂಘಟಿಸುವುದು.

೩೭. ಅಷ್ಟೇ ಅಲ್ಲದೆ ನೂರು ಬ್ರಹ್ಮರ ಜೀವಿತಕಾಲದವರೆಗೆ ಕುಂಭೀಪಾಕವೆಂಬ ನರಕದಲ್ಲಿ ನರಳುವರು. ಎಲೈ ಸುರೇಶ್ವರನೇ, ನಾರಾಯಣ ಸ್ಥಾನದಲ್ಲಿ ತೃಣ ಮತ್ತು ಪರ್ವತಗಳಿಗೆ ಒಂದೇ ಸಮಾನತೆ ಇರುವುದು.

ಕಸ್ತ್ವಂ ವತ್ಸ ಹರೇ ಸ್ಥಾನೇ ಕರ್ಮಭೋಗೋಽಸ್ತಿ ಬ್ರಹ್ಮಣಃ ।
ನಾರಾಯಣಾಶ್ರಿತಾಃ ಸರ್ವೇ ಜೀವಿನಸ್ತ್ರಿವಿಧಾ ಭವೇ ॥ ೩೮ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರದ ನಾರಾಯಣಸಂವಾದೇ
ತಾರಾಹರಣೇಽಶೀತಿತಮೋಽಧ್ಯಾಯಃ

೩೮. ಹರಿಯಸ್ಥಾನದಲ್ಲಿ ಬ್ರಹ್ಮನೂ ಸಹ ತನ್ನ ಕರ್ಮಫಲವನ್ನು ಅನುಭವಿಸಬೇಕಾಗಿರುವಾಗ ನೀನು ಎಷ್ಟರವನು? ಎಲ್ಲ ಜೀವಿಗಳೂ ಶ್ರೀಮನ್ನಾರಾಯಣನ ಅಧೀನರಾಗಿ ಸತ್ವ ರಜಸ್ಸು ಮತ್ತು ತಮೋಗುಣದಿಂದ ಕೂಡಿ ಮೂರು ವಿಧವಾಗಿರುವರು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀ ಕೃಷ್ಣಜನ್ಮ ಖಂಡದ
ಉತ್ತರಾರ್ಧದಲ್ಲಿ ನಾರಾಯಣನಾರದ ಸಂವಾದಾಂತರ್ಗತವಾದ
ಶ್ರೀಕೃಷ್ಣ ಮತ್ತು ನಂದರ ಸಂವಾದದಲ್ಲಿ ತಾರಾಪಹರಣವೆಂಬ
ಎಂಭತ್ತನೆಯಅಧ್ಯಾಯವು ಮುಗಿದುದು.

ಎಂಭತ್ತನೆಯ ಅಧ್ಯಾಯದ ಸಾರಾಂಶ.

ಹಿಂದೊಮ್ಮೆ ಬೃಹಸ್ಪತ್ಯಾಚಾರ್ಯನ ಪತ್ನಿಯಾದ ತಾರಾದೇವಿಯು ದೇವ ಗಂಗೆಯಲ್ಲಿ ಸ್ನಾನಮಾಡಿ ಸುಂದರವಾದ ವೇಷಭೂಷಣಗಳನ್ನು ಧರಿಸಿ ತನ್ನ ಪತಿ ದೇವನನ್ನು ಸ್ಮರಿಸಿಕೊಳ್ಳುತ್ತ ಮನೆಗೆ ಬರುತ್ತಿದ್ದಳು. ಚಂದ್ರನು ಆಕೆಯ ಸೌಂದರ್ಯಕ್ಕೆ ಮೋಹಿತನಾಗಿ ಆಕೆಯನ್ನು ಬಲಾತ್ಕಾರದಿಂದ ಹಿಡಿದುಕೊಂಡು ಉಪಭೋಗಿಸಲುದ್ಯುಕ್ತನಾದನು. ಆಗ ತಾರೆಯು ಗುರುಪತ್ನೀಸಂಗಮದಿಂದುಂಟಾಗುವ ಮಹಾಪಾಪವನ್ನು ಅವನಿಗೆ ತಿಳಿಸಿ ತನ್ನನ್ನು ಬಿಡುವಂತೆ ಕೇಳಿಕೊಂಡಳು. ಆದರೂ ಮದೋನ್ಮತ್ತನಾದ ಚಂದ್ರನು ಆಕೆಯನ್ನು ಬಿಡದೆ ಬಲಾತ್ಕಾರವಾಗಿ ಕರೆದುಕೊಂಡುಹೋಗಿ ರಮ್ಯವಾದ ಪ್ರದೇಶಗಳಲ್ಲಿ ಅವಳೊಡನೆ ರಮಿಸಲುದ್ಯುಕ್ತನಾದನು. ಆಗ ಕುಪಿತಳಾದ ತಾರೆಯು 'ನೀನು ರಾಹುಗ್ರಸ್ತನೂ, ಮೇಘಾಚ್ಛಾದಿತನೂ, ಪಾಪದರ್ಶನನೂ ಆಗು' ಎಂದು ಶಾಪವಿತ್ತಳು. ಅಲ್ಲದೆ ಕಳಂಕಯುತನೂ ಕ್ಷಯರೋಗಿಯೂ ಆಗುವಂತೆ ಚಂದ್ರನಿಗೆ ಶಾಪವಿತ್ತು ಮಹಾತೇಜಸ್ವಿಯಿಂದ ಭಸ್ಮೀಭೂತನಾಗುವಂತೆ ಮನ್ಮಥನಿಗೂ ಶಾಪಕೊಟ್ಟಳು. ಆದರೂ ಚಂದ್ರನು ಆಕೆಯನ್ನು ಬಿಡದೆ ಬಲಾತ್ಕಾರದಿಂದ ರಮಿಸಿದನು. ಆ ಸಮಯಕ್ಕೆ ಸರಿಯಾಗಿ ಬಲಿಯ ಮನೆಯಿಂದ ಅಸುರಗುರುವಾದ ಶುಕ್ರಾಚಾರ್ಯನು ಬರಲು ಚಂದ್ರನು ನಡೆದ ಸಮಾಚಾರವನ್ನೆಲ್ಲ ಅವನಿಗೆ ತಿಳಿಸಿ ಶರಣಾಗತನಾದನು. ಶುಕ್ರಾಚಾರ್ಯನು ಕೂಡ ತಾರೆಯನ್ನು ಬೃಹಸ್ಪತಿಗೆ ಒಪ್ಪಿಸಿ ಕ್ಷಮೆಯನ್ನು ಬೇಡುವಂತೆ ಚಂದ್ರನಿಗೆ ಉಪದೇಶಮಾಡಿದನು. ಆ ದಿವಸವು ಭಾದ್ರಪದ ಮಾಸದ ಚತುರ್ಥಿಯ ದಿವಸವಾದುದರಿಂದ ಆ ದಿವಸ ಚಂದ್ರನ ದರ್ಶನವು ನಿಷಿದ್ಧವಾಯಿತು. ಅಂದು ಚಂದ್ರನನ್ನು ನೋಡಿದವರು ಕಳಂಕಯುತರಾಗುವರು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಏಕಾಶೀತಿತಮೋಽಧ್ಯಾಯಃ ॥

॥ ಶ್ರೀ ಕೃಷ್ಣ ಉವಾಚ ॥

ಏತಸ್ಮಿನ್ನಂತರೇ ಶುಕ್ರಃ ಸುರಶ್ರೇಣೀಂ ದದರ್ಶ ಸಃ ।
ಆಕಾಶಮಾರ್ಗಾದಾಯಾಂತೀಂ ರಣಶಸ್ತ್ರಾಸ್ತ್ರಧಾರಿಣೀಂ ॥ ೧ ॥

ಪತಾಕಾನಾಂ ತ್ರಿಕೋಟಿಶ್ಚ ಶತಕೋಟಿರ್ಮಹಾರಥಾಃ ।
ಶತಕೋಟಿರ್ಗಜೇಂದ್ರಾಣಾಂ ರಥಾನಾಂ ತಚ್ಚತುರ್ಗುಣಂ ॥ ೨ ॥

ಅಶ್ವಾನಾಂ ತಚ್ಛತಗುಣಂ ಸಮೂಹಂ ಚ ಸುದಾರುಣಂ ।
ಪದಾತೀನಾಂ ಸಮೂಹಂ ಚ ತುರಂಗೇಭ್ಯಶ್ಚ ಷಡ್ಗುಣಂ ॥ ೩ ॥

ಎಂಭತ್ತೊಂದನೆಯ ಅಧ್ಯಾಯ.

೧. ಶ್ರೀಕೃಷ್ಣ:—ಆ ಸಮಯಕ್ಕೆ ಸರಿಯಾಗಿ ಯುದ್ಧೋಪಯೋಗಿಯಾದ ಶಸ್ತ್ರಾಸ್ತ್ರಗಳನ್ನು ಧರಿಸಿಕೊಂಡು ಆಕಾಶಮಾರ್ಗದಿಂದ ಬರುತ್ತಿರುವ ದೇವತೆಗಳ ಸಾಲನ್ನು ಶುಕ್ರಾಚಾರ್ಯನು ನೋಡಿದನು.

೨. ಆ ಗುಂಪಿನಲ್ಲಿ ಮೂರುಕೋಟಿ ಧ್ವಜಗಳೂ, ನೂರುಕೋಟಿ ಮಹಾ ರಥಗಳೂ, ನೂರುಕೋಟಿ ಆನೆಗಳೂ, ಅದರ ನಾಲ್ಕರಷ್ಟು ರಥಗಳೂ ಇದ್ದವು.

೩. ಅದಕ್ಕೆ ನೂರರಷ್ಟು ದಾರುಣವಾದ ಕುದುರೆಗಳ ಸಮೂಹವೂ, ಕುದುರೆ ಗಳ ಸಂಖ್ಯೆಗೆ ಆರರಷ್ಟು ಪದಾತಿಗಳ ಸಮೂಹವೂ ಆ ಸೈನ್ಯದಲ್ಲಿದ್ದವು.

ದುಂದುಭೀವಾದ್ಯಭಾಂಡಾನಾಂ ಪಂಚಲಕ್ಷಂ ತಥೈವ ಚ |
ಪಟಹಾನಾಂ ತ್ರಿಲಕ್ಷಂ ಚ ಡಿಂಡಿಮಾನಾಂ ತ್ರಿಲಕ್ಷಕಂ || ೪ ||

ಐರಾವತೇ ಮಹೇಂದ್ರಂ ಚ ಶ್ವೇತಾಶ್ವೇ ಧರ್ಮಮೇವ ಚ |
ಕುಬೇರಂ ವರುಣಂ ವಹ್ನಿಂ ರಥಸ್ಥಂ ಪವನಂ ತಥಾ || ೫ ||

ಮಹಿಷಸ್ಥಂ ಯಮಂ ಚೈವ ಸ್ಯಂದನಸ್ಥಂ ದಿವಾಕರಂ |
ಈಶಾನಂ ಚ ವೃಷೇಂದ್ರಸ್ಥಮನಂತಂ ನಾಗವಾಹನಂ || ೬ ||

ಆದಿತ್ಯಾಂಶ್ಚ ವಸೂನ್ರುದ್ರಾನ್ಸಿದ್ಧಗಂಧರ್ವಕಿನ್ನರಾನ್ |
ಜೀವನ್ಮುಕ್ತಮುನೀನಾಂ ಚ ಸಮೂಹಂ ಸೂರ್ಯವರ್ಚಸಾಂ || ೭ ||

ತಾನ್ದೃಷ್ಟ್ವಾ ನಿರ್ಭಯಃ ಶುಕ್ರಃ ಸಮಾಶ್ವಾಸ್ಯ ನಿಶಾಕರಂ |
ಸುರಾಣಾಂ ದ್ವಿಗುಣಂ ಸೈನ್ಯಮಾಜುಹಾವ ವ್ರಜೇಶ್ವರ || ೮ ||

---

೪. ನಗಾರಿ ವಾದ್ಯ ಘಟ ಮುಂತಾದುವುಗಳ ಸಂಖ್ಯೆಯು ಐದುಲಕ್ಷವಿದ್ದಿತು ಮೂರುಲಕ್ಷ ತಮಟೆ ಳೂ ಮೂರು ಲಕ್ಷ ಡಿಂಡಿಮಗಳೂ ಆ ಸೈನ್ಯದಲ್ಲಿದ್ದವು.

೫. ಮಹೇಂದ್ರನು ಐರಾವತದಲ್ಲಿಯೂ, ಧರ್ಮಪುರುಷನು ಬಿಳುಪಾದ ಕುದುರೆಯಲ್ಲಿಯೂ, ಕುಬೇರ, ವರುಣ, ವಹ್ನಿ ಮತ್ತು ವಾಯು ದೇವತೆಗಳು ರಥ ದಲ್ಲಿಯೂ, ಕುಳಿತು ಬಂದಿದ್ದರು.

೬. ಯಮನು ಕೋಣನ ಮೇಲೂ, ಸೂರ್ಯನು ರಥದ ಮೇಲೂ, ಈಶಾನನು ವೃಷಭೇಂದ್ರನ ಮೇಲೂ, ಅನಂತನು ನಾಗವಾಹನನ ಮೇಲೂ, ಕುಳಿತು ಬಂದಿದ್ದರು.

೭. ದ್ವಾದಶಾದಿತ್ಯರೂ, ಅಷ್ಟವಸುಗಳೊ, ಏಕಾದಶರುದ್ರರೂ, ಸಿದ್ಧಗಂಧರ್ವ ಕಿಂನರಾದಿಗಳೂ, ಸೂರ್ಯನಂತೆ ವರ್ಚಸ್ವಿಗಳಾದ ಜೀವನ್ಮುಕ್ತರಾದ ಮುನಿಗಳೂ ಅಲ್ಲಿಗೆ ಬಂದಿದ್ದರು

೮. ಎಲೈ ನಂದಗೋಪನೇ, ಆ ಸುರಸೈನ್ಯವನ್ನು ನೋಡಿ ಶುಕ್ರಾಚಾರ್ಯನು ನಿರ್ಭೀತನಾಗಿ ಚಂದ್ರನನ್ನು ಶಾಂತಗೊಳಿಸಿ ಅದಕ್ಕೆ ಎರಡರಷ್ಟು ದಾನವಸೈನ್ಯವನ್ನು ಕರೆಸಿದನು

ರತ್ನಮಾಲಾನದೀತೀರೇ ಹುತಾಶನಪ್ರಿಯಾಶ್ರಮೇ ।
ತತ್ರ ತಸ್ಥೌ ದೈತ್ಯಸೈನ್ಯಂ ಪುಣ್ಯಕ್ಷೀರೋದಧೇಸ್ತಟೇ ॥ ೯ ॥

ಏತಸ್ಮಿನ್ನಂತರೇ ಶುಕ್ರಃ ಸಮೀಪಂ ಸರಸಸ್ತಟೇ ।
ಪುಣ್ಯಾಶ್ರಮೇಽಕ್ಷಯವಟೇ ಸುರಸೈನ್ಯಾತ್ಸಮಾಗತಂ ॥ ೧೦ ॥

ದದರ್ಶ ವೃಷಭಸ್ಥಂ ಚ ಶಂಕರಂ ಸರ್ವಶಂಕರಂ ।
ತ್ರಿಶೂಲಪಟ್ಟಿಶಧರಂ ವ್ಯಾಘ್ರಚರ್ಮಾಂಬರಂ ವರಂ ॥ ೧೧ ॥

ತೇಜಃಸ್ವರೂಪಂ ಪರಮಂ ಭಕ್ತಾನುಗ್ರಹವಿಗ್ರಹಂ ।
ಸರ್ವಸಂಪತ್ಪ್ರದಾತಾರಂ ಸರ್ವಜ್ಞಂ ಸರ್ವಕಾರಣಂ ॥ ೧೨ ॥

ಸರ್ವೇಶ್ವರಂ ಸರ್ವಪೂಜ್ಯಂ ಸರ್ವರೂಪಂ ಸನಾತನಂ ।
ಶರಣಾಗತದೀನಾರ್ತಪರಿತ್ರಾಣ ಪರಾಯಣಂ ॥ ೧೩ ॥

---

೯. ರತ್ನಮಾಲಾನದಿಯ ತೀರದಲ್ಲಿ ಅಗ್ನಿದೇವನ ಪ್ರಿಯೆಯಾದ ಸ್ವಾಹಾ ದೇವಿಯ ಆಶ್ರಮದಲ್ಲಿ ದೇವತೆಗಳ ಸೈನ್ಯವಿದ್ದಿತು. ಪುಣ್ಯಕರವಾದ ಕ್ಷೀರಸಾಗರದ ದಡದಲ್ಲಿ ದೈತ್ಯಸೈನ್ಯವಿದ್ದಿತು.

೧೦–೧೧. ಈ ಮಧ್ಯೆ ಶುಕ್ರಾಚಾರ್ಯನು ಸಮೀಪದಲ್ಲಿದ್ದ ಸರೋವರದ ತೀರದಲ್ಲಿ ಪುಣ್ಯಾಶ್ರಮವಾದ ಅಕ್ಷಯ ವಟವೃಕ್ಷದ ಕೆಳಗೆ ದೇವತೆಗಳ ಸೈನ್ಯದೊಡನೆ ಬಂದಿದ್ದ ಶಂಕರನನ್ನು ಕಂಡನು. ಸರ್ವಲೋಕಮಂಗಳಕಾರಕನಾದ ಆ ಶಂಕರನು ವ್ಯಾಘ್ರಚರ್ಮವನ್ನು ಧರಿಸಿ ಕೈಯಲ್ಲಿ ತ್ರಿಶೂಲಪಟ್ಟಿಶ ಮುಂತಾದ ಆಯುಧಗಳನ್ನು ಹಿಡಿದು ವೃಷಭಾರೂಢನಾಗಿ ಕುಳಿತಿದ್ದನು.

೧೨. ತೇಜೋಮಯನೂ ಭಕ್ತಾನುಗ್ರಹಕ್ಕಾಗಿ ವಿಗ್ರಹಧಾರಿಯೂ ಆದ ಆ ಪರಶಿವನು ಸರ್ವಸಂಪತ್ಪ್ರದಾತೃವೂ ಸರ್ವಜ್ಞನೂ ಸರ್ವಕಾರಣನೂ ಆಗಿದ್ದನು.

೧೩. ಸರ್ವೇಶ್ವರನೂ, ಸರ್ವಪೂಜ್ಯನೂ, ಸರ್ವರೂಪನೂ, ಸನಾತನನೂ ಆದ ಆ ಶಂಕರನು ಶರಣಾಗತರಾದ ದೀನರು ಮತ್ತು ಆರ್ತರನ್ನು ರಕ್ಷಣೆಮಾಡುವುದರಲ್ಲಿ ಪರಾಯಣನಾಗಿದ್ದನು.

ಸಸ್ಮಿತಂ ಪರಮಾತ್ಮಾನಂ ಜ್ವಲಂತಂ ಬ್ರಹ್ಮತೇಜಸಾ ।
ಸಂತ್ರಸ್ತಃ ಸಹಸೋತ್ಥಾಯ ಪ್ರಣನಾಮ ಪದಾಂಬುಜೇ ॥ ೧೪ ॥

ದದೌ ಶುಭಾಶಿಷಂ ತಸ್ಮೈ ಸುಪ್ರಸನ್ನಃ ಪರಾತ್ಪರಃ ।
ರತ್ನಸಿಂಹಾಸನೇ ತಂ ಚ ವಾಸಯಾಮಾಸ ಸಾದರಂ ॥ ೧೫ ॥

ಅಥ ತತ್ರಾಂತರೇ ವಿಪ್ರ ಪುರತಸ್ತಂ ದದರ್ಶ ಸಃ ।
ಶಾಂತಂ ಸ್ವಯಂ ವಿಧಾತಾರಂ ರತ್ನಸ್ಯಂದನಸುಂದರಂ ॥ ೧೬ ॥

ವಹ್ನಿಶುದ್ಧಾಂಶುಕಾಧಾನಂ ರತ್ನಮಾಲಾವಿಭೂಷಿತಂ ।
ಪ್ರಸನ್ನಂ ಸುಸ್ಮಿತಂ ಶುದ್ಧಂ ಜಗತಾಮೀಶ್ವರಂ ಪರಂ ॥ ೧೭ ॥

ಕರ್ಮಣಾಂ ಫಲದಾತಾರಂ ತಪೋರೂಪಂ ತಪಸ್ವಿನಾಂ ।
ವೇದಾನಾಂ ಜನಕಂ ವೇದಪ್ರಸೂಂ ಕಾಂತಂ ಮನೋಹರಂ ॥ ೧೮ ॥

---

೧೪. ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುವವನೂ ಸ್ಮಿತವದನನೂ ಆದ ಆ ಪರಮಾತ್ಮನನ್ನು ನೋಡಿ ಶುಕ್ರಾಚಾರ್ಯನು ಭೀತನಾಗಿ ಪ್ರತ್ಯುತ್ಥಾನಮಾಡಿ ಅವನ ಪಾದಕಮಲಗಳಿಗೆ ವಂದಿಸಿದನು.

೧೫. ಆಗ ಶಂಕರನು ಪ್ರಸನ್ನನಾಗಿ ಅವನಿಗೆ ಶುಭಾಶೀರ್ವಾದಮಾಡಿ ರಮ್ಯವಾದ ರತ್ನಸಿಂಹಾಸನದಲ್ಲಿ ಆದರಪೂರ್ವಕವಾಗಿ ಸ್ವಾಗತಿಸಿ ಕುಳ್ಳಿರಿಸಿದನು.

೧೬. ಈ ಮಧ್ಯದಲ್ಲಿ ಶಾಂತಸ್ವರೂಪನೂ, ಸ್ವಯಂ ವಿಧಾತೃವೂ ಆದ ಬ್ರಹ್ಮನು ರತ್ನದ ರಥದಲ್ಲಿ ಕುಳಿತು ಅವರ ಮುಂದೆ ಬಂದುದನ್ನು ಶುಕ್ರಾಚಾರ್ಯನು ಕಂಡನು.

೧೭. ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನುಟ್ಟು ರತ್ನಮಾಲೆಗಳಿಂದ ವಿಭೂಷಿತನಾಗಿದ್ದ ಜಗದೊಡೆಯನಾದ ಆ ಬ್ರಹ್ಮನು ಮುಗುಳು ನಗೆಯಿಂದ ಪ್ರಸನ್ನವದನನಾಗಿದ್ದನು.

೧೮. ಕರ್ಮಗಳ ಫಲದಾಯಕನೂ, ತಪೋರೂಪನೂ, ತಪಸ್ವಿಶ್ರೇಷ್ಠನೂ ವೇದಗಳ ಜನಕನೂ ವೇದಮೂಲನೂ ಆದ ಆ ಬ್ರಹ್ಮನು ಮನೋಹರರೂಪದಿಂದ ಶೋಭಿಸುತ್ತಿದ್ದನು.

ಪುಟಾಂಜಲಿಸ್ತದಾ ತ್ರಸ್ತಃ ಪ್ರಣನಾಮ ಸುರೇಶ್ವರಂ ।
ರತ್ನಸಿಂಹಾಸನೇ ರಮ್ಯೇ ವಾಸಯಾಮಾಸ ಭಕ್ತಿತಃ ॥ ೧೯ ॥

ಪೂಜಾಂ ಚಕಾರ ಭಕ್ತ್ಯಾ ಚ ತಯೋಶ್ಚರಣಪಂಕಜೇ ।
ನೋಚಿತಂ ಕುಶಲಪ್ರಶ್ನೇ ತಯೋಃ ಕಲ್ಯಾಣಮೇವ ಚ ॥ ೨೦ ॥

ವಿಧಾತಾ ಜಗತಾಂ ಶುಕ್ರಮಾಚಾರ್ಯಂ ಪುರತಃ ಸ್ಥಿತಂ ।
ಸುನೀತಿಂ ಕಥಯಾಮಾಸ ಯತ್ನತಃ ಶಂಭುಸಂಮತಃ ॥ ೨೧ ॥

॥ ಬ್ರಹ್ಮೋವಾಚ ॥

ಶೃಣು ಶುಕ್ರ ಪ್ರವಕ್ಷ್ಯಾಮಿ ದುರ್ನೀತಿಂ ಶಶಿನಃ ಸುತ ।
ಲಜ್ಜಾಕರಂ ತ್ರಿಜಗತಾಂ ಕರ್ಮ ವೇದಬಹಿಷ್ಕೃತಂ ॥ ೨೨ ॥

ಸ್ನಾತ್ವಾ ಗೃಹೋನ್ಮುಖೀಂ ತಾರಾಂ ಗುರುಪತ್ನೀಂ ಪತಿವ್ರತಾಂ ।
ಗೃಹೀತ್ವಾ ಶರಣಾಪನ್ನಸ್ತ್ವಯಿ ಪಾಪಶ್ಚ ಸಾಂಪ್ರತಂ ॥ ೨೩ ॥

---

೧೯. ಭಯದಿಂದ ಕೈಮುಗಿದುಕೊಂಡು ಸುರೇಶ್ವರನಾದ ಆ ಬ್ರಹ್ಮನಿಗೆ ವಂದಿಸಿ ಭಕ್ತಿಪೂರ್ವಕವಾಗಿ ಸ್ವಾಗತಿಸಿ ರಮ್ಯವಾದ ರತ್ನಸಿಂಹಾಸನದ ಮೇಲೆ ಕುಳ್ಳಿರಿಸಿದನು.

೨೦. ಶುಕ್ರಾಚಾರ್ಯನು ಭಕ್ತಿಯಿಂದ ಆ ಶಂಕರ ಮತ್ತು ಬ್ರಹ್ಮನ ಚರಣ ಕಮಲಗಳಿಗೆ ಪೂಜಿಸಿದನು. ಲೋಕಕಲ್ಯಾಣಕಾರಕರಾದ ಅವರಿಬ್ಬರಿಗೂ ಕುಶಲ ಪ್ರಶ್ನೆಯ ಆವಶ್ಯಕತೆಯೇ ಇರುವುದಿಲ್ಲ.

೨೧. ಆಗ ಜಗದೊಡೆಯನಾದ ಬ್ರಹ್ಮನು ತನ್ನ ಮುಂದಿರುವ ಶುಕ್ರಾಚಾರ್ಯನನ್ನು ನೋಡಿ ಶಂಭುವಿನ ಸಮ್ಮತಿಯನ್ನು ಪಡೆದು ಅವನಿಗೆ ಕೆಲವು ಸುನೀತಿಯನ್ನು ಉಪದೇಶಿಸಿದನು.

೨೨. ಬ್ರಹ್ಮಾ :—ಎಲೈ ಪುತ್ರಸದೃಶನಾದ ಶುಕ್ರಾಚಾರ್ಯನೇ, ಮೂರು ಲೋಕದಲ್ಲಿಯೂ ಲಜ್ಜಾಕರವೂ, ವೇದಬಾಹಿರವೂ ಆದ ಚಂದ್ರನ ದುರ್ನೀತಿಯನ್ನು ನಿನಗೆ ಹೇಳುವೆನು ಕೇಳು.

೨೩. ಸ್ನಾನಮಾಡಿ ಗೃಹಾಭಿಮುಖಳಾಗಿ ಹೊರಟಿದ್ದ ಪರಮಪತಿವ್ರತೆಯೂ ಗುರುಪತ್ನಿಯೂ ಆದ ತಾರೆಯನ್ನು ಬಲಾತ್ಕಾರದಿಂದ ಸಂಭೋಗಿಸಿ ಈಗ ಈ ಪಾಪಿಯು ನಿನಗೆ ಶರಣಾಗತನಾಗಿರುವನು.

ಪ್ರಸ್ತುತಂ ದೈವಸೈನ್ಯಂ ಚ ಪಶ್ಯ ವತ್ಸ ರಣೋದ್ಯತಂ ।
ಅಹಂ ಶಂಭುಸ್ತ್ವತ್ಸಮೀಪಂ ತದರ್ಥಂ ಚ ಸಮಾಗತಾ ॥ ೨೩ ॥

॥ ಶಂಭುರುವಾಚ ॥

ಚಂದ್ರಮಾನಯ ಹೇ ವಿಪ್ರ ಯದ್ಯಾತ್ಮಶಿವಮಿಚ್ಛಸಿ ।
ಸಂಹರಿಷ್ಯೇ ಶಿರಸ್ತಸ್ಯ ತ್ರಿಶೂಲೇನ ಚ ಪಾಪಿನಃ ॥ ೨೫ ॥

ಅನ್ಯಥಾ ಸಂಹರಿಷ್ಯಾಮಿ ಸರ್ವದೈತ್ಯಾನ್ ಕ್ಷಣೇನ ಚ ।
ಮಯಿ ರುಷ್ಟೇ ರಕ್ಷಿತಾ ಕೋ ದೈತ್ಯಾನಾಂ ಚ ಭವೇದ್ದ್ವಿಜ ॥ ೨೬ ॥

ಸದ್ಯಃ ಪಾಶುಪತೇನೈವ ವಾಯವ್ಯಾಸ್ತ್ರೇಣ ಚ ಸಾಂಪ್ರತಂ ।
ಸುರಾಣಾಂ ರಿಪುವರ್ಗಂ ಚ ಹನಿಷ್ಯಾಮಿ ಚ ಲೀಲಯಾ ॥ ೨೭ ॥

ದುರ್ವಾಸಸೋ ಮದಂಶಸ್ಯ ಗುರುಸ್ತಸ್ಯಾಂಗಿರಾ ಮುನಿಃ ।
ಪರಸ್ಪರಾಚ್ಚ ಸಂಬಂಧಾದ್ಗುರುಪುತ್ರೋ ಗುರುರ್ಮಮ ॥ ೨೮ ॥

---

೨೪. ಈಗ ಯುದ್ಧಕ್ಕೆ ಸಿದ್ಧವಾಗಿ ಬಂದಿರುವ ದೇವತೆಗಳ ಸೈನ್ಯವನ್ನು ನೀನು ನೋಡು. ಈಗ ನಾನು ಮತ್ತು ಶಂಕರನು ಈ ಯುದ್ಧವನ್ನು ತಪ್ಪಿಸುವುದಕ್ಕಾಗಿಯೇ ನಿನ್ನ ಸಮೀಪಕ್ಕೆ ಬಂದಿದ್ದೇವೆ.

೨೫. ಶಂಭು :—ಎಲೈ ವಿಪ್ರೋತ್ತಮನೆ, ನಿನಗೆ ಕುಶಲವುಂಟಾಗಬೇಕೆಂದು ಬಯಸುವವನಾದರೆ ಜಾಗ್ರತೆಯಾಗಿ ಚಂದ್ರನನ್ನು ಇಲ್ಲಿಗೆ ಕರೆದುಕೊಂಡುಬಾ ನನ್ನ ತ್ರಿಶೂಲದಿಂದ ಆ ಪಾಪಿಯ ತಲೆಯನ್ನು ಕತ್ತರಿಸುವೆನು.

೨೬. ಹಾಗಲ್ಲದಿದ್ದರೆ ಒಂದು ಕ್ಷಣದೊಳಗೆ ಎಲ್ಲ ದೈತ್ಯರನ್ನೂ ಸಂಹರಿಸುವೆನು. ಎಲೈ ದ್ವಿಜೋತ್ತಮನಾದ ಶುಕ್ರಾಚಾರ್ಯನೇ, ನಾನು ದೈತ್ಯರ ಮೇಲೆ ಕೋಪಮಾಡಿಕೊಂಡರೆ ಅವರನ್ನು ರಕ್ಷಿಸುವವರಾರು ?

೨೭. ಈ ಕೂಡಲೇ ಪಾಶುಪತಾಸ್ತ್ರದಿಂದಲೂ ವಾಯುವ್ಯಾಸ್ತ್ರದಿಂದಲೂ, ದೇವತೆಗಳ ಶತ್ರುವರ್ಗವನ್ನೆಲ್ಲ ಲೀಲಾ ಮಾತ್ರದಿಂದ ಸಂಹರಿಸಿಬಿಡುವೆನು.

೨೮. ನನ್ನ ಅಂಶದಿಂದ ಸಂಭೂತನಾದ ದುರ್ವಾಸನೆಂಬ ಮುನಿಗೆ ಅಂಗಿರಸ್ಸು ಗುರುವಾಗಬೇಕು. ಅನ್ಯೋನ್ಯಸಂಬಂಧವಿರುವುದರಿಂದ ಬೃಹಸ್ಪತ್ಯಾಚಾರ್ಯನು ನನಗೆ ಗುರುಪುತ್ರನಾಗಬೇಕು.

ಬೃಹಸ್ಪತಿಶ್ಚ ತೇಜಸ್ವೀ ತಂ ಭಸ್ಮೀಕರ್ತುಮೀಶ್ವರಃ ।
ನ ಚಕಾರ ಕೃಪಾಲುಶ್ಚ ಪ್ರಿಯಶಿಷ್ಯೇಣ ಹೇತುನಾ ॥ ೨೯ ॥

ಉತಥ್ಯಪತ್ನೀಂ ದೃಷ್ಟ್ವಾ ಸ ಪುರಾ ರೇಮೇ ಸ್ವಕಾಮತಃ ।
ತತ್ಪತೇಃ ಶಾಪತೋಽಸ್ಯೈವ ಪರಗ್ರಸ್ತಾ ಪ್ರಿಯಾ ಸತೀ ॥ ೩೦ ॥

ಪತ್ನೀಂ ಮದ್ಗುರುಪುತ್ರಸ್ಯ ದೇಹಿ ತಾರಾಂ ಮನೋಹರಾಂ ।
ಮದ್ವೈರಿಣಂ ಚ ಚಂದ್ರಂ ಚ ಭ್ರಾತೃಭಾರ್ಯಾಪಹಾರಿಣಂ ॥ ೩೧ ॥

ಶರಣಾಗತದೀನಾರ್ತಂ ನ ಹಿ ರಕ್ಷೇದ್ಯದೀಶ್ವರಃ ।
ಪಚ್ಯತೇ ನಿರಯೇ ತಾವದ್ಯಾವದಿಂದ್ರಾಶ್ಚತುರ್ದಶ ॥ ೩೨ ॥

ಅತ್ರ ನಾಸ್ತಿ ವಿಚಾರೋ ಮೇ ಪಾಪಿಷ್ಠೇ ಶರಣಾಗತೇ ।
ಪಾಪೀ ಯಂ ಶರಣಂ ಯಾತಿ ಸ ಪಾಪೀ ಚ ನ ಸಂಶಯಃ ॥ ೩೩ ॥

---

೨೯. ತೇಜಸ್ವಿಯಾದ ಬೃಹಸ್ಪತಿಯೂ, ಸಹ ಆ ಚಂದ್ರನನ್ನು ಭಸ್ಮಮಾಡ ಬಲ್ಲನು. ಆದರೆ ಪ್ರಿಯಶಿಷ್ಯನೆಂಬ ಕಾರಣದಿಂದ ದಯೆತೋರಿ ಅವನನ್ನು ಬೂದಿ ಮಾಡಲಿಲ್ಲ.

೩೦. ಬೃಹಸ್ಪತಿಯು ಹಿಂದೆ ಅವನ ಅಣ್ಣನಾದ ಉತಥ್ಯನ ಹೆಂಡತಿಯನ್ನು ಕಾಮಪೂರ್ವಕವಾಗಿ ಉಪಭೋಗಿಸಿ, ಅವಳ ಪತಿಯಾದ ಉತಥ್ಯನಿಂದ ತನ್ನ ಹೆಂಡತಿಯು ಪರರಿಂದ ಗ್ರಸ್ತಳಾಗುವಂತೆ ಶಾಪಹೊಂದಿದನು.

೩೧. ನನ್ನ ಗುರುಪುತ್ರನಾದ ಬೃಹಸ್ಪತಿಯ ಪತ್ನಿಯಾದ ಮನೋಹರಳಾದ ತಾರೆಯನ್ನು ಹಿಂದಕ್ಕೆ ಕೊಡಿಸು. ಸಹೋದರನ ಪತ್ನಿಯನ್ನು ಅಪಹರಿಸಿದುದರಿಂದ ನನ್ನ ಶತ್ರುವಾದ, ಚಂದ್ರನನ್ನು ಮನ್ನಿಸುವೆನು.

೩೨ ಈಶ್ವರನೆನಿಸಿದವನು ಶರಣಾಗತನೂ ದೀನನೂ ಆದ ಪ್ರಾಣಿಯನ್ನು ಕಾಪಾಡದಿದ್ದರೆ ಹದಿನಾಲ್ಕು ಇಂದ್ರರ ಜೀವಿತಕಾಲದ ವರೆಗೆ ನರಕದಲ್ಲಿ ನರಳಬೇಕಾಗುವುದು.

೩೩ ಚಂದ್ರನು ಶರಣಾಗತನಾಗಿರುವುದರಿಂದ ಅವನು ಪಾಪಿಷ್ಠನೆಂದು ಯೋಚಿಸಬೇಕಾದುದಿಲ್ಲ. ಪಾಪಿಯು ಯಾರ ಮರೆ ಹೋಗುವನೋ ಆ ಶರಣಾಗತ ರಕ್ಷಕನು ತನಗೆ ಶರಣು ಹೊಂದಿದವನ ಪಾಪಕ್ಕೆ ಗುರಿಯಾಗುವನು.

ದೇಹಿ ತಂ ವಿಪ್ರ ಶಾರ್ದೂಲ ಪಾಪಿನಂ ಮಾತೃಗಾಮಿನಂ ।
ಬಹಿಷ್ಕೃತ್ಯ ಸ್ವಾಶ್ರಮಾಚ್ಚ ತಾರಾಸಾಧ್ವೀಸಮನ್ವಿತಂ ॥ ೩೪ ॥

॥ ಶುಕ್ರ ಉವಾಚ ॥

ಸುರಾಣಾಮಸುರಾಣಾಂ ಚ ಸರ್ವೇಷಾಂ ಜಗತಾಮಪಿ ।
ತ್ವಮೇವ ಶಾಸ್ತಾ ಭಗವಾನ್ಕೋ ವಾ ಶಾಸ್ತಿ ಸುರೇಽಸುರೇ ॥ ೩೫ ॥

ಕೃತ್ವಾ ಸುರಾಣಾಂ ಸಾಹಾಯ್ಯಂ ಕಥಂ ದೈತ್ಯಾನ್ಹನಿಷ್ಯಸಿ ।
ಸಂಹರ್ತುಃ ಸರ್ವಜಗತಾಂ ದೈತ್ಯೇಷ್ವೇ ಕಿಂಚ ಪೌರುಷಂ ॥ ೩೬ ॥

ತ್ವಂ ಜ್ಯೋತಿಃ ಪರಮಂ ಬ್ರಹ್ಮ ಸಗುಣೋ ನಿರ್ಗುಣಃ ಸ್ವಯಂ ।
ಗುಣಭೇದಾನ್ಮೂರ್ತಿಭೇದೋ ಬ್ರಹ್ಮವಿಷ್ಣುಶಿವಾತ್ಮಕಃ ॥ ೩೭ ॥

ಬಲಿದ್ವಾರೇ ಗದಾಪಾಣಿಃ ಸ್ವಯಮೇವ ಭವಾನ್ಪ್ರಭೋ ।
ಸ್ವಯಂ ಪ್ರದತ್ತಾ ಶಕ್ರಾಯ ತಸ್ಮೈ ಶ್ರೀರಪಿ ಲೀಲಯಾ ॥ ೩೮ ॥

---

೩೪. ಎಲೈ ವಿಪ್ರೋತ್ತಮನೇ ಪತಿವ್ರತೆಯಾದ ತಾರೆಯೊಡಗೂಡಿದ ಮಾತೃಗಾಮಿಯಾದ ಆ ಪಾಪಿ ಚಂದ್ರನನ್ನು ನಿನ್ನ ಆಶ್ರಮದಿಂದ ಹೊರಕ್ಕೆ ಕಳುಹಿಸು.

೩೫. ಶುಕ್ರ:—ಎಲೈ ಭಗವಂತನಾದ ಪರಮೇಶ್ವರನೇ, ದೇವತೆಗಳಿಗೂ ರಾಕ್ಷಸರಿಗೂ ನಿಖಿಲ ಜಗತ್ಪತಿಗೂ ನೀನೇ ಸಂರಕ್ಷಕನಾಗಿದ್ದೀಯೆ. ನೀನು ರಕ್ಷಣೆ ಮಾಡದಿದ್ದರೆ ದೇವಾಸುರರನ್ನು ರಕ್ಷಿಸುವರಾರು.

೩೬. ನೀನು ದೇವತೆಗಳಿಗೆ ಸಹಾಯಮಾಡಿ ದೈತ್ಯರನ್ನು ಸಂಹರಿಸುವುದು ಯಾವನ್ಯಾಯ? ನಿಖಿಲ ಜಗತ್ತನ್ನು ಸಂಹರಿಸಬಲ್ಲ ನೀನು ರಾಕ್ಷಸರ ಮೇಲೆ ನಿನ್ನ ಪೌರುಷವನ್ನು ತೋರಬೇಕೆ?

೩೭. ಸ್ವಯಂ ಜ್ಯೋತಿರ್ಮಯನೂ, ನಿರ್ಗುಣನೂ, ಪರಬ್ರಹ್ಮಸ್ವರೂಪನೂ ಆದ ನೀನು ಸಗುಣನಾಗಿ ಗುಣಭೇದದಿಂದ ಮೂರ್ತಿಭೇದವನ್ನು ಧರಿಸಿ ಬ್ರಹ್ಮ ವಿಷ್ಣು ಶಿವಾತ್ಮಕನಾಗುವೆ.

೩೮. ಎಲೈ ಪ್ರಭುವೇ, ಸ್ವಯಂ ನೀನೇ ಗದಾಪಾಣಿಯಾಗಿ ಬಲಿಯ ದ್ವಾರವನ್ನು ಕಾಯುತ್ತಿರುವೆ. ದೇವೇಂದ್ರನು ಕಳೆದುಕೊಂಡ ಸಂಪತ್ತನ್ನೆಲ್ಲ ಲೀಲಾಮಾತ್ರದಿಂದ ನೀನೇ ಹಿಂದಕ್ಕೆ ಕೊಟ್ಟಿರುವೆ.

ಕ್ಷಮಸ್ವ ಭಗವಾಞ್ಛಂಭೋ ಹರ ಕ್ರೋಧಂ ಚ ಸಂಹರ ।
ಕಿಂ ಪೌರುಷಂ ಚ ಭವತೋ ಬ್ರಾಹ್ಮಣಸ್ಯಾಪಿ ಹಿಂಸಯಾ ॥ ೩೯ ॥

ಅಹಂ ಜೀವಞ್ಛರೀರೇಣ ನ ದಾಸ್ಯಾಮಿ ನಿಶಾಕರಂ ।
ಶರಣಾಗತದೀನಾರ್ತಂ ಲಜ್ಜಿತಂ ಪಾಪಸಂಯುತಂ ॥ ೪೦ ॥

ಅಹಂ ಚ ತ್ವತ್ಪದಾಂಭೋಜೇ ಶರಣಂ ಯಾಮಿ ಶಂಕರ ।
ಯಥೋಚಿತಂ ಕುರು ವಿಭೋ ಜಗತ್ಸರ್ವಂ ತಥೈವ ಚ ॥ ೪೧ ॥

ಶುಕ್ರಸ್ಯ ವಚನಂ ಶ್ರುತ್ವಾ ಪ್ರಸನ್ನೋ ಭಗವಾಞ್ಛಿವಃ ।
ಇತ್ಯುವಾಚ ನಿಶಾನಾಥಂ ಸಮಾನಯ ಶುಭಂ ಭವೇತ್ ॥ ೪೨ ॥

ಏತಸ್ಮಿನ್ನಂತರೇ ಬ್ರಹ್ಮಾ ಬೋಧಯಿತ್ವಾ ಕವಿಂ ವಿಭುಃ ।
ಸಮಾನೀಯ ನಿಶಾನಾಥಂ ತಾರಕಾಸಹಿತಂ ವ್ರಜ ॥ ೪೩ ॥

---

೩೯. ಭಗವಂತನಾದ ಶಂಭುವೇ, ಕೋಪವನ್ನು ತಡೆದು ಚಂದ್ರನನ್ನು ಕ್ಷಮಿಸು. ಬ್ರಾಹ್ಮಣನನ್ನು ಹಿಂಸೆಮಾಡುವುದರಲ್ಲಿ ನಿನ್ನ ಪೌರುಷವನ್ನು ತೋರ ಬೇಕೆ ?

೪೦. ಪಾಪಿಯಾದರೂ ಶರಣಾಗತನೂ ದೀನನೂ ಲಜ್ಜಿತನೂ ಆದ ನಿಶಾಕರ ನನ್ನು ನಾನು ನನ್ನ ಶರೀರವಿರುವವರೆಗೂ ಬಿಟ್ಟುಕೊಡಲಾರೆನು.

೪೧. ಎಲೈ ಶಂಕರನೇ, ನಾನೂ ಸಹ ನಿನ್ನ ಪಾದಕಮಲಗಳಿಗೆ ಮರೆ ಹೊಗುವೆನು. ಜಗತ್ತೇ ನಿನ್ನದಾಗಿರುವುದರಿಂದ ನಿನ್ನ ಇಚ್ಛೆಯಂತೆ ನೀನು ಮಾಡು.

೪೨. ಶುಕ್ರಾಚಾರ್ಯನ ಮಾತನ್ನು ಕೇಳಿ ಶಿವನು ಪ್ರಸನ್ನನಾಗಿ 'ಚಂದ್ರನನ್ನು ಇಲ್ಲಿಗೆ ಕರೆದುಕೊಂಡು ಬಾ, ನಿಮಗೆ ಶುಭವುಂಟಾಗುವುದು' ಎಂದನು.

೪೩–೪೪. ಈ ಸಮಯದೊಳಗೆ ಬ್ರಹ್ಮನು ಶುಕ್ರಾಚಾರ್ಯನಿಗೂ ಸಹ ಬುದ್ಧಿವಾದವನ್ನು ಹೇಳಿ ನಿಶಾಪತಿಯಾದ ಚಂದ್ರನನ್ನು ತಾರಾದೇವಿಯೊಡನೆ

ಶಂಭೋಶ್ಚ ಚರಣಾಂಭೋಜೇ ಚಕಾರ ಚ ಸಮರ್ಪಣಂ ।
ಶಂಭುಸ್ತಂ ಪ್ರೀತಿಯುಕ್ತಶ್ಚ ವಾಸಯಾಮಾಸ ವಕ್ಷಸಿ ॥ ೪೪ ॥

ದತ್ವಾ ತಸ್ಮೈ ಪಾದರೇಣುಂ ನಿಷ್ಪಾಪಂ ಚ ಚಕಾರ ಸಃ ।
ದತ್ವಾ ತನ್ಮಸ್ತಕೇ ಹಸ್ತಂ ಕೃಪಾಲುರಭಯಂ ದದೌ ॥ ೪೫ ॥

ಕ್ಷೀರೋದೇ ಸ್ನಾಪಯಿತ್ವಾ ಚ ಪ್ರಾಯಶ್ಚಿತ್ತೇನ ಶಂಕರಃ ।
ಚಕಾರ ಚಂದ್ರಂ ನಿಷ್ಪಾಪಂ ಬ್ರಹ್ಮಣಾ ಸಹಿತಃ ಶುಚಿಃ ॥ ೪೬ ॥

ಯೋಗೇನ ಚಂದ್ರಂ ಯೋಗೀಂದ್ರೋ ದ್ವಿಖಂಡಂ ತಂ ಚಕಾರ ಸಃ ।
ರರಕ್ಷಾರ್ಧಂ ಲಲಾಟೇ ಚ ಸೋಽನ್ಯಾರ್ಧಂ ಬ್ರಹ್ಮಣಃ ಪುರಃ ॥ ೪೭ ॥

ಏವಮೇವ ಮಹಾದೇವೋ ಬಭೂವ ಚಂದ್ರಶೇಖರಃ ।
ಮೃಗಾಂಕೋ ಲಜ್ಜಿತಸ್ತತ್ರ ಕಲಂಕೀ ದೇವಸಂಸದಿ ॥ ೪೮ ॥

ಕರೆತಂದು ಶಂಭುವಿನ ಚರಣಕಮಲಗಳ ಮೇಲೆ ಸಮರ್ಪಣೆ ಮಾಡಿದನು. ಆಗ ಸುಪ್ರೀತನಾದ ಶಂಭುವು ಚಂದ್ರನನ್ನು ತನ್ನ ವಕ್ಷಃಸ್ಥಳದಲ್ಲಿ ಅಪ್ಪಿಕೊಂಡನು.

೪೫. ಶಂಕರನು ಚಂದ್ರನಿಗೆ ತನ್ನ ಪಾದಧೂಳಿಯನ್ನು ಕೊಟ್ಟು ಅವನನ್ನು ಪಾಪರಹಿತನನ್ನಾಗಿ ಮಾಡಿದನು. ಅಲ್ಲದೆ ಕೃಪಾಮಯನಾದ ಅವನು ಚಂದ್ರನ ತಲೆಯಮೇಲೆ ಕೈಯ್ಯನ್ನಿಟ್ಟು ಅಭಯವನ್ನಿತ್ತನು.

೪೬. ಶಂಕರನು ಚಂದ್ರನನ್ನು ಕ್ಷೀರಸಮುದ್ರದಲ್ಲಿ ಸ್ನಾನಮಾಡಿಸಿ ಪ್ರಾಯಶ್ಚಿತ್ತಮಾಡಿದುದಲ್ಲದೆ ಪಾಪರಹಿತನನ್ನಾಗಿ ಮಾಡಿ ಬ್ರಹ್ಮನೊಡನೆ ಶುಚಿಯನ್ನಾಗಿ ಮಾಡಿದನು.

೪೭. ಯೋಗೀಂದ್ರನಾದ ಶಂಕರನು ಯೋಗಶಕ್ತಿಯಿಂದ ಚಂದ್ರನನ್ನು ಅರ್ಧಭಾಗಮಾಡಿ ಒಂದರ್ಧವನ್ನು ತನ್ನ ತಲೆಯಮೇಲೆ ಧರಿಸಿ ಉಳಿದರ್ಧವನ್ನು ಬ್ರಹ್ಮನಿಗೆ ಕೊಟ್ಟನು.

೪೮–೪೯. ಆದುದರಿಂದಲೇ ಮಹಾದೇವನು ಚಂದ್ರಶೇಖರನೆಂದು ಹೆಸರಾಂತನು ಚಂದ್ರನೂ ಸಹ ದೇವತೆಗಳೆದುರಿನಲ್ಲಿ ತನಗುಂಟಾದ ಅವಮಾನದಿಂದ

ಲಜ್ಜಯಾ ಚ ಸ್ವಯೋಗೇನ ದೇಹತ್ಯಾಗಂ ಚಕಾರ ಸಃ ।
ತಚ್ಛರೀರಂ ಚ ಕ್ಷೀರೋದೇ ಬ್ರಹ್ಮಣಾ ಚ ಸಮರ್ಪಿತಂ ।
ರುರೋದಾತ್ರಿಶ್ಚ ಕೃಪಯಾ ಶುಚಾ ಕ್ಷೀರೋದಧೇಸ್ತಟೇ ॥ ೪೯ ॥

ಅತ್ರೇಶ್ಚಕ್ಷುರ್ಜಲಂ ತಸ್ಯ ಪಪಾತ ಚ ಜಲೇ ವ್ರಜ ।
ತಸ್ಮಾದ್ಬಭೂವ ಚಂದ್ರಶ್ಚ ನಿಷ್ಪಾಪೋ ದೇವಸಂಸದಿ ॥ ೫೦ ॥

ಬ್ರಹ್ಮಾ ಚ ಭಗವಾಞ್ಛಂಭುರಭಿಷೇಕಂ ಚಕಾರ ತಂ ।
ಉವಾಚ ತಂ ಮಹಾದೇವೋ ನಿರ್ಭಯಂ ದೇವಸಂಸದಿ ॥ ೫೧ ॥

॥ ಮಹಾದೇವ ಉವಾಚ ॥

ಸ್ವಸ್ಥಾನಂ ಗಚ್ಛ ಪುತ್ರ ತ್ವಂ ಕುರುಷ್ವ ವಿಷಯಂ ಮುದಾ ।
ಪಶ್ಚಾತ್ತಸ್ಯಾಶ್ಚ ಶಾಪೇನ ಯಕ್ಷ್ಮಗ್ರಸ್ತೋ ಭವಿಷ್ಯಸಿ ॥ ೫೨ ॥

ಲಜ್ಜಿತನಾಗಿ ಯೋಗಶಕ್ತಿಯಿಂದ ತನ್ನ ದೇಹತ್ಯಾಗಮಾಡಿದನು. ಬ್ರಹ್ಮನು ಆ ಶರೀರವನ್ನು ಕ್ಷೀರಸಮುದ್ರದಲ್ಲಿ ತ್ಯಜಿಸಿದನು. ಆಗ ಅತ್ರಿಮಹರ್ಷಿಯು ಕರುಣೆಯಿಂದ ಕ್ಷೀರಸಮುದ್ರದ ತೀರದಲ್ಲಿ ಅಳಲಾರಂಭಿಸಿದನು.

೫೦. ಎಲೈ ನಂದನೇ, ಆ ಅತ್ರಿಮಹರ್ಷಿಯ ಕಣ್ಣೀರು ನೀರಿನೊಳಗೆ ಬಿದ್ದಿತು. ಆದರಿಂದ ಚಂದ್ರನು ಪುನಃ ಉದ್ಭವಿಸಿ ಪಾಪರಹಿತನಾಗಿ ದೇವತೆಗಳ ಸಭೆಗೆ ಬಂದನು.

೫೧. ಬ್ರಹ್ಮನೂ ಭಗವಂತನಾದ ಶಂಭುವೂ ಸಹ ಚಂದ್ರನಿಗೆ ಅವನ ಸ್ಥಾನದಲ್ಲಿ ಅಭಿಷೇಕಮಾಡಿದರು. ದೇವತೆಗಳ ಸಭೆಯಲ್ಲಿ ನಿರ್ಭಯದಿಂದ ಕುಳಿತಿದ್ದ ಆ ಚಂದ್ರನಿಗೆ ಮಹಾದೇವನು ಇಂತೆಂದನು.

೫೨. ಮಹಾದೇವ:—ಪುತ್ರ ಸದೃಶನಾದ ಎಲೈ ಚಂದ್ರನೇ, ಈಗ ನಿನ್ನ ಸ್ಥಾನಕ್ಕೆ ನೀನು ಹಿಂತಿರುಗು. ಅಲ್ಲಿ ನಿನ್ನ ಇಚ್ಛೆಯಂತೆ ವಿಷಯಸುಖವನ್ನು ಅನುಭವಿಸು. ಅನಂತರ ರೋಹಿಣಿಯ ಶಾಪದಿಂದ ನೀನು ಕ್ಷಯರೋಗಗ್ರಸ್ತನಾಗುವೆ.

ವ್ಯರ್ಥಂ ಪತಿವ್ರತಾಶಾಪಂ ಕರ್ತುಮೀಶಶ್ಚ ಕೋ ಭುವಿ ।
ಮದಾಶಿಷಾ ಯಕ್ಷ್ಮಣಶ್ಚ ಪ್ರತೀಕಾರೋ ಭವಿಷ್ಯತಿ ॥ ೫೩ ॥

ಯಸ್ಮಾದ್ಭಾದ್ರಚತುರ್ಥ್ಯಾಂ ತು ಗುರುಪತ್ನೀಕ್ಷತಿಃ ಕೃತಾ ।
ತಸ್ಮಾತ್ತಸ್ಮಿನ್ ದಿನೇ ವತ್ಸ ಪಾಪದೃಶ್ಯೋ ಯುಗೇ ಯುಗೇ ॥ ೫೪ ॥

ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ ।
ಅವಶ್ಯಮೇವ ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ ॥ ೫೫ ॥

ದೇಹತ್ಯಾಗೇನ ಹೇ ವತ್ಸ ಕರ್ಮಭೋಗೋ ನ ನಶ್ಯತಿ ।
ಪ್ರಾಯಶ್ಚಿತ್ತಾನ್ನಸಂದೇಹೋ ಹ್ಯಸ್ತಮೇವ ಭವಿಷ್ಯತಿ ॥ ೫೬ ॥

ತಾರಾಪಹರಣಾದ್ವತ್ಸ ಕಲಂಕಶ್ಚಂದ್ರಮಂಡಲೇ ।
ಮೃಗಾಕೃತಿರ್ವಿಲಗ್ನಶ್ಚ ಭವಿಷ್ಯತಿ ಯುಗೇ ಯುಗೇ ॥ ೫೭ ॥

---

೫೩. ಪತಿವ್ರತೆಯರ ಶಾಪವನ್ನು ಭೂಮಿಯಲ್ಲಿ ವ್ಯರ್ಥವಾಡಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ನನ್ನ ಆಶೀರ್ವಾದದಿಂದ ನಿನ್ನ ಕ್ಷಯರೋಗಕ್ಕೆ ಪ್ರತೀಕಾರ ಮಾಡಲು ಸಾಧ್ಯವಾಗುವುದು.

೫೪. ಎಲೈ ವತ್ಸನೇ ನೀನು ಭಾದ್ರಪದಮಾಸದ ಚತುರ್ಥಿಯ ದಿವಸ ಗುರು ಪತ್ನಿಯ ಮಾನಭಂಗ ಮಾಡಿದುದರಿಂದ ಪ್ರತಿವರ್ಷವೂ ಆ ದಿವಸ ಜನರು ನಿನ್ನನ್ನು ನೋಡುವುದರಿಂದ ಪಾಪಭಾಗಿಗಳಾಗುವರು.

೫೫. ಜನ್ಮಾಂತರದಲ್ಲಿ ಮಾಡಿದ ಕರ್ಮದ ಫಲವನ್ನು ಅನುಭವಿಸಿಯೇ ತೀರಬೇಕು. ಹಾಗೆ ಅನುಭವಿಸಿದರೆ ಕೋಟಿಕಲ್ಪಗಳಾದರೂ ಕರ್ಮಕ್ಷಯವುಂಟಾಗುವುದಿಲ್ಲ.

೫೬. ಎಲೈ ವತ್ಸನೇ, ದೇಹತ್ಯಾಗ ಮಾಡುವುದರಿಂದ ಜನ್ಮಾಂತರ ಕರ್ಮದ ಫಲಭೋಗವು ತಪ್ಪುವುದಿಲ್ಲ. ಆದರೆ ಪ್ರಾಯಶ್ಚಿತ್ತ ಮಾಡಿಕೊಳ್ಳುವುದರಿಂದ ಕರ್ಮ ಫಲವು ನಾಶವಾಗುವುದರಲ್ಲಿ ಸಂಶಯವಿಲ್ಲ.

೫೭. ಎಲೈ ವತ್ಸನಾದ ಚಂದ್ರನೇ, ನೀನು ತಾರಾಪಹರಣ ಮಾಡಿದುದರಿಂದ ಚಂದ್ರಮಂಡಲದಲ್ಲಿ ಮೃಗಾಕಾರವುಳ್ಳ ಕಳಂಕವು ಪ್ರತಿಯುಗದಲ್ಲಿ ಅಂಟಿಕೊಂಡಿರುವುದು.

ಶೃಣು ವಾಕ್ಯಮಿಹಾಗಚ್ಛ ತಾರಕೇ ಚ ಪತಿವ್ರತೇ ।
ಸತ್ಯಂ ಬ್ರೂಹಿ ಕಸ್ಯ ಗರ್ಭಂ ತ್ಯಕ್ತ್ವಾ ಶುದ್ಧಾ ಭವ ಪ್ರಿಯೇ ॥ ೫೮ ॥

ಅಕಾಮತೋ ಬಲಾತ್ಸಾಧ್ವೀ ನ ಸ್ತ್ರೀ ಜಾರೇಣ ದುಷ್ಯತಿ ।
ಕಾಮತೋ ನರಕಂ ಯಾತಿ ಯಾವಚ್ಚಂದ್ರ ದಿವಾಕರೌ ॥ ೫೯ ॥

ಉವಾಚ ತಾರಾ ಬ್ರಹ್ಮಾಣಂ ಗರ್ಭಂ ಚಂದ್ರಸ್ಯ ಸಸ್ಮಿತಂ ।
ಜಹಸುರ್ದೇವತಾಃ ಸರ್ವಾಃ ಶಂಭುಶ್ಚ ಮುನಿಸಂಘಕಾಃ ॥ ೬೦ ॥

ದದೌ ತಾರಾಂ ಚ ಗುರವೇ ಲಜ್ಜಿತಾಯ ವ್ರಜೇಶ್ವರ ।
ಬೃಹಸ್ಪತಿರ್ಯಯೌ ಗೇಹಂ ಗೃಹೀತ್ವಾ ಚ ಪತಿವ್ರತಾಂ ॥ ೬೧ ॥

ತಯಾ ಪ್ರಸೂತಂ ಪುತ್ರಂ ಚ ಸುಂದರಂ ಕನಕಪ್ರಭಂ ।
ಗೃಹೀತ್ವಾ ಪ್ರಯಯೌ ಚಂದ್ರೋ ನಮಸ್ಕೃತ್ಯ ವಿಧಿಂ ಶಿವಂ ॥ ೬೨ ॥

---

೫೮. ಎಲೌ ಪತಿವ್ರತೆಯಾದ ತಾರೆಯೇ, ಇಲ್ಲಿ ಬಾ. ನಾನು ಹೇಳುವ ಮಾತನ್ನು ಕೇಳು. ನೀನು ಯಾರಿಂದ ಗರ್ಭಿಣಿಯಾಗಿರುವೆ ಎಂಬುದನ್ನು ಸತ್ಯವಾಗಿಹೇಳು ಆ ಗರ್ಭವನ್ನು ತ್ಯಾಗಮಾಡುವುದರಿಂದ ನೀನು ಶುದ್ಧಳಾಗುವೆ.

೫೯. ಸ್ವಂತ ಇಚ್ಛೆಯಿಲ್ಲದೆ ಬಲಾತ್ಕಾರಕ್ಕೊಳಗಾಗಿ ಪರಪುರುಷನಿಂದ ಉಪಭುಕ್ತಳಾದ ಸ್ತ್ರೀಯು ಜಾರದೋಷಕ್ಕೊಳಗಾಗುವುದಿಲ್ಲ. ಸ್ವೇಚ್ಛೆಯಿಂದ ಪರಪುರುಷ ಸಂಗಮಮಾಡಿದರೆ ಚಂದ್ರಸೂರ್ಯರಿರುವವರೆಗೆ ನರಕಕ್ಕೆ ಹೋಗುವಳು.

೬೦. ಆಗ ತಾರಾದೇವಿಯು ಲಜ್ಜೆಯಿಂದ ನಗುತ್ತ ಬ್ರಹ್ಮನನ್ನು ಕುರಿತು ಗರ್ಭವು ಚಂದ್ರನದೆಂದು ಹೇಳಿದಳು. ಅದನ್ನು ಕೇಳಿ ದೇವತೆಗಳೂ ಮುನಿಗಳೂ ಶಂಭುವೂ ಸಹ ನಕ್ಕರು.

೬೧. ಎಲೈ ವಜ್ರನಾಥನೇ, ಶಂಕರನು ತಾರೆಯನ್ನು ಲಜ್ಜೆಗೊಂಡ ಬೃಹಸ್ಪತಿಗೆ ಒಪ್ಪಿಸಿದನು. ಆ ಪತಿವ್ರತೆಯನ್ನು ಸ್ವೀಕರಿಸಿ ಬೃಹಸ್ಪತಿಯು ತನ್ನ ಮಂದಿರಕ್ಕೆ ಹಿಂತಿರುಗಿದನು.

೬೨ ಆ ತಾರೆಯು ಪ್ರಸುವಿಸಿದ ಚಿನ್ನದಂತೆ ಹೊಳೆಯುವ ಸುಂದರ ಪುತ್ರನನ್ನು ಸ್ವೀಕರಿಸಿ ಚಂದ್ರನು ಬ್ರಹ್ಮನಿಗೂ ಶಂಕರನಿಗೂ ನಮಸ್ಕಾರಮಾಡಿ ತನ್ನ ಮಂದಿರಕ್ಕೆ ಹಿಂತಿರುಗಿದನು.

ಯಯುರ್ದೇವಾಶ್ಚ ಮುನಯಃ ಶಂಭುಶ್ಚ ಕಮಲೋದ್ಭವಃ ।
ಪ್ರಯಯೌ ಸ್ವಗೃಹಂ ಶುಕ್ರೋ ದೈತ್ಯಯುಕ್ತೋ ಮುದಾನ್ವಿತಃ ॥ ೬೩ ॥

ಏತತ್ತೇ ಕಥಿತಂ ನಂದ ಹ್ಯಾಖ್ಯಾನಂ ಪುಣ್ಯದಂ ಶುಭಂ ।
ಏತಚ್ಛ್ರುತ್ವಾ ತು ನಿಷ್ಪಾಪೋ ನಿಷ್ಕಲಂಕೀ ನರೋ ಭವೇತ್ ॥ ೬೪ ॥

ಧನ್ಯಂ ಯಶಸ್ಯಮಾಯುಷ್ಯಂ ಸರ್ವಸಂಪತ್ಕರಂ ಪರಂ ।
ಶೋಕಾಪನೋದನಂ ಹರ್ಷಕರಂ ಸರ್ವತ್ರ ಮಂಗಲಂ ॥ ೬೫ ॥

ತ್ಯಜ ಶೋಕಂ ಸದಾ ನಂದ ಗೃಹಂ ವ್ರಜ ವ್ರಜೇಶ್ವರ ।
ಬ್ರೂಹಿ ಸರ್ವಂ ಯಶೋದಾಂ ಚ ಮತ್ಪ್ರಸೂಂ ಗೋಪಿಕಾಗಣಂ ॥ ೬೬ ॥

---

೬೩. ಅನಂತರ ದೇವತೆಗಳೂ, ಮುನಿಗಳೂ, ಶಂಕರನೂ ಮತ್ತು ಬ್ರಹ್ಮನೂ ಸಹ ತಮ್ಮ ತಮ್ಮ ಮಂದಿರಕ್ಕೆ ತೆರಳಿದರು. ಶುಕ್ರಾಚಾರ್ಯನೂ ಕೂಡ ಸಂತೋಷ ದಿಂದ ದೈತ್ಯರೊಡನೆ ತನ್ನ ಮಂದಿರಕ್ಕೆ ಹೊರಟನು.

೬೪. ಎಲೈ ನಂದನೇ, ಪುಣ್ಯಕರವೂ ಶುಭಕರವೂ ಆದ ಈ ಕಥೆಯನ್ನು ನಿನಗೆ ಹೇಳಿದ್ದೇನೆ. ಈ ಕಥೆಯನ್ನು ಕೇಳಿದ ಮನುಷ್ಯನು ಪಾಪರಹಿತನೂ ಕಳಂಕ ರಹಿತನೂ ಆಗುವುದರಲ್ಲಿ ಸಂಶಯವಿಲ್ಲ.

೬೫. ಈ ಕಥೆಯನ್ನು ಕೇಳಿದವರು ಧನ್ಯರೂ, ಯಶಸ್ವಿಗಳೂ, ದೀರ್ಘಾಯು ಷ್ಯವಂತರೂ, ಸಂಪತ್ಸಮನ್ವಿತರೂ, ಶೋಕರಹಿತರೂ, ಹರ್ಷಸಂಪನ್ನರೂ ಆಗಿ ಸರ್ವದಾ ಮಂಗಳವನ್ನು ಅನುಭವಿಸುತ್ತಾರೆ.

೬೬. ಎಲೈ ವ್ರಜೇಶ್ವರನಾದ ನಂದನೇ, ಶೋಕವನ್ನು ಬಿಟ್ಟು ಗೋಕುಲಕ್ಕೆ ಹಿಂತಿರುಗು. ಈ ವಿಷಯವನ್ನೆಲ್ಲ ನನ್ನ ಮಾತೆಯಾದ ಯಶೋದೆಗೂ ಇತರ ಗೋಪಿಕಾಸ್ತ್ರೀಯರಿಗೂ ತಿಳಿಸು.

ಬೋಧಯಿಷ್ಯಸಿ ಸರ್ವಾಂ ತಾಂ ಸ್ತ್ರೀಜಾತಿಂ ಶೋಕಸಂಯುತಾಂ ।
ಮದೀಯಜ್ಞಾನದತ್ತೇನ ಹರ್ಷಯುಕ್ತಃ ಸದಾ ಭವ ॥ ೬೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣನಾರದಸಂವಾದೇ
ತಾರಾಹರಣಂ ನಾಮ
ಏಕಾಶೀತಿತಮೋಽಧ್ಯಾಯಃ

---

೬೭. ಶೋಕಾಕುಲರಾದ ಸಕಲಗೋಪಿಕಾಸ್ತ್ರೀಯರಿಗೂ ವಿಶೇಷ ತಿಳುವಳಿಕೆಯನ್ನು ಬೋಧಿಸಿ ನಾನು ಬೋಧಿಸಿದ ದಿವ್ಯಜ್ಞಾನದಿಂದ ನೀನು ಸರ್ವದಾ ಹರ್ಷಸಂಪನ್ನನಾಗಿರು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದ ಉತ್ತರಾರ್ಧದ ನಾರಾಯಣ ನಾರದ ಸಂವಾದದಲ್ಲಿ ತಾರಾಹರಣವೆಂಬ ಎಂಭತ್ತೊಂದನೆಯ ಅಧ್ಯಾಯವು ಮುಗಿದುದು.

ಎಂಭತ್ತೊಂದನೆಯ ಅಧ್ಯಾಯದ ಸಾರಾಂಶ

ಆ ಸಮಯಕ್ಕೆ ಸರಿಯಾಗಿ ಅಸಂಖ್ಯಾತವಾದ ದೇವತೆಗಳ ಸೈನ್ಯವು ಯುದ್ಧೋಪಕರಣಗಳೊಡನೆ ಸಿದ್ಧವಾಗಿ ಅಲ್ಲಿಗೆ ಬಂದಿತು. ಅದನ್ನು ನೋಡಿ ಭೀತನಾದ ಚಂದ್ರನನ್ನು ಶುಕ್ರಾಚಾರ್ಯನು ಸಮಾಧಾನಗೊಳಿಸಿ ಅದಕ್ಕೆರಡರಷ್ಟು ದಾನವ ಸೈನ್ಯವನ್ನು ಕರೆಸಿದನು. ಆಗ ದೇವತೆಗಳ ಸೈನ್ಯದಲ್ಲಿದ್ದ ಶಂಕರ ಮತ್ತು ಬ್ರಹ್ಮ ಇವರಿಬ್ಬರೂ ಮುಂದಕ್ಕೆ ಬರಲು ಶುಕ್ರಾಚಾರ್ಯನು ಅವರಿಗೆ ನಮಸ್ಕಾರ ಮಾಡಿದನು. ಶಂಕರನು ಪಾಪಿಯಾದ ಚಂದ್ರನನ್ನು ಹಿಂದಕ್ಕೆ ಒಪ್ಪಿಸಬೇಕೆಂದೂ ಇಲ್ಲದಿದ್ದರೆ ದೈತ್ಯರನ್ನೆಲ್ಲ ನಾಶಮಾಡುವುದಾಗಿಯೂ ಶುಕ್ರಾಚಾರ್ಯನಿಗೆ ಹೇಳಿದನು ಚಂದ್ರನು ತನಗೆ ಶರಣಾಗತನಾಗಿರುವುದರಿಂದ ಅವನನ್ನು ರಕ್ಷಿಸುವುದು ತನ್ನ ಕರ್ತವ್ಯವೆಂದೂ ದಯವಿಟ್ಟು ಚಂದ್ರನ ತಪ್ಪನ್ನು ಮನ್ನಿಸಬೇಕೆಂದೂ ಶುಕ್ರಾಚಾರ್ಯನು ಶಂಕರನನ್ನು ಬೇಡಿದನು ಆಗ ಪ್ರಸನ್ನನಾದ ಶಂಕರನು ಚಂದ್ರನ ವಿಷಯದಲ್ಲಿ ಕ್ಷಮೆತೋರಿ ಯೋಗಶಕ್ತಿಯಿಂದ ಚಂದ್ರನನ್ನು ಎರಡುಭಾಗಮಾಡಿ ಒಂದರ್ಧವನ್ನು ತನ್ನ ತಲೆಯಮೇಲೆ ಧರಿಸಿ ಉಳಿದರ್ಧವನ್ನು ಬ್ರಹ್ಮನಿಗೆ ಕೊಟ್ಟನು. ಆಗ ಅಪಮಾನಿತನಾಗಿ ಆ ಲಜ್ಜೆಗೊಂಡ ಚಂದ್ರನುಯೋಗಶಕ್ತಿಯಿಂದ ದೇಹತ್ಯಾಗಮಾಡಲು ಬ್ರಹ್ಮನು ದೇಹವನ್ನು ಕ್ಷೀರಸಮುದ್ರದಲ್ಲಿ ಎಸೆದನು. ಅತ್ರಿಯು ಕ್ಷೀರಸಮುದ್ರದಲ್ಲಿ ಕಣ್ಣೀರುಬಿಡಲು ಅದು ಕಣ್ಣೀರಿನಿಂದ ಚಂದ್ರನು ಪುನಃ ಉದ್ಭವಿಸಿ ಶಂಕರ ಮತ್ತು ಬ್ರಹ್ಮರ ಆಶೀರ್ವಾದ ಪಡೆದು ನಿಂತುಕೊಂಡನು. ಭಾದ್ರಪದ ಮಾಸದ ಚತುರ್ಥಿಯ ದಿವಸ ಚಂದ್ರನು ತಾರಾಪಹರಣಮಾಡಿದುದರಿಂದ ಆ ದಿವಸ ಚಂದ್ರನ ದರ್ಶನವುನಿಷಿದ್ಧವಾಯಿತು. ಅನಂತರ ಶಂಕರನು ತಾರಾದೇವಿಯನ್ನು ತನ್ನಸಮೀಪಕ್ಕೆ ಕರೆದು, ಚಂದ್ರನ ಬಲಾತ್ಕಾರಕ್ಕೊಳಗಾಗಿ ಉಪಭುಕ್ತಳಾದರೂ ಅವಳು ನಿಷ್ಕಾಮಳಾದುದರಿಂದ ದೋಷರಹಿತಳೆಂದು ಬೃಹಸ್ಪತಿಗೆ ತಿಳಿಸಿ ಅವಳನ್ನು ಸ್ವೀಕರಿಸಲು ಅನುಮತಿಯಿತ್ತನು. ತಾರೆಯು ಚಂದ್ರನಿಂದ ತನಗುಂಟಾಗಿದ್ದ ಗರ್ಭವನ್ನು ಪ್ರಸವಿಸಿ ತನ್ನ ಪತಿಯೊಡನೆ ತೆರಳಿದಳು. ಚಂದ್ರನು ತೇಜೋಮಯವಾದ ಆ ಶಿಶುವನ್ನು ಎತ್ತಿಕೊಂಡು ತನ್ನ ಮಂದಿರಕ್ಕೆ ತೆರಳಿದನು. ಅನಂತರ ಬ್ರಹ್ಮಾದಿ ದೇವತೆಗಳೆಲ್ಲರೂ ತಮ್ಮ ತಮ್ಮ ಸ್ಥಾನಕ್ಕೆ ಹಿಂತಿರುಗಿದರು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ದ್ವ್ಯಶೀತಿತಮೋಽಧ್ಯಾಯಃ ॥

॥ ನಂದ ಉವಾಚ ॥

ಶ್ರುತಂ ಸರ್ವಂ ಮಹಾಭಾಗ ದುಃಸ್ವಪ್ನಂ ಕಥಯ ಪ್ರಭೋ ।
ಉವಾಚ ತಂ ವೈ ಭಗವಾಞ್ಶ್ರೂಯತಾಮಿತಿ ತದ್ವಚಃ ॥ ೧ ॥

॥ ಶ್ರೀ ಭಗವಾನುವಾಚ ॥

ಸ್ವಪ್ನೇ ಹಸತಿ ಯೋ ಹರ್ಷಾದ್ವಿವಾಹಂ ಯದಿ ಪಶ್ಯತಿ ।
ನರ್ತನಂ ಗೀತಮಿಷ್ಟಂ ಚ ವಿಪತ್ತಿಸ್ತಸ್ಯ ನಿಶ್ಚಿತಂ ॥ ೨ ॥

ದಂತಾ ಯಸ್ಯ ವಿಪೀಡ್ಯಂತೇ ವಿಚರಂತಂ ಚ ಪಶ್ಯತಿ ।
ಧನಹಾನಿರ್ಭವೇತ್ತಸ್ಯ ಪೀಡಾ ಚಾಪಿ ಶರೀರಜಾ ॥ ೩ ॥

ಎಂಭತ್ತೆರಡನೆಯ ಅಧ್ಯಾಯ

೧. ನಂದಗೋಪ :—ಎಲೈ ಮಹಾಭಾಗ್ಯಶಾಲಿಯಾದ ಕೃಷ್ಣನೇ, ಎಲ್ಲ ವಿಷಯವನ್ನೂ ಕೇಳಿ ತಿಳಿದುದಾಯಿತು. ಈಗ ದುಃಸ್ವಪ್ನದ ಸಮಾಚಾರವನ್ನು ಹೇಳು. ಈ ಮಾತನ್ನು ಕೇಳಿ ಭಗವಂತನಾದ ಶ್ರೀ ಕೃಷ್ಣನು ಹೇಳಲಾರಂಭಿಸಿದನು.

೨. ಶ್ರೀ ಭಗವಾನ್ :—ಯಾವ ಮನುಷ್ಯನು ಕನಸಿನಲ್ಲಿ ನಗುವನೋ, ಮದುವೆಯನ್ನು ನೋಡುವನೋ, ಗೀತಾವಾದ್ಯಗಳನ್ನು ಕೇಳುವನೋ ಮತ್ತು ನರ್ತನವನ್ನು ನೋಡುವನೋ ಅವನಿಗೆ ವಿಪತ್ತುಂಟಾಗುವುದು ನಿಶ್ಚಯ.

೩. ಕನಸಿನಲ್ಲಿ ಯಾವನ ಹಲ್ಲುಗಳನ್ನು ಉಜ್ಜಿದಂತಾಗುವುದೋ, ಏನೋ ಅಗಿಯುವಂತೆ ಯಾರಿಗೆ ಅನುಭವವಾಗುವುದೋ ಅವನಿಗೆ ಧನಹಾನಿಯಾಗುವುದಲ್ಲದೆ ಶಾರೀರಕಪೀಡೆಯೂ ಉಂಟಾಗುವುದು.

ಅಭ್ಯಂಗಿತಸ್ತು ತೈಲೇನ ಯೋ ಗಚ್ಛೇದ್ದಕ್ಷಿಣಾಂ ದಿಶಂ ।
ಖರೋಷ್ಟ್ರಮಹಿಷಾರೂಢೋ ಮೃತ್ಯುಸ್ತಸ್ಯ ನ ಸಂಶಯಃ ॥ ೪ ॥

ಸ್ವಪ್ನೇ ಕರ್ಣೇ ಜಪಾಪುಷ್ಪಮಶೋಕಂ ಕರವೀರಕಂ ।
ವಿಪತ್ತಿಸ್ತಸ್ಯ ತೈಲಂ ಚ ಲವಣಂ ಯದಿ ಪಶ್ಯತಿ ॥ ೫ ॥

ನಗ್ನಾಂ ಕೃಷ್ಣಾಂ ಛಿನ್ನನಾಸಾಂ ಶೂದ್ರಸ್ಯ ವಿಧವಾಂ ತಥಾ ।
ಕಪರ್ದಕಂ ತಾಲಫಲಂ ದೃಷ್ಟ್ವಾ ಶೋಕಮವಾಪ್ನುಯಾತ್ ॥ ೬ ॥

ಸ್ವಪ್ನೇ ರುಷ್ಟಂ ಬ್ರಾಹ್ಮಣಂ ಚ ಬ್ರಾಹ್ಮಣೀಂ ಕೋಪಸಂಯುತಾಂ ।
ವಿಪತ್ತಿಶ್ಚ ಭವೇತ್ತಸ್ಯ ಲಕ್ಷ್ಮೀರ್ಯಾತಿ ಗೃಹಾದ್ಧ್ರುವಂ ॥ ೭ ॥

ವನಪುಷ್ಪಂ ರಕ್ತಪುಷ್ಪಂ ಪಲಾಶಂ ಚ ಸುಪುಷ್ಪಿತಂ ।
ಕಾರ್ಪಾಸಂ ಶುಕ್ಲವಸ್ತ್ರಂ ಚ ದೃಷ್ಟ್ವಾ ದುಃಖಮವಾಪ್ನುಯಾತ್ ॥ ೮ ॥

---

೪. ಕನಸಿನಲ್ಲಿ ಅಂಗಾಂಗಗಳಿಗೆ ತೈಲವನ್ನು ಲೇಪಿಸಿಕೊಂಡು ಕತ್ತೆ, ಒಂಟೆ ಅಥವಾ ಕೋಣವನ್ನೇರಿ ಯಾವನು ದಕ್ಷಿಣದಿಕ್ಕಿಗೆ ತೆರಳುವನೋ ಅವನಿಗೆ ಮೃತ್ಯು ಸಂಭವಿಸುವುದರಲ್ಲಿ ಸಂಶಯವಿಲ್ಲ

೫. ಕನಸಿನಲ್ಲಿ ಯಾವನು ಕಿವಿಯಮೇಲೆ ಕೆಂಪುದಾಸವಾಳದ ಹೂವನ್ನೂ ಅಶೋಕಪುಷ್ಪವನ್ನೂ ಕರವೀರಪುಷ್ಪವನ್ನೂ ಧರಿಸುವನೋ, ಹಾಗೆಯೇ ಎಣ್ಣೆ ಮತ್ತು ಉಪ್ಪನ್ನೂ ಕನಸಿನಲ್ಲಿ ಕಾಣುವನೋ ಅವನಿಗೆ ವಿಪತ್ತುಂಟಾಗುವುದು.

೬. ಬೆತ್ತಲೆಯಾದ ಹೆಂಗಸನ್ನೂ, ಕಪ್ಪಾದವಳನ್ನೂ, ಮೂಗುಕತ್ತರಿಸಿದವಳನ್ನೂ, ಶೂದ್ರಸ್ತ್ರೀಯನ್ನೂ, ವಿಧವೆಯನ್ನೂ, ಕವಡೆ ಮತ್ತು ತಾಳೆಯ ಫಲವನ್ನೂ ಕನಸಿನಲ್ಲಿ ಕಂಡವರು ಶೋಕಭಾಗಿಗಳಾಗುವರು.

೭. ಕನಸಿನಲ್ಲಿ ಕೋಪಗೊಂಡ ಬ್ರಾಹ್ಮಣನನ್ನೂ, ಕುಪಿತಳಾದ ಬ್ರಾಹ್ಮಣ ಸ್ತ್ರೀಯನ್ನೂ ನೋಡುವವರಿಗೆ ವಿಪತ್ತುಂಟಾಗುವುದಲ್ಲದೆ ಲಕ್ಷ್ಮಿಯು ಅವರ ಮನೆಯನ್ನು ಬಿಟ್ಟು ದೂರಹೋಗುವಳು.

೮. ಕಾಡಿನ ಕೆಂಪುಹೂಗಳನ್ನೂ, ಚೆನ್ನಾಗಿ ಹೂ ಬಿಟ್ಟಿರುವ ಮುತ್ತುಗದ ಮರವನ್ನೂ, ಬಿಳುಪಾದ ಹತ್ತಿಯ ಬಟ್ಟೆಯನ್ನೂ ಕನಸಿನಲ್ಲಿ ಕಂಡವನು ದುಃಖವನ್ನನುಭವಿಸುತ್ತಾನೆ.

ಗಾಯಂತೀಂ ಚ ಹಸಂತೀಂ ಚ ಕೃಷ್ಣಾಂಬರಧರಾಂ ಸ್ತ್ರಿಯಂ ।
ದೃಷ್ಟ್ವಾ ಕೃಷ್ಣಾಂ ಚ ವಿಧವಾಂ ನರೋ ಮೃತ್ಯುಮವಾಪ್ನುಯಾತ್ ॥ ೯ ॥

ದೇವತಾ ಯತ್ರ ನೃತ್ಯಂತಿ ಗಾಯಂತಿ ಚ ಹಸಂತಿ ಚ ।
ಆಸ್ಫೋಟಯಂತಿ ಧಾವಂತಿ ತಸ್ಯ ದೇಹೋ ಮರಿಷ್ಯತಿ ॥ ೧೦ ॥

ವಾಂತಂ ಮೂತ್ರಂ ಪುರೀಷಂ ಚ ವೈದ್ಯಂ ರೌಪ್ಯಂ ಸುವರ್ಣಕಂ ।
ಪ್ರತ್ಯಕ್ಷಮಥವಾ ಸ್ವಪ್ನೇ ಜೀವಿತಂ ದಶಮಾವಧಿ ॥ ೧೧ ॥

ಕೃಷ್ಣಾಂಬರಧರಾಂ ನಾರೀಂ ಕೃಷ್ಣಮಾಲ್ಯಾನುಲೇಪನಾಂ ।
ಉಪಗೂಹತಿ ಯಃ ಸ್ವಪ್ನೇ ತಸ್ಯ ಮೃತ್ಯುರ್ಭವಿಷ್ಯತಿ ॥ ೧೨ ॥

ಮೃತವತ್ಸಂ ಚ ಮುಂಡಂ ಚ ಮೃಗಸ್ಯ ಚ ನರಸ್ಯ ಚ ।
ಯಃ ಪ್ರಾಪ್ನೋತ್ಯಸ್ಥಿಮಾಲಾಂ ಚ ವಿಪತ್ತಿಸ್ತಸ್ಯ ನಿಶ್ಚಿತಂ ॥ ೧೩ ॥

---

೯. ಕನಸಿನಲ್ಲಿ ಹಾಡುತ್ತ ನಗುತ್ತಿರುವ ಕಪ್ಪಾದ ವಸ್ತ್ರವನ್ನುಟ್ಟಿರುವ ಹೆಂಗುಸನ್ನೂ, ಕಪ್ಪಾದ ವಿಧವೆಯನ್ನೂ ನೋಡಿದವನು ಮೃತ್ಯುಗ್ರಸ್ತನಾಗುವುದರಲ್ಲಿ ಸಂಶಯವಿಲ್ಲ.

೧೦. ಯಾರ ಕನಸಿನಲ್ಲಿ ದೇವತೆಗಳು ನರ್ತನಮಾಡುವರೋ, ಹಾಡುವರೋ ನಗುವರೋ, ಸಿಡಿಯುವರೋ ಮತ್ತು ಓಡುವರೋ ಅವನ ಶರೀರವು ಮೃತಿಹೊಂದುವುದು.

೧೧. ಅಧೋವಾತವನ್ನೂ ಮೂತ್ರಪುರೀಷಗಳನ್ನೂ, ವೈದ್ಯನನ್ನೂ, ಬೆಳ್ಳಿ ಮತ್ತು ಚಿನ್ನವನ್ನೂ, ಸ್ವಪ್ನದಲ್ಲಿ ಪ್ರತ್ಯಕ್ಷವಾಗಿ ಕಂಡರೆ ಅವನ ಜೀವಿತವು ಹತ್ತು ದಿವಸಗಳು ಮಾತ್ರವಿರುವುದು.

೧೨. ಕಪ್ಪಾದ ಸೀರೆಯನ್ನುಟ್ಟು ಕಪ್ಪುಹೂವಿನಮಾಲೆಯನ್ನು ಮುಡಿದು ಕಪ್ಪಾದ ಗಂಧವನ್ನು ಬಳಿದುಕೊಂಡಿರುವ ಹೆಂಗುಸನ್ನು ಸ್ವಪ್ನದಲ್ಲಿ ಆಲಂಗಿಸಿಕೊಳ್ಳುವವನು ಮೃತ್ಯುವಶನಾಗುವನು.

೧೩. ಸತ್ತ ಮಗುವನ್ನೂ, ಮೃಗದ ಅಥವಾ ಮನುಷ್ಯನ ಮುಂಡವನ್ನೂ, ಮೂಳೆಯ ಮಾಲೆಯನ್ನೂ, ಕನಸಿನಲ್ಲಿ ಕಂಡವನು ವಿಪತ್ತಿಗೊಳಗಾಗುವುದರಲ್ಲಿ ಸಂಶಯವಿಲ್ಲ.

ರಥಂ ಖರೋಷ್ಟ್ರಸಂಯುಕ್ತಮೇಕಾಕೀ ಯೋಽಧಿರೋಹಯೇತ್ ।
ತತ್ರಸ್ಥೋಽಪಿ ಚ ಜಾಗರ್ತಿ ಮೃತ್ಯುರೇವ ನ ಸಂಶಯಃ ॥ ೧೪ ॥

ಅಭ್ಯಂಗಿತಸ್ತು ಹವಿಷಾ ಕ್ಷೀರೇಣ ಮಧುನಾಽಪಿ ಚ ।
ತಕ್ರೇಣಾಽಪಿ ಗುಡೇನೈವ ಪೀಡಾ ತಸ್ಯ ವಿನಿಶ್ಚಿತಂ ॥ ೧೫ ॥

ರಕ್ತಾಂಬರಧರಾಂ ನಾರೀಂ ರಕ್ತಮಾಲ್ಯಾನುಲೇಪನಾಂ ।
ಉಪಗೂಹತಿ ಯಃ ಸ್ವಪ್ನೇ ತಸ್ಯ ವ್ಯಾಧಿರ್ವಿನಿಶ್ಚಿತಂ ॥ ೧೬ ॥

ಪತಿತಾನ್ನಖಕೇಶಾಂಶ್ಚ ನಿರ್ವಾಣಾಂಗಾರಮೇವ ಚ ।
ಭಸ್ಮಪೂರ್ಣಾಂ ಚಿತಾಂ ದೃಷ್ಟ್ವಾ ಲಭತೇ ಮೃತ್ಯುಮೇವ ಚ ॥ ೧೭ ॥

ಶ್ಮಶಾನಂ ಶುಷ್ಕಕಾಷ್ಠಂ ಚ ತೃಣಾನಿ ಲೋಹಮೇವ ಚ ।
ಶಮೀಂ ಚ ಕಿಂಚಿತ್ಕೃಷ್ಣಾಶ್ವಂ ದೃಷ್ಟ್ವಾ ದುಃಖಂ ಲಭೇದ್ಧ್ರುವಂ ॥ ೧೮ ॥

---

೧೪. ಕತ್ತೆ, ಒಂಟೆಗಳನ್ನು ಕಟ್ಟಿರುವ ರಥವನ್ನು ಯಾವನು ಏಕಾಕಿಯಾಗಿ ಕನಸಿನಲ್ಲಿ ಹತ್ತುವನೋ ಅಥವಾ ಅಲ್ಲಿ ಕುಳಿತಿರುವಂತೆಯೇ ಎಚ್ಚರಗೊಳ್ಳುವನೋ ಅವನಿಗೆ ಮೃತ್ಯುವುಂಟಾಗುವುದರಲ್ಲಿ ಸಂಶಯವಿಲ್ಲ.

೧೫. ಹವಿಷ್ಯಾನ್ನದಿಂದಾಗಲೀ, ಹಾಲಿನಿಂದಾಗಲೀ, ಜೇನುತುಪ್ಪದಿಂದಾಗಲೀ ಮಜ್ಜಿಗೆಯಿಂದಾಗಲೀ, ಬೆಲ್ಲದ ಪಾನಕದಿಂದಾಗಲೀ ಕನಸಿನಲ್ಲಿ ಅಭ್ಯಂಗ ಮಾಡಿಕೊಂಡವನು ನಿಶ್ಚಯವಾಗಿಯೂ ಪೀಡೆಗೊಳಗಾಗುವನು.

೧೬. ಕೆಂಪು ಸೀರೆಯನ್ನುಟ್ಟು ಕೆಂಪು ಹೂ ಮಾಲೆಯನ್ನು ಮುಡಿದು, ಕೆಂಪಾದ ಗಂಧವನ್ನು ಲೇಪಿಸಿಕೊಂಡಿರುವ ಹೆಂಗುಸನ್ನು ಯಾವನು ಕನಸಿನಲ್ಲಿ ಆಲಿಂಗಿಸಿ ಕೊಳ್ಳುವನೋ ಆವನು ವ್ಯಾಧಿಗ್ರಸ್ತನಾಗುವನು.

೧೭. ಕೆಳಗೆ ಬಿದ್ದಿರುವ ಉಗುರು ಮತ್ತು ಕೂದಲುಗಳನ್ನೂ, ಆರಿ ಹೋದ ಕೆಂಡವನ್ನೂ, ಬೂದಿ ತುಂಬಿದ ಚಿತೆಯನ್ನೂ ಕನಸಿನಲ್ಲಿ ಕಂಡವನು ಮೃತ್ಯುವಶನಾಗುವನು.

೧೮ ಶ್ಮಶಾನವನ್ನೂ, ಒಣಗಿದ ಕಟ್ಟಿಗೆಯನ್ನೂ, ಒಣ ಹುಲ್ಲು ಮತ್ತು ಲೋಹವನ್ನೂ, ಬನ್ನೀ ಮರವನ್ನೂ, ಸ್ವಲ್ಪ ಕಪ್ಪಾದ ಕುದುರೆಯನ್ನೂ, ಕನಸಿನಲ್ಲಿ ಕಂಡವನು ದುಃಖ ಭಾಗಿಯಾಗುವನು.

ಪಾದುಕಾಂ ಫಲಕಂ ರಕ್ತಂ ಪುಷ್ಪಮಾಲ್ಯಂ ಭಯಾನಕಂ ।
ಮಾಷಂ ಮಸೂರಂ ಮುದ್ಗಂ ವಾ ದೃಷ್ಟ್ವಾ ಸದ್ಯೋ ವ್ರಣಂ ಲಭೇತ್ ॥೧೯॥

ಕಟಕಂ ಸರಟಂ ಕಾಕಂ ಭಲ್ಲೂಕಂ ವಾನರಂ ಗವಂ ।
ಪೂಯಂ ಗಾತ್ರಮಲಂ ಸ್ವಪ್ನೇ ಕೇವಲಂ ವ್ಯಾಧಿಕಾರಣಂ ॥ ೨೦ ॥

ಭಗ್ನಭಾಂಡಂ ಕ್ಷತಂ ಶೂದ್ರಂ ಗಲತ್ಕುಷ್ಠಂ ಚ ರೋಗಿಣಂ ।
ರಕ್ತಾಂಬರಂ ಚ ಜಟಿಲಂ ಸೂಕರಂ ಮಹಿಷಂ ಖರಂ ॥ ೨೧ ॥

ಅಂಧಕಾರಂ ಮಹಾಘೋರಂ ಮೃತಂ ಜೀವಂ ಭಯಂಕರಂ ।
ದೃಷ್ಟ್ವಾ ಸ್ವಪ್ನೇ ಯೋನಿಲಿಂಗಂ ವಿಪತ್ತಿಂ ಲಭತೇ ಧ್ರುವಂ ॥ ೨೨ ॥

ಕುವೇಷರೂಪಂ ಮ್ಲೇಚ್ಛಂ ಚ ಯಮದೂತಂ ಭಯಂಕರಂ ।
ಪಾಶಹಸ್ತಂ ಪಾಶಶಸ್ತ್ರಂ ದೃಷ್ಟ್ವಾ ಮೃತ್ಯುಂ ಲಭೇನ್ನರಃ ॥ ೨೩ ॥

---

೧೯. ಪಾದುಕೆಯನ್ನೂ, ಹಲಗೆಯನ್ನೂ, ಕೆಂಪಾಗಿಯೂ ಭಯಂಕರವಾಗಿಯೂ ಇರುವ ಹೂಮಾಲೆಯನ್ನೂ ಉದ್ದು, ಕಾಡು ಕಡಲೆ, ಮತ್ತು ಹೆಸರನ್ನೂ ಕನಸಿನಲ್ಲಿ ಕಂಡವನು ವ್ರಣಬಾಧೆಗೊಳಗಾಗುವನು.

೨೦. ನಳ್ಳಿ, ಹೆಂಟೆಗೊದ್ದ, ಕಾಗೆ, ಕರಡಿ, ಕೋತಿ ಮುಂತಾದ ಪ್ರಾಣಿಗಳನ್ನೂ, ಕೀವು, ಬೆವರು ಮುಂತಾದವನ್ನೂ ಕನಸಿನಲ್ಲಿ ಕಂಡವನು ರೋಗ ಪೀಡಿತನಾಗುವನು.

೨೧–೨೨ ಒಡೆದು ಹೋದ ಮಡಕೆಯನ್ನೂ, ಗಾಯವನ್ನೂ, ಕುಷ್ಠರೋಗಿಯಾದ ಶೂದ್ರನನ್ನೂ, ಕೆಂಪು ವಸ್ತ್ರವನ್ನುಟ್ಟಿರುವ ಜಟಾಧಾರಿಯನ್ನೂ, ಹಂದಿ ಎಮ್ಮೆ, ಮತ್ತು ಕತ್ತೆಯನ್ನೂ, ಮಹಾ ಘೋರವಾದ ಅಂಧಕಾರವನ್ನೂ, ಭಯಂಕರವಾದ ಮೃತ ಜೀವವನ್ನೂ, ಯೋನಿ ಮತ್ತು ಲಿಂಗವನ್ನೂ, ಸಹ ಕನಸಿನಲ್ಲಿ ಕಂಡವನು ನಿಶ್ಚಯವಾಗಿಯೂ ವಿಪತ್ತಿಗೊಳಗಾಗುವನು

೨೩. ಕುತ್ಸಿತವಾದ ವೇಷ ರೂಪಗಳುಳ್ಳ ಮ್ಲೇಚ್ಛನನ್ನೂ, ಭಯಂಕರನಾದ ಯಮದೂತನನ್ನೂ, ಪಾಶಹಸ್ತನನ್ನೂ, ಪಾಶ ಮುಂತಾದ ಶಸ್ತ್ರಗಳನ್ನೂ ಕನಸಿನಲ್ಲಿ ಕಂಡ ಮನುಷ್ಯನು ಮೃತ್ಯುವನ್ನು ಹೊಂದುವನು.

ಬ್ರಾಹ್ಮಣೋ ಬ್ರಾಹ್ಮಣೀ ಬಾಲಾ ಬಾಲಕೋ ವಾ ಸುತಃ ಸುತಾ ।
ವಿಲಾಪಂ ಕುರುತೇ ಕೋಪಾದ್ದೃಷ್ಟ್ವಾ ದುಃಖಮವಾಪ್ನುಯಾತ್ ॥ ೨೪ ॥

ಕೃಷ್ಣಂ ಪುಷ್ಪಂ ಚ ತನ್ಮಾಲ್ಯಂ ಸಸ್ಯಂ ಶಸ್ತ್ರಾಸ್ತ್ರಧಾರಿಣಂ ।
ಮ್ಲೇಚ್ಛಾಂ ಚ ವಿಕೃತಾಕಾರಾಂ ದೃಷ್ಟ್ವಾ ಮೃತ್ಯುಂ ಲಭೇದ್ಧ್ರುವಂ ॥೨೫॥

ತ್ಯಕ್ತಪ್ರಾಣಂ ಮೃತಂ ದೃಷ್ಟ್ವಾ ಮೃತ್ಯುಂ ಚ ಲಭತೇ ಧ್ರುವಂ ।
ಮತ್ಸ್ಯಾದಿ ಧಾರಯೇದ್ಯೋ ಹಿ ತದ್ಭ್ರಾತುರ್ಮರಣಂ ಧ್ರುವಂ ॥ ೨೬ ॥

ವಾದ್ಯಂ ಚ ನರ್ತನಂ ಗೀತಂ ಗಾಯನಂ ರಕ್ತವಾಸಸಂ !
ಮೃದಂಗಂ ವಾದ್ಯಮಾನಂ ತಂ ದೃಷ್ಟ್ವಾ ದುಃಖಂ ಲಭೇದ್ಧ್ರುವಂ ॥ ೨೭ ॥

ಛಿನ್ನಂ ವಾಪಿ ಕಬಂಧಂ ವಾ ವಿಕೃತಂ ಮುಕ್ತಕೇಶಿನಂ ।
ಕ್ಷಿಪ್ರಂ ನೃತ್ಯಂ ಚ ಕುರ್ವಂತಂ ದೃಷ್ಟ್ವಾ ಮೃತ್ಯುಂ ಲಭೇನ್ನರಃ ॥ ೨೮ ॥

---

೨೪. ಬ್ರಾಹ್ಮಣನಾಗಲಿ, ಬ್ರಾಹ್ಮಣಿಯಾಗಲೀ, ಹುಡುಗಿಯಾಗಲೀ, ಹುಡುಗನಾಗಲೀ, ಮಗನಾಗಲೀ, ಮಗಳಾಗಲೀ ಕೋಪಮಾಡಿಕೊಂಡು ಅಳು ತ್ತಿರುವಂತೆ ಕನಸಿನಲ್ಲಿ ಕಂಡರೆ ದುಃಖಪ್ರಾಪ್ತಿಯಾಗುವುದು.

೨೫. ಕಪ್ಪಾದ ಹೂವನ್ನೂ, ಅದರ ಮಾಲೆಯನ್ನೂ, ಕಪ್ಪು ಸಸ್ಯವನ್ನೂ, ಶಸ್ತ್ರಾಧಾರಿಯನ್ನೂ, ವಿಕಾರರೂಪವುಳ್ಳ ಮ್ಲೇಚ್ಛಸ್ತ್ರೀಯನ್ನೂ ಕನಸಿನಲ್ಲಿ ಕಂಡ ವನು ಮೃತ್ಯುಗ್ರಸ್ತನಾಗುವನು.

೨೬. ಕನಸಿನಲ್ಲಿ ಪ್ರಾಣತ್ಯಾಗಮಾಡಿದವನನ್ನು ನೋಡಿದವನು ಮೃತ್ಯು ವಶನಾಗುವನು. ಮೀನು ಮುಂತಾದವುಗಳನ್ನು ಕನಸಿನಲ್ಲಿ ಹಿಡಿದುಕೊಂಡವನ ಸಹೋದರನಿಗೆ ಮರಣವುಂಟಾಗುವುದು ನಿಶ್ಚಯ.

೨೭. ವಾದ್ಯವನ್ನೂ, ನರ್ತನವನ್ನೂ, ಗಾನವನ್ನೂ, ಕೆಂಪುಬಟ್ಟೆಯನ್ನೂ ಮೃದಂಗದ ಧ್ವನಿಯನ್ನೂ ಕನಸಿನಲ್ಲಿ ಕೇಳಿ ಕಂಡವನು ದುಃಖಭಾಗಿಯಾಗುವುದ ರಲ್ಲಿ ಸಂಶಯವಿಲ್ಲ.

೨೮. ಕತ್ತರಿಸಲ್ಪಟ್ಟ ರುಂಡವನ್ನೂ, ವಿಕಾರಗೊಂಡು ಕೂದಲು ಕೆದರಿ ಕೊಂಡಿರುವವನನ್ನೂ, ಬೇಗಬೇಗ ನರ್ತನಮಾಡುತ್ತಿರುವವನನ್ನೂ ಕನಸಿನಲ್ಲಿ ಕಂಡವನು ಮೃತ್ಯುಗ್ರಸ್ತನಾಗುವನು

ಮೃತೋ ವಾಪಿ ಮೃತಾ ವಾಪಿ ಕೃಷ್ಣಸ್ಮ್ಲೇಚ್ಛಾ ಭಯಾನಕಾ |
ಉಪಗೂಹತಿ ಯಂ ಸ್ವಪ್ನೇ ತಸ್ಯ ಮೃತ್ಯುರ್ವಿನಿಶ್ಚಿತಂ || ೨೯ ||

ಯೇಷಾಂ ದಂತಾಶ್ಚ ಭಗ್ನಾಶ್ಚ ಕೇಶಾಶ್ಚಾಪಿ ಪತಂತಿ ಹಿ |
ಧನಹಾನಿರ್ಭವೇತ್ತಸ್ಯ ಪೀಡಾ ವಾ ತಚ್ಛರೀರಜಾ || ೩೦ ||

ಉಪದ್ರವಂತಿ ಯಂ ಸ್ವಪ್ನೇ ಶೃಂಗಿಣೋ ದಂಷ್ಟ್ರಿಣೋಽಪಿ ವಾ |
ಬಾಲಕಾ ಮಾನವಾಶ್ಚೈವ ತಸ್ಯ ರಾಜಕುಲಾದ್ಭಯಂ || ೩೧ ||

ಛಿನ್ನಂ ವೃಕ್ಷಂ ಪತಂತಂ ಚ ಶಿಲಾವೃಷ್ಟಿಂ ತುಷಂ ಕ್ಷುರಂ |
ರಕ್ತಾಂಗಾರಂ ಭಸ್ಮವೃಷ್ಟಿಂ ದೃಷ್ಟ್ವಾ ದುಃಖಮವಾಪ್ನುಯಾತ್ || ೩೨ ||

ಗೃಹಂ ಪತತಂ ಶೈಲಂ ವಾ ಧೂಮಕೇತುಂ ಭಯಾನಕಂ |
ಭಗ್ನಸ್ಕಂಧಂ ನರಂ ವಾಽಪಿ ದೃಷ್ಟ್ವಾ ದುಃಖಮವಾಪ್ನುಯಾತ್ || ೩೩ ||

---

೨೯. ಸತ್ತ ಮನುಷ್ಯನನ್ನಾಗಲೀ, ಸತ್ತ ಹೆಂಗಸನ್ನಾಗಲೀ, ಭಯಂಕರಳಾದ ಮುಕ್ತ ಕಪ್ಪಾದ ಮ್ಲೇಚ್ಛಸ್ತ್ರೀಯನ್ನಾಗಲೀ ಕನಸಿನಲ್ಲಿ ಆಲಂಗಿಸಿಕೊಂಡವನು ಮೃತ್ಯುವಶನಾಗುವುದು ನಿಶ್ಚಯ.

೩೦. ಕನಸಿನಲ್ಲಿ ಯಾರ ಹಲ್ಲುಗಳು ಉದುರಿಬೀಳುವುವೋ ತಲೆಗೂದಲುಗಳು ಉದುರಿಹೋಗುವುವೋ ಅವರಿಗೆ ಧನ ಹಾನಿಯುಂಟಾಗುವುದಲ್ಲದೆ ಶಾರೀರಿಕ ಪೀಡೆಯೂ ಉಂಟಾಗುವುದು.

೩೧. ಕನಸಿನಲ್ಲಿ ಕೊಂಬಿರುವ ಪ್ರಾಣಿಗಳು ಅಥವಾ ಕೋರೆ ಹಲ್ಲಿರುವ ಪ್ರಾಣಿಗಳು ಯಾರನ್ನು ಹಿಂಸಿಸುವುವೋ, ಬಾಲಕರಾಗಲೀ, ಮಾನವರಾಗಲೀ ಯಾರನ್ನು ಹಿಂಸಿಸುವರೋ, ಆ ಹಿಂಸೆಗೊಳಗಾದವನಿಗೆ ರಾಜಕುಲದಿಂದ ಭಯವುಂಟಾಗುವುದು.

೩೨. ಕತ್ತರಿಸಲ್ಪಟ್ಟು ಕೆಳಗೆ ಬೀಳುತ್ತಿರುವ ಮರವನ್ನೂ, ಕಲ್ಲಿನ ಮಳೆಯನ್ನೂ, ಹೊಟ್ಟನ್ನೂ, ಕ್ಷೌರದ ಕತ್ತಿಯನ್ನೂ, ಕೆಂಪಾದ ಕೆಂಡವನ್ನೂ, ಬೂದಿಯ ಮಳೆಯನ್ನೂ ಕನಸಿನಲ್ಲಿ ಕಂಡವರು ದುಃಖಭಾಗಿಗಳಾಗುವರು.

೩೩. ಕೆಳಕ್ಕೆ ಬೀಳುತ್ತಿರುವ ಮನೆ ಅಥವಾ ಬೆಟ್ಟವನ್ನೂ, ಭಯಂಕರವಾದ ಧೂಮಕೇತುವನ್ನೂ, ಹೆಗಲು ಮುರಿದ ಮನುಷ್ಯನನ್ನೂ ಕನಸಿನಲ್ಲಿ ಕಂಡವನು ದುಃಖಭಾಜನನಾಗುವನು.

ರಥಗೇಹಶೈಲವೃಕ್ಷ ಗೋಹಸ್ತಿತುರಗಾಂಬರಾತ್ ।
ಭೂಮೌ ಪತತಿ ಯಃ ಸ್ವಪ್ನೇ ವಿಪತ್ತಿಸ್ತಸ್ಯ ನಿಶ್ಚಿತಂ ॥ ೩೪ ॥

ಉಚ್ಚೈಃ ಪತಂತಿ ಗರ್ತೇಷು ಭಸ್ಮಾಂಗಾರಯುತೇಷು ಚ ।
ಕ್ಷಾರಕುಂಡೇಷು ಚೂರ್ಣೇಷು ಮೃತ್ಯುಸ್ತೇಷಾಂ ನ ಸಂಶಯಃ ॥ ೩೫ ॥

ಬಲಾದ್ಗೃಹ್ಣಾತಿ ದುಷ್ಟಶ್ಚ ಛತ್ರಂ ಚ ತಸ್ಯ ಮಸ್ತಕಾತ್ ।
ಪಿತುರ್ನಾಶೋ ಭವೇತ್ತಸ್ಯ ಗುರೋರ್ವಾಪಿ ನೃಪಸ್ಯ ವಾ ॥ ೩೬ ॥

ಸುರಭಿರ್ಯಸ್ಯ ಗೇಹಾಚ್ಚ ಯಾತಿ ತ್ರಸ್ತಾ ಸವತ್ಸಿಕಾ ।
ಪ್ರಯಾತಿ ಪಾಪಿನಸ್ತಸ್ಯ ಲಕ್ಷ್ಮೀರಪಿ ವಸುಂಧರಾ ॥ ೩೭ ॥

ಪಾಶೇನ ಕೃತ್ವಾ ಬದ್ಧಂ ಚ ಯಂ ಗೃಹೀತ್ವಾ ಪ್ರಯಾಂತಿ ಚ ।
ಯಮದೂತಾಶ್ಚ ಯೇ ಮ್ಲೇಚ್ಛಾಸ್ತಸ್ಯ ಮೃತ್ಯುರ್ವಿನಿಶ್ಚಿತಂ ॥ ೩೮ ॥

೩೪. ಯಾರು ಕನಸಿನಲ್ಲಿ ರಥದಿಂದಾಗಲೀ, ಮನೆಯ ಮೇಲಿಂದಾಗಲೀ ಬೆಟ್ಟ, ಮರ, ಗೋವು, ಆನೆ, ಕುದುರೆ, ಆಕಾಶ ಮುಂತಾದವುಗಳಿಂದಾಗಲೀ ನೆಲದ ಮೇಲಕ್ಕೆ ಬೀಳುವನೋ ಅವನಿಗೆ ವಿಪತ್ತುಂಟಾಗುವುದು ನಿಶ್ಚಯ.

೩೫. ಯಾರು ಕನಸಿನಲ್ಲಿ ಎತ್ತರವಾದ ಪ್ರದೇಶದಿಂದ ಬೂದಿ ಕೆಂಡ ಮುಂತಾದವುಗಳು ತುಂಬಿರುವ ಗುಂಡಿಗಳಲ್ಲಾಗಲೀ, ಕ್ಷಾರಕುಂಡಗಳಲ್ಲಾಗಲೀ, ಬೀಳುವರೋ ಅವರಿಗೆ ಮೃತ್ಯುವುಂಟಾಗುವುದರಲ್ಲಿ ಸಂಶಯವಿಲ್ಲ.

೩೬. ಯಾವನ ತಲೆಯ ಮೇಲಿರುವ ಛತ್ರಿಯನ್ನು ಕನಸಿನಲ್ಲಿ ದುಷ್ಟನು ಬಲಾತ್ಕಾರದಿಂದ ಕಿತ್ತುಕೊಳ್ಳುವನೋ ಆ ಛತ್ರರಹಿತನಿಗೆ ತಂದೆಯ ನಾಶವೋ, ಗುರುವಿನ ನಾಶವೋ, ನೃಪಹಾನಿಯೋ ಉಂಟಾಗುವುದು

೩೭. ಯಾವನ ಕನಸಿನಲ್ಲಿ ಅವರ ಮನೆಯಿಂದ ಕರುಸಹಿತವಾದ ಕಾಮಧೇನುವು ಹೆದರಿ ಹೊರಕ್ಕೆ ಹೊರಟು ಹೋಗುವುದೋ ಆ ಪಾಪಿಯ ಸಂಪತ್ತು ಮತ್ತು ಕ್ಷೇತ್ರಾದಿಗಳೂ ನಾಶವಾಗುವುವು.

೩೮. ಯಮದೂತರು ಅಥವಾ ಮ್ಲೇಚ್ಛರು ಯಾವನನ್ನು ಕನಸಿನಲ್ಲಿ ಹಿಡಿದುಕೊಂಡು ಪಾಶದಿಂದ ಬಂಧಿಸಿ ಎಳೆದುಕೊಂಡು ಹೋಗುವರೋ ಅವನಿಗೆ ಮೃತ್ಯುವುಂಟಾಗುವುದು ನಿಶ್ಚಯ.

ಗಣಕೋ ಬ್ರಾಹ್ಮಣೋ ವಾಪಿ ಬ್ರಾಹ್ಮಣೀ ವಾ ಗುರುಸ್ತಥಾ ।
ಪರಿರುಷ್ಟಃ ಶಪತಿ ಯಂ ವಿಪತ್ತಿಸ್ತಸ್ಯ ನಿಶ್ಚಿತಂ ॥ ೩೯ ॥

ವಿರೋಧಿನಶ್ಚ ಕಾಕಾಶ್ಚ ಕುಕ್ಕುಟಾ ಭಲ್ಲುಕಾಸ್ತಥಾ ।
ಪತಂತ್ಯಾಗತ್ಯ ಯದ್ಗಾತ್ರೇ ತಸ್ಯ ಮೃತ್ಯುರ್ನಸಂಶಯಃ ॥ ೪೦ ॥

ಮಹಿಷಾ ಭಲ್ಲುಕಾ ಉಷ್ಟ್ರಾಃ ಸೂಕರಾ ಗರ್ದಭಾಸ್ತಥಾ ।
ರುಷ್ಟ್ವಾ ಧಾವಂತಿ ಯಂ ಸ್ವಪ್ನೇ ಸ ರೋಗೀ ನಿಶ್ಚಿತಂ ಭವೇತ್ ॥ ೪೧ ॥

ರಕ್ತಚಂದನಕಾಷ್ಠಾನಿ ಘೃತಾಕ್ತಾನಿ ಜುಹೋತಿ ಯಃ ।
ಗಾಯತ್ರ್ಯಾಶ್ಚ ಸಹಸ್ರೇಣ ತೇನ ಶಾಂತಿರ್ವಿಧೀಯತೇ ॥ ೪೨ ॥

ಸಹಸ್ರಧಾ ಜಪೇದ್ಯೋ ಹಿ ಭಕ್ತ್ಯೈವ ಮಧುಸೂದನಂ ।
ನಿಷ್ಪಾಪೋ ಹಿ ಭವೇತ್ಸೋಽಪಿ ದುಃಸ್ವಪ್ನಃ ಸುಖವಾನ್ಭವೇತ್ ॥ ೪೩ ॥

---

೩೯. ಜ್ಯೋತಿಷಕನಾಗಲೀ, ಬ್ರಾಹ್ಮಣನಾಗಲೀ, ಬ್ರಾಹ್ಮಣಿಯಾಗಲೀ, ಗುರುವಾಗಲೀ ಕೋಪಗೊಂಡು ಯಾರನ್ನು ಕನಸಿನಲ್ಲಿ ಶಪಿಸುವರೋ ಅವರಿಗೆ ಮೃತ್ಯುವುಂಟಾಗುವುದು ನಿಶ್ಚಯ.

೪೦. ಕನಸಿನಲ್ಲಿ ಯಾವನ ಶರೀರದ ಮೇಲೆ ಶತ್ರುಗಳೂ ಕಾಗೆಗಳೂ ಕೋಳಿಗಳೂ ಮತ್ತು ಕರಡಿಗಳೂ ಬಂದು ಬೀಳುವುವೊ ಅವನಿಗೆ ಮೃತ್ಯುವುಂಟಾಗುವುದರಲ್ಲಿ ಸಂಶಯವಿಲ್ಲ.

೪೧. ಕೋಣಗಳೂ, ಕರಡಿಗಳೂ, ಒಂಟೆಗಳೂ, ಹಂದಿಗಳೂ ಮತ್ತು ಕತ್ತೆಗಳೂ ಸಹ ಕೋಪಗೊಂಡು ಯಾರಮೇಲೆ ಕನಸಿನಲ್ಲಿ ಬಂದು ಬೀಳುವುವೊ ಅವನು ನಿಶ್ಚಯವಾಗಿಯೂ ರೋಗಿಯಾಗುವನು.

೪೨. ಕನಸಿನಲ್ಲಿ ಕೆಂಪುಚಂದನಕಾಷ್ಠಗಳನ್ನು ತುಪ್ಪದಲ್ಲಿ ಅದ್ದಿ ಸಾವಿರ ಸಾರಿ ಗಾಯಿತ್ರೀ ಮಂತ್ರವನ್ನು ಜಪಿಸಿ ಹೋಮ ಮಾಡುವವನು ಶಾಂತಿಯನ್ನು ಹೊಂದುವನು.

೪೩. ಯಾವನು ಭಕ್ತಿಪೂರ್ವಕವಾಗಿ ಮಧುಸೂದನನನ್ನು ಸಾವಿರಬಾರಿ ಜಪಿಸುವನೋ ಅವನು ಪಾಪರಹಿತನಾಗುವನಲ್ಲದೆ ಅವನ ದುಃಸ್ವಪ್ನವು ಸುಖಕರವಾಗುವುದು.

ಅಚ್ಯುತಂ ಕೇಶವಂ ವಿಷ್ಣುಂ ಹರಿಂ ಸತ್ಯಂ ಜನಾರ್ದನಂ ।
ಹಂಸಂ ನಾರಾಯಣಂ ಚೈವ ಹ್ಯೇತನ್ನಾಮಾಷ್ಟಕಂ ಶುಭಂ || ೪೪ ||

ಶುಚಿಃ ಪೂರ್ವಮುಖಃ ಪ್ರಾಜ್ಞೋ ದಶಕೃತ್ವಶ್ಚ ಯೋ ಜಪೇತ್ ।
ನಿಷ್ಪಾಪೋಽಪಿ ಭವೇತ್ಸೋಽಪಿ ದುಃಸ್ವಪ್ನಃ ಶುಭವಾನ್ಭವೇತ್ || ೪೫ ||

ವಿಷ್ಣುಂ ನಾರಾಯಣಂ ಕೃಷ್ಣಂ ಮಾಧವಂ ಮಧುಸೂದನಂ ।
ಹರಿಂ ನರಹರಿಂ ರಾಮಂ ಗೋವಿಂದಂ ದಧಿವಾಮನಂ| || ೪೬ ||

ಭಕ್ತ್ಯಾ ಚೇಮಾನಿ ನಾಮಾನಿ ದಶ ಭದ್ರಾಣಿ ಯೋ ಜಪೇತ್ ।
ಶತಕೃತ್ವೋ ಭಕ್ತಿಯುತೋ ಜಪ್ತ್ವಾ ನೀರೋಗತಾಂ ವ್ರಜೇತ್ || ೪೭ ||

ಲಕ್ಷಧಾ ಹಿ ಜಪೇದ್ಯೋ ಹಿ ಬಂಧನಾನ್ಮುಚ್ಯತೇ ಧ್ರುವಂ ।
ಜಪ್ತ್ವಾ ಚ ದಶಲಕ್ಷಂ ಚ ಮಹಾವಂಧ್ಯಾ ಪ್ರಸೂಯತೇ || ೪೮ ||

ಹವಿಷ್ಯಾಶೀ ಯತಃ ಶುದ್ಧೋ ದರಿದ್ರೋ ಧನವಾನ್ಭವೇತ್ ।
ಶತಲಕ್ಷಂ ಚ ಜಪ್ತ್ವಾ ಚ ಜೀವನ್ಮುಕ್ತೋ ಭವೇನ್ನರಃ || ೪೯ ||

---

೪೪. ಅಚ್ಯುತ, ಕೇಶವ, ವಿಷ್ಣು, ಹರಿ, ಸತ್ಯ, ಜನಾರ್ದನ, ಹಂಸ ಮತ್ತು ನಾರಾಯಣನೆಂಬ ಈ ಎಂಟು ದಿವ್ಯನಾಮಗಳು ಶುಭಕರವಾದುವುಗಳು.

೪೫. ಪ್ರಾಜ್ಞನಾದವನು ಪೂರ್ವಾಭಿಮುಖವಾಗಿ ಕುಳಿತುಕೊಂಡು ಶುಚಿಯಾಗಿ ಹತ್ತು ಸಾರಿ ಈ ಅಷ್ಟದಿವ್ಯನಾಮಗಳನ್ನು ಜಪಿಸಿದರೆ ಪಾಪರಹಿತನಾಗುವನಲ್ಲದೆ ಅವನ ದುಃಸ್ವಪ್ನವು ಶುಭಕರವಾಗುವುದು.

೪೬–೪೭. ವಿಷ್ಣು, ನಾರಾಯಣ, ಕೃಷ್ಣ, ಮಾಧವ, ಮಧುಸೂಧನ, ಹರಿ, ನರಹರಿ, ರಾಮ, ಗೋವಿಂದ, ದಧಿವಾಮನ ಈ ಹತ್ತು ಮಂಗಳ ನಾಮಗಳನ್ನು ಭಕ್ತಿಪೂರ್ವಕವಾಗಿ ಯಾರು ನೂರು ಬಾರಿ ಜಪಿಸುವರೋ ಅವರು ರೋಗರಹಿತರಾಗುವುದರಲ್ಲಿ ಸಂಶಯುವಿಲ್ಲ.

೪೮. ಲಕ್ಷಬಾರಿ ಈ ನಾಮಗಳನ್ನು ಜಪಿಸುವನು ಬಂಧನದಿಂದ ಮುಕ್ತನಾಗುವನು. ಹತ್ತುಲಕ್ಷ ಬಾರಿ ಜಪಿಸಿದರೆ ಮಹಾಬಂಜೆಯೂ ಸಹ ಪ್ರಸುವಿಸುವಳು.

೪೯. ಹವಿಷ್ಯಾನ್ನವನ್ನು ತಿಂದುಕೊಂಡು ಶುದ್ಧನಾಗಿ ಈ ನಾಮಗಳನ್ನು ಜಪಿಸುವ ದರಿದ್ರನು ಧನವಂತನಾಗುವನು. ನೂರುಲಕ್ಷಬಾರಿ ಜಪಿಸುವ ಮನುಷ್ಯನು ಜೀವನ್ಮುಕ್ತನಾಗುವುದರಲ್ಲಿ ಸಂಶಯುವಿಲ್ಲ.

(ಓಂ ನಮಃ) ಶಿವಂ ದುರ್ಗಾಂ ಗಣಪತಿಂ ಕಾರ್ತಿಕೇಯಂ ದಿನೇಶ್ವರಂ ।
ಧರ್ಮಂ ಗಂಗಾಂ ಚ ತುಲಸೀಂ ರಾಧಾಂ ಲಕ್ಷ್ಮೀಂ ಸರಸ್ವತೀಂ ॥ ೩೦ ॥

ನಾಮಾನ್ಯೇತಾನಿ ಭದ್ರಾಣಿ ಜಲೇ ಸ್ನಾತ್ವಾ ಚ ಯೋ ಜಪೇತ್ ।
ವಾಂಛಿತಂ ಚ ಲಭೇತ್ಸೋಽಪಿ ದುಃಸ್ವಪ್ನಃ ಶುಭವಾನ್ಭವೇತ್ ॥ ೩೧ ॥

ಓಂ ಹ್ರೀಂ ಶ್ರೀಂ ಕ್ಲೀಂ ಪೂರ್ವದುರ್ಗತಿನಾಶಿನ್ಯೈ
ಮಹಾಮಾಯಾಯೈ ಸ್ವಾಹಾ ॥ ೩೨ ॥

ಕಲ್ಪವೃಕ್ಷೋ ಹಿ ಲೋಕಾನಾಂ ಮಂತ್ರಃ ಸಪ್ತದಶಾಕ್ಷರಃ ।
ಶುಚಿಶ್ಚ ದಶಧಾ ಜಪ್ತ್ವಾ ದುಃಸ್ವಪ್ನಃ ಸುಖವಾನ್ಭವೇತ್ ॥ ೩೩ ॥

ಶತಲಕ್ಷಜಪೇನೈವ ಮಂತ್ರಸಿದ್ಧಿರ್ಭವೇನ್ನೃಣಾಂ ।
ಸಿದ್ಧಮಂತ್ರಸ್ತು ಲಭತೇ ಸರ್ವಸಿದ್ಧಿಂ ಚ ವಾಂಛಿತಂ ॥ ೩೪ ॥

ಓಂ ನಮೋ ಮೃತ್ಯುಂಜಯಾಯೇತಿ ಸ್ವಾಹಾಂತಂ ಲಕ್ಷಧಾ ಜಪೇತ್ ।
ದೃಷ್ಟ್ವಾ ಚ ಮರಣಂ ಸ್ವಪ್ನೇ ಶತಾಯುಶ್ಚ ಭವೇನ್ನರಃ ॥ ೩೫ ॥

೩೦-೩೧. ಶಿವ, ದುರ್ಗೆ, ಗಣಪತಿ, ಕಾರ್ತಿಕೇಯ, ಸೂರ್ಯ, ಧರ್ಮದೇವ, ಗಂಗೆ, ತುಲಸಿ, ರಾಧೆ, ಲಕ್ಷ್ಮೀ, ಸರಸ್ವತೀದೇವಿಯರಿಗೆ ನಮಸ್ಕರಿಸಿ ನೀರಿನಲ್ಲಿ ಸ್ನಾನಮಾಡಿ ಈ ಮಂಗಳನಾಮಗಳನ್ನು ಯಾರು ಜಪಿಸುವರೋ ಅವರ ಇಷ್ಟಾರ್ಥವು ಲಭಿಸುವುದಲ್ಲದೆ ದುಃಸ್ವಪ್ನವು ಶುಭಕರವಾಗುವುದು.

೩೨-೩೩. ಓಂ ಹ್ರೀಂ ಶ್ರೀಂ ಕ್ಲೀಂ ಪೂರ್ವದುರ್ಗತಿನಾಶಿನ್ಯೈ ಮಹಾಮಾಯಾಯೈ ಸ್ವಾಹಾ' ಈ ಹದಿನೇಳಕ್ಷರದ ಮಂತ್ರವು ಜನರಿಗೆ ಕಲ್ಪವೃಕ್ಷದಂತಿರುವುದು. ಶುಚಿಯಾಗಿ ಹತ್ತುಸಾರಿ ಇವನ್ನು ಜಪಿಸುವವರ ದುಃಸ್ವಪ್ನವು ಸುಖಕರವಾಗುವುದು.

೩೪. ನೂರುಲಕ್ಷಸಾರಿ ಜಪಿಸುವುದರಿಂದ ಮನುಜರಿಗೆ ಮಂತ್ರಸಿದ್ಧಿಯುಂಟಾಗುವುದು. ಸಿದ್ಧಮಂತ್ರನಾದವನು ಬಯಸಿದ ಸರ್ವ ಸಿದ್ಧಿಯನ್ನೂ ಪಡೆಯುವುದರಲ್ಲಿ ಸಂಶಯವಿಲ್ಲ

೩೫. 'ಓಂ ನಮೋ ಮೃತ್ಯುಂಜಯಾಯ ಸ್ವಾಹಾ' ಎಂದು ಲಕ್ಷಸಾರಿ ಜಪಿಸುವವರು ಸ್ವಪ್ನದಲ್ಲಿ ಮರಣವನ್ನು ಕಂಡರೂ ನೂರುವರ್ಷ ಆಯುಸ್ಸನ್ನು ಹೊಂದುವರು.

ಪೂರ್ವೋತ್ತರಮುಖೋ ಭೂತ್ವಾ ಸ್ವಪ್ನಂ ಪ್ರಾಜ್ಞೇ ಪ್ರಕಾಶಯೇತ್ ।
ಕಾಶ್ಯಪೇ ದುರ್ಗತೇ ನೀಚೇ ದೇವಬ್ರಾಹ್ಮಣನಿಂದಕೇ ।
ಮೂರ್ಖೇ ಚೈವಾನಭಿಜ್ಞೇ ಚ ನ ಚ ಸ್ವಪ್ನಂ ಪ್ರಕಾಶಯೇತ್ ॥ ೫೬ ॥

ಅಶ್ವತ್ಥೇ ಗಣಕೇ ವಿಪ್ರೇ ಪಿತೃದೇವಾಸನೇಷು ಚ ।
ಆರ್ಯೇ ಚ ವೈಷ್ಣವೇ ಮಿತ್ರೇ ದಿವಾಸ್ವಪ್ನಂ ಪ್ರಕಾಶಯೇತ್ ॥ ೫೭ ॥

ಇತಿ ತೇ ಪುಣ್ಯಮಾಖ್ಯಾತಂ ಕಥಿತಂ ಪಾಪನಾಶನಂ ।
ಧನ್ಯಂ ಯಶಸ್ಯಮಾಯುಷ್ಯಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೫೮ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಉತ್ತರಾರ್ಧೇ ನಾರಾಯಣ ನಾರದಸಂವಾದೇ
ಭಗವನ್ನಂದಸಂವಾದೇ
ದ್ವ್ಯಶೀತಿತಮೋಽಧ್ಯಾಯಃ

---

೫೬. ಐಶಾನ್ಯಾಭಿಮುಖನಾಗಿ ಕುಳಿತುಕೊಂಡು ಪ್ರಾಜ್ಞನಾದವನು ಸ್ವಪ್ನವನ್ನು ಪ್ರಾಜ್ಞನಿಗೆ ಮಾತ್ರ ತಿಳಿಸಬೇಕು. ಕಾಶ್ಯಪನಿಗೂ, ದರಿದ್ರನಿಗೂ, ನೀಚನಿಗೂ, ದೇವಬ್ರಾಹ್ಮಣನಿಂದಕನಿಗೂ, ಮೂರ್ಖನಿಗೂ, ಅನಭಿಜ್ಞನಿಗೂ ಸ್ವಪ್ನ ವೃತ್ತಾಂತವನ್ನು ತಿಳಿಸಬಾರದು.

೫೭. ಅಶ್ವತ್ಥಮೂಲದಲ್ಲಿಯೂ, ಜ್ಯೋತಿಷಿಕನಲ್ಲಿಯೂ, ವಿಪ್ರನಲ್ಲಿಯೂ, ಪಿತೃದೇವಾಸನಗಳಲ್ಲಿಯೂ, ಆರ್ಯನಲ್ಲಿಯೂ, ವಿಷ್ಣುಭಕ್ತನಲ್ಲಿಯೂ, ಮಿತ್ರನಲ್ಲಿಯೂ ಹಗಲಿನ ಸ್ವಪ್ನವನ್ನು ಪ್ರಕಾಶಗೊಳಿಸಬಹುದು.

೫೮. ಪುಣ್ಯಕರವೂ ಪಾಪ ನಾಶಕವೂ ಯಶಸ್ಕರವೂ ಆಯುಷ್ಕರವೂ, ಧನ್ಯವೂ ಆದ ಆಖ್ಯಾನವನ್ನು ನಿನಗೆ ತಿಳಿಸಿರುವೆನು. ಮುಂದೆ ಇನ್ನೇನನ್ನು ಕೇಳಲಿಚ್ಛಿಸುವೆ?

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀ ಕೃಷ್ಣಜನ್ಮಖಂಡದ ಉತ್ತರಾರ್ಧದ
ನಾರಾಯಣ ನಾರದ ಸಂವಾದಾಂತರ್ಗತವಾದ ಶ್ರೀ ಕೃಷ್ಣನಂದರ
ಸಂವಾದದಲ್ಲಿ ಎಂಭತ್ತೆರಡನೆಯ ಅಧ್ಯಾಯವು ಮುಗಿದುದು.

ಎಂಭತ್ತೆರಡನೆಯ ಅಧ್ಯಾಯದ ಸರಾಂಶ.

ನಂದಗೋಪನ ಇಷ್ಟದಂತೆ ಶ್ರೀ ಕೃಷ್ಣನು ಕನಸಿನಲ್ಲಿ ಯಾವ ಯಾವ ವಸ್ತುವನ್ನು ಕಂಡರೆ ಅಶುಭವುಂಟಾಗುವುದೆಂಬುದನ್ನು ಈ ಅಧ್ಯಾಯದಲ್ಲಿ ವಿವರಿಸಿರುವನು. ಅಲ್ಲದೆ ಆ ಅಶುಭ ಪರಿಹಾರಕವಾದ ಮಂತ್ರವನ್ನೂ ತಿಳಿಸಿ ಅದನ್ನು ಜಪಿಸುವವರು ದೋಷವಿನಿರ್ಮುಕ್ತರಾಗುವರೆಂದು ಹೇಳಿರುವನು.